ಕೇಂದ್ರ ಸಾಹಿತ್ಯ ಅಕಾಡೆಮಿಯ
ಭಾಷಾ ಸಮ್ಮಾನ್ ಪ್ರಶಸ್ತಿ ಪಡೆದ ಕೃತಿ

ಷ. ಶೆಟ್ಟರ್

# ಶಂಗಂ ತಮಿಳಗಂ ಮತ್ತು ಕನ್ನಡ ನಾಡು-ನುಡಿ

ಆರಂಭ ಕಾಲದ ದ್ರಾವಿಡ ಸಂಬಂಧದ ಚಿಂತನೆ

# ಷ. ಶೆಟ್ಟರ್

ಗೌರವ ನಿರ್ದೇಶಕರು, ಇಂದಿರಾಗಾಂಧಿ ರಾಷ್ಟ್ರೀಯ ಕಲಾ ಕೇಂದ್ರ, ದಕ್ಷಿಣ ಪ್ರಾದೇಶಿಕ ಕೇಂದ್ರ, ಬೆಂಗಳೂರು (2006–2014);
ಅಧ್ಯಕ್ಷರು, ಇಂಡಿಯನ್‌ಕೌನ್ಸಿಲ್ ಆಫ್ ಹಿಸ್ಟಾರಿಕಲ್ ರಿಸರ್ಚ್, ಮಿನಿಸ್ಟ್ರಿ ಆಫ್ ಹ್ಯೂಮನ್ ರಿಸೋರ್ಸಸ್ ಡೆವಲಪ್ಮೆಂಟ್, ಭಾರತ ಸರಕಾರ, ನವದೆಹಲಿ (1996–1999);
ನಿರ್ದೇಶಕರು, ಇನ್ಸ್ಟಿಟ್ಯೂಟ್ ಆಫ್ ಆರ್ಟ್ ಹಿಸ್ಟರಿ (1978–95) ಮತ್ತು ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ಇಲಾಖೆಯ ಮುಖ್ಯಸ್ಥರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ (1970–1996)

## ಸಂಕ್ಷಿಪ್ತ ಪರಿಚಯ

ಮೈಸೂರು ವಿಶ್ವವಿದ್ಯಾಲಯದಿಂದ ಪ್ರಥಮ ಶ್ರೇಣಿ ಹಾಗೂ ಪ್ರಥಮ ಸ್ಥಾನ, ಐದು ಚಿನ್ನದ ಪದಕಗಳೊಂದಿಗೆ ಸ್ನಾತಕೋತ್ತರ ಪದವಿ;
ಭಾರತೀಯ ಕಲೆ ಮತ್ತು ಇತಿಹಾಸ ವಿಷಯಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ 1967ರಲ್ಲಿ ಹಾಗೂ 1970ರಲ್ಲಿ ಕೇಂಬ್ರಿಜ್ ವಿಶ್ವವಿದ್ಯಾಲಯದಿಂದ ಪಿಹೆಚ್ ಡಿ ಪದವಿ;
ಇತಿಹಾಸ, ಪ್ರಾಕ್ತನಶಾಸ್ತ್ರ, ಕಲಾ ಇತಿಹಾಸ, ದರ್ಶನಶಾಸ್ತ್ರ ಹಾಗೂ ಹಳಗನ್ನಡ ಕುರಿತು ಸುಮಾರು 30 ಸಂಶೋಧನಾ ಗ್ರಂಥಗಳ ಪ್ರಕಟಣೆ. (ಮೂರು ಯೂರೋಪಿನಲ್ಲಿ ಪ್ರಕಟವಾಗಿವೆ.)

## ಹುದ್ದೆಗಳು

1960ರಿಂದ 1996ರವರೆಗೆ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕತ್ವ;
ಹೈಡಲ್ ಬರ್ಗ್, ಟ್ಯೂಬಿಂಗ್ಪನ್, ಬರ್ಲಿನ್, ಹಾರ್ವರ್ಡ್, ಶಿಕಾಗೋ, ಮಾಸ್ಕೊ ಹಾಗೂ ಅಥೆನ್ಸ್ ಮೊದಲಾದ ಹಲವಾರು ರಾಷ್ಟ್ರೀಯ, ಅಂತರರಾಷ್ಟ್ರೀಯ ವಿಶ್ವವಿದ್ಯಾಲಯಗಳಲ್ಲಿ ಗೌರವ ಪ್ರಾಧ್ಯಾಪಕತ್ವ ಸ್ಥಾನಗಳ ನಿರ್ವಹಣೆ.

## ವಿಶೇಷ ಮನ್ನಣೆಗಳು

1978ರಿಂದ 1995ರವರೆಗೆ ಭಾರತೀಯ ಕಲಾ ಇತಿಹಾಸ ಸಂಸ್ಥೆಯ ನಿರ್ದೇಶಕತ್ವ;
1996–1999ರವರೆಗೆ ನವದೆಹಲಿಯ ಇಂಡಿಯನ್ ಕೌನ್ಸಿಲ್ ಆಫ್ ಹಿಸ್ಟಾರಿಕಲ್ ರಿಸರ್ಚ್ ಸಂಸ್ಥೆಯ ಅಧ್ಯಕ್ಷ ಸ್ಥಾನ;
ಭಾರತೀಯ ಇತಿಹಾಸ ಅನುಸಂಧಾನ ಪರಿಷತ್, ದಕ್ಷಿಣ ಭಾರತೀಯ ಇತಿಹಾಸ ಅನುಸಂಧಾನ ಪರಿಷತ್ ಹಾಗೂ ಕರ್ನಾಟಕ ಇತಿಹಾಸ ಅನುಸಂಧಾನ ಪರಿಷತ್ತುಗಳ ಸರ್ವಾಧ್ಯಕ್ಷ ಸ್ಥಾನ;
ಮೆಲ್ಬೋರ್ನ್ (ಆಸ್ಟ್ರೇಲಿಯಾ) ವಿಶ್ವಸಂಸ್ಕೃತ ಸಮ್ಮೇಳನದ ವಿಭಾಗೀಯ ಅಧ್ಯಕ್ಷ ಸ್ಥಾನ;
2005ರಿಂದ 2014ರವರೆಗೆ ಇಂದಿರಾ ಗಾಂಧಿ ರಾಷ್ಟ್ರೀಯ ಕಲಾಕೇಂದ್ರ ದಕ್ಷಿಣ ಭಾರತೀಯ ಶಾಖೆಯ ಗೌರವ ನಿರ್ದೇಶಕತ್ವ;
2002 ರಿಂದ 2010 ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್‌ನ ನ್ಯಾಶನಲ್ ಇನ್ಸ್ಟಿಟ್ಯೂಟ್ ಆಫ್ ಅಡ್ವಾನ್ಸಡ್ ಸ್ಟಡೀಸ್‌ನಲ್ಲಿ ಡಾ. ಎಸ್. ರಾಧಾಕೃಷ್ಣನ್ ಸಂದರ್ಶಕ ಪ್ರಾಧ್ಯಾಪಕ, 2010ರಿಂದ ಇದೇ ಸಂಸ್ಥೆಯಲ್ಲಿ ಎಮೆರಿಟಸ್ ಪ್ರಾಧ್ಯಾಪಕ.

## ಗೌರವ, ಪುರಸ್ಕಾರಗಳು

1982ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ವಾರ್ಷಿಕ ಪ್ರಶಸ್ತಿ;
1989ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ;
1993ರಲ್ಲಿ ಇಂಡಿಯನ್ ಹಿಸ್ಟರಿ ಕಾಂಗ್ರೆಸ್ ಎರಡು ವರ್ಷಗಳಿಗೊಮ್ಮೆ ನೀಡುವ ರಾಷ್ಟ್ರೀಯ ಪ್ರಶಸ್ತಿ;
1995ರಲ್ಲಿ ಕೇಂದ್ರ ಲಲಿತಕಲಾ ಅಕಾಡೆಮಿಯ ಪ್ರಶಸ್ತಿ;
1996ರಲ್ಲಿ ಬಾಹುಬಲಿ ವಿದ್ಯಾಪೀಠ ಪ್ರಶಸ್ತಿ;

2000ದಲ್ಲಿ ಪ್ರೊ. ಎಂ. ಚಿದಾನಂದ ಮೂರ್ತಿ ಚಿನ್ನದ ಪದಕ ಪುರಸ್ಕಾರ;
1996ರಲ್ಲಿ ಪ್ರಾಕೃತ ವಿದ್ಯಾಪೀಠದಿಂದ ಸಮಾಧಿ–ಜ್ಞಾನ ವಿಶಾರದ ಹಾಗೂ ಶಿಲಾಶಾಸನ ತಜ್ಞ ಪ್ರಶಸ್ತಿ;
2001ರಲ್ಲಿ ಅಚಾರ್ಯ ಕುಂದಕುಂದ ಪ್ರಶಸ್ತಿ;
2003ರಲ್ಲಿ ಮಣಿಪಾಲ್ ಫೌಂಡೇಷನ್ನಿನ ಪ್ರೊ.ಅಚ್ಯುತರಾವ್ ಫೆಲೊಶಿಪ್ ಪುರಸ್ಕಾರ;
2007ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಭಾಷಾ ಸಮ್ಮಾನ್;
2008ರಲ್ಲಿ ಪಂಡಿತ್ ಶಂಭಾ ಜೋಶಿ ಪ್ರಶಸ್ತಿ;
2008ರಲ್ಲಿ ಬಿಎಂಶ್ರೀ ಪ್ರತಿಷ್ಠಾನದ ಅನಂತರಂಗ ಪ್ರಶಸ್ತಿ; ತುಮಕೂರಿನ ವೀಚಿ ಸಾಹಿತ್ಯ ಪ್ರಶಸ್ತಿ;
2013ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ವರ್ಧಮಾನ ಪ್ರಶಸ್ತಿ; ಶ್ರೀ ಕ್ಷೇತ್ರ ಶ್ರವಣಬೆಳಗೊಳದ ಚಾವುಂಡರಾಯ
ಪ್ರಶಸ್ತಿ;
2013ರ 'ಬಾದಾಮಿ ಚಾಳುಕ್ಯರ ಶಾಸನ ಸಾಹಿತ್ಯ' ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ;
2014ರ ಡಾ. ಪಾದೂರು ಗುರುರಾಜಭಟ್ ಸ್ಮಾರಕ ಪ್ರಶಸ್ತಿ; ಆಳ್ವಾಸ್ ನುಡಿಸಿರಿ
ಪ್ರಶಸ್ತಿ;
ಶ್ರೀ ವನಮಾಲಿ ಸೇವಾ ಪ್ರಶಸ್ತಿ; ಪ್ರತಿ 12 ವರ್ಷಗಳಿಗೊಮ್ಮೆ ಕೊಡಮಾಡಲಾಗುವ 2014ರ ಶ್ರೀ ಕ್ಷೇತ್ರ ಶ್ರವಣಬೆಳಗೊಳ ಶಿಲಾಶಾಸನ ಸಾಹಿತ್ಯ ಪ್ರಶಸ್ತಿ;
2014ರ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಪ್ರಶಸ್ತಿ;
2015ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ
2016ರಲ್ಲಿ 'ಗೋವಿಂದ ಮೂರ್ತಿ ದೇಸಾಯಿ ಸಮ್ಮಾನ' ನಾಡೋಜ ಪ್ರತಿಷ್ಠಾನ, ಬೆಳಗಾವಿ;

**ಪ್ರಕಟಿತ ಕನ್ನಡ ಕೃತಿಗಳು:**

ಶ್ರವಣಬೆಳಗೊಳ (1981), ಶಂಗಂ ತಮಿಳಗಂ ಮತ್ತು ಕನ್ನಡ ನಾಡು ನುಡಿ (2007–ಹತ್ತನೆಯ ಮುದ್ರಣ), ಸೋಮನಾಥಪುರ (2008, 2016), ಬಾದಾಮಿ ಚಾಳುಕ್ಯರ ಶಾಸನ ಸಾಹಿತ್ಯ (2012, 2016), ಸಾವನ್ನು ಅರಸಿ (2013), ಸಾವನ್ನು ಸ್ವಾಗತಿಸಿ(ಸಾವಿಗೆ ಆಹ್ವಾನ 2004–2014), ಹಳಗನ್ನಡ – ಲಿಪಿ, ಲಿಪಿಕಾರ, ಲಿಪಿವ್ಯವಸಾಯ (2014, 2015),

**ಪ್ರಕಟಿತ ಇಂಗ್ಲಿಷ್ ಕೃತಿಗಳು:**

**Hoysala Sculpture in the National Museum,** (Copenhagen, 1975);
**Sravanaa Belgola - An Illustrated Study,** (Dharwad, 1981);
**Inviting Death, Historical Experiment on Sepulchar Hill,** (Dharwad, 1988; Leiden, 1989) (Second Ed. 2016);
**Pursuing Death: Philosophy and Practice of Voluntary Termination of Life,** (Dharwad, 1990);
**Hampi-A Medieval Metropolis,** (Bengalere, 1990);
**Hoysala Temples, Vol. I-II,** (Bengalere, 1991);
**Footprints of Artisans in History,** (Mysore, 2003);
**Somanathapura, (Bangalore, 2008);**
**Akshaarameru's Kaliyuga Viparitan,** (Bengalere, 2011).

**ಸಂಪಾದಿತ ಇಂಗ್ಲಿಷ್ ಕೃತಿಗಳು:**

**Archaeological Survey of Mysore: Annual Reports, Vol. II-IV,** (Dharwad, 1976-77);
**Memorial Stones: A Study of the origin, significance and variety,** (Dharwad-Heidelberg, 1982);
**Indian Archaeology in Retrospect,** Vol. I-IV, (New Delhi, 2002);
**Construction of Indian Railways, Vol. I-III,** (New Delhi (1999);
**Jallianwala Bagh Massacre,** (New Delhi, 2000);
**Pangs of Partition, Vol. I-II,** (New Delhi, 2002).

ಜನಪ್ರಿಯ ಹನ್ನೊಂದನೆಯ ಮುದ್ರಣ

# ಶಂಗಂ ತಮಿಳಗಂ

ಮತ್ತು

# ಕನ್ನಡ ನಾಡು-ನುಡಿ

## ಆರಂಭ ಕಾಲದ ದ್ರಾವಿಡ ಸಂಬಂಧದ ಚಿಂತನೆ

ಷ. ಶೆಟ್ಟರ್

ಅಭಿನವ

೧೭/೧೮-೨, ಮೊದಲನೆಯ ಮುಖ್ಯರಸ್ತೆ

ಮಾರೇನಹಳ್ಳಿ, ವಿಜಯನಗರ, ಬೆಂಗಳೂರು - ೫೬೦ ೦೪೦

**Sangam Tamilagam Mattu Kannada Naadu- Nudi:** [The Sangam Tamilagam and Kannada Land and Language: Reflections on the Early Dravidian Relations].

This study deals with the (1) Perceptions of Tolkappiyanar and its Kannada counterpart, Margakara, (2) Beginning of the mapping of the Dravidian Languages, (3) Mapping of the land swallowed by the Sea, (4) Brahmi Script that welded South India, (5) Historical Backdrop of the Kannada Janapada, Margakara's vision, (6) Kannada Land and Language at the Dawn [of History]: I. Erumai-uravar,(7)...:II.Kadambas and Punnatas, (8)......: III. Konkan and Tulu Nadus, (9) Contribution of Poets from Kannada Land to the Sangam Corpus.

Published by **Abhinava,** 17/18-2, 1st Main, Marenahalli, Vijayanagara, Bengaluru - 560 040. Ph: 080- 23505825, 09448804905. Email: abhinavaravi @ gmail.com.

Pp. 320. 1/8 Demmy. Rs. 250-00

First Edition: Nov. 2007 Second Edition: Aug. 2008 Third Edition: Feb. 2009
Fourth Edition: March 2009 Fifth Edition: Sept. 2009 Sixth Edition: May 2010
Seventh Edition: July 2010 Eighth Edition: Jan. 2011 Ninth Edition: Sept. 2011
Tenth Edition: Nov. 2016 Eleventh Edition : 2017

ISBN-978-81-910100-5-3

© S. Settar

Printed by Dharani Printers, Bengaluru, with the computer input of text provided by Mr. Prakash M. Wali, Cover Design by Shri U.T. Suresh, Bengaluru. Author's pen-sketch by Kum. Arpita Ravishankar, Melbourne.

Publicity : Krishna Chengadi

# ಪರಿವಿಡಿ


ಮುನ್ನುಡಿ ಎಚ್. ಎಸ್. ಶಿವಪ್ರಕಾಶ್ :
ಕವಿರಾಜಮಾರ್ಗದಿಂದ ಕವಿ-ಜನಮಾರ್ಗದವರೆಗೆ vii-xvi

ನ. ರವಿಕುಮಾರ : ನುಡಿವ ಬೆಡಗು - ೧ xvii-xviii
ನುಡಿವ ಬೆಡಗು - ೨ xix-xxvii
ನುಡಿವ ಬೆಡಗು - ೩ xxviii
ನುಡಿವ ಬೆಡಗು - ೪ xxviii
ನುಡಿವ ಬೆಡಗು - ೫ xxix

ಷ. ಶೆಟ್ಟರ್ : ಉಪಕಾರ ಸ್ಮರಣೆ xxx-xxxi
ಈಗ ಮತ್ತೊಂದು ಮಾತು / ಮತ್ತೆ ಮತ್ತೆ ಮಾತು / ಮರು ಮಾತು xxxi
ಮತ್ತೆ ಮರು ಮಾತು / ಮತ್ತೆ ಇನ್ನೊಂದು ಮಾತು xxxiii

ಅಧ್ಯಾಯ - ೧ : ತೊಲ್ಕಾಪ್ಪಿಯನಾರ್ ಮತ್ತು
ಮಾರ್ಗಕಾರನ ಸಂವೇದನೆಯ ಸ್ವರೂಪ ೧

ಅಧ್ಯಾಯ - ೨ : ಆರಂಭ ಕಾಲದ ದ್ರಾವಿಡ ಭಾಷಾ ನಕಾಶೆ ೨೩

ಅಧ್ಯಾಯ - ೩ : ಕಡಲು ಕುಡಿದ ಭೂಮಿಯ ನಕಾಶೆ ೪೩

ಅಧ್ಯಾಯ - ೪ : ದಕ್ಷಿಣ ಭಾರತ ಬೆಸದ ಬ್ರಾಹ್ಮೀ ಲಿಪಿ ೭೧

ಅಧ್ಯಾಯ - ೫ : ಕಾವೇರಿ : ಮಾರ್ಗಕಾರನು ಕನ್ನಡದೊಳ್ ಭಾವಿಸಿದ
ಜನಪದದ ದಕ್ಷಿಣದಂಚಿನ ಚಾರಿತ್ರಿಕ ಹಿನ್ನೆಲೆ ೯೫

ಅಧ್ಯಾಯ - ೬ : ಮುಸುಕು ಮುಂಜಾವಿನ ಕನ್ನಡ ನಾಡು-ನುಡಿ
೧. ಎರುಮೈ ಊರವರು ೧೩೩

ಅಧ್ಯಾಯ - ೭ : ಮುಸುಕು ಮುಂಜಾವಿನ ಕನ್ನಡ ನಾಡು-ನುಡಿ
೩. ಕೊಡಗು, ಕೊಂಗಣ ಮತ್ತು ತುಳು ನಾಡವರು ೧೫೧

ಅಧ್ಯಾಯ - ೮ : ಮುಸುಕು ಮುಂಜಾವಿನ ಕನ್ನಡ ನಾಡು-ನುಡಿ
೩. ಕೊಡಗು, ಕೊಂಗಣ ಮತ್ತು ತುಳು ನಾಡವರು ೧೬೭

ಅಧ್ಯಾಯ - ೯ : ಶಂಗಂ ಸಾಹಿತ್ಯಕ್ಕೆ ಕನ್ನಡನಾಡಿನ ಕವಿಗಳ ಕೊಡುಗೆ ೧೮೫

ತಮಿಳು ಪದ ಪರಿಚಯ ೨೨೧

ಆಕರ ಗ್ರಂಥಗಳು ೨೨೭

ಪದಸೂಚಿ ೨೩೭

# ಕವಿರಾಜಮಾರ್ಗದಿಂದ ಕವಿ-ಜನಮಾರ್ಗದವರೆಗೆ
## (ಮುನ್ನುಡಿ)

೧

ಹಲವು ರೀತಿಯಲ್ಲಿ ವಿಶಿಷ್ಟವಾಗಿರುವ ಈ ಕೃತಿಯ ಬಗ್ಗೆ ಬರೆಯುವುದು ನನ್ನ ಮಟ್ಟಿಗೆ ಹೆಮ್ಮೆಯ ವಿಷಯ.

ಇತಿಹಾಸಕಾರರಾದ ಪ್ರೊಫೆಸರ್ ಶೆಟ್ಟರ್ ಅವರ ಹಲವು ಇಂಗ್ಲಿಷ್ ಭಾಷೆಯ ಕೃತಿಗಳು ಈಗಾಗಲೇ ಹೊರಬಿದ್ದು ರಾಷ್ಟ್ರದ ಒಳಗೆ ಮತ್ತು ಹೊರಗೆ ಬಹು ಚರ್ಚಿತವಾಗಿ, ಪ್ರಶಂಸಿತವಾಗಿವೆ. ಈ ಹಿಂದೆ ಕನ್ನಡದಲ್ಲಿ ಅವರು ಕೆಲವು ಅನರ್ಘ್ಯ ಬರಹಗಳನ್ನು ಮತ್ತು ಒಂದು ಕಿರು ಪುಸ್ತಿಕೆಯನ್ನು ಪ್ರಕಟಿಸಿರುವುದು ನಿಜ, ಆದರೆ ಈಗ ಮೊಟ್ಟಮೊದಲಿಗೆ ಒಂದು ಪೂರ್ಣ ಪ್ರಮಾಣದ ಕೃತಿಯನ್ನು ಸಿದ್ಧಪಡಿಸಿದ್ದಾರೆ.

ಈ ಕೃತಿ ಹಲ ದಶಕಗಳ ಶಿಸ್ತುಬದ್ಧ ಸಂಶೋಧನೆ, ಆಲೋಚನೆ ಮತ್ತು ಚಿಂತನೆಗಳ ವಿದ್ವತ್‌ಪೂರ್ಣ ಪಕ್ವ ಫಲವೆನ್ನುವುದು ನಿಜವಾದರೂ ಇದರಲ್ಲಿರುವ ಬಿಚ್ಚು ನೋಟಗಳ ಮಹತ್ತ್ವ ಕೇವಲ ವಿದ್ವಾಂಸರಿಗೆ ಸೀಮಿತವಾದದ್ದಲ್ಲ, ಎಲ್ಲರಿಗೂ ಸಂಬಂಧಪಟ್ಟದ್ದು.

ಭಾಷಿಕ ಮತ್ತು ಪ್ರಾದೇಶಿಕ ಮತಾಂಧತೆಗಳು ತೀವ್ರವಾಗುತ್ತಿರುವ ನಮ್ಮ ಸುತ್ತು ನೆಲೆಯಲ್ಲಿ ಒಂದು ಭಾಷಿಕ ಮತ್ತು ಪ್ರಾದೇಶಿಕ ಸಮುದಾಯವನ್ನು ವಸ್ತುನಿಷ್ಠವಾಗಿ ಪರಿಭಾವಿಸುವುದು ನಮ್ಮೆಲ್ಲರಿಗೂ ಇಂದು ಅಗತ್ಯ. ಎಲ್ಲ ಮತಾಂಧತೆಗಳ ಹಾಗೆ ಈ ನಮೂನೆಯ ಮತಾಂಧತೆಯೂ ವಸ್ತುನಿಷ್ಠ ಸತ್ಯದ ಮರೆಹಿನ ಮೇಲೆ ನಿಂತದ್ದು. ಇದು ಯೋಚಿಸುವ ಎಲ್ಲರೂ ಅರ್ಥಮಾಡಿಕೊಳ್ಳುವ ವಿಚಾರ. ಆದರೆ ಇದರ ಜೊತೆಗಂಟಿಕೊಂಡ ಇನ್ನೊಂದು ಸತ್ಯ ತಿಳಿದರೂ ತಿಳಿಯದಂಥದು. ಮತಾಂಧತೆಯ ತಳಪಾಯದ ಕೆಲವು ಪ್ರಜ್ಞಪ್ತಿಗಳು ಮತಾಂಧತಾ ವಿರೋಧಿಗಳ ಚಿಂತನೆಗಳಲ್ಲೂ ಬಚ್ಚಿ ಕೂತಿರುತ್ತವೆ. ಉದಾಹರಣೆಗೆ ಕನ್ನಡ ಸಂಸ್ಕೃತಿಯ ಮಾತನ್ನೇ ತಗೊಳ್ಳಿ. ಉಗ್ರ ಕನ್ನಡವಾದಿಗಳಿಗೆ ಹೇಗೋ ಹಾಗೇ ನಮ್ಮ ಬಹುತೇಕ ಸಾಹಿತ್ಯ ಚಿಂತಕರಿಗೂ ಕನ್ನಡ ಸಂಸ್ಕೃತಿಯೆಂದರೆ ಈಗಾಗಲೇ ತೀರ್ಮಾನವಾಗಿರುವ ವಿಷಯ.

'ಉಗ್ರ'ರು ಈಗಾಗಲೇ ತೀರ್ಮಾನವಾಗಿರುವ ಕನ್ನಡದ ಕಲ್ಪನೆಗಳನ್ನು 'ಅನ್ಯ' ಸಮುದಾಯಗಳ ವಿರೋಧದ ನೆಲೆಯಲ್ಲಿ ಮಾತ್ರ ಗ್ರಹಿಸುತ್ತಾರೆ. ರಣಧೀರ ಕಂಠೀರವ ತಮಿಳು ಪೈಲ್ವಾನನೊಬ್ಬನನ್ನು ತಿರುಚಿನಾಪಳ್ಳಿಯಲ್ಲಿ ಮಣ್ಣುಮುಕ್ಕಿಸಿದ್ದು ಇವರಿಗೆ ಕನ್ನಡ ಪೌರುಷದ ಪ್ರತೀಕವಾಗಿ ಬರುತ್ತದೆ. 'ಸೌಮ್ಯ' ಕನ್ನಡ ಸಂಸ್ಕೃತಿಯ ವಕ್ತಾರರು ಇದೇ ಪರಿಕಲ್ಪನೆಯನ್ನು ಪುಣ್ಯಕೋಟಿಯ ಬ್ರಾಹ್ಮಣೀಕೃತ ಕತೆಯ ಮೂಲಕ ಗ್ರಹಿಸುತ್ತಾರೆ.

ವ್ಯಾಘ್ರನ ಸಂಘರ್ಷಕ್ಕಿಳಿಯದ, ಸತ್ಯವಚನಕೆ ತಪ್ಪಿ ನುಡಿಯದ ಪುಣ್ಯಕೋಟಿಯ 'ಹೆಣ್ಣು' ಪ್ರತಿಕ್ರಿಯೆ ಇವರಿಗೆ ಕನ್ನಡತ್ತ್ವದ ಅಹಿಂಸಾತ್ಮಕ ಸೌಮ್ಯತೆಯ ಪ್ರತೀಕವಾಗಿಬಿಡುತ್ತದೆ. ಬ್ರಾಹ್ಮಣೇತರ ಪಾಠಗಳಲ್ಲಿ ಈ ಕತೆಯ ಕುರಿತು ಏನಿದೆ ಎಂಬ ಗೋಜಿಗೆ ಇವರು ಹೋಗುವುದೇ ಇಲ್ಲ. ಮಧ್ಯಯುಗದ ಕನ್ನಡ ಭಾಷೆಯ ಇಪ್ಪತ್ತಾರು ಕಥನಗಳಲ್ಲಿ ಬರುವ ಕನ್ನಡಿಗ ಪುಂಡರಸರು ಪರಸ್ಪರ ಎಸಗಿದ ಬರ್ಬರ ಹಿಂಸೆಯ ಚಿತ್ರಗಳಾಗಲೀ ಇಂದಿನ ಕರ್ನಾಟಕದ ನಾಣ್ಣುಗೆಟ್ಟ ಜಾತೀಯತೆ, ಭ್ರಷ್ಟಾಚಾರಗಳಾಗಲೀ ಇವರಿಗೆ ಪ್ರಸ್ತುತವಲ್ಲ. ಇನ್ನು ಕನ್ನಡತನದ ಕಲ್ಪನೆಯನ್ನು ತಮ್ಮ ಅಜೆಂಡಾಗಳಿಗನುಸಾರವಾಗಿಯೇ ಕಟ್ಟಿಕೊಳ್ಳುವುದಕ್ಕೆ ನಿದರ್ಶನಗಳನ್ನು ಕೊಡಬಹುದು. ಇಂಥವರಿಗೆ ಬೆಳವಡಿ ಮಲ್ಲಮ್ಮ ಇಂದಿನ ಹಿಂದುತ್ವವಾದಿಗಳ ಜ್ವಲಂತ ಸಂಕೇತವಾದ ಶಿವಾಜಿಯನ್ನು ಪರಾಭವಗೊಳಿಸಿದ್ದಾಗಲೀ ಕನ್ನಡಿಗರ ಹೆಮ್ಮೆಯ ಸಂಕೇತವಾದ ಪುಲಕೇಶಿ ತಮಿಳುನಾಡಿನ ಪಲ್ಲವ ರಾಜನಿಂದ ಸೋತದ್ದಾಗಲೀ ಯಾಕೆ ನೆನಪಾಗುವುದಿಲ್ಲ? 'ಉಗ್ರ'ರು ಮತ್ತು 'ಸೌಮ್ಯ'ರು ಇಬ್ಬರೂ ತಮ್ಮ ಅನುಕೂಲಕ್ಕೆ ತಕ್ಕಂತೆ ತಮಗೆ ರುಚಿಸುವುದನ್ನು ಪ್ರಧಾನವಾಗಿಟ್ಟುಕೊಂಡು ಅನಾನುಕೂಲ-ವಾದ್ದನ್ನು ಹಾಗೆಯೇ ತೇಲಿಸಿಬಿಡುತ್ತಾರೆ. ಉದಾಹರಣೆಗೆ ಅನಂತಮೂರ್ತಿಯವರಿಗೆ ಪುಣ್ಯಕೋಟಿಯ ಕತೆಯಲ್ಲಿ ಕಾಣಸಿಗುವ ವಿರೋಧಾತೀತ ಅಹಿಂಸಾತ್ಮಕ ಸಮನ್ವಯ-ತತ್ತ್ವವೇ ದಿವಂಗತ ಕೆ.ವಿ. ಸುಬ್ಬಣ್ಣನವರಿಗೆ '*ಕವಿರಾಜಮಾರ್ಗ*'ದಲ್ಲಿ ಕಂಡುಬಿಡುತ್ತದೆ. ಇಂತಹ ಜಾಣಕುರುಡುತನಕ್ಕೆ ಹೊರತಾದುದರಿಂದ ಶೆಟ್ಟರ್ ಅವರ ಈ ಪುಸ್ತಕದ ದೃಷ್ಟಿ ಮಹತ್ವಪೂರ್ಣವಾಗುತ್ತದೆ.

ಶೆಟ್ಟರ್ ಅವರಿಗೆ ಕನ್ನಡ ನಾಡು-ನುಡಿಗಳು ಈಗಾಗಲೇ ತೀರ್ಮಾನವಾಗಿರುವ ವಿಷಯಗಳಲ್ಲ. ಬದಲಾಗಿ ಅವು ಅನ್ವೇಷಣೆ, ಆಲೋಚನೆ ಮತ್ತು ಅನುಸಂಧಾನಗಳ ಮುಂದಿರುವ ಸವಾಲುಗಳು.

ಶೆಟ್ಟರ್ ಚರ್ಚೆಯನ್ನೂ ಪ್ರಾರಂಭಿಸುವುದು ತಮಿಳಿನ (*ತೊಲ್ಕಾಪ್ಪಿಯಮ್*) ಮತ್ತು ಕನ್ನಡದ (*ಕವಿರಾಜಮಾರ್ಗ*) ಭಾಷೆಗಳಲ್ಲಿ ಪ್ರಥಮಗಳೆನಿಸಿದ ಕಾವ್ಯಗಳನ್ನು ಪರಿಚಯಿಸಿ ತಮಿಳರನ್ನೂ ಕನ್ನಡಿಗರನ್ನೂ ಭಾಷಾ ಆವೇಶಕ್ಕೆ ತಳ್ಳಿದ ಗಡಿರೇಖೆಯ ಚರ್ಚೆಯಿಂದ. ದ್ರಾವಿಡಸಂಬಂಧವನ್ನೂ, ಈ ಎರಡು ಪ್ರಥಮಗಳ(?) ಸಾಹಿತ್ಯಕ ಸ್ವರೂಪವನ್ನೂ, ಅವುಗಳ ಭಾಷೆ ಮತ್ತು ಸಾಹಿತ್ಯ ಸಂಸ್ಕೃತೀಕರಣಕ್ಕೊಳಗಾದ ಪ್ರಕ್ರಿಯೆಯನ್ನೂ, ಭಾಷಾಪ್ರಜ್ಞೆ ಮತ್ತು ನಕಾಶೆ ನಿರ್ದೇಶನದಂತಹ ಪ್ರಶ್ನೆಗಳನ್ನೂ ಕೈಗೆತ್ತಿಕೊಂಡು, ಅವುಗಳ ವಿವಿಧ ಮಗ್ಗಲುಗಳನ್ನು ಇಲ್ಲಿ ಚರ್ಚಿಸಿದ್ದಾರೆ. ತಮಿಳಗಂ (ಕುಮಾರಿಯಿಂದ ವೇಂಕಟದವರೆಗಿನ ಪ್ರದೇಶದ) ಗಡಿರೇಖೆಯನ್ನು ಮೂಡಿಸಿದ್ದು ತೊಲ್ ಅಲ್ಲ; ಕಾಲಾನಂತರ ಈ ಗ್ರಂಥಕ್ಕೆ 'ಪಾಯಿರಂ' ಬರೆದ ಒಬ್ಬ ವ್ಯಾಖ್ಯಾನಕಾರ ಎಂಬುದನ್ನು ಸ್ಪಷ್ಟಗೊಳಿಸಿದ್ದಾರೆ. ಕನ್ನಡದೊಳ್ ಭಾವಿಸಿದ ಜನಪದದ ದಕ್ಷಿಣ ಗಡಿಯನ್ನು ಕಾವೇರಿಯಿಂದ ಮಾರ್ಗಕಾರ ಗುರುತಿಸಿದಾಗ ನೃಪತುಂಗನ ಕಾಲದ ರಾಜಕೀಯ ಒತ್ತಡಗಳೇನಿದ್ದವೆಂಬುದನ್ನು ಬಿಚ್ಚಿತ್ತೋರಿಸಿ, ದಿವಂಗತ ಕೆ.ವಿ.ಸುಬ್ಬಣ್ಣನವರು ಭಾವಿಸಿದಂತೆ, ಅವನು 'ನದಿಗಳ ಗೆರೆಹೊಡೆದು ನಕಾಶ ನಿರ್ದೇಶನ

ಮಾಡಲಿಲ್ಲವೆಂಬುದನ್ನು ಮನದಟ್ಟು ಮಾಡುತ್ತಾ ಒಂದು ಶತಮಾನಕಾಲ ಭಾವಾವೇಶಕ್ಕೊಳಗಾಗಿದ್ದ ಕನ್ನಡಿಗರನ್ನು ಈ ಗುಂಗಿನಿಂದ ಮುಕ್ತಗೊಳಿಸಿದ್ದಾರೆ. ಅಕ್ಷರಶಃ ಕಾವೇರಿ ಕನ್ನಡ ನಾಡಿನ ದಕ್ಷಿಣ ಗಡಿಯೆಂದು ಬಗೆದರೆ ಇದರಿಂದ ಆಗುವ ಅನಾಹುತವನ್ನೂ ತಿಳಿಸಿದ್ದಾರೆ.

೨

ಈ ಗ್ರಂಥದಲ್ಲಿ ಎತ್ತಿಕೊಂಡಿರುವ ಮಹತ್ವದ ವಿಷಯಗಳನ್ನು ಚರ್ಚಿಸುವ ಮುಂಚೆ ಈಚೆಗೆ ಕನ್ನಡ ಸಾಹಿತ್ಯ ಸಂಸ್ಕೃತಿಗಳ ಪ್ರಾರಂಭದ ಬಗ್ಗೆ ಪ್ರಧಾನವಾಗಿ ಅಕಡೆಮಿಕ್ ವಲಯಗಳಲ್ಲಿ ಪ್ರಚಾರವಾಗುತ್ತಿರುವ ಮತ್ತೊಂದು ಚಿಂತನಾಮಾದರಿಯನ್ನು ಚರ್ಚಿಸುವುದು ಅಗತ್ಯ. ಇದು ಜಗತ್ತಿನ ಏಕಮೇವ ಆಕಾರ ಕೇಂದ್ರವಾಗಹೊರಟಿರುವ ಪೆಂಟಗನ್ ಜಾರಿಗೆ ತಂದ 'ದಕ್ಷಿಣ ಏಷಿಯ'ದ ಪರಿಕಲ್ಪನೆಗೆ ಸಂಬಂಧಪಟ್ಟಿದ್ದು. ದಿವಂಗತ ಕೆ.ವಿ. ಸುಬ್ಬಣ್ಣನವರು ಮತ್ತು ಅವರಿಗಿಂತ ಹೆಚ್ಚು ಸಂಕೀರ್ಣ ರೀತಿಯಲ್ಲಿ ದಿವಂಗತ ಡಿ.ಆರ್. ನಾಗರಾಜ್ ಈ ವಾದವನ್ನು ಮುಂದಿಟ್ಟಿರುವರು.

ಅಮೆರಿಕದ ಪ್ರಸಿದ್ಧ ಇಂಡಾಲಾಜಿಸ್ಟ್ ಷೆಲ್ಡನ್ ಪೋಲಕ್ ನಿರೂಪಿಸಿರುವ ಸಾಹಿತ್ಯ ಸಂಸ್ಕೃತಿಗಳ ಸಾಮಾನ್ಯ ಕಥನದ ಸಂದರ್ಭದಲ್ಲಿ ಕನ್ನಡದ ಮೊಟ್ಟಮೊದಲ ಗ್ರಂಥವಾದ *ಕವಿರಾಜಮಾರ್ಗ*ವನ್ನು ಇಡೀ ದಕ್ಷಿಣ ಏಷಿಯಾ ಸಂದರ್ಭದ ಯುಗಪ್ರವರ್ತಕ ಕೃತಿಯನ್ನಾಗಿ ಇಲ್ಲಿ ಕಾಣಲಾಗಿದೆ. ಪೋಲಕ್ ಪ್ರಕಾರ ಕ್ರಿಸ್ತಶಕ ಮೊದಲನೆಯ ಸಹಸ್ರಮಾನವು ವಿಶ್ವದಾದ್ಯಂತ 'ಕ್ಲಾಸಿಕಲ್' ಭಾಷೆಗಳ ಮೆಟ್ರೋಪಾಲಿಟನ್‌ನ ಮೇಲೆ ಕಟ್ಟಿದ ಸಂಸ್ಕೃತಿ; ಆದರೆ ಎರಡನೆಯ ಸಹಸ್ರಮಾನ ವಿಶ್ವಾತ್ಮಕ ದೇಶಭಾಷೆಗಳ ಅಭ್ಯುದಯಕಾಲ. ಪ್ರಾದೇಶಿಕ ಭಾಷೆಯೊಂದು ಶಿಷ್ಟ ಭಾಷೆಯೊಂದರ ಸವಾಲನ್ನೂ ಹೇಗೆ ಎದುರುಗೊಳ್ಳುತ್ತದೆ ಎಂಬುದು ಈ ಎರಡು ಯುಗಗಳ ಸ್ಥಿತ್ಯಂತರದ ಬಹುದೊಡ್ಡ ಸವಾಲು. ಪೋಲಕ್ ಪ್ರಕಾರ ಇಂದಿನ ಜಗತ್ತಿನ ಶಕ್ತಿಕೇಂದ್ರವಾದ ಅಮೆರಿಕನ್ ಸಂಸ್ಕೃತಿಯನ್ನು ಇತರ ಸಂಸ್ಕೃತಿಗಳು ಹೇಗೆ ಸ್ವೀಕರಿಸಬೇಕು ಎನ್ನುವುದೊಂದು ಸವಾಲು. ಈ ಚಿಂತನಾ ಮಾದರಿಯನ್ನು ಅವಲಂಬಿಸುವುದಾದರೆ *ಕವಿರಾಜಮಾರ್ಗ* ಅತ್ಯಂತ ಅನುಕರಣೀಯ ರೀತಿಯಲ್ಲಿ ನಿಭಾಯಿಸಿದೆ. ಅದು ಮೇಲು ಸಂಸ್ಕೃತಿಯನ್ನು, ಅಂದರೆ ಸಂಸ್ಕೃತವನ್ನು, ತನ್ನ ಎದುರಾಳಿಯನ್ನಾಗಿಯಾಗಲೀ ಅಥವಾ ತಾನು ಅನುಕರಿಸಲೇಬೇಕಾದ ಅನಿವಾರ್ಯ ಮಾದರಿಯನ್ನಾಗಿಯಾಗಲೀ ಬಗೆಯದೆ ಎರಡು ಸಂಸ್ಕೃತಿಗಳು ಭಿನ್ನವಾದರೂ ಸಮಾನಸ್ತರದವು ಎಂಬ ಗ್ರಹಿಕೆಯ ಬುನಾದಿಯ ಮೇರೆ ಅಂತರ್‌ಪ್ರಾದೇಶಿಕ ಮತ್ತು ಪ್ರಾದೇಶಿಕ ಭಾಷಿಕ ಸಂಸ್ಕೃತಿಗಳ ನಡುವಣ ಅನುಸಂಧಾನವನ್ನು ನಡೆಸಿದೆ. ಹೀಗಾಗಿ ತನ್ನತನವನ್ನು ಬಿಟ್ಟುಕೊಡದೆ ಅನ್ಯವನ್ನು ಒಪ್ಪಿಕೊಂಡಿದೆ. ಪ್ರಬಲ ಸಂಸ್ಕೃತಿಯೊಡನೆ ಪ್ರಾದೇಶಿಕ ಸಂಸ್ಕೃತಿ ಸಮನ್ವಯ ಮಾಡಿಕೊಳ್ಳುವುದಕ್ಕೆ ಇದು ಕವಿಮಾರ್ಗವೂ ಜನಮಾರ್ಗವೂ ಆಗಿದೆ. ಕನ್ನಡ ನಾಡಿನ ಒಂದು ಗಡಿಯನ್ನು ರೇಖಿಸುತ್ತಲೇ ವ್ಯಾಕರಣ ಮತ್ತು ಕಾವ್ಯಮೀಮಾಂಸೆಗಳನ್ನು ರೂಪಿಸಿದೆ.

೩

ಮೇಲೆ ಚುಟುಕಾಗಿ ಮಂಡಿಸಲಾದ ದೃಷ್ಟಿಯ ಪ್ರಕಾರ, ಭಾಷಿಕ/ಸಾಹಿತ್ಯಕ ಪ್ರಬುದ್ಧತೆ ಮತ್ತು ಸಾಮ್ರಾಜ್ಯ ಸ್ಥಾಪನೆಗಳ ಅವಿನಾಸಂಬಂಧ ಮೊದಲ ಸಹಸ್ರಮಾನದಲ್ಲಿ ಉತ್ತರದ ಸಾಮ್ರಾಜ್ಯ ರಚನೆ ಗಟ್ಟಿಗೊಂಡಂತೆ ಸಂಸ್ಕೃತ ಭಾಷೆ, ವ್ಯಾಕರಣ, ಕಾವ್ಯಮೀಮಾಂಸೆ ಮುಂತಾದ ಶಾಸ್ತ್ರಗಳೂ ಹೆಚ್ಚು ಹೆಚ್ಚು ನಿಖರತೆಯನ್ನು ಪಡೆದುಕೊಂಡವು. ಈ ತೆರನ ವಿದ್ಯಮಾನಗಳು ಎರಡನೆಯ ಸಹಸ್ರಮಾನದಲ್ಲಿ-ವಿಶ್ವಾತ್ಮಕ ದೇಶಭಾಷೆಗಳ ನಿರ್ಮಾಣ ಕಾಲದಲ್ಲಿ ಭಾರತದಲ್ಲಿ, ಯೂರೋಪನ್ನು ಒಳಗೊಂಡು ವಿಶ್ವದ ಬಹುತೇಕ ಭಾಗಗಳಲ್ಲಿ ಹುಟ್ಟಿಕೊಂಡವು. ಇಡೀ ಪ್ರಕ್ರಿಯೆಯನ್ನು ಒಂದು ಸೆಕ್ಯುಲರ್ ಘಟನಾವಳಿಯಾಗಿ ಪೋಲಕ್ ನೋಡುವುದರಿಂದ ಧರ್ಮಗಳ ಮತ್ತು ಧಾರ್ಮಿಕ ಆಂದೋಲನಗಳ ಪ್ರಾಮುಖ್ಯತೆಯನ್ನು ಅವರು ಪರಿಗಣಿಸುವುದಿಲ್ಲ. ಅಂದರೆ ಅವರ ಪ್ರಕಾರ ಕನ್ನಡ ಭಾಷೆ/ಸಾಹಿತ್ಯದ ಪ್ರಾದುರ್ಭಾವಕ್ಕೆ *ಕವಿರಾಜಮಾರ್ಗ* ನಿರ್ಣಾಯಕವಾಯಿತೇ ಹೊರತು, ಮುಂದಿನ ಶತಮಾನಗಳ ಭಕ್ತಿ ಆಂದೋಲನಗಳಲ್ಲ.

ಶೆಟ್ಟರ್ ಅವರು ಪೋಲಕರ ಜೊತೆ ಮುಖಾಮುಖಿ ಮಾಡುವುದಿಲ್ಲ, ನಿಜ; ಆದರೆ ತಮ್ಮ ಮಾಹಿತಿಗಳ ಮತ್ತು ವಾದಗಳ ಮೂಲಕ ಮೇಲ್ಕಂಡ ಸಿದ್ಧಾಂತದ ಹಲವು ಗೃಹೀತಗಳನ್ನು ಅಲುಗಿಸಿದ್ದಾರೆ.

ಮೊದಲನೆಯದಾಗಿ ಆರಂಭಿಕ ಸಹಸ್ರಮಾನವನ್ನು ಸಂಸ್ಕೃತ ಯುಗವೆನ್ನುವುದಕ್ಕೆ ಬಹು ದೊಡ್ಡ ಅಪವಾದವೆನಿಸಬಹುದಾದ ಪ್ರಾಚೀನ ತಮಿಳು ಪರಂಪರೆಯನ್ನು ತೆರೆದಿಟ್ಟಿದ್ದಾರೆ. ಶಂಗಂ ಕಾವ್ಯದ ಭಿತ್ತಿಯಾಗಿರುವ ತಮಿಳಗಂ ಎಂಬ ಪ್ರದೇಶ ಪ್ರಧಾನತಃ ಸಾಂಸ್ಕೃತಿಕ, ಆನುಷಂಗಿಕವಾಗಿ ಮಾತ್ರ ರಾಜಕೀಯ ವಲಯವಾಗಿತ್ತು. ಇಲ್ಲಿ ಮೂವೇಂದರರಾದ ಪಾಂಡ್ಯ, ಚೋಳ, ಚೇರರ ಪ್ರಭಾವ ಪ್ರಧಾನವಾಗಿತ್ತು. ಆದರೆ ಇವರನ್ನು ನಿಲ್ಲಿಸುವ ಮತ್ತು ನೆಲಕ್ಕುರುಳಿಸುವ ಸೂತ್ರಗಳು ನೂರಾರು ಚಿಟ್ಟರಸರ ಕೈಯಲ್ಲಿದ್ದವು. ಶೆಟ್ಟರ್ ಅವರ ಪ್ರಕಾರ ದೊಡ್ಡ ದೊಡ್ಡ ರಾಜರಿಗಿಂತಲೂ ಸಣ್ಣಪುಟ್ಟ ನಾಯಕರು ಸಾಹಿತ್ಯ ಸಾಮ್ರಾಜ್ಯ ನಿರ್ಮಾಣಕ್ಕೆ ಇತ್ತ ಕೊಡುಗೆ ಮಹತ್ವದ್ದು. ಅಲ್ಲದೆ ಇದು ತಮಿಳಗಂ ಗಡಿ ಒಳಗಿನ ವ್ಯವಹಾರವಾಗಿ ಮಾತ್ರ ಉಳಿಯಲಿಲ್ಲವೆಂಬುದನ್ನು ಮತ್ತು ಕನ್ನಡವನ್ನು ಒಳಗೊಂಡ ತಮಿಳೇತರ ಭಾಷೆಗಳಾದ 'ವಡುಗ' ಜನಾಂಗಗಳು ಶಂಗ ಕಾವ್ಯಕ್ಕೆ ನೀಡಿದ ಕೊಡುಗೆಗಳು ಸಾಬೀತುಗೊಳಿಸಿರುವುದನ್ನು ಮನದಟ್ಟುಮಾಡಿಕೊಡುವುದು. (ಇದರ ವಿಸ್ತೃತ ಚರ್ಚೆ ಈ ಪುಸ್ತಕದುದ್ದಕ್ಕೂ ಅಂತರ್ಗತಗೊಂಡಿದ್ದು ಕೊನೆಯ ಅಧ್ಯಾಯದಲ್ಲಿ ಬಹಿರಂಗಗೊಂಡಿದೆ).

ಸಾಂಸ್ಕೃತಿಕ ಮತ್ತು ರಾಜಕೀಯ ರಚನೆ ಮತ್ತು ಪ್ರಕ್ರಿಯೆಗಳ ಅಸಮಾನಂತರ ಸಂಬಂಧ ಈ ಪುಸ್ತಕದ ಮುಖ್ಯ ಅವಧಾರಣೆಗಳಲ್ಲೊಂದು. ಸಾಮ್ರಾಜ್ಯ ಶಕ್ತಿ ಸೃಜನಶೀಲತೆಯ ವಿಷಯದಲ್ಲಿ ನಿರ್ಣಾಯಕ ಪಾತ್ರ ವಹಿಸುವಂತಿದ್ದರೆ ಇಪ್ಪತ್ತನೆಯ ಶತಮಾನದ ಅಮೆರಿಕನ್

ಸಾಹಿತ್ಯ ವಿಶ್ವದ ಅತ್ಯಂತ ಶ್ರೇಷ್ಠ ಸಾಹಿತ್ಯವಾಗಬೇಕಾಗಿತ್ತು. 'ರಕ್ತ ವಿವಾಹದ' ಕವಿ ಲೋರ್ಕಾ ಬಂದದ್ದು ಯೂರೋಪಿನಲ್ಲೇ ಅತ್ಯಂತ ಹಿಂದುಳಿದ ರಾಷ್ಟ್ರವಾದ ಸ್ಪೇನ್‌ನ ಅತ್ಯಂತ ಹಿಂದುಳಿದ ಪ್ರದೇಶವಾದ ಅಂಡುಲೇಸಿಯದಿಂದ. ಅಲ್ಲದೆ ಸಿಜೇರ್‌ವಾಹ್ಯೋ, ಅಮಿಸೀಜರ್, ವೊಲೆ ಷೋಯಿಂಕಾ ಇತ್ಯಾದಿ ಯುಗಪ್ರವರ್ತಕ ಬರಹಗಾರರು ಕೂಡಾ ಅಸ್ಥಿರ ರಾಷ್ಟ್ರಗಳಿಂದಲೇ ಬಂದವರು. ಶಂಗಂ ತಮಿಳಗಂ ಇದಕ್ಕಿಂತ ಭಿನ್ನವಾಗಿರಲಿಲ್ಲ. ಮೂವೇಂದರ್‌ಗಳು ಐಕನ್‌ಗಳಾಗಿದ್ದರು ನಿಜ, ಆದರೆ ಅವರು ಸಾಮ್ರಾಟರಾಗಿರಲಿಲ್ಲ, ಅಷ್ಟು ಮಾತ್ರವಲ್ಲ; ಸಾಮ್ರಾಟರಾಗಲು ತಮಿಳಗಂನೊಳಗಿನ ರಾಜ್ಯಶಕ್ತಿಗಳೇ ಅವರನ್ನು ಬಿಡಲಿಲ್ಲ. ಸೃಜನಶೀಲತೆಯನ್ನು ರಾಜಕೀಯ ಅಸ್ಥಿರತೆಯ ಶಿಶು ಎಂದೂ ತಿಳಿಯಲಾಗದು. ಒಟ್ಟಿನಲ್ಲಿ ಸಾಮ್ರಾಜ್ಯದ ಏಳಿಗೆ ಮತ್ತು ಸಂಸ್ಕೃತಿಯ ಏಳಿಗೆ ಒಟ್ಟೊಟ್ಟಾಗಿರಬೇಕೆಂಬ ನಿರ್ಬಂಧವೇನೂ ಇಲ್ಲ ಎಂಬುದಕ್ಕೆ ಇದು ಸಾಕ್ಷಿ. ?? 

ಷೆಲ್ಡನ್ ಪೋಲಕಾದಿಗಳ ವಾದವನ್ನು ಇನ್ನೂ ಆಳದಲ್ಲಿ ಅಲ್ಲಾಡಿಸುವ ಇನ್ನೊಂದು ಪುರಾವೆಯನ್ನು ಶೆಟ್ಟರ್ ಗುರುತಿಸಿದ್ದಾರೆ. ಇವರ ಪ್ರಕಾರ ಪ್ರಾಚೀನ ಕಾಲದಲ್ಲಿ ತಮಿಳು ಎಷ್ಟೇ ಬಲಿಷ್ಠ ಸಾಹಿತ್ಯ ಸಂಸ್ಕೃತಿಯಾಗಿ ವಿಕಾಸಗೊಂಡರೂ ಲಿಪಿ ಸಂಸ್ಕೃತಿಯಾಗಿ ರೂಪುತಾಳಿದ್ದು ಕನ್ನಡ ತೆಲುಗು ಲಿಪಿಗಳು ಸದೃಢಗೊಂಡ ನಂತರವೇ. ತೊಲ್ಕಾಪ್ಪಿಯಂ ಮತ್ತು 'ಕವಿರಾಜಮಾರ್ಗ'ವನ್ನು ಹೋಲಿಸಿ ನೋಡಿದಾಗ ಒಂದು ಸ್ವತಂತ್ರ ಸಾಹಿತ್ಯ ಸಂಸ್ಕೃತಿಯ ನಿರ್ಮಾಣದಲ್ಲಿ ಕನ್ನಡಿಗರು 'ತೊಲ್'ಗಿಂತ ಹಿಂದೆ ಬಿದ್ದಿದ್ದರೆಂಬುದು ಸ್ಪಷ್ಟಗೊಳ್ಳುವುದು. ಆದರೆ ಶೆಟ್ಟರ್ ಅವರ ಪ್ರಕಾರ ಲಿಪಿ ಸಂಸ್ಕೃತಿಯಲ್ಲಿ ಕನ್ನಡಿಗರು ತಮಿಳರನ್ನು ಹಿಂದೆ ಹಾಕಿದ್ದರು. ಈ ಸಿದ್ಧಾಂತದ ಬಗ್ಗೆ ತಮಿಳರು ದೊಡ್ಡ ಆಕ್ಷೇಪ ಎತ್ತಬಲ್ಲರೆಂಬುದು ನನಗೆ ಗೊತ್ತು. ಆದರೂ ಇದು ಐತಿಹಾಸಿಕ ಅಂಶವಾದರೆ, ಬರಹ ಸಂಸ್ಕೃತಿಯ ನಿರ್ಮಾಣ ಸಾಹಿತ್ಯ ಸಂಸ್ಕೃತಿಗೆ ಅನಿವಾರ್ಯ ಎಂಬ ತಿಳಿವಳಿಕೆಯೇ ತಪ್ಪಾಗುತ್ತದೆ. ಲಿಪಿ ಸಂಸ್ಕೃತಿ ರೂಪುಗೊಳ್ಳುವ ಮೊದಲೇ ತಮಿಳಗಂ ಒಂದು ಅಭಿಜಾತ ಕಾವ್ಯವನ್ನೂ ಕಾವ್ಯ ಮೀಮಾಂಸೆಯನ್ನೂ ಸೃಜಿಸಿಕೊಂಡಿದ್ದುದರಿಂದ ಸಾಹಿತ್ಯದ 'ಮಾರ್ಗ'ಕ್ಕೂ ಲಿಪಿಗೂ ನಾವು ಇದೆಯೆಂದುಕೊಂಡಿರುವ ಕಾರ್ಯಕಾರಣ ಸಂಬಂಧ ಗಾಯಬ್ ಆಗುವುದನ್ನು ಇದು ಸ್ಪಷ್ಟಗೊಳಿಸುತ್ತದೆ.

ಳ

ಯಾವನಿಗೆ ರೋಮ್ ಮಾತ್ರ ಗೊತ್ತಿರುತ್ತದೆ ಅವನಿಗೆ ರೋಮ್ ಕೂಡ ಪೂರ್ತಿ ಗೊತ್ತಿರುವುದಿಲ್ಲ. ಕನ್ನಡ ಭಾಷೆ ಮತ್ತು ಸಾಹಿತ್ಯಗಳ ಆಗುಹೋಗುಗಳನ್ನು ಕೇವಲ ಕನ್ನಡದ ಭಿತ್ತಿಯೊಂದರಲ್ಲೇ ನೋಡಿದರೆ ಇದೇ ಪರಿಣಾಮ ಉಂಟಾಗುವುದು. ಮಾರ್ಗಕಾರ ಅಭಿವೃದ್ಧಿಶೀಲ ಕನ್ನಡ ನಾಡು-ನುಡಿಗಳ ವೈಶಿಷ್ಟ್ಯವನ್ನು ಬಿಟ್ಟುಕೊಡದೆ ಈಗಾಗಲೇ ಅಭಿವೃದ್ಧಿಗೊಂಡಿರುವ ಸಂಸ್ಕೃತದ ಜೊತೆಗೆ ಕೀಳರಿಮೆಯಿರದ ಮುಖಾಮುಖಿ ನಡೆಸಿದನೆಂಬ ಕಾರಣಕ್ಕಾಗಿ ವಿದ್ವಾಂಸರಿಂದ ಪ್ರಶಂಸೆ ಪಡೆದಿದ್ದಾನೆ. ಸ್ವರ್ಗೀಯ ಡಿ.ಆರ್. ನಾಗರಾಜ್ ಅವರಂತೂ ಮಾರ್ಗಕಾರನನ್ನು ಸೀದಾ ಬ್ರಹ್ಮನಿಗೆ ಹೋಲಿಸಿಬಿಡುತ್ತಾರೆ. ಆದರೆ

ಇಡೀ ಕನ್ನಡ ಸಾಹಿತ್ಯ ಪರಂಪರೆಗೆ ಮಾರ್ಗಕಾರ ಬ್ರಹ್ಮನೋಪಾದಿಯಾದರೆ ಮುಂದಿನ ಶತಮಾನಗಳ ಕನ್ನಡ ಸಾಹಿತ್ಯ ಆತನಿಗೆ ಎಷ್ಟು ಋಣಿ ಎಂಬುದನ್ನೂ ಪರೀಕ್ಷಿಸಬೇಕಾಗುತ್ತದೆ. ಈ ಕಡೆಗೆ ಶೆಟ್ಟರ್ ನಮ್ಮ ಗಮನ ಹರಿಸಿದ್ದಾರೆ. ಯಾವ ರೀತಿ *ತೊಲ್ಕಾಪ್ಪಿಯಂ*ನ ಕಾವ್ಯ ಭಾಷೆ-ಬದುಕಿನ ಸಿದ್ಧಾಂತದ ಜೊತೆಗೆ ಶಂಗಂ ಕಾವ್ಯರಾಶಿ ಅವಿನಾಸಂಬಂಧ ಹೊಂದಿತ್ತೋ ಅದೇ ರೀತಿಯ ಸಂಬಂಧವನ್ನು *ಕವಿರಾಜಮಾರ್ಗ* ಕನ್ನಡ ಪರಂಪರೆಯೊಂದಿಗೆ ಹೊಂದಿದೆಯೆ ಎಂಬ ಪ್ರಶ್ನೆಯನ್ನು ಅವರು ಎತ್ತಿದ್ದಾರೆ. ಶಂಗಂ ಯುಗ ಮುಗಿದ ನಂತರವೂ *ತೊಲ್ಕಾಪ್ಪಿಯಂ*ನ ಮರುದನಿಗಳು ಆಳ್ವಾರ್-ನಾಯನ್ಮಾರರ ಭಕ್ತಿ ಕಾವ್ಯದಲ್ಲಿ ಕೇಳಿಸುತ್ತವೆ. ಆಂಡಾಳ್ ತನ್ನ *ತಿರುಪ್ಪಾವೈ*ಯನ್ನು 'ಶಂಗತ್ತಮಿಳ್'ನಲ್ಲಿ ಬರೆದುದಾಗಿ ಹೇಳಿಕೊಳ್ಳುತ್ತಾಳೆ. 'ತೊಲ್ಕಾಪ್ಪಿಯಂ'ನ ಪ್ರಭಾವಕ್ಕೆ ತಮಿಳಿನಲ್ಲಿ ದೀರ್ಘಕಾಲದ ನಿರಂತರತೆ ಇದ್ದುದನ್ನು ಇದು ತೋರಿಸುತ್ತದೆ. ಆದರೆ ಕನ್ನಡದಲ್ಲಿ 'ಕವಿರಾಜಮಾರ್ಗ'ಕ್ಕೆ?

೫

ವಿಶ್ವಸಾಹಿತ್ಯಕ್ಕೊಂದು ಲಿಬರಲ್ ಚರಿತ್ರೆಯನ್ನು ಬರೆಯುವ ನೆವದಲ್ಲಿ ಷೆಲ್ಡನ್ ಪೋಲಕರು ಒಂದು ನೇರ ಗೆರೆಯ ಮಾದರಿಯನ್ನು ಮೊರೆ ಹೋಗುತ್ತಾರೆ. ಡಿ.ಆರ್. ನಾಗರಾಜ್ ಈ ಮಾದರಿಯ ಇನ್ನೊಂದು ನಮೂನೆಯನ್ನಿಡುತ್ತಾರೆ. ಮೇಲ್ಕಂಡ ಕಥನಕ್ಕೆ ಪತ್ತೆದಾರಿ ಮತ್ತು ಬಂಡಾಯದ ರಂಗು ನೀಡುವ ಮೂಲಕ *ಕವಿರಾಜಮಾರ್ಗ* ಒಂದು ಥರ ಬ್ರಹ್ಮ ಸೃಷ್ಟಿಯೆಂದು ಭಾವುಕತೆಯಿಂದ ಘೋಷಿಸಿದ ನಂತರ, ಅವರ ಸುಪ್ತ ಬಂಡಾಯ ಪ್ರಜ್ಞೆ ಜಾಗೃತವಾಗುತ್ತದೆ. ಸಾಹಿತ್ಯ ಚರಿತ್ರಾಕಾರ ಒಬ್ಬ ಪತ್ತೆದಾರ ಮತ್ತು ಶೋಷಿತರ ಹಕ್ಕು ಹೋರಾಟಗಾರನಾಗಿಯೂ ಕೆಲಸ ಮಾಡಬೇಕು. *ಕವಿರಾಜಮಾರ್ಗ*ದಲ್ಲಿ ನಾಪತ್ತೆ ಆಗಿರುವ ಪರಂಪರೆಗಳನ್ನು ಗುರುತಿಸಿ ಆ ಪರಂಪರೆಗಳ ಮೌಲ್ಯಗಳಿಗಾಗಿ ಹೋರಾಟ ಮಾಡಬೇಕು. ಅವರ ಪ್ರಕಾರ *ಕವಿರಾಜಮಾರ್ಗ*ದ ಜೈನಯುಗದಲ್ಲಿ ಹತ್ತಿಕ್ಕಲ್ಪಟ್ಟ ಶಕ್ತಿಗಳು ಹೊಸತನದ ಪ್ರಾದುರ್ಭಾವ ಕಾಲದ ವೀರಶೈವ ಯುಗದಲ್ಲಿ ತಲೆಯೆತ್ತಿದವು. ಅಂದರೆ ಸಾಹಿತ್ಯ ಪರಂಪರೆಗಳ ನಿರ್ಮಾಣ ತುಮುಲಗಳಿಂದ ಕೂಡಿದ ಪ್ರಕ್ರಿಯೆ. ಪತ್ತೇದಾರಿ ಮತ್ತು ಬಂಡಾಯದ ಚುರುಕು ಸೇರಿಸಿದಾಗ ಈ ಕಲ್ಪನೆ ನಾಟಕೀಯವೂ ರೋಚಕವೂ ಆಗಬಹುದು. ಆದರೆ ಅದರ ವಾಸ್ತವಾಂಶ?

ಪೋಲಕರ ರೀತಿಯ ಯಾಂತ್ರಿಕ ಪ್ರಗತಿಶೀಲತೆಯ ದೃಷ್ಟಿಯನ್ನಾಗಲೀ ಅಥವಾ ಡಿ.ಆರ್. ಅವರ ಮಾರ್ಕ್ಸ್‌ಪ್ರೇರಿತ ಗತಿತಾರ್ಕಿಕ ಪ್ರಗತಿಶೀಲ ದೃಷ್ಟಿಯನ್ನಾಗಲೀ ಅವಾಸ್ತವ ಎಂದು ನಾನು ಅಲ್ಲಗಳೆಯುತ್ತಿಲ್ಲ. ಆದರೆ ಈ ವಾದಗಳು ಆಂಶಿಕವಾಗಿ ಮಾತ್ರ ನಿಜ.

ಉದಾಹರಣೆಗೆ ಪ್ರಾಚೀನ ಭಾರತದ ಕಾವ್ಯಕರ್ಮ ಮತ್ತು ಕಾವ್ಯಧರ್ಮಗಳನ್ನು ಏಕರೂಪತೆಗಿಳಿಸಲು ಸಾಧ್ಯವೇ? ಸಂಸ್ಕೃತದ ಪ್ರಭಾವ ಆ ಸಂದರ್ಭದಲ್ಲಿ ಪ್ರಧಾನವಾದರೂ ಅದೊಂದೇ ನಿರ್ಣಾಯಕವಲ್ಲ. ಜೊತೆಗೆ ತಮಿಳು ಸಾಹಿತ್ಯ ಪರಂಪರೆಗೆ ತನ್ನದೇ ಆದ ಸ್ವಧರ್ಮವಿದೆ. 'ತಮಿಳಗಂ'ನ ಮೊದಲ ಅಧ್ಯಾಯದ ಅತ್ಯಂತ ರಸವತ್ತಾದ ಭಾಗದಲ್ಲಿ

ಶೆಟ್ಟರ್ ಅವರು ತಮಿಳು ಮತ್ತು ಸಂಸ್ಕೃತ ಕಾವ್ಯ ಧರ್ಮ-ಸ್ವಧರ್ಮಗಳ ತುಲನಾತ್ಮಕ ಬಿಚ್ಚುನೋಟವನ್ನು ನೀಡಿದ್ದಾರೆ. ಈ ಎರಡು ಪರಂಪರೆಗೂ ದೃಷ್ಟಿ ತೀರಾ ವಿಭಿನ್ನವೆಂಬುದನ್ನು ತೋರಿಸಿದ್ದಾರೆ. ತೋರುಮೊಲೆಗಳ, ತಾವರೆಮೋರೆಯ, ತೆಳುನಡುವಿನ, ದೊಡ್ಡ ಅಂಡುಗಳ ಹೆಣ್ಣನ್ನು ಕೀರ್ತಿಸುವ ಸಂಸ್ಕೃತಕ್ಕೂ, ಪರಂಪರೆಯಲ್ಲಿ ಅಡಗಿಸಿಕೊಂಡಿರುವ ಚೆಲುವನ್ನು ಅರಸುವ ತಮಿಳು ಸೌಂದರ್ಯಪ್ರಜ್ಞೆಗೂ ತೀರಾ ವ್ಯತ್ಯಾಸ. 'ತೊಲ್'ನ ವ್ಯಾಖ್ಯಾನಗಳು ಬರುವ ಹೊತ್ತಿಗೆ ಆ ಕೃತಿಯನ್ನು ನೋಡುವ ದೃಷ್ಟಿ ಹೇಗೆ ಸಂಸ್ಕೃತೀಕರಣಗೊಂಡಿತ್ತೆಂದು ಇಳಕ್ಕುವನಾರ್‌ನಂಥ ವಿದ್ವಾಂಸ ಗುರುತಿಸಿದ್ದಾನೆ.

ಅದೇನೆ ಇರಲಿ, ಪ್ರಾಚೀನ ಭಾರತದಲ್ಲಿ ಈ ಎರಡೂ ಪರಂಪರೆಗಳು ಸಮಾನಾಂತರವಾಗಿ ಮೀಮಾಂಸೆಗಳಾಚೆಗಿನ ಸಮಾನಾಂತರ ಪರಂಪರೆಗಳೊಂದಿಗೆ ಕೆಲಸ ಮಾಡಿವೆ. ಉದಾಹರಣೆಗೆ ಆಳ್ವಾರ್-ನಾಯನ್ಮಾರ್‌ರ ಭಕ್ತಿಕಾವ್ಯದಲ್ಲಿ ರೂಪುತಾಳುವ ಆಕೃತಿಗಳು ಸ್ವಲ್ಪಮಟ್ಟಿಗೆ ಸಂಸ್ಕೃತ ಪರಂಪರೆಗಳಿಂದ ಪೋಷಿಸಲ್ಪಟ್ಟಿವೆಯಾದರೂ ಇವರ ಸಣ್ಣಪುಟ್ಟ ಪರಂಪರೆಗಳ ಪ್ರಭಾವವನ್ನು ಒಳಗೊಂಡಿರುವುದಕ್ಕೆ ಆಂಡಾಳ್ ಬರೆದ *ತಿರುಪ್ಪಾವೈ* ಅತ್ಯುತ್ತಮ ಉದಾಹರಣೆಯಾಗಿದೆ. ಇಲ್ಲಿ 'ಶಂಗತ್ತಮಿಳ್' ಇದೆ. ದ್ರಾವಿಡರ ಲಾಗಾಯ್ತಿನ ಆಚರಣೆಯಾದ 'ಪಾವೈ' ಇದೆ. ವಲಸೆ ಬಂದ ಗಂಗಾತಟದ ಗೋವಳಿಗ ಜನಾಂಗದ ಸ್ಮೃತಿಯ ಕೃಷ್ಣ ಕತೆಯಿದೆ. ವೈದಿಕ ಪರಂಪರೆಯ ಮರುದನಿ ಇದೆ. ಈ ಕಾರಣದಿಂದ *ತಿರುಪ್ಪಾವೈ* ಹಲವು ಪರಂಪರೆ ಮತ್ತು ಪ್ರಕ್ರಿಯೆಗಳ ಮೇಳವಾಗಿ ತೋರುತ್ತದೆ. ಸಾಹಿತ್ಯ ಕೃತಿಗಳ ಬಗ್ಗೆ ಹೇಳಬಹುದಾದ ಈ ಮಾತನ್ನು ಸಾಹಿತ್ಯ ಪರಂಪರೆಗಳಿಗೂ ಅನ್ವಯಿಸಬಹುದೇನೊ.

೬

'ತೊಲ್' ನಿರ್ಮಿಸಿರುವ ಕಾವ್ಯಸಿದ್ಧಾಂತ ಹಲಪ್ರದೇಶಗಳ ನಡೆ-ನುಡಿಗಳ ಸಂಕರದ ಫಲ, ಮುಂದಿನ ಯುಗಗಳ ಭಕ್ತಿಸಾಹಿತ್ಯ ಸಂಸ್ಕೃತಗಳೂ ಹಾಗೆ. ಶಿವನನ್ನು 'ವಡಮೊಟಿಯುಂ ತೆನ್‌ಮೊಟಿಯುಂ ಆನಾನವನ್' ಅಂದರೆ 'ವಡನುಡಿಯೂ ತೆನ್ ನುಡಿಯೂ ಆದವನು' ಎಂದು ಅಪ್ಪರ್ ಕೀರ್ತಿಸುತ್ತಾನೆ. ಕನ್ನಡದ ವಚನ ಸಮುಚ್ಚಯವನ್ನು ನೋಡಿದಾಗಲೂ ಅಲ್ಲಿ ಹಲ ಪರಂಪರೆಗಳ ಮುಖಾಮುಖಿ ಮತ್ತು ಸಂಕರಗಳು ಏಕಕಾಲದಲ್ಲಿ ನಡೆದಿರುವುದು ವ್ಯಕ್ತವಾಗುವುದು. ಈ ಕಾರಣದಿಂದ ವಚನಕಾರರ ಅಂಕಿತಗಳೇ ಸಾಂಸ್ಕೃತಿಕ ಸಂಘರ್ಷ ಮತ್ತು ಸಂಕರಗಳ ಕುರುಹುಗಳು ಎಂದು ನವ ಕಲ್ಯಾಣಮಠದ ಕುಮಾರ ಸ್ವಾಮಿಗಳು 'ವಚನಕಾರರ ಅಂಕಿತಗಳು' ಎಂಬ ತಮ್ಮ ಅದ್ಭುತ ನಿಬಂಧವೊಂದರಲ್ಲಿ ಗುರುತಿಸಿದ್ದಾರೆ.

ಅಂದರೆ ಪೋಲಕ್ ಮತ್ತು ಡಿ.ಆರ್. ಅವರ ಏಕರೂಪೀ ಅಥವಾ ದ್ವಂದ್ವಾತ್ಮಕ ಕಥನಗಳನ್ನು ದಾಟಿದ ಬಹುಸ್ತರೀಯ ಸಂಘರ್ಷ-ಸಂಕರಾತ್ಮಕ ಇತಿಹಾಸ ಮತ್ತು ಸಾಹಿತ್ಯ ಚರಿತ್ರೆಗಳು ನಿಜಕ್ಕೂ ಹೆಚ್ಚು ನಿಕಟವಾಗಬಲ್ಲವು. ಇತಿಹಾಸಕಾರ ಇಲ್ಲಿ ಜೇಮ್ಸ್‌ಬಾಂಡ್

ಮತ್ತು ಚೆಗೆವಾರರ ಪಾತ್ರದ ಜೊತೆಗೆ ನಿಷ್ಪಕ್ಷಪಾತಿಯಾದ ನ್ಯಾಯಾಧೀಶನ ಕೆಲಸವನ್ನೂ ಮಾಡಬೇಕಾಗುತ್ತದೆ. ಚರಿತ್ರೆ ಮತ್ತು ಸಾಹಿತ್ಯ ನಿರ್ಮಾಣದಲ್ಲಿ ಪರಸ್ಪರ ಭಿನ್ನ ಜನಪದಗಳು, ಭಾಷೆಗಳು, ಸಾಹಿತ್ಯಗಳು ಹೇಗೆ ಸಂಘರ್ಷ, ಸಂಕರ ಮತ್ತು ಕೊಡು ಕೊಳೆಗಳಲ್ಲಿ ತೊಡಗಿರುತ್ತವೆಂಬುದನ್ನು ಈ ರೀತಿಯಲ್ಲಿ ವಿವರಿಸುವ ಮೂಲಕ ಶೆಟ್ಟರ್ ಇನ್ನೊಂದು ಬಗೆಯ ಸಾಹಿತ್ಯ ಚರಿತ್ರೆಯ ಹರಿಕಾರರಾಗಿ ಕಾಣತೊಡಗುತ್ತಾರೆ. ಇದೇ ತೆರನ ಅನೇಕಾಂತವಾದೀ ಮಾದರಿಯನ್ನು ರಿಚ್ ಫ್ರೀಮನ್, ಮಧ್ಯಕಾಲೀನ ಮಲೆಯಾಳಂ ಭಾಷೆ ಮತ್ತು ಸಾಹಿತ್ಯ ಚರಿತ್ರೆಯ ಬಿಚ್ಚುನೋಟದಲ್ಲಿ ಬಳಸಿರುವುದನ್ನು ಇಲ್ಲಿ ನೆನೆಯಬಹುದು.

ಶೆಟ್ಟರ್ ಅವರ ಶ್ರಮದ ಫಲವಾಗಿ ಆರಂಭಕಾಲದ ಕರ್ನಾಟಕ ಇತಿಹಾಸದ ಮಹತ್ವದ ಅಧ್ಯಾಯವಿಂದು ನಮಗೆ ಪರಿಚಯವಾಗಿದೆ. ಗ್ರಂಥದುದ್ದಕ್ಕೂ 'ವಡುಗರ'ನ್ನು ಪ್ರಸ್ತಾಪಿಸುತ್ತಾ ಹಂತಹಂತವಾಗಿ ಅವರನ್ನು ಪರಿಚಯಿಸುತ್ತಾ ಅವರ ನೆಲೆಗಳನ್ನೂ ನಿಲುವುಗಳನ್ನೂ ವಿಶ್ಲೇಷಿಸುತ್ತಾ ಕನ್ನಡಿಗರು ತಮ್ಮನ್ನು ತಾವು ಅರ್ಥಮಾಡಿಕೊಳ್ಳಲು ಶಂಗಂ ಸಾಹಿತ್ಯವನ್ನು ಪ್ರಸ್ತುತಗೊಳಿಸಿಕೊಳ್ಳಬೇಕಾದ ಅವಶ್ಯಕತೆಯನ್ನು ಶೆಟ್ಟರ್ ಮನವರಿಕೆ ಮಾಡಿಕೊಟ್ಟಿದ್ದಾರೆ. ಮೌರ್ಯ ಅಶೋಕ ಮತ್ತು ಬನವಾಸಿ ಕದಂಬರ ಆಳ್ವಿಕೆಯ ನಡುವೆ ಬಾಯ್ತೆರೆದು ನಿಂತಿದ್ದ ಕಂದಕವನ್ನು ತುಂಬಿ, ಈ ಕಾಲದಲ್ಲಿ ಕರ್ನಾಟಕದ ರಾಜ್ಯಶಕ್ತಿಗಳಾಗಿ ಬೆಳೆದು ತಮಿಳರನ್ನು ಗಡಿಯಾಚೆ ನಿಲ್ಲಿಸಿದ ಎರುಮೈ, ಪುನ್ನಾಟ, ಕೊಂಗ, ಕೊಂಕಣ, ತುಳುವ, ಕದಂಬ, ಗಂಗ ಮೊದಲಾದವರು ಕನ್ನಡ ಮತ್ತು ತಮಿಳು ಬೆಳವಣಿಗೆಗೆ ಕೊಟ್ಟ ಕಾಣಿಕೆಯನ್ನು ಮನದಟ್ಟು ಮಾಡಿಕೊಟ್ಟಿದ್ದಾರೆ. ಇದು ನಮ್ಮ ಇತಿಹಾಸ ಗ್ರಹಿಕೆಯನ್ನು ಹೇಗೆ ಬದಲಿಸಬಲ್ಲದು ಎಂಬುದಕ್ಕೆ ನಿದರ್ಶನ. ಕದಂಬರು ಬನವಾಸಿಯಲ್ಲಿ ರಾಜಧಾನಿ ಸ್ಥಾಪಿಸಿ ಆಳತೊಡಗಿದನಂತರ ಸಂಸ್ಕೃತ ಪ್ರೇಮಿಗಳಾದ ಕದಂಬ ಮಯೂರವರ್ಮನು ಮಯೂರಶರ್ಮನಾಗುವುದಕ್ಕೆ ಹಲವಾರು ಶತಮಾನಗಳ ಮುಂಚೆ, ಈ ಮನೆತನದವರು ಸಮುದ್ರಾಧಿಪತಿಗಳಾಗಿ ಮೆರೆದ ಶೂದ್ರರಾಗಿದ್ದರು. ಈವರೆಗೂ ನಮಗೆ ತಿಳಿಯದಿದ್ದ ಇಂತಹ ಹೊಸ ವಿಷಯಗಳು ಕನ್ನಡ ಭಾಷೆ, ಲಿಪಿ ಮತ್ತು ಜನಾಂಗದ ಪ್ರೌಢಿಮೆಯನ್ನೂ ಪುರಾತನತೆಯನ್ನೂ ಪ್ರತಿಷ್ಠಾಪಿಸಿಕೊಳ್ಳಲು ಸಹಕಾರಿಯಾಗಲಿವೆ. ಇಂತಹ ಜಿಜ್ಞಾಸೆಗಳು ಹಿಂದೊಮ್ಮೆ ದಿವಂಗತ ಗೋವಿಂದ ಪೈ, ಶಂಭಾ ಜೋಷಿ ಮುಂತಾದವರನ್ನು ಕಾಡಿದ್ದುದನ್ನು ನಮ್ಮ ನೆನಪಿಗೆ ತಂದುಕೊಡುವವು.

೭

ಮೇಲೆ ಸೂಚಿಸಿದ ಬಹುಮಜಲಿನ ಪ್ರಕ್ರಿಯೆಯ ಹಿನ್ನೆಲೆಯಲ್ಲಿ ಅನುವಾದಗಳ ಪಾತ್ರ ತುಂಬಾ ಪ್ರಧಾನ. ಆಧುನಿಕಪೂರ್ವಯುಗದಲ್ಲಿ ಮಾತ್ರವಲ್ಲ; ಇಂದಿಗೂ ಕೂಡ ಅನುವಾದ ಸಾಂಸ್ಕೃತಿಕ ಬೆಸುಗೆಯ ಒಂದು ಪ್ರಧಾನ ಸಾಧನವಾಗಿದೆ. ಜಗತ್ತಿನ ಪ್ರಾಚೀನ ಕಥನ ಕಾವ್ಯಗಳು – ರಾಮಾಯಣ, ಮಹಾಭಾರತ, ಗಿಲ್ಗಿಮಿಷ್, ಬೇವೂಲ್ಫ್, ಒಡಿಸ್ಸಿ

ಇಲಿಯಡ್ - ಮೂಲದಲ್ಲೇ ಅನುವಾದಗಳು. ಅವು ಮೌಖಿಕ ಪರಂಪರೆಯಿಂದ ಲಿಪಿ ಸಂಸ್ಕೃತಿಗೆ ತುರ್ಜುಮೆಯಾಗಿ ಬಂದವು. ಸಾಂಸ್ಕೃತಿಕ ಆಧಾನ-ಪ್ರಧಾನವಾಗಿ ಅನುವಾದ ಪ್ರಕ್ರಿಯೆ ಕೇವಲ ಭಾಷಿಕ ಪ್ರಕ್ರಿಯೆಯಾಚೆಗೂ ಹಬ್ಬಿಕೊಳ್ಳುವ ಚಟುವಟಿಕೆ. ಆಧುನಿಕ ಅನುವಾದ ಚಿಂತನೆಯ ಮೂಲ ಮತ್ತು ಅನುವಾದಿತ ಪಠ್ಯಗಳ ಸಾರೂಪ್ಯವನ್ನು ಆಧರಿಸಿದೆ. ಆದರೆ ಆಧುನಿಕಪೂರ್ವಯುಗದ ಅನುವಾದ ತಿಳಿವಳಿಕೆ ಪಾಠ ಸಾರೂಪ್ಯಕ್ಕಿಂತ ಮುಖ್ಯವಾಗಿ ಆಶಯ ಮತ್ತು ತಿರುಳಿನ ಸಾರೂಪ್ಯವನ್ನು ಆಶ್ರಯಿಸಿದ್ದು. ಆದ್ದರಿಂದ ಅದನ್ನು ರೂಪಾಂತರ ಎಂದು ಕರೆದರೆ *ಕವಿರಾಜಮಾರ್ಗ*ವೂ ಒಂದು ರೂಪಾಂತರವೇ. ಆದರೆ ದೂರದ ದಂಡಿ-ಭಾಮಹರ ಪ್ರೇರಣೆ ಪಡೆದ ಈ 'ಅನುವಾದ' ಯಾಕೆ ತಮಿಳು ಪರಂಪರೆಗೆ ಮಿಡಿಯಲಿಲ್ಲ? *ಕವಿರಾಜಮಾರ್ಗ*ದ ಮಲಯಾಳಂ ಸಂವಾದಿಕೃತಿ *ಲಲಿತ ತಿಲಕಂ* ಅತ್ತ ಸಂಸ್ಕೃತ ಇತ್ತ ತಮಿಳು ಎರಡರಿಂದಲೂ ಪ್ರೇರಿತವಾಗಿದೆ. ಪಾಠಗಳ ಅನುವಾದದಲ್ಲಿ ಮಾತ್ರವಲ್ಲ, ಪರಿಕಲ್ಪನೆಗಳ ಅನುವಾದದಲ್ಲೂ ಕನ್ನಡ ಪರಂಪರೆ ಯಾಕೆ ಸಂಸ್ಕೃತದ ಕಡೆ ಮುಖ ಮಾಡಿತು? ತಮಿಳಿನ ಯಾವುದೇ ಮೇರುಕೃತಿ ಎರಡನೆಯ ಸಹಸ್ರಮಾನದಲ್ಲಿ ಯಾಕೆ ಕನ್ನಡಕ್ಕೆ ಬರಲಿಲ್ಲ? ತಮಿಳುನಾಡಿನ ಭಕ್ತಿಯ ಪ್ರವಾಹ ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕಕ್ಕೆ ಹರಿದು ಬಂದಾಗ ತಮಿಳು ಶಿವಭಕ್ತರ ಕತೆಗಳನ್ನು ರಗಳೆಗಳ ಮೂಲಕ ಕನ್ನಡಕ್ಕೆ ತಂದವನು ಹರಿಹರನೊಬ್ಬನೆ. ಇನ್ನು ತಮಿಳು ನಾಡಿನಲ್ಲೇ ನೂರಾರು ವರ್ಷ ಭೂಗತವಾಗಿದ್ದ ಶಂಗಂ ಕಾವ್ಯವಾಗಲೀ ಕಾವ್ಯಮೀಮಾಂಸೆಯಾಗಲೀ ಕನ್ನಡಕ್ಕೆ ಬರತೊಡಗಿದ್ದು ತಮಿಳು ನಾಡಿನಲ್ಲಿ ಅದು ಪುನರ್ಜನ್ಮ ಪಡೆದ ಸುಮಾರು ಒಂದು ನೂರು ವರ್ಷಗಳ ನಂತರ, ಅಂದರೆ ತೀರಾ ಇತ್ತೀಚೆಗೆ. ಆಧುನಿಕಪೂರ್ವಯುಗದಲ್ಲಿ ಸಂಸ್ಕೃತ-ಪ್ರಾಕೃತಗಳಿಂದ ಆಧುನಿಕ ಯುಗದಲ್ಲಿ ಇಂಗ್ಲಿಷಿನಿಂದ ಕನ್ನಡ ಬೇಕಾದಷ್ಟು ಪಡೆದುಕೊಂಡಿದೆ. ಆದರೆ ನೆರೆಹೊರೆಯ ತಮಿಳಿನಿಂದ ಪಡೆದುಕೊಂಡದ್ದು ಎಷ್ಟಿದೆ? ಜಾರ್ಜ್‌ಹಾರ್ಟ್ ಅವರ ವಿಶ್ಲೇಷಣೆಯ ಪ್ರಕಾರ ಸಂಸ್ಕೃತ ಕಾವ್ಯಮೀಮಾಂಸೆಯ ಹೆಮ್ಮೆಯಾಗಿರುವ ಧ್ವನಿಸಿದ್ಧಾಂತಕ್ಕೆ ಪ್ರೇರಣೆ ಪ್ರಮುಖವಾಗಿ ಬಂದುದು ತಮಿಳು ಶಂಗಂ ಕಾವ್ಯದಿಂದಲೇ ಹೊರತು ಧ್ವನಿಪೂರ್ವ ಸಂಸ್ಕೃತ ಕಾವ್ಯದಿಂದಲ್ಲ.

ಕನ್ನಡಿಗರಮಟ್ಟಿಗೆ ನೆನೆಗುದಿಗೆ ಬಿದ್ದಿದ್ದ ಈ ಮಾನಾಡಿ ಕಾವ್ಯ ಫಸಲನ್ನು ಅದರ ಎಲ್ಲ ಸಾಂಸ್ಕೃತಿಕ ಮತ್ತು ಸಾಂದರ್ಭಿಕ ಸಂಕೀರ್ಣತೆಗಳೊಂದಿಗೆ ತಲಸ್ಪರ್ಶಿಯಾಗಿ ಕನ್ನಡಿಗರಿಗೆ ಪರಿಚಯ ಮಾಡಿಕೊಟ್ಟು ಶೆಟ್ಟರ್ ಅವರು *ಕವಿರಾಜಮಾರ್ಗ*ಕ್ಕಿಂತ ಭಿನ್ನವಾದ ಕವಿ-ಜನಮಾರ್ಗದ ಸಾಧ್ಯತೆಯನ್ನು ತೆರೆದಿದ್ದಾರೆ. ಜೊತೆಗೆ ಇವತ್ತಿನ ಕನ್ನಡ ಪ್ರದೇಶದವರು ಶಂಗಂ ಕಾವ್ಯ ಸಮುಚ್ಚಯಕ್ಕೆ ನೀಡಿದ ಕವಿತೆಗಳಲ್ಲಿ ಕೆಲವನ್ನು ಆಯ್ದು ಅಚ್ಚುಕಟ್ಟಾಗಿ ಅನುವಾದ ಮಾಡಿಕೊಟ್ಟಿದ್ದಾರೆ. ಕಾವ್ಯಸೂಕ್ಷ್ಮತೆ ಮುಕ್ಕಾಗದ ಹಾಗೆ ಸಂಸ್ಕೃತಿವಿಶಿಷ್ಟವಾದ ಅಂಶಗಳನ್ನು ಈ ಅನುವಾದಗಳಲ್ಲಿ ಕಟ್ಟಿಟ್ಟಿದ್ದಾರೆ, ಅಲ್ಲದೆ ಕನ್ನಡದ ವಿಪುಲ ಅನುವಾದ ಸಾಹಿತ್ಯದಲ್ಲಿದ್ದ ಒಂದು ಮಹಾನ್ ಕೊರತೆಯನ್ನು ತುಂಬಿಕೊಟ್ಟಿದ್ದಾರೆ.

ಭಾರತೀಯತೆಯ ಬಗ್ಗೆ ಕನ್ನಡದ ಬಗ್ಗೆ ತಮಿಳು-ಕನ್ನಡ ಬಾಂಧವ್ಯದ ಬಗ್ಗೆ

ಸಾಹಿತ್ಯ-ಸಂಸ್ಕೃತಿಗಳ ಬಗ್ಗೆ ಹೊಸ ರೀತಿಯ ಚಿಂತನೆ ಮತ್ತು ವಿಶ್ಲೇಷಣೆಗಳನ್ನು ಪ್ರೇರೇಪಿಸುವ ಶೆಟ್ಟರ್ ಅವರ ಈ ಅಪೂರ್ವ ಕೃತಿಯನ್ನು ನಾನು ವೈಯಕ್ತಿಕವಾಗಿ ಸ್ವಾಗತಿಸುತ್ತೇನೆ. ಇತರರೂ ಒಳನೋಟಗಳ ಈ ಗಣಿಯಿಂದ ಅನರ್ಘ್ಯ ದ್ರವ್ಯಗಳನ್ನು ಪಡೆಯಬಹುದೆಂದು ಭಾವಿಸುತ್ತೇನೆ.

೭

ಈ ಬರಹವನ್ನು ಮುಗಿಸುವ ಮುಂಚೆ ಇನ್ನೊಂದು ಮಾತು ನೆನಪಾಗುತ್ತದೆ. ಶೆಟ್ಟರ್ ಅವರ 'ಪರ್‌ಸೂಯಿಂಗ್ ಡೆತ್' ಎಂಬ ಇಂಗ್ಲಿಷ್ ಪುಸ್ತಕವನ್ನು ದಶಕಗಳ ಹಿಂದೆ ವಿಮರ್ಶೆ ಮಾಡುವ ಸಂದರ್ಭದಲ್ಲಿ 'ಬಹಳ ಕಡಿಮೆ ಪ್ರಚಾರದಲ್ಲಿರುವ ವಸ್ತುವಿನ ಬಗ್ಗೆ ಬರೆಯುತ್ತಲೇ ಶೆಟ್ಟರ್ ಎಲ್ಲರಿಗೂ ಮುಖ್ಯವಾಗುವ ಒಳನೋಟಗಳನ್ನು ನೀಡುತ್ತಾರೆ' ಎಂದು ಬರೆದಿದ್ದೆ. ರೋಮಿಲಾ ಥಾಪರ್, ಇರ್ಫಾನ್ ಹಬೀಬರಂತೆ ಶೆಟ್ಟರ್ ಟಾಪಿಕಲ್ ವಸ್ತುವಿನ ಬಗ್ಗೆ ಬರೆಯುವುದಿಲ್ಲ. ಈ ಪುಸ್ತಕ ಕೂಡ ನಮ್ಮೆಲ್ಲರನ್ನು ಸದ್ಯ ಆವರಿಸುತ್ತಿರುವ ಸಮಸ್ಯೆಯ ಬಗ್ಗೆ ಪರೋಕ್ಷವಾಗಿ ಎಚ್ಚರಿಸುತ್ತದೆ. ಕನ್ನಡ ನಾಡು ನುಡಿ ಸಂಸ್ಕೃತಿಗಳ ನಿರ್ವಚನದಲ್ಲಿ ಆಂಶಿಕ ಸತ್ಯವನ್ನೇ ಸತ್ಯವೆಂದು ಪ್ರತಿಪಾದಿಸುತ್ತಾರೆ ಎಂಬುದನ್ನು ಹಿಂದಾಗಲೇ ಪ್ರಸ್ತಾಪಿಸಿದ್ದೇನೆ. ಆದರೆ ಸಾಹಿತ್ಯವಾಗಲೀ ಚರಿತ್ರೆಯಾಗಲೀ ಸತ್ಯವೆಂಬುದು ಹಠಾತ್ ಪ್ರತ್ಯಕ್ಷವಾಗುವ ಅಥವಾ ಆಖೈರಾಗಿ ಕೈಗೆ ಸಿಕ್ಕುವ ಶಕ್ತಿಯಲ್ಲ. ಅದು ಹಂತಹಂತವಾಗಿ ಗೋಚರಿಸುತ್ತಾ ಹೋಗುವಂಥದು. ಇಂದಿನ ಸಾಂಸ್ಕೃತಿಕ ಭಿತ್ತಿಯಲ್ಲಿ- ನಮ್ಮ ರಾಜಕೀಯದಲ್ಲಿ ಆಗುತ್ತಿರುವಂತೆ - ಸಂಕುಚಿತವಾದ ಆಂಶಿಕ ಸತ್ಯಗಳನ್ನು ತಮ್ಮ ಅನುಕೂಲಕ್ಕನುಸಾರವಾಗಿ ಎಗ್ಗಿಲ್ಲದೆ ಹಿಗ್ಗಿಸುವ ಆತುರದ, ಅಸಹನೀಯತೆಯ ಅಸಹ್ಯ ಪ್ರವೃತ್ತಿ ಎಲ್ಲ ಕಡೆ ಸೋಂಕುಜಾಡ್ಯದಂತೆ ಹಬ್ಬುತ್ತಿದೆ. ಜಾತೀಯ ಉಪಜಾತೀಯ, ಉಪಉಪಜಾತೀಯ, ಪ್ರಾದೇಶಿಕ, ಉಪಪ್ರಾದೇಶಿಕ, ಉಪಉಪಪ್ರಾದೇಶಿಕ ವಕ್ತಾರರೆಲ್ಲರೂ ನಿಜಗಳನ್ನು ತಮ್ಮ ಜೊತೆಗಾರರೆಂದು ಪರಿಗಣಿಸದೇ ಎದುರಾಳಿಗಳಂತೆ ನೋಡಹತ್ತಿದ್ದಾರೆ. ತಮ್ಮ ಜೊತೆಗಿನ ಸತ್ಯಗಳನ್ನು ಹೇಗಾದರೂ ಮಾಡಿ ಭೂಗತಗೊಳಿಸುವ ತರಾತುರಿಯಲ್ಲಿದ್ದಾರೆ. ಆದರೆ ಶೆಟ್ಟರ್ ಅವರ ಬಿಚ್ಚುನೋಟದ ಕ್ರಮ ಮತಿಗೆಡದ ತಾಳ್ಮೆಯಿಂದ, ಅನ್ವೇಷಕನ ಶ್ರದ್ಧೆಯಿಂದ ನಿಜದ ಗೋಜುಗೋಜಲುಗಳನ್ನು ಒಂದೊಂದಾಗಿ ಬಿಡಿಸುತ್ತಾ ಹೋಗುವುದು....

ಅಲ್ಲಮಪ್ರಭು ಹೇಳಿದ ಹಾಗೆ 'ಮಣಿಯನೆಣಿಸಿ ದಿನವ ಕಳೆಯಲು ಬೇಡ ಒಮ್ಮೆಯಾದರೂ ನಿಜದ ನೆನೆಹೇ ಸಾಕು, ಒಂದರೆಗಳಿಗೆಯಾದರೂ ನಿಜದ ನೆನೆಹೇ ಸಾಕು'.

ಈ ಪುಸ್ತಕದ ಓದಿನಿಂದ ಸಂತಸಂತೂ 'ಮಣಿ ಎಣಿಸುವ' ಖಾಯಿಲೆಯಿಂದ ಬಹುಮಟ್ಟಿಗೆ ಗುಣಹೊಂದಿದ್ದೇನೆ.

ಜವಾಹರ್‌ಲಾಲ್ ನೆಹರೂ ವಿವಿ.
ನವದೆಹಲಿ

ಎಚ್.ಎಸ್. ಶಿವಪ್ರಕಾಶ

# ನುಡಿವ ಬೆಡಗು-೧

'ಪ್ರಪಂಚದ ಸುಮಾರು ೭೦೦೦ ಭಾಷೆಗಳಲ್ಲಿ ಪ್ರತಿ ಎರಡು ವಾರಗಳಿಗೊಂದು ಭಾಷೆ ಸಾಯುತ್ತಿವೆ' ಎಂಬ ವಿಷಯ ವರದಿಯಾಗಿದೆ. ಆಸ್ಟ್ರೇಲಿಯಾದ ಕೆಲಭಾಗಗಳು, ಸೈಬೀರಿಯಾ, ಪೆರು, ಬ್ರೆಜಿಲ್, ದಕ್ಷಿಣ ಆಫ್ರಿಕಾ, ಕೊಲಂಬಿಯಾ, ಬೊಲಿವಿಯಾದಂತಹ ಪ್ರದೇಶಗಳಲ್ಲಿ ತೀವ್ರವಾಗಿ ಜನಬಳಕೆಯ ಭಾಷೆಗಳು ಕಣ್ಮರೆಯಾಗುತ್ತಿವೆ. 'ಒಂದು ಭಾಷೆಯ ಅವಸಾನವೆಂದರೆ ಅನೇಕ ಶತಮಾನಗಳ ಜ್ಞಾನದ/ತಿಳಿವಳಿಕೆಯ ಅವಸಾನವೆಂದು' ಡೇವಿಡ್ ಹ್ಯಾರಿಸನ್ ಅಭಿಪ್ರಾಯಪಡುತ್ತಾರೆ. ಕಾಲ, ಋತು, ಗಣಿತ, ಪುರಾಣ, ವಿಜ್ಞಾನ, ನಂಬಿಕೆ, ಸಂಗೀತ, ಕಲೆ, ಬದುಕಿನ ಕ್ರಮ, ಆರೋಗ್ಯ ಹೀಗೆ ಅನೇಕ ಶತಮಾನಗಳಿಂದ ಹರಿದು ಬಂದಿರುವ ಜ್ಞಾನಸಂಪತ್ತು ನಾಶಗೊಂಡುಬಿಡುತ್ತದೆ. ಭಾಷೆ ಅವಸಾನಗೊಳ್ಳಲು ಆ ಪ್ರದೇಶದ ಪ್ರಭುತ್ವ ಹೇರುವ ಒತ್ತಡಗಳು ಮತ್ತು ಸಂದರ್ಭಗಳು ಒಂದು ಕಾರಣವಾದರೆ ಆಯಾ ಭಾಷೆಗಳಲ್ಲಿನ ಸಾಹಿತ್ಯ, ಅರ್ಥಕೋಶ, ಪಠ್ಯಗಳು ಅಲಭ್ಯವಾಗಿರುವುದು ಮತ್ತೊಂದು ಕಾರಣ. ಈ ಭಾಷೆಗಳನ್ನು ಆಧುನಿಕವಾಗಿ ಸಜ್ಜುಗೊಳಿಸದಿದ್ದರೆ, ಸಾಹಿತ್ಯ ಮತ್ತಿತರ ಮಾಧ್ಯಮಗಳಲ್ಲಿ ದಾಖಲಿಸದಿದ್ದರೆ, ಹೊಸ ಹೊಸ ರೀತಿಯಲ್ಲಿ ಬಳಸುವುದನ್ನು ಕುರಿತು ಚಿಂತಿಸದಿದ್ದರೆ, ಶಿಕ್ಷಣದಲ್ಲಿ ಈ ಬಗೆಯ ಬದಲಾವಣೆಗಳನ್ನು ತರದಿದ್ದರೆ ಅವು ಸಾಯುತ್ತವೆ ಎಂಬ ಮಾತನ್ನು ಡೇವಿಡ್ ಹೇಳುತ್ತಾರೆ. ಈಗ ಪ್ರಬಲ ೮೩ ಭಾಷೆಗಳು ಮಾತ್ರ ಪ್ರಪಂಚದ ಶೇ.೮೦ ಭಾಗದಲ್ಲಿ ಚಾಲ್ತಿಯಲ್ಲಿದ್ದರೆ, ೩,೫೦೦ ಭಾಷೆಗಳು ಶೇ.೦.೨ರಷ್ಟು ಭಾಗದ ಜನರ ಭಾಷೆಯಾಗಿವೆ. ಇದು ಪ್ರಪಂಚದ ಕಥೆಯೆಂದು ನಾವು ಸುಮ್ಮನೆ ಕೂರುವಂತಿಲ್ಲ. ಕರ್ನಾಟಕದ ಹಲವು ಬುಡಕಟ್ಟು ಜನಾಂಗ ಭಾಷೆಗಳು ಈಗಾಗಲೇ ಕಣ್ಮರೆಯಾಗಿವೆ, ಇನ್ನೂ ಕೆಲವು ಆ ನಿಟ್ಟಿನಲ್ಲಿವೆ. ಅತ್ಯಂತ ಶ್ರೀಮಂತ ಸಾಹಿತ್ಯ ಪರಂಪರೆ ಎಂಬ ಹೆಗ್ಗಳಿಕೆಗೆ ಪಾತ್ರವಾದ ಸಂಸ್ಕೃತ ಇಂದು ಶಾಸ್ತ್ರೀಯ ಭಾಷೆ ಎಂಬ ಹೆಮ್ಮೆಗೆ ಮಾತ್ರ ಪಾತ್ರವಾಗಿದೆ. ಪಂಪ, ರನ್ನ ಕುಮಾರವ್ಯಾಸ, ಸಂಸ್ಕೃತದ ಕಾಳಿದಾಸ, ಆಧುನಿಕ ಕಾಲದ ಬೇಂದ್ರೆ ಅಡಿಗ ಮುಂತಾದವರನ್ನು ತಮ್ಮ ನೆನಪಿನ ಮೂಲಕ ಉದಾಹರಿಸುತ್ತಿದ್ದ ಪಂಡಿತರು ಈಗ ಅಪರೂಪವಾಗುತ್ತಿದ್ದಾರೆ. ಸ್ಪಷ್ಟವಾಗಿ ಕನ್ನಡ ಉಚ್ಚರಿಸಬಲ್ಲವರೂ ಕಡಿಮೆಯಾಗಿದ್ದಾರೆ. ಹೀಗೆಯೇ ಮುಂದುವರೆದರೆ ಕನ್ನಡದ ಸ್ಥಿತಿಯೇನು? ಇಂತಹ ಆತಂಕಗಳ ಮಧ್ಯೆಯೂ ಕೆಲವರಿರುವುದು ನಮ್ಮ ಭಾಗ್ಯ. ಅಂಥವರಲ್ಲಿ ಪ್ರೊ. ಷ. ಶೆಟ್ಟರ್ ಒಬ್ಬರು.

ಪ್ರೊ. ಶೆಟ್ಟರ್ ಅವರ ಈ ಪುಸ್ತಕ ಭಾಷೆ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಬಹುಮುಖ್ಯವಾದ ವಾಗ್ವಾದಗಳನ್ನು ನಮ್ಮ ಮುಂದಿಟ್ಟಿದೆ. ತಮಿಳಿಗಿಂತ ಮೊದಲೇ ಲಿಪಿಯನ್ನು ಕನ್ನಡ, ತೆಲಗು ಭಾಷೆಗಳು ರೂಢಿಸಿಕೊಂಡಿದ್ದೆಂಬುದು ಇಲ್ಲಿಯ ಮೊಟ್ಟ ಮೊದಲ ಆಧಾರಸಹಿತ ದಾಖಲೆ. ಅಪ್ಪಟ ದ್ರಾವಿಡ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಶಂಗಂ ಸಾಹಿತ್ಯಕ್ಕೆ ಕರ್ನಾಟಕದ

ಹಲವು ಕವಿಗಳ ಪಾಲಿರುವುದನ್ನು ಹೆಕ್ಕಿ ತೆಗೆದಿರುವುದು, ಎರಡನೆಯದು. ಈ ಹಿನ್ನೆಲೆಯಲ್ಲಿ ಅವರು ಹಲವು ಉಪಕ್ರಮಗಳ ಮೂಲಕ ಭಾಷೆ, ರಾಜಕೀಯ ಸ್ಥಿತ್ಯಂತರಗಳು, ನೈಸರ್ಗಿಕ ವಿಕೋಪಗಳಿಂದಾದ ಅವಘಡಗಳು, ಸಾಂಸ್ಕೃತಿಕ ಪಲ್ಲಟಗಳು ಮುಂತಾದ ಆರಂಭಕಾಲಘಟ್ಟದ ಚಿತ್ರಗಳನ್ನು ನಮ್ಮ ಮುಂದಿರಿಸಿದ್ದು ಅದಕ್ಕೆ ಶಾಸ್ತ್ರೀಯವಾಗಿ, ವೈಜ್ಞಾನಿಕವಾಗಿ ಆಧಾರಗಳನ್ನೂ ನೀಡುತ್ತಾರೆ. ಇಲ್ಲಿರುವ ಪ್ರತಿ ಅಧ್ಯಾಯವೂ ಒಂದು ಪ್ರತ್ಯೇಕ ಅಧ್ಯಯನ ವ್ಯಾಪ್ತಿಯನ್ನೂ ಹೊಂದಿದೆ. ಪ್ರೊ. ಶೆಟ್ಟರ್ ಅವರು ಎತ್ತುವ ಈ ವಾಗ್ವಾದ, ಚರ್ಚೆ ಇನ್ನೂ ವಿಸ್ತಾರಗೊಳ್ಳಲು ಅವಕಾಶವಿದೆ ಎಂಬುದನ್ನು ತೋರುತ್ತದೆ. ಉದಾ: ಭಾಷಾವಿಜ್ಞಾನದ ಹಿನ್ನೆಲೆಯಲ್ಲಿ, ಸಾಂಸ್ಕೃತಿಕ ಆಯಾಮಗಳ ಹಿನ್ನೆಲೆಯಲ್ಲಿ, ಶೈಲಿಯ ವಿಚಾರಗಳ ಹಿನ್ನೆಲೆಯಲ್ಲಿ ಈ ಚರ್ಚೆ ವ್ಯಾಪಕತೆಯನ್ನೂ ಪಡೆಯಬೇಕಿದೆ. ಅಂತಹ ಪ್ರಯತ್ನಗಳಿಗೆ ಈ ಕೃತಿ ಚಿಮ್ಮುಹಲಗೆಯಾಗಲೆಂದು, ಬಿರುಕುಗೊಂಡಿರುವ ಜನ, ಭಾಷೆ, ನಾಡು, ಸಂಬಂಧಗಳು ಬೆಸೆಯಲೆಂದು ನಾನು ಆಶಿಸುವೆ.

ಅಭಿನವದ ನೂರನೆಯ ಪುಸ್ತಕವಿದು. ಯಾವುದೇ ತತ್ವ, ಸಿದ್ಧಾಂತ, ವರ್ಗಕ್ಕೆ ಸೀಮಿತಗೊಳಿಸಿಕೊಳ್ಳದೆ ಬದುಕಿನ ಬಹುಮುಖತ್ವಕ್ಕೆ ತೆರೆದುಕೊಂಡ ಪ್ರಯೋಗಗಳು, ಈ ನಮ್ಮ ಪ್ರಕಟನೆಗಳು. ಸೀಮಿತ ಓದುಗ ವಲಯ, ಸಂಪನ್ಮೂಲಗಳ ಕೊರತೆಯಿಂದ ದ್ವೀಪಗಳಾಗಿ ಈ ಪ್ರಯತ್ನಗಳು ಉಳಿದವೇನೊ ಎಂಬ ಅನುಮಾನದ ಮಧ್ಯೆ ಕೂಡ ಕನ್ನಡದ ಅರಿವನ್ನು ವಿಸ್ತರಿಸುವ ಪುಟ್ಟ ಪ್ರಯತ್ನವನ್ನಂತೂ ಅಭಿನವ ಮಾಡಿದೆ. ಅದು ಬೆಳೆಯಬೇಕಾದ್ದು ಬೆಳಗಬೇಕಾದ್ದು ಮುಂದಿನ ಕನ್ನಡ ಮನಸ್ಸುಗಳೊಂದಿಗೆ.

ಅಭಿನವ ಪ್ರೀತಿಯನ್ನು, ಎಚ್ಚರವನ್ನು, ಆತಂಕಗಳನ್ನು, ಮುನಿಸುಗಳನ್ನು ದುಗುಡವನ್ನು- ಆಸೆಗಳನ್ನು, ಸಂಬಂಧಗಳನ್ನು ಹಿಗ್ಗಿಸಿದೆ. ಈ ಪ್ರಯತ್ನದ ಹಿಂದೆ ಹಲವು ಮನಸ್ಸುಗಳು, ಮುಖಗಳು, ಕೈಗಳು ಕೆಲಸ ಮಾಡಿವೆ. ಇವರೆಲ್ಲರಿಗೂ ಈ ಪುಸ್ತಕ ಮುಡಿವು.

ಈ ವಿದ್ವತ್‌ಪೂರ್ಣ ಕೃತಿಯನ್ನು ಅಭಿನವಕ್ಕೆ ಪ್ರಕಟಿಸಲು ಅನುಮತಿ ನೀಡಿದ ಶೆಟ್ಟರ್ ಅವರಿಗೆ, ಮುನ್ನುಡಿ ಬರೆದುಕೊಟ್ಟಿರುವ ಶಿವಪ್ರಕಾಶ್, ಹಲವು ರೀತಿಯಲ್ಲಿ ಈ ಕೃತಿ ಹೊರಬರಲು ಕಾರಣರಾದ ಪದ್ಮನಾಭನ್, ಬಸವರಾಜ ಕೊಡಗುಂಟಿ, ಹೂವಪ್ಪ, ಯು.ಟಿ. ಸುರೇಶ್, ಭಾರತೀದೇವಿ, ಪ್ರಕಾಶ ಎಂ. ವಾಲಿ, ನಮ್ಮ ಕೆಲಸಗಳನ್ನು ಯಾವತ್ತೂ ಬೆಂಬಲಿಸುವ ಚಿ. ಶ್ರೀನಿವಾಸರಾಜು, ಎಚ್.ಎಸ್. ರಾಘವೇಂದ್ರರಾವ್, ರವಿ ಬೆಳಗೆರೆ, ಕೆ. ವೆಂಕಟರಾಜು, ಜಿ. ರಾಜಶೇಖರ, ಫಣಿರಾಜ್, ವಿಜಯಮ್ಮ ಪ್ರಭುಶಂಕರ, ಜಿ.ಎನ್. ಮೋಹನ್, ಅಜಿತಾ ವೇಣುಕೃಷ್ಣ ಪ್ರಸಾದ್ ಮುಂತಾದ ಹಿರಿಯರಿಗೂ, ಗೆಳೆಯರಿಗೂ ಅಭಿನವದ ಪರವಾಗಿ ಧನ್ಯವಾದಗಳು.

ಬೆಂಗಳೂರು<br>ನವಂಬರ್ ೨೦೦೭

ನ. ರವಿಕುಮಾರ

# ನುಡಿವ ಬೆಡಗು-೨

ಈ ಪುಸ್ತಕ ಪ್ರಕಟವಾದಾಗಿನಿಂದ ಅಥವಾ *ಸಂಕಲನ* ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ಕಾಲದಿಂದ ಹಲವು ಬಗೆಯ ಚರ್ಚೆಗಳು, ಸಂವಾದಗಳು ನಿರಂತರವಾಗಿ ನಡೆಯುತ್ತಿವೆ. ಈವರೆವಿಗೆ ಈ ಪುಸ್ತಕದ ಬಗೆಗೆ ನಡೆದಿರುವ ಚರ್ಚೆಯನ್ನು ಒಂದೆಡೆ ಕಲೆಹಾಕಿ ಪ್ರಕಟಿಸಿದರೆ ಅದೇ ಒಂದು ದೊಡ್ಡ ಪುಸ್ತಕವಾದೀತು.

ಈ ಚರ್ಚೆಯಲ್ಲಿ ಕರ್ನಾಟಕದ ಎಲ್ಲ ಭಾಗದ ಜನರೂ ಭೇದವಿಲ್ಲದೆ ಪಾಲ್ಗೊಂಡಿರುವುದು ಸಮಾಧಾನದ ಸಂಗತಿ.

*

ಪುಸ್ತಕ ಬಿಡುಗಡೆಯ ಸಂದರ್ಭದಲ್ಲಿ (೨೭.೧೧.೨೦೦೭) ಚಂದ್ರಶೇಖರ ಕಂಬಾರರು 'ಇದು ಆಚಾರ್ಯ ಕೃತಿ' ಎಂದರು. ಹಾಗೆಯೇ ಕಿ.ರಂ. ನಾಗರಾಜ ಅವರು 'ಕನ್ನಡದ ಬಗ್ಗೆ ವೀರಾವೇಶದಿಂದ ಘೋಷಣೆ ಹೊರಡಿಸುವ ಪರಾಕ್ರಮವಾದಿಗಳು ಹಾಗೂ ಸುಸಂಸ್ಕೃತ, ಮೃದು ಮನಸ್ಸಿನ ಎರಡು ವಲಯಗಳಿವೆ. ಇವೆರಡೂ ವಲಯಕ್ಕಿಂತ ಭಿನ್ನವಾಗಿ ಯೋಚಿಸುವ ಕೃತಿ ಶೆಟ್ಟರ್ ಅವರದ್ದಾಗಿದೆ. ಚರಿತ್ರೆ, ಅಧ್ಯಯನದ ಒಳನೋಟವನ್ನು ಹೊಂದಿದ ಅಖಂಡ ಕೃತಿ ಇದಾಗಿದೆ. ಸಂಸ್ಕೃತಿಯ ಶೋಧ ಯಾವ ರೀತಿ ಇರಬೇಕು ಎಂಬುದಕ್ಕೆ ಮಾದರಿ ಈ ಕೃತಿ' ಎಂದು ವಿಶ್ಲೇಷಿಸಿದರು. ಎಲ್.ಎಸ್. ಶೇಷಗಿರಿರಾವ್, ಐ.ಎಂ. ವಿಠಲಮೂರ್ತಿಯವರೂ ಸಹ 'ಕನ್ನಡದಲ್ಲಿ ಪ್ರಕಟವಾದ ಅಪರೂಪದ ಕೃತಿ' ಎಂದರು.

ಮಂಗಳೂರಿನಲ್ಲಿ (೧೧.೧೨.೨೦೦೭) ನಡೆದ ವಿಚಾರಸಂಕಿರಣದಲ್ಲಿ ಚಿನ್ನಪ್ಪಗೌಡ ಅವರು 'ಈವರೆವಿಗೆ ಆರ್ಯ ಸಂಸ್ಕೃತಿ ಮೇಲ್ಮಟ್ಟದ್ದೆಂದೂ, ದ್ರಾವಿಡ ಸಂಸ್ಕೃತಿ ಕೆಳಮಟ್ಟದ್ದೆಂದೂ ಭಾವಿಸಲಾಗಿದೆ. ಆದರೆ ಇವೆರಡರ ಸಂಬಂಧವನ್ನು ಭಿನ್ನವಾಗಿ ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಈ ಕೃತಿ ಗಮನಿಸುತ್ತದೆ. ಚರಿತ್ರೆ ಯಾವಾಗಲೂ ರಾಜರ, ಪ್ರಭುತ್ವದ, ಆಡಳಿತದ ದಾಖಲೆಯಾಗದೆ ಜನಸಮುದಾಯದ, ಈ ನೆಲದ, ಸಂಸ್ಕೃತಿಯ ದಾಖಲೆಯಾಗಬೇಕು. ಆ ಕೆಲಸವನ್ನು ಶೆಟ್ಟರ್ ಅವರ ಕೃತಿ ಮಾಡಿದೆ' ಎಂದು ಅಭಿಪ್ರಾಯಪಟ್ಟರು. ಇದೇ ಸಂದರ್ಭದಲ್ಲಿ ಹಿರಿಯ ವಿಮರ್ಶಕ ಜಿ. ರಾಜಶೇಖರ್ ಮಾತನಾಡಿ 'ಈ ಕೃತಿ ಸಂಸ್ಕೃತಿಯ ಅನೇಕ ಸೂಕ್ಷ್ಮ ವಿಚಾರಗಳನ್ನು ನಮ್ಮ ಮುಂದಿಡುತ್ತದೆ. ಚರಿತ್ರೆ ಬೇರೆ, ಸಾಹಿತ್ಯ ಬೇರೆ ಎಂಬ ಭೇದ ಮಾಡದೆ ಜನಸಮುದಾಯದ ಸಂಸ್ಕೃತಿಯನ್ನು ಕಟ್ಟಿಕೊಡುವ ಪ್ರಯತ್ನ ಮಾಡಿದೆ... ಶೆಟ್ಟರ್ ಅವರ ಇಂಗ್ಲಿಷಿನಲ್ಲಿರುವ ಎಲ್ಲ ಕೃತಿಗಳೂ ಕನ್ನಡಕ್ಕೆ ಅನುವಾದಗೊಳ್ಳಬೇಕು' ಎಂದರು. ಇದೇ ಸಂದರ್ಭದಲ್ಲಿ ಕವಿತಾ ರೈ ಅವರೂ ಪ್ರತಿಕ್ರಿಯಿಸಿದರು.

ಗುಲ್ಬರ್ಗಾದಲ್ಲಿ ನಡೆದ ವಿಚಾರಗೋಷ್ಠಿಯಲ್ಲಿ (೧೭.೦೩.೨೦೦೮) ಶರಣಬಸಪ್ಪ ಅಪ್ಪಾ ಅವರು ಮಾತನಾಡಿ 'ಈ ಕೃತಿಯನ್ನು ಓದಿದ ಯಾರಿಗೇ ಆಗಲಿ ಕನ್ನಡ ಭಾಷೆ, ಸಂಸ್ಕೃತಿ, ದೇಶದ ವಿಸ್ತಾರವಾದ ಪರಿಚಯವಾಗುತ್ತದೆ' ಎಂದರು. ಸಿ. ನಾಗಭೂಷಣ ಅವರು ಕೃತಿ ಕುರಿತು ಪ್ರತಿಕ್ರಿಯಿಸುತ್ತಾ 'ಈವರೆವಿಗೆ ಬೇರೆ ಯಾರೂ ಚಿಂತಿಸದ *ಕವಿರಾಜಮಾರ್ಗ*ದ ದ್ರಾವಿಡ ಬೇರುಗಳಾವುವು ಎಂಬ ಹೊಸ ಪ್ರಶ್ನೆಯನ್ನು ಮುಂದಿರಿಸಿಕೊಂಡು ದಕ್ಷಿಣದ ಇತರ ಪ್ರಾಂತೀಯ ಭಾಷೆಗಳು ಬೆಳೆದಿರುವಂಥ ಸಾಹಿತ್ಯದ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿದ ಮೊದಲ ಮತ್ತು ಏಕಮೇವ ಕೃತಿಯಾಗಿದೆ' ಎಂದರು. ಮುಂದುವರೆದ ಅವರು 'ಸಾಂಸ್ಕೃತಿಕ ರಾಜಕೀಯ ರಚನೆ ಮತ್ತು ಪ್ರಕ್ರಿಯೆಗಳ ಅಸಮಾನಾಂತರ ಸಂಬಂಧ ಈ ಪುಸ್ತಕದ ಮುಖ್ಯ ಪ್ರತಿಪಾದನೆಯಾಗಿದೆ. ಶೆಟ್ಟರ್ ಅವರ ಶ್ರಮ ಮತ್ತು ಶೋಧನೆಯ ಫಲವಾಗಿ ಆರಂಭಕಾಲದ ಕರ್ನಾಟಕ ಇತಿಹಾಸದ ಮಹತ್ವದ ಅಧ್ಯಾಯವೊಂದು ಪ್ರಪ್ರಥಮವಾಗಿ ಈ ಕೃತಿಯ ಮೂಲಕ ಹೊರಬಂದಿದೆ. ಮೌರ್ಯ ಅಶೋಕ ಮತ್ತು ಬನವಾಸಿ ಕದಂಬರ ಆಳ್ವಿಕೆಯ ನಡುವೆ ಬಾಯ್ದೆರೆದು ನಿಂತಿದ್ದ ಕಂದಕವನ್ನು ತುಂಬಿ ಈ ಕಾಲದಲ್ಲಿ ಕರ್ನಾಟಕದ ರಾಜಕೀಯ ಶಕ್ತಿಗಳಾಗಿ ಬೆಳೆದು ತಮಿಳರನ್ನು ಗಡಿಯಾಚೆ ನಿಲ್ಲಿಸಿದ ಎರುಮೈ, ಪುನ್ನಾಟ, ಕೊಂಗ, ಕೊಂಕಣ, ಕದಂಬ, ಗಂಗ ಮೊದಲಾದವರು ಕನ್ನಡ ಮತ್ತು ತಮಿಳು ಬೆಳವಣಿಗೆಗೆ ಕೊಟ್ಟ ಕಾಣಿಕೆಯನ್ನು ಮನದಟ್ಟು ಮಾಡಿಕೊಟ್ಟಿದ್ದಾರೆ. ಈ ವಿವರಣೆ ಕರ್ನಾಟಕ ಇತಿಹಾಸದ ಬಗೆಗಿನ ಗ್ರಹಿಕೆಯನ್ನೂ ಮರು ಆಲೋಚನೆಗೆ ಒಳಪಡಿಸುವಂತೆ ಮಾಡಿದೆ.... ವಿಷಯ ಸಂಗ್ರಹದಲ್ಲಿ ಧಾರಾಳತೆ, ನಿರೂಪಣೆಯಲ್ಲಿ ವಸ್ತುನಿಷ್ಠತೆ, ಭಾಷೆಯ ಬಳಕೆಯಲ್ಲಿ ಸರಳತೆ, ವಿಷಯ ಮಂಡನೆಯಲ್ಲಿ ಸ್ಪಷ್ಟತೆಗಳು ಈ ಕೃತಿಯಲ್ಲಿ ಎದ್ದು ಕಾಣುತ್ತವೆ. ಪ್ರತಿ ಅಧ್ಯಾಯದ ಅಡಿಟಿಪ್ಪಣಿಗಳಲ್ಲಿ ಪ್ರಸ್ತಾಪಿಸಿರುವ ವಿಷಯ ವೈವಿಧ್ಯಗಳು ಓದುಗರನ್ನು ನಿಬ್ಬೆರಗಾಗಿಸಿವೆ. ಅಧ್ಯಯನದುದ್ದಕ್ಕೂ ಚಿಕಿತ್ಸಕ ದೃಷ್ಟಿಕೋನ, ಶ್ರಮ ಸಹಿಷ್ಣುತೆ ಎದ್ದುಕಾಣುತ್ತದೆ. ವಿಷಯದ ನಿರೂಪಣೆ, ತೀರ್ಮಾನ ಹಾಗು ಮುಕ್ತಾಯಗಳು ತರ್ಕಬದ್ಧವಾಗಿ ಸುಸಂಬದ್ಧವಾಗಿದ್ದು ಸರಾಗವಾಗಿ ಓದಿಸಿಕೊಂಡು ಹೋಗುವಲ್ಲಿ ಯಶಸ್ವಿಯಾಗಿದೆ' ಎಂದು ಅಭಿಪ್ರಾಯಪಟ್ಟರು. ಎಸ್.ಜಿ. ಸಿದ್ಧರಾಮಯ್ಯ ಅವರು 'ಈವರೆವಿಗೆ ಚರಿತ್ರೆಯನ್ನು ಸರಳ ರೇಖಾತ್ಮಕವಾಗಿ ಗ್ರಹಿಸಲಾಗಿದೆ ಆದರೆ ಈ ಕೃತಿ ಚರಿತ್ರೆ ಮತ್ತು ಸಂಸ್ಕೃತಿಯನ್ನು ಬಹುಮುಖಿ ಮತ್ತು ಚಲನಶೀಲ ಪ್ರಕ್ರಿಯೆಯ ನೆಲೆಯಲ್ಲಿ ಗ್ರಹಿಸಿರುವುದು ವಿಶೇಷ' ಎಂದರು. ವಸಂತ ಕುಷ್ಟಗಿಯವರು 'ಈ ಕೃತಿ ಇಡೀ ಕನ್ನಡ ಸಾಹಿತ್ಯ ಮತ್ತು ಚರಿತ್ರೆಯನ್ನು ಗ್ರಹಿಸುವ ವಿಧಾನವನ್ನೇ ಬದಲಾಯಿಸಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಡಿ.ಬಿ. ನಾಯಕರು 'ದ್ರಾವಿಡ ಸಂಬಂಧದ ಹಲವು ಮಗ್ಗಲುಗಳನ್ನು ಈ ಕೃತಿ ಚರ್ಚೆಗೆ ಒಳಪಡಿಸುತ್ತದೆ' ಎಂದರು.

ಶಿವಮೊಗ್ಗದಲ್ಲಿ(೪, ೫ ಏಪ್ರಿಲ್ ೨೦೦೮) ನಡೆದ ವಿಚಾರ ಸಂಕಿರಣದಲ್ಲಿ ಕೆ.ವಿ. ಅಕ್ಷರ ಅವರು ಷೆಲ್ಡನ್ ಪೋಲಕ್‌ರ ವಿಚಾರಗಳ ಹಿನ್ನೆಲೆಯಲ್ಲಿ ಈ ಪುಸ್ತಕವನ್ನು ಗ್ರಹಿಸಲು

ಪ್ರಯತ್ನಿಸಿದರು. ರಹಮತ್ ತರೀಕೆರೆ, ಬಿ.ರಾಜಶೇಖರಪ್ಪ ಡಿ.ಎಸ್. ನಾಗಭೂಷಣ, ಸಿರಾಜ್ ಅಹಮದ್, ಕಿ.ರಂ. ನಾಗರಾಜ್, ಕೆ.ವಿ. ನಾರಾಯಣ, ರಾಜೇಂದ್ರ ಚೆನ್ನಿ ಮುಂತಾದವರು ಚರ್ಚೆಯಲ್ಲಿ ಪಾಲ್ಗೊಂಡರು.

ಮೇಟಿ ಮಲ್ಲಿಕಾರ್ಜುನ ಅವರು *ಸಂವಾದ* ಪತ್ರಿಕೆಯಲ್ಲಿ ಈ ಕೃತಿಯ ಬಗೆಗೆ ಬರೆಯುತ್ತಾ 'ಗತಕಾಲವನ್ನು ಮರುಸಂಪಾದಿಸುವ (Reclaiming the past) ಪ್ರಕ್ರಿಯೆಯು ಮೇಲ್ ನೋಟಕ್ಕೆ ಬಹಳ ಸರಳವಾಗಿ ಪರಿಣಮಿಸಬಹುದು ಆದರೆ, ಅದು ಸೃಷ್ಟಿಸುವ ಚಾರಿತ್ರಿಕ ಸಂಕೀರ್ಣತೆ ಬಹಳ ಜಟಿಲವಾದದ್ದು. ಆದ್ದರಿಂದ, ಇಂತಹ ಆಲೋಚನೆಗಳು ನಮ್ಮ ಚಾರಿತ್ರಿಕ-ಸಾಂಸ್ಕೃತಿಕ ತಿಳಿವಳಿಕೆಯನ್ನು ವಿಸ್ತಾರಗೊಳಿಸುವ ಮಾನದಂಡಗಳಾಗುವುವು? ಯಾಕೆಂದರೆ, ಶೆಟ್ಟರ್ ಅವರ ವಾದಗಳು ಚರಿತ್ರೆಯ ಸತ್ಯಗಳ ಪುನರ್ ಶೋಧವಾದುದರಿಂದ ಕನ್ನಡದ ಮೂಲ/ಆದಿಮ ಸ್ವರೂಪವನ್ನು ಅರ್ಥೈಸಿಕೊಳ್ಳಲು ಪೂರಕವಾಗುವುವು. ಈ ಆಲೋಚನಾ ಕ್ರಮದಿಂದ ಶಂಗಂ ತಮಿಳಗಂ ಮತ್ತು ಕನ್ನಡ ನಾಡು-ನುಡಿಯನ್ನು ತೋಲ್ಗಾಪ್ಪಿಯರ್ ಮತ್ತು ಶಂಗಂ ಕಾವ್ಯ ಹಾಗೂ ಕವಿರಾಜಮಾರ್ಗಕಾರ ಇವರ ಕೃತಿಗಳನ್ನು ಅನುಸರಿಸಿಕೊಂಡು ಕನ್ನಡ-ತಮಿಳು ಭಾಷೆಗಳು ರೂಪಿಸಿಕೊಂಡ ಪಾರಂಪರಿಕ ಅನನ್ಯತೆಯ ನೆಲೆಗಳ ಹಿಂದಿರುವ ಪ್ರೇರಣೆ ಮತ್ತು ಪ್ರಕ್ರಿಯೆಗಳನ್ನು ಅರ್ಥೈಸಿಕೊಳ್ಳುವ ಪ್ರಯತ್ನವಾಗಿದೆ.

ಚರಿತ್ರೆಯನ್ನು ಏಕಮುಖವಾಗಿ ನೋಡುವ ಪರಿಪಾಠವು ಇತಿಹಾಸದುದ್ದಕ್ಕೂ ಬೆಳೆದು ಬಂದಿದ್ದರ ಫಲವಾಗಿ, ಎಷ್ಟೋ ಚಾರಿತ್ರಿಕ ಸಾಕ್ಷ್ಯಾಧಾರಗಳು/ನಿಲುವು-ನಿರ್ಧಾರಗಳು/ ಘಟನೆಗಳು/ಸಾಂಸ್ಕೃತಿಕ ಹಿರಿಮೆಗಳು ಯಾವುದೇ ಒಂದು ಜನಾಂಗ-ಸಮೂಹದ ಸ್ವತ್ತಾಗಿ ಆ ಸಮೂಹಗಳಿಗೆ ಸಾಂಸ್ಕೃತಿಕ ಯಜಮಾನಿಕೆ/ಪ್ರಾಬಲ್ಯವನ್ನು ದಕ್ಕಿಸಿಕೊಟ್ಟಿರುವುದು ನಿಜವಾದರೂ ಅದು ಅಪ್ಪಟ ಸುಳ್ಳು ಎನ್ನುವ ಆಲೋಚನ ಕ್ರಮಗಳು ಷ. ಶೆಟ್ಟರ್ ಅವರ ಈ ಸಂಶೋಧನೆಯಿಂದ ನಿರೂಪಿಸಲ್ಪಟ್ಟಿರುವುವು. ಅಂದರೆ, ಒಂದು ಚರಿತ್ರೆಯ ನಿರ್ಮಾಣವು ವೈವಿಧ್ಯ ನೆಲೆಗಳಿಂದ ರೂಪಗೊಂಡಿರುವುದು ಮತ್ತು ಹಲವು ಸಾಂಸ್ಕೃತಿಕ ಸಂದರ್ಭಗಳ ಅಂತರ್ ಚಲನಶೀಲತೆ ಇದಕ್ಕೆ ಸಾಕ್ಷಿ ಎನ್ನುವುದು ಸ್ಪಷ್ಟ ಚರಿತ್ರೆ ಎನ್ನುವಂತಹದು ನಿರಂತರ ರೂಪಗೊಳ್ಳುವ ಜೀವಂತ ಪ್ರಕ್ರಿಯೆ ಇದರ ವೈಶಿಷ್ಟ್ಯ' ಎಂದಿದ್ದಾರೆ.

ಎಂ.ಎಸ್. ಪ್ರಭಾಕರ (ಕಾಮರೂಪಿ) ಅವರು *ದಿ ಹಿಂದೂ* ಪತ್ರಿಕೆಯಲ್ಲಿ ಬರೆದ ವಿಮರ್ಶೆಯ ಭಾಗಗಳಿವು: 'The book begins with a brief *comparative* consideration of the territoriality, language and culture, very broadly the zeitgeist (*yugadharma*), of the land and people of Tamil and Kannada, as represented in tow of the earliest extant works on the grammar and poetics of the two languages: *Tolkappiam* (Ancient Collection, circa First Century AD). And *Kavirajamarga* (The Royal Road of the Poet/Poetry, Ninth Century AD).

A most interesting question that Professor Settar raises (pp. 190 ff) is whether these *minstrels* had also composed verses in their own tongues-Kannada, Tulu, Konkani. Any consideration of such questions would lead one back to the beginnings of recorded Kannada poetic tradition before the author of Kavirajamarga, the starting point of Professor Settar's polemic'. ಹಾಗೆಯೇ ಆರ್. ಪನ್ನಿರ್‌ಸೆಲ್ವಮ್ ಅವರು *'Dravidian Linguistics Association and International School of Dravidian Linguistics'* ಪತ್ರಿಕೆಯಲ್ಲಿ ಬರೆಯುತ್ತ 'He argues about the critical question: Would not a good number of Kannada poets who had been moving from place to place and who had composed poems in Tamil have written poems in their mother tongue Kannada? This is yet another explorative study altogether which one should delve into to find the facts. If we could get any clue of such poets, that would give more strength of the hypothesis of Tamil–Kannada connection which goes back to a period earlier then the *Kavirajamarga*. At the end, he has translated a few *Sangam* poems into Kannada with reasonable clarity...

Settar deserves appreciation for presenting to the Kannada and Tamil population a laudable work by plunging into the ocean of Sangam literature to find out the roots of the history of Karnataka' ಎಂದಿದ್ದಾರೆ.

*ಉದಯವಾಣಿಯ* 'ಪುಸ್ತಕ ಪ್ರೀತಿ'ಯ ಅಂಕಣದಲ್ಲಿ ಮುರಳೀಧರ ಉಪಾಧ್ಯಾಯರು ಪುಸ್ತಕದ ಚರ್ಚೆಯನ್ನು ಬೇರೆಯದೇ ನೆಲೆಗಳಿಗೆ ವಿಸ್ತರಿಸಿದ್ದಾರೆ. 'ಶೆಟ್ಟರ್ ಅವರು ಕನ್ನಡ ಲಿಪಿಯ ವಿಕಾಸದ ಮೇಲೆ, ಕೋಶರು, ಕಳಭ್ರರು ಮುಂತಾದ ಅಲಕ್ಷಿತ ರಾಜವಂಶದ ಮೇಲೆ ಹೊಸ ಬೆಳಕು ಚೆಲ್ಲಿದ್ದಾರೆ. ಷೆಲ್ಡನ್ ಪೋಲಕ್ ಅವರ *ಕವಿರಾಜಮಾರ್ಗದ* ವ್ಯಾಖ್ಯಾನಕ್ಕೆ ಪರೋಕ್ಷವಾಗಿ ಉತ್ತರ ನೀಡಿದ್ದಾರೆ. ಇಪ್ಪತ್ತೊಂದನೆಯ ಶತಮಾನದಲ್ಲಿ ನಡೆಯಬೇಕಾಗಿರುವ ಪ್ರಾಚೀನ ಕನ್ನಡ ನಾಡು-ನುಡಿ ಸಂಶೋಧನೆಗೆ ಈ ಗ್ರಂಥ ದಿಕ್ಸೂಚಿಯಾಗಿದೆ. ವಿದ್ವತ್ಪೂರ್ಣ ಒಳನೋಟಗಳಿರುವ ಈ ಗ್ರಂಥ ತಮಿಳು-ಇಂಗ್ಲಿಷ್‌ಗೆ ಭಾಷಾಂತರಗೊಳ್ಳಬೇಕು. ದಕ್ಷಿಣ ಭಾರತದ ಇತಿಹಾಸ, ಸಾಹಿತ್ಯದ ಸಂಶೋಧಕರು ಶೆಟ್ಟರ್ ಅವರು ಆರಂಭಿಸಿದ ಚರ್ಚೆಯನ್ನು ಸಮೂಹ ಶೋಧವಾಗಿ ಮುಂದುವರಿಸಬೇಕು' ಎಂಬುದು ಅವರ ಅಭಿಪ್ರಾಯ.

ಸಿ.ಎನ್. ರಾಮಚಂದ್ರನ್ ಅವರ *ಪ್ರಜಾವಾಣಿ* ಪತ್ರಿಕೆಯ ವಿಮರ್ಶೆ ಹಲವು ವಾಗ್ವಾದಗಳಿಗೆ ಕಾರಣವಾಗಿದೆ. 'ಶೆಟ್ಟರ್ ಅವರ ಈ ಪುಸ್ತಕ ಶಂಗಂ ಸಾಹಿತ್ಯ ಹಾಗೂ ಆ ಕಾಲಘಟ್ಟದ ತಮಿಳು ರಾಜಕೀಯ ಮತ್ತು ಕರ್ನಾಟಕದ ಆರಂಭ ಕಾಲದ ರಾಜ ಮನೆತನಗಳು,

ಭಾಷೆ-ಲಿಪಿ, ಇತ್ಯಾದಿಗಳ ಬಗ್ಗೆ ಕನ್ನಡದಲ್ಲಿ ಬಂದಿರುವ ಮೊಟ್ಟ ಮೊದಲ ವಸ್ತುನಿಷ್ಠ ಹಾಗೂ ವಿಶ್ವಾಸನೀಯ ಕೃತಿಯಾಗಿ ಎದ್ದು ಕಾಣುತ್ತದೆ' ಎಂಬುದು ಅವರ ನಿಲುವು. ಈ ಲೇಖನಕ್ಕೆ ಪೂರಕವಾಗಿ ಹಲವರು ಚರ್ಚೆಯನ್ನು ಬೇರೆ ಬೇರೆ ನೆಲೆಗಳಲ್ಲಿ ವಿಸ್ತರಿಸಿದ್ದಾರೆ. ಡಿ.ಎಸ್. ನಾಗಭೂಷಣ ಅವರು *ವಿಕ್ರಾಂತ ಕರ್ನಾಟಕ* ಪತ್ರಿಕೆಯ ತಮ್ಮ ಅಂಕಣದಲ್ಲಿ ಈ ಕೃತಿಯನ್ನು ವಿಶ್ಲೇಷಿಸಿದ್ದಾರೆ. 'ತಮಿಳರಂತೆ ತಮ್ಮ ಭಾಷೆಯ ಬಗ್ಗೆ ನಿಜವಾದ ಶ್ರದ್ಧೆಯನ್ನಾಗಲೀ, ಪರಿಶ್ರಮವನ್ನಾಗಲೀ ಪ್ರದರ್ಶಿಸದ ಕನ್ನಡಿಗರು ತಮ್ಮ ಭಾಷೆಗೆ ತಮ್ಮದೇ ಬದುಕಿನಲ್ಲಿ ತಾವು ಕೊಡಲಾಗದ ಮಾನ್ಯತೆಯನ್ನು ಇತರರು ಕೊಡಬೇಕೆಂದು ಬಯಸುವ ಹುಸಿ ಆತ್ಮಾಭಿಮಾನದ ರೋಗಕ್ಕೆ ತುತ್ತಾಗಿ ಬಳಲುತ್ತಿದ್ದಾರೆ. ಈ ರೋಗದಿಂದ ಮುಕ್ತರಾಗದ ಹೊರತು ಕನ್ನಡಿಗರಿಗೆ ಮುಕ್ತಿಯಿಲ್ಲ, ಇದೇ *ಶಂಗಂ ತಮಿಳಗಂ* ಪುಸ್ತಕ ನೀಡುವ ಮುಖ್ಯ ಸಾಂಸ್ಕೃತಿಕ ಹೊಳಹು ಕೂಡಾ ಎಂದು ಭಾವಿಸಿದ್ದೇನೆ' ಸಮಕಾಲೀನ ಕನ್ನಡ ನಾಡು-ನುಡಿಯ ಸಂದರ್ಭದಲ್ಲಿ ಈ ಕೃತಿಯನ್ನು ಅವರು ಚರ್ಚಿಸಿದ್ದಾರೆ. ಕೆ.ವಿ. ನಾರಾಯಣ ಅವರು ಹಲವು ತಾತ್ವಿಕ ಪ್ರಶ್ನೆಗಳನ್ನು ವಿಭಿನ್ನ ಆಯಾಮಗಳಲ್ಲಿ ಚರ್ಚಿಸಿದ್ದಾರೆ. *ದೇಶಕಾಲ* ಪತ್ರಿಕೆಯಲ್ಲಿ ಬರೆಯುತ್ತ '...ಇಲ್ಲಿ ಅನಾವರಣಗೊಂಡಿರುವ ಅಪಾರ ಪ್ರಮಾಣದ ಮಾಹಿತಿಯನ್ನು ಆಧರಿಸಿ, ಅಧ್ಯಯನದ ಉದ್ದಕ್ಕೂ ಸೂಚಿಸಿರುವ ಸಮಸ್ಯೆಗಳನ್ನು ಬಿಡಿಸಬೇಕಾಗಿದೆ. ಇದು ಕನ್ನಡ ವಿದ್ವತ್ ವಲಯದ ಹೊಣೆಗಾರಿಕೆಯಾಗಿದೆ. ಇದಕ್ಕೂ ಮೊದಲು ನಡೆಯಬೇಕಾದ ಕೆಲಸವೊಂದಿದೆ. ಅದೆಂದರೆ ಈ ಅಧ್ಯಯನದ ಮಂಡನೆಗಳನ್ನು ಇಲ್ಲಿನ ಅಧ್ಯಯನ ಪರಿಕರಗಳನ್ನು ನಮ್ಮ ಶೈಕ್ಷಣಿಕ ಶಿಸ್ತಿನ ಭಾಗವನ್ನಾಗಿಸಬೇಕಾಗಿದೆ. ಕನ್ನಡ ನಾಡಿನ ಚರಿತ್ರೆಯನ್ನು ಅಭ್ಯಾಸ ಮಾಡುವ ವಿದ್ಯಾರ್ಥಿಗಳು ಈ ಅಧ್ಯಯನವನ್ನು ತಮ್ಮ ಓದಿನ ಭಾಗವನ್ನಾಗಿ ಮಾಡಿಕೊಳ್ಳುವಂತೆ ಮಾಡಬೇಕಿದೆ. ಇದರಿಂದ ಇಂತಹ ಮಹತ್ವದ ಮಂಡನೆಗಳು ಕೇವಲ ವಿದ್ವತ್ ದ್ವೀಪಗಳಾಗದಂತೆ ನೋಡಿಕೊಳ್ಳುವುದು ಸಾಧ್ಯವಾಗುತ್ತದೆ. ಆದರೆ ಈವರೆಗೆ ನಮ್ಮ ಶೈಕ್ಷಣಿಕ ವಲಯ ಇಂತಹ ಪ್ರಯತ್ನಗಳನ್ನು ನಿರ್ಲಕ್ಷ್ಯದಿಂದಲೇ ನೋಡುತ್ತಿದೆ. ಅದು ಕೇವಲ ವಿದ್ವಾಂಸರ ವಲಯಕ್ಕೆ ಸೇರಿದ್ದೆಂಬಂತೆ ದೂರವಿರಿಸುತ್ತಲೇ ಬಂದಿದೆ. ವಿದ್ವತ್ ವಲಯವೂ ಕೂಡ ಎಷ್ಟೋ ವೇಳೆ ಚರ್ಚೆಯನ್ನು ವಿಸ್ತರಿಸದೆ ಮೌನವಹಿಸಿಬಿಡುತ್ತದೆ. ಈ ಪರಿಸ್ಥಿತಿಯನ್ನು ಬದಲಿಸಬೇಕಿದೆ. ಇದಕ್ಕಿಂತಲೂ ಹೆಚ್ಚಿನ ಅಪಾಯವೊಂದಿದೆ. ಅದೆಂದರೆ ಇಂತಹ ಅಧ್ಯಯನಗಳು ನಡೆದಾಗ ಪ್ರಯತ್ನಗಳನ್ನು ಹೊಗಳಿಕೆಗೆ ಸೀಮಿತಗೊಳಿಸಿ ಚರ್ಚೆಯನ್ನು ಪರೋಕ್ಷವಾಗಿ ಕೊಂದುಬಿಡುವುದೂ ಉಂಟು. ಕಳೆದ ಒಂದೆರಡು ದಶಕಗಳಲ್ಲಿ ಹಲವು ಅಧ್ಯಯನಗಳನ್ನು ಹೀಗೆ ಮುಖ್ಯಧಾರೆಯಿಂದ ಹೊರಗಿರಿಸಲಾಗಿದೆ. ಈ ಅಧ್ಯಯನಕ್ಕೆ ಈ ಅಪಾಯ ಒದಗಬಾರದು. ಹಾಗಾಗದಂತೆ ನೋಡಿಕೊಳ್ಳುವ ಹೊಣೆ ನಮ್ಮೆಲ್ಲರ ಮೇಲಿದೆ' ಕೆ.ವಿ. ನಾರಾಯಣ, ಲಿಂಗದೇವರು ಹಳೆಮನೆಯಂಥವರು ಈ ಕೃತಿ ಎತ್ತುವ ವಾಗ್ವಾದಗಳನ್ನು ಬೇರೆ ಬೇರೆ ರೀತಿಯಲ್ಲಿ ಮುಂದುವರೆಸುವ ಕುರಿತು ಕಾರ್ಯಕ್ರಮಗಳನ್ನೂ ರೂಪಿಸುತ್ತಿದ್ದಾರೆ.

ಸ್ನೇಹಿತರ ಗುಂಪುಗಳಲ್ಲಿ, ಪತ್ರಗಳಲ್ಲಿ, ಭಾಷಣಗಳಲ್ಲಿ ಚರ್ಚಿಸಿದ ವಿವರಗಳನ್ನು ಇಲ್ಲಿ ದಾಖಲಿಸುವುದು ಕಷ್ಟ. ಅದಕ್ಕಿಂತ ಹಿಂದೆ *ಸಂಕಲನ* ಪತ್ರಿಕೆಯಲ್ಲಿ ಈ ಲೇಖನಮಾಲಿಕೆಯನ್ನು ಕುರಿತು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಸಂಕ್ಷಿಪ್ತವಾಗಿ ಹೀಗೆ ಸಂಗ್ರಹಿಸಲಾಗಿದೆ.

ಜಿ.ಎಸ್. ಶಿವರುದ್ರಪ್ಪ ಮತ್ತು ಎನ್. ಬಸವಾರಾಧ್ಯರಂತೂ ದೀರ್ಘ ಪತ್ರಗಳನ್ನು ಬರೆದಿದ್ದಾರೆ. *ಕವಿರಾಜಮಾರ್ಗ* ಕುರಿತ ಲೇಖನಗಳು ವಿಶಿಷ್ಟವೂ ವಿನೂತನವೂ ಸಂಶೋಧನಾತ್ಮಕವೂ ಆಗಿವೆ. ಈ ತೆರನ ಲೇಖನಗಳ ಪ್ರಕಟನೆಯಿಂದ *ಸಂಕಲನ* ಪತ್ರಿಕೆಗೆ ಘನತೆ ಗೌರವ ಪ್ರಾಪ್ತವಾಗಿವೆ.

ಶ್ರೇಷ್ಠ ಇತಿಹಾಸಕಾರರಾದ ಎಸ್. ಶೆಟ್ಟರ್ ಅವರು ತಮ್ಮ ಬಹುಕಾಲದ ವ್ಯಾಸಂಗ ಮತ್ತು ಸಂಶೋಧನೆಗಳ ಫಲವಾಗಿ ಅಭೂತಪೂರ್ವ ಲೇಖನಗಳನ್ನು ಬರೆದಿದ್ದಾರೆ. *ಕವಿರಾಜಮಾರ್ಗದ* ಆಂತರಿಕ ಆಧಾರಗಳನ್ನು ಆಧರಿಸಿ 'ಕಾವೇರಿಯಿಂದಮಾ ಗೋದಾವರಿವರಮಿರ್ಪ' ಕರ್ನಾಟಕದ ಸೀಮಾರೇಖೆಗಳನ್ನು ಗುರುತಿಸಲು ಯತ್ನಿಸಿರುವುದು ಲೇಖಕರ ಅಸಾಧಾರಣ ಪ್ರತಿಭೆಗೆ, ಅನುಪಮ ಸಂಶೋಧನಾ ಪ್ರವೃತ್ತಿಗೆ ಜ್ವಲಂತ ನಿದರ್ಶನವಾಗಿದೆ.

ಕನ್ನಡದ ಆದಿಗ್ರಂಥವೂ ಲಕ್ಷಣಗ್ರಂಥವೂ ಆಗಿರುವ *ಕವಿರಾಜಮಾರ್ಗದ* ಕರ್ತೃ, ಕಾಲ, ದೇಶ, ವರ್ತಮಾನಗಳ ಬಗೆಗೆ ಈವರೆಗೆ ವಿದ್ವಾಂಸರಲ್ಲಿ ಸಾಕಷ್ಟು ವಾದವಿವಾದಗಳೂ, ವಿಮರ್ಶೆ, ವಿಶ್ಲೇಷಣೆ, ಸಂಶೋಧನೆಗಳೂ ನಡೆದಿವೆ. ಈ ಕಾವ್ಯದ ಮೂರು ನಾಲ್ಕು ಪರಿಷ್ಕರಣಗಳೂ ಪ್ರಕಟವಾಗಿವೆ. ಈ ಎಲ್ಲ ಮುದ್ರಣಗಳಲ್ಲಿ ಶೆಟ್ಟರ್ ಅವರು ಕೂಲಂಕಷವಾಗಿ ಪ್ರಸ್ತಾಪಿಸಿರುವ ಸಂಗತಿಗಳು ಮತ್ತೆಲ್ಲಿಯೂ ಉಲ್ಲೇಖಗೊಂಡಂತೆ ಕಂಡುಬಂದಿಲ್ಲ. ಒಬ್ಬ ಶ್ರೇಷ್ಠ ಇತಿಹಾಸಕಾರನ ವಿಶಿಷ್ಟ ಪ್ರತಿಭೆ ಯಾವ ಯಾವ ನಿಟ್ಟಿನಲ್ಲಿ ನೂತನ ಸಂಶೋಧನೆಗಳನ್ನು ಮಾಡಬಲ್ಲದು ಎಂಬುದಕ್ಕೆ ಈ ಲೇಖನಗಳು ಸಾಕ್ಷೀಭೂತವಾಗಿ ನಿಲ್ಲಬಲ್ಲವು. ನಾಮನಿಷ್ಪತ್ತಿ, ಬಿರುದುಗಳು, ವಿಶೇಷಣಗಳು, ವಿಶಿಷ್ಟ ಪದಗಳ ಬಗೆಗೆ ಲೇಖಕರ ವಿವರಣೆ, ವಿಶ್ಲೇಷಣೆ, ವ್ಯಾಖ್ಯಾನ, ತೀರ್ಮಾನ ತರ್ಕಬದ್ಧವಾಗಿವೆ.

ರಾಷ್ಟ್ರಕೂಟರ ಇತಿಹಾಸ ರಚನೆಗೆ ಅತ್ಯಂತ ಮಹತ್ವದ ಆಕರಗ್ರಂಥವಾದ *ಕವಿರಾಜಮಾರ್ಗದ* ಕಾವ್ಯಾಧಾರವನ್ನೇ ಅಲ್ಲದೆ ಶಾಸನಾಧಾರಗಳನ್ನೂ ಬಳಸಿಕೊಂಡು ಅದರ ಎಲ್ಲ ಮಗ್ಗುಲುಗಳನ್ನು, ಸಂಶೋಧನೆಯ ಬೇರುಗಳನ್ನು ಪಾತಾಳಗರಡಿಯಂತೆ ಹೊರತೆಗೆದಿರುವುದು ಒಂದು ನೂತನ ಸೃಷ್ಟಿಕಾರ್ಯವೆಂದು ನಾನು ಭಾವಿಸಿದ್ದೇನೆ. ಈ ಲೇಖನಗಳ ಸಿದ್ಧತೆಗಾಗಿ ಲೇಖಕರು ಪರಿಶೀಲಿಸಿರುವ ಆಕರಗ್ರಂಥಗಳ ಪಟ್ಟಿಯನ್ನು ಪರಿಶೀಲಿಸಿದವರಿಗೆ ಅವರ ಅಪಾರ ಪರಿಶ್ರಮದ ಅರಿವಾಗುತ್ತದೆ. ಇತಿಹಾಸಕಾರರ ಪ್ರಜ್ಞೆ ಯಾವ ದಿಸೆಯಲ್ಲಿ ಕಾರ್ಯ ಕೈಗೊಳ್ಳುವುದು ಎಂಬುದಕ್ಕೆ ಈ ಲೇಖನಗಳು

ಮಾರ್ಗದರ್ಶಿಯಾಗಿವೆ, ಮಾದರಿಯಾಗಿವೆ. ಕನ್ನಡದ ಎಲ್ಲ ಕಾವ್ಯಗಳ ಅನುಸಂಧಾನ ಈ ತೆರನಲ್ಲಾದರೆ ಸಾಹಿತ್ಯದ ಮೇಲೆ ನಿಜಕ್ಕೂ ಹೊಸ ಬೆಳಕುಂಟಾಗುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ ಎಂಬುದು ನನ್ನ ಅನಿಸಿಕೆ. *ಕವಿರಾಜಮಾರ್ಗ* ಮಂಥನವನ್ನು ಕುರಿತ ಈ ಲೇಖನಗಳು ಒಬ್ಬ ಪ್ರತಿಭಾವಂತ ಇತಿಹಾಸಕಾರನ ನಿರಂತರ ಸಂಶೋಧನೆಗಳ ನೂತನ ಮಾರ್ಗವನ್ನು ಸೃಷ್ಟಿಸುವ ದಾರಿದೀಪಗಳಾಗಿವೆ. ಈ ದೀಪಗಳ ಬೆಳಕಿನಿಂದ ಹೊಸ ದೃಷ್ಟಿಯನ್ನು ಬೆಳಸಿಕೊಂಡು ಹೊಸ ಸೃಷ್ಟಿಯನ್ನು ಮಾಡಬಹುದಾಗಿದೆ. ಕವಿರಾಜಮಾರ್ಗ ಮಂಥನದಿಂದ ಈವರೆಗೆ ಉದ್ಭವಿಸಿದ ಕೋಲಾಹಲ, ಹಾಲಾಹಲಗಳನ್ನು ನಿಷ್ಕ್ರಿಯಗೊಳಿಸಿ ಅಮೃತವನ್ನು ಧಾರೆಯೆರೆದಂತಾಗಿದೆ'.

ಲೇಖಕರು ಪ್ರಾರಂಭದಲ್ಲಿ ಕವಿರಾಜಮಾರ್ಗವು ರಾಷ್ಟ್ರಕೂಟ ಇತಿಹಾಸ ರಚನೆಗೆ ಅತ್ಯಂತ ಮಹತ್ವದ ಆಕರ ಗ್ರಂಥ. ಆದರೆ ಇದನ್ನು ಪರಿಪೂರ್ಣವಾಗಿ-ಅರ್ಥಪೂರ್ಣವಾಗಿ ಇತಿಹಾಸಕಾರರಾರೂ ಇನ್ನೂ ಉಪಯೋಗಿಸಿಲ್ಲ. ಈ ಲೇಖನವು ಆ ನಿಟ್ಟಿನೆಡೆಗೆ ಇಟ್ಟ ಒಂದು ಹೆಜ್ಜೆ. ಈ ಗ್ರಂಥದಲ್ಲಿ ಬರುವ ವಿಶೇಷಣಗಳನ್ನೆಲ್ಲ ಸಂಗ್ರಹಿಸಿ ಶಾಸನಗಳ ಹಿನ್ನೆಲೆಯಲ್ಲಿ ಅವುಗಳ ಮೌಲ್ಯವನ್ನು ನಿರ್ಧರಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ ಎಂದು ಹೇಳಿರುವುದನ್ನು ಯಥಾರ್ಥಗೊಳಿಸಲಾಗಿದೆ' - ಎನ್. ಬಸವಾರಾಧ್ಯ, ಬೆಂಗಳೂರು (ಸಂಕಲನ ೨೨).

'*ಕವಿರಾಜಮಾರ್ಗ*ವನ್ನು ಕುರಿತು ಈವರೆಗಿನ ಚರ್ಚೆಯನ್ನು ಗಣನೀಯವಾಗಿ ವಿಸ್ತರಿಸಿದ್ದೀರಿ. *ಕವಿರಾಜಮಾರ್ಗ*ದ ದ್ರಾವಿಡ ಬೇರುಗಳನ್ನು, ತಮಿಳಿನ *ತೊಲ್‌ಕಾಪ್ಪಿಯಂ* ಮತ್ತು ಕನ್ನಡದ *ಕವಿರಾಜಮಾರ್ಗ* ಈ ಎರಡೂ ಕೃತಿಗಳು ಸಂಸ್ಕೃತ ಸಾಹಿತ್ಯ ಹಾಗೂ ಭಾಷಾಪರಂಪರೆಗೆ ತೋರಿದ ಸೃಜನಾತ್ಮಕ ಪ್ರತಿಕ್ರಿಯೆಗಳ ತೌಲನಿಕ ವಿವೇಚನೆಯ ಮೂಲಕ, ಬಹುಶಃ ಮೊದಲ ಬಾರಿಗೆ ಗುರುತಿಸುವ ಪ್ರಯತ್ನವನ್ನು ನೀವು ಮಾಡಿದ್ದೀರಿ. ಹಾಗೆಯೇ, 'ಕಾವೇರಿಯಿಂದ ಗೋದಾವರಿಯವರೆಗೆ' ಎಂಬ ಉಕ್ತಿಯ ಮೂಲಕ ಕರ್ನಾಟಕದ ಭೌಗೋಳಿಕ ನಕಾಶೆಯನ್ನು ಪ್ರಸ್ತಾಪಿಸಿದ *ಕವಿರಾಜಮಾರ್ಗ*ಕ್ಕೂ ಬಹು ಹಿಂದೆ ತಮಿಳು *ತೊಲ್‌ಕಾಪ್ಪಿಯಂ* ಒಳಗೇ ಈ ಸೂಚನೆಯಿದೆ ಎಂಬ ಸಂಗತಿಯನ್ನು ನಿಮ್ಮ ಲೇಖನದಲ್ಲಿ ತುಂಬ ಸವಿಸ್ತಾರವಾಗಿ ಚರ್ಚಿಸಿ 'ಪ್ರಾಕೃತ ಮತ್ತು ಸಂಸ್ಕೃತ ಭಾಷಿಕರಾರೂ ಮಾಡದಿದ್ದುದನ್ನು ತಮಿಳರು ಮಾಡಿ, ತಮ್ಮ ಭಾಷೆಯೊಂದಿಗೆ ಗುರುತಿಸಿಕೊಂಡದ್ದು ನಮ್ಮ ಭಾಷಾ ಇತಿಹಾಸದಲ್ಲಿಯೇ ಒಂದು ಅಭೂತಪೂರ್ವ ಘಟನೆ' ಎಂಬ ಹೊಸ ವಿಚಾರವನ್ನು ನೀವು ಅನಾವರಣಗೊಳಿಸಿದ್ದೀರಿ. ಅಭಿನಂದನೆಗಳು.

ನಾನು ವಿದ್ವಾಂಸನಲ್ಲ, ಒಬ್ಬ ಶ್ರದ್ಧಾವಂತನಾದ ಓದುಗ. ನನ್ನ ಪತ್ರ ಅಂಥ ಓದುಗನೊಬ್ಬನ ಪ್ರತಿಕ್ರಿಯೆ ಎಂದಷ್ಟೆ ನೀವು ಭಾವಿಸಬೇಕೆಂಬುದು ನನ್ನ ಕೋರಿಕೆ' - ಜಿ.ಎಸ್. ಶಿವರುದ್ರಪ್ಪ, ಬೆಂಗಳೂರು. (ಲೇಖಕರಿಗೆ ಬರೆದ ಪತ್ರ-ಸಂಕಲನ ೨೨)

'ಈ ಲೇಖನಮಾಲೆ ಅದ್ಭುತವಾದದ್ದು'-ಶಿವಶಂಕರ ಹಿರೇಮಠ, ಧಾರವಾಡ (ಸಂ.೩೧). 'ಎಷ್ಟು ಶ್ರೀಮಂತಗೊಳಿಸಿದೆ ಎಂಬುದನ್ನೂ ಓದುಗರಿಗೆ ತಿಳಿಸಿಹೇಳಬೇಕಿಲ್ಲ'-ಜಿ.ಎಸ್. ಆಮೂರ, ಧಾರವಾಡ (ಸಂ.೩೧). 'ತುಂಬಾ ಭಿನ್ನ ಪಾಂಡಿತ್ಯಪೂರ್ಣ'-ಗುರುಲಿಂಗ ಅಮ್ಮಣಗಿ, ಬೆಂಗಳೂರು (ಸಂ.೨೫). 'ಹೊಸ ಕ್ಷಿತಿಜವನ್ನು ತೆರೆದಿದೆ'-ಕೃ.ಶಿ. ಹೆಗಡೆ, (ಸಂ.೨೭). 'ಅಪರೂಪದ ಆಧಾರ.... ಶೆಟ್ಟರ್ ಅವರ ಪರಿಶ್ರಮಕ್ಕೆ ಲಾಖ್ ನಮಸ್ಕಾರಗಳು'- ಶಶಿಧರ ತೋಡ್ಕರ (ಸಂ.೨೭). 'ಮೌಲಿಕವಾಗಿದೆ' ವಸಂತಕುಮಾರ ಪೆರ್ಲ, ಮಂಗಳೂರು (ಸಂ.೨೭). 'ಕನ್ನಡಿಗರ ಅಭಿಮಾನವನ್ನು ಇಮ್ಮಡಿಸಲು ಸಹಾಯಕವಾಗಿದೆ' ಎ.ಡಿ. ನಂಜುಂಡಸ್ವಾಮಿ, ಮೈಸೂರು (ಸಂ.೨೮). 'ಗಂಭೀರ ಪ್ರಯತ್ನ' ಲಲಿತಾ ಸಿದ್ಧಬಸವಯ್ಯ, ತುಮಕೂರು (ಸಂ.೧೯). 'ಹೊಸ ದೃಷ್ಟಿಯನ್ನು ಹಮ್ಮಿಸುವ ಪ್ರಯತ್ನ' ಜಿ. ವೆಂಕಟಸುಬ್ಬಯ್ಯ, ಬೆಂಗಳೂರು (ಸಂ.೨೦). 'ಸದಾ ದಾರಿದೀಪವಾಗಬಲ್ಲಂಥವು' ಡಿ.ಎ. ಅಕ್ಕಿ, ಗೋಗಿ (ಸಂ.೨೦). 'ಆಳವಾದ ಮತ್ತು ವ್ಯಾಪಕವಾದ ಅಧ್ಯಯನಕ್ಕೆ ಒಳಪಡಿಸುವ ಕ್ರಮ' - ಎಲ್.ವಿ. ಶಾಂತಕುಮಾರಿ, ಬೆಂಗಳೂರು (ಸಂ.೨೧). 'ಕುತೂಹಲ ಕೆರಳಿಸುತ್ತಿರುವ ಸಂಶೋಧನಾತ್ಮಕ ಮಾಲೆ'-ಎಚ್.ಎಸ್. ಪಾಟೀಲ, ಕೊಪ್ಪಳ (ಸಂ.೨೧). 'ಆಳವಾದ ಅಧ್ಯಯನ-ಚಿಂತನೆಗಳಿಂದ ಹಾಗೂ ಪ್ರಾಮಾಣಿಕ ತೊಡಗುವಿಕೆಯಿಂದ ಮೂಡಿಬರುತ್ತಿದೆ. ಪ್ರೌಢ ಪ್ರಬಂಧವನ್ನೂ ಮೀರುವಂಥ ಮಹಾಪ್ರೌಢ ಪ್ರಬಂಧ.... ನನ್ನ ಮನ ಮುಟ್ಟಿದೆ, ಮಿದುಳನ್ನೂ ತಟ್ಟಿದೆ' ಎಚ್. ಆನಂದರಾಮ ಶಾಸ್ತ್ರಿ ತುಮಕೂರು (ಸಂ.೨೩). 'ಕನ್ನಡಕ್ಕೆ ಹೊಸ ಬಗೆಯವು, ವಿಚಾರಯೋಗ್ಯವೂ, ಸೂಕ್ಷ್ಮವೂ ಆಗಿವೆ' - ಮಲ್ಲೇಪುರಂ ಜಿ. ವೆಂಕಟೇಶ್, ಹಂಪಿ (ಸಂ.೨೩). 'ಅರ್ಥಖಚಿತ ಮಾಹಿತಿ ನೀಡಿದೆ' - ಅಶೋಕ ನರೂಡೆ, ಮಹಾಲಿಂಗಪುರ (ಸಂ.೩೨). ಲೇಖನದ ವ್ಯಾಪ್ತಿ, ಗಾಢತೆ ಅಚ್ಚರಿ ತರಿಸುವಂತಿದೆ, ತಲಸ್ಪರ್ಶಿ ಲೇಖನಗಳನ್ನು ಓದಿ ಸಮಾಧಾನವಾಗಿದೆ' ಎಚ್.ಎನ್. ಪಾಟೀಲ್, ಕೊಪ್ಪಳ.

'ತಮಿಳು ಕಾವ್ಯದ ಅನುವಾದಗಳು ಅದ್ಭುತವಾಗಿವೆ. ಜಟಿಲ ಶಂಗಂ ಕಾಲದ ಕಾವ್ಯವನ್ನು ಹೊಸಗನ್ನಡಕ್ಕೆ ಅನುವಾದಿಸಿದ ಅವರ ಪ್ರತಿಭೆ ಅಭಿನಂದನೀಯ'-ಗುರುಮೂರ್ತಿ ಪೆಂಡಕೂರು, ಹಗರಿಬೊಮ್ಮನಹಳ್ಳಿ (ಸಂ.೩೫). 'ಅನುವಾದಗಳನ್ನು ಓದಿ ಅವರ ಪ್ರತಿಭೆ ಮತ್ತು ಪಾಂಡಿತ್ಯಕ್ಕೆ ಬೆರಗಾದೆ. ಒಬ್ಬ ಬಹುಶ್ರುತ ಇತಿಹಾಸಕಾರ ಕವಿಯೂ ಹೌದೆನ್ನುವಂತೆ ಕವಿತೆಗಳು ಚೆನ್ನಾಗಿ ಬಿಂಬಿತವಾಗಿವೆ' - ಎ.ಡಿ. ನಂಜುಂಡಸ್ವಾಮಿ, ಮೈಸೂರು (ಸಂ.೩೫).

*

ಈ ಪುಸ್ತಕ ಪ್ರಕಟಗೊಂಡ ಆರು ತಿಂಗಳಲ್ಲಿಯೇ ಪುನರ್‌ಮುದ್ರಣಗೊಳ್ಳುವಂತೆ ಮಾಡಿದ ಓದುಗರಿಗೆ, ವಿಚಾರಸಂಕಿರಣಗಳನ್ನು ಏರ್ಪಡಿಸಿದ ಸಾರ್ವಜನಿಕ ಗ್ರಂಥಾಲಯ ಇಲಾಖೆ ಮತ್ತು ನಿರ್ದೇಶಕರಾದ (ನಿವೃತ್ತ) ಪಿ.ವೈ. ರಾಜೇಂದ್ರಕುಮಾರ್, ಎಸ್‌ಡಿಎಂ

ಕಾಲೇಜ್, ಮಂಗಳೂರು, ಗುಲ್ಬರ್ಗದ ಶರಣಬಸವೇಶ್ವರ ವಿದ್ಯಾವರ್ಧಕ ಸಂಸ್ಥೆಗಳ ಅಧ್ಯಕ್ಷರಾದ ಶರಣಬಸಪ್ಪ ಅಪ್ಪ, ಮುಖ್ಯ ಗ್ರಂಥಾಲಯಾಧಿಕಾರಿಗಳಾದ ಹೊಸಮನಿ (ಗುಲ್ಬರ್ಗ), ರಾಮೇಗೌಡ (ಮಂಗಳೂರು), ಶಿವಮೊಗ್ಗದ ಸಹ್ಯಾದ್ರಿ ಕಾಲೇಜು, ಭಾಷಾ ವಿಭಾಗಗಳು, ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳು, ಎರಡನೆಯ ಮುದ್ರಣ ಸಂದರ್ಭದಲ್ಲಿ ಅಧ್ಯಯನ ಶಿಬಿರ ಆಯೋಜಿಸುತ್ತಿರುವ ಧಾರವಾಡದ ಜೆ.ಎಸ್.ಎಸ್. ಕಾಲೇಜಿನ ಆಡಳಿತ ವರ್ಗಕ್ಕೆ ಧನ್ಯವಾದಗಳು, ಮೊಟ್ಟಮೊದಲ ಬಾರಿಗೆ ಈ ಪುಸ್ತಕ ಕುರಿತು ಮಾತನಾಡಿದ ಮತ್ತು ಸಂದರ್ಭ ಬಂದಾಗಲೆಲ್ಲ ಈ ಪುಸ್ತಕವನ್ನು ಪರಿಚಯಿಸುತ್ತಿರುವ ಮೈಸೂರಿನ ಭಾರತೀಯ ಭಾಷಾ ಸಂಸ್ಥೆಯ ಲಿಂಗದೇವರು ಹಳೆಮನೆಯವರಿಗೆ ಮತ್ತು ದೆ. ಜವರೇಗೌಡ ಅವರಿಗೆ ವಿಮರ್ಶಾ ಲೇಖನಗಳನ್ನು ಪ್ರಕಟಿಸಿದ ಪತ್ರಿಕಾ ಸಮೂಹಕ್ಕೆ ಧನ್ಯವಾದಗಳು.

ಎರಡನೆಯ ಮುದ್ರಣಕ್ಕೆ ವಿಶಿಷ್ಟ ಒಳನೋಟದ ಬೆನ್ನುಡಿ ಬರೆದುಕೊಟ್ಟ ಯು.ಆರ್. ಅನಂತಮೂರ್ತಿಯವರಿಗೆ, ಕನ್ನಡದ ಹೊರಗೆ ಈ ಕೃತಿಯನ್ನು ಅಲ್ಲಲ್ಲಿ ಪರಿಚಯಿಸುತ್ತಿರುವ ಕಾರ್ಲೊಸ್ ಅವರಿಗೆ, ಎಲ್ಲಕ್ಕಿಂತ ಹೆಚ್ಚಾಗಿ ಈ ಪುಸ್ತಕ ಹೊರಬರಲು ಮೂಲ ಪ್ರೇರಣೆಯಾದ ಸಿದ್ಧಲಿಂಗ ಪಟ್ಟಣಶೆಟ್ಟಿ ಮತ್ತು ಹೇಮಾ ಪಟ್ಟಣಶೆಟ್ಟಿ ಅವರಿಗೂ ಧನ್ಯವಾದಗಳು.

*

ಈ ಪುಸ್ತಕ ಮರು ಮುದ್ರಣಗೊಳ್ಳುತ್ತಿರುವ ಸಂದರ್ಭದಲ್ಲಿಯೇ ಬಿ.ಎಂ.ಶ್ರೀ ಪ್ರತಿಷ್ಠಾನದ ಅನಂತರಂಗ ದತ್ತಿ ಪುರಸ್ಕಾರ ಮತ್ತು ಪ್ರತಿಷ್ಠಿತ ಶಿವಮೊಗ್ಗ ಕರ್ನಾಟಕ ಸಂಘದ ಶಂ.ಬಾ. ಜೋಶಿ ಪ್ರಶಸ್ತಿ ದೊರೆತಿದೆ. ಈ ಸಂತೋಷವನ್ನು ತಮ್ಮೊಡನೆ ಹಂಚಿಕೊಳ್ಳಬಯಸುತ್ತೇವೆ. ತಮಿಳಿನ ಹೆಸರು ಮತ್ತು ಪ್ರದೇಶಗಳ ಉಚ್ಚಾರಗಳ ಬಳಕೆಯ ಕುರಿತು ಕೆಲವರು ಪ್ರಶ್ನೆಗಳನ್ನೆತ್ತಿದ್ದಾರೆ. ಸಮಯದ ಅಭಾವದಿಂದ ಅವುಗಳನ್ನು ಸರಿಪಡಿಸಲಾಗಿಲ್ಲ, ಮುಂದಿನ ಮುದ್ರಣದಲ್ಲಿ ಖಂಡಿತಾ ಸರಿಪಡಿಸಲಾಗುವುದು. ಈ ಮಧ್ಯೆ ಶೆಟ್ಟರ್ ಅವರು *ಕವಿರಾಜಮಾರ್ಗ*ದ ಹೊಸ ಆವೃತ್ತಿಯನ್ನೂ ಅದರ ಜೊತೆಗೆ *ಕವಿರಾಜಮಾರ್ಗ* ಪ್ರತಿಪದ ನಿಘಂಟನ್ನೂ ಸಿದ್ಧಪಡಿಸುತ್ತಿದ್ದು ಆದಷ್ಟು ಬೇಗ ಹೊರತರುವ ಆಲೋಚನೆ ನಮ್ಮದು.

ವಿಶೇಷ ಸಂಗತಿಯೆಂದರೆ ಈ ಕೃತಿ ಈಗಾಗಲೇ ಇಂಗ್ಲಿಷ್ ಮತ್ತು ತಮಿಳು ಭಾಷೆಗೆ ಅನುವಾದಗೊಂಡಿದ್ದು ಅವು ಪ್ರಕಟಣೆಯ ಹಂತದಲ್ಲಿವೆ.

ನ. ರವಿಕುಮಾರ
ಅಭಿನವದ ಪರವಾಗಿ

## ನುಡಿವ ಬೆಡಗು-೩

'ಶಂಗಂ ತಮಿಳಗಂ ಮತ್ತು ಕನ್ನಡ ನಾಡು ನುಡಿ'ಯ ಕುರಿತ ಚಿಂತನೆ, ಚರ್ಚೆ ಸಂವಾದಗಳು ಮುಂದುವರೆದಿವೆ. ದಿನಾಂಕ: ೧೪.೦೮.೨೦೦೮ರಂದು ಧಾರವಾಡದ ವಿದ್ಯಾವರ್ಧಕ ಸಂಘದಲ್ಲಿ ೨ನೆಯ ಆವೃತ್ತಿಯನ್ನು ಜಿ.ಎಸ್. ಆಮೂರ ಬಿಡುಗಡೆಗೊಳಿಸಿದರು. ರಹಮತ್ ತರಿಕೆರೆಯವರು 'ಈ ಕೃತಿ ಹಲವು ಸಂಶೋಧನೆಗಳಿಗೆ ಅನುವು ಮಾಡಿಕೊಡುವ ಮಾದರಿ ಸಂಶೋಧನಾ ಕೃತಿ' ಎಂದರು. ಆನಂತರ ಎರಡು ದಿನಗಳು ಡಾ.ಕೆ.ವಿ. ನಾರಾಯಣ ಅವರ ನಿರ್ದೇಶಕತ್ವದಲ್ಲಿ ಈ ಕೃತಿಯ ಕುರಿತು ಬೇರೆ ಬೇರೆ ಭಾಗಗಳಿಂದ ಬಂದ ಸುಮಾರು ೨೦ ಚಿಂತಕರನ್ನೊಳಗೊಂಡ ಕಾರ್ಯಶಿಬಿರ ನಡೆಯಿತು. ಕಾರ್ಲೊಸ್, ಅಶೋಕ ಶೆಟ್ಟರ್, ಶೆಟ್ಟರ್, ಎಂ.ಎಸ್. ಪ್ರಭಾಕರ, ಹೇಮಾ ಪಟ್ಟಣಶೆಟ್ಟಿ ಮತ್ತು ಸಿದ್ಧಲಿಂಗ ಪಟ್ಟಣಶೆಟ್ಟಿ ಮುಂತಾದವರು ಈ ಕಾರ್ಯಶಿಬಿರದಲ್ಲಿ ಭಾಗವಹಿಸಿದ್ದರು. ಸಮಾರೋಪ ಸಮಾರಂಭದಲ್ಲಿ ಶ್ರೀ ಎಂ.ಎಂ. ಕಲಬುರ್ಗಿಯವರು ಮಾತನಾಡಿದರು.

ಈ ಮಧ್ಯೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಭಾಷಾಸಮ್ಮಾನ್ ಈ ಕೃತಿಗೆ ದೊರೆತಿದೆ. ಈ ಸಂದರ್ಭದಲ್ಲಿಯೇ ಇದು ಮೂರನೆಯ ಮುದ್ರಣ ಕಾಣುತ್ತಿದೆ. ಇದಕ್ಕಿಂತ ಖುಷಿಯ ಸಂಗತಿ ಇನ್ನೇನಿದೆ?

ನ. ರವಿಕುಮಾರ
ಅಭಿನವದ ಪರವಾಗಿ

## ನುಡಿವ ಬೆಡಗು-೪

ಶಂಗಂ ತಮಿಳಗಂ ಕೃತಿಯ ಮೂರನೆಯ ಮುದ್ರಣದ ಕೃತಿಗಳು ಮುಗಿದು ನಾಲ್ಕನೆಯ ಮುದ್ರಣಕ್ಕೆ ಸಜ್ಜಾಗುತ್ತಿರುವಾಗಲೇ ತುಮಕೂರಿನ ಪ್ರತಿಷ್ಠಿತ ವೀ.ಚಿ. ಸಾಹಿತ್ಯ ಪ್ರಶಸ್ತಿ ದೊರೆತಿದ್ದು ನಮ್ಮ ಸಂತೋಷವನ್ನು ಇಮ್ಮಡಿಗೊಳಿಸಿದೆ. ಈ ಸಂದರ್ಭದಲ್ಲಿ ಮಾತನಾಡಿದ ಓ.ಎಲ್. ನಾಗಭೂಷಣ ಸ್ವಾಮಿಯವರು ಈ ಕೃತಿ ಕನ್ನಡ ಸಾಂಸ್ಕೃತಿಕ ಲೋಕದ 'ಆದಿಪುರಾಣ' ಎಂಬ ಮಾತನ್ನು ಒತ್ತಿ ಹೇಳಿದರು (ದಿನಾಂಕ ೧೮.೦೩.೨೦೦೯) ಈ ಪುಸ್ತಕದ ಬಗೆಗೆ ಬಂದಿರುವ ಎಲ್ಲಾ ಚರ್ಚೆ, ಸಂವಾದಗಳನ್ನು ಒಗ್ಗೂಡಿಸುವ ಕೆಲಸ ಮುಂದುವರೆದಿದೆ. ಅಲ್ಲಿ ಸದ್ಯದಲ್ಲಿ ಭೇಟಿಯಾಗೋಣ. ಈ ಕೃತಿಯ ತಮಿಳು ಅನುವಾದವು ಅಚ್ಚಿನಲ್ಲಿದ್ದು ಇಷ್ಟರಲ್ಲಿಯೇ ಓದುವ ಕೈ ಸೇರಲಿದೆ.

ನ. ರವಿಕುಮಾರ
ಅಭಿನವದ ಪರವಾಗಿ

## ನುಡಿವ ಬೆಡಗು - ೫

(ಆರನೆಯ ಮುದ್ರಣಕ್ಕೆ)

ಅಭಿನವದ ಪುಸ್ತಕಗಳಲ್ಲಿಯೇ ಹೆಚ್ಚು ಮುದ್ರಣ ಕಂಡ ಮತ್ತು ಹೆಚ್ಚು ಪ್ರಶಸ್ತಿ ಗಳಿಸಿದ ಈ ಪುಸ್ತಕದ ಮಹತ್ವವನ್ನು ವಿವರಿಸಿ ಹೇಳಬೇಕಿಲ್ಲ.

ಈ ಪುಸ್ತಕ ಮರುಮುದ್ರಣಗೊಳ್ಳುವಲ್ಲಿ ಸಹಕರಿಸಿದ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಹಿಂದಿನ ನಿರ್ದೇಶಕರಾದ ಪಿ. ವೈ. ರಾಜೇಂದ್ರ ಕುಮಾರ್, ಮತ್ತು ಈಗಿನ ನಿರ್ದೇಶಕರಾದ ಶ್ರೀ ಎಸ್. ಬಿ. ಹೊಂಡದಕೇರಿ.

ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಶ್ರೀ ಮಾಧವರಟ್ಟಿಹಳ್ಳಿ ಹಾಗೂ ಬಿ. ಆರ್. ಹಿರೇಮಠ.

ಹಿರಿಯ ವಿದ್ವಾಂಸರಾದ ಶ್ರೀ ಜಿ. ವೆಂಕಟ ಸುಬ್ಬಯ್ಯ, ಶ್ರೀ ಎನ್. ಬಸವಾರಾಧ್ಯ, ಶ್ರೀ ಶೇಷ ನಾರಾಯಣ, ಶ್ರೀಕಾರ್ಲೋಸ್.

ಅಕ್ಷರ ಮರುಜೋಡಣೆಯಲ್ಲಿ ಸಹಕರಿಸಿದ ಶ್ರೀ ರಘು, ಶ್ರೀಮತಿ ವಸಂತಲಕ್ಷ್ಮಿ, ಶ್ರೀಮತಿ ಗೀತಾ ವಿ. ಮುಂತಾದವರನ್ನು ಕೃತಜ್ಞತೆಯಿಂದ ನೆನೆಯುತ್ತೇನೆ.

ಜೊತೆಗೆ ಈ ಪುಸ್ತಕದ ಬಗ್ಗೆ ಉತ್ಸಾಹದಿಂದ, ಪ್ರೀತಿಯಿಂದ ಮಾತನಾಡಿದ ಬರೆದ, ಚರ್ಚಿಸಿದ, ಸಹೃದಯರಿಗೂ, ವಿಮರ್ಶಕರಿಗೂ, ಚಿಂತಕರಿಗೂ, ಪತ್ರಿಕಾ ಬಳಗಕ್ಕೂ, ಸಂಪಾದಕರಿಗೂ ಅಭಿನವ ಋಣಿಯಾಗಿದೆ.

ನ. ರವಿಕುಮಾರ
ಅಭಿನವದ ಪರವಾಗಿ

# ಉಪಕಾರ ಸ್ಮರಣೆ

ಈ ಗ್ರಂಥವನ್ನು ರೂಪಿಸಿರುವ ಒಂಬತ್ತು ಅಧ್ಯಾಯಗಳು ಧಾರವಾಡದಿಂದ ಪ್ರಕಟವಾಗುವ ದ್ವೈಮಾಸಿಕ 'ಸಂಕಲನ' (ಸಂ.೨೦-೩೪)ದಲ್ಲಿ 'ದ್ರಾವಿಡ ಸಂಬಂಧ' ಎಂಬ ಶೀರ್ಷಿಕೆಯಡಿ ಮೊದಲು ಬೆಳಕು ಕಂಡವು. ಇವುಗಳಲ್ಲಿ ಮೊದಲ ಒಂದೆರಡು ಪ್ರಬಂಧಗಳನ್ನು ನಾನೇ ಬರೆದೆ; ಉಳಿದವುಗಳನ್ನು ನನ್ನ ಮಿತ್ರರೂ 'ಸಂಕಲನ'ದ ಸಂಪಾದಕರೂ ಆದ ಪ್ರೊಫೆಸರ್ ಸಿದ್ಧಲಿಂಗ ಪಟ್ಟಣಶೆಟ್ಟಿ ಮತ್ತು ಹೇಮಾ ಪಟ್ಟಣಶೆಟ್ಟಿ ಅವರು ಬರೆಸಿದರು. ನನಗಿರುವ ಕಾಲಮಿತಿಯನ್ನು ಮೇಲಿಂದ ಮೇಲೆ ನೆನಪು ಮಾಡಿಕೊಡುತ್ತಾ, ಒಮ್ಮೊಮ್ಮೆ ನನ್ನ ಲೇಖನಕ್ಕಾಗಿ ಪತ್ರಿಕೆಯ ಪ್ರಕಟನೆಯ ದಿನಾಂಕವನ್ನೂ ಮುಂದಕ್ಕೆ ಹಾಕುತ್ತಾ, ನಾನು ಬರೆದದ್ದನ್ನು ಓದಿ ನನ್ನೊಡನೆ ಚರ್ಚಿಸಿ ದೋಷಗಳನ್ನು ತಿದ್ದುತ್ತಾ, ನನ್ನ ಲೇಖನಗಳ ಗುಣಮಟ್ಟವನ್ನು ಹೆಚ್ಚಿಸಿ ಇವನ್ನು ಬೇರೆಯವರು ಓದುವಂತೆ ಮಾಡಿದವರು, ಸಿದ್ಧಲಿಂಗ ಪಟ್ಟಣಶೆಟ್ಟರು. ಈ ಲೇಖನಗಳಿಗೆ ಸ್ಪಂದಿಸಿದ ಹಲವರು ನನಗೆ ಹೆಚ್ಚಿನ ಸ್ಫೂರ್ತಿಯನ್ನು ಒದಗಿಸಿದರು; ಹೊಗಳಿಕೆ ಹೆಚ್ಚಾಯಿತೇನೋ ಎನ್ನುವ ನಾಚಿಕೆಯನ್ನೂ ಮೂಡಿಸಿದರು. ನೇರವಾಗಿ ಸ್ಪಂದಿಸಿದವರು, ಮೌನವಾಗಿ ಬೆನ್ನುತಟ್ಟಿದವರು, ಗೋಷ್ಠಿಗಳಲ್ಲಿ - ಕಮ್ಮಟಗಳಲ್ಲಿ ಇಲ್ಲಿಯ ವಿಚಾರಗಳನ್ನು ಪ್ರಸ್ತಾಪಿಸಿ ವಿಶ್ಲೇಷಿಸಿದವರು, ಈ ಕೃತಿ ರಚನೆಯಲ್ಲಿ ಭಾಗಿದಾರರೇ. ತಮಿಳು ಪಾಠಗಳನ್ನು ಓದಲು, ತಮಿಳು ಪದಗಳನ್ನು ಅರ್ಥಮಾಡಿಕೊಳ್ಳಲು, ನಾನು ಆಗಾಗ್ಗೆ ತಮಿಳು ಬಲ್ಲವರನ್ನು ಮೊರೆಹೋಗಬೇಕಾದದ್ದು ಅನಿವಾರ್ಯವಾಯಿತು. ಇವರಲ್ಲಿ ಕೆಲವರು ದೂರವಾಣಿಯ ಮೂಲಕ ನನ್ನ ಅನುಮಾನಗಳನ್ನು ಬಗೆಹರಿಸಿಕೊಳ್ಳಲು ತಾಳ್ಮೆಯಿಂದ ಸಹಕರಿಸಿದರು; ಇನ್ನು ಮಿತ್ರರಾದ ಶ್ರೀ ಎಂ. ಗೋವಿಂದರಾಜು ಅಂಥವರು ಶಂಗಂ ಕಾವ್ಯ ಸಂಪುಟಗಳ ಗಂಟನ್ನೇ ಹೊತ್ತು ತಂದು ನನ್ನೊಡನೆ ಘಂಟೆಗಟ್ಟಲೆ ಚರ್ಚಿಸಿ ನನ್ನ ಅನುಮಾನಗಳನ್ನು ನಿವಾರಿಸಿಕೊಳ್ಳಲು ನೆರವಾದರು.

ಈ ಪ್ರಬಂಧಗಳು ಅಚ್ಚಿಗೆ ಹೋಗಿದ್ದು ನಾಲ್ಕಾರು ಬಾರಿ ಪರಿಷ್ಕರಣೆಗೆ ಒಳಗಾದ ನಂತರವೇ. ಕರಡುಗಳನ್ನು ತಿದ್ದಲು ಸಹಾಯ ಮಾಡಿದವರು ಡಾ॥ ಕರುಣ ವಿಜಯೇಂದ್ರ ಮತ್ತು ಆಕರ ಗ್ರಂಥಗಳನ್ನು ಹುಡುಕುವಾಗ ನನ್ನ ನೆರವಿಗೆ ಬಂದವರು ಡಾ॥ ಎಸ್.ಕೆ.ಅರುಣಿ. ಈ ಬರಹಗಳು ಗ್ರಂಥರೂಪದಲ್ಲಿ ಪ್ರಕಟನೆಯಾಗಬೇಕೆಂದು ನನ್ನನ್ನು ಒತ್ತಾಯಿಸಿದ ನನ್ನ ಮಿತ್ರರನ್ನೆಲ್ಲಾ ಹೆಸರಿಸುವುದು ಕಷ್ಟ. ಈ ಲೇಖನಗಳನ್ನು ಓದಿ ಅವುಗಳಿಂದ ಹೇಗೋ ಆಕರ್ಷಿತರಾದ ಶ್ರೀ ನ. ರವಿಕುಮಾರ ತಮ್ಮ ಅಭಿನವದ ನೂರನೆಯ ಪ್ರಕಟನೆಯಾಗಿ ಈ ಗ್ರಂಥವನ್ನು ತರುವುದಾಗಿ ಹೇಳಿದಾಗ, ಅವರು ಪ್ರಕಟಿಸಿರುವ ಗ್ರಂಥಗಳ

ಗುಣಮಟ್ಟವನ್ನು ಮೆಚ್ಚಿಕೊಂಡಿದ್ದ ನನಗೆ ತುಂಬಾ ಸಂತೋಷವಾಯಿತು. ಗ್ರಂಥ ಸಿದ್ಧವಾದ ನಂತರ ಅದಕ್ಕೆ ಮುನ್ನುಡಿ ಬರೆಯಲಾಗದೇ ಒದ್ದಾಡುತ್ತಿದ್ದಾಗ ನನ್ನ ನೆರವಿಗೆ ಬಂದವರು ಹೆಸರಾಂತ ಚಿಂತಕರೂ, ಕವಿಗಳೂ, ವಿಮರ್ಶಕರೂ ಆದ ಪ್ರೊ. ಎಚ್.ಎಸ್. ಶಿವಪ್ರಕಾಶ್. ಅವರ ಪರಿಚಯವೇ ಇಲ್ಲದ ಹಲವು ದಶಕಗಳ ಹಿಂದೆ ನನ್ನ ಇಂಗ್ಲಿಷ್ ಗ್ರಂಥ 'ಪರ್‌ಸೂಯಿಂಗ್ ಡೆತ್' ಬಗ್ಗೆ ಸುದೀರ್ಘ ಲೇಖನವನ್ನು ಪ್ರಕಟಿಸಿ ನನ್ನಲ್ಲಿ ಅಚ್ಚರಿ ಮೂಡಿಸಿದ್ದರು. ಮುಂದೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ಪಡೆದು, ಮೂರು ರಾಷ್ಟ್ರೀಯ ಪುರಸ್ಕಾರಗಳಿಗೆ ಅದು ಅರ್ಹವಾಗುವ ಮುಂಚೆಯೇ ಈ ಗ್ರಂಥವನ್ನು ಅರ್ಥಮಾಡಿಕೊಂಡು ಬೇರೆಯವರಿಗೆ ಅರ್ಥಮಾಡಿಸಿಕೊಟ್ಟವರು ಶಿವಪ್ರಕಾಶ್. ಅವರು ಈಗ ಈ ಪುಸ್ತಕಕ್ಕೆ ಮುನ್ನುಡಿ ಬರೆದು ನನ್ನ ಅರಿವಿಗೆ ಮೀರಿದ ಕೆಲವು ಅಂಶಗಳನ್ನು ನನಗೂ ಓದುಗರಿಗೂ ಇಲ್ಲಿ ಮನದಟ್ಟು ಮಾಡಿಕೊಟ್ಟಿರುವರು. ಶ್ರೀ ಪದ್ಮನಾಭನ್ ಮತ್ತು ಶ್ರೀ ಬಸವರಾಜ ಕೊಡಗುಂಟಿ ಅವರು ತಮಿಳು-ಕನ್ನಡ ಪದಕೋಶ ಸಿದ್ಧಪಡಿಸಿಕೊಟ್ಟಿದ್ದಾರೆ.

ಇವರೆಲ್ಲರಿಗೂ ನನ್ನ ಅಭಿಮಾನಪೂರ್ವಕ ಕೃತಜ್ಞತೆಗಳು.

ನನ್ನ ಮೊಮ್ಮಗಳು ಕು. ಅರ್ಪಿತಾ ರವಿಶಂಕರ್ ಎಂಟು ವರ್ಷದವಳಾಗಿದ್ದಾಗ ಒಂದೆರಡು ನಿಮಿಷಗಳಲ್ಲಿ ರಚಿಸಿದ್ದ ರೇಖಾಚಿತ್ರವನ್ನು ಮೆಚ್ಚಿ ವಿನ್ಯಾಸಕಾರರು ಹೊರಹೊದಿಕೆಯಲ್ಲಿ ಅದನ್ನು ಬಳಸಿಕೊಂಡಿದ್ದಾರೆ. ಈ ಚಿತ್ರದಂತೆ ನಾನು ಇರುವೆನೋ ಇಲ್ಲವೋ ಎಂಬುದು ಅಪ್ರಸ್ತುತ-ಅವಳಿಗೆ ಸಲ್ಲಬೇಕಾದ ನೆಚ್ಚಿನ ಮುದ್ದುಗಳನ್ನು ತಡೆಹಿಡಿಯಲು ಮಾತ್ರ ನನ್ನಿಂದ ಸಾಧ್ಯವಿಲ್ಲವಲ್ಲ!

ಈ ಗ್ರಂಥದ ಬಗ್ಗೆ ನಾನು ಹೇಳಬೇಕಾದುದೇನೂ ಇಲ್ಲ. ಅಕ್ಕಪಕ್ಕದಲ್ಲಿದ್ದವರನ್ನು ಗುರುತಿಸಲು, ನಮ್ಮ ಪರಂಪರೆಯೊಡನೆ ಇನ್ನುಳಿದವರ ಪರಂಪರೆಯನ್ನು ಅರಿತುಕೊಳ್ಳಲು, ನಮ್ಮ ಜ್ಞಾನದಲ್ಲಿರುವ ಕಂದಕಗಳನ್ನು ತುಂಬಿಕೊಳ್ಳಲು, ಕನ್ನಡ ನಾಡು-ನುಡಿಯ ಇತಿಹಾಸದ ಬಗ್ಗೆ ನಮ್ಮ ಅರಿವನ್ನು ವಿಸ್ತರಿಸಿಕೊಳ್ಳಲು, ಇದು ಸಹಾಯವಾಗುವುದಾದರೆ ನನ್ನ ಶ್ರಮ ಸಾರ್ಥಕ.

ಇಲ್ಲಿ ನಾನು ಮಂಡಿಸಲು ಪ್ರಯತ್ನಿಸಿರುವುದು ನಿರ್ಣಯಗಳನ್ನಲ್ಲ ಪ್ರಚೋದನೆಗಳನ್ನು ಮಾತ್ರ.

ಬೆಂಗಳೂರು

ಷ. ಶೆಟ್ಟರ್

## ಈಗ ಮತ್ತೊಂದು ಮಾತು

(ಎರಡನೆಯ ಮುದ್ರಣಕ್ಕೆ ಲೇಖಕರ ಮಾತು)

ಆರೋಗ್ಯಕರ ಚರ್ಚೆಗೆ ಎಡೆಮಾಡಿಕೊಟ್ಟು ಅನೇಕ ಪ್ರಜ್ಞಾವಂತರ ಕುತೂಹಲ ಕೆರಳಿಸಲು ಕಾರಣವಾದ *ಶಂಗಂ ತಮಿಳಗಂ* ಇಷ್ಟು ಬೇಗ ಪುನರ್ಮುದ್ರಣಗೊಳ್ಳುವುದೆಂಬುದನ್ನು ನಾನು ಊಹಿಸಿರಲಿಲ್ಲ. ಆಶ್ಚರ್ಯದೊಂದಿಗೆ ಹರ್ಷವನ್ನು ಇದು ತಂದುಕೊಟ್ಟಿದೆ.

ನನ್ನ ಎಣಿಕೆಗೆ ಮೀರಿದ ಪ್ರತಿಕ್ರಿಯೆಯ ಹಿಂದಿರುವ ಕನ್ನಡ ಸಾರಸ್ವತ ಲೋಕದ ವೈಚಾರಿಕ ಕಳಕಳಿಯನ್ನು ಕಂಡುಕೊಳ್ಳಲು ಸಾಧ್ಯವಾದುದಕ್ಕೆ ಇಮ್ಮಡಿ ಹರ್ಷವಾಗಿದೆ. 'ಇಲ್ಲಿ ನಾನು ಮಂಡಿಸಲು ಪ್ರಯತ್ನಿಸಿರುವುದು ನಿರ್ಣಯಗಳನ್ನಲ್ಲ, ಪ್ರಚೋದನೆಗಳನ್ನು ಮಾತ್ರ' ಎಂಬ ಪದಗಳನ್ನು ಮತ್ತೊಮ್ಮೆ ನೆನಸಿಕೊಡಬಯಸುವೆ.

**ಷ. ಶೆಟ್ಟರ್**

## ಮತ್ತೆ ಮತ್ತೆ ಮಾತು

(ಮೂರನೆಯ ಮುದ್ರಣಕ್ಕೆ ಲೇಖಕರ ಮಾತು)

'ಶಂಗಂ' ಈಗ ಮೂರನೆಯ ಮುದ್ರಣ ಕಾಣುತ್ತಿದೆ. ನಾನು ಬೇಕೆಂದೇ ತೇಲಿಸಿದ್ದ ಅಥವ ನಿರ್ಲಕ್ಷಿಸಿದ್ದ ಹಲವು ಸಂಗತಿಗಳ ಬಗೆಗೆ ಓದುಗರು/ ವಿಮರ್ಶಕರು ತಮ್ಮ ಸೂಕ್ಷ್ಮ ಒಳನೋಟಗಳಿಂದ ಅವನ್ನು ವಿಸ್ತರಿಸಿದ್ದಾರೆ. ಒಂದು ಅರ್ಥದಲ್ಲಿ ಈ ಕೃತಿ ಎತ್ತುವ ಚರ್ಚೆಗಳನ್ನು ಮುಂದುವರೆಸಿದ್ದಾರೆ. ಅವರೆಲ್ಲರಿಗೂ ಧನ್ಯವಾದ ಹೇಳುವುದಷ್ಟೆ ನನ್ನ ಕೆಲಸ.

**ಷ. ಶೆಟ್ಟರ್**

## ಮರು ಮಾತು

(ನಾಲ್ಕನೆಯ ಮುದ್ರಣಕ್ಕೆ ಲೇಖಕರ ಮಾತು)

ಈ ಪುಸ್ತಕ ಪ್ರಕಟಗೊಂಡು ಹದಿನೈದು ತಿಂಗಳಲ್ಲಿ ನಾಲ್ಕು ಮುದ್ರಣಗಳನ್ನು ಕಾಣುತ್ತಿದೆ. ಇದನ್ನು ಓದುಗರು ಉಪೇಕ್ಷಿಸುತ್ತಾರೆಂದು ಬಗೆದಿದ್ದೆ. ಈವರವಿಗೆ ಈ ಗ್ರಂಥವನ್ನು ಕೇಂದ್ರವಾಗಿರಿಸಿಕೊಂಡು ಸುಮಾರು ಅರ್ಧ ಡಜನ್ ವಿಚಾರಸಂಕಿರಣ ಸಂವಾದ ಶಿಬಿರಗಳು ಏರ್ಪಟ್ಟಿವೆ. ನಾಲ್ಕು ಪ್ರಶಸ್ತಿಗಳನ್ನು ಈ ಕೃತಿ ಪಡೆದುಕೊಂಡಿದೆ. ಎಲ್ಲಕ್ಕಿಂತ ಮುಖ್ಯವಾಗಿ ಈ ಕೃತಿಯ ಸಂವಾದ ಇನ್ನೂ ಮುಂದುವರಿಯುತ್ತಲಿದೆ. ಒಬ್ಬ ಲೇಖಕನಾಗಿ ಸಂಶೋಧಕನಾಗಿ ನಾನು ಇದಕ್ಕಿಂತ ಹೆಚ್ಚಿನದೇನನ್ನು ನಿರೀಕ್ಷಿಸಲು ಸಾಧ್ಯ?

**ಷ. ಶೆಟ್ಟರ್**

## ಮತ್ತೆ ಮರುಮಾತು

(ಐದನೆಯ ಮುದ್ರಣಕ್ಕೆ ಬರೆದ ಲೇಖಕರ ಮಾತು)

ಈ ಪುಸ್ತಕ ಐದನೆಯ ಮುದ್ರಣ ಕಾಣುತ್ತಿರುವುದು ನನಗೆ ವಿಶೇಷ ಸಂತೋಷ ತಂದಿದೆ. ಇದಕ್ಕೆ ಕಾರಣರಾದವರಿಗೆಲ್ಲ - ಅದರಲ್ಲೂ ಓದುಗರಿಗೆ ಮತ್ತು ವಿಮರ್ಶಕರಿಗೆ ಕೃತಜ್ಞತೆ.

ಷ. ಶೆಟ್ಟರ್

ಸೆಪ್ಟೆಂಬರ್ ೨೦೦೯

## ಮತ್ತೆ ಇನ್ನೊಂದು ಮಾತು

(ಆರನೆಯ ಮುದ್ರಣಕ್ಕೆ ಲೇಖಕರ ಮಾತು)

ನೋಡು ನೋಡುತ್ತಿದ್ದಂತೆ ಈ ಪುಸ್ತಕ ಆರು ಮುದ್ರಣಗಳನ್ನು ಕಂಡಿದೆ. ಐದು ಪ್ರಶಸ್ತಿಗಳನ್ನೂ ಗಳಿಸಿಕೊಂಡಿದೆ. ಕರ್ನಾಟಕ ಅಷ್ಟೇ ಅಲ್ಲದೆ ದೇಶದ ಹಲವೆಡೆ ಚರ್ಚೆಯ ವಸ್ತು ಆಗಿದೆ, ಆಗುತ್ತಲಿದೆ. ಕೆಲವರು ನನ್ನ ಮುಂದಿನ ಬರವಣಿಗೆಯ ಬಗ್ಗೆ ಕುತೂಹಲ ತೋರಿಸುತ್ತಿದ್ದಾರೆ. ಇವೆಲ್ಲ ನನ್ನನ್ನು ವಿಚಲಿತನನ್ನಾಗಿ ಮಾಡಿವೆ. ಸುಮ್ಮನೆ ಎಲ್ಲವನ್ನೂ ಪರಿಭಾವಿಸುತ್ತಾ ಕುಳಿತುಕೊಂಡು ಬಿಡೋಣ ಎನಿಸುತ್ತದೆ. ಕನ್ನಡದ ಜನಸಮುದಾಯದ ಆ ಪ್ರೀತಿಗೆ ಏನೆನ್ನಲಿ ? ಈ ವಿಶ್ವಾಸ ನಂಬಿಕೆಗಳ ಕಾರಣಗಳಿಗೆ ನಾನು ತಲೆಬಾಗಲೇಬೇಕಾಗಿದೆ. ಕನ್ನಡದ ಕೆಲಸವನ್ನು ಮುಂದುವರಿಸಲೇ ಬೇಕೆಂಬ ಉತ್ಸಾಹ ಬುಗ್ಗೆಗೊಳ್ಳುತ್ತಲಿದೆ.

ಹಿಂದಿನ ಆವೃತ್ತಿಯಲ್ಲಿ ಉಳಿದಿದ್ದ ಕೆಲವು ದೋಷಗಳನ್ನು ತಾಳ್ಮೆಯಿಂದ ತಿದ್ದಿಕೊಟ್ಟ ಹಿರಿಯ ಲೇಖಕರಾದ ಶ್ರೀ ಶೇಷನಾರಾಯಣ ಮತ್ತು ಕಿರಿಯ ಗೆಳೆಯನಾದ ಶ್ರೀ ಶ್ರೀಧರಹೆಗಡೆ ಭದ್ರನ್ ಅವರನ್ನಿಲ್ಲಿ ನೆನೆಯಲೇಬೇಕು. "ನಾನು ಇಲ್ಲಿ ಮಂಡಿಸಲು ಪ್ರಯತ್ನಿಸಿರುವುದು ನಿರ್ಣಯಗಳನ್ನಲ್ಲ, ಪ್ರಚೋದನೆಗಳನ್ನು ಮಾತ್ರ ಎಂಬ ಮೊದಲ ಮುದ್ರಣದಲ್ಲಿಯ ಮಾತುಗಳು ನನ್ನಲ್ಲಿ ಮತ್ತೊಮ್ಮೆ ತುಳುಕಾಡುತ್ತಿವೆ.

ನಮಸ್ಕಾರ

ಷ. ಶೆಟ್ಟರ್

ಮೇ. ೨೦೧೦

# ಈಗಿನ ಮಾತು

ತಮಿಳು ಪುರಾತನ ಭಾಷೆಗಳಲ್ಲೊಂದು, ಆದರೆ ತಮಿಳು ಲಿಪಿಯು (ತಮಿಳು)ಬ್ರಾಹ್ಮೀ, ವಟ್ಟೆಯುತ್ತು ಮತ್ತು ಗ್ರಂಥ ಎಂಬ ಮೂರು ಪ್ರಭೇದಗಳನ್ನು ದಾಟಿ ಪೂರ್ಣತೆಯನ್ನು ಪಡೆದುಕೊಂಡದ್ದು ಕ್ರಿ.ಶ. ಐದನೆಯ ಶತಮಾನದನಂತರ; ಶಂಗಂ ಸಂಕಲನವು ಇಂದಿನ ಸ್ವರೂಪವನ್ನು ಪಡೆದುಕೊಂಡದ್ದು ಮಧ್ಯಕಾಲೀನ (ಸು. 13ನೆಯ ಶತಮಾನದ) ಟೀಕಾಕಾರರಿಂದ, ಮತ್ತು ಮೂರು ಶಂಗಂಗಳ ಪರಿಕಲ್ಪನೆಗೆ ಇವರೇ ಕಾರಣರು; ಶಂಗಂ ಸಾಹಿತ್ಯದ ಪೋಷಕರು ಪಾಂಡ್ಯರು ಮತ್ತು ವೈಗೈ ದಡದ ಮೇಲೆ ಶಂಗಂ ಕವಿಗಳ ಅಕಾಡೆಮಿ ಇತ್ತು, ಎಂಬವು ಪ್ರಶ್ನಾರ್ಹ, ಏಕೆಂದರೆ ಮೂವೆಂದಾರ್‌ಗಿಂತ ಹೆಚ್ಚು ಪೋಷಣೆ ಶಂಗಂ ಕವಿಗಳಿಗೆ ದೊರಕಿದ್ದು ಚಿರ್‍ರಸರಿಂದ; ಶಂಗಂ ಕವಿಗಳು ಉಲ್ಲೇಖಿಸುವ ವಡುಗರು ದೂರದ ಉತ್ತರ ಭಾರತದವರಲ್ಲ, ನೀಲಗಿರಿ ಮತ್ತು ಅದರ ಹೊರಮೈ ವಾಸಿಗಳಾದ ಕನ್ನಡಿಗರು, ಮತ್ತು ಈ ಸಾಹಿತ್ಯ ನಿರ್ಮಾಣದಲ್ಲಿ ಈ ವಡಗರ ಪಾತ್ರವೂ ಇದೆ; ಶಂಗಂ ವೀರರಲ್ಲಿ ಹೆಚ್ಚು ಗಮನ ಸೆಳೆದಿರುವ ನಣ್ಣನ್ ಯಾರು? ಇದರಂತೆ ಕೋಶರ್, ಕೊಂಗರ್, ಕೊಂಕಾಣರ್, ಎರುಮೈಊರವರ್, ಎಂಬವರು ಯಾವ ಪ್ರದೇಶದವರು?– ಈ ಮುಂತಾದ ಪ್ರಶ್ನೆಗಳನ್ನು ಈ ಗ್ರಂಥದಲ್ಲಿ ಎತ್ತಿ ನನ್ನ ತಮಿಳು ಮಿತ್ರರ ಸ್ಪಂದನೆಗೆ ಕಾದು ಕುಳಿತಿದ್ದೆ. ಅರ್ಧದಶಕಕ್ಕೂ ಹೆಚ್ಚು ಕಾಲ ಉರುಳಿದೆ, ತಮಿಳು ಆವೃತಿಯೂ ಪ್ರಕಟಗೊಂಡಿದೆ, ಆದರೆ ಅವರಿಂದ ಯಾವ ಸ್ಪಂದನೆಯೂ ಬಂದಿಲ್ಲ.

ಜವಾಹರ್‌ಲಾಲ್ ನೆಹರು ಕೇಂದ್ರ ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಯನ ಕೇಂದ್ರವನ್ನು ಕರ್ನಾಟಕ ಸರ್ಕಾರವು ಸ್ಥಾಪಿಸಿದಾಗ, ಅದರ ಉದ್ಘಾಟನಾ ಉಪ–ನ್ಯಾಸವನ್ನು 26 ನವೆಂಬರ್ 2015ರಂದು ಮಾಡಿದ ನಂತರ, ದೆಹಲಿಯ ಗೆಳೆಯರೊಂದಿಗೆ ಸಂಜೆ ಹರಟುತ್ತಾ ನಾನು ಕುಳಿತ್ತಿದ್ದಾಗ, 'ಶಂಗಂ ತಮಿಳಗಂ' ಪ್ರಸ್ತಾಪ ಬಂತು. ಬಹಳಷ್ಟು ಚರ್ಚೆಯ ನಂತರ, ಮಾತು ತಮಿಳರ ಪ್ರತಿಕ್ರಿಯೆಗೆ ಹೊರಳಿದಾಗ, ತಮಿಳುನಾಡಿನ ನನ್ನ ಅಭಿಮಾನಿ ಸ್ನೇಹಿತರೊಬ್ಬರು 'ನಿಮ್ಮ ಗ್ರಂಥಕ್ಕೆ ಯಾವ ರಿಯಾಕ್ಷನ್ ಕೊಡ ಬಾರದೆಂದು ತಮಿಳು ಲೇಖಕರ ಒಂದು ವರ್ಗ ತೀರ್ಮಾನಿಸಿದೆ, ಇದು ನಿಮಗೆ ತಿಳಿದಿರಲಿ' ಎಂಬ ರಹಸ್ಯವನ್ನು ಸ್ಫೋಟಿಸಿ ನಕ್ಕು ಬಿಟ್ಟ, ನನ್ನೊಡನೆ ಉಳಿದವರೂ ನಕ್ಕರು.

ತಮಿಳು ಆವೃತಿ ಪ್ರಕಟಗೊಂಡು ಐದು ವರ್ಷಕ್ಕಿಂತ ಹೆಚ್ಚು ಕಾಲವಾಗಿದೆ. ಈವರೆಗೆ 200 ಪ್ರತಿಗಳು ಮಾತ್ರ ಮಾರಾಟವಾಗಿವೆ.

ಕನ್ನಡಿಗರಿಗಾಗಿ ಬರೆದ ಈ ಗ್ರಂಥದ ಹತ್ತನೆಯ ಆವೃತಿ ಈಗ ಹೊರ ಬರುತ್ತಿರುವುದು ನನಗೆ ಅಪಾರ ಸಂಭ್ರಮ, ಸಂತಸ ತಂದಿದೆ. ಇದಕ್ಕೆ ಕಾರಣರಾದ ಓದುಗರಿಗೆ ಧನ್ಯತೆಯಿಂದ ತಲೆಬಾಗುವೆ.

20.11.2016 **ಷ. ಶೆಟ್ಟರ್**

ಶಂಗಂ ತಮಿಳಗಂ

ಮತ್ತು

ಕನ್ನಡ ನಾಡು-ನುಡಿ

'ತೊಲ್ಕಾಪ್ಪಿಯಮ್' ಒಂದು ಅದ್ಭುತ ಗ್ರಂಥ. ಸೂಕ್ಷ್ಮತರದ ಶಾಸ್ತ್ರೀಯ ಶಸ್ತ್ರಕ್ರಿಯಾ ವಿಧಾನಕ್ಕೆ ಇದೊಂದು ಅಪರೂಪ ಮಾದರಿ. ಇಲ್ಲಿಯ ಶಾಸ್ತ್ರನಿಯಮಗಳು ಗಣಿತಶಾಸ್ತ್ರದ ನಿಖರತೆಯನ್ನು ಪಡೆದುಕೊಂಡಿದ್ದು, ಅವು ಈ ಕವಿಯ ವೈಜ್ಞಾನಿಕ ಚಿಂತನಾ ಪ್ರವೃತ್ತಿಯನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುವುವು. ಅವನ ಆಳವಾದ ಪಾಂಡಿತ್ಯ, ಶಿಸ್ತು, ಶ್ರಮ ಮಾತ್ರವಲ್ಲದೆ, ಅವನಲ್ಲಿದ್ದ ಸೂಕ್ಷ್ಮ ಭಾಷಾ ಕಳಕಳಿ ಮತ್ತು ಸಮರ್ಪಣಾ ಪ್ರವೃತ್ತಿಯನ್ನು ಇಲ್ಲಿ ಕಾಣುವೆವು... ಕವಿರಾಜಮಾರ್ಗದಲ್ಲಿ ಪ್ರಸ್ತಾಪಗೊಂಡಿರುವ ಅವಳಿ ದೇಸಿ ಕಾವ್ಯಪ್ರಭೇದಗಳಿಗೂ-'ಬೆದಂಡೆ' ಮತ್ತು 'ಚತ್ತಾಣ'-ಮತ್ತು ತೊಲ್ಕಾಪ್ಪಿಯಮ್‌ನಲ್ಲಿ ಬರುವ ಅವಳಿ ಕಾವ್ಯಪ್ರಭೇದಗಳಿಗೂ-'ಅಗಂ' ಮತ್ತು 'ಪುಱಂ'– ಇರುವ ಅಂತರವು ಭೂಮ್ಯಾಕಾಶ ಪ್ರಮಾಣದ್ದು. ಬಹುಶಃ ಈ ಹೋಲಿಕೆಯೇ ಅಸಂಬದ್ಧ... ತೊಲ್ಕಾಪ್ಪಿಯಮ್‌ನಲ್ಲಿ ಹಾಕಿಕೊಟ್ಟ 'ಅಗಂ'-'ಪುಱಂ' ನಿಯಮಗಳು, ತಮಿಳು ಭಾಷೆಯಲ್ಲಿ ಹೊಸಮಾರ್ಗದ ಒಂದು ಬಾಗಿಲನ್ನೇ ತೆರೆದು, ಸಮೃದ್ಧವಾದ ಕಾವ್ಯಪ್ರವಾಹಕ್ಕೆ ಕಾರಣವಾದವು; ಈ ಬಗೆಯ ಪ್ರೇರಣೆಯನ್ನು ಕವಿರಾಜಮಾರ್ಗ ಒದಗಿಸಲಿಲ್ಲ, ಅಥವಾ ಶಂಗಂ ಕವಿಗಳು ಪಡೆದ ಪ್ರಚೋದನೆಯನ್ನು ಮಾರ್ಗಕಾರನ ಕನ್ನಡ ವಾರಸುದಾರರು ಅವನಿಂದ ಪಡೆದುಕೊಳ್ಳಲಿಲ್ಲ. ಇಷ್ಟೇ ಗಮನಾರ್ಹವಾದ ಮತ್ತೊಂದು ಅಂಶವೆಂದರೆ, ತೊಲ್ಕಾಪ್ಪಿಯಮ್ ಗ್ರಂಥವನ್ನು ಪುನಃಪುನಃ ಜೀವಂತಗೊಳಿಸುವ ಕಾರ್ಯವನ್ನು ಮುಂದಿನ ತಲೆಮಾರಿನ ತಮಿಳರು ನಿಷ್ಠೆಯಿಂದ ಕೈಕೊಂಡು, ಒಂದೂವರೆ ಸಹಸ್ರಮಾನ ಕಾಲಾವಧಿಯಲ್ಲಿ (ಕ್ರಿ.ಶ. ೧೦೦ ರಿಂದ ೧೪೦೦) ಸುಮಾರು ಅರ್ಧ ಡಜನ್ ಪಾಂಡಿತ್ಯಪೂರ್ಣ ವ್ಯಾಖ್ಯಾನ ಗ್ರಂಥಗಳನ್ನು ಹೊರತಂದುದು. ಇದಕ್ಕೆ ಹೋಲಿಸಿ ನೋಡಿದರೆ, ಕನ್ನಡ ಕವಿಗಳೂ ಶಾಸ್ತ್ರಜ್ಞರೂ ಕವಿರಾಜಮಾರ್ಗಕ್ಕೆ ಕೊಟ್ಟ ಗಮನ ತುಂಬಾ ನಿರಾಶಾದಾಯಕ. ಒಬ್ಬರಿಬ್ಬರು ಆನುಷಂಗಿಕವಾಗಿ ಮಾಡಿದ ಉಲ್ಲೇಖಗಳನ್ನು ಮತ್ತು ವಿವಾದಾತ್ಮಕ 'ಶ್ರೀವಿಜಯನ' ಸ್ಮರಣೆಯನ್ನು ಬಿಟ್ಟರೆ, ಕವಿರಾಜಮಾರ್ಗದಂತಹ ಮಹಾಧ್ವಕೃತಿಯು ಮುಂದಿನ ಪೀಳಿಗೆಯಿಂದ ಪಡೆದ ಗಮನವೂ-ಗೌರವವೂ ಅತ್ಯಲ್ಪವೆಂದೇ ಹೇಳಬೇಕು.

ಅಧ್ಯಾಯ-೧

# ತೊಲ್ಕಾಪ್ಪಿಯನಾರ್ ಮತ್ತು ಮಾರ್ಗಕಾರನ ಸಂವೇದನೆಯ ಸ್ವರೂಪ

೧. 'ಕಾವೇರಿಯಿಂದಮಾ ಗೋದಾವರಿವರೆಮಿರ್ದನಾಡು' ಎಂಬ ಮಾತು ಕನ್ನಡ ನಕಾಶೆಯನ್ನು ರಚಿಸಿಟ್ಟಿದೆ. ಅದಕ್ಕೆ ಹಿಂದೆ, ಯಾವುದೇ ವಾಙ್ಮಯದಲ್ಲು-ಸಂಸ್ಕೃತ ವಾಙ್ಮಯದಲ್ಲು- ಇಂಥ ನಕಾಶೆ ನಿರ್ದೇಶನದ ಉಲ್ಲೇಖಗಳು ಪ್ರಾಯಶಃ ಕಾಣುವುದಿಲ್ಲ... ಹೀಗೆ ನದಿಗಳ ಗೆರೆ ಹೊಡೆದು ಒಳರಾಜ್ಯವೊಂದರ ನಕಾಶೆಯನ್ನು ಸಾಕಷ್ಟು ಖಚಿತವಾಗಿ ನಿರ್ದೇಶಿಸಿರುವುದು ಇದಕ್ಕೆ ಮೊದಲು ಪ್ರಾಯಶಃ ಇನ್ನೆಲ್ಲೂ ಕಾಣಸಿಗದು'.

೨. 'ಕವಿರಾಜಮಾರ್ಗ'ದಲ್ಲಿ 'ಕಾವೇರಿಯಿಂದ ಗೋದಾವರಿಯವರೆಗೆ' ಎಂಬ ಮಾತು ಬರುತ್ತಿದ್ದು ಇದು ಮೊಟ್ಟಮೊದಲಿನದು ಅಂತ... ಹೇಳಿದರು. ಆದರೆ ತಮಿಳು 'ತೊಲ್ಕಾಪ್ಪಿಯಂ'ದೊಳಗೆ ತಮಿಳುನಾಡಿನ ವ್ಯಾಪ್ತಿಯನ್ನು ಹೇಳುವಾಗ ಇಂತಹ ಭೌಗೋಳಿಕ ವ್ಯಾಪ್ತಿಯ ಸೂಚನೆ ಇದೆ. ಆದ್ದರಿಂದ... ಇದರ ಬೇರುಗಳು ಸಂಸ್ಕೃತದ ಕಡೆಗೆ ಹೋಗದೆ ದ್ರಾವಿಡ ಕಡೆಗೆ ಹೋಗ್ತವೆ. ಆ ದಿಶೆಯೊಳಗೆ ನಾವು ವಿಚಾರ ಮಾಡಬೇಕು ಅಂತ ನನಗೆ ಅನಿಸ್ತಾ ಇದೆ'.

ಅ. 'ಆದ್ರೆ ಈ ದ್ರಾವಿಡ ಆರ್ಯ ಇದೆಯಲ್ಲ ಈ ಪರಿಕಲ್ಪನೆ ಬಗ್ಗೆ ಮೊದಲನೆಯದಾಗಿ ನನಗೆ ಕೆಲವು ಸಂದೇಹಗಳಿವೆ... ಆದ್ದರಿಂದ ಈ ದ್ರಾವಿಡ ಅನ್ನೋ ಕಲ್ಪನೆ ಇದೆಯಲ್ಲ, ಇದು ಬಹಳ ತಪ್ಪು ಅಂತ ಕಾಣ್ತದೆ'.

ಆ. 'ಆದರೆ ನನಗೆ ದ್ರಾವಿಡ ಪರಂಪರೆಗೇ ಒಂದು ಥಿಂಕಿಂಗ್ ಅದೆ ಅಂತ ಕಾಣಿಸ್ತದೆ'.

ಇ. ''ಕವಿರಾಜಮಾರ್ಗ'ವನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ... ಹೇಳಿದರು -ಸಂಸ್ಕೃತದ ದೃಷ್ಟಿಯಿಂದ ಅದನ್ನು ಅಧ್ಯಯನ ಮಾಡಿರುವುದು ಹೆಚ್ಚಾಗಿದೆಯೇ ಹೊರತು ಇನ್ನು ದಕ್ಷಿಣದ ಇತರೆ ಪ್ರಾಂತೀಯವಾಗಿರುವಂತಹ ಭಾಷೆಗಳಲ್ಲಿ ಬೆಳೆದಿರುವಂತಹ ಸಾಹಿತ್ಯದ ಹಿನ್ನೆಲೆಯಲ್ಲಿ ಅಧ್ಯಯನ ಹೆಚ್ಚಾಗಿಲ್ಲ. ಇದು ನಿಜ'.

'ಕವಿರಾಜಮಾರ್ಗ' ವೇದಿಕೆಯ ಮೇಲೆ ನಡೆದ ಮೂವರು ಪಂಡಿತರ ಈ ಸಂವಾದವು ಆರಂಭ ಕಾಲದ ಕನ್ನಡ ಜಗತ್ತಿನೊಡನೆ ಇದ್ದ ದ್ರಾವಿಡ ಸಂಬಂಧವನ್ನು

ತಿಳಿದುಕೊಳ್ಳುವ ದೃಷ್ಟಿಯಲ್ಲಿ ಅತಿ ಮಹತ್ವದ್ದಾಗಿದೆ.[೧] ದುರದೃಷ್ಟವಶಾತ್ ಈ ಚರ್ಚೆ ನೇರವಾಗಿ ಮುಂದುವರಿಯದೆ, ಬೀಜದಲ್ಲಿಯೇ ಕವಲೊಡೆದು, ದ್ರಾವಿಡ-ಆರ್ಯ, ದಕ್ಷಿಣ- ಉತ್ತರ ಮುಂತಾದ ಪರಂಪರೆಯೆಡೆಗೆ ಬಸಿದು ಬತ್ತಿಬಿಟ್ಟಿತು. ಆದರೆ ಈ ಪ್ರಶ್ನೆ ನಮ್ಮನ್ನಿಂದು ಅತಿಯಾಗಿ ಕಾಡುತ್ತಿದ್ದು, ಇದಕ್ಕೆ ಉತ್ತರ ಹುಡುಕುವ ಒತ್ತಡ ದಿನದಿಂದ ದಿನಕ್ಕೆ ಹೆಚ್ಚಾಗುತ್ತಲಿದೆ. ಕಳೆದ ಶತಮಾನದಲ್ಲಿ ಇದು ಎಂದೋ ಬರಬಹುದಿತ್ತು; ಹಾಗೇನಾದರೂ ಬಂದಿದ್ದರೆ ತಮಿಳನ್ನೂ ಕನ್ನಡವನ್ನೂ ಚೆನ್ನಾಗಿ ಜೀರ್ಣಿಸಿಕೊಂಡಿದ್ದ ಅಂದಿನ ಪಂಡಿತರಲ್ಲಿ ಯಾರೊಬ್ಬರಾದರೂ ಇದಕ್ಕೆ ತಕ್ಕ ಉತ್ತರವನ್ನು ಹುಡುಕಿಕೊಡುತ್ತಿದ್ದರು. ಆದರೆ ಇಪ್ಪತ್ತನೆಯ ಶತಮಾನದ ಸಂಶೋಧನಾ 'ಧರ್ಮ'ಕ್ಕನುಗುಣವಾಗಿ, ಅಂದು ಮುಖ್ಯವೆನಿಸಿದ್ದ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ತಮ್ಮೆಲ್ಲ ಶಕ್ತಿಯನ್ನು ಅವರು ವಿನಿಯೋಗಿಸಿಕೊಂಡರೆಂದು ಕಾಣುವುದು. ಅವರನ್ನು ಅಂದು ಕಾಡಿದ ಪ್ರಶ್ನೆಗಳಲ್ಲಿ ಪ್ರಮುಖವಾದವುಗಳು:

೧. ಕವಿರಾಜಮಾರ್ಗದ ಕರ್ತೃ ಯಾರು?

೨. ಅವನ ಕುಲ- ಜಾತಿ- ಮತಗಳಾವುವು?

೩. ಅವನು ಸಂಸ್ಕೃತ ಲಕ್ಷಣಕಾರರಿಂದ ಎಷ್ಟೆಷ್ಟು ಎರವಲು ಪಡೆದು, ಹೇಗೆ ಅವನ್ನು ಅಳವಡಿಸಿಕೊಂಡನು? ಎಂಬವು.

ಈ ಪ್ರಶ್ನೆಗಳಿಗೆ ಉತ್ತರ ಹುಡುಕುವುದರಲ್ಲಿಯೇ ಒಂದು ಶತಮಾನ ಉರುಳಿ ಹೋಯಿತೇನೋ ನಿಜ, ಆದರೆ ಅದೆಲ್ಲಾ ನಿರರ್ಥಕ ಶ್ರಮವೆನ್ನಲಾಗದು. ಅವರ ಪ್ರಯತ್ನದಿಂದಾಗಿ ಕೆಲವು ನಿರ್ಣಯಗಳಿಗೆ ಬರಲು ಸಾಧ್ಯವಾಗಿರುವುದಲ್ಲದೆ ಅಂತಹ ಪ್ರಶ್ನೆಗಳ ಬಗ್ಗೆ ಮುಂದಿನ ತಲೆಮಾರಿನವರು ಹೆಚ್ಚು ತಲೆಕೆಡಿಸಿಕೊಳ್ಳಬೇಕಾದ ಆವಶ್ಯಕತೆ ಇಲ್ಲದಂತೆ ಮಾಡಿದೆ. ಈ ಮೂರು ಪ್ರಶ್ನೆಗಳಲ್ಲಿ ಕೊನೆಯದು ಹೆಚ್ಚು ಮಹತ್ವದ್ದಾದುದರಿಂದ, ಈ ಬಗ್ಗೆ ಅವರು ಕೈಕೊಂಡ ಕೆಲವು ನಿರ್ಣಯಗಳನ್ನಿಲ್ಲಿ ನೆನೆಯಬಹುದು. ಅವು ಇಂತಿವೆ:

೧. ಮಾರ್ಗಕಾರನು ಸಂಸ್ಕೃತ ಲಕ್ಷಣಕಾರರಿಂದ, ಅದರಲ್ಲೂ ಭಾಮಹ ಮತ್ತು ದಂಡಿಯಿಂದ ವಿಶೇಷ ಪ್ರೋತ್ಸಾಹ ಪಡೆದುಕೊಂಡಿದ್ದನೆನ್ನುವುದರಲ್ಲಿ ಅನುಮಾನವಿಲ್ಲ. ಈ ಇಬ್ಬರಲ್ಲಿ ದೂರದ ಕಾಶ್ಮೀರದ ಭಾಮಹನಿಗಿಂತ ಸಮೀಪದ ದ್ರಾವಿಡದೇಶದ ದಂಡಿಯತ್ತ ಅವನು ಹೆಚ್ಚು ಒಲವು ತೋರಿದನು. ದೋಷ ಪ್ರಕರಣದಲ್ಲಿ ಭಾಮಹನಿಗೆ ಸಂಖ್ಯಾದೃಷ್ಟಿಯಲ್ಲಿ ಸನಿಹನೆನಿಸಿದರೆ, ಲಕ್ಷಣ ದೃಷ್ಟಿಯಲ್ಲಿ ಅವನು ದಂಡಿಗೆ ಅತಿ ಸನಿಹನಾಗಿರುವನು.[೨]

೨. ಶಬ್ದಾಲಂಕಾರದಲ್ಲಿ ದಂಡಿ- ಭಾಮಹರು ಲಕ್ಷ್ಯ- ಲಕ್ಷಣಗಳನ್ನು ನಿರೂಪಿಸಿದರೆ ಮಾರ್ಗಕಾರನು ಲಕ್ಷ್ಯಗಳನ್ನು ನಿರ್ದೇಶಿಸುವುದರಲ್ಲಿ ತೃಪ್ತಿ ಪಡೆದು, ಒಂದು ಬಗೆಯಲ್ಲಿ ಅವರಿಗಿಂತ ಭಿನ್ನನೆನಿಸಿದನು.

೩. ಅರ್ಥಾಲಂಕಾರ ಕ್ಷೇತ್ರದಲ್ಲಿ ಭಾಮಹ(೩೨) ಮತ್ತು ದಂಡಿ(೩೫)ಯರಿಗಿಂತ ಮಾರ್ಗಕಾರ ಒಂದು ಹೆಜ್ಜೆ ಮುಂದಿಟ್ಟನು(೩೬). ಈ ಮೂವರ ಪಥಗಳು ಹೆಚ್ಚೂ ಕಡಿಮೆ ಸಮಾನ ರೇಖೆಯಲ್ಲಿ ಮುಂದುವರಿದರೂ ಅವು ಪ್ರತ್ಯೇಕವಾದ ಮೂರು ಕಾಲ್ದಾರಿಗಳಾಗಿದ್ದವೆಂಬುದು ಗಮನಾರ್ಹ. ಅವರ ಅಲಂಕಾರ ಶೀರ್ಷಿಕೆಗಳೂ ಅವರವರ ವೈಯಕ್ತಿಕ ಮುದ್ರೆಯನ್ನು ಪ್ರದರ್ಶಿಸುತ್ತವೆ.

೪. (ಉತ್ತರ ಮತ್ತು ದಕ್ಷಿಣ) ಮಾರ್ಗಭೇದಗಳನ್ನು ಗುರುತಿಸುವುದಲ್ಲದೆ ಅವುಗಳಿಗೆ ಲಕ್ಷ್ಯಗಳನ್ನು ಒದಗಿಸುವಲ್ಲಿ ಕೂಡ ಹೊಸದೆನ್ನುವ ಬಗೆಯಲ್ಲಿ ಮಾರ್ಗಕಾರನು ದಂಡಿಯ ಗೌಡೀ (ಪೌರ್ವಾತ್ಯ) ಮತ್ತು ವೈದರ್ಭೀ(ದಾಕ್ಷಿಣಾತ್ಯ)ಗಳನ್ನು ಅನುಕರಿಸಿರುವನೆನ್ನುವುದನ್ನು ಅನುಮಾನಿಸುವುದಕ್ಕೆ ಆಸ್ಪದವಿಲ್ಲ. ಈ ಎಲ್ಲ ಕಾರಣಗಳಿಂದಾಗಿ-

'ಕವಿರಾಜಮಾರ್ಗ'ವೆಂಬ ಲಕ್ಷಣಗ್ರಂಥವು ಸಂಸ್ಕೃತ ಸಾಹಿತ್ಯ ಹಾಗೂ ಕಾವ್ಯಮೀಮಾಂಸೆಯ ತಿಳಿವಳಿಕೆಯಿಂದ ರಚಿತವಾದ ಕೃತಿ ಎಂಬುದನ್ನು ನೆನೆಸಿದರೆ, ಕನ್ನಡ ಸಾಹಿತ್ಯದ ಮೊದಲ ಕಾಲ, ದಟ್ಟವಾದ ಸಂಸ್ಕೃತದ ಪ್ರಭಾವಕ್ಕೆ ಒಳಗಾದ ಕಾಲವಾಗಿತ್ತೆಂಬುದು ಸ್ಪಷ್ಟವಾಗುತ್ತದೆ', ಎಂಬುದು ಒಟ್ಟಾರೆ ಮಾಡಿದ ನಿರ್ಣಯ.[೩]

## ದ್ರಾವಿಡ ಸಂಬಂಧದ ಪ್ರಶ್ನೆಗಳು:

ಇಪ್ಪತ್ತನೆಯ ಶತಮಾನದ ಹಿಂಬಡದಂಚಿನಲ್ಲೆಲ್ಲೂ ಕಾಣದ, ಆದರೆ ಈ ಶತಮಾನದ ಮುಂಗುಷ್ಟಕ್ಕಂಟಿಕೊಂಡೇ ಬಂದ ಹೊಸ ಪ್ರಶ್ನೆ: 'ಕವಿರಾಜಮಾರ್ಗ'ದ ದ್ರಾವಿಡ ಬೇರುಗಳಾವುವು? ಎಂಬುದು.[೪]

ಈ ಪ್ರಶ್ನೆಯನ್ನೆತ್ತಿಕೊಂಡು ಅದಕ್ಕೆ ಉತ್ತರ ಹುಡುಕುವವನಿಗೆ ಬೇಕಾದ ಆವಶ್ಯಕ ಅರ್ಹತೆಗಳಲ್ಲಿ ಒಂದು, ತಮಿಳು ಮತ್ತು ಕನ್ನಡ ಕಾವ್ಯಪರಂಪರೆಯ ಜ್ಞಾನ; ಮತ್ತೊಂದು, ಭಾರತೀಯ (ದೇಸಿ- ಮಾರ್ಗಿ) ಕಾವ್ಯಮೀಮಾಂಸೆಯ ಅರಿವು. ಇದರಷ್ಟೇ ಮುಖ್ಯವಾದದ್ದು ಅದಕ್ಕೆ ಸಂಬಂಧಪಟ್ಟ ಆಕರಗಳನ್ನು ಮೂಲ ಭಾಷೆಗಳಲ್ಲಿ ಅಭ್ಯಸಿಸಿ, ಅರ್ಥೈಸುವ ಸಾಮರ್ಥ್ಯ. ಇವಾವುವೂ ನನ್ನಲ್ಲಿಲ್ಲ. ಆದರೆ ಈ ಎಲ್ಲಾ ಅರ್ಹತೆಗಳಿದ್ದವರಲ್ಲಿ ಈ ಪ್ರಶ್ನೆಯ ಬಗ್ಗೆ ಆಸಕ್ತಿ ಮೂಡಿಸಿ, ಈ ಕಡೆ ಅವರ ಗಮನವನ್ನು ಸೆಳೆಯುವ ತವಕ ನನಗೂ ನನ್ನಂಥವರಿಗೂ ಇದ್ದು, ಈ ನಿಟ್ಟನೆಡೆ ಮೊದಲ ಹೆಜ್ಜೆಯನ್ನು ಇಡುವುದು ಈಗ

ಅನಿವಾರ್ಯವಾಗಿದೆ. ಅಲ್ಲದೆ, ಆರಂಭ ಕಾಲದ ತಮಿಳು ಅನುವಾದ ಸಾಹಿತ್ಯದ ಒಂದು ಬೆಟ್ಟವೇ ಇತ್ತೀಚಿನ ದಿನಗಳಲ್ಲಿ ಬೆಳೆದಿದ್ದು ಅದು ನಮಗೆ ಸುಲಭ ಲಭ್ಯವೂ ಆಗಿರುವುದು. ಒಂದಕ್ಕಿಂತ ಹೆಚ್ಚು ಪಾಠಗಳು ದೊರೆಯುತ್ತಿರುವುದರಿಂದ, ಈ ಅನುವಾದಗಳ ತುಲನಾತ್ಮಕ ಅಧ್ಯಯನವನ್ನು ಕೈಕೊಂಡು, ಸತ್ಯಾಸತ್ಯತೆಯನ್ನು ಅರಿತುಕೊಳ್ಳಲು ನಮಗೆ ಈಗ ಸಾಧ್ಯವಾಗುವಂತಾಗಿದೆ. ಅನುವಾದಿತ ಕೃತಿಗಳನ್ನು ಅವಲಂಬಿಸಿ ಮಾಡುವ ನಿರ್ಣಯಗಳಲ್ಲಿ ಅಡಗಿರುವ ಅಪಾಯದ ಅರಿವು ನನಗಿದೆ, ಆದರೆ ಈ ಬಗೆಯ ಅಭ್ಯಾಸ ನಮಗಿಂದು ಅನಿವಾರ್ಯವೆಂಬುದು ನನ್ನ ಅನಿಸಿಕೆ. ಅದೃಷ್ಟವಶಾತ್, ತಮ್ಮ ಸಾಹಿತ್ಯವನ್ನು ಪರಭಾಷೀಯರಿಗೆ ಪರಿಚಯಿಸುವ ಕಾರ್ಯವನ್ನು ತಮಿಳು ಭಾಷಾಪಂಡಿತರು ಬಹುಶಃ ಉಳಿದೆಲ್ಲ ಭಾಷಾಪಂಡಿತರಿಗಿಂತಲೂ – ಖಂಡಿತವಾಗಿಯೂ ಕನ್ನಡ ಕೃತಿಗಳನ್ನು ಪರಿಚಯಿಸಲು ಮಾಡಿದ ನಮ್ಮ ಪರಿಶ್ರಮಕ್ಕಿಂತಲೂ ಸರಿಸುಮಾರು ನೂರು ಪಟ್ಟು – ಹೆಚ್ಚು ಶ್ರಮ ಮತ್ತು ಶ್ರದ್ಧೆಯಿಂದ ಪೂರೈಸಿಕೊಟ್ಟಿರುವರು. ಇದರಲ್ಲಿ ಪಾಶ್ಚಾತ್ಯ ಪಂಡಿತರ ಕಾಣಿಕೆಯೂ ಸಾಕಷ್ಟು ಪ್ರಮಾಣದಲ್ಲಿದ್ದು ಅದು ಇನ್ನೂ ಮುಂದುವರಿಯುತ್ತಲಿದೆ. ಉದಾಹರಣೆಗೆ, ತೊಲ್ಕಾಪ್ಪಿಯಮ್ ಕೃತಿಯೊಂದನ್ನೇ ತೆಗೆದುಕೊಂಡರೆ ಇದನ್ನು ಭಾಷಾಂತರಿಸಿದ – ವ್ಯಾಖ್ಯಾನಿಸಿದ ಅರ್ಧ ಡಜನ್ ಉತ್ತಮ ಗ್ರಂಥಗಳೂ ಅನೇಕಾನೇಕ ಬಿಡಿ ಲೇಖನಗಳೂ ನಮಗಿಂದು ಇಂಗ್ಲಿಷ್‌ನಲ್ಲಿ ಲಭ್ಯವಿವೆ.[೫] ಇವನ್ನು ಎಚ್ಚರಿಕೆಯಿಂದ ಅಭ್ಯಸಿಸಿದರೆ, ಬಹುಮಟ್ಟಿನ ಸತ್ಯಾಂಶವನ್ನು ಕಂಡುಕೊಳ್ಳಲು ಸಾಧ್ಯವಾಗಬಹುದು. ಇದು ನಿರ್ಣಾಯಕ ಉತ್ತರಗಳನ್ನು ಒದಗಿಸಬಹುದು ಇಲ್ಲವೇ ಒದಗಿಸದಿರಬಹುದು ಆದರೆ ಗುರುತರ ಪ್ರಚೋದನೆಯನ್ನು ಒಡ್ಡಿ ನಮ್ಮನ್ನು ಹೆಚ್ಚಿನ ಸಂಶೋಧನೆಗೆ ಕೊಂಡೊಯ್ಯಬಹುದೆಂಬುದು ನನ್ನ ಅನಿಸಿಕೆ.

ನನ್ನ ಅಭ್ಯಾಸ ಈ ನಿಟ್ಟಿನೆಡೆ ಇಟ್ಟ ಮೊದಲ ಹೆಜ್ಜೆ. ದ್ರಾವಿಡ ಸಂಬಂಧದ ಎಲ್ಲಾ ಪ್ರಶ್ನೆಗಳನ್ನು ನಾನಿಲ್ಲಿ ಎತ್ತಿಕೊಂಡಿಲ್ಲ–ಅವುಗಳಲ್ಲಿ ಪ್ರಮುಖವೂ ನಮಗಿಂದು ಪ್ರಸ್ತುತವೂ ಎನಿಸುವ ಎರಡು ಪ್ರಶ್ನೆಗಳನ್ನು ಮಾತ್ರ ಆಯ್ಕೆ ಮಾಡಿಕೊಂಡು, ಮೊದಲ ಅರ್ಧ ಸಹಸ್ರಮಾನದ (ಕ್ರಿ.ಶ. ೧ರಿಂದ ೫ನೆಯ ಶತಕ) ತಮಿಳು ಸಾಹಿತ್ಯದಲ್ಲಿ ಅವಕ್ಕೆ ಉತ್ತರ ಕಂಡುಕೊಳ್ಳಲು ಪ್ರಯತ್ನಪಟ್ಟಿರುವೆ. ಈ ಸಾಹಿತ್ಯವನ್ನು ಸ್ಥೂಲವಾಗಿ ಮೂರು ವರ್ಗಗಳಡಿ ತರಬಹುದು: (೧) ಆರಂಭ ಕಾಲದ ತಮಿಳು ಸಾಹಿತ್ಯ (ಪ್ರಧಾನವಾಗಿ *ತೊಲ್ಕಾಪ್ಪಿಯಮ್*); (೨) ಎರಡನೆಯ ಘಟಕದ ತಮಿಳು ಸಾಹಿತ್ಯ (ಪ್ರಧಾನವಾಗಿ *ಶಂಗಂ* ಸಂಕಲನ); ಮತ್ತು (೩) ಆನಂತರ ಕಾಲದ ಮಹಾಕಾವ್ಯಗಳು (ವಿಶೇಷವಾಗಿ *ಸಿಲಪ್ಪದಿಗಾರಂ* ಮತ್ತು *ಮಣಿಮೇಗಲೈ*).

'ಕವಿರಾಜಮಾರ್ಗ'ದ ವೇದಿಕೆಯ ಮೇಲೆ ತಂದ ಪ್ರಮುಖ ಪ್ರಶ್ನೆ ನೇರವಾಗಿದ್ದು ಅದು 'ಭಾಷಾ-ಜನಾಂಗದ ಭೌಗೋಳಿಕ ಮೇರೆಯನ್ನು ಮೊಟ್ಟಮೊದಲು ಗುರುತಿಸಿದವನು ಕವಿರಾಜಮಾರ್ಗಕಾರನೋ ಅಥವಾ ಅದಕ್ಕಿಂತ ಏಳೆಂಟು ನೂರು ವರ್ಷ ಮುಂಚೆ ಇದ್ದ ತಮಿಳು ವೈಯಾಕರಣಿಯಾದ ತೊಲ್ಕಾಪ್ಪಿಯನಾರನೋ?' ಎನ್ನುವುದು. ಈ ಪ್ರಶ್ನೆ ಬಂದುದು 'ಕಾವೇರಿಯಿಂದಮಾ ಗೋದಾವರಿವರೆಮಿರ್ದ ನಾಡು' ಎಂದು 'ಕನ್ನಡದ' ನಕ್ಷೆಯನ್ನು ನಿರ್ಮಿಸಿದ ಮಾರ್ಗಕಾರನಿಗಿಂತ ಮುಂಚೆ "ಯಾವುದೇ ವಾಙ್ಮಯದಲ್ಲು-ಸಂಸ್ಕೃತ ವಾಙ್ಮಯದಲ್ಲು-ಇಂಥ ನಕಾಶೆ ನಿರ್ದೇಶನದ ಉಲ್ಲೇಖಗಳು ಪ್ರಾಯಃ ಕಾಣುವುದಿಲ್ಲ", ಎಂಬ ಅನಿಸಿಕೆ ನಮ್ಮಲ್ಲಿ ಉಂಟಾಗಿರುವುದರಿಂದ.

**ತೊಲ್ಕಾಪ್ಪಿಯಮ್ ಮತ್ತಿನ್ನಿತರ ಶಂಗಂ ಸಾಹಿತ್ಯ:**

ತೊಲ್ಕಾಪ್ಪಿಯಮ್ ಶಂಗಂ ಸಾಹಿತ್ಯದ ಒಂದು (ಪ್ರಥಮ) ಅಂಗ ಮಾತ್ರ. ಈ ಶಾಸ್ತ್ರಗ್ರಂಥವನ್ನು ಹೊರತುಪಡಿಸಿ, ಸಾಕಷ್ಟು ಸೃಜನಾತ್ಮಕ ಮತ್ತು ಲಕ್ಷಣ ಗ್ರಂಥಗಳು ಕ್ರಿ.ಶ. ಆರಂಭಕಾಲದಲ್ಲಿ ತಮಿಳಿನಲ್ಲಿ ನಿರ್ಮಾಣಗೊಂಡವು. ಆದರೆ ಅವೆಲ್ಲವೂ ಇಂದು ನಮಗೆ ಲಭ್ಯವಿಲ್ಲ; ಅಲ್ಲದೆ, ನಾಶಗೊಂಡ ಸಾಹಿತ್ಯದ ಪ್ರಮಾಣವೆಷ್ಟೆಂಬುದನ್ನು ನಿರ್ಧರಿಸಲೂ ಸಾಧ್ಯವಾಗುತ್ತಿಲ್ಲ.[೧] ಅಳಿದುಳಿದ *ಶಂಗಂ*-ಸಂಕಲನದಲ್ಲಿ ಸುಮಾರು ೩೦,೦೦೦ ಸಾಲುಗಳ, ೨,೩೮೧ ಕವನಗಳಿದ್ದು ಇವು (ಮೂವತ್ತೊಂಬತ್ತು ಕವಯಿತ್ರಿಯರನ್ನೊಳಗೊಂಡ) ನಾಲ್ಕುನೂರಾ ಎಪ್ಪತ್ಮೂರು ಕವಿಗಳ ಹೆಸರುಗಳೊಂದಿಗೆ ಗುರುತಿಸಿಕೊಂಡಿವೆ. ಇದರಲ್ಲಿ ಸುಮಾರು ಅರ್ಧದಷ್ಟು ಕಾವ್ಯವನ್ನು ರಚಿಸಿದ ಕೀರ್ತಿ ಆರು ಕವಿಗಳಿಗೆ ಸಲ್ಲುವುದು. ನೂರಕ್ಕೂ ಹೆಚ್ಚು ಸಂಖ್ಯೆಯ ಕಾವ್ಯಕರ್ತೃಗಳ ಬಗ್ಗೆ ನಮಗೇನೂ ತಿಳಿಯದು. ಸುಮಾರು ಎರಡುನೂರಾ ತೊಂಬತ್ಮೂರು ಕವಿಗಳು ಒಂದಕ್ಕಿಂತ ಹೆಚ್ಚು ಕವನಗಳಿಗೆ ಶಂಗಂನಿಂದ ಮನ್ನಣೆ ದೊರಕಿಸಿಕೊಳ್ಳಲು ಸಾಧ್ಯವಾಗಲಿಲ್ಲವೆಂದು ತೋರುವುದು-ಏಕೆಂದರೆ, ಇವರ ಹೆಸರಿನ ಒಂದೊಂದೇ ಕವನ ಈ ಸಂಕಲನದಲ್ಲಿ ಕಂಡುಬರುವುದು. ಶಂಗಂ ಕವಿಗಳಲ್ಲಿ ಅತ್ಯಂತ ಹೆಚ್ಚು ಗೌರವಕ್ಕೆ ಪಾತ್ರನಾದವನೆಂದರೆ, ಸುಮಾರು ನೂರಾ ಎಪ್ಪತ್ತೇಳು ಕವನಗಳನ್ನು ರಚಿಸಿದ ಕಪಿಲರ್.[೨] ಇವರೆಲ್ಲರಿಗೂ ಪೂಜ್ಯನೂ ಪೂರ್ವಜನೂ ಆದವನು ತೊಲ್ಕಾಪ್ಪಿಯನಾರ್.

ತೊಲ್ಕಾಪ್ಪಿಯಮ್ ೧,೬೦೨ ಪದ್ಯಗಳನ್ನೊಳಗೊಂಡ ಬೃಹತ್ ಗ್ರಂಥ. ಲೋಕಾರೂಢಿಯಲ್ಲಿ ಇದು 'ವ್ಯಾಕರಣ'ಗ್ರಂಥವೆಂದೇ ಪ್ರಸಿದ್ಧಿ ಪಡೆದಿದೆ. ವಾಸ್ತವವಾಗಿ ಇದರ ಹರವು ತುಂಬಾ ವಿಸ್ತಾರವಾಗಿದ್ದು ಇದನ್ನು ಭಾಷಾಶಾಸ್ತ್ರದ 'ಎನ್‌ಸೈಕ್ಲೋಪೀಡಿಯಾ' ಎಂದರೂ ತಪ್ಪಾಗಲಿಕ್ಕಿಲ್ಲ. ಕವಿರಾಜಮಾರ್ಗದಂತೆ

ತೊಲ್ಕಾಪ್ಪಿಯಮ್ ಕೂಡಾ ಮೂರು ವಿಭಾಗಗಳಲ್ಲಿ ('ಅದಿಗಾರಂ') ಹಂಚಿಕೊಂಡಿದೆ: ಈ ಒಂದೊಂದು 'ಅದಿಗಾರ'ವೂ ಒಂಬತ್ತು ಉಪವಿಭಾಗಗಳಲ್ಲಿ ವರ್ಗೀಕರಿಸಲ್ಪಟ್ಟಿರುವುದು ತೊಲ್‌ನ ವಿಶೇಷತೆ. ಅದರ ಮೂರು ಪ್ರಧಾನ 'ಅದಿಗಾರ'ಗಳೆಂದರೆ: (೧) 'ಎಟುತ್ತು' (೪೮೦ ಸೂತ್ರ); (೨) 'ಸೊಲ್' (೪೬೦ ಸೂತ್ರ) ಮತ್ತು (೩) 'ಪೊರುಳ್' (೬೬೦ ಸೂತ್ರ).

ಈ ಕೃತಿಯ ಕಾಲ ವಿವಾದದ ತಿರುಗಣಿಯಿಂದ ಇನ್ನೂ ಹೊರಬಂದಿಲ್ಲ: ಕೆಲವರು ಇದನ್ನು ಕ್ರಿ. ಪೂ. ೫೦೦ಕ್ಕೆ ಕೊಂಡೊಯ್ದರೆ, ಇನ್ನು ಕೆಲವರು ಕ್ರಿ.ಶ. ೫೦೦ಕ್ಕೆ ತಂದು ನಿಲ್ಲಿಸುವರು.[೮] ಆರಂಭಕಾಲದ ತಮಿಳು ಭಾಷೆಯ ಸೃಜನಕಾವ್ಯ ನಿರ್ಮಾಣವಾಗುವುದಕ್ಕಿಂತ ಮುಂಚೆ ಈ ಶಾಸ್ತ್ರಗ್ರಂಥವು ಸಿದ್ಧವಾಗಿತ್ತೆಂಬುದರಲ್ಲಿ ಅನುಮಾನವಿಲ್ಲ. ಏಕೆಂದರೆ ಶಂಗಂ ಕವಿಗಳು ಕಟ್ಟಿದ ಅಗಂ ಅಥವಾ ಅಗನಾನೂಱು (ಪ್ರಣಯಗೀತೆ) ಮತ್ತು 'ಪುಱಂ' ಅಥವಾ ಪುಱನಾನೂಱು (ವೀರಗೀತೆ) ಎಂಬ ಎರಡು ಕಾವ್ಯ ಪ್ರಭೇದಗಳಿಗೆ ಚೌಕಟ್ಟು ನಿರ್ಮಿಸಿಕೊಟ್ಟವನೇ ತೊಲ್ಕಾಪ್ಪಿಯನಾರ್. ಸುಮಾರು ಒಂದು ಶತಮಾನ ಕಾಲದ ಚರ್ಚೆಯ ನಂತರ ಇದರ ಕಾಲವಿಂದು ಕ್ರಿ.ಶ. ೧ನೆಯ ಶತಮಾನದಲ್ಲಿ ನೆಲೆಕಂಡುಕೊಂಡಿದೆ. ಅಂದರೆ ಕವಿರಾಜಮಾರ್ಗಕ್ಕಿಂತ ಸುಮಾರು ಎಂಟುನೂರು ವರ್ಷಗಳ ಹಿಂದೆ ಈ ಗ್ರಂಥ ನಿರ್ಮಾಣವಾಗಿತ್ತೆನ್ನಬಹುದು.

ತೊಲ್ಕಾಪ್ಪಿಯಮ್ ಮತ್ತು ಶಂಗಂ ಸಂಕಲನಗಳನ್ನು ಒಟ್ಟು ಸೇರಿಸಿದರೆ, ಆರಂಭ ಕಾಲದ ತಮಿಳು ಸಾಹಿತ್ಯದ (ವಾಸ್ತವವಾಗಿ ಅಳಿದುಳಿದಿರುವ) ಪ್ರಮಾಣವು ಸುಮಾರು ೪,೦೦೦ ಪದ್ಯಗಳಿಗೆ ಏರಬಹುದು. ಭಾಷೆಯೊಂದರ ಬೆಳವಣಿಗೆಯ ಆರಂಭ ಕಾಲದಲ್ಲಿ ಇಷ್ಟೊಂದು ಕವಿಗಳಿಂದ ನಿರ್ಮಾಣಗೊಂಡ ಈ ಪ್ರಮಾಣದ ಸಾಹಿತ್ಯವನ್ನು ಬೇರೆಡೆ ಕಾಣುವುದು ಅಪರೂಪ. ಬಹುಶಃ ಇದೊಂದು ವಿಶ್ವದಾಖಲೆ ಆಗಿರಬಹುದೇನೋ!

'ತೊಲ್' ಎಂದರೆ 'ಪುರಾತನ'ವೆಂಬ, 'ಕಾಪ್ಪಿಯಮ್' ಅಂದರೆ 'ಸಂಯೋಜನ', 'ಸಂಕಲನ', 'ಪ್ರಬಂಧರಚನೆ' ಎಂಬ ಅರ್ಥಗಳನ್ನು ಕೊಡಲಾಗಿದೆ.[೯] 'ಸೆಯ್ಯುಳ್ ಇಯಲ್' (ಛಂದಃಶಾಸ್ತ್ರ)ದಡಿ 'ತೊಲ್' ಎಂಬ ಹೆಸರಿನ ಒಂದು ಕಾವ್ಯ ಪ್ರಭೇದವನ್ನು ಹೆಸರಿಸಿ, ಅಲ್ಲಿ 'ತುಂಬಾ ಸೊಗಸಾದ ಶೈಲಿಯಲ್ಲಿ ರಚಿಸಿದ ನೀತಿಬೋಧಕ ಕತೆ ಮತ್ತು ಸವಿಸ್ತಾರವಾಗಿ ವರ್ಣಿಸಲ್ಪಟ್ಟ ಒಂದು ಕಾವ್ಯಪ್ರಭೇದ'ವೆಂದು ಅರ್ಥೈಸಲಾಗಿದೆ.[೧೦] 'ಕಾಪ್ಪಿಯರ್' ಎಂಬ ಒಂದು ಪುರಾತನ ಮನೆತನವಿತ್ತೆಂದು ಕ್ರಿ.ಶ. ೫೦೦-೬೦೦ ಕಾಲದ ಸಿಲಪ್ಪದಿಗಾರದಿಂದ ತಿಳಿದುಬರುವುದು. ಈ ಮನೆತನದವರನ್ನು 'ಕಾವ್ಯಗೋತ್ರ'ದವರೆಂದೂ

ವೈಯಾಕರಣಿಯಾದ ತೊಲ್ಕಾಪ್ಪಿಯನಾರ್ ಕೂಡಾ ಈ ಮನೆತನ(ಗೋತ್ರ)ಕ್ಕೆ ಸೇರಿದವನಾಗಿದ್ದನೆಂದೂ ವಾದಿಸಲಾಗಿದೆ.[೧೧]

ತೊಲ್ಕಾಪ್ಪಿಯಮ್ ಗ್ರಂಥದಲ್ಲಿ ಅದರ ಹೆಸರಾಗಲೀ ಕರ್ತೃವಿನ ಹೆಸರಾಗಲೀ ಬರುವುದಿಲ್ಲ. ಅಲ್ಲದೆ ಕವಿಯ ಮತ್ತಾವ ವಿವರಗಳೂ ದೊರೆಯುವುದಿಲ್ಲ. ಈ ಕಾರಣದಿಂದಾಗಿ ಇದು ಒಬ್ಬನ ಕೃತಿಯೋ ಅಥವಾ ಹಲವರ ಸಾಮೂಹಿಕ ಕೃಷಿಯೋ ಎಂಬ ವಾದ-ವಿವಾದಗಳೂ ಎದ್ದಿರುವುವು.[೧೨] ಈ ಗ್ರಂಥಕ್ಕೆ ಹೆಸರು ಕೊಟ್ಟವರಲ್ಲಿ ಮೊದಲಿಗನು ಪನಂಪಾರನಾರ್. ಈ ಗ್ರಂಥಕ್ಕೆ ಒಂದು ಪ್ರಸ್ತಾವನಾ ಸ್ತುತಿಯನ್ನು ಬರೆದು, ಇದರ ಕರ್ತೃವನ್ನು ತೊಲ್ಕಾಪ್ಪಿಯನಾರ್ ಎಂದು ಅವನು ಗುರುತಿಸಿದನು.[೧೩] ಪನಂಪಾರನಾರ್ ತೊಲ್ಕಾಪ್ಪಿಯನಾರ್ ಸಮಕಾಲೀನನೂ ಸ್ವತಃ ವೈಯಾಕರಣಿಯೂ ಆಗಿದ್ದನೆಂಬ ಅಭಿಮತವಿದೆ. ೧೪ನೆಯ ಶತಮಾನದ ಟೀಕಾಕಾರ ಈ ಗ್ರಂಥಕರ್ತೃವು 'ತಿರುಮಾಣುತಾಗ್ನಿ' (ಸಂ. ತೃಣಧೂಮಾಗ್ನಿ), ಅವನು ಬ್ರಾಹ್ಮಣ ಜಮತಗ್ನಿ(ಸಂ. ಜಮದಗ್ನಿ)ಯ ಪುತ್ರನೂ, ಅಗತ್ತಿಯನ್(ಸಂ. ಅಗಸ್ತ್ಯ)ನ ಹನ್ನೆರಡು ಶಿಷ್ಯರಲ್ಲಿ ಒಬ್ಬನೂ ಎಂದು ಹೇಳಿರುವನು.[೧೪] ಮೇಲ್ನೋಟಕ್ಕೆ ಕಾಣುವಂತೆ, ಇದೊಂದು ಕಾಲಾನಂತರದಲ್ಲಿ ಸಂಭವಿಸಿದ ಸಂಸ್ಕೃತೀಕರಣದ ಪ್ರಕ್ರಿಯೆಯಲ್ಲದೆ ಮತ್ತೇನೂ ಅಲ್ಲ.

**ತೊಲ್ಕಾಪ್ಪಿಯನಾರ್ ಮತ್ತು ಮಾರ್ಗಕಾರನ ಪೂರ್ವಾಚಾರ್ಯರು:**

ತೊಲ್ಕಾಪ್ಪಿಯಮ್‌ನ ಒಡಲನ್ನು ಬಗೆದು ನೋಡಿದರೆ, ತನ್ನ ಪೂರ್ವಾಚಾರ್ಯರಿಗೆ ಈ ಗ್ರಂಥಕರ್ತೃವು ಎಷ್ಟು ಋಣಿಯಾಗಿದ್ದನೆಂಬುದು ಸ್ಪಷ್ಟಗೊಳ್ಳುವುದು. ತನ್ನ ಪೂರ್ವಜರಿಂದ ಮತ್ತು ತನ್ನ ಕಾಲದ ಹಿರಿಯರಿಂದ ಪಡೆದ ಮಾರ್ಗದರ್ಶನವನ್ನು ಕನಿಷ್ಠ ೨೪೦ ಬಾರಿ ಇವನು ಈ ಕಾವ್ಯದಲ್ಲಿ ಸ್ಮರಿಸಿರುವನು. ಆದರೆ ಇವರಾರನ್ನೂ ಹೆಸರಿಸದೆ, ಬರಿ 'ಎಣ್ಬ', 'ಮೊಟಿಬ' ಮುಂತಾದ ಪದಗಳಿಂದ ಅವರನ್ನು ಸೂಚಿಸಿರುವನು. ಈ ಪದಗಳ ಸ್ಥೂಲಾರ್ಥ 'ಪಂಡಿತರ ಮತ', 'ಪರಂಪರೆಯ ಮಾರ್ಗ', 'ಪೂರ್ವಜರ ಪ್ರಯೋಗ', 'ಬಲ್ಲವರ ಅಭಿಮತ', ಎಂದು.[೧೫] ಐತಿಹ್ಯಗಳನ್ನೂ ಕಾಲಾನಂತರದ ಉಲ್ಲೇಖನಗಳನ್ನೂ ಗಣನೆಗೆ ತೆಗೆದುಕೊಂಡರೆ, ಪನಂಪಾರನಾರ್ ತೊಲ್ಕಾಪ್ಪಿಯನಾರ್‌ನ ಸಮಕಾಲೀನರಲ್ಲಿ ಒಬ್ಬ ವೈಯಾಕರಣಿ. ಆತನು ರಚಿಸಿದ ವ್ಯಾಕರಣ ಗ್ರಂಥವನ್ನು ೧೩ನೆಯ ಶತಮಾನದ ಮಯಿಲೈನಾಥರ್ ಎಂಬ ಟೀಕಾಕಾರ 'ನನ್ನೂಲ್' ಎಂಬ ತನ್ನ ಗ್ರಂಥದಲ್ಲಿ ಉಲ್ಲೇಖಿಸಿರುವನು; ಆದರೆ ಪನಂಪಾರನಾರ್ ರಚಿಸಿದ ಗ್ರಂಥ ಈಗ ಲಭ್ಯವಿಲ್ಲ. ೧೩-೧೪ನೆಯ ಶತಕದಲ್ಲಿದ್ದ ಟೀಕಾಕಾರ 'ನಚ್ಚಿನಾರ್ಕ್ಕಿನಿಯಾರ್' ಒಂದು ಕುತೂಹಲಕಾರೀ ಘಟನೆಯನ್ನು ನಿರೂಪಿಸಿ, ತೊಲ್ಕಾಪ್ಪಿಯನಾರ್ ಮತ್ತು ಅವನ ಸಮಕಾಲೀನ ಶಾಸ್ತ್ರಜ್ಞರ

ಮೇಲೆ ಬೆಳಕು ಚೆಲ್ಲಿರುವನು. ಅದನ್ನಿಲ್ಲಿ ನೆನೆಯಬಹುದು.[೧೬] ಇದರಂತೆ ತೊಲ್ಕಾಪ್ಪಿಯನಾರ್ ರಚಿಸಿದ ಶಾಸ್ತ್ರಗ್ರಂಥವನ್ನು ಅವನ ಗುರು ಅಗತ್ತಿಯನ್(ಅಗಸ್ತ್ಯ)ನು ವಿರೋಧಿಸಿ, ಶಂಗಂ ಸಭೆ ಅದಕ್ಕೆ ಮನ್ನಣೆ ನಿರಾಕರಿಸುವಂತಹ ಒಂದು ಸಂಚನ್ನು ಹೂಡಿದನಲ್ಲದೆ, ತನ್ನ ಮತ್ತೊಬ್ಬ ಶಿಷ್ಯನಾದ ಅದಂಕೊಟ್ಟಾಸಾನ್‌ನನ್ನು ಹುರಿದುಂಬಿಸಿ, ಅದನ್ನು ವಿರೋಧಿಸಲು ಸಜ್ಜುಗೊಳಿಸಿದನು. ಪಾಂಡ್ಯರಾಜನ ಸಮ್ಮುಖದಲ್ಲಿ ನಡೆದ ಈ ವಾದದಲ್ಲಿ ತನ್ನ ಗ್ರಂಥದ ವಿರುದ್ಧ ಎತ್ತಿದ ಎಲ್ಲಾ ಆಕ್ಷೇಪಗಳಿಗೆ ಸರಿಯಾದ ಉತ್ತರವಿತ್ತು, ತೊಲ್ಕಾಪ್ಪಿಯನಾರ್ ಆ ಸಭೆಯ ಅಂಗೀಕಾರವನ್ನು ತನ್ನ ಗ್ರಂಥಕ್ಕೆ ಪಡೆದುಕೊಳ್ಳುವಲ್ಲಿ ಯಶಸ್ವಿಯಾದನು.

ವೈಯಾಕರಣಿಯಾದ ಅಗಸ್ತ್ಯನು ಏಕೆ ತನ್ನ ಶಿಷ್ಯನನ್ನು ವಿರೋಧಿಸಿದನು ಎಂಬುದನ್ನು ಬಿಡಿಸಿ ಹೇಳಬೇಕಾಗಿಲ್ಲವೆನಿಸುವುದು. ತಾನಾಗಲೇ ರಚಿಸಿದುದಕ್ಕಿಂತಲೂ ಶ್ರೇಷ್ಠ ವ್ಯಾಕರಣ ಗ್ರಂಥವೆಂದು ಶಂಗಂ ಪ್ರಾಜ್ಞರಿಂದ ತೀರ್ಮಾನಕ್ಕೊಳಗಾದರೆ ತೊಲ್ಕಾಪ್ಪಿಯನಾರ್‌ನ ಕೃತಿ ತನ್ನನ್ನೂ ತನ್ನ ಗ್ರಂಥವನ್ನೂ ಮೂಲೆಗುಂಪುಗೊಳಿಸುವುದೆಂಬ ಭೀತಿಯೂ ತನಗಿಂತಲೂ ಹೆಚ್ಚು ಪಾಂಡಿತ್ಯವನ್ನು ಪಡೆದುಕೊಂಡಿದ್ದ ಶಿಷ್ಯನ ಮೇಲಿನ ಮತ್ಸರವೂ ಇದಕ್ಕೆ ಕಾರಣವಾಗಿತ್ತೆಂಬುದು ಇಲ್ಲಿ ಸುಸ್ಪಷ್ಟ. ಪನಂಪಾರನಾರ್ ಈ ಗ್ರಂಥಕ್ಕೆ ಬರೆದ ಪ್ರಸ್ತಾವನಾ ಸ್ತುತಿಯಲ್ಲಿ ಅದಂಕೊಟ್ಟಾಸಾನ್‌ನ ಪ್ರಸ್ತಾಪ ಬರುವುದು, ಆದರೆ ಅಲ್ಲಿ ಈ ಐತಿಹ್ಯಕ್ಕಾಗಲೀ ಅವನ ವೈಯಕ್ತಿಕ ಪ್ರತಿರೋಧಕ್ಕಾಗಲೀ ಅಗಸ್ತ್ಯನಿಗಾಗಲೀ ಉಲ್ಲೇಖಗಳಿಲ್ಲ. ಪನಂ ಬರೆದ ಪ್ರಸ್ತಾವನೆಯ ಉಳಿದ ವಿವರಗಳನ್ನು ಮುಂದಿನ ಲೇಖನದಲ್ಲಿ ಪ್ರಸ್ತಾಪಿಸುವೆನು.[೧೭]

ಕವಿರಾಜಮಾರ್ಗದಲ್ಲಿ ಬರುವ ಪೂರ್ವಾಚಾರ್ಯರ ಪ್ರಸ್ತಾಪ ನಮಗೆ ಬಹುಮಟ್ಟಿಗೆ ತಿಳಿದದ್ದಾಗಿದೆ. ಮಾರ್ಗಕಾರನು ಅವರಲ್ಲಿ ಕೆಲವರನ್ನು ಸ್ಪಷ್ಟವಾಗಿ ಹೆಸರಿಸಿದರೆ; ಇನ್ನು ಕೆಲವರನ್ನು ಪರೋಕ್ಷವಾಗಿ ಮಾತ್ರ ಸ್ಮರಿಸುವನು. (ಕರಾಮಾ., ೧-೨೬-೨೯, ೩೦-೩೨). ಗದ್ಯಕಥೆಯ ಪೂರ್ವಾಚಾರ್ಯರನ್ನು (೧-೨೭, ೨೯, ೩೬-೩೭) ಮಹಾಕಾವ್ಯದ ಮಾರ್ಗದರ್ಶಿಗಳನ್ನು (೧-೩೧-೩೨) ಅವರವರ ವ್ಯಕ್ತಿಗತ ಹೆಸರುಗಳಿಂದ ಗುರುತಿಸುವ ಉತ್ಸಾಹವನ್ನು ಲಾಕ್ಷಣಿಕ ಪಂಡಿತವೃಷಭರನ್ನು ಗುರುತಿಸುವಾಗ (ಉದಾ. ದಂಡಿ, ಭಾಮಹ ಮೊದಲಾದವರು) ಅವನು ತೋರದಿರುವುದು ಗಮನಾರ್ಹ. ಇದು ಏನೇ ಇರಲಿ, ತೊಲ್ಕಾಪ್ಪಿಯನಾರ್‌ಗಿಂತ ಹೆಚ್ಚು ಸ್ಪಷ್ಟವಾದ ಪದಗಳಿಂದ ಮಾರ್ಗಕಾರನು ತನ್ನ ಪೂರ್ವಾಚಾರ್ಯರನ್ನು ಗುರುತಿಸಿರುವನೆಂಬುದರಲ್ಲಿ ಅನುಮಾನವಿಲ್ಲ. ಅವುಗಳಲ್ಲಿ 'ಪೂರ್ವಕವಿ', 'ಪುರಾಣಕವಿ', 'ಪುರಾತನಕವಿ', 'ಪೂರ್ವಾಚಾರ್ಯ', 'ಪರಮಾಚಾರ್ಯ', 'ಪರಮಾಗಮ ಕೋವಿದ' ಎಂಬವುಗಳು ಸಾಮಾನ್ಯವಾಗಿ

ಅವನಿಗಿಂತ ಹಿಂದಿನ ಕಾಲದಲ್ಲಿದ್ದ ಶಾಸ್ತ್ರಜ್ಞರನ್ನು ಉದ್ದೇಶಿಸಿ ಮಾಡಿದವುಗಳಾದರೆ,[೧೮] 'ಆಚಾರ್ಯ', 'ಕಬ್ಬಿಗ', 'ಕವಿ', 'ಕವಿಪ್ರಧಾನ', 'ಕವಿಮುಖ್ಯ', 'ಕವಿವೃಷಭ', 'ಕವೀಶ', 'ಚತುರಕವಿ', 'ಚಿಂತಿತ ಪುರಾಣಕವಿ', 'ಜಾಣ', 'ನಿಪುಣ', 'ಪಂಡಿತ', 'ಪೂಣಿಗ', 'ಭಾಷಾವಿದ', 'ಬುಧ' ಅಥವಾ 'ಬುಧೋತ್ತಮ', 'ಮಾತರಿವ', 'ವಿವೇಕಿ', ಮತ್ತು 'ವಿವೇಕಬೃಹಸ್ಪತಿ' ಎಂಬವು ಅವನ ಪೂರ್ವಜರನ್ನೂ ಸಮಕಾಲೀನ ಹಿರಿಯರನ್ನೂ ಸಹಪಾಠಿಗಳನ್ನೂ ಉದ್ದೇಶಿಸಿ ಮಾಡಿದ ಉಲ್ಲೇಖಗಳಾಗಿರಲು ಸಾಧ್ಯ.[೧೯] ಇವರನ್ನು 'ಕವಿತಾನೀತಿಯುತರ್', 'ಕಾವ್ಯಪ್ರಯೋಗ ಪರಿಣತಮತಿಗಳ್' ಎಂದು ಗುರುತಿಸಿದರೆ, ಅವರು ಹಾಕಿಕೊಟ್ಟ ಮಾರ್ಗವನ್ನು 'ಅಪರಿಮಿತಾಖ್ಯಾಕೃತಿ ಪ್ರಯೋಗಾನುಗತಂ', 'ಕವಿಜನತಾಪ್ರಯೋಗ ಸಂಬಂಧನದಿಂ', 'ಕವಿವೃಷಭರಾ ಪ್ರಯೋಗಂಗಳೊಳಂ', 'ಕವೀಶ - ಪದಪದ್ಧತಿಯೊಳ್', 'ಚಿಂತಿತಪುರಾಣಕವಿ ವಿದಿತಂಗಳ್', 'ಪುರಾಣಕವಿ-ವಿದಿತಂಗಳ್', 'ಪುರಾಣಕವಿ ಪ್ರಭುಪ್ರಯೋಗಾವಿಳ್', 'ಪುರಾಣ - ಕಾವ್ಯಪ್ರಯೋಗದೊಳ್', 'ಪುರಾಣ-ಶಾಸ್ತ್ರೋಕ್ತಂಗಳ್‌ತದನುಮತಂ', 'ಪುರಾಣಕವಿ - ಸಂತತಮಾರ್ಗಂ', 'ಪೂರ್ವಶಾಸ್ತ್ರಪದವಿಯಂ' ಎಂಬ ಪದಗಳಿಂದ ಗುರುತಿಸಿರುವನು.[೨೦] ಇವಲ್ಲದೆ, ತನ್ನ (ಪೋಷಕನ) ಅಧಿಕಾರಮುದ್ರೆಯನ್ನು ಪಡೆದ ಶಾಸ್ತ್ರನಿಯಮಗಳನ್ನು ಅವನು ವೈಯಕ್ತಿಕ ಅಂಕಿತದಲ್ಲಿ ಗುರುತಿಸಿಕೊಂಡಿರುವನು. 'ನೃಪತುಂಗದೇವವಿದಿತಕ್ರಮ', 'ನೃಪತುಂಗ ದೇವಾನುಮತದೊಳ್', 'ನೃಪತುಂಗದೇವಮಾರ್ಗ', 'ನೃಪತುಂಗದೇವನ್ ಆದರದೊಳ್ ಪೇಟ್ದಮಾರ್ಗಗತಿ', 'ಮಾರ್ಗೋದಿತಕ್ರಮ', 'ಮಾರ್ಗಕ್ರಮ', 'ಮಾರ್ಗಾನುರೂಪ ಪದಪ್ರಯೋಗ', 'ಧವಳೋಪನೀತಿಮಾರ್ಗೋಚಿತಗತಿ ಭಾವಿತಮ್', 'ನಿತ್ಯವಲ್ಲಭ ಮತದಿಂ', 'ನೀತಿನಿರಂತರಕ್ರಮಮ್', 'ನೀತಿನಿರಂತರಾನುಗತಂ', 'ನೀತಿಮಾರ್ಗೋಚಿತಂ', ಎಂಬವು ಇದಕ್ಕೆ ಉದಾಹರಣೆ.[೨೧] ಈ ಬಗೆಯ ಸ್ವಾತಂತ್ರ್ಯವನ್ನು ಸ್ಪಷ್ಟ ನಿಲುವನ್ನು ತೊಲ್ಕಾಪ್ಪಿಯನಾರ್ ತನ್ನ ಕೃತಿಯಲ್ಲಿ ತೋರಿಲ್ಲ.

**ತೊಲ್ಕಾಪ್ಪಿಯಮ್‌ನ ವಿಶೇಷತೆ:**

'ತೊಲ್ಕಾಪ್ಪಿಯಮ್'ನ ಮೂರು 'ಅದಿಗಾರ'ಗಳಲ್ಲಿ ಮೊದಲಿನ ಎರಡು ಭಾಷಾ ಶಾಸ್ತ್ರಕ್ಕೆ, ಮೂರನೆಯದು 'ಅಲಂಕಾರ' ಶಾಸ್ತ್ರಕ್ಕೆ ಸಂಬಂಧಿಸಿವೆ. 'ಎಟುತ್ತದಿಗಾರಮ್'ನ ಸೂತ್ರಗಳು ಧ್ವನಿಮಾ ಮತ್ತು ಶಬ್ದರೂಪಶಾಸ್ತ್ರಗಳನ್ನು ಚರ್ಚಿಸುವುವು. 'ಸೊಲ್ಲದಿಗಾರಮ್'ನ ಪ್ರಧಾನವಸ್ತು, ಶಬ್ದರಚನಾಶಾಸ್ತ್ರವಲ್ಲದೆ, ಅನ್ವಯ ನಿಯಮ ಮತ್ತು ಶಬ್ದಾರ್ಥಶಾಸ್ತ್ರ. 'ಪೊರುಟದಿಕಾರಮ್'ನ ವಸ್ತು, ಅಲಂಕಾರ. ಇಲ್ಲಿ 'ಅಹಂ'(ಅಗಂ) ಕಾವ್ಯಪ್ರಭೇದವನ್ನು ನಾಲ್ಕು ಅಧ್ಯಾಯಗಳಲ್ಲಿ (೧, ೩, ೪, ೫) 'ಪುಱಂ' ಪ್ರಭೇದವನ್ನು

ಒಂದು ಅಧ್ಯಾಯ(೨)ದಲ್ಲಿ ಚರ್ಚಿಸಲಾಗಿದೆ. 'ಅಗಂ' ಎಂದರೆ ಪ್ರಣಯಗೀತೆ; 'ಪುಱಂ' ಎಂದರೆ ವೀರಗಾಥೆ. ಇವಲ್ಲದೆ ರಸ, ಉಪಮಾ, ಛಂದಸ್ಸು ಮತ್ತು ಭಾಷಾಪ್ರಯೋಗಗಳನ್ನು ಪ್ರತ್ಯೇಕವಾಗಿ ಚರ್ಚಿಸಲಾಗಿದೆ. ಮೂರನೆಯ ಅದಿಗಾರದಲ್ಲಿ 'ಅಗಂ' ಮತ್ತು 'ಪುಱಂ' ಕಾವ್ಯವನ್ನು ಹೇಗೆ, ಯಾವ ವಸ್ತುವನ್ನು ಆಯ್ಕೆ ಮಾಡಿಕೊಂಡು, ಯಾವ ರಸ ಬಳಸಿ ಮತ್ತು ಯಾವ ಛಂದಸ್ಸಿನಲ್ಲಿ ನಿರೂಪಿಸಬೇಕೆನ್ನುವುದನ್ನು ತಿಳಿಸಲಾಗಿದೆ. ಈ ಪ್ರಭೇದಗಳು ತಮಿಳು ಭಾಷೆಯ ಅರುಣೋದಯ ಕಾಲದ ವಿಶೇಷ ಹಾಗೂ ವಿಶಿಷ್ಟ ಕೊಡುಗೆಗಳಾಗಿವೆ. ಒಂದು ಲಕ್ಷಣಗ್ರಂಥದಲ್ಲಿ ವಿನೂತನ ಕಾವ್ಯಪ್ರಯೋಗದ ಬಗೆಯನ್ನು ತೊಲ್ಕಾಪ್ಪಿಯನಾರ್‌ಗಿಂತ ಮುಂಚೆ ದ್ರಾವಿಡ ಭಾಷೆಯಲ್ಲಿ ಯಾರೂ ಚರ್ಚೆಮಾಡಿರಲಿಲ್ಲ; ಆನಂತರದ ಕಾಲದಲ್ಲಿ ಕೂಡಾ ದೇಸೀಯ ಭಾಷಾತಜ್ಞರಿಂದ ಈ ಬಗೆಯ ಚರ್ಚೆಯಾಗಲಿಲ್ಲವೆನ್ನಬಹುದು.

'ತೊಲ್ಕಾಪ್ಪಿಯಮ್' ಒಂದು ಅದ್ಭುತ ಗ್ರಂಥ. ಸೂಕ್ಷ್ಮತರದ ಶಾಸ್ತ್ರೀಯ ಶಸ್ತ್ರಕ್ರಿಯಾ ವಿಧಾನಕ್ಕೆ ಇದೊಂದು ಅಪರೂಪ ಮಾದರಿ. ಇಲ್ಲಿಯ ಶಾಸ್ತ್ರನಿಯಮಗಳು ಗಣಿತಶಾಸ್ತ್ರದ ನಿಖರತೆಯನ್ನು ಪಡೆದುಕೊಂಡಿದ್ದು ಅವು ಈ ಕವಿಯ ವೈಜ್ಞಾನಿಕ ಚಿಂತನಾ ಪ್ರವೃತ್ತಿಯನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುವುವು. ಅವನ ಆಳವಾದ ಪಾಂಡಿತ್ಯ, ಶಿಸ್ತು, ಶ್ರಮ ಮಾತ್ರವಲ್ಲದೆ, ಅವನಲ್ಲಿದ್ದ ಸೂಕ್ಷ್ಮ ಭಾಷಾ ಕಳಕಳಿ ಮತ್ತು ಸಮರ್ಪಣಾ ಪ್ರವೃತ್ತಿಯನ್ನು ಇಲ್ಲಿ ಕಾಣುವೆವು. ತಮಿಳು ಲಿಪಿಯಿಂದ ಆರಂಭಗೊಳ್ಳುವ ಅವನ ಚರ್ಚೆ ಸೃಜನ ಕಾವ್ಯದ ಎರಡು ಅದ್ಭುತ ಮುಖಗಳನ್ನು ಪರಿಚಯಿಸಿ, ಶಾಸ್ತ್ರಗ್ರಂಥಗಳನ್ನು ಹೇಗೆ ಅರ್ಥೈಸಿ, ಹೇಗೆ ಟೀಕೆಗಳನ್ನು ಬರೆಯಬೇಕೆಂಬ ವಿಧಿವಿಧಾನಗಳನ್ನು ವಿವರಿಸುವುದರೊಂದಿಗೆ ಮುಕ್ತಾಯಗೊಳ್ಳುವುದು.

ಆನುಷಂಗಿಕವಾಗಿ ಕವಿರಾಜಮಾರ್ಗದಲ್ಲಿ ಪ್ರಸ್ತಾಪಗೊಂಡಿರುವ ಅವಳಿ ದೇಸಿ ಕಾವ್ಯಪ್ರಭೇದಗಳಿಗೂ-'ಬೆದಂಡೆ' ಮತ್ತು 'ಚತ್ತಾಣ'-ಮತ್ತು ತೊಲ್ಕಾಪ್ಪಿಯಮ್‌ನಲ್ಲಿ ಬರುವ ಅವಳಿ ಕಾವ್ಯಪ್ರಭೇದಗಳಿಗೂ-'ಅಗಂ' ಮತ್ತು 'ಪುಱಂ'- ಇರುವ ಅಂತರವು ಭೂಮ್ಯಾಕಾಶ ಪ್ರಮಾಣದ್ದು. ಬಹುಶಃ ಈ ಹೋಲಿಕೆಯೇ ಅಸಂಬದ್ಧ. ಆದರೂ ಈ ಗ್ರಂಥಗಳಿಗೆ ಸಂಬಂಧಪಟ್ಟ ಒಂದೆರಡು ಅಂಶಗಳನ್ನು ಇಲ್ಲಿ ಗುರುತಿಸಲೇಬೇಕು. ಇದರಲ್ಲಿ ಮೊದಲಿನದು, ಕಾವ್ಯಪರಂಪರೆಯ ಹುಟ್ಟಿಗೆ ಸಂಬಂಧಪಟ್ಟದ್ದು. ತೊಲ್ಕಾಪ್ಪಿಯಮ್‌ನಲ್ಲಿ ಹಾಕಿಕೊಟ್ಟ 'ಅಗಂ'-'ಪುಱಂ' ನಿಯಮಗಳು, ತಮಿಳು ಭಾಷೆಯಲ್ಲಿ ಹೊಸಮಾರ್ಗದ ಒಂದು ಬಾಗಿಲನ್ನೇ ತೆರೆದು, ಸಮೃದ್ಧವಾದ ಕಾವ್ಯಪ್ರವಾಹಕ್ಕೆ ಕಾರಣವಾದವು; ಈ ಬಗೆಯ ಪ್ರೇರಣೆಯನ್ನು ಕವಿರಾಜಮಾರ್ಗ ಒದಗಿಸಲಿಲ್ಲ, ಅಥವಾ ಶಂಗಂ ಕವಿಗಳು ಪಡೆದ ಪ್ರಚೋದನೆಯನ್ನು ಮಾರ್ಗಕಾರನ ಕನ್ನಡ ವಾರಸುದಾರರು ಅವನಿಂದ ಪಡೆದುಕೊಳ್ಳಲಿಲ್ಲ. ಇಷ್ಟೇ ಗಮನಾರ್ಹವಾದ ಮತ್ತೊಂದು ಅಂಶವೆಂದರೆ, ತೊಲ್ಕಾಪ್ಪಿಯಮ್ ಗ್ರಂಥವನ್ನು ಪುನಃಪುನಃ ಜೀವಂತಗೊಳಿಸುವ ಕಾರ್ಯವನ್ನು ಮುಂದಿನ ತಲೆಮಾರಿನ ತಮಿಳರು

ನಿಷ್ಠೆಯಿಂದ ಕೈಕೊಂಡು, ಒಂದೂವರೆ ಸಹಸ್ರಮಾನ ಕಾಲಾವಧಿಯಲ್ಲಿ (ಕ್ರಿ.ಶ. ೧೦೦ ರಿಂದ ೧೪೦೦) ಸುಮಾರು ಅರ್ಧ ಡಜನ್ ಪಾಂಡಿತ್ಯಪೂರ್ಣ ವ್ಯಾಖ್ಯಾನ ಗ್ರಂಥಗಳನ್ನು ಹೊರತಂದುದು. ಇದಕ್ಕೆ ಹೋಲಿಸಿ ನೋಡಿದರೆ, ಕನ್ನಡ ಕವಿಗಳೂ-ಶಾಸ್ತ್ರಜ್ಞರೂ ಕವಿರಾಜಮಾರ್ಗಕ್ಕೆ ಕೊಟ್ಟ ಗಮನ ತುಂಬಾ ನಿರಾಶಾದಾಯಕ. ಒಬ್ಬರಿಬ್ಬರು ಆನುಷಂಗಿಕವಾಗಿ ಮಾಡಿದ ಉಲ್ಲೇಖಗಳನ್ನು, ವಿವಾದಾತ್ಮಕ 'ಶ್ರೀವಿಜಯನ' ಸ್ಮರಣೆಯನ್ನು ಬಿಟ್ಟರೆ, ಕವಿರಾಜಮಾರ್ಗದಂತಹ ಮಹಾಧ್ವಕೃತಿಯು ಮುಂದಿನ ಪೀಳಿಗೆಯಿಂದ ಪಡೆದ ಗಮನವೂ-ಗೌರವವೂ ಅತ್ಯಲ್ಪವೆಂದೇ ಹೇಳಬೇಕು.

## ಸಂಸ್ಕೃತ, ತಮಿಳು ಮತ್ತು ಕನ್ನಡ ಯುಗಧರ್ಮಗಳ ಪ್ರಭಾವ:

ಇದು ಏನೇ ಇರಲಿ, ತೊಲ್ಕಾಪ್ಪಿಯನಾರ್ ಮತ್ತು ಮಾರ್ಗಕಾರ ಕ್ರಮವಾಗಿ ತಮಿಳು ಮತ್ತು ಕನ್ನಡ ಕಾವ್ಯ ನಿಯಮಾವಳಿಗಳನ್ನು ರೂಪಿಸುವಾಗ ಕೆಲವು ಸಮಾನಾಂತರ ಸಂವೇದನೆಗಳನ್ನು ಹಂಚಿಕೊಂಡಿರುವುದು ಗಮನಾರ್ಹ. ಆದರೆ ಇಲ್ಲಿ ಕೂಡಾ ಅವರವರ ಯುಗಧರ್ಮಗಳು ಅವರಲ್ಲಿ ಅಂತರವನ್ನು ನಿರ್ಮಿಸಿದುದು ಸುಸ್ಪಷ್ಟ. ಇಂಥವುಗಳಲ್ಲಿ ಒಂದು, ಸಂಸ್ಕೃತ ಭಾಷೆ ಮತ್ತು ಕಾವ್ಯದಿಂದ ದ್ರಾವಿಡ ಭಾಷೆ ಮತ್ತು ಕಾವ್ಯ ಪಡೆದುಕೊಂಡ ಮಾದರಿಗಳು. ಪರಭಾಷೆ, ಅದರಲ್ಲೂ ಸಂಸ್ಕೃತ –ವಡಸೊಲ್–ದಿಂದ ಪದಗಳನ್ನು ಪಡೆದು ಕೊಳ್ಳಲು ತೊಲ್ಕಾಪ್ಪಿಯನಾರ್‌ನ ತಕರಾರೇನೂ ಇರಲಿಲ್ಲ. ಆದರೆ ಅವು ತಮಿಳೀಕರಣಗೊಂಡು – ಅಂದರೆ ತಮಿಳು ಧ್ವನಿ(ಉಚ್ಚಾರ)ಮಾಕ್ಕೆ ಹೊಂದಿಕೊಂಡು ಬರಬೇಕೆಂಬುದು ಅವನ ಸಂಹಿತೆ *–ಎೞುತ್ತೊಡು–ಮೞರ್‌ನ್ದ–ಸೊಲ್–ಆಗುಮೇ...*[೨೨] ಇಂತಹ ಪರಭಾಷಾ ಪದಗಳನ್ನು ರೂಪಾಂತರಿಸಿಕೊಳ್ಳುವ ವಿಧಾನವನ್ನೂ 'ವೞಿನೂಲ್'ನ ನಾಲ್ಕು ನಿಯಮಗಳೊಂದರಡಿಯಲ್ಲಿ ಅವನು ತಿಳಿಸಿಕೊಟ್ಟನು. ಇಷ್ಟಾದರೂ ಈ ವೈಯಾಕರಣಿ ಸಂಸ್ಕೃತದಿಂದ ತಮಿಳಿಗೆ ಸ್ವತಃ ತಂದುಕೊಂಡ ಪದಪ್ರಮಾಣ ಆರಂಭಕಾಲದ ತಮಿಳು– ಬ್ರಾಹ್ಮೀ ಶಾಸನಗಳಲ್ಲಿ ಬರುವ ಪದಪ್ರಮಾಣಕ್ಕಿಂತ ತುಂಬಾ ಕಡಿಮೆ ಎಂದು ಅಂದಾಜಿಸಲಾಗಿದೆ.[೨೩] ಇದೇನಿದ್ದರೂ ಈ ಪ್ರಕ್ರಿಯೆ ಪ್ರಾರಂಭಗೊಂಡಿದ್ದು ತೊಲ್ಕಾಪ್ಪಿಯನಾರ್ ಕಾಲದಿಂದಲೇ ಎನ್ನುವುದನ್ನು ನಿರ್ಲಕ್ಷಿಸುವಂತಿಲ್ಲ.

ಯುಗಧರ್ಮವೆ ಬದಲಾಗಿ, ತನ್ನ ಜ್ಯೇಷ್ಠತೆಯನ್ನು ಸಂಸ್ಕೃತ ಪ್ರತಿಷ್ಠಾಪಿಸಿಕೊಂಡಿದ್ದ ಮಾರ್ಗಕಾರನ ಕಾಲದಲ್ಲಿ, ಸಂಸ್ಕೃತ ಪದಗಳನ್ನು ದೇಸೀ ಭಾಷೆಗೆ ತಂದುಕೊಳ್ಳುವುದು ಹೆಮ್ಮೆಯ ಹಾಗೂ ಗೌರವಾನ್ವಿತ ಗುಣವಾಗಿ ಪರಿವರ್ತನೆಗೊಂಡಿತ್ತು. ಸಂಸ್ಕೃತದ ಉಕ್ತಿಮಾರ್ಗವನ್ನು ವಿವೇಚಿಸಿ, ಅವನ್ನು ಕನ್ನಡಕ್ಕೆ ಹೊಂದಿಸಿಕೊಂಡಾಗ ಮಾತ್ರ ಕಾವ್ಯವು ನಿರ್ದುಷ್ಟವೂ ಶೋಭಾಯಮಾನವೂ ಆಗುವುದೆಂಬುದನ್ನು ಮಾರ್ಗಕಾರನು "*ನೆಗಳ್ದಿರ್ದ*

*ಕನ್ನಡಂಗಳೊಳಗಣಿತ-ಗುಣ-ವಿದಿತ-ಸಂಸ್ಕೃತೋಕ್ತ-ಕ್ರಮಮಂ । ಬಗೆದೊಂದು ಮಾಡಿ ಪೇೞ್ದೊಡೆ ಸೊಗಯಿಸುಗುಂ ಕಾವ್ಯಬಂಧಂ"* (೧-೫೭) ಎಂಬ ಮಾತಿನಲ್ಲಿ ಗಟ್ಟಿಗೊಳಿಸಿದನು. ಸಂಸ್ಕೃತ-ಕನ್ನಡ ಪದಗಳು ಹೇಗೆ ಹಿತವಾಗಿ ಕೂಡಬೇಕು, ಹೀಗೆ ಕೂಡಿ ಹೊಸತನವನ್ನು ಪಡೆದುಕೊಂಡ ಪದಗಳನ್ನು ಉಚ್ಚರಿಸುವಾಗ ಮೃದಂಗದ ಮಾಧುರ್ಯದಂತೆ (೧-೫೫), ಕನಕರಚನೆಯೊಳ್ ಮಣಿನಿಕರದಂತೆ, ಕೇಳಲೂ-ಕಾಣಲೂ ಶೋಭಾಯಮಾನಗೊಳ್ಳಬೇಕು (೧-೬೧); ಅರಿಸಮಾಸಗಳಿಂದ ಅವುಗಳ ಧ್ವನಿ-ಪ್ರಭೇದಗಳು 'ಘರಘರ'ವಾಗಿ ಗಡುಸುಗೊಳ್ಳಬಾರದು ಎಂಬವುಗಳ ಸುತ್ತ ಅವನ ಚಿಂತನೆ ಕೇಂದ್ರೀಕೃತವಾಗಿತ್ತು. ಅಂದಮಾತ್ರಕ್ಕೆ ಬೆಳೆಯುತ್ತಿದ್ದ ಕನ್ನಡದ ಕಳಕಳಿಯು ಅವನಲ್ಲಿ ಗೌಣಗೊಂಡಿತ್ತೆಂದು ಭಾವಿಸಿದರೆ ಅದು ತಪ್ಪಾಗುವುದು. ಕನ್ನಡ (ದೇಸಿ) ಮಾತುಗಳಲ್ಲಿ ನಾಣ್ನುಡಿಯ ಬೆಡಗಿರಬೇಕೆನ್ನುವುದನ್ನೂ ಪರುಷಾಕ್ಷರಗಳಿಂದ ತುಂಬಿರುವ ಸಂಸ್ಕೃತವನ್ನು ಯಾಂತ್ರಿಕವಾಗಿ ಬಳಸಿ ಕನ್ನಡವನ್ನು ತೊಡರಿಸಬಾರದೆಂಬುದನ್ನೂ ಹವಣಾದ-ಮೆಲ್ಪುವೆತ್ತಿದ ಪದರಚನೆಯನ್ನು ಸಾಧಿಸಿಕೊಳ್ಳುವ ಹಂಬಲವನ್ನೂ ಅವನು ಅಪಾರ ಪ್ರಮಾಣದಲ್ಲಿ ಪ್ರದರ್ಶಿಸಿರುವುದು ಇದಕ್ಕೆ ಸಾಕ್ಷಿ (೧-೧೪೯). ದೃಷ್ಟಾಂತಾಲಂಕಾರವನ್ನು ವಿವರಿಸುವಾಗ ಅದನ್ನು 'ಕನ್ನಡದೊಳ್' ಹದವಾಗಿ ಹೇಗೆ ಮಾರ್ಪಡಿಸಿಕೊಳ್ಳಬೇಕೆಂಬುದಕ್ಕೆ ಅವನು ಒಡ್ಡಿರುವ ವಾದ.

ತೊಲ್ಕಾಪ್ಪಿಯನಾರ್‌ನಲ್ಲಿ ಇಲ್ಲದ, ಇದ್ದರೂ ಗಟ್ಟಿಗೊಳ್ಳದ, ಸಂಸ್ಕೃತ ಪ್ರಜ್ಞೆಯನ್ನು ನಾವು ಮಾರ್ಗಕಾರನಲ್ಲಿ ಕಾಣುವಾಗ ಅವರವರ ಯುಗಧರ್ಮಗಳನ್ನು ದೂರವಿಡ ಬಾರದು. ಹೀಗೇನಾದರೂ ಅವನ್ನು ಮರೆತು ಮಾರ್ಗಕಾರನೆಡೆ ನೋಡಿದರೆ, ಅವನು ತೊಲ್ಕಾಪ್ಪಿಯನಾರ್‌ನು ಈಜಿದ ವಿರುದ್ಧ ದಿಕ್ಕಿನಲ್ಲಿ ಈಜಿದನೇನೋ ಎಂಬ ಭಾವನೆ ಬಂದರೂ ಬರಬಹುದು. ತೊಲ್ಕಾಪ್ಪಿಯನಾರ್‌ನ ದಿಟ್ಟ ಮತ್ತು ದಕ್ಷ ನಿಲುವು (ಅವನ ಯುಗಧರ್ಮಕ್ಕನುಗುಣವಾಗಿ) ಸಂಸ್ಕೃತ ಪರಂಪರೆಯನ್ನು ಕುರುಡುಕಣ್ಣಿನಿಂದ ಗೌರವಿಸುವುದಾಗಲೀ ಅಬ್ಬರದಿಂದ ಆರಾಧಿಸುವುದಾಗಲೀ ಆಗಿರಲಿಲ್ಲ; ಆ ಪರಂಪರೆಯ ಪ್ರಸ್ತಾಪ ಮತ್ತು ಪ್ರಸ್ತುತತೆ ಅವನಿಗೆ ಆನುಷಂಗಿಕ ಮಾತ್ರ. ಅಂದರೆ ಸಂಸ್ಕೃತವನ್ನು ಹೊರಗಿಡಬೇಕೆಂಬ ಉನ್ಮಾದತೆ ಅವನಲ್ಲಿರಲಿಲ್ಲವೆಂದರ್ಥ. ಸಂಸ್ಕೃತ ಪದಗಳನ್ನು ಪಡೆದುಕೊಳ್ಳುವ ಪ್ರಮೇಯವೇನಾದರೂ ಉದ್ಭವಿಸಿದರೆ, ತಮಿಳಿನ ಧ್ವನಿ-ನಿಯಂತ್ರಣ ಕ್ಕೊಳಪಡಿಸಿಕೊಂಡು ಅವುಗಳನ್ನು ಪಡೆಯಬೇಕೆಂಬುದು ಅವನ ಗುರಿಯಾಗಿತ್ತು. ಹೀಗೆ ಅಳವಡಿಸಿಕೊಳ್ಳುವಾಗ, ಸಂಸ್ಕೃತ ಪದವೊಂದು ತನ್ನ ಮೂಲಾರ್ಥವನ್ನು ಕಳೆದುಕೊಂಡರೆ, ವಿರುದ್ಧಾರ್ಥಕ್ಕೆ ಎಡೆಮಾಡಿಕೊಟ್ಟರೆ, ಅದರಿಂದ 'ಕುದಿಯುವ ಹಾಲಿನಲ್ಲಿ ಹುಳಿ ಹಿಂಡಿದರೆ ಆಗಬಹುದಾದ ಅನಾಹುತದ ಭೀಕರತೆ' (ಮಾರ್ಗಕಾರನನ್ನು ಮುಂದೊಮ್ಮೆ ಕಾಡುವಂತೆ)

ಅವನನ್ನು ಕಾಡಲಿಲ್ಲ. ಇದಕ್ಕೊಂದು ನಿದರ್ಶನ ನನಗೆ ನೆನಪಾಗುವುದು. 'ರಾಜನ್' ಎಂಬುದು ಸಂಸ್ಕೃತ ಪದ. ಆದರೆ 'ರ'ಕಾರದಿಂದ ತಮಿಳಿನಲ್ಲಿ ಯಾವ ಪದವೂ ಪ್ರಾರಂಭಗೊಳ್ಳದಿರುವುದರಿಂದ, ಅದನ್ನು ತಮಿಳೀಕರಿಸಿದಾಗ, ಅದು ರೂಪ ಬದಲಿಸಿಕೊಂಡು (ಅರಜನ್) 'ಅರಸ' ಎಂದು ಅಂತ್ಯಗೊಳ್ಳುವುದು.[೨೪] ಸಂಸ್ಕೃತದ 'ಅರಸ' (ಅ-ರಸ: ರಸರಹಿತ, ರಸಹೀನ, ರಸಶೂನ್ಯ ಮುಂ.) ಪದದ ಅರ್ಥ ಅನಾಹುತಕ್ಕೆ ಎಡೆಮಾಡಿಕೊಳ್ಳುವಂತಹದಾದರೂ, ತಮಿಳಿಗೆ ಪರಿವರ್ತಿತಗೊಂಡ 'ಅರಸ' ಪದದಲ್ಲಿ ಈ ಅನಾಹುತಕ್ಕೆ ಅವಕಾಶವೇ ಉಂಟಾಗಲಿಲ್ಲ. ಈ ಬಗೆಯ ಅರ್ಥಾಂತರಕ್ಕೆ ಕಾರಣವಾದ ಪದಗಳ ಕೊಡುಕೊಳ್ಳುವಿಕೆಯು ಕುಲಗೆಡಿಸುವ ಕ್ರಿಯೆ ಎಂದು, ಬದಲಾದ ಯುಗಧರ್ಮಕ್ಕೆ ಒಳಗಾದ ಮಾರ್ಗಕಾರನನ್ನು ಗಾಬರಿಗೊಳಿಸುತ್ತಿತ್ತೆಂಬುದರಲ್ಲಿ ಅನುಮಾನವಿಲ್ಲ.

ಮಾರ್ಗಕಾರನ ಆದರ್ಶ ಕವಿಗಳು 'ಹರ್ಷಚರಿತ' ಮತ್ತು 'ಕಾದಂಬರಿ'ಗಳ ಗದ್ಯಕಾವ್ಯ ಕರ್ತೃಗಳು (೧-೨೬); ವಿಮಲೋದಯ, ನಾಗಾರ್ಜುನ, ಜಯಬಂಧು, ದುರ್ವಿನೀತ ಮುಂತಾದ ಗದ್ಯಾಶ್ರಮ ಪದಗುರುಗಳು (೧-೨೯); ಗುಣಸೂರಿ, ನಾರಾಯಣ, ಭಾರವಿ, ಕಾಳಿದಾಸ, ಮಾಘ ಮೊದಲಾದ ಮಹಾಕಾವ್ಯಗಳ 'ಅಮಳ ಕವಿವೃಷಭರ್ಕಳು' (೧-೩೧); ಶ್ರೀವಿಜಯ, ಕವೀಶ್ವರ ಪಂಡಿತ, ಚಂದ್ರಲೋಕಪಾಲ ಮುಂತಾದ ಅದ್ಭುತ ಲಕ್ಷ್ಯ ಮಾದರಿಗಳನ್ನು ಒದಗಿಸಿಕೊಟ್ಟ ಮಹಾನುಭಾವರು (೧-೩೨), ಇವರೆಲ್ಲರೂ ಹಾಕಿಕೊಟ್ಟ ಮಾರ್ಗದಲ್ಲಿಯೇ ನಡೆದು, ಅವರ ಸಂಪ್ರದಾಯಗಳನ್ನು ಇನ್ನೂ ಸಂಪದ್ಭರಿಸಿ, ಅವರನ್ನು ಸ್ವರ್ಗದಲ್ಲಿ ಸುಖಪಡಿಸುವುದು ಮಾರ್ಗಕಾರನ ಯುಗ ಧರ್ಮವಾಗಿತ್ತು. ಕಾರಣ, 'ಸಮಸಂಸ್ಕೃತಗಳೊಳ್ ಸೈತಮರ್ದಿರೆ ಕನ್ನಡಮಱಿದು ಪೇೞ್' ಎಂಬುದು (೧-೫೧), 'ವಿದಿತ ಸಮಸಂಸ್ಕೃತೋದಿತ ಪದಂಗಳೊಳ್ ಪುದಿದು ಬೆರಸಿ ಬರೆ ಕನ್ನಡದೊಳ್ ಮುದಮನವು ತರ್ಕು', (೧-೫೫) ಎಂಬುದು ಮಾರ್ಗಕಾರನಲ್ಲಿ ಬಲವಾಗಿ ಬೇರುಬಿಟ್ಟಿತ್ತು. ದೇಸಿಯ ಬಗ್ಗೆ ಅವನಿಗೆ ಎಷ್ಟೇ ಕಳಕಳಿ ಇದ್ದರೂ - ಅದಕ್ಕೆ ಅಡಚಣೆ ಇರಲಿಲ್ಲವೆಂಬುದನ್ನು ಈಗಾಗಲೇ ಕಂಡಿರುವೆವು - ಅದರ ಚರ್ಚೆಯನ್ನು ಮೊಟಕುಗೊಳಿಸಿ, ಮಾರ್ಗೀ ಪರಂಪರೆಯ ಚರ್ಚೆಯನ್ನು ಅವನು ಸಾಕಷ್ಟು ವಿಸ್ತಾರಗೊಳಿಸುವುದನ್ನು ನೋಡಿದರೆ, ಸಂಸ್ಕೃತನಿಷ್ಠೆಯು ಅವನನ್ನೆಷ್ಟು ಪ್ರೇರೇಪಿಸಿತ್ತೆಂಬುದು ಸ್ಪಷ್ಟಗೊಳ್ಳುವುದು.

**ರಸಪ್ರಜ್ಞೆ-ಕಾವ್ಯಧರ್ಮ:**

ಸಮಾಸ, ಛಂದಸ್ಸು ಮತ್ತು ಪದಬಂಧಕ್ಕೆ ಈ ಅಭ್ಯಾಸವನ್ನು ಸೀಮಿತಗೊಳಿಸದೇ, ಕಾವ್ಯದ ಜೀವಾಳವಾದ ರಸಪ್ರಜ್ಞೆಗೆ ಇದನ್ನು ವಿಸ್ತರಿಸಿದರೆ, ಕುತೂಹಲಕರವಾದ ಕೆಲವು

ಅಂಶಗಳನ್ನು ತೊಲ್ಕಾಪ್ಪಿಯನಾರ್ ಮತ್ತು ಮಾರ್ಗಕಾರನ ಯುಗಧರ್ಮಗಳು ಹೊರಗೆಡಹುವುವು. ಹಸಿರು ಕಂಡಲ್ಲೆಲ್ಲ ಮುಕ್ತವಾಗಿ ಬಾಯಾಡಿಸಲು ಬಯಸಿದ ಮಾರ್ಗಕಾರನೊಡನೆ ಹೋಲಿಸಿದರೆ, ತಾನೇ ಹಾಕಿಕೊಂಡ ಶಾಸ್ತ್ರೀಯ ಬೇಲಿಯನ್ನು ಒಂದಿಂಚೂ ಉಲ್ಲಂಘಿಸದೆ, ಏಕಮುಖವೂ-ನೇರವೂ ಆದ ದಾರಿಯನ್ನು ತುಳಿದ ತೊಲ್ಕಾಪ್ಪಿಯನಾರ್‌ನ ಭಿನ್ನ ವ್ಯಕ್ತಿತ್ವವು ಎದ್ದು ಕಾಣುವುದು. ಭಾಷೆ, ಭಾಷಿಕರ ಸ್ವಭಾವ, ಭಾಷಾನಕ್ಷೆ, ದೇಸಿಕಾವ್ಯದಲ್ಲಿಯ ಕೊರತೆ, ಮಾರ್ಗೀಯ ಮಾಧುರ್ಯ- ಇವಾವನ್ನೂ ತೊಲ್ಕಾಪ್ಪಿಯನಾರ್‌ನಲ್ಲಿ ನಾವು ಕಾಣುವುದಿಲ್ಲ. ಅಷ್ಟೇಕೆ, 'ತಮಿಳು' (ಭಾಷೆ) ಮತ್ತು ತಮಿಳಗಂ (ತಮಿಳು ತವರುಮನೆ) ಬಗ್ಗೆ ಭಾವಾವೇಶದ ಮಾತೂ ಅವನಿಂದ ಬರುವುದಿಲ್ಲ. ಮಾರ್ಗಕಾರನಂತೆ ಪುಳಕಿತಗೊಳಿಸುವ, ಕಚಕುಳಿ ಇಡುವ, ಭಾವನಾಲೋಕಕ್ಕೆಳೆದೊಯ್ಯುವ, ಶೃಂಗಾರರಸದಲ್ಲದ್ದಿ ಸಿಹಿಗೊಳಿಸುವ, ನುಡಿಗಳಾಗಲೀ ಲಕ್ಷ್ಯಗಳಾಗಲೀ ತೊಲ್ಕಾಪ್ಪಿಯಮ್‌ನಲ್ಲಿ ಅತಿವಿರಳ.

ಆರಂಭಕಾಲದ ತಮಿಳು ಕಾವ್ಯದ ಪ್ರಧಾನ ವಸ್ತುಗಳಲ್ಲೊಂದು, ಪ್ರಣಯ. 'ಅಗಂ' ಪದದ ಮೂಲಕ ಇದರ ವೇದಿಕೆಯನ್ನು ನಿರ್ಮಾಣ ಮಾಡಿಕೊಟ್ಟವರಲ್ಲಿ ಮೊದಲಿಗ ತೊಲ್ಕಾಪ್ಪಿಯನಾರ್. ಪ್ರಕೃತಿಯ ಅಗಾಧತೆಯನ್ನು ಕಣ್ತುಂಬ ಸವಿದುಂಡ ಈ ಪ್ರಣಯ ಪ್ರಭೇದಗಳನ್ನು ಪ್ರಾದೇಶಿಕ ಪರಿಸರದಲ್ಲಿ-ಮುಲ್ಲೈ, ಕುಱಿಂಜ್ಞಿ, ಮರುದಮ್, ನೆಯ್ದಲ್ ಮತ್ತು ಪಾಲೈ ಕ್ಷೇತ್ರಗಳಾದ ಕಾನನ, ಬೆಟ್ಟ, ಕೃಷಿಭೂಮಿ, ತೀರಪ್ರದೇಶ ಮತ್ತು ಮರಳು(ಪಾಳ್)ಭೂಮಿಯಲ್ಲಿ- ಪ್ರಣಯ ವ್ಯಾಪಾರಗಳಾದ 'ಕೂಡುವಿಕೆ', 'ಅಗಲುವಿಕೆ', 'ಸಹನೆ', 'ಕಾತರ' ಮತ್ತು 'ವಿರಹ'ಗಳನ್ನು ಗುರುತಿಸಿದನು. ಪ್ರಣಯ ಸೆಳೆತಕ್ಕೊಳಗಾದವರು ಹನ್ನೆರಡು ಬಗೆಯ ಗುಪ್ತಸ್ಥಳಗಳಲ್ಲಿ ಸಂಧಿಸುವುದು, ಕಣ್ಣಿನಿಂದಲೇ ಮೂಕಿಯಾಡುವುದು, ಸಖಿಯರ ಸಹಾಯದಿಂದ ಸದವಕಾಶ ದೊರಕಿಸಿಕೊಳ್ಳುವುದು, ಪ್ರಣಯ ಕ್ರೀಡೆಯಲ್ಲಿ ತೊಡಗುವುದು, ಮನೆಯನ್ನು(ಸಮಾಜವನ್ನು) ತೊರೆದು, ಪ್ರಿಯರೊಡನೆ ಪಲಾಯನ ಮಾಡುವುದು, ಸಮಾಜದ ಕಟ್ಟಳೆಯನ್ನು ದಿಟ್ಟವಾಗಿ ಮುರಿಯುವುದು-ಈ ಮುಂತಾದವು ಇವನಿಂದ ಸಮಗ್ರವಾಗಿ ಗುರುತಿಸಿಕೊಂಡವು.

ಆದರೆ ಸಂಸ್ಕೃತ ಕವಿಗಳಿಂದಾದ ಪ್ರಣಯಿಗಳ ಮಾದಕ ಸರ್ವೇಕ್ಷಣ, 'ತಲೈವಿ'(ನಾಯಿಕೆ)ಯ ಮೈಮಾಟ ನಿಷ್ಕರ್ಷೆ ಮತ್ತು ಮೋಹಕಾಂಗ ಮಾಪನಾಕ್ರಿಯೆಗಳನ್ನು ಇವನು ಪ್ರಣಯಗೀತಾ ಸಂಹಿತೆಯಿಂದ ಹೊರಗಿಟ್ಟಿರುವುದು ಗಮನಾರ್ಹ. ಅಂದರೆ ಜೇನುಗೂಡಿನಂತೆ ದಟ್ಟೈಸಿದ ಗುಂಗುರು ಕೂದಲನ್ನು, ಸರ್ಪದಂತೆ ಸುಳಿವ ನೀಳ ಜಡೆಯನ್ನು, ಬಿಲ್ಲಿನ ಹುಬ್ಬನ್ನು, ದಾಳಿಂಬದ ದಂತಪಂಕ್ತಿಯನ್ನು, ತೊಂಡೆಯ ತುಟಿಯನ್ನು,

ಶಂಖದ ಕೊರಳನ್ನು, ಪದ್ಮ ಮತ್ತು ಚಂದ್ರನನ್ನು ಹೀಯಾಳಿಸುವ ಮುಖವನ್ನು, ಜೋಡು ಪಾರಿವಾಳಗಳಂತೆ ವಿಶ್ರಮಿಸಿದ ಸ್ತನದ್ವಯಗಳನ್ನು ಮತ್ತು ಕಳಸದಂಚಿನ ಚೂಚುಕಗಳನ್ನು, ಸಾಗರದಂತೆ ಓಲಾಡುವ ಸಿಂಹಕಟಿಯನ್ನು, ತ್ರಿವಳಿಗಳಿಂದ ಗುರುತಿಸಿಕೊಂಡ ಕಿಬ್ಬೊಟ್ಟೆಯನ್ನು, ಅಲ್ಲಿಂದ ಕೆಳಗಿಳಿದ ಸೂಕ್ಷ್ಮ ರೋಮರೇಖೆಯನ್ನು, ಸೊಕ್ಕಿದ ಗಜಪೃಷ್ಠಗಳನ್ನು, ಬಾಳೆದಿಂಡಿನ ತೊಡೆಗಳನ್ನು, ಪದ್ಮದ ಪಾದಗಳನ್ನು ಮತ್ತು ಹಂಸದ ನಡಿಗೆಯನ್ನು ತೊಲ್ಕಾಪ್ಪಿಯನಾರ್‌ನ ತಲೈವಿಯಲ್ಲಿ ನಾವು ಕಾಣುವುದಿಲ್ಲ. ಪ್ರಣಯ ಜ್ವರಕ್ಕೀಡಾದ ನಾಯಕನಾಗಲೀ ತೆರೆಯ ಮರೆಯಲ್ಲಿ ನಿಂತು ಇಣುಕು ಹಾಕುವ ಕವಿಮಿತ್ರನಾಗಲೀ ನಾಯಿಕೆಯ ಸುಂದರ ಸೌಷ್ಠವದೆಡೆಗೆ ಹೆಚ್ಚು ಕಣ್ಣಾಡಿಸದೆ, ಪ್ರಧಾನವಾಗಿ ಅವಳ ಭಾವಾಂತರಂಗಕ್ಕಿಳಿದು, ಅವಳ ತುಮುಲ- ತುಡಿತಕ್ಕೆ ಅನುಕಂಪಿತನಾಗಿ, ಅವುಗಳನ್ನು ಮುಕ್ತಮನಸ್ಸಿನಿಂದ ಅನ್ವೇಷಿಸುವನು. ಅಲ್ಲೊಮ್ಮೆ-ಇಲ್ಲೊಮ್ಮೆ ಅವನೂ ನಾಯಿಕೆಯ ದೇಹಾಂಗಗಳೆಡೆ ಕಣ್ಣು ಹಾಯಿಸುವನು, ನಿಜ; ಆದರೆ ಅಲ್ಲಿ ಅವನು ಕಾಣುವುದು ಅವಳ ಕಾಂತಿಗುಂದಿದ ಮುಖ, ಬೆಂಡಾದ ಭುಜದ್ವಯ, ಬಸವಳಿದ ಮುಂಗೈ ಮತ್ತು ಅದರಿಂದ ಬಿಚ್ಚಿ ಬೀಳುವ ಕಂಕಣ, ಕುಂದಿದ ಕರ್ಣ ಮತ್ತು ಅದರಿಂದ ಕಳಚಿ ಬೀಳುವ ಕಾನದಾವಲಿ ಮಾತ್ರ. ಮುಖ ಮತ್ತು ಭುಜಗಳನ್ನು ಬಿಟ್ಟು ಅವನ ದೃಷ್ಟಿ ಕೆಳಗಿಳಿದರೆ, ಅದು ತುಂಬಾ ಅಪರೂಪ ಮತ್ತು ಅಷ್ಟೇ ಆಕಸ್ಮಿಕ.

ತೊಲ್ಕಾಪ್ಪಿಯನಾರ್ ಹಾಕಿಕೊಟ್ಟ ಕಾವ್ಯಧರ್ಮವನ್ನನುಸರಿಸಿ ಮುಂದುವರಿದರೂ ಶಂಗಂ ಕವಿಗಳು ಹಂತಹಂತವಾಗಿ ಹಬ್ಬುತ್ತಿದ್ದ ಸಂಸ್ಕೃತೀಕರಣದ ಪ್ರಭಾವದಿಂದ ಸಂಪೂರ್ಣವಾಗಿ ರಕ್ಷಿಸಿಕೊಳ್ಳಲು ಸಾಧ್ಯವಾಗಲಿಲ್ಲವೇನೊ.[೨೫] ಆದರೂ ಶಂಗಂ ಪ್ರಣಯಗೀತೆಯಲ್ಲಿ ಕಾಣುವ ಸೌಂದರ್ಯಪ್ರಜ್ಞೆಗೂ ಕ್ಲಾಸಿಕಲ್ ಸಂಸ್ಕೃತ ಕಾವ್ಯಗಳಲ್ಲಿ ಕಾಣುವ ಪ್ರಜ್ಞೆಗೂ ಇರುವ ಅಂತರವನ್ನು ಉಪೇಕ್ಷಿಸುವಂತಿಲ್ಲ. ಪ್ರಣಯ ಕ್ರೀಡೆಯಲ್ಲಿ ತೊಡಗಿದವರಲ್ಲಿ ಒಬ್ಬರು ಮತ್ತೊಬ್ಬರಲ್ಲಿ ಗುರುತಿಸುವ ದೈಹಿಕ ಮತ್ತು ಭಾವನಾತ್ಮಕ ಸಂವೇದನೆಗಳಲ್ಲಿ, ದೈಹಿಕ- ಸೌಂದರ್ಯ ಪ್ರಜ್ಞೆ ತನ್ನ ಹಂತವನ್ನು ಸ್ವಲ್ಪ ಎತ್ತರಿಸಿಕೊಂಡಿದ್ದನ್ನು ಶಂಗಂ ಪ್ರಣಯಕಾವ್ಯಗಳಲ್ಲಿ ನಾವು ಕಾಣುವೆವು. ತಲೈವಿಯ ಮುಂಗಾರಮೋಡ ವರ್ಣದ ದಟ್ಟ ಕೇಶರಾಶಿಯನ್ನು ಮತ್ತು ಅದನ್ನು ಬಳಸಿ ಬೆಳಗುತ್ತಿದ್ದ ಎಳವರೆಯಂತಹ ನೊಸಲನ್ನು, ಬೊಂಬಿನಂತೆ ತೊಯ್ದಾಡುವ ಬಾಹುದ್ವಯಗಳನ್ನು, ಒದ್ದೆ ಕಣ್ಣುಗಳನ್ನು, ಸಾಲುಗಟ್ಟಿದ (ಬಿದಿರ ಮುಳ್ಳಿನಂತೆ ಮೊನಚಾದ?) ದಂತಪಂಕ್ತಿಯನ್ನು, ಕುವಳೈ ಪತ್ರಗಳಿಂದ ಹೆಣೆದ ಕೆಳ ಉಡುಗೆಯನ್ನೂ ನಿಭಾಯಿಸಲಾಗದಂತಹ ನಡುವನ್ನು, ಮಧುವಿನಲ್ಲಿ ಅದ್ದಿ ತೆಗೆದ ಹವಳವರ್ಣದ ತುಟಿಗಳನ್ನು, ಕೆತ್ತಿದ ಪುತ್ಥಳಿಯಂತಹ ಮೈಮಾಟವನ್ನು, ಚಂದ್ರನಂತಹ

ಮುಖವನ್ನು, ಗಂಡು ನವಿಲಿನ ನಡೆಯನ್ನು, ಎರಡು ಸಾವಿರಕ್ಕೂ ಮಿಕ್ಕಿದ ಕವನರಾಶಿಯಲ್ಲಿ ಹುಡುಕಿ-ಹುಡುಕಿ ತೆಗೆದಾಗ ಒಂದೋ-ಎರಡೋ ನಿದರ್ಶನಗಳು ದೊರೆತರೆ ಸಾಕು. ನಿತಂಬದಿಂದಿಳಿದ ದೇಹದ ಉಲ್ಲೇಖಕ್ಕಿಲ್ಲಿ ಅಪರೂಪದ ಎಡೆ. ಆಲಿಂಗನಕ್ಕಿರುವ ಅವಕಾಶ ಇಲ್ಲಿ ಚುಂಬನಕ್ಕಿಲ್ಲ, ಸುರತ ಕ್ರೀಡೆಗಿಲ್ಲಿ ಮಡಿವಂತಿಕೆ ಇಲ್ಲವಾದರೂ ಅದರ ಶಾಬ್ದಿಕ ಮೆರವಣಿಗೆ ಇಲ್ಲ. ಸಹಜ ವರ್ಣಕ್ಕನುಗುಣವಾಗಿ 'ಶಂಗಂ' ನಾಯಿಕೆಯರು ಕ್ಷೀರ, ಚಂದ್ರಕಾಂತ, ಮುತ್ತು ಮೊದಲಾದವುಗಳ ಬಿಳಿ ಬಣ್ಣದವರಲ್ಲ; ಮಿಡಿಮಾವು, ಚಿಗುರೆಲೆ, ನವಿಲುಗರಿ ಕಣ್ಣಿನ ಕಂದುಕಪ್ಪು ಕೃಷ್ಣವರ್ಣ ಮತ್ತು ಕಡುನೀಲಿಯವರು.[೨೬] ಅವಳ ಸಹಜ ಸೌಂದರ್ಯ ತೆರೆದುಕೊಂಡೇ ಇತ್ತೆಂದು ತೋರುವುದು, ಏಕೆಂದರೆ ಅವಳ ಎದೆಯನ್ನೂ ಅರೆಮರೆಮಾಡಿದ್ದ ಹಾರಗಳನ್ನೂ ಕಿವಿಯನ್ನೂ ಮುಂಗೈಯನ್ನೂ ಅಲಂಕರಿಸಿದ್ದ ಆಭರಣಗಳನ್ನು ಬಿಟ್ಟರೆ, ವಿಶೇಷ ಉಡುಗೆಗಳ ಅಲಂಕಾರವೇ ಇವಳಿಗೆ ಇರಲಿಲ್ಲ. ನಿತಂಬವನ್ನಾದರೋ ಅವಳು ಮರೆಮಾಚಿಕೊಳ್ಳುತ್ತಿದ್ದುದು ವಸಂತದ (ಎಳೆಯ) ಕುವಳೈ ಮೊದಲಾದ ಪತ್ರಗಳಿಂದ ಹೆಣೆದ ಉತ್ತರೀಯದಿಂದ. ಹದಿಹರೆಯದವರ ಹವ್ಯಾಸಕ್ಕನುಗುಣವಾಗಿ ಅವಳೂ ತನ್ನ ಎದೆಯನ್ನು ಗಂಧದ ರಸದಿಂದ ಬಿಡಿಸಿದ ರೇಖಾಚಿತ್ರಗಳಿಂದ ಅಲಂಕರಿಸಿಕೊಳ್ಳುತ್ತಿದ್ದಳು. ಇವನ್ನೆಲ್ಲ ಶಂಗಂ ಕವಿ ಆಗೊಮ್ಮೆ ಈಗೊಮ್ಮೆ ಗುರುತಿಸಿದರೂ ಉನ್ಮಾದಿತ, ಉತ್ಪ್ರೇಕ್ಷಿತ, ವೈಭವೀಕೃತ ಕ್ಲಾಸಿಕಲ್ ಕವಿ ಭಾಷೆಗಿಂತ ಎಷ್ಟು ದೂರ ನಿಂತಿರುವನೆಂಬುದನ್ನು ಅವನ ಕಾವ್ಯ ಸಮರ್ಥವಾಗಿ ಪ್ರದರ್ಶಿಸುವುದು.

ಮಾರ್ಗಕಾರನ ಕಾಲಕ್ಕೆ ಈ ನಿಯಮಾವಳಿ ಬದಲಾಗಿ, ಪ್ರಣಯ ಕಾವ್ಯದ ಶಬ್ದ ಭಂಡಾರವು ಶೃಂಗಾರ ರಸದ ಕಣಜವಾಗಿತ್ತು. ಕವಿರಾಜಮಾರ್ಗದ ಉದ್ದಗಲಕ್ಕೆ ಹರಡಿ ಕೊಂಡಿರುವ ಈ ಪದಸಂಪತ್ತು (ರೂಪಕ)ಅಲಂಕಾರ ಮತ್ತು ಉಪಮೆಯ ವಿವೇಚನೆಯಲ್ಲಿ ಮಡುಗಟ್ಟಿರುವುದನ್ನು ಕಾಣಬಹುದು. ಇಲ್ಲಿನ ಆದರ್ಶ ನಾಯಿಕೆ ಶಶಿಕಿರಣಕಾಂತಿ (೩–೭೮), ಉದಿತಮಣಿರಾಗ (೩–೮೩), ಅಮೃತಮಯಕಾಂತಿ (೩–೧೦೩), ಶ್ವೇತ, ವಿಳಸಿತ, ವಿಶದ (೨–೪೦, ೩–೮೩, ೧–೨) ವರ್ಣ. ಅವಳದ್ದು 'ಝುಷಕೇತನ ಕೇತನಾಭ ತನು ತನು...' (೨–೪೦). ಅವಳ ಮುಖ ತಾವರೆ ಮತ್ತು ಚಂದ್ರನನ್ನು (೧–೫೯, ೧–೬೦, ೧–೮೯; ೨–೪೦, ೩–೧೨) ಪ್ರತ್ಯೇಕ-ಪ್ರತ್ಯೇಕವಾಗಿ, ಇಲ್ಲವೆ ಒಟ್ಟಾಗಿ (ಕೆಂದಾವರೆ-ಚಂದ್ರ-೩–೬೭, ೭೪, ೭೫, ೭೭) ಹೋಲುವಂತಹದು. ಮದದಿಂದ ತುಂಬಿದ ಇಲ್ಲವೇ ಮಿಂಚಿನಂತೆ ಸಂಚಲಿಸುವ ನಯನಗಳು; ದುಂಬಿಗಳನ್ನೋ ಇಲ್ಲವೇ ಕನ್ನೈದಿಲೆಗಳನ್ನೋ ಹೋಲುವಂಥವು (೧–೪೩; ೨–೫೮; ೩–೧೦, ೧೨, ೧೬, ೨೪, ೨೫, ೪೭, ೫೦, ೬೦, ೮೩ ಮುಂ.). ಅವಳ ತುಟಿ ಮತ್ತು ಅಂಗೈ ಚಿಗುರಿನ ಸೊಬಗನ್ನೂ

ಕೋಮಲತೆಯನ್ನೂ ಪಡೆದಂಥವುಗಳು (೩-೧೪, ೬೦-೬೨). ಅವಳದ್ದು ಉನ್ನತ ಭ್ರೂಚಾಪ ಇಲ್ಲವೇ ಮದಾಲಸ ಭ್ರೂಲತಾ (೩-೧೭, ೨೩, ೪೭). ಅವಳು ತಳಮಿತ ಮಧ್ಯೆ; ಪೃಥುನಿತಂಬೆ; ಉನ್ನತಸ್ತನಯುಗೇ (೩-೧೦)-ಇವುಗಳಿಂದ ಕೂಡಿದ ಅವಳ ನಡಿಗೆ ಕಳಹಂಸ ತರದ್ದು (೩-೫೦-೫೧).

ಮಾರ್ಗಕಾರನ ಕೆಲವು ಕಾವ್ಯಸಾಲುಗಳನ್ನು ನಿದರ್ಶಿಸಿದರೆ ಆ ಯುಗದ ಸೌಂದರ್ಯಪ್ರಜ್ಞೆ ಇನ್ನಷ್ಟೂ ಸ್ಪಷ್ಟಗೊಳ್ಳಬಹುದೇನೋ! ಅವುಗಳಲ್ಲಿ ಕೆಲವು ಇಂತಿವೆ:

- *ತಳಮಿತ - ಮಧ್ಯೆಯನ್ ಆಯತ- ವಿಲೋಳಲೋಚನೆಯನ್ ಉನ್ನತ - ಸ್ತನ ಯುಗೆಯಂ ಲಳಿತ ವಿಳಾಸಿನಿಯಂ ಕೋಮಳಾಂಗಿಯಂ ಪೃಥು-ನಿತಂಬೆಯನ್* (೩-೧೦)
- *ಚಂಚಲಾಧರ- ಪಲ್ಲವೆ ರುಚಿರನೇತ್ರ ಕುಸುಮೆ ವಿಲೋಲ ಭುಜಶಾಖೆ* (೩-೧೫)
- *ಮೃದುತರ ಕಪೋಲಪಲಕಂ ವದನಾಂಬುಜಮ್- ಆಯತೋನ್ನತ ಭ್ರೂಚಾಪಂ* (೩-೧೭)
- *ವದನವಲ್ತುಂಬುರುಹಂ ವಾದಲೋಲ ವಿಲೋಚನಂಗಳಲ್ಲವಿವ್- ಅಳಿಗಳ್* (೩-೨೪)
- *ವನರುಹದಂತೆ ಮುಖಂ ಲೋಚನಮೆಸೆವುತ್ಪಳದೊಳ್ ತಳಂ ತಳಿರೆಂತೆಂ* (೩-೬೦)
- *ಅಳಿಗಳಿವು ಕಣ್ಗಳಲ್ಲಿವು ನಳಿನಮಿದೀ ವದನಮಲ್ತು ನಿಜಕಾಮಿನಿಯಾ* (೩-೭೬)

ತೊಲ್ಕಾಪ್ಪಿಯನಾರ್ ಮತ್ತು ಮಾರ್ಗಕಾರನ ಕಾಲದ ಯುಗಧರ್ಮಗಳನ್ನು ಮತ್ತು ಈ ವೈಯಾಕರಣಿಗಳ ದೃಷ್ಟಿಕೋನಗಳನ್ನು ಪರಿಚಯಿಸುವುದಕ್ಕೆ ಸೀಮಿತಗೊಳ್ಳದೇ ಸ್ವಲ್ಪ ವಿಸ್ತರಿಸಿಕೊಂಡು ಈ ಅಭ್ಯಾಸವನ್ನು ಬೆಳೆಸಿದುದರಿಂದ, ನೇರ ದಾರಿಯನ್ನು ಬಿಟ್ಟು ಕವಲು ದಾರಿ ತುಳಿದೆನೇನೋ ಎಂಬ ಅನಿಸಿಕೆ ನನ್ನನ್ನು ಕಾಡುತ್ತಿದೆ; ಆದರೆ, ಕವಿರಾಜಮಾರ್ಗವನ್ನು 'ಸಂಸ್ಕೃತ' ದೃಷ್ಟಿಯಿಂದಲ್ಲದೆ 'ದಕ್ಷಿಣದ ಇತರೆ ಪ್ರಾಂತೀಯವಾಗಿರುವಂತಹ ಭಾಷೆಗಳಲ್ಲಿ ಬೆಳೆದು ಬಂದಿರುವ ಸಾಹಿತ್ಯದ ಹಿನ್ನೆಲೆಯಲ್ಲಿ ಅಧ್ಯಯನ' ಮಾಡಿದ ಸಮಾಧಾನ ನನ್ನದಾಗಿದೆ.

## ಆಕರ ಟಿಪ್ಪಣಿ :

೧. ತರೀಕೆರೆ, ರಹಮತ್ (ಸಂ.), *ಕವಿರಾಜಮಾರ್ಗ: ಸಾಂಸ್ಕೃತಿಕ ಮುಖಾಮುಖಿ* (ಕನ್ನಡ ವಿ.ವಿ., ಹಂಪಿ, ೨೦೦೦)-"ಕವಿರಾಜಮಾರ್ಗ: ಹೊಸ ಓದು", ಸುಬ್ಬಣ್ಣ ಕೆ. ವಿ., ಪು. ೪-೨೦. ಇಲ್ಲಿ ಸೂಚಿಸಿದ ಸಂವಾದಕರಲ್ಲಿ : ಅ. ಕೆ. ವಿ. ಸುಬ್ಬಣ್ಣ ಆ. ಎಂ. ಎಂ. ಕಲಬುರ್ಗಿ ಮತ್ತು ಇ. ಕೆ. ಜಿ. ನಾಗರಾಜಪ್ಪ

೨. ಕಲಬುರ್ಗಿ, ಎಂ. ಎಂ., *ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ*, (ಧಾರವಾಡ, ೧೯೭೩), ಪು.೧೧೫-೧೧೬; ಕೃಷ್ಣಮೂರ್ತಿ, ಕೆ., "ದಂಡಿ ಭಾಮಹರ ಕೃತಿಗಳು-ತುಲನಾತ್ಮಕ ಅಧ್ಯಯನ", *ಕವಿರಾಜಮಾರ್ಗ*, ಸಂ. ವಿ. ಸೀತಾರಾಮಯ್ಯ (ಬೆಂಗಳೂರು, ೧೯೨೩), ಪು. ೧೦೧-೧೪೧.

೩. ಶಿವರುದ್ರಪ್ಪ ಜಿ. ಎಸ್., "ಕವಿರಾಜಮಾರ್ಗ: ಕೆಲವು ಪ್ರತಿಕ್ರಿಯೆಗಳು", ತರೀಕೆರೆ, *ಅದೇ*, ಪು. ೭೧.

೪. ಕಳೆದ ಶತಮಾನದ ಕವಿರಾಜಮಾರ್ಗ ಚಿಂತಕರಲ್ಲಿ ಈ ಪ್ರಶ್ನೆಯನ್ನು ಎತ್ತಿದವರನ್ನು ನಾನು ಕಾಣುತ್ತಿಲ್ಲ. ನೋಡಿ : ಚಿಟಗುಪ್ಪಿ ಭೀಮಸೇನರಾವ್, *ಕವಿರಾಜಮಾರ್ಗ ಪ್ರಶಸ್ತಿ*, (ಧಾರವಾಡ, ೧೯೭೨); ಕಲಬುರ್ಗಿ, ಎಂ.ಎಂ., *ಅದೇ*, ಮುಳಿಯ ತಿಮ್ಮಪ್ಪಯ್ಯ, *ಕವಿರಾಜಮಾರ್ಗ ವಿವೇಕ*, (ಮೈಸೂರು, ೧೯೭೩), ಸೀತಾರಾಮಯ್ಯ, ಎಂ. ವಿ., (ಸಂ.) *ಕವಿರಾಜಮಾರ್ಗ*, (ಕವಿಕಾವ್ಯ ಪರಂಪರೆ-೧; ಬೆಂಗಳೂರು, ೧೯೭೩), ಕೃಷ್ಣಮೂರ್ತಿ, ಕೆ., *ನೃಪತುಂಗ ದೇವಾನುಮತಂ ಶ್ರೀವಿಜಯ ಪ್ರಭೂತಂ ಕವಿರಾಜಮಾರ್ಗಂ*, (ಬೆಂಗಳೂರು, ೧೯೮೩), ಸೀತಾರಾಮಯ್ಯ, ಎಂ. ವಿ., *ಶ್ರೀವಿಜಯ ಕೃತ ಕವಿರಾಜಮಾರ್ಗ*, (ಎಂ. ವಿ. ಸೀ. ಸಮಗ್ರ ಸಾಹಿತ್ಯ, ಬೆಂಗಳೂರು ೧೯೯೪). ತಮ್ಮ ಮಹಾಪ್ರಬಂಧದಲ್ಲಿ ಚರ್ಚಿಸದಿದ್ದರೂ ಈ ಪ್ರಶ್ನೆಯನ್ನು ಮೊದಲು ಎತ್ತಿದವರು ಎಂ. ಎಂ. ಕಲಬುರ್ಗಿಯವರು.

೫. ನನ್ನ ಗಮನವನ್ನು ವಿಶೇಷವಾಗಿ ಸೆಳೆದ ಇಂಗ್ಲಿಷ್ ಭಾಷೆಯ ಅನುವಾದಗಳಲ್ಲಿ ಪ್ರಮುಖವಾದವುಗಳೆಂದರೆ-ಆಲ್ಬರ್ಟ್, ಡಿ., *ತೊಲ್ಕಾಪ್ಪಿಯಮ್-ಫೋನಾಲಜಿ ಅಂಡ್ ಮಾರ್ಫಾಲಜಿ*, (ಚೆನ್ನೈ, ೧೯೮೫); ಇಲುಕ್ಕುವನರ್, ಎಸ್., *ತೊಲ್ಕಾಪ್ಪಿಯಮ್ ಇನ್ ಇಂಗ್ಲಿಷ್ ವಿತ್ ಕ್ರಿಟಿಕಲ್ ಸ್ಟಡೀಸ್*, (ಚೆನ್ನೈ, ೧೯೯೪); ಮುರುಗನ್, ವಿ., *ತೊಲ್ಕಾಪ್ಪಿಯಮ್ ಇನ್ ಇಂಗ್ಲಿಷ್*, (ಚೆನ್ನೈ, ೨೦೦೧), ಸುಬ್ರಹ್ಮಣ್ಯಶಾಸ್ತ್ರಿ ಪಿ. ಎಸ್., *ತೊಲ್ಕಾಪ್ಪಿಯಮ್ (ವಿತ್ ವೇರಿಯಸ್ ಸಬ್ ಟೈಟಲ್ಸ್)*, ಸಂ. ೧-೫ (ಚೆನ್ನೈ ೧೯೫೦, ೧೯೫೨, ೧೯೭೯, ೧೯೭೯; ಅಣ್ಣಾಮಲೈ, ೧೯೮೭). ಇವಲ್ಲವೆ ಮೂರು-ನಾಲ್ಕು ಡಜನ್ ಬಿಡಿ ಲೇಖನಗಳು ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿವೆ. ಈ ಲೇಖನದಲ್ಲಿ ಪ್ರಧಾನವಾಗಿ ಬಳಸಿರುವ ಗ್ರಂಥ ಇತ್ತೀಚೆಗೆ ಪ್ರಕಟನೆಗೊಂಡ ಮುರುಗನ್ ಸಂಪಾದಿತ ಇಂಗ್ಲಿಷ್ ಅನುವಾದ.

೬. ಒಟ್ಟಾರೆ ಇದ್ದವೆಂಬ ಹದಿನಾಲ್ಕು ಸಂಕಲನಗಳಲ್ಲಿ ಒಂಬತ್ತು ಮಾತ್ರ ಈಗ ಉಳಿದುಕೊಂಡಿವೆ. 'ಕೂತ್ತು', 'ವರಿ', '*ಶಿಟ್ರಿಸೈ*', '*ಪರಿಸೈ*' ಮತ್ತು 'ಅಂಕಂಸಿಯವ್' ಎಂಬವು ನಾಶಗೊಂಡ ಸಂಕಲನಗಳಾಗಿವೆ. ಮೊರ್ರ್, ಜಾಹ್ನ್ ರಾಲ್‌ಸ್ಟನ್, *ದಿ ಏಯ್ಟ್ ಆಂಥೋಲಜೀಸ್*, (ಮದ್ರಾಸು, ೧೯೮೫) ಪು. ೬. ನೋ. ಪು. ೫೪೦-೫೫೦.

೭. ಶೆಟ್ಟರ್, ಎಸ್., "ಕಲೆಕ್ಟಿವ್ ವಿಜ್‌ಡಮ್: ಸಮ್ ಇಂಡಿಯನ್ ಎಕ್ಸ್‌ಪೆರಿಮೆಂಟಲ್ಸ್", *ಸೈನ್ಸ್ ಅಂಡ್ ಬಿಯಾಂಡ್*, ಸಿ. ಎಸ್. ಮೆನನ್ ಮತ್ತಿನ್ನಿತರರು, (ಬೆಂಗಳೂರು, ೨೦೦೪), ಪು. ೧೨೯-೧೩೭. ಈ ಪ್ರಬಂಧದಲ್ಲಿ 'ಶಂಗಂ' ಸಾಹಿತ್ಯ ಮತ್ತು ಕವಿರಾಜಮಾರ್ಗದ ಕೆಲವು ಸಮಾನ ಸಂವೇದನೆಗಳನ್ನು ಪರಿಚಯಿಸಲು ಪ್ರಯತ್ನಪಡಲಾಗಿದೆ.

'ಶಂಗಂ' ಎಂಬುದು ಬಹುಶಃ ಬೌದ್ಧ ಮತ್ತು ಜೈನ 'ಸಂಘ'ಗಳಿಂದ ಪ್ರೇರಿತಗೊಂಡ ಪದವಾಗಿದ್ದು ಇದು ಸುಮಾರು ಕ್ರಿ.ಶ. ೭ನೆಯ ಶತಮಾನದಲ್ಲಿ ಪ್ರಸಾರಕ್ಕೆ ಬಂದಿತೆನಿಸುವುದು. ತಿರುನಾವುಕ್ಕರಸರ್ *ತೇವಾರಂ* (ತಿರುಮಱೈ VI : ತಿರುತ್ತಾಂಡಗಮ್ *ತಿರುಪತ್ತೂರು*, ಪ. ೩)ದಲ್ಲಿ ಸಾಕ್ಷಾತ್ ಶಿವನೇ ಕವಿ ದರುಮಿಯ ಸ್ವರೂಪದಲ್ಲಿ ಪಾಂಡ್ಯರಾಜನ ಆಸ್ಥಾನದಲ್ಲಿ ನೆರೆದ 'ಶಂಗಂ' ಕವಿಗೋಷ್ಠಿಯಲ್ಲಿ ಪಾಲ್ಗೊಂಡ ಕಥೆಯೇ ಅತ್ಯಂತ ಪೂರ್ವದ ಉಲ್ಲೇಖವೆಂದು ವಾದಿಸಲಾಗಿದೆ. – ನೋ. "ತಿರುವಿಳೈಯಾಡಲ್ ಪುರಾಣಂ" ಕಥಾನಕದ ಉಲ್ಲೇಖ–ಎನ್. ಸುಬ್ರಹ್ಮಣಿಯನ್, *ಒರಿಜಿನಲ್ ಸೋರ್ಸ್ ಆಫ್ ದಿ ಹಿಸ್ಟರಿ ಆಫ್ ತಮಿಳ್ನಾಡು*, (ಉದುಮಲ್‌ಪೇಟ್, ೧೯೯೪), ಪು. ೨೨೪. ಇದಕ್ಕೂ ವೈದಿಕ ಸಂಹಿತೆಗೂ ಇರುವ ಸಂಬಂಧವನ್ನು ಹಲವರು ಸೂಚಿಸಿರುವರು. ಆದರೆ 'ಶಂಗಂ' ಪದವು ಪ್ರಸಾರಕ್ಕೆ ಬರುವುದಕ್ಕಿಂತ ಮುಂಚೆ ತಮಿಳರು ಇದನ್ನು 'ತೊಗೈ' ಎಂಬ ಪದದಿಂದ ಗುರುತಿಸಿದ್ದರು–ಮಾರ್ರ್, ಅದೇ. ಪು. ೧೨-೧೩.

ಪ್ರಚಲಿತ ತಮಿಳು ಐತಿಹ್ಯದಂತೆ ಅತ್ಯಂತ ಪೂರ್ವಕಾಲದಲ್ಲಿ ಒಟ್ಟು ಮೂರು 'ಶಂಗಂ'ಗಳಿದ್ದು ಪುರಾತನ ಮದುರೈ ಮತ್ತು ಕಪಾಟಪುರಂನಲ್ಲಿದ್ದ ಮೊದಲಿನವೆರಡು ಕೇಂದ್ರಗಳು ಸಮುದ್ರ ಉಕ್ಕೇರಿ ಬಂದ ಮಹಾ 'ಸುನಾಮಿ'ಯಲ್ಲಿ ಕೊಚ್ಚಿಹೋದವು. ಆದರೆ ಎರಡನೆಯ ಶಂಗಂ(ಕಪಾಟಪುರದ)ನಲ್ಲಿ ರಚಿಸಿದ ತೊಲ್ಕಾಪ್ಪಿಯಮ್ ಗ್ರಂಥ ಹೇಗೋ ಉಳಿದುಕೊಂಡು ಬಂತು. ಮೂರನೆಯ 'ಶಂಗಂ'ವನ್ನು ವೈಗೈನದಿ ದಡದ ಮೇಲೆ ಹೊಸದಾಗಿ ಕಟ್ಟಿದ ಪಾಂಡ್ಯ ರಾಜಧಾನಿಯಾದ ಮದುರೈನಲ್ಲಿ ಸ್ಥಾಪಿಸಿ, ಇಂದು ಲಭ್ಯವಿರುವ ಸಾಹಿತ್ಯವನ್ನು ರಚಿಸಲಾಯಿತು. ಇದರ ವಿವರಗಳಿಗೆ, ಅಧ್ಯಾಯ ೩ ಮತ್ತು ೯ ನೋಡಿ.

'ಶಂಗಂ' ಸಾಹಿತ್ಯವೆಂದರೆ ಏನು? ಅದು ಯಾವ ಕೃತಿಗಳನ್ನು ಒಳಗೊಂಡಿತ್ತು ಎಂಬುದರ ಬಗ್ಗೆ ಪಂಡಿತರಲ್ಲಿ ಒಮ್ಮತವಿಲ್ಲ. ಕೆಲವರು ಇದರಲ್ಲಿ (೧) *ತೊಲ್ಕಾಪ್ಪಿಯಮ್*, (೨) *ಎಟ್ಟುತ್ತೊಗೈ* ಮತ್ತು *ಪತ್ತುಪಾಟ್ಟು*, (೩) ಐದು ಮಹಾಕಾವ್ಯಗಳನ್ನು (*ಶಿಲಪ್ಪದಿಗಾರಂ*, *ಮಣಿಮೇಗಲೈ*, *ಶೀವಕಚಿಂತಾಮಣಿ*, *ಕುಂಡಲಕೇಶಿ* ಮತ್ತು *ವಳೈಯಾಪತಿ* – ಇವುಗಳಲ್ಲಿ ಕೆಲವು ಈಗ ಲಭ್ಯವಿಲ್ಲ – ಮತ್ತು (೪) ಪದಿನೆಟ್ಕಿಣಕ್ಕು (ಹದಿನೇಳು ಕ್ಷುಲ್ಲಕ ಕೃತಿಗಳನ್ನು) ಸೇರಿಸುವರು. ಆದರೆ ಇನ್ನು ಕೆಲವರು ಇದನ್ನು ಮೊದಲೆರಡು ವರ್ಗಗಳಿಗೆ ಮಾತ್ರ ಸೀಮಿತಗೊಳಿಸಿ, ಉಳಿದವು ಶಂಗಂ ಕಾಲಾನಂತರ (ಕ್ರಿ.ಶ. ೩ ರಿಂದ ೬ನೆಯ ಶತಕನಲ್ಲಿ)ದಲ್ಲಿ ರಚನೆಗೊಂಡವೆಂದು ವಾದಿಸುವರು. ಎರಡನೆಯ ವಾದಕ್ಕೆ ಈಗ ಹೆಚ್ಚು ಮನ್ನಣೆ ದೊರೆಕಿರುವುದು.

೮. ಮುರುಗನ್, *ಅದೇ*, ಪು. IX-XV; ಮೀನಾಕ್ಷಿ ಕೆ., *ತೊಲ್ಕಾಪ್ಪಿಯಮ್ ಅಂಡ್ ಅಷ್ಟಾಧ್ಯಾಯಿ*, (ಚೆನ್ನೈ, ೧೯೯೭), ಪು. ೭-೮

೯. ಮೀನಾಕ್ಷಿ, *ಅದೇ*, ಪು. ೬

೧೦. ಮುರುಗನ್, ಅದೇ. ‘ಪೊರುಳ್’ನ ಎರಡನೆಯ ಭಾಗ, ಪ. ೧೨-೪೯, ಪು. ೫೪೨-೫೪೩.

೧೧. *ಶಿಲಪ್ಪದಿಗಾರಂ*, ಸಂ. ದೀಕ್ಷಿತರ್, ರಾಮಚಂದ್ರ, (ಚೆನ್ನೈ, ೧೯೯೭ರ ಮುದ್ರಣ), ಪು. ೩೯೬, ಅ.ಟಿ. ೩

೧೨. ಮೂರ್ರ್, ಅದೇ.

೧೩. ಮುರುಗನ್, ಅದೇ. ‘ಶಿಱಪ್ಪುಪ್ಪಾಯಿರಮ್’ ಅಥವಾ ಪ್ರಾಸ್ತಾವಿಕ ಸ್ತುತಿಪದ್ಯ, ಸಾ. ೧೪, ಪು. xxii.

೧೪. ನಚ್ಚಿನಾರ್ಕ್ಕಿನಿಯಾರ್ ಎಂಬ ಟೀಕಾಕಾರನು ಕ್ರಿ.ಶ. ೧೪ನೆಯ ಶತಮಾನದಲ್ಲಿ ಹೆಣೆದ ಕತೆ ಇದಾಗಿದೆ- ಮೀನಾಕ್ಷಿ, ಅದೇ., ಪು. ೬

೧೫. ಮುರುಗನ್, ಅದೇ., ಪು. IX; ಕಂದಸ್ವಾಮಿ, ಎಸ್. ಎನ್., *ತಮಿಳ್ ಲಿಟರೇಚರ್ ಅಂಡ್ ಇಂಡಿಯನ್ ಫಿಲಾಸಫಿ*, (ಚೆನ್ನೈ, ೨೦೦೧). ಪು. ೮೬. ಕನಿಷ್ಠ ಹತ್ತು ಬಗೆಯ ಅಲಂಕಾರಗಳನ್ನು ತನ್ನ ಪೂರ್ವಾಚಾರ್ಯರಿಂದ ಪಡೆದುಕೊಂಡದ್ದನ್ನು ಸ್ವತಃ ತೊಲ್ಕಾಪ್ಪಿಯನಾರ್ ತಿಳಿಸಿರುವನು. ಅದೇ., ಪು. ೬೧

೧೬. ಕಂದಸ್ವಾಮಿ, ಅದೇ., ಪು. ೪೮-೪೯.

೧೭. ಈ ಪ್ರಾಸ್ತಾವಿಕ ಸ್ತುತಿಪದ್ಯದಲ್ಲಿ ಅಂದಿನ ಪಾಂಡ್ಯ ರಾಜನನ್ನು ‘ನಿಲಂತರುತಿರುವನ್’ ಎಂದು ಮತ್ತು ಶಂಗಂ ಪಂಡಿತ ಸಭೆಯ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದವನನ್ನು ಅದಂಕೋಟ್ಟಾಸಾನ್ ಎಂದು ಹೆಸರಿಸಲಾಗಿದೆ. ಈ ಆಚಾರ್ಯನು ಶುದ್ಧ ತಮಿಳಿನ ನುಡಿ ನಿಯಮವನ್ನು ಮತ್ತು ಚತುರ್ವೇದಾಂತರ್ಗತ ಜ್ಞಾನವನ್ನು ಪಡೆದವನಾಗಿದ್ದನೆಂದು ಪ್ರತಿಪಾದಿಸಲಾಗಿದೆ. ಇವನ ಸಮ್ಮುಖದಲ್ಲಿ ನೆರವೇರಿದ ಗೋಷ್ಠಿಯಲ್ಲಿ ತೊಲ್ಕಾಪ್ಪಿಯನಾರ್ ತನ್ನ ಗ್ರಂಥವನ್ನು ಮಂಡಿಸಿ, ಮನ್ನಣೆ ಪಡೆದುಕೊಂಡನೆಂದು ಪನಂಪಾರನಾರ್ ತಿಳಿಸುವನು. ಮುರುಗನ್, ಅದೇ., ಪು. XXII-XXIII.

೧೮. *ಕರಾಮಾ.* ೨-೧೪೩, ೧-೪೭, ೨-೫೧, ೧೫೫, ೧-೩೩; ೧-೭೫; ೧-೪೨; ೧-೯.

೧೯. ಅದೇ., ೧-೨೭, ೪೨, ೨-೬೨; ೧-೪೯; ೧-೪೭; ೧-೨೪; ೨-೧೫೫; ೩-೫೮; ೧-೪, ೧೨ ಮುಂ.; ೧-೧೯, ೨-೪೮ ಮುಂ.; ೨-೫೧; ೧-೧೫, ೩೯ ಮುಂ.; ೨-೧೫, ೩-೧೧; ೧-೩೨; ೧-೪೭, ೨-೫೧, ೧೫೫; ೧-೩೩; ೧-೧೪೦, ೧-೧೦೦; ೧-೧೩, ೨೦, ೮೭, ೨-೬೮ ಮುಂ.; ೧-೧೭; ೧-೧೦೯, ೨-೨೮; ೧-೯ ಮುಂ.

೨೦. ಅದೇ., ೧-೧೭; ೧-೩೮; ೩-೯೯; ೧-೭೯; ೧-೫; ೧-೧೯; ೨-೫೧; ೨-೧, ೨-೧೫೫; ೧-೫೦; ೩-೫; ೧-೪೭; ೨-೪೬.

೨೧. ಅದೇ., ೧-೪೫; ೧-೧೪೭; ೩-೨೩೧; ೨-೧೦೭; ೨-೫೩; ೨-೧೫; ೨-೧೦೨; ೧೦೩, ೧೦೮; ೨-೧೫೩; ೨-೧೦; ೧-೧೪೯; ೨-೧೦೧; ೨-೧೫೩.

೨೨. ಮುರುಗನ್, ಅದೇ., II-೯; II-ii, X, ೨೭೫; ಪ. ೮೮೩-೪, ಪು. ೩೪೫.

೨೩. ಕಂದಸ್ವಾಮಿ, ಅದೇ., ಪು. ೫೨-೫೩. ತಮಿಳುಬ್ರಾಹ್ಮೀ ಶಾಸನಗಳಲ್ಲಿ ಬಳಸಿರುವ ಪರಭಾಷೆಯ - ವಿಶೇಷವಾಗಿ ಪಾಲಿ ಮತ್ತು ಪ್ರಾಕೃತ - ಪದಗಳನ್ನು ಬೌದ್ಧ ಮತ್ತು ಜೈನ ಮೂಲಗಳಿಂದ ಪಡೆದುಕೊಳ್ಳಲಾಗಿದ್ದು ಅವುಗಳನ್ನು ತಮಿಳೀಕರಿಸುವ ಪ್ರಕ್ರಿಯೆ ಅಲ್ಲಲ್ಲಿ ಕುಂಠಿತಗೊಂಡಿರುವುದನ್ನು ಕಾಣಬಹುದು. ಇದು ಅನಂತರ ಕಾಲದ ಪಲ್ಲವ ಮತ್ತು ಚೋಳರ ಶಾಸನಗಳಲ್ಲಿಯೂ ಮುಂದುವರಿಯಿತು. ತೊಲ್ಕಾಪ್ಪಿಯಮ್‌ನಲ್ಲಿ ಕೆಲವು -ಅಂತನ್, ಏತು, ಮಾರಾಯಮ್ ಮುಂ. (ಸೂತ್ರ ೪, 'ಪೊರುಳ್' ಸೂ. ೬೫, ೬೭) – ಸಂಸ್ಕೃತ ಪದಗಳನ್ನು ಗುರುತಿಸಬಹುದು. ಇವುಗಳ ಅರ್ಥವ್ಯಾಪ್ತಿಯಲ್ಲಿರುವ ಅಂತರವನ್ನೂ ಗಮನಿಸುವುದವಶ್ಯ.

೨೪. 'ರಾಮ' 'ಇರಾಮಣ್' ಎಂದು, ಲಂಕೆ 'ಇಲಂಕೈ' ಎಂದು ತಮಿಳೀಕರಿಸಿಕೊಳ್ಳುವುದು. ಈ ಪ್ರಕ್ರಿಯೆ ತಮಿಳಿನಲ್ಲಿ ವಿಶಿಷ್ಟ ಬಗೆಯಲ್ಲಿ ನಡೆದದ್ದೇನೊ ನಿಜ, ಆದರೆ ಒಂದಿಲ್ಲೊಂದು ರೀತಿಯಲ್ಲಿ ಉಳಿದ ದ್ರಾವಿಡ ಭಾಷೆಗಳಲ್ಲೂ ಇದು ನಡೆಯಿತು. ಒಂದು ಭಾಷೆಯ ಪದವನ್ನು ಮತ್ತೊಂದು ಭಾಷೆಗೆ ಅಳವಡಿಸಿಕೊಂಡಾಗ ವಿಭಿನ್ನ ಬಗೆಯ ಸಾಂಸ್ಕೃತಿಕ ಸಂಸ್ಕಾರ ದೀಕ್ಷೆಗೆ ಅವು ಒಳಗಾಗುವುದು ಅನಿವಾರ್ಯ. ಪ್ರಾಕೃತ, ಸಂಸ್ಕೃತ ಮಾತ್ರವಲ್ಲದೆ ಅರಬ್ಬೀ, ಪಾರಸೀ, ಉರ್ದೂ ಭಾಷೆಗಳಿಂದ ಮತ್ತು ಇತ್ತೀಚೆಗೆ ಇಂಗ್ಲಿಷ್‌ನಿಂದ ಪಡೆದುಕೊಂಡು, ತನ್ನದನ್ನಾಗಿಸಿಕೊಂಡಿರುವ ಕನ್ನಡದ ಪ್ರಯೋಗಗಳಿಗೆ ಮಿತಿ ಕಟ್ಟುವುದೇ ಕಷ್ಟ ಇದು ಬೆಳೆಯುವ ಯಾವುದೇ ಭಾಷೆಯ ಲಕ್ಷಣವಾಗಿದೆ. ಆರಂಭಕಾಲದ ಭಾಷಾ ಪ್ರಯೋಗಗಳಲ್ಲಿ ತಮಿಳರು ಸಂಸ್ಕೃತ-ಪ್ರಾಕೃತ ಪದಗಳನ್ನು ಉಪಯೋಗಿಸುವಾಗ ವಿಶೇಷ ಮಡಿವಂತಿಕೆ ತೋರಿರುವುದು ನಿಜ, ಅದು ಕ್ರಮೇಣ ಸಡಿಲುಗೊಳ್ಳುತ್ತಾ ಸಾಗಿದ್ದೂ ಸರ್ವವಿದಿತ. ಈ ಪ್ರಕ್ರಿಯೆ ತ್ವರಿತಗತಿಯಲ್ಲಿ, ಮುಕ್ತಮಾರ್ಗದಲ್ಲಿ, ಹಲವು ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಒತ್ತಡಗಳಿಗೊಳಗಾಗಿ ಸಾಗಿದ್ದನ್ನು ಇತಿಹಾಸದ ಅನೇಕ ಘಟ್ಟಗಳಲ್ಲಿ ಗುರುತಿಸಬಹುದು. ಇದರ ಹೆಚ್ಚಿನ ಚರ್ಚೆ ಬಹುಶಃ ಇಲ್ಲಿ ಅಪ್ರಸ್ತುತ.

೨೫. ತೊಲ್ಕಾಪ್ಪಿಯಮ್‌ನಲ್ಲಿ ಬಹಳ ಅಪರೂಪವಾಗಿ ಮಾತ್ರ ಕಾಣುವ ಸ್ತ್ರೀ ಮೋಹಕಾಂಗಗಳ ವರ್ಣನೆ '*ಎಟ್ಟುತ್ತೊಗೈ*' ಮತ್ತು '*ಪತ್ತುಪಾಟ್ಟು*' ಸಂಕಲನಗಳಲ್ಲಿ ವಿರಳವಾಗಿ ಬರುವುದನ್ನು ಗಮನಿಸಿದರೆ, ತೊಲ್ಕಾಪ್ಪಿಯಮ್‌ನ ಕಾಲಾನಂತರದ ತಮಿಳು ಸಾಹಿತ್ಯ ಹೇಗೆ ಹಂತಹಂತವಾಗಿ ಸಂಸ್ಕೃತೀಕರಣಕ್ಕೆ ಒಳಗಾಯಿತೆಂಬುದು ಸ್ಪಷ್ಟಗೊಳ್ಳುವುದು. ಇದು 'ಶಂಗಂ' ಕವಿಗಳ ಕಾಲದಲ್ಲಾದದ್ದೋ ಅಥವಾ ಅನಂತರ ಸಂಕಲನಕಾರರಿಂದ ಸೇರ್ಪಡೆ ಮಾಡಲ್ಪಟ್ಟದ್ದೋ ಎಂಬುದರ ಬಗ್ಗೆ ಸ್ಪಷ್ಟತೆ ದೊರಕುವುದಿಲ್ಲ. 'ಪೂರಿಕ್ಕೋ' ಎಂಬವನಿಂದ (ಕ್ರಿ.ಶ. ೯ನೆಯ ಶತಮಾನಕ್ಕಿಂತ ಮುಂಚೆ) ಶಂಗಂ ಸಾಹಿತ್ಯವು ಇಂದಿನ ಸಂಕಲನ-ಸ್ವರೂಪವನ್ನು ಪಡೆದುಕೊಂಡಿತೆಂಬ ಅಭಿಮತವಿದೆ. ನೋ. ಷಣ್ಮುಗ ಪಿಳ್ಳೆ, ಎಂ., ಮತ್ತು ಡೇವಿಡ್ ಲುಡ್, ಇ., *ಕುರುಂದೊಗೈ*, (ಚೆನ್ನೈ, ೧೯೯೭, ಪ್ರ. ಮು.), ಪು. ೧.

೨೬. '*ಕಲಿತ್ತೊಗೈ*' ಮತ್ತು '*ಕುಱುಂದೊಗೈ*', ಪ್ರಣಯಗೀತೆ(ಅಹನಾ.)ಯ ಎರಡು ಪ್ರಮುಖ ಅಂಗಗಳು. ಇವುಗಳಲ್ಲಿ ಗುರುತಿಸಲಾದ ತಲೈವಿ(ನಾಯಿಕೆ)ಯ ಪ್ರಧಾನ ಅಂಗಾಂಗಗಳೆಂದರೆ ಅವಳ ಕೇಶ, ನೊಸಲು, ಬಾಹು ಮತ್ತು ದಂತಪಂಕ್ತಿ. ಅವಳ ಸ್ತನಗಳ ವರ್ಣನೆ ಅಪರೂಪಕ್ಕೆ ಬರುವುದೇನೋ ನಿಜ, ಆದರೆ ಅದರ ವಿಧಾನವು ವಿಶಿಷ್ಟ ಬಗೆಯಾದದ್ದು. ನಾಯಿಕೆಯ ತುಟಿ, ನಿತಂಬ, ತೊಡೆ, ಮೊದಲಾದವುಗಳ ಬಗ್ಗೆ ಉಲ್ಲೇಖ ಆಕಸ್ಮಿಕ ಮಾತ್ರ.

ತಲೈವಿಯ ಕೇಶವರ್ಣನೆಯನ್ನು ಮಳೆಮೋಡದ ಕಪ್ಪಿಗೆ, ಕತ್ತಲೆಯ ಮೊತ್ತಕ್ಕೆ, ನವಿಲುಗರಿಕಣ್ಣಿನ ಕಡುನೀಲಿ ಬಣ್ಣಕ್ಕೆ ಹೋಲಿಸಿದರೆ, ಅವುಗಳ ಮಾಟವನ್ನು ಅಲ್ಲೊಮ್ಮೆ-ಇಲ್ಲೊಮ್ಮೆ ಜೇನುಹುಟ್ಟಿಗೆ ಹೋಲಿಸಲಾಗಿದೆ. ಅವಳ ನೊಸಲನ್ನು ಒಮ್ಮೆ ಬಾಲಚಂದ್ರನಿಗೆ, ಮತ್ತೊಮ್ಮೆ ಪುಷ್ಪಕ್ಕೆ ಸಮೀಕರಿಸಲಾಗಿದೆ (ಕೇಶಕ್ಕೆ- *ಕಲಿತ್ತೊಗೈ* ೧೩, ೩೧, ೫೯: ೪೮, ೧೩೦; *ಕುಱುಂದೊಗೈ*, ೨೪೭, ೪೦೧ ಮುಂ.; ನೊಸಲಿಗೆ - *ಕಲಿತ್ತೊಗೈ* ೧೨, ೩೪; ೫೪, ೧೦೭; *ಕುಱುಂದೊಗೈ*, ೧೮). ಭುಜ-ಬಾಹುದ್ವಯಗಳನ್ನು ಮೇಲಿಂದ ಮೇಲೆ ಪ್ರಸ್ತಾಪಿಸುವ ಈ ಕವಿಗಳು, ಅವುಗಳನ್ನು ದುಂಡಗಿನ, ತೂಗಾಡುವ ಬೊಂಬೆಗೆ (*ಕುಱುಂದೊಗೈ* ೩೯೮; *ಕಲಿತ್ತೊಗೈ* ೩೮-೩೯, ೪೪), ಕಣ್ಣುಗಳನ್ನು ಅರಳಿದ ಮತ್ತು ನೀರುಂಡ ಪುಷ್ಪಕ್ಕೆ, (ವಿಶೇಷವಾಗಿ, ಕುವಳೈ ಪುಷ್ಪಕ್ಕೆ), ಕೆಂಟೈ ಮತ್ತು ಕಯಲ್ ಮೀನುಗಳಿಗೆ (*ಕುಱುಂದೊಗೈ* ೧೩, ೧೯, ೧೪೨, ೨೨೮; ೧೪, ೨೦೯; ೧೬, ೩೬೯ ಮತ್ತು ೩೯೯; *ಕಲಿತ್ತೊಗೈ* ೧೧೧; ೫೯; ೪೭; ೯೭;) ಹೋಲಿಕೆ ಮಾಡಲಾಗಿದೆ. ಮೊಗ್ಗಿನಂತಹ ದಂತಪಂಕ್ತಿಯನ್ನು (ಕಲಿತ್ತೊಗೈ ೫೯), ಹವಳದಂತಹ ತುಟಿಗಳನ್ನು (*ಕುಱುಂದೊಗೈ* ೨; *ಕಲಿತ್ತೊಗೈ*, ೫೪), ವಿಶಾಲವಾದ ನಿತಂಬವನ್ನು (ಕಲಿತ್ತೊಗೈ ೧೦೭) ಅಪರೂಪವಾಗಿ ಮಾತ್ರ ಈ ಕವಿಗಳು ಉಲ್ಲೇಖಿಸಿರುವರು. ಗಡಿ ಗುರುತಿಸಿಕೊಂಡು ಎದೆಯ ಮೇಲೆ ತುಳುಕಾಡುವ, 'ಶೆಪ್ಪು'ವಿನ (ಪರಿಪೂರ್ಣ ಕುಂಭ) ಆಕೃತಿಯೊಂದಿಗೆ ಸ್ಪರ್ಧೆಗಿಳಿಯುವಂತಹ, ಕಳಿತ 'ಕೋಂಕು' ಮೊಗ್ಗುಗಳನ್ನು ಮತ್ತು 'ವೇಂಗೈ' ಪುಷ್ಪಗಳನ್ನು ಸರಿಗಟ್ಟುವಂತಹ, ಕೃಷ್ಣವರ್ಣದಿಂದ ಹೊಳೆವ, ದೃಷ್ಟಿಬೊಟ್ಟು ಇಲ್ಲವೇ ಚಂದನದ ರೇಖಾಚಿತ್ರಗಳಿಂದ ಅಲಂಕರಿಸಿಕೊಂಡ ಸ್ತನಗಳನ್ನೂ (*ಕುಱುಂದೊಗೈ* ೧೦, ೬೯, ೭೨, ೮೧, ೧೨೦, ೩೩೬, ೩೪೭; ಕಲಿತ್ತೊಗೈ ೩, ೧೩, ೧೭, ೨೧, ೨೨, ೫೫, ೫೬, ೬೭, ೧೧೧, ೧೧೬, ಮುಂ.) ಈ ಕವಿಗಳು ಕಂಡಿದ್ದರು.

ಭಾಷಾ ತಳಹದಿಯ ಮೇಲೆ ಗುರುತಿಸಿಕೊಳ್ಳುವ ಸಂಪ್ರದಾಯ ದ್ರಾವಿಡರಲ್ಲಿ-ಅದರಲ್ಲೂ ದಕ್ಷಿಣ ಭಾರತದ ಬುಡಕಟ್ಟಿನ, ಗಿರಿಪ್ರದೇಶದ-ಜನಾಂಗಗಳಲ್ಲಿ ಒಂದಿಲ್ಲೊಂದು ಬಗೆಯಲ್ಲಿ ಆರಂಭ ಕಾಲದಿಂದಲೂ ರೂಢಿಯಲ್ಲಿತ್ತೆನ್ನುವುದು ಮುಖ್ಯ. ಈ ಜನಾಂಗಗಳಿಗೆ ಸ್ವಂತದ್ದೆಂಬ ಭಾಷೆ, ಜನಪದ, ರಾಜಕೀಯ ಪ್ರಜ್ಞೆ, ಸಮಾಜ, ಸಂಸ್ಕೃತಿ ಮತ್ತು ಭೂವಲಯಗಳಿದ್ದವು; ಆದರೆ ಇವರಲ್ಲಿ ಬಹುತೇಕರನ್ನು ಇತಿಹಾಸದ ತೆರೆಯಮರೆಗೆ ನೂಕಿದ್ದು ಅವರಿಗಿದ್ದ ಲಿಪಿಯ ಅಭಾವ... ತಮಿಳು ಭಾಷಿಕರು ತಮ್ಮ ಪರಿಧಿಯ ಹೊರ ಅಂಚಿನಲ್ಲಿದ್ದ ಉತ್ತರ(ವಡುಗರು)ದವರೊಡನೆ ಮಿತ್ರ-ಶತ್ರು ಸಂಬಂಧ ಹೊಂದಿದ ಸಂದರ್ಭದಲ್ಲಿ, ಈ ಎರಡು ಘಟಕಗಳ ನಡುವಣ ಪ್ರದೇಶವನ್ನು ಭೌಗೋಳಿಕವಾಗಿ ಹಂಚಿಕೊಂಡ 'ಲಿಪಿರಹಿತ' ಜನಾಂಗಗಳು (ಪ್ರಧಾನವಾಗಿ ಕೊಡವ, ತುಳುವ ಮತ್ತು ಕೊಂಕಣಿಗ) ಸುಮಾರು ಅರ್ಧ ಸಹಸ್ರ ವರ್ಷ ಕಾಲದ ಇತಿಹಾಸದಲ್ಲಿ ತಮ್ಮ ಸ್ವಂತಿಕೆಯನ್ನು ಮೆರೆದವು. ತಮಿಳು ಸಂಪರ್ಕಕ್ಕೊಳಗಾದರೂ ತಮಿಳಿಗೆ ಸಂಪೂರ್ಣ ಶರಣಾಗದ ಅಗ್ಗಳಿಕೆ ಇವರದ್ದಾಗಿತ್ತು. ಒಂದು ಬಗೆಯಲ್ಲಿ ಅಡ್ಡಗೋಡೆಯಾಗಿ ಮತ್ತೊಂದು ಬಗೆಯಲ್ಲಿ ಸಂಪರ್ಕಸೇತುವೆಯಾಗಿ ನಿಂತು, ಸ್ವಂತಿಕೆಯನ್ನು ಗಳಿಸಿಕೊಳ್ಳಲು ದ್ರಾವಿಡವೃಕ್ಷದ ಮತ್ತೊಂದು ಕೊಂಬೆಯಾದ ಕನ್ನಡಕ್ಕೆ ಅನುವು ಮಾಡಿಕೊಟ್ಟ ಶ್ರೇಯಸ್ಸು ಕಾವೇರೀ ಉದರದ ಈ ಜನಾಂಗಗಳಿಗೆ ಸಲ್ಲುವುದು. ಇಷ್ಟೊಂದು ಮಹತ್ವದ ಪಾತ್ರ ವಹಿಸಿದ ಈ ವಲಯಗಳನ್ನು ಸರಿಯಾಗಿ ಅರಿತುಕೊಳ್ಳುವ ಆವಶ್ಯಕತೆ ನಮಗಿದೆ, ಏಕೆಂದರೆ ಅವನ್ನು ಅರಿತುಕೊಂಡಾಗ ಮಾತ್ರ ತಮಿಳರ 'ವೇಂಗಡಂ' ಮತ್ತು ಮಾರ್ಗಕಾರನ 'ಕಾವೇರಿಯಿಂದಮಾ...'ದ ಸೀಮಾರೇಖೆಗಳು ನಮಗೆ ಅರ್ಥವಾಗುವುವು

# ೧

ಅಧ್ಯಾಯ-೨

# ಆರಂಭ ಕಾಲದ ದ್ರಾವಿಡ ಭಾಷಾ ನಕಾಶೆ

*ವಡವೇಂಗಡ ತೆನ್‌ಕುಮರಿ ಆಯಿಡೈ ತಮಿೞ್‌ಕೂಱುಂ ನಲ್ ಉಲಗತ್ತು*

*ಉತ್ತರದ ವೇಂಕಟ ದಕ್ಷಿಣದ ಕುಮರಿವರೆಗೆ ವಿಸ್ತರಿಸಿದ ತಮಿಳು ಭಾಷಿಕರ ಪವಿತ್ರ ಪ್ರದೇಶ.*

ನಕಾಶರಚನೆಯ ಉದ್ದೇಶ ಗಡಿಗಳನ್ನು ನಿರ್ಧರಿಸುವುದು. ಅದೊಂದು ಭೂಭಾಗದ ಸೀಮಾ ನಕಾಶೆಯಾಗಬಹುದು ಅಥವಾ ಆಂತರಿಕ ವಲಯಗಳದ್ದಾಗಬಹುದು. ಇಂತಹ ಕೆಲವು ನಕಾಶೆಗಳು ನಿಖರ ರೇಖೆಗಳನ್ನು ಪಡೆದಿದ್ದರೆ, ಇನ್ನು ಕೆಲವು ಜಾಳು-ಧೂಳಿನ ಸಂಕೇತಗಳನ್ನು ಮಾತ್ರ ಹೊಂದಿರುವುವು. ನಮ್ಮ ದೇಶದ ಇತಿಹಾಸದುದ್ದಕ್ಕೂ ರಚಿಸಿದ ಪದಬಂಧದ ನಕಾಶೆಗಳು ಪಟರೂಪ ಪಡೆದುಕೊಂಡದ್ದು ೧೯ನೆಯ ಶತಮಾನದಲ್ಲಿ ನಾವು ಪಾಶ್ಚಾತ್ತ್ಯರ ಸಂಪರ್ಕ ಹೊಂದಿದ ನಂತರ ಎಂದರೆ ತಪ್ಪಾಗಲಾರದು. ಜಂಬೂದ್ವೀಪ-ಭರತಖಂಡದ ಮಸುಕು-ಮಂಪರು ಪರಿಕಲ್ಪನೆ ನಮಗೆ ಅನಾದಿ ಕಾಲದಿಂದಲೂ ಇದ್ದುದೇನೊ ನಿಜವೇ, ಆದರೆ ಆ ವಿಶಾಲ ಭೂಖಂಡದ ಅಂಚು ಮತ್ತು ಆಂತರಿಕ ವಲಯಗಳ ಸ್ಪಷ್ಟತೆ ನಮಗೆ ಅಷ್ಟೇನೂ ಪ್ರಸ್ತುತವೆನಿಸಿರಲೇ ಇಲ್ಲ. ಪಟನಕಾಶೆಯನ್ನು ಅಳವಡಿಸಿಕೊಂಡ ನಂತರವೂ ಅಂಗುಳಪಟ್ಟಿಯ ಭೂಮಾಪನ, ಅಕ್ಷಾಂಶ-ರೇಖಾಂಶ ನಿರ್ದೇಶನ, ಪರಿಸರ ಘಟಕಗಳ ಸಮೀಕರಣ, ಈ ಮುಂತಾದವು ನಮ್ಮ ನಕಾಶೆಗಳ ಹೊರಗೆ ಉಳಿದದ್ದೇ ಹೆಚ್ಚು. ಈ ಕಾರಣ, ಒಂದೋ-ಎರಡೋ ಹೆಗ್ಗುರುತುಗಳನ್ನು ಸೂಚಿಸಿ, ಉಳಿದ ಸೀಮಾರೇಖೆಗಳನ್ನೆಲ್ಲ ಕಲ್ಪನೆಗೆ ಬಿಟ್ಟ ನಕಾಶೆಗಳನ್ನೇ ನಾವು ನಮ್ಮ ಇತಿಹಾಸ ಗ್ರಂಥಗಳಲ್ಲಿ ಹೆಚ್ಚು ಕಾಣುವೆವು.[1] ಈ ಹಿನ್ನೆಲೆಯಲ್ಲಿ ದಕ್ಷಿಣಭಾರತದ ಎರಡು ಭಾಷಾ ನಕಾಶೆಗಳನ್ನು ನಾವಿಲ್ಲಿ ಪರಿಶೀಲಿಸಬೇಕಾಗಿದೆ: ಇವುಗಳಲ್ಲಿ ಒಂದು, ಆರಂಭಕಾಲದ 'ತಮಿಳಗಂ' ನಕಾಶೆ; ಮತ್ತೊಂದು 'ಕನ್ನಡದೊಳ್ ಭಾವಿಸಿದ ಜನಪದ'ದ ನಕಾಶೆ. ನಮಗೆ ಪ್ರಸ್ತುತವಾದ ಎರಡನೆಯ ನಕಾಶೆಯನ್ನು ರೂಪಿಸಿಕೊಳ್ಳಲು ಮೊದಲ ನಕಾಶೆಯ ಸಮಗ್ರ ಕಲ್ಪನೆ ಅವಶ್ಯವೆಂಬುದು ನನ್ನ ಅನಿಸಿಕೆ. ಈ ಲೇಖನ ಆ ದಿಕ್ಕಿನೆಡೆ ಇಟ್ಟ ಒಂದು ಹೆಜ್ಜೆ.

**ಭಾಷಾ ನಕಾಶೆಯ ನಿರ್ಮಾಣ:**

ಭಾಷಾ ಆಧಾರದ ಮೇಲೆ ತನ್ನ ಜನಾಂಗದ ಭೂಮಿತಿಯನ್ನು ಕಂಡುಕೊಳ್ಳುವ ಕಾರ್ಯಕ್ಕೆ ತೊಲ್ ಕೈ ಹಾಕಲಿಲ್ಲ; ಕಾರಣ ಅವನ ಗ್ರಂಥದಲ್ಲೆಲ್ಲೂ 'ತಮಿಳಗಂ'ನ

ಪ್ರಸ್ತಾಪವನ್ನು ನಾವು ಕಾಣುವುದಿಲ್ಲ. ಆದರೂ ಭಾಷಾ ಅಡಿಗಟ್ಟಿನ ಮೇಲೆ ಗುರುತಿಸಿಕೊಂಡ ಭಾರತೀಯರಲ್ಲಿ ತಮಿಳರಿಗೆ ಅಗ್ರಸ್ಥಾನವಿರುವುದನ್ನು ನಾವು ನಿರ್ಲಕ್ಷಿಸುವಂತಿಲ್ಲ. ಪ್ರಾಕೃತ ಮತ್ತು ಸಂಸ್ಕೃತ ಭಾಷಿಕರಾರೂ ಮಾಡದಿದ್ದುದನ್ನು ತಮಿಳರು ಮಾಡಿ, ತಮ್ಮ ಭಾಷೆಯೊಂದಿಗೆ ಗುರುತಿಸಿಕೊಂಡದ್ದು ಒಂದು ಅಪೂರ್ವ ಘಟನೆ. ಇವರಿಗೆ ಸರಿಸುಮಾರು ಸಮಕಾಲೀನರಾದ ದೇಶದ ವಾಯವ್ಯ ಗಡಿಯಲ್ಲಿ ನೆಲೆಸಿದ್ದ ಗ್ರೀಕರೂ ಅರಾಮೈಕರೂ ಭಾಷೆಯ ತಳಹದಿಯ ಮೇಲೆ ಗುರುತಿಸಿಕೊಂಡದ್ದನ್ನು ಉದಾಹರಿಸಬಹುದು; ಆದರೆ, ಅಲ್ಪಸಂಖ್ಯಾತರೂ ಹೊರದೇಶದವರೂ ಆದ ಅವರಿಗೆ ತಮಿಳರಿಗಿದ್ದ ನಿಶ್ಚಿತ ಪ್ರಾದೇಶಿಕ ಮೇರೆಯಾಗಲೀ ಸಾಹಿತ್ಯ ಸಂಪತ್ತಾಗಲೀ ಇರಲಿಲ್ಲವೆಂಬುದು ನಿರ್ವಿವಾದ.

ಭಾಷಾ ತಳಹದಿಯ ಮೇಲೆ ಜನಾಂಗವನ್ನು ಗುರುತಿಸುವ ಗೊಡವೆಗೆ ಹೋಗದ ಸಂಸ್ಕೃತ ಭಾಷಿಕರು ಇವರನ್ನು ತಮಿಳರೆಂದು ಗುರುತಿಸದೇ 'ದ್ರಾವಿಡ'ರೆಂದು ಗುರುತಿಸಿದರು. ಆದರೆ ಪಾಲೀ-ಪ್ರಾಕೃತ ಜನಾಂಗ ಮತ್ತು ಆರಂಭಕಾಲದ ವಿದೇಶಿಯರು ಇವರನ್ನು ದಮಿಲ(ತಮಿಳ)ರೆಂದೇ ಸಂಬೋಧಿಸಿದರು. ಮೊದಲನೆಯದಕ್ಕೆ ಸಂಸ್ಕೃತ ಭಾಷೆಯ *ಮಹಾಭಾರತ*(ಭೀಷ್ಮಪರ್ವ)ವನ್ನೂ, ಕೆಲವು *ಪುರಾಣ*(ವಿಶೇಷವಾಗಿ *ಭಾಗವತ, ಬ್ರಹ್ಮಾಂಡ, ವಾಯು* ಮತ್ತು *ಮತ್ಸ್ಯ*)ಗಳನ್ನೂ, *ಬೃಹತ್‌ಸಂಹಿತಾ* ಮುಂತಾದ ಗ್ರಂಥಗಳಲ್ಲಿ ಬರುವ 'ದ್ರಾವಿಡ', 'ದ್ರಮಿಳ' ಪದಗಳನ್ನೂ, ಎರಡನೆಯದಕ್ಕೆ ಪಾಲೀ ಪಠ್ಯಗಳಲ್ಲಿ ಬರುವ 'ದಮಿಲ', 'ದಮಿಲರಠ್ಠ' ಮತ್ತು ಗ್ರೀಕರ ವರದಿಗಳಲ್ಲಿ ಕಾಣಿಸುವ 'ದೈಮಿರಿಸ್', 'ಲಿಮಿರಿಸ್' ಮುಂತಾದ ಪದಗಳನ್ನು ಉದಾಹರಿಸಲಾಗುವುದು.[೨] ಒಂಬತ್ತನೆಯ ಶತಮಾನದಲ್ಲಿ ಮಾರ್ಗಕಾರನು 'ಕನ್ನಡದೊಳ್ ಭಾವಿಸಿದ ಜನಪದ'ವೆಂಬ ಭಾಷಾ ಆಧಾರಿತ ವಲಯವನ್ನು ಸಂಕೇತಿಸಿ, ನಾಡಿನ ಇತಿಹಾಸದಲ್ಲಿ ಕನ್ನಡಿಗರಿಗೆ ಎರಡನೆಯ ಸ್ಥಾನವನ್ನು ದೊರಕಿಸಿಕೊಟ್ಟನು. ಸುಮಾರು ಒಂಬತ್ತು ಶತಮಾನಗಳಷ್ಟು ಅಂತರವಿದ್ದರೂ ಈ ಎರಡು 'ಪ್ರಥಮ'ಗಳು ದ್ರಾವಿಡ ಭಾಷೆ, ಜನಾಂಗ ಮತ್ತು ಪ್ರದೇಶಕ್ಕೆ ಸಂಬಂಧಪಟ್ಟವುಗಳೆಂಬುದು ಗಮನಾರ್ಹ.

ದಾಖಲಿತ ಉಲ್ಲೇಖಗಳನ್ನು ಗಮನಿಸಿದರೆ, ನಮ್ಮ ನೆರೆಯವರಾದ 'ಆಂಧ್ರ'ದವರಿಗೆ ಕನ್ನಡಿಗರಿಗಿಂತ ಹೆಚ್ಚು ನಿಖರವಾದ ಪುರಾತನತೆ ಇದ್ದುದನ್ನು ಗುರುತಿಸಲು ಹೆಚ್ಚು ಕಷ್ಟವಾಗದು;[೩] ಆದರೆ ಅವರು 'ತೆಲಗು' ಪದದಿಂದ ತಮ್ಮನ್ನು ತಾವು ಗುರುತಿಸಿಕೊಳ್ಳತೊಡಗಿದ್ದು ಬಹುಕಾಲದ ನಂತರವೇ. ಇದು ಏನೇ ಇರಲಿ, ಭಾಷಾ ತಳಹದಿಯ ಮೇಲೆ ಗುರುತಿಸಿಕೊಳ್ಳುವ ಸಂಪ್ರದಾಯ ದ್ರಾವಿಡರಲ್ಲಿ-ಅದರಲ್ಲೂ ದಕ್ಷಿಣ ಭಾರತದ ಬುಡಕಟ್ಟಿನ, ಗಿರಿಪ್ರದೇಶದ-ಜನಾಂಗಗಳಲ್ಲಿ ಒಂದಿಲ್ಲೊಂದು ಬಗೆಯಲ್ಲಿ ಆರಂಭ

ಕಾಲದಿಂದಲೂ ರೂಢಿಯಲ್ಲಿತ್ತೆನ್ನುವುದು ಮುಖ್ಯ. ಈ ಜನಾಂಗಗಳಿಗೆ ಸ್ವಂತದ್ದೆಂಬ ಭಾಷೆ, ಜನಪದ, ರಾಜಕೀಯ ಪ್ರಜ್ಞೆ, ಸಮಾಜ, ಸಂಸ್ಕೃತಿ ಮತ್ತು ಭೂವಲಯಗಳಿದ್ದವು; ಆದರೆ ಇವರಲ್ಲಿ ಬಹುತೇಕರನ್ನು ಇತಿಹಾಸದ ತೆರೆಯಮರೆಗೆ ನೂಕಿದ್ದು ಅವರಿಗಿದ್ದ ಲಿಪಿಯ ಅಭಾವ.

ಹಾಗೆ ನೋಡಿದರೆ, ಬಹುಶಃ ತಮಿಳರನ್ನೂ ಒಳಗೊಂಡು, ಕ್ರಿಸ್ತಶಕೆಯ ಹೊರಳಿನಲ್ಲಿ (ಕ್ರಿ.ಪೂ. ೩ರಿಂದ ಕ್ರಿ.ಶ. ೩ರವರೆಗೂ), ನಮ್ಮ ದೇಶದ ಯಾವುದೇ ಪ್ರಧಾನ ಭಾಷಿಕರಿಗೂ ತಮ್ಮದೇ ಆದ ಲಿಪಿ ಇರಲಿಲ್ಲ - ಈ ಕಾರಣದಿಂದಾಗಿ, ಉತ್ತರದ ಸಿಂಧುವಿನಿಂದ ದಕ್ಷಿಣದ ಕುಮರಿಯವರೆಗೂ ಏಕೈಕ ಲಿಪಿಯಾಗಿ ಬ್ರಾಹ್ಮೀ ಪ್ರಸಾರಗೊಳ್ಳಲು ಸಾಧ್ಯವಾಯಿತು. ನಮ್ಮ ನಾಡಿನ ವಾಯುವ್ಯ ಭಾಗದಲ್ಲಿ ಬಳಕೆಗೆ ಬಂದ ಗ್ರೀಕ್, ಅರ್ಮೈಕ್ ಮತ್ತು ಖರೋಷ್ಠಿ ಲಿಪಿಗಳನ್ನು ದೇಸೀಯವೆನ್ನಲು ಕೆಲವು ಅನುಮಾನಗಳು ಅಡ್ಡ ಬರುವುವು. ಆದರೆ ಕ್ರಿ.ಪೂ. ೨ನೆಯ ಶತಮಾನದ ತಮಿಳುನಾಡಿನಲ್ಲಿ ಬಳಕೆಯಲ್ಲಿದ್ದ ತಮಿಳು-ಬ್ರಾಹ್ಮೀ ಲಿಪಿ ದೇಶೀಯದ್ದಲ್ಲವೆನ್ನಲು ಅನುಮಾನಕ್ಕೆ ಎಡೆ ಇಲ್ಲ.[೪] ತಮಿಳಿನ ದೇಸಿ ಪ್ರಭೇದವಾದ 'ವಟ್ಟೆಟುತ್ತು' ಲಿಪಿ ಬಳಕೆಗೆ ಬಂದ ಕಾಲ ಕ್ರಿ.ಶ. ೪ನೆಯ ಶತಮಾನ; ಇದೇ ಕಾಲದಲ್ಲಿ ಕನ್ನಡವೂ ಪ್ರಬುದ್ಧ ಲಿಪಿಯಾಗಿ ಬೆಳೆದುನಿಂತು ಪ್ರಬುದ್ಧ ಭಾಷೆಯ ವಾಹನವಾಗಲು ಸನ್ನದ್ಧಗೊಳ್ಳತೊಡಗಿತ್ತು.

ತಮಿಳು ಭಾಷಿಕರು ತಮ್ಮ ಪರಿಧಿಯ ಹೊರ ಅಂಚಿನಲ್ಲಿದ್ದ ಉತ್ತರ(ವಡುಗರು) ದವರೊಡನೆ ಮಿತ್ರ-ಶತ್ರು ಸಂಬಂಧ ಹೊಂದಿದ ಸಂದರ್ಭದಲ್ಲಿ, ಈ ಎರಡು ಘಟಕಗಳ ನಡುವಣ ಪ್ರದೇಶವನ್ನು ಭೌಗೋಳಿಕವಾಗಿ ಹಂಚಿಕೊಂಡ 'ಲಿಪಿರಹಿತ' ಜನಾಂಗಗಳು (ಪ್ರಧಾನವಾಗಿ ಕೊಡವ, ತುಳುವ ಮತ್ತು ಕೊಂಕಣಿಗ) ಸುಮಾರು ಅರ್ಧ ಸಹಸ್ರ ವರ್ಷ ಕಾಲದ ಇತಿಹಾಸದಲ್ಲಿ ತಮ್ಮ ಸ್ವಂತಿಕೆಯನ್ನು ಮೆರೆದವು. ತಮಿಳು ಸಂಪರ್ಕಕ್ಕೊಳಗಾದರೂ ತಮಿಳಿಗೆ ಸಂಪೂರ್ಣ ಶರಣಾಗದ ಅಗ್ಗಳಿಕೆ ಇವರದ್ದಾಗಿತ್ತು. ಒಂದು ಬಗೆಯಲ್ಲಿ ಅಡ್ಡಗೋಡೆಯಾಗಿ ಮತ್ತೊಂದು ಬಗೆಯಲ್ಲಿ ಸಂಪರ್ಕಸೇತುವೆಯಾಗಿ ನಿಂತು, ಸ್ವಂತಿಕೆಯನ್ನು ಗಳಿಸಿಕೊಳ್ಳಲು ದ್ರಾವಿಡವೃಕ್ಷದ ಮತ್ತೊಂದು ಕೊಂಬೆಯಾದ ಕನ್ನಡಕ್ಕೆ ಅನುವು ಮಾಡಿಕೊಟ್ಟ ಶ್ರೇಯಸ್ಸು ಕಾವೇರೀ ಉದರದ ಈ ಜನಾಂಗಗಳಿಗೆ ಸಲ್ಲುವುದು. ಇಷ್ಟೊಂದು ಮಹತ್ವದ ಪಾತ್ರ ವಹಿಸಿದ ಈ ವಲಯಗಳನ್ನು ಸರಿಯಾಗಿ ಅರಿತುಕೊಳ್ಳುವ ಆವಶ್ಯಕತೆ ನಮಗಿದೆ, ಏಕೆಂದರೆ ಅವನ್ನು ಅರಿತುಕೊಂಡಾಗ ಮಾತ್ರ ತಮಿಳರ 'ವೇಂಗಡಂ' ಮತ್ತು ಮಾರ್ಗಕಾರನ 'ಕಾವೇರಿಯಿಂದಮಾ...'ದ ಸೀಮಾರೇಖೆಗಳು ನಮಗೆ ಅರ್ಥವಾಗುವುವು.

**ಭಾಷೆ ಮತ್ತು ಜನಾಂಗ - ತೊಲ್ಕಾಪ್ಪಿಯನಾರ್ ಚಿಂತನೆಗಳು:**

**ತಮಿಳು ಮತ್ತು ಸೆನ್ದಮಿಟ್:** ಒಂದು ಸಾವಿರದ ಆರುನೂರಾ ಹತ್ತು ಪದ್ಯಗಳನ್ನೊಳಗೊಂಡ ತೊಲ್ಕಾಪ್ಪಿಯಮ್‌ನಲ್ಲಿ ಮೂರಕ್ಕಿಂತ ಹೆಚ್ಚು ಬಾರಿ 'ತಮಿಳು' ಪದವನ್ನು ಬಳಸಿಲ್ಲ. ಇವುಗಳಲ್ಲಿ ಒಂದು ಪದರಚನೆಗೆ ಲಕ್ಷ್ಯವಾಗಿ, ಇನ್ನೆರಡು 'ಸೆನ್ದಮಿಟ್' (ಸೆನ್ತಮಿಳ್) ವ್ಯಾಖ್ಯಾಂಗವಾಗಿ ಬರುವುವು.[೫] ಧ್ವನಿನಿಯಮಗಳನ್ನು ಚರ್ಚಿಸುವಾಗ 'ಅ'ಕಾರಾಂತ್ಯ ಪದಕ್ಕೆ 'ಅಕ್ಕು' ಮಧ್ಯವರ್ತಿಯಾಗುವುದನ್ನು ತಿಳಿಸುತ್ತಾ ಈ ವೈಯಾಕರಣಿ ಮೊಟ್ಟಮೊದಲು 'ತಮಿಳು' ಪದವನ್ನು ಬಳಸುವನು. ಇದು ಭಾಷಾ ವೈಲಕ್ಷಣ್ಯಕ್ಕೆ ಸಂಬಂಧಿಸಿದ ಆನುಷಂಗಿಕ ಉಲ್ಲೇಖ ಮಾತ್ರ. ಆದರೆ ಸೆನ್ದಮಿಳ್‌ಗೆ ಅವನು ಕೊಡುವ ಎರಡು ನಿದರ್ಶನಗಳು ಇದಕ್ಕಿಂತ ಅರ್ಥಪೂರ್ಣವಾದ ಚರ್ಚೆಯೆಡೆಗೆ ನಮ್ಮನ್ನು ಕೊಂಡೊಯ್ಯುವುವು.[೬] ತಮಿಳು ಸಾಹಿತ್ಯ ಭಂಡಾರವನ್ನು 'ಇಯಲ್‌ಸೊಲ್', 'ತಿರಿಸೊಲ್', 'ತಿಶೈಸೊಲ್' ಮತ್ತು 'ವಡಸೊಲ್'ಎಂಬ ನಾಲ್ಕು ವರ್ಗಗಳಡಿ ತಂದು, ಇವುಗಳಲ್ಲಿ ಶಬ್ದಾರ್ಥ ನಿರ್ವಚನ ನಿಯಮಗಳನ್ನು ಎಳ್ಳಷ್ಟೂ ಉಪೇಕ್ಷಿಸದ 'ಇಯಲ'ನ್ನು ಅವನು ನಿದರ್ಶಿಸುವನು. ಇದು ಸೆನ್ (ಶುದ್ಧ ಪವಿತ್ರ) ತಮಿಳು ಭಾಷೆಯ ಕಟ್ಟಳೆಗಳನ್ನು ಅತಿ ನಿಷ್ಠುರವಾಗಿ ಪಾಲಿಸಿಕೊಂಡು ಬಂದ ಪ್ರಭೇದವೆಂಬುದು ಅವನ ಅಭಿಮತ. 'ತಿಶೈಸೊಲ್' ಹನ್ನೆರಡು ಬಗೆಯ ದೇಸಿ ನುಡಿಗಟ್ಟಿಗೆ ಸಂಬಂಧಿಸಿದ್ದು; 'ವಡಸೊಲ್' ಸಂಸ್ಕೃತದಿಂದ ಪಡೆದುಕೊಂಡ ಪದಗಳನ್ನು ತಮಿಳಿನ ಧ್ವನಿ ನಿಯಮದಡಿ ತಂದುಕೊಳ್ಳುವುದಕ್ಕೆ ಸಂಬಂಧಿಸಿದ್ದು. ಸುಮಾರು ಒಂಬತ್ತು ಶತಮಾನಗಳ ನಂತರ ಸರಿಸುಮಾರು ಇದೇ ಬಗೆಯ ಪ್ರಯತ್ನವನ್ನು ಮಾರ್ಗಕಾರನೂ ಮಾಡಿದನು. ಅವನೂ ತಿರುಳ್ಗನ್ನಡನಾಡಿನ (*ಕರಾಮಾ* ೧-೩೨) ದೇಸಿ ವೈವಿಧ್ಯತೆಯ (೪೬-೪೭), ಸಂಸ್ಕೃತ ಪದಗಳನ್ನು ಕನ್ನಡಕ್ಕೆ ಅಳವಡಿಸಿಕೊಳ್ಳುವ (೫೧-೬೧) ವಿಚಾರಗಳನ್ನು ಮಂಡಿಸಿದನು. ಆದರೆ ಮಾರ್ಗಕಾರನ ಚರ್ಚೆ ಇಷ್ಟಕ್ಕೇ ನಿಲ್ಲದೇ 'ಕನ್ನಡದೊಳ್ ಭಾವಿಸಿದ ಜನಪದ', ಅದರ ಸ್ಥೂಲ ಸ್ವರೂಪ, ದೇಶಿಗರ ಗುಣಾವಗುಣ, ಈ ಮೊದಲಾದ ವಿಷಯಗಳನ್ನು ಸೇರಿಸಿಕೊಂಡು *ಕವಿರಾಜಮಾರ್ಗ*ದ ಹರವನ್ನು ವಿಸ್ತರಿಸಿತು.

**ಜನಾಂಗದ ವಿಶಿಷ್ಟ ಹೆಸರು:**

'ತಮಿಳಗಂ'ನ ಗಡಿ ಗುರುತಿಸುವ ಗೊಡವೆಗೆ ಹೋಗದ ತೊಲ್ ಒಂದು ಜನಾಂಗ ಯಾವ ಆಧಾರದ ಮೇಲೆ ತನ್ನದೆಂಬ ಹೆಸರನ್ನು ಪಡೆದುಕೊಳ್ಳುವುದು? ಎಂಬ ಪ್ರಶ್ನೆಯನ್ನೆತ್ತಿದನು. ಈ ಮಹತ್ವದ ಪ್ರಶ್ನೆಯನ್ನೆತ್ತಿದ ಭಾರತೀಯ ವಾಙ್ಮಗಳಲ್ಲಿ ಇವನೇ

ಮೊದಲಿಗನೆಂದು ಕಾಣುವುದು. "ಚಿಂತಿಸಿ ನೋಡಲಾಗಿ, ಬೇರೆ ಬೇರೆ ಜನಾಂಗಗಳು ಅವರವರ ಪ್ರಕೃತಿ ಪರಿಸರ ಮತ್ತು ಪಾರಂಪರಿಕ ಕಸಬುಗಳಿಗನುಗುಣವಾಗಿ ತಮ್ಮ ಹೆಸರುಗಳನ್ನು ಪಡೆದುಕೊಳ್ಳುವರು", ಎಂಬ ಮಾತನ್ನು ಅಹಂ ಪ್ರಭೇದವನ್ನು ಚರ್ಚಿಸುವಾಗ ಅವನು ಸ್ಪಷ್ಟಪಡಿಸಿದನು.[೭] ಅಂದರೆ ಒಂದು ಜನಾಂಗವು ಮತ್ತೊಂದಕ್ಕಿಂತ ಭಿನ್ನವೆನಿಸಲು, ಅವರು ನಿಂತ ನೆಲ ಮತ್ತು ಕೈಕೊಂಡ ಕಸಬುಗಳು ಉಳಿದೆಲ್ಲವುಗಳಿಗಿಂತಲೂ -ಭಾಷೆ ಮತ್ತು ಧರ್ಮವನ್ನು ಒಳಗೊಂಡು-ಮುಖ್ಯವೆಂಬುದು ಅವನ ಮಾತಿನ ಇಂಗಿತ. ಇನ್ನೂ ಒಂದು ಹೆಜ್ಜೆ ಮುಂದುವರಿದು, ಇವು ಸಾಮಾಜಿಕ ಸ್ತರಗಳನ್ನು ಸೃಷ್ಟಿಸುವ ಪ್ರಬಲ ಶಕ್ತಿಗಳೆಂದು ಅವನು ಪ್ರತಿಪಾದಿಸಿದನು.

**ತಿಣೈ ಸಿದ್ಧಾಂತ:**

ಜನಾಂಗವನ್ನು ಭೌಗೋಳಿಕ ಮತ್ತು ಔದ್ಯಮಿಕ ಅಡಿಗಲ್ಲಿನ ಮೇಲೆ ನಿಲ್ಲಿಸಲು ತೊಲ್ ಒಂದು ವಿನೂತನ ಸಿದ್ಧಾಂತವನ್ನು ರೂಪಿಸಿ ಅದನ್ನು 'ತಿಣೈ' ಪದದಿಂದ ಪ್ರಸಾರಕ್ಕೆ ತಂದ. ಸ್ವತಃ ಈ ಪದವನ್ನು ಅವನು ಅರ್ಥೈಸಲಿಲ್ಲ, ಆದರೆ ಅದು 'ಭೂಮಿ', 'ಪ್ರದೇಶ', 'ಪರಿಸರ'ವನ್ನು ಪ್ರಧಾನವಾಗಿ ಸೂಚಿಸುವ ಪದವೆಂದು ಅಭಿಮತವಿದೆ. 'ತಿಣೈ' ಅಡಿ ಐದು ಆಂತರಿಕ ಪ್ರದೇಶಗಳನ್ನು ಅವನು ಹೆಸರಿಸಿದನು. ಅವು 'ಮುಲ್ಲೈ', 'ಕುಱಿಂಜ್ಞಿ', 'ಪಾಲೈ', 'ಮರುದಂ' ಮತ್ತು 'ನೆಯ್ದಲ್'. ಇವು ಕ್ರಮವಾಗಿ ಕಾಡು, ಗಿರಿ, ಮರುಭೂಮಿ, ಕೃಷಿ ಮತ್ತು ಕರಾವಳಿ ಪ್ರದೇಶಗಳನ್ನು ಪ್ರತಿನಿಧಿಸುವುವು. ಪಂಚ ತಿಣೈಗಳನ್ನು ಹೆಸರಿಸಿದರೂ ವಾಸ್ತವವಾಗಿ ತೊಲ್ ಪ್ರತಿಪಾದಿಸಿದ್ದು ಇವುಗಳಲ್ಲಿ ನಾಲ್ಕನ್ನು ('ನನಿಲವರ್') ಮಾತ್ರ. 'ಪಾಲೈ' ಎಂಬುದು 'ತಮಿಳಗಂ' ಪ್ರಕೃತಿ ನಿಯಮಕ್ಕೆ ಸಲ್ಲದ ಪರಿಸರ; ಏಕೆಂದರೆ ಮರುಭೂಮಿಯನ್ನು ಸಮಗ್ರವಾಗಿ ಪ್ರತಿನಿಧಿಸುವ ಪ್ರದೇಶ ಇಲ್ಲಿಲ್ಲ. ಈ ಕಾರಣ ಪಾಲೈ ಅರ್ಥವನ್ನು ಮಾರ್ಪಡಿಸಿ, ಪಾಳುಭೂಮಿ ಋತುಚಕ್ರದಲ್ಲಿ ಬೆಂಡಾದ, ಹಸಿರು ಕಳೆದುಕೊಂಡ, ಒಣ ಭೂಮಿ ಎಂದು ವಿವರಿಸಿ, ಇದು ಉಳಿದ ನಾಲ್ಕು ತಿಣೈಗಳಲ್ಲಿ ಒಂದರಲ್ಲಿ ಕಾಣಿಸಿಕೊಳ್ಳಬಹುದಾದ ಪ್ರದೇಶವೆಂದು ನಿರ್ಣಯಿಸಲಾಗಿದೆ.[೮] ಈ ಪ್ರಕೃತಿ ದೃಶ್ಯಗಳು (ಲ್ಯಾಂಡ್‌ಸ್ಕೇಪ್) ತಮಿಳುನಾಡಿನ ಸಹಜ ಭೂವಲಯಗಳನ್ನು ಪ್ರತಿಬಿಂಬಿಸುವುವು ಮಾತ್ರವಲ್ಲದೆ ಭ್ರೂಣಾವಸ್ಥೆಯ (ಪ್ರೋಟೋ) ದ್ರಾವಿಡ - ವಿಶೇಷವಾಗಿ ತಮಿಳು ಜನಾಂಗ - ಗಿರಿಕಾನನದಿಂದ ಕೃಷಿಯೋಗ್ಯ ಪ್ರದೇಶದೆಡೆಗೆ, ಅಲ್ಲಿಂದ ಕರಾವಳಿ ಪ್ರದೇಶಕ್ಕೆ ವ್ಯಾಪಿಸಿಕೊಂಡದ್ದನ್ನೂ ನವಶಿಲಾಯುಗದ ಬೇಟೆಗಾರನು ಪಶುಪಾಲನೆಯೆಡೆಗೆ ಹೆಜ್ಜೆ ಹಾಕುತ್ತಾ ಮುಂದೆ ಕೃಷಿಕನಾಗಿ - ಮೀನುಗಾರನಾಗಿ ನೆಲೆನಿಂತದ್ದನ್ನೂ ಪ್ರಾಕ್ತನ ಶಾಸ್ತ್ರಜ್ಞರು ಮತ್ತು ಮಾನವಶಾಸ್ತ್ರಜ್ಞರು ಗುರುತಿಸಿರುವರು.[೯]

**ತಿಣೈಯ ಮೂರು ಪ್ರಧಾನ ಗುಣಗಳು:**

'ಮುದಲ್' (ವಿಶಿಷ್ಟ ಪ್ರಧಾನ), 'ಕರು' (ಭೌತಿಕ, ಭೌಗೋಳಿಕ) ಮತ್ತು 'ಉರಿ' (ಸಮಾನಾಂತರ, ಪರಸ್ಪರ) ಎಂಬವುಗಳನ್ನೆಲ್ಲ 'ಉಲಗಮ್' (ಪ್ರಪಂಚ, ಲೋಕ, ವಿಶ್ವ) ಎಂದು ವ್ಯಾಖ್ಯಾನಿಸಿ, ಈ ಪ್ರತಿಯೊಂದು ಪ್ರಪಂಚದ ಜನಾಂಗದ ಆಹಾರ, ದೈವ, ಸಸ್ಯಜಾತಿ, ಪ್ರಾಣಿವರ್ಗ, ಕಸಬು, ಅವರವರಿಗೇ ವಿಶಿಷ್ಟವಾದವುಗಳಾದುದರಿಂದ, ಅವರನ್ನು 'ತಿಣೈನಿಲೈಪೆಯರ್' (ತಿಣೈಯಲ್ಲಿ ಉದ್ಭವಿಸಿದವರು) ಎಂದು ಭಾವಿಸುವುದು ಯೋಗ್ಯವೆಂದು ತೊಲ್ ಸೂಚಿಸಿದನು. ಅಂದರೆ, ಒಂದು ಜನಾಂಗವನ್ನು ರೂಪಿಸುವ ಪ್ರಧಾನ ಹೇತು ಪ್ರಕೃತಿ ಅಥವಾ ಪರಿಸರ ಎಂಬುದು ಇದರ ಅರ್ಥ. ಇದಕ್ಕೆ ಉದಾಹರಣೆಯಾಗಿ ತೊಲ್ ಗೋವಳ(ಆಯರ್)ರನ್ನು ಮತ್ತು ಬೇಡರನ್ನು (ವೇಟ್ಟುವರ್) ಹೆಸರಿಸಿದನು. ತಿಣೈಗಳ ಜನಾಂಗಗಳನ್ನೆಲ್ಲ ಅವರವರ ವಿಶಿಷ್ಟ ಹೆಸರುಗಳಿಂದ ತೊಲ್ ಗುರುತಿಸುವ ಆವಶ್ಯಕತೆಯನ್ನು ಕಾಣಲಿಲ್ಲ; ಆದರೆ ನಂತರ ಕಾಲದ ಅವನ ಶಿಷ್ಯವರ್ಗವು (ಪ್ರಧಾನವಾಗಿ ಇಳಂಪು ಮತ್ತು ನಚ್ಚಿ ವ್ಯಾಖ್ಯಾನಕಾರರು.) ಈ ಪ್ರಶ್ನೆಯನ್ನು ಅತಿ ತೀಕ್ಷ್ಣವಾಗಿ ಪರಿಗಣಿಸಿ, ಸಮಗ್ರ ಯಾದಿಯೊಂದನ್ನು ಸಿದ್ಧಪಡಿಸಿದರು. ಶಂಗಂ ಕವಿಗಳೂ ಇದನ್ನು ಅಷ್ಟೇ ಗಂಭೀರವಾಗಿ ಪರಿಗಣಿಸಿ, ನದಿ ದಡದಿಂದ ದೂರ ನೆಲಸಿದ್ದ ಇಂತಹ ಜನಾಂಗಗಳಲ್ಲಿ ಪರತದವರ್, ಮರವರ್, ಪೂಲಿಯರ್, ಕೋಶರ್, ಆವಿಯರ್, ಓವಿಯರ್, ವೆಟುರ್, ಅರುವಾಳರ್, ಅಂಟರ್, ಕಳವರ್ ಮುಂತಾದವರನ್ನು ಗುರುತಿಸಿದರು.[೧೮]

**ವರ್ಣ-ವರ್ಗ ಸಂಗಮ-ಸಂಕರ(?):**

ವರ್ಣ ಮತ್ತು ವರ್ಗ ಸಂಕರವು ವೈದಿಕರನ್ನು ಒಂದು ಬಗೆಯ ಚಿಂತನೆಗೀಡುಮಾಡಿದರೆ ತೊಲ್‌ನನ್ನು ಮತ್ತೊಂದು ಬಗೆಯ ಚಿಂತನೆಗೆ ಹಚ್ಚಿತೆಂದು ಕಾಣುವುದು. ಜನಾಂಗಗಳಿಗೆ ವಿಶಿಷ್ಟವೆನಿಸಿದ ಕಸುಬುಗಳು ಮತ್ತು ಪರಿಸರಗಳು ಒಂದರಲ್ಲೊಂದು ಬೆರಕೆಗೊಳ್ಳಲು ಸಾಧ್ಯವೇ ಎಂಬ ಪ್ರಶ್ನೆಗೆ ಉತ್ತರವಾಗಿ 'ಒಂದು ಜನಾಂಗದ ಕಸಬುಗಳು ಮತ್ತೊಂದು ಜನಾಂಗದ ಕಸಬುಗಳೊಡನೆ ಬೆರೆಯಬಹುದು, ಆದರೆ ಒಂದು ಪ್ರದೇಶದ ವಿಶೇಷತೆಗಳು ಮತ್ತೊಂದರಲ್ಲಿ ಬೆರೆತುಕೊಳ್ಳಲು ಸಾಧ್ಯವಾಗದು' ಎಂದು ಅವನು ಸ್ಪಷ್ಟಪಡಿಸಿದನು. ಆದರೂ 'ತಿಣೈಮಯಕ್ಕಮ್'ನ ಅಡಿ, ಈ ಸಿದ್ಧಾಂತವನ್ನು ಸ್ವಲ್ಪ ಮಾರ್ಪಡಿಸಿ, ಪ್ರಕೃತಿ ನಿಯಮಗಳು ಭಂಗಗೊಂಡಾಗ, ಅಥವಾ ಅವನ್ನು ಭಂಗಗೊಳಿಸಿದಾಗ, ತಿಣೈಗಳ ನೈಜ ಸ್ಥಿತಿಗಳಲ್ಲಿಯೂ ಬದಲಾವಣೆಗಳಾಗುವ ಸಾಧ್ಯತೆಗಳಿಲ್ಲದಿಲ್ಲವೆಂದು ಅವನು ಪ್ರಕೃತಿ ಸಂಕರಕ್ಕೆ ಎಡೆಮಾಡಿಕೊಟ್ಟನು.[೧೯] ನಿಸರ್ಗ ಸಹಜ ನಿಯಮಗಳನ್ನು ಉಲ್ಲಂಘಿಸದೆ ಭೂಪ್ರದೇಶಗಳು (ಆಂತರಿಕ ಘಟಕಗಳು)

ಮಾರ್ಪಾಟಾಗಲಾರವು ಎಂಬ ಅವನ ನಿರ್ಣಯ ಎಷ್ಟು ಮಹತ್ವದ್ದೋ, ಜೀವಂತ ಜನಾಂಗದ ಪ್ರಗತಿಗೆ ಕಸಬುಗಳ ಕೊಡುಕೊಳ್ಳುವಿಕೆಯೂ ಅಷ್ಟೇ ಅವಶ್ಯವೆಂಬ ಅವನ ಸಾಮಾಜಿಕ ಸಿದ್ಧಾಂತ ಮಹತ್ವದ್ದಾಗಿದೆ. ಜಾತಿಸಂಕರದ ಬಗ್ಗೆ ಅವನು ಹೆಚ್ಚು ತಲೆ ಕೆಡಿಸಿಕೊಳ್ಳಲಿಲ್ಲ, ಏಕೆಂದರೆ ಅವನ ದೃಷ್ಟಿಯಲ್ಲಿ ಸಮಾಜ ದೃಢತೆ ಪಡೆದುಕೊಳ್ಳುವುದು ಪ್ರಕೃತಿ ಮತ್ತು ಕಸಬುಗಳಿಂದ, ಹುಟ್ಟಿನ ಹಕ್ಕಿನಿಂದಲ್ಲ. ತೊಲ್‌ನ ಈ ಸಿದ್ಧಾಂತವು ಆನಂತರ ಕಾಲದ ಚಿಂತಕರ ವಿಶೇಷ ಗಮನವನ್ನು ಸೆಳೆದು, ವೃತ್ತಿಪರಿವರ್ತನೆಗಳ(ಸಂಕರ?) ಬಗೆಯನ್ನು ಗುರುತಿಸಲು ಪ್ರಚೋದನೆ ಒದಗಿಸಿತೆಂದು ಕಾಣುವುದು. *ಪೊರುನರ್‌ಆಟ್ರುಪಡ್ಡೆ* ಮತ್ತು *ಮಲೈಪಡುಕಡಾಮ್* ಅಡಿ ಬರುವ ಒಂದು ಸುಂದರ ಚಿತ್ರವು ಈ ನಿಯಮವನ್ನು ಸಮರ್ಥವಾಗಿ ಪ್ರತಿಬಿಂಬಿಸಬಹುದೆನಿಸುವುದು :[೧೨]

> 'ಗಿರಿಜನರ ವಿಶಿಷ್ಟ ಹಾಡುಗಳನ್ನು ಮೀನುಗಾರರು ಗುಣುಗುಣಿಸುವರು. ಕರಾವಳಿ ಜನರ ಹೂಮಾಲೆಗಳನ್ನು ಗಿರಿಜನರು ಧರಿಸುವರು. ಬೆಟ್ಟ ಪ್ರದೇಶದ ಒಕ್ಕಲಿಗರ ಪದಗಳನ್ನು ಕುರುಬರು ಹಾಡುವರು. ಹುಲ್ಲುಗಾವಲಿನಲ್ಲಿ ಅರಳುವ ಹೂವಿನ ಸೊಬಗನ್ನು ಒಕ್ಕಲು ಮಕ್ಕಳು ಶ್ಲಾಘಿಸುವರು. ಹೊಲದಲ್ಲಿ ಬಿಟ್ಟ ತೆನೆಗಳಿಗೆ ಕಾಡುಕೋಳಿ ಕೊಕ್ಕನ್ನಿಕ್ಕುವುದು. ಕಾಡು ಜೋಳದ ತೆನೆಯನ್ನು ಕೇರಿಯ ಕೋಳಿ ಕುಕ್ಕಿ ಹೆಕ್ಕುವುದು. ಬೆಟ್ಟದ ಮಂಗ ಉಪ್ಪುನೀರಿನ ಸಮುದ್ರದಲ್ಲಿ ಮಿಂದು ಆನಂದಿಸುವುದು. ಲವಣಮಿಶ್ರಿತ ಜವುಳು ನೆಲದ ಕೊಕ್ಕರೆಯು ಗಿರಿ ಏರಿ ಗರಿಗೆದರಿ ಕುಣಿದಾಡುವುದು'.

**ಭಾಷಾ ನಕಾಶೆ ನಿರ್ಮಾಣದ ಪ್ರಥಮ ಹೆಜ್ಜೆ:**

'ಸೆನ್ದಮಿಲ್ ಪನ್ನಿರು ನಿಲಂ' ಅಥವಾ 'ಹನ್ನೆರಡು ವಲಯಗಳಲ್ಲಿ ವಿಂಗಡಿಸಿಕೊಂಡ ಪರಿಶುದ್ಧ ತಮಿಳು ಪ್ರದೇಶ'ದ ಚರ್ಚೆ ತೊಲ್ ನಂತರದ ತಮಿಳರಿಗೆ ಪ್ರಧಾನ ವಸ್ತುವಾಯಿತು. ಇವುಗಳಲ್ಲಿ ಸೆನ್ದಮಿಳ್ ಪ್ರದೇಶವು ಉತ್ತರದ ವೈಗೈ ನದಿಯಿಂದ ದಕ್ಷಿಣದ ಮರುದಮ್‌ವರೆಗೂ ಪೂರ್ವದ ಕರುವೂರಿನಿಂದ ಪಶ್ಚಿಮದ ವರವೂರ್‌ವರೆಗೂ ವಿಸ್ತರಿಸಿಕೊಂಡಿತ್ತೆಂದು ಕವಿ *ಇಳಂಪೂರಣರ್* ತಿಳಿಸಿದರೆ, ಇನ್ನುಳಿದ ಹನ್ನೆರಡು ವಲಯಗಳ ಸಮಗ್ರ ಚಿತ್ರವನ್ನು ಟೀಕಾಕಾರ ನನ್ನೂಲ್ ಪರಿಶೋಧಿಸಿ ಪ್ರಕಟಿಸಿದನು. ಇದರಲ್ಲಿ ಅವನು ದಕ್ಷಿಣಪಾಂಡಿನಾಡು, ಕುಡನಾಡು, ಕುತ್ತನಾಡು, ಕರ್ಕನಾಡು, ವೇನಾಡು, ಪುಲಿನಾಡು, ಪನ್ರಿನಾಡು, ಅರುವನಾಡು, ಅರುವವಡತಲೈನಾಡು, ಶೀತನಾಡು, ಮಲೈನಾಡು ಮತ್ತು ಪುನಲ್‌ನಾಡುಗಳನ್ನು ಕಂಡನು.[೧೩] ಈ ಅಂತರ ವಲಯಗಳ ಚರ್ಚೆಯನ್ನು ಇಲ್ಲಿಗೆ ಕೈಬಿಟ್ಟು ನೇರವಾಗಿ ನಾವು 'ತಮಿಳಗಂ' ನಕಾಶೆಯ ಚರ್ಚೆಯನ್ನು ಕೈಗೆತ್ತಿಗೊಳ್ಳಬಹುದು.

*'ವಡವೇಂಗಡ ತೆನ್‌ಕುಮರಿ ಆಯಿಟೈ ತಮಿಟ್‌ಕೂಱುಂ ನಲ್ ಉಲಗತ್ತು'*, ಅಂದರೆ 'ಉತ್ತರದ ವೇಂಕಟ ದಕ್ಷಿಣದ ಕುಮಾರಿವರೆಗೆ ವಿಸ್ತರಿಸಿದ್ದ ತಮಿಳು ಭಾಷಿಕರ ಪವಿತ್ರ ಪ್ರದೇಶ' ಎಂಬ ಪ್ರಸ್ತಾಪವನ್ನು ಪ್ರಪ್ರಥಮ ಬಾರಿಗೆ ಮಾಡಿದವನು ಪನಂಪಾರನಾರ್. ಇದನ್ನು ಮಾಡಿದ್ದು ತೊಲ್ಕಾಪ್ಪಿಯಮ್‌ಗೆ ಅವನು ಬರೆದ ಹದಿನೈದು ಸಾಲುಗಳ ಸ್ತುತಿಪದ್ಯ (ಶಿಱಪ್ಪು ಪಾಯಿರಂ)ದಲ್ಲಿ.[೧೪] ಇವನು ಶಂಗಂ ಕವಿಗಳಲ್ಲಿ ಒಬ್ಬನಾಗಿದ್ದನೆಂಬುದನ್ನು 'ಕುಱುಂದೊಗೈ'ಯ ಒಂದು ಕವನವನ್ನು', ಪ್ರಾತಃಸ್ಮರಣೀಯ ವೈಯಾಕರಣಿಗಳಲ್ಲಿ ಇವನೊಬ್ಬನಾಗಿದ್ದನೆಂಬುದಕ್ಕೆ ಅವನ ವ್ಯಾಕರಣ ಗ್ರಂಥಕ್ಕೆ ೧೩ನೆಯ ಶತಮಾನದಲ್ಲಿ ಬರೆದ ನನ್ನೂಲ್‌ನ ಟೀಕೆಯನ್ನು ನಿದರ್ಶಿಸಲಾಗುವುದು.[೧೫] ಪನಂ ಬರೆದ ಈ ಸ್ತುತಿ ಪದ್ಯದಲ್ಲಿ ತೊಲ್‌ನ ಗ್ರಂಥ, ಅಂದಿನ ಆಳರಸ, ಅವನ ಆಸ್ಥಾನ ಪಂಡಿತನಾದ ಅದಂಕ್ಕೊಟಾಸಾನ್ ವಿವರ ಬರುವುವು. ಕಾವ್ಯಬಂಧದಲ್ಲಿರುವ 'ಪಾಯಿರಂ'ವನ್ನು ಗದ್ಯಕ್ಕೆ ತಂದುಕೊಂಡರೆ ಅದು ಸ್ಥೂಲವಾಗಿ ಕನ್ನಡದಲ್ಲಿ ಹೀಗೆ ಓದಿಸಿಕೊಳ್ಳುವುದು:

'ಬಡಗಣ ವೇಂಕಟ ತೆಂಕಣ ಕುಮರಿಗಳ ನಡುವಣ ತಮಿಳು ಭಾಷಿಕರ ಪರಿಶುದ್ಧ ಪ್ರದೇಶದಲ್ಲಿ ಧ್ವನಿ, ಪದ, ಶಬ್ದಾರ್ಥ, ಜನಪದ (ದೇಸಿ) ಮತ್ತು ಕಾವ್ಯಭಾಷೆ(ಮಾರ್ಗೀ)ಯ ಪ್ರಭೇದಗಳನ್ನಲ್ಲದೆ, ಈ ನೆಲದಲ್ಲಿ ಬೇರುಬಿಟ್ಟಿದ್ದ ಸಾಧಿತ ತಮಿಳುಭಾಷಾ ವೈಲಕ್ಷಣ್ಯಗಳನ್ನು ಪೂರ್ವಾಚಾರ್ಯರ ಪರಿಭಾಷೆಯಲ್ಲಿ ಪರಿಚಯಿಸಿಕೊಂಡು, ವಿವೇಕದಿಂದ ವಿಚಕ್ಷಿಸಿ, ಈ ಸುಂದರ ಕೃತಿಯನ್ನು ಸಿದ್ಧಗೊಳಿಸಿ, ಪರಿಶುದ್ಧ ನುಡಿ ನಿಯಮಗಳನ್ನೂ ಚತುರ್ವೇದಾಂತರ್ಗತ ಜ್ಞಾನವನ್ನೂ ಸಂಪಾದಿಸಿಕೊಂಡ ಅದಂಕ್ಕೊಟಾಸಾನ್ ಸಮ್ಮುಖದಲ್ಲಿ, ನಿಲಂತರು ಪಾಂಡಿಯನ ಆಸ್ಥಾನ ಸಭೆಯಲ್ಲಿ, ಈ ಮಹಾಧ್ವ ಕೃತಿಯನ್ನು. ಮಂಡಿಸಿ, ನಿಖರ ನುಡಿಗಳಲ್ಲಿ, ಸರಳ ಶೈಲಿಯಲ್ಲಿ, ಇದರ ಬಂಧವನ್ನು ವ್ಯಾಖ್ಯಾನಿಸಿ, ಕೀರ್ತಿಶಿಖರಕ್ಕೇರಿದ ಐಂತಿರಮ್ ಶಾಖಾ ಪಾರಂಗತನಾದ ಈ ಪಂಡಿತಯೋಗಿ ಸಾಗರಾವೃತ ಭೂಮಂಡಲದಲ್ಲಿ ಪ್ರತಿಷ್ಠಾಪಿಸಿದನು. ಆತನ ಹೆಸರು ತೊಲ್ಕಾಪ್ಪಿಯನ್.[೧೬]

(ಈ ಪಾಯಿರಂದಲ್ಲಿ ಬರುವ ಪ್ರಮುಖ ತಮಿಳು ಪದಗಳು ಮತ್ತು ಅವುಗಳ ಅರ್ಥ ಇಂತಿವೆ: *'ವಡ'* = ಬಡಗಣ; ಉತ್ತರ. *'ವೇಂಕಡ'* = ವೆಂಕಟಾದ್ರಿ; ತಿರುಮಲೈ ಬೆಟ್ಟ *'ತೆಡ'* = ತೆಂಕಣ; ದಕ್ಷಿಣ. *'ಕುಮರಿ'* = ಕನ್ಯಾಕುಮಾರಿ; ದಕ್ಷಿಣಭಾರತದ ಭೂ ಅಂಚು; ಈ ಹೆಸರಿನ ಒಂದು ನದಿ(?), ಒಂದು ಬೆಟ್ಟ(?). *'ಆಯಿಡೈ'* = ಮಧ್ಯದ; ನಡುವಣ, ಕನ್ಯಾಕುಮಾರಿಯಿಂದ ವೆಂಕಟಾದ್ರಿವರೆಗಿನ *'ತಮಿಟ್‌ಕೂಱುಂ'* = ತಮಿಳು ಭಾಷಿಕರ; ತಮಿಳು ಜನಾಂಗೀಯ. *'ನಲ್'*=ಪವಿತ್ರ; ಪರಿಶುದ್ಧ).

**ಶಂಗಂ ಕವಿಗಳ ತಮಿಳಗಂ:**

ಪನಂಪಾರನಾರ್ ಕೊಟ್ಟ ಈ ವಿವರಗಳು ಸ್ವತಃ ತೊಲ್‌ನಿಂದ ಬಂದವುಗಳೇನೋ ಎನ್ನುವಷ್ಟು ಮುಂದೆ ಅವು ಪ್ರಸಾರ ಪಡೆದುಕೊಂಡವು. ಆನಂತರದ ಶಂಗಂ ಕವಿಗಳು ಮತ್ತು ಮಧ್ಯಕಾಲೀನ ವ್ಯಾಖ್ಯಾನಕಾರರು *(ಉರೈಯಾಶಿರಿಯರ್)* ಇವನ್ನೇ ಆಧಾರವಾಗಿಸಿಕೊಂಡು 'ತಮಿಳಗಂ' ಗಡಿಗಳನ್ನು ಪ್ರತಿಪಾದಿಸಿದರು.[೧೭] ವೇಂಗಡವು ಉತ್ತರದ ಗಡಿಯೆಂಬುದನ್ನು ಕನಿಷ್ಠ ಒಂದು ಡಜನ್ ಸಾರಿ ಪುನರುಚ್ಚರಿಸುವ ಈ ಕವಿಗಳು ಕೆಲವು ಬಾರಿ ಅದನ್ನು 'ವಡಮಲೈ' (ಉತ್ತರದ ಬೆಟ್ಟ), 'ನೆಡಿಯೋನ್' (ತಿರುಮಾಳ್‌ಗಿರಿ), 'ವಡವೇಂಗಡಂ' (ಉತ್ತರದ ವೆಂಕಟಾದ್ರಿ) ಎಂದು *ಪುಱನಾನೂಱು, ಪತ್ತುಪಾಟ್ಟು ಶಿಲಪ್ಪದಿಗಾರಂ*ಗಳಲ್ಲಿ ಮತ್ತು ನಚ್ಚಿ ರಚಿಸಿದ ಟೀಕಾಗ್ರಂಥದಲ್ಲಿ ಹೆಸರಿಸಿರುವರು.[೧೮]

ಕುಮರಿಯ ಬಗ್ಗೆ ಇಂತಹ ಪ್ರತಿಪದಗಳು ಅಪರೂಪವಾದರೂ ಇಳಂಗೋ ಅಡಿಗಳ್ ಇದನ್ನು 'ತೊಡಿಯೊಳ್' ಎಂದು ಮತ್ತು ನಚ್ಚಿ ಇದನ್ನು 'ತೆನ್‌ಕುಮರಿ' ಎಂದು ಸಂಬೋಧಿಸಿರುವುದನ್ನು ಗಮನಿಸುವುದವಶ್ಯ.[೧೯] ಆದರೆ ಕುಮರಿಯ ಸ್ವರೂಪದ ಬಗ್ಗೆ ಇವರಲ್ಲಿ ಭಿನ್ನಾಭಿಪ್ರಾಯಗಳಿರುವುದು ಎದ್ದು ಕಾಣುವುದು. ಇದೊಂದು ಬಂದರು ಅಥವಾ ಕರಾವಳಿ ಪಟ್ಟಣವೆಂದು ಒಬ್ಬ ಕವಿ ಹೇಳಿದ್ದರೆ, 'ಬೆಟ್ಟ'ವೆಂದು, 'ನದಿ' ಎಂದು, ಇನ್ನು ಕೆಲವರು ಪ್ರತಿಪಾದಿಸಿದರು. ಇವರೆಲ್ಲರಿಗಿಂತ ಭಿನ್ನವಾಗಿ (*ಶಿಲಪ್ಪದಿಗಾರಂ* ಟೀಕಾಕಾರ) ನಕ್ಕೀರರ್ ಮತ್ತು (ತೊಲ್ಕಾಪ್ಪಿಯಮ್ ಟೀಕಾಕಾರ) ನಚ್ಚಿ, ಅದು ಇಂದಿನ ಕನ್ಯಾಕುಮಾರಿಯೇ ಅಲ್ಲ, ಶ್ರೀಲಂಕೆಯ ಆಚೆಗೆ (ದಕ್ಷಿಣಕ್ಕೆ) ಇದ್ದ ಪುರಾತನ ಕಾಲದ 'ತಮಿಳಗಂ'ನ ಹೊರ ಅಂಚು; ಕುಮರಿ ಮತ್ತು ಪಖ್ರುಳಿ ನದಿಗಳು ಹರಿಯುತ್ತಿದ್ದ ಆ ಫಲವತ್ತಾದ ಪ್ರದೇಶವು ಮುಂದೊಮ್ಮೆ ಸಂಭವಿಸಿದ 'ಮಹಾ ಸುನಾಮಿ'ಯಲ್ಲಿ (ಹಿಂದೂಮಹಾಸಾಗರ) ಕಡಲಡಿ ಸೇರಿತೆಂದು ಸೂಚಿಸಿದರು.[೨೦] ಸುಮಾರು ಇದೇ ಕಾಲದ ರೋಮ್ ದೇಶದ ಪ್ಲಿನಿ ಮತ್ತು ಪೆರಿಪ್ಲಸ್ ಕರ್ತೃ, 'ಪರಲಿಯ', 'ಕುಮಾರಿ', 'ಕೊಲ್‌ಬೈ' ಎಂಬ ಮುತ್ತು ನಿಕ್ಷೇಪದ ಸಾಗರಕ್ಷೇತ್ರ ಮತ್ತು 'ಕೇಪ್‌ಕೊರ್ರೈ'ಗಳನ್ನು ಉಲ್ಲೇಖಿಸಿರುವುದನ್ನು ಇಲ್ಲಿ ನೆನೆಯಬಹುದು.[೨೧]

ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಪವಿತ್ರ ಗಿರಿಪಟ್ಟಣವಾದ ತಿರುಪತಿ ನಮಗೆಲ್ಲರಿಗೂ ತುಂಬಾ ಪರಿಚಿತ ಕ್ಷೇತ್ರ. ಚೆನ್ನೈ ವಾಯವ್ಯಕ್ಕೆ, ಬಂಗಾಳಕೊಲ್ಲಿಯ ಪೂರ್ವಕ್ಕಿರುವ ಈ ಗಿರಿಸಾಲು ಶಂಗಂ ಕಾಲದಲ್ಲಿ 'ಪುಳ್ಳಿ' ರಾಜ್ಯದ ಗಡಿಯಾಚೆಗಿತ್ತೆಂದೂ ಚೇರ ರಾಜ ವಾನವರಂಬನ್‌ನ ಅಧಿಕಾರದಿಂದ ಮುಕ್ತವಾಗಿತ್ತೆಂದೂ ಶಂಗಂ ಕವಿಗಳು ತಿಳಿಸಿರುವರು.[೨೨] *ಪುಱನಾನೂಱು* ಇದನ್ನು ಕೀಱವನ್ ಒಡೆತನಕ್ಕೊಪ್ಪಿಸಿದರೆ, *ಅಗನಾನೂಱು* ಇಳನಾಗರನ್ ಒಡೆತನಕ್ಕೆ ಒಪ್ಪಿಸುವುದು.[೨೩]

**ಶಂಗಂ ಕವಿಗಳ 'ವಡುಗರು':**

'ತಮಿಳಗಂ'ನ ಈಶಾನ್ಯ ಗಡಿಯನ್ನು ಗುರುತಿಸಲು ತೋರಿಸಿದಷ್ಟು ಆಸಕ್ತಿಯನ್ನು ಅದರ ನೆತ್ತಿಯ ಮೇಲಿನ ಗಡಿಯನ್ನಾಗಲೀ ಭುಜಭಾಗದ ವಾಯವ್ಯ ಗಡಿಯನ್ನಾಗಲೀ ಗುರುತಿಸಲು ಶಂಗಂ ಕವಿಗಳು ಆಸಕ್ತಿ ತೋರಲಿಲ್ಲ; ಈ ಕಾರಣ, 'ಕನ್ನಡ ಜನಪದ'ಕ್ಕೆ ನೇರವಾಗಿ ಸಂಬಂಧಿಸಿದ ಕಾವೇರಿಯ ಉಗಮ ಪ್ರದೇಶಗಳಲ್ಲಿ ಅವರ ಅಂಕಿತದಲ್ಲಿದ್ದ ಮತ್ತು ಅಂಕಿತದ ಹೊರಗಿದ್ದ ಪ್ರದೇಶದ ಸ್ಪಷ್ಟ ಚಿತ್ರ ನಮಗೆ ದೊರಕದಂತಾಗಿದೆ. ಇದನ್ನು ದೃಢೀಕರಿಸಿಕೊಳ್ಳದೇ ಮಾರ್ಗಕಾರನ 'ಕಾವೇರಿಯಿಂದಮಾ....' ಗಡಿರೇಖೆಯ ನಿಜ ಸ್ವರೂಪವನ್ನು ತಿಳಿದುಕೊಳ್ಳಲು ನಮಗೆ ಸಾಧ್ಯವಾಗದು.

ಶಂಗಂ ಕವಿಗಳು ಉತ್ತರ ಗಡಿಯ ಪ್ರಧಾನ ಜನಾಂಗ, ಭಾಷೆ ಮತ್ತು ಪ್ರದೇಶಗಳನ್ನು ವೈಯಕ್ತಿಕ ಹೆಸರುಗಳಿಂದ ಸ್ಪಷ್ಟಪಡಿಸದೆ ಇವರನ್ನೆಲ್ಲಾ ವೇಂಗಡಂದ ಉತ್ತರಕ್ಕಿದ್ದವರೆಂದು ಹೇಳಿ, 'ವಡುಗರು' ಎಂಬ ಒಂದೇ ಒಂದು ಪದದಿಂದ ಗುರುತಿಸಿರುವರು. ಇವರಿಗೆ ತಮಿಳು ಭಾಷೆ ತಿಳಿದಿರಲಿಲ್ಲವೆಂಬುದನ್ನು ಕವಿ ಮಾಮೂಲಾಣಾರ್ ಒತ್ತಿ ಹೇಳಿರುವನು.[೨೪] *ಮಣಿಮೇಗಲೈ*ಯಲ್ಲಿ 'ವಡಮೊಟಿಯಾಳರ್' ಎಂಬ ಪದ ಬರುವುದು - ಇದರ ಅರ್ಥ 'ಉತ್ತರದ ಭಾಷೆಯವರು' ಎಂದು.[೨೫] ಸಂಸ್ಕೃತ ಭಾಷೆಯಲ್ಲಿ ವ್ಯವಹರಿಸುತ್ತಿದ್ದ ಬ್ರಾಹ್ಮಣರನ್ನು ಈ ಪದ ನಿರ್ದೇಶಿಸುವುದೆಂದು ಕೆಲವು ಸಂಸ್ಕೃತಾಭಿಮಾನಿ ತಮಿಳರು ವಾದಿಸಿರುವರು; ಆದರೆ, 'ತಮಿಳಗಂ' ಉತ್ತರದ ಗಡಿಗೆ ಹೊಂದಿಕೊಂಡ– ವಿಶೇಷವಾಗಿ ತೆಲುಗು (ಆಂಧ್ರ) ಮತ್ತು (ಕೊಡವ, ತುಳು ಮತ್ತು ಕೊಂಕಣಿಗರನ್ನೊಳಗೊಂಡ) ಕನ್ನಡ (ಕರ್ನಾಟಕ) ಜನಾಂಗವನ್ನು–ಇದು ಸೂಚಿಸುವುದೆಂಬುದು ನನ್ನ ಅನಿಸಿಕೆ. ಹೀಗೆ ಹೇಳಲು ನನಗೆ ಎರಡು ಕಾರಣಗಳುಂಟು – *ಮಣಿಮೇಗಲೈ* (ಸು. ೬ನೆಯ ಶತಕ) ಕಾಲಕ್ಕಾಗಲೇ ಆರ್ಯ ಜನಾಂಗ ಮತ್ತು ಭಾಷಿಕರ ಪರಿಚಯವು ತಮಿಳರಿಗೆ ಸಾಕಷ್ಟಾಗಿದ್ದುದರಿಂದ, ಹೀಗೆ ಸುತ್ತಿ-ಬಳಸಿ ಬ್ರಾಹ್ಮಣರನ್ನು ನಿರ್ದೇಶಿಸುವ ಆವಶ್ಯಕತೆ ಇರಲಿಲ್ಲವೆಂಬುದು ಇದರಲ್ಲಿ ಒಂದು; ವಡುಕ ('ವಡಮೊಟಿ') ಪದ ಆರಂಭ ಕಾಲದಿಂದಲೂ ವಿಶೇಷವಾಗಿ ಉತ್ತರದ ಗಡಿಯಂಚಿನ, ತಮಿಳು ಭಾಷೆಯನ್ನು ಅರಿಯದ, ಜನಾಂಗವನ್ನೇ ನಿರ್ದೇಶಿಸಿರುವುದರಿಂದ, ಇಲ್ಲಿ ಮಾತ್ರ ಅದಕ್ಕೊಂದು ಹೊಸ ಅರ್ಥ ಕೊಡುವ ಕಾರಣವಿಲ್ಲವೆಂಬುದು, ಮತ್ತೊಂದು. ವೇಂಗಡವನ್ನು ಕೇಂದ್ರಬಿಂದುವನ್ನಾಗಿ ಮಾಡಿಕೊಂಡು, ಮೇಲಿಂದಮೇಲೆ ಉತ್ತರದ ಗಡಿಯನ್ನು ಶಂಗಂ ಕವಿಗಳು ಗುರುತಿಸಿರುವುದರಿಂದ, 'ವಡುಗರು' ಎಂದು ಅವರು ನಿರ್ದೇಶಿಸಿರುವುದು ಆಂಧ್ರರನ್ನೇ ಹೊರತು ಮತ್ತಾರನ್ನೂ ಅಲ್ಲ, ಎಂಬ ಮತ್ತೊಂದು ವಾದ ಉಂಟು. ಅಶೋಕನ ಶಾಸನಗಳಲ್ಲಿ (ಕ್ರಿ.ಪೂ. ೩ನೆಯ ಶತಕ) ಆಂಧ್ರರಿಗೆ ಮಾನ್ಯತೆ ದೊರೆತಿರುವುದನ್ನು ಉದಾಹರಿಸಿ, ಉತ್ತರದ ಗಡಿಯಲ್ಲಿ ಆಂಧ್ರರಷ್ಟು ವ್ಯವಸ್ಥಿತರಾಗಿ

ಸಂಘಟಿತಗೊಂಡಿದ್ದ ಮತ್ತೊಂದು ಜನಾಂಗವು ಇರಲಿಲ್ಲವೆಂದೂ ಇವರು ಪ್ರತಿಪಾದಿಸುವರು.[೨೧] ಶಂಗಂ ಸಾಹಿತ್ಯ ಮತ್ತು ಅಶೋಕನ ಶಾಸನಗಳು ಆಂಧ್ರರ ಅಸ್ತಿತ್ವವನ್ನು ಘೋಷಿಸಿದಂತೆ 'ಕನ್ನಡಿಗರ' ಅಸ್ತಿತ್ವವನ್ನು, ಜನಾಂಗವನ್ನು ಘೋಷಿಸದಿದ್ದರೂ ಈ ಆಕರಗಳೇ 'ತಮಿಳಗಂ'ನ ವಾಯವ್ಯ ಮಗ್ಗಲಿನಲ್ಲಿದ್ದ ವಡುಗರನ್ನು ಘೋಷಿಸುವುದನ್ನು ನಾವು ಶೋಧಿಸಿ ತೆಗೆಯಬಹುದು.

**ಅಶೋಕನ ಪ್ರಪ್ರಥಮ ಗಡಿ ಗುಂಡುಗಳು:**

ಶಂಗಂ ಕವಿಗಳು ವೇಂಗಡ – ಕುಮರಿ ನಡುವಣ ಪ್ರದೇಶವನ್ನು ಗುರುತಿಸುವುದಕ್ಕಿಂತ ಸುಮಾರು ೨-೩ ಶತಮಾನ ಕಾಲ ಮುಂಚೆ ಸೀಮಾ-ಸಂದೇಶದ ಗುಂಡುಗಲ್ಲುಗಳಿಂದ, ತಮಿಳು ಮತ್ತು ತಮಿಳೇತರ ವಲಯಗಳ ನಕಾಶೆಯನ್ನು ಅಶೋಕ ನಿರ್ಮಾಣ ಮಾಡಿದ್ದ. ಪದರೂಪದಲ್ಲಾಗಲೀ ಪಟರೂಪದಲ್ಲಾಗಲೀ ಇರದ ಈ ಹೆಬ್ಬಂಡೆಗಳು ದಕ್ಷಿಣ ಭಾರತೀಯರ ಆಂತರಿಕ ವಲಯಗಳ ನಾಂದಿ ನಕಾಶೆಯನ್ನು ರೂಪಿಸಿದ ಪ್ರಪ್ರಥಮ ರೇಖೆಗಳಾಗಿವೆ. ಇದರಲ್ಲಿ ಅಶೋಕನ ರಾಜ್ಯದೊಳಗಿನ ಆಂಧ್ರ, ಪಿತಿನಿಕ ಜನಾಂಗಗಳ ವಲಯಗಳನ್ನಲ್ಲದೆ ಇಸಿಲ–ಸುವರ್ಣಗಿರಿ ಪ್ರದೇಶಗಳನ್ನೂ ರಾಜ್ಯದ ಹೊರಗಿದ್ದ ಚೋಳ, ಪಾಂಡಿಯ, ಕೇರಳಪುತ್ರ, ಸಾತ್ಯಪುತ್ರ, ತಾಮ್ರಪರ್ಣಿ(ಶ್ರೀಲಂಕೆ) ವಲಯಗಳನ್ನೂ ನಿರ್ದೇಶಿಸಲಾಗಿದೆ. ಅಲ್ಲದೆ ತನ್ನ ಜೀವಿತಾವಧಿಯಲ್ಲಿ ದೇಶಾದ್ಯಂತ ಕೊರೆಸಿದ ಸೂಕ್ಷ್ಮಸಂದೇಶಗಳನ್ನು ಹೊತ್ತ ಶಾಸನಗಳಲ್ಲಿ ನಿಖರವಾಗಿ ಅರ್ಧ ಪ್ರಮಾಣ(ಹದಿನೆಂಟು ಮೈನರ್ ಈಡಿಕ್ಟ್‌ಗಳಲ್ಲಿ ಒಂಬತ್ತು)ದ ಗುಂಡುಗಲ್ಲುಗಳನ್ನು ಅಶೋಕ ಇಂದಿನ ಕರ್ನಾಟಕ ಪ್ರದೇಶದಲ್ಲಿ ಕೊರೆಸಿದ್ದು ಒಂದು ವಿಶೇಷ. ಅಶೋಕ ಅಕ್ಷರದಲ್ಲಿ ಸ್ಪಷ್ಟಪಡಿಸಿರುವ ಭೌಗೋಳಿಕ ಹೆಗ್ಗುರುತಿನಷ್ಟೇ ಮಹತ್ವದ ಮಾಹಿತಿಯನ್ನು ಈ ಗುಂಡುಗಳು ಮೌನವಾಗಿ ಸಾರಿದವು.[೨೨]

ಸ್ವಇಚ್ಛೆಯಿಂದ ತುಂಗಭದ್ರೆಯ ಆಜುಬಾಜಿನ ಪ್ರದೇಶಕ್ಕೆ ತನ್ನ ಆಧಿಪತ್ಯವನ್ನು ಸೀಮಿತಗೊಳಿಸಿಕೊಂಡು, ಅದರ ದಕ್ಷಿಣ ಮತ್ತು 'ತಮಿಳಗಂ' ಉತ್ತರಕ್ಕಿದ್ದ ಆಂತರಿಕ ('ಬಫರ್') ವಲಯವನ್ನು ಸ್ವತಂತ್ರವಾಗಿ ಆಳುತ್ತಿದ್ದ ಭೂಪರಿಗೆ ಅಶೋಕ ಬಿಟ್ಟುಕೊಟ್ಟದ್ದನ್ನು ಇವು ಬಹಿರಂಗಪಡಿಸುವುವು. ಆ ಭೂವಲಯಗಳಲ್ಲಿ ಬನವಾಸಿ ಮತ್ತು ಮಹಿಷಮಂಡಲಗಳು ಸೇರಿರಲು ಸಾಧ್ಯ. ಇದರಲ್ಲಿ ಅಶೋಕನ 'ಮಹಿಷಮಂಡಲ'ದ ಸ್ವರೂಪವೇನೇ ಆಗಿರಲಿ, ತಮಿಳಗಂನ ಪಶ್ಚಿಮ(ಪಶ್ಚಿಮೋತ್ತರ)ದಲ್ಲಿ ತಮಿಳೇತರ ಸ್ವತಂತ್ರ ರಾಜ್ಯವೊಂದು ಇತ್ತೆಂಬುದನ್ನು ಶಂಗಂ ಕವಿಗಳೇ ಬಹಿರಂಗಪಡಿಸಿರುವರು. ಅವರು ಈ ಪ್ರದೇಶವನ್ನು ತಮಿಳು ಭಾಷೆಯಲ್ಲಿ 'ಎರುಮೈನಾಡು', 'ಎರುಮೈ ನಲ್‌ನಾಡು' (ಎರುಮೈ > ಎಮ್ಮೆ =

ಮಹಿಷ) ಎಂದು ಕರೆದಿರುವರು. ಇದಕ್ಕೆ ವಡುಗರ ನಾಯಕನಾದ ಎರುಮೈಊರವನು ಅಧಿಪತಿಯಾಗಿದ್ದನೆಂದೂ ಘೋಷಿಸಿದರು. ಈ ಎಲ್ಲ ವಿವರಗಳು ಅಗನಾನೂಱುನಲ್ಲಿ ದೊರೆಯುವುವಲ್ಲದೆ ಸಮಕಾಲೀನ ಶಾಸನಗಳಿಂದಲೂ ಪುರಸ್ಕರಿಸಲ್ಪಟ್ಟಿರುವುವು.[೨೮] ಇದು ಕನ್ನಡ ಪ್ರದೇಶದ ಸ್ವತಂತ್ರ ರಾಜ್ಯವನ್ನು ಸೂಚಿಸುವುದೆಂಬುದರಲ್ಲಿ ಅನುಮಾನವಿಲ್ಲ. ಅಂದರೆ, 'ತಮಿಳಗಂ' ಉತ್ತರ ಗಡಿಯನ್ನು ಶಂಗಂ ಕವಿಗಳು ತಮ್ಮ ಕಾವ್ಯಗಳಲ್ಲಿ ವರ್ಣಿಸಿದಂತೆ ವೇಂಗಡದ ಬೆಟ್ಟಸಾಲನ್ನು ಮಾತ್ರ ನಿರ್ದೇಶಿಸುತ್ತಿರಲಿಲ್ಲ, ಅವರ ಕಾವ್ಯ ಮತ್ತು ಶಾಸನಿತ ದಾಖಲೆಗಳು ತಿಳಿಸುವಂತೆ ಕಾವೇರಿಯ ಉಗಮ ಪ್ರದೇಶ(ಕೊಡಗು ಮತ್ತು ದಕ್ಷಿಣ ಮೈಸೂರು)ಗಳನ್ನೂ ನಿರ್ದೇಶಿಸುತ್ತಿದ್ದದೆಂಬುದು ಇದರಿಂದ ಸ್ಪಷ್ಟಗೊಳ್ಳುವುದು.

## 'ತಮಿಳಗಂ'ನ ಮೂರು ಬಗೆಯ ಗಡಿರೇಖೆಗಳು:

ಕ್ರಿ.ಶ. ಮೊದಲರ್ಧ ಸಹಸ್ರಮಾನದ ಕವಿಗಳು ಮೂರು ಬಗೆಯ ಗಡಿಗಳನ್ನು ಗುರುತಿಸಿದರು. ಇವುಗಳಲ್ಲಿ ಒಂದು, ಐತಿಹ್ಯ-ಆಧಾರಿತ 'ವಿಶಾಲ ತಮಿಳಗಂ'ನ ಗಡಿ. ಇದು ಉತ್ತರದ ಅನಿಶ್ಚಿತ ಮೇರೆಯಿಂದ ಪ್ರಾರಂಭಗೊಂಡು, ದಕ್ಷಿಣದ ಶ್ರೀಲಂಕೆಯಾಚೆಯ ವರೆಗೂ ವಿಸ್ತರಿಸಿ, ಕುಮಾರಿ-ಪಙ್ರುಳಿ ನದಿಗಳನ್ನೊಳಗೊಂಡಿತ್ತು. ಎರಡನೆಯದು, ಉತ್ತರದ ಹಿಮಾಲಯದಿಂದ ಆರಂಭಿಸಿ, ದಕ್ಷಿಣದ ಕುಮರಿ ವರೆಗೂ ಹಬ್ಬಿತ್ತು. ಮೂರನೆಯದು, ವಾಸ್ತವವಾದ, ಐತಿಹಾಸಿಕ ಆಕರಗಳಿಂದ ಒಂದಿಲ್ಲೊಂದು ಬಗೆಯಲ್ಲಿ ಬೆಂಬಲ ಪಡೆದ, ವೇಂಗಡ-ಕುಮಾರಿ ನಡುವಣ ಪ್ರದೇಶ. ಇವುಗಳಲ್ಲಿ ಮೊದಲಿನದನ್ನು ಮುಂದಿನ ಲೇಖನದಲ್ಲಿ ಚರ್ಚಿಸುವೆನು.[೨೯] ಉಳಿದೆರಡನ್ನು ಸಂಗ್ರಹ ರೂಪದಲ್ಲಿ ಇಲ್ಲಿ ಪರಿಚಯಿಸಲು ಪ್ರಯತ್ನಿಸುವೆನು.

## ಹಿಮಾಲಯ-ಕುಮರಿ ನಡುವಣ ಪ್ರದೇಶ:

*ಪದಿಱ್ರುಪತ್ತು, ಕಲಿತ್ತೊಗೈ, ಪುಱನಾನೂಱು, ಶಿಲಪ್ಪದಿಗಾರಂ, ಪೆರುಂಗದೈ* ಮುಂತಾದ ತಮಿಳು ಕಾವ್ಯಗಳಲ್ಲಿ 'ಇಮಯಮ್'(ಹಿಮಾಲಯ) ಉಲ್ಲೇಖ ಬರುವುದು. ನೆಡುಚೇರನ್ ಆದನ್ ಎಂಬ ಚೇರ ಅರಸನನ್ನು ಇಮಯವರಂಬನ್ (ಹಿಮಾಲಯದವರೆಗೂ ಕೀರ್ತಿ ವಿಸ್ತರಿಸಿಕೊಂಡವನು) ಎಂದು ಶ್ಲಾಘಿಸಲಾಗಿದ್ದು, ಅವನು ಆರ್ಯರನ್ನೆಲ್ಲಾ ಸೋಲಿಸಿ, ಯವನರನ್ನು ಬಂಧಿಸಿ, ಚೇರರ ಲಾಂಛನವಾದ ಧನುಸ್ಸನ್ನು ಹಿಮಾಲಯದ ಬಂಡೆಗಲ್ಲಿನ ಮೇಲೆ ಕೊರೆಸಿ, ತನ್ನ ಅಗ್ಗಳಿಕೆಯನ್ನು ಮೆರೆದನೆಂದು ಪದಿಱ್ರುಪತ್ತುವಿನಲ್ಲಿ ವರ್ಣಿಸಲಾಗಿದೆ. 'ಇಮನ್ ವರಂಬನ್' ಎಂಬ ಪದವನ್ನು 'ಇಮವರ್ ಅನ್‌ಬನ್' ಎಂದು ವಿಶ್ಲೇಷಿಸಿ, ಅವನು ದೇವರಿಗೆ ಪ್ರೀತಿಪಾತ್ರನಾದವ(ದೇವಾನಾಂಪ್ರಿಯ)

ಎಂದು ಅರ್ಥೈಸಲಾಗಿದೆ. ಇದರಂತೆ ಇವನ ಪುತ್ರ ಶೆಂಗುಟ್ಟುವನ್ ಸಹ ಹಿಮಾಲಯದ ಬಂಡೆಗಲ್ಲಿನ ಮೇಲೆ ಇದೇ ಲಾಂಛನವನ್ನು ಕೊರೆಸಿ, ತಂದೆಗೆ ಸರಿಸಮಾನನೆನಿಸಿದನೆಂದು *ಶಿಲಪ್ಪದಿಗಾರಂ* ತಿಳಿಸುವುದು. ತಲೈಯಾಲಂಗಾನಲ್ ನೆಡುಂಚೆಟಿಯನ್ ರಾಜ್ಯ ದಕ್ಷಿಣದ ಕುಮರಿಯಿಂದ ಉತ್ತರದ ಉನ್ನತ ಪರ್ವತಗಳವರೆಗೂ, ಪಶ್ಚಿಮದಲ್ಲಿ ಸಮುದ್ರದವರೆಗೂ ವಿಸ್ತರಿಸಿದ್ದುದನ್ನು ಪುಱನಾನೂಱುರಿನ ಕುರುಂಕಿಟಾರ್ ಕವಿ ದಾಖಲಿಸಿರುವನು. ತನ್ನ ಪೋಷಕನಾದ ಆಯ್ ಆಂಡಿರರ್‌ನನ್ನು ಕೊಂಡಾಡುತ್ತಾ ಕವಿ ಮುಡವೋಶಿಯಾರ್ ಈ ಲೋಕದ ಅಸ್ತಿತ್ವಕ್ಕೆ ಉತ್ತರದ ಹಿಮಾಲಯ ಮತ್ತು ದಕ್ಷಿಣದ ಆಯ್ಕುಡಿ ಆಧಾರಸ್ತಂಭಗಳಾಗಿರುವವೆಂದು ಕೊಂಡಾಡಿರುವನು.[೩೦] ಈ ಎಲ್ಲ ಉಲ್ಲೇಖನಗಳೂ ತಮಿಳು ರಾಜರ ಮೇರೆಗಳನ್ನು ನಿರ್ದೇಶಿಸುವುದಲ್ಲದೆ, 'ತಮಿಳಗಂ'ನ ಗಡಿಗಳನ್ನಲ್ಲವೆಂಬುದನ್ನು, ಇವೆಲ್ಲವೂ ಕವಿಗಳ ಉತ್ಪ್ರೇಕ್ಷಿತ ಹೇಳಿಕೆಗಳು ಎಂಬುದನ್ನೂ ಗಮನಿಸುವುದವಶ್ಯ. ಇಷ್ಟೇ ಆವಶ್ಯಕವಾಗಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ದೊರೆತ ಸಂದರ್ಭಗಳನ್ನೆಲ್ಲಾ ಬಳಸಿಕೊಂಡು, ತಮ್ಮ ಪೋಷಕರ, ರಾಜರ, ನಾಯಕರ ಮತ್ತು ಭಾಷಿಕರ ಪ್ರಾದೇಶಿಕ ಮೇರೆಗಳನ್ನು ಗುರುತಿಸುವ ಸಂಪ್ರದಾಯವನ್ನು ಶಂಗಂ ಕವಿಗಳು ಕ್ರಿ.ಶ. ಆರಂಭಕಾಲದಲ್ಲಿಯೇ ಪ್ರಾರಂಭಿಸಿದ್ದು. ಪಾಂಡ್ಯರಾಜ್ಯದ ಗಡಿಗಳನ್ನು ಪ್ರಸ್ತಾಪಿಸುತ್ತಾ ಕವಿ ಕಟ್ಟಿರೈಕಾದ್ಯೆ, ಕೊರ್ಕೆಯ ಅಧಿಪತಿಯಾದ ಇವನು ಕುಮರಿಯ ರಕ್ಷಕನೆಂದೂ ಪೊದಿಯಿಲ್ ಬೆಟ್ಟದ ಒಡೆಯನೆಂದೂ *ಶಿಲಪ್ಪದಿಗಾರದ*ಲ್ಲಿ ವರ್ಣಿಸಿರುವುದಲ್ಲದೆ, ಹಿಮಾಲಯವನ್ನು ಉತ್ತರದ ಮೇರೆಗಲ್ಲನ್ನಾಗಿ ಅವನು ಮಾಡಿಕೊಂಡಿದ್ದನೆಂದೂ ತಿಳಿಸಿರುವನು.[೩೧]

**ನಾಲ್ಕೂ ದಿಕ್ಕಿನ ಗಡಿ ಗುರುತಿಸಿಕೊಂಡ ತಮಿಳಗಂ:**

ವೇಂಗಡ ಮತ್ತು ಕುಮರಿಗಳ ಮೇರೆಗಳನ್ನು ಪಡೆದುಕೊಂಡಿದ್ದ 'ತಮಿಳಗಂ' ಉಲ್ಲೇಖ ಪನಂನಿಂದ ಪ್ರಾರಂಭವಾಗಿ *ಶಿಲಪ್ಪದಿಗಾರಂ* ಕರ್ತೃವಿನವರೆಗೂ ಮುಂದುವರಿದರೂ ಈ ಕಾಲಾವಧಿಯ ಬಹುತೇಕ ಕವಿಗಳು ತಮಿಳಗಂ ಪೂರ್ವ ಮತ್ತು ಪಶ್ಚಿಮ ಮೇರೆಗಳ ಪ್ರಸ್ತಾಪ ಮಾಡದೇ ಇರಲು ಕಾರಣ, ಪಶ್ಚಿಮದಲ್ಲಿ ಅರಬ್ಬೀ ಸಮುದ್ರ ಮತ್ತು ಪೂರ್ವದಲ್ಲಿ ಬಂಗಾಳಕೊಲ್ಲಿ ಅದರ ಸಹಜ ಮೇರೆಯಾಗಿದ್ದುದೆನ್ನಬಹುದು. ಆದರೂ ಆಗೊಮ್ಮೆ ಈಗೊಮ್ಮೆ ತಮಿಳಗಂ ಪೂರ್ವ ಮತ್ತು ಪಶ್ಚಿಮದ ಮೇರೆಗಳನ್ನೂ ಅವರು ಹೆಸರಿಸಿರುವರು. ಉದಾಹರಣೆಗೆ, ಪತ್ತುಪಾಟ್ಟುವಿನ ಕವಿ ಮಾಂಗುಡಿ ಮರುದನ್ ಪಾಂಡ್ಯ ರಾಜ್ಯದ ನಾಲ್ಕು ಮೇರೆಗಳಲ್ಲಿ ವೇಂಗಡ-ಕುಮರಿಗಳನ್ನಲ್ಲದೆ ಪೂರ್ವ ಮತ್ತು ಪಶ್ಚಿಮದ ಕಡಲುಗಳನ್ನೂ ಉಲ್ಲೇಖಿಸುವನು.[೩೨] ಚೇರ, ಪಾಂಡಿಯ ಮತ್ತು ಚೋಳರು

ಒಮ್ಮೆ ಒಂದೇ ವೇದಿಕೆಯನ್ನಲಂಕರಿಸಿದ್ದ ಅಪೂರ್ವ ದೃಶ್ಯವೊಂದನ್ನು ವರ್ಣಿಸುತ್ತಾ ಕವಯಿತ್ರಿ ಅವ್ವೈಯಾರ್ ಈ ಮೂವರು ಮುಕುಟಧಾರಿ(ನೆಡುಮುಡಿ-ಮೂವೇಂದರ್)ಗಳನ್ನು 'ತಮಿಳಗಂ' ನಕಾಶೆಯಲ್ಲಿ ಬಂಧಿಸಿರುವಳು.[೬೬] ಇದರಂತೆ, ಹಲವು ಉಪನಾಯಕರನ್ನೂ -*ಶಿಜ್ರಿರಸರ್*, ಕುಱುನಿಲಮನ್ನರ್-ಮುಡವನಾರ್, ಕಪಿಲರ್, ಕಾವಿರಿಪೂಂಪಟ್ಟನತ್ತುಕ್ಕಾರಿ ಕಣ್ಣನಾರ್ ಮೊದಲಾದ ಕವಿಗಳು ಇಂತಹ ನಕಾಶೆಯೊಳಗೆ ತಂದಿರಿಸಿದರು.

ಶಂಗಂ ಕಾಲದ ಕೊನೆಯಂಚಿಗೆ ಬಂದಾಗ, ಇದಿನ್ನೂ ಹೆಚ್ಚು ನಿಖರತೆಯನ್ನು ಪಡೆದುಕೊಂಡಿತೆಂಬುದಕ್ಕೆ *ಶಿಲಪ್ಪದಿಗಾರದ* ಪುಗಾರ್‌ಕಾಂಡದಲ್ಲಿ ಬರುವ ಒಂದು ಘಟನೆಯನ್ನು ಉದಾಹರಿಸಬಹುದು. ಚತುರಮಂತ್ರಿ ವಸಂತನೊಡಗೂಡಿ ಖ್ಯಾತ ಅರಸ ಮಾರನ್ ತನ್ನ ಪ್ರಭಾವವನ್ನು ಫಲವತ್ತಾದ 'ತಮಿಳಗಂ' ಮೇಲೆ ಸಾಧಿಸಿಕೊಂಡ ಬಗೆಯನ್ನು ವಿವರಿಸುತ್ತಾ ಅದು ವಿಷ್ಣುವಿನ ಪವಿತ್ರ ಸ್ಥಾನವಾದ ಉತ್ತರದಲ್ಲಿ 'ನೆಡಿಯೊಳ್' ಮತ್ತು ದಕ್ಷಿಣದ 'ತೊಡಿಯೊಳ್' ನಡುವಣ ಪ್ರದೇಶವಾಗಿದ್ದುದನ್ನು ಮತ್ತು ಅದರಲ್ಲಿ ಬಹುಮಹಡಿ ಮನೆಗಳ ಮದುರೆ, ಹೆಸರಾಂತ ಉಱಂದ್ಯೆ, ಅದ್ಭುತವಾದ ವಜ್ಞಿಗಳಲ್ಲದೆ ಸಾಗರದಲೆಗಳ ಭೋರ್ಗರತವನ್ನು ಮಾರ್ದನಿಸುತ್ತಿದ್ದ ಪುಗಾರ್ ಶೋಭಿಸುತ್ತಿದ್ದುದನ್ನೂ ಪೂಜ್ಯ ಯತಿಶ್ರೇಷ್ಠ(ಅಗಸ್ತ್ಯ)ನ ಪವಿತ್ರ ಪೊದಿಯಿಲ್‌ನಿಂದ ಬೀಸುತ್ತಾ ದಕ್ಷಿಣಮಾರುತನು ರಾಯಭಾರಿಯಂತೆ ವಸಂತಾಗಮನವನ್ನು ಘೋಷಿಸುತ್ತಿದ್ದುದನ್ನೂ ಮನಮುಟ್ಟುವಂತೆ ಚಿತ್ರಿಸಲಾಗಿದೆ.[೬೭] ಇಲ್ಲಿ ಬರುವ ಉಱಂದ್ಯೆ ಚೋಳರ ರಾಜಧಾನಿ ಉಱೈಯೂರ್; ಮದುರೆ, ಪಾಂಡ್ಯರ ರಾಜಧಾನಿ ಮದುರೈ; ವಜ್ಞಿ ಚೇರರ ರಾಜಧಾನಿ ಕರುವೂರು. ಪುಗಾರ್ ಪ್ರಸಿದ್ಧ ಬಂದರುಪಟ್ಟಣ, ಕಾವೇರಿಪೂಂಪಟ್ಟಣಂ ಅಥವಾ ಪೂಂಪುಗಾರ್.

'ತಮಿಳಗಂ'ನ ಮೇಲೆ ವಿಶಿಷ್ಟ ಬೆಳಕು ಚೆಲ್ಲುವ *ಶಿಲಪ್ಪದಿಗಾರದಲ್ಲಿ* ಬರುವ ಮತ್ತೊಂದು ಮಾತನ್ನೂ ಇಲ್ಲಿ ನೆನೆಯುವುದವಶ್ಯ. ಇದು ಇಂತಿದೆ:

ಪಂಚತಿಣೈ(ಐದು ಪ್ರಾದೇಶಿಕ ವಲಯ)ಗಳಲ್ಲಿ ನೆಲೆಸಿ, ಧರ್ಮಾರ್ಥಕಾಮ (ಎಂಬ ಪುರುಷಾರ್ಥ)ಗಳಿಗೆ ಶಿಷ್ಟರಾದ ದೇವತೆಗಳೂ ಮಾನವರೂ ಪರಿಶುದ್ಧ (ಸೆನ್ದಮಿಟ್ ಕಾವ್ಯಭಾಷೆ; ಮಾರ್ಗಿನುಡಿ) ಮತ್ತು ಪ್ರಸಿದ್ಧ (ತಮಿಳ್ ಆಡುನುಡಿ; ಸಾಮಾನ್ಯರ ಭಾಷೆ) ಎಂಬ ಎರಡು ಬಗೆಯನ್ನೊಳಗೊಂಡ ಅನ್ಯೋನ್ಯ ಪ್ರಾಸಬಂಧವ 'ಅಗಂ' ಮತ್ತು 'ಪುಱಂ' ಕಾವ್ಯ ಪ್ರಭೇದಗಳನ್ನು, ಪಾಡಲ್ (ಹಾಡು), ಯಾಟ್(ಯಾಳ ಸಂಗೀತ), ಪಣ್(ರಾಗ, ಆಲಾಪ), ಪಾಣಿ(ಮುದ್ರಾ), ಅರಂಗು(ರಂಗಕಲೆ), ವಿಲಕ್ಕ ಮತ್ತು ಆಡಲ್(ಅಂಗಭಂಗ;

ಲಾಸ್ಯ)ಗಳಿಂದ, ಸುಲಭಗ್ರಾಹ್ಯವೂ ನಿರ್ದುಷ್ಟವೂ ಆದ ತಮಿಳು ಭಾಷೆಯಲ್ಲಿ ವ್ಯಾಖ್ಯಾನಿಸಿ ಉತ್ತುಂಗ ಶಿಖರ ಸಮೂಹವನ್ನು ಪ್ರತಿಬಿಂಬಿಸುವ ದರ್ಪಣದಂತಿರುವ, 'ತಮಿಳಗಂ'ನ ಸೊಬಗನ್ನು ಈ ಕಾವ್ಯ ಪ್ರತಿಬಿಂಬಿಸುವುದು.[೩೫]

*ತೊಲ್ಕಾಪ್ಪಿಯಮ್*‌ನಿಂದ *ಶಿಲಪ್ಪದಿಗಾರ*ದವರೆಗಿನ (ಕ್ರಿ.ಶ. ೧ರಿಂದ ೬ನೆಯ ಶತಮಾನದ) ತಮಿಳು ಆಕರಗಳಿಂದ ನಾವು ತಿಳಿದುಕೊಳ್ಳಬಹುದಾದ ಪ್ರಧಾನ ಅಂಶಗಳನ್ನು ಇಲ್ಲಿ ಸಂಗ್ರಹಿಸಿ ಹೇಳುವುದಾದರೆ, ಅವು ಇಂತಿವೆ:

೧. 'ತಮಿಳಗಂ' ಅಥವಾ ತಮಿಳು ಭಾಷಿಕರ ಗಡಿಗಳನ್ನು ಗುರುತಿಸಲು ಆಸಕ್ತಿ ತೋರದ ತೊಲ್ಕಾಪ್ಪಿಯನಾರ್, 'ತಮಿಳು' ಮತ್ತು 'ಸೆನ್ದಮಿಳು' ಪದಗಳ ಅರ್ಥ ವಿಶ್ಲೇಷಿಸಿ ಒಂದು ಪ್ರದೇಶದ (ತಿಣೈ) ಜನಾಂಗ ಯಾವ ಆಧಾರದ ಮೇಲೆ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಂಡು, ಸ್ವಂತಿಕೆಯನ್ನು ಪಡೆದುಕೊಳ್ಳುವುದೆಂಬುದನ್ನೂ ತಮಿಳುನಾಡಿನ ಹನ್ನೆರಡು ಆಂತರಿಕ ವಲಯಗಳ ಸ್ವರೂಪಗಳನ್ನೂ ಪ್ರಪ್ರಥಮ ಬಾರಿಗೆ ವಾಙ್ಮಯ ವೇದಿಕೆಯ ಮೇಲೆ ತಂದನು.

೨. ತಮಿಳಗಂ ಉತ್ತರ ಮತ್ತು ದಕ್ಷಿಣದ ಮೇರೆಗಳನ್ನು ಮೊಟ್ಟಮೊದಲು ಗುರುತಿಸಿದ ಶ್ರೇಯಸ್ಸು ಪನಂಪಾರನಾರ್‌ನದಾಗಿದ್ದು ಇವನು ಹೆಸರಿಸಿದ ವೇಂಗಡ-ಕುಮರಿ ಗಡಿಗಳು ಶಂಗಂ ಕವಿಗಳಿಂದ ಪುನಃ ಪುನಃ ಉಚ್ಚರಿಸಲ್ಪಟ್ಟವು; ಅಲ್ಲದೆ ಕೆಲವು ಶಂಗಂ ಕವಿಗಳು ತಮ್ಮ ಪೋಷಕ ರಾಜರ ಅಧಿಕಾರವ್ಯಾಪ್ತಿಯಲ್ಲಿದ್ದ ಭೂಪ್ರದೇಶವನ್ನು ವರ್ಣಿಸುತ್ತಾ 'ತಮಿಳಗಂ' ಪೂರ್ವ ಮತ್ತು ಪಶ್ಚಿಮದ ಮೇರೆಗಳನ್ನೂ ಗುರುತಿಸಿದರು;

೩. ಮಹಾಕಾವ್ಯಗಳ ಕಾಲಕ್ಕೆ 'ತಮಿಳಗಂ' ಸೌಧದ ಭವ್ಯ ನಕಾಶೆಯು ನಿಖರತೆಯನ್ನೂ ಸಾರ್ವತ್ರಿಕ ಮಾನ್ಯತೆಯನ್ನೂ ಪಡೆದುಕೊಂಡು, ಅದು ಪೂರ್ವ ಪಶ್ಚಿಮದ ಎರಡು ಸಾಗರಗಳ ಉತ್ತರದ ವೇಂಗಡ ದಕ್ಷಿಣದ ಕುಮರಿಯ ನಡುವಣ ಪ್ರದೇಶದಲ್ಲಿ ಪ್ರತಿಷ್ಠಾಪಿತಗೊಂಡಿತ್ತು.

**ಆಕರ ಟಿಪ್ಪಣಿ :**

೧. ಈ ಬಗೆಯ ಅವೈಜ್ಞಾನಿಕ ನಕಾಶೆಗಳನ್ನು ವಿದ್ಯಾರ್ಥಿಗಳಿಗಾಗಿ ಪ್ರಕಟಿಸಿದ ಕೊಲ್ಲಿನ್ ಡೇವಿಸ್ *ಯಾನ್ ಹಿಸ್ಟಾರಿಕಲ್ ಅಟ್ಲಾಸ್ ಆಫ್ ದಿ ಇಂಡಿಯನ್ ಪೆನಿನ್ಸುಲ* (ಒಯುಪಿ, ೧೯೪೯), ಮಾತ್ರವಲ್ಲದೆ ಪ್ರಮಾಣಿತ ಗ್ರಂಥಗಳಲ್ಲಿಯೂ ಕಾಣಬಹುದು. ಇದಕ್ಕೆ ಎರಡು ಹೆಸರಾಂತ ಇತಿಹಾಸಕಾರರ ಗ್ರಂಥಗಳನ್ನಿಲ್ಲಿ ನಿದರ್ಶಿಸಬಯಸುವೆ: ೧. ಥಾಪರ್, ರೋಮಿಲ, *ಅಶೋಕ ಅಂಡ್ ದಿ ಡಿಕ್ಲೈನ್*

ಆಫ್ ದಿ ಮೌರ್ಯಾಸ್ (ಓಯುಪಿ, ೧೯೭೩), ಪು. ೪೮, ೧೨೪ನಲ್ಲಿಯ ನಕಾಶೆಗಳು, ಇರ್ಫಾನ್ ಹಬೀಬ್ ಮತ್ತು ವಿವೇಕಾನಂದ ಝಾ, ಮೌರ್ಯನ್ ಇಂಡಿಯಾ, ಎ ಪೀಪಲ್ಸ್ ಹಿಸ್ಟರಿ ಆಫ್ ಇಂಡಿಯಾ, ಸಂ. ೪: ಅಲಿಗರ್ ಹಿಸ್ಟೋರಿಯನ್ ಸೊಸೈಟಿಯ ಮಾಲಿಕೆ (ನವದೆಹಲಿ, ೨೦೦೪), ನಕಾಶೆ ೨-೩, ಪು. ೫೭; ಪು. ೯೩; ೩.೨-ಪು. ೧೫೨

೨. ಮಹಾಭಾರತ - 'ಭೀಷ್ಮಪರ್ವ'(ಅ. ೯)ದಲ್ಲಿ 'ದ್ರಾವಿಡ'ವನ್ನಲ್ಲದೆ ಕೇರಳ, ಮಹಿಷಕ, ಕರ್ನಾಟಕ, ಕೊಂಕಣ, ಚೋಳ ದೇಶಗಳನ್ನು 'ಕರ್ಣಪರ್ವ'ದಲ್ಲಿ (ಅ. ೪೪) ದ್ರಾವಿಡ, ಆಂಧ್ರ, ನಿಷಾದರನ್ನು, 'ಅಶ್ವಮೇಧಪರ್ವ'ದಲ್ಲಿ(ಅ. ೨) ಅಬೀರ, ಪುಂಡ್ರ, ಶಬರರೊಡನೆ ದ್ರಾವಿಡರನ್ನೂ ಹೆಸರಿಸಿ, ಇವರನ್ನೆಲ್ಲ 'ಶೂದ್ರ'(ಅ. ೩೦)ರೆಂದು ಕರೆದಿರುವುದನ್ನು ಇಲ್ಲಿ ನಿದರ್ಶಿಸಬಹುದು. *ಭಾಗವತ* (III, VIII ಮುಂ.), *ಬ್ರಹ್ಮಾಂಡ* (II), *ವಾಯು* (೫೮.೫೨), *ಮತ್ಸ್ಯ* (೧೧೪-೫೬), ಮುಂತಾದ ಪುರಾಣಗಳಲ್ಲಿ ವರಾಹಮಿಹಿರನ *ಬೃಹತ್ ಸಂಹಿತಾ*ದಲ್ಲಿ ಆರವ (XIV, ೧೭), ದ್ರಾವಿಡ (IX, ೧೫, ೧೯ ಮುಂ.), ದ್ರವಿಡಾಧಿಪತಿ (IV, ೨೩) ಎಂಬ ಉಲ್ಲೇಖಗಳು ಬರುವುವು. ಈ ಸಂಸ್ಕೃತ ಪರಂಪರೆಗೆ ಬದಲಾಗಿ ಪಾಲೀ ಸಾಹಿತ್ಯದಲ್ಲಿ 'ದಮಿಲರಠ್ಠ (ಕೊವೆಲ್, ಇ.ಬಿ. (ಸಂ.) *ದಿ ಜಾತಕಾಸ್ ಆರ್ ಸ್ಟೋರೀಸ್ ಆಫ್ ದಿ ಬುದ್ಧಾಸ್ ಫಾರ್ಮರ್ ಬರ್ತ್ಸ್* (ಲಂಡನ್, ೧೯೫೭) : ಅಕತ್ತಿಜಾತಕ, 'ದಮಿಲ', 'ದಮಿಲದೇವಿ' (ಹೆರ್ಮನ್ ಓಲ್ಡೆನ್‌ಬರ್ಗ್ (ಸಂ.) *ದೀಪವಂಸ* (ಬರ್ಲಿನ್, ೧೮೭೯) XVIII, ೪೭; XXI, ೪೫) ಎಂಬ ಉಲ್ಲೇಖಗಳಿವೆ. 'ಪೆರಿಪ್ಲಸ್' ಗ್ರಂಥದಲ್ಲಿ ಮತ್ತು ಪ್ಲಿನಿಯ ಭೂಗೋಳದಲ್ಲಿ 'ದಮರಿಕೆ', 'ದಮ್ಯರಿಕೆ' ಪದಗಳಿಂದ ತಮಿಳರನ್ನು ಉಲ್ಲೇಖಿಸಲಾಗಿದೆ. ಸುಬ್ರಹ್ಮಣಿಯನ್, ಎನ್. *ಒರಿಜಿನಲ್ ಸೋರ್ಸ್ ಆಫ್ ದಿ ಹಿಸ್ಟರಿ ಆಫ್ ತಮಿಳ್ನಾಡು* (ಉದುಮಲ್‌ಪೆಟ್, ೧೯೯೪), ಪು. ೩೨, ೩೭, ೪೪, ೪೮, ೨೬೫-೨೮೦

೩. ಅಶೋಕನ ೧೩ನೆಯ ಮಹಾಶಾಸನ(ಮೇಜರ್ ಇಡಿಕ್ಟ್)ದಲ್ಲಿ ಮೌರ್ಯ ಸಾಮ್ರಾಜ್ಯದ ಜನಾಂಗಗಳಾದ ಭೋಜ, ಪಿತಿನಿಕ, ಪಾರಿಂದಗಳ ಜೊತೆಗೆ ಆಂಧ್ರರನ್ನೂ ಹೆಸರಿಸಲಾಗಿದೆ. ಇದಾದ ನಂತರ ಅವನ ರಾಜ್ಯದ ಹೊರಗಿದ್ದ ದಕ್ಷಿಣದ ನೆರೆರಾಜ್ಯಗಳಾದ ಚೋಳ, ಪಾಂಡಿಯ, ಕೇರಳಪುತ್ರ, ಸಾತ್ಯಪುತ್ರ ಮತ್ತು ತಾಮ್ರಪರ್ಣಿ(೨ನೆಯ ಮಹಾಶಾಸನದಲ್ಲಿ)ಗಳನ್ನು ಹೆಸರಿಸಲಾಗಿದೆ.

೪. ನೋಡಿ-ಮಹಾದೇವನ್, ಐರಾವತನ್, ವಿ., *ಅರ್ಲಿ ತಮಿಳ್ ಎಪಿಗ್ರಾಫಿ : ಫ್ರಮ್ ದಿ ಅರ್ಲಿಯೆಸ್ಟ್ ಟೈಮ್ಸ್ ಟು ದಿ ಸಿಕ್ಸ್ತ್ ಸೆಂಚುರಿ ಎ.ಡಿ.*, (ಚೆನ್ನೈ-ಹಾರ್ವರ್ಡ್ ವಿ.ವಿ.ಪ್ರ., ೨೦೦೩).

೫. ಮುರುಗನ್, ವಿ. (ಸಂ.), *ತೊಲ್ಕಾಪ್ಪಿಯಮ್ ಇನ್ ಇಂಗ್ಲಿಷ್* (ಚೆನ್ನೈ, ೨೦೦೧), ೩೮೫, (I-III, ೯೦).

೬. *ಅದೇ.*, ೮೮೧ (II-IX-೨). ಅಲ್ಲದೆ ನೋ. ೮೮೦, ೮೮೩ (IX. ೩೯೨, ೩೯೪). ತೊಲ್ಕಾಪ್ಪಿಯಮ್‌ನ ಅತ್ಯಂತ ಪುರಾತನ ಟೀಕಾಕಾರನಾದ ಇಳಂಪೂರಣರ್‌ನ ಟಿಪ್ಪಣಿಗಳಿಗೆ ನೋ. ನಮಶ್ಶಿವಾಯ ಮೊದಲಿಯಾರ್ (ಸಂ.), ಇಳಂಪೂರಣರ್ (ಚೆನ್ನೈ, ೧೯೨೮, ಪು. ೨೧೧), 'ಶೊಲ್' ಚರ್ಚೆಗೆ ನೋ. ತಿರುನಾವಕ್ಕರಸು, ಕೆ.ಡಿ., *ಚೀಫ್ಟನ್ಸ್ ಆಫ್ ದಿ ಸಂಗಂ ಏಜ್*, (ಮದ್ರಾಸು, ೧೯೯೪), ಪು. ೪೪-೪೬

೭. ಮುರುಗನ್, *ಅದೇ.*, ೯೪೭-೯೬೭, ೧೫೬೬.

೭. ‘ಅಗತ್ತಿಣಯರ್’, ತೊಲ್. ‘ಪೊರುಳ್’, ೧-೨, ೫, ಮುಂ. ಹೋಲಿಸಿ, ಮಾರ್, ಜೋ. ರಾ., ದಿ ಎಯ್ಟ್ ಅಂಥೋಲಜೀಸ್, (ಮದ್ರಾಸು, ೧೯೭೫, ಪು. ೧೫-೧೭) ಈ ಪಂಚ ತಿಣೈಗಳಲ್ಲದೆ ಪ್ರಾದೇಶಿಕ ಸೀಮೆಯುದಿ. ‘ಕೈಕ್ಕಿಳೈ’ ಮತ್ತು ‘ಪೇರುಂತಿಣೈ’ಗಳನ್ನು ಹೆಸರಿಸಲಾಗಿದೆ. ‘ತಿಣೈ’ ಚರ್ಚೆಗೆ ಸರಿಸುಮಾರು ಒಂದು ಶತಮಾನ ಕಾಲದ ಇತಿಹಾಸವಿದೆ. ಆ ಚರ್ಚೆಯ ಸಾರಾಂಶವನ್ನು ಸಂಗ್ರಹಿಸಿ ಕೊಡುವುದೇ ಪ್ರಯಾಸದಾಯಕ. ಇದರ ಪರಿಚಯವಿರದ ಕನ್ನಡಿಗರಿಗೆ ಅದರ ಸ್ಥೂಲ ಚಿತ್ರವೊಂದನ್ನು ಕೊಡಲು ಪ್ರಯತ್ನಿಸುವೆ:

i. ‘ಕುಱುಂಜ್ಞಿ’ ಎಂಬುದು ಹನ್ನೆರಡು ವರ್ಷಗಳಿಗೊಮ್ಮೆ ಅರಳುವ ಪರ್ವತ ಪುಷ್ಪ ಚಿಕ್ಕ ಚಿಕ್ಕ ಕೀಟ ಮತ್ತು ನೀರು ಬುಗ್ಗೆಗಳಿರುವ ಗಿರಿಪ್ರದೇಶ ಇದರ ಜನ್ಮಸ್ಥಳ. ಇಲ್ಲಿಯ ನಿವಾಸಿಗಳ ಕಸುಬು ಜೇನು ಶೇಖರಣೆ, ಗೆಡ್ಡೆ-ಗೆಣಸು ಅಗೆಯುವುದು, ಫಸಲನ್ನು ಮುತ್ತುವ ಪಕ್ಷಿಗಳನ್ನು ಓಡಿಸುವುದು. ಅವರ ಮುಖ್ಯ ಆಹಾರ ಉತ್ಪಾದನೆ ಭತ್ತ, ಬಿದಿರು ಮತ್ತು ಜೋಳ. ಪ್ರೇಮಿಗಳನ್ನು ರತಿಕೇಳಿಗೆ ಪ್ರೇರೇಪಿಸುವುದು ಈ ಪರಿಸರದ ವೈಶಿಷ್ಟ್ಯ (ತಮಿಳುನಾಡಿನ ಪಳನಿ, ನೀಲಗಿರಿ, ಪಶ್ಚಿಮ ಘಟ್ಟ ಇದಕ್ಕೆ ಉತ್ತಮ ಉದಾಹರಣೆ ಎನ್ನಲಾಗಿದೆ).

ii. ‘ಮುಲ್ಲೈ’ ಎಂಬುದು ವರ್ಷಾನಂತರದ ಕಾಲದಲ್ಲಿ ಅರಳುವ ಧವಳವರ್ಣದ ಸುಗಂಧ ಪುಷ್ಪ ಇದರ ಜನ್ಮಸ್ಥಾನ ನದೀ ನೀರುಣ್ಣುವ ಹುಲ್ಲುಗಾವಲು. ಇಲ್ಲಿಯ ಜನಾಂಗದ ಪ್ರಮುಖ ಉದ್ಯೋಗ ಪಶುಪಾಲನೆ, ಎಮ್ಮೆ-ಕೋಣಗಳಿಂದ ಧಾನ್ಯ ಒಕ್ಕುವುದು ಮತ್ತು ಜೋಳವನ್ನು ಹಸನುಗೊಳಿಸಿ ಸಂಗ್ರಹಿಸುವುದು. ಇವರ ಪ್ರಧಾನ ಆಹಾರ ‘ವರಗು’, ‘ಶಾಮೈ’ ಮತ್ತು ‘ಮತಿರೈ’ ಧಾನ್ಯಗಳು. ದೂರ ಪ್ರಯಾಣದಲ್ಲಿದ್ದ ಪ್ರಿಯಕರನಿಗಾಗಿ ಪರಿತಪಿಸುವ ಪ್ರಿಯೆಯ ಜೀವನ ಇದರ ವೈಶಿಷ್ಟ್ಯ (ತಮಿಳುನಾಡಿನ ತಿರುಚಿನಾಪಳ್ಳಿಯಿಂದ ಮದುರೈವರೆಗಿನ, ಸೇಲಂನಿಂದ ಕೋಯಮತ್ತೂರುವರೆಗಿನ ಪ್ರದೇಶ ಇದಕ್ಕೆ ಉತ್ತಮ ನಿದರ್ಶನವೆನ್ನಲಾಗಿದೆ).

iii. ‘ಮರುದಮ್’ ಎಂಬುದು ಕೆರೆ ಮತ್ತು ನದೀ ದಡಗಳಲ್ಲಿ ಬೆಳೆಯುವ ಹೆಮ್ಮರದಲ್ಲಿ ಬಿಡುವ ಹೂ. ನದಿ, ಬಾವಿ, ಕೆರೆಗಳಿಂದ ಹೇರಳವಾಗಿ ನೀರುಣ್ಣುವ ಫಲವತ್ತಾದ ಕೃಷಿಯೋಗ್ಯ ಭೂಮಿಯಲ್ಲಿ ಅಲ್ಲಿನ ನಿವಾಸಿಗಳು ಭತ್ತದ ಬೆಳೆ ಮತ್ತು ಪಶು ತಳಿಯನ್ನು ವೃದ್ಧಿಸುವ ಕಸುಬಿನಲ್ಲಿ ತೊಡಗುವರು. ಭತ್ತ ಅವರ ವಿಶೇಷ ಆಹಾರ ಬೆಳೆ. ತನ್ನನ್ನು ವಂಚಿಸಿ ಸೂಳೆಯ ಸಂಗದಲ್ಲಿರುವ ಪ್ರಭಾವೀ ಪತಿಯ ಬಗ್ಗೆ ಆತಂಕಪಡುವ ಹೆಂಡತಿಯನ್ನು ಈ ಪರಿಸರ ಪ್ರತಿಬಿಂಬಿಸುವುದು (ತಮಿಳುನಾಡಿನ ಶ್ರಾಂಗನೂರಿನಿಂದ ಕನ್ಯಾಕುಮಾರಿಯವರೆಗಿನ ಪ್ರದೇಶ ಇದಕ್ಕೆ ಉದಾಹರಣೆಯೆನ್ನಲಾಗಿದೆ).

iv ‘ನೈಯ್ದಲ್’ ಎಂಬುದು ಜಲಪುಷ್ಪ. ಇದು ಕರಾವಳಿಯ ವಿಶೇಷತೆ. ಈ ಪರಿಸರದ ಜನಾಂಗದ ಮುಖ್ಯ ಕಸುಬು ಮೀನುಗಾರಿಕೆ, ಉಪ್ಪು ಉತ್ಪಾದನೆ ಮತ್ತು ಅದರ ವಿನಿಮಯ. (ಸಮುದ್ರ ತೀರದಿಂದ) ದೂರ ಹೋದ ಪ್ರಿಯತಮನ ಆಗಮನಕ್ಕಾಗಿ ಪರಿತಪಿಸುವ ಕ್ರಿಯೆಯನ್ನು ಪ್ರತಿನಿಧಿಸುವುದು ಈ ಪರಿಸರದ ವಿಶೇಷತೆ (ಕೇರಳ ಕರಾವಳಿ ಇದಕ್ಕೆ ಉತ್ತಮ ನಿದರ್ಶನವೆನ್ನಲಾಗಿದೆ).

v. ‘ಪಾಲೈ’ ಎಂಬುದು ಪಾಳು ಭೂಮಿ ಅಥವಾ ಮರುಭೂಮಿಯಲ್ಲಿ ಬೇಸಗೆಯಲ್ಲಿ ಅರಳುವ ಪುಷ್ಪ ಈಗ ತಮಿಳುನಾಡಿನಲ್ಲಿ ಅಪರೂಪವಾಗಿರುವ ಈ ಪುಷ್ಪವನ್ನು ಶ್ರೀಲಂಕೆಯಲ್ಲಿನ್ನೂ ಕಾಣಲು ಸಾಧ್ಯ. ಬಾವಿ ಮತ್ತು ಚಿಕ್ಕ ನೀರ್ಬುಗ್ಗೆಗಳ ಪಾಡು ಭೂಮಿಯ ಈ ಜನಾಂಗದ ಮುಖ್ಯ ಕಸುಬು ಕಳ್ಳತನ, ಕೊಳ್ಳೆ

ಹೊಡೆಯುವುದು, ಪ್ರಯಾಣಿಕರನ್ನು ಪೀಡಿಸುವುದು. ಅಗಲಿದ ಪ್ರೇಮಿಗಳ ವಿರಹ ತಾಪವನ್ನು ಈ ಪರಿಸರ ಪ್ರತಿನಿಧಿಸುವುದು.

ಈ ತಿಣೈಗಳಲ್ಲಿ ಎದ್ದುಕಾಣುವ ಅಂಶಗಳು, ವಿಶಿಷ್ಟ ಪರಿಸರ, ಅದಕ್ಕೆ ಹೊಂದಿಕೊಂಡ ಜನಾಂಗೀಯ ಕಸಬು, ಅವರ ಜೀವನದಲ್ಲಿ ಸಾಮಾನ್ಯವೆನಿಸುವ ಪ್ರಣಯ ತುಡಿಕೆಯ ವಿಶಿಷ್ಟ ಪ್ರಭೇದ. ಐದು ಬಗೆಯ ಪುಷ್ಪಗಳು, ಐದು ಬಗೆಯ ಪರಿಸರ, ಕಸುಬು, ಮಾನಸಿಕ ತುಮುಲವನ್ನು ಸಮರ್ಥವಾಗಿ ಸಂಕೇತಿಸುವುವು.

೯. ಶ್ರೀನಿವಾಸ ಐಯಂಗಾರ್, ಪಿ. ಟಿ., *ಹಿಸ್ಟರಿ ಆಫ್ ದಿ ತಮಿಳ್ಸ್ ಅಪ್ ಟು ೬೦೦ ಎ.ಡಿ.* (ಮದ್ರಾಸು, ೧೯೨೯), ಪು. ೪ ಮತ್ತು ಇವರ ಲೇಖನ 'ಎನ್‌ವೈಯರ್ನ್‌ಮೆಂಟ್ ಅಂಡ್ ಕಲ್ಚರ್', *ತ್ರಿವೇಣಿ* ೧-೩, (ಮದ್ರಾಸು, ೧೯೨೮), ಪು. ೭೨. ರಾಮಚಂದ್ರ ದೀಕ್ಷಿತರ್, ವಿ. ಆರ್., *ಸ್ಟಡೀಸ್ ಇನ್ ತಮಿಳ್ ಲಿಟರೇಚರ್ ಅಂಡ್ ಹಿಸ್ಟರಿ*, (ಮದ್ರಾಸು, ೧೯೩೬), ಪು. ೭೮. ಜ್ವಲೆಬಿಲ್, ಕೆ., 'ತಮಿಳ್ ಪೊಯಟ್ರಿ ೨೦೦೦ ಇಯರ್ಸ್ ಅಗೋ', *ತಮಿಳ್ ಕಲ್ಚರ್* x-2, (ಮದ್ರಾಸು, ೧೯೬೦). ಕಾರ್ತಿಗೇಸು ಶಿವತಂಬೀ, *ಸ್ಟಡೀಸ್ ಇನ್ ಏನ್ಷಿಯಂಟ್ ತಮಿಳ್ ಸೊಸೈಯಿಟಿ : ಇಕೊಲಜಿ, ಇಕಾನಮಿ, ಸ್ಟೇಟ್ ಫಾರ್ಮೇಶನ್*, (ಚೆನ್ನೈ, ೧೯೯೮), ಪು. ೧೫-೧೯, ೯೨-೧೦೦; ಈ ಗ್ರಂಥದಲ್ಲಿಯ 'ಶಂಕಂ ಲಿಟರೇಚರ್ ಅಂಡ್ ಆರ್ಕಿಯಾಲಜಿ'ಯ ಅಧ್ಯಾಯ ವಿಶೇಷ ಗಮನಾರ್ಹ, (ಪು. ೯೭-೧೦೦). ವೆಂಕಟ ಸುಬ್ರಮಣಿಯನ್, ಟಿ.ಕೆ., *ಎನ್‌ವೈಯರ್ನ್‌ಮೆಂಟ್ ಅಂಡ್ ಅರ್ಬನೈಜೇಷನ್ ಇನ್ ಅರ್ಲಿ ತಮಿಳಗಂ*, (ತಂಜಾವೂರು, ೧೯೮೮), ಪು. ೧೩, ೨೩-೨೫, ೩೬ ಮುಂ.

೧೦. *ತೊಲ್ಕಾಪ್ಪಿಯಮ್-ಪೊರುಳದಿಗಾರಮ್* (ನಚ್ಚಿ) ಪು. ೬; *ಇಱಿಂಪುರಮ್*, ಪು. ೨೦-೨೧. *ತುರೈ ಅರಂಕಶಮ್ಯ ಶಂಕಕಾಲಶ್ ಶಿರುಪ್ಪುಪೆಯರ್ಕಲ್, ಪಾಲಿ ನಿಲಯಮ್*, (ಮದ್ರಾಸು, ೧೯೯೦). ಪು. ೨೦೨-೩೪೧. ಪುನರ್ ಉಲ್ಲೇಖ – ಕಾರ್ತಿಗೇಸು ಶಿವತಂಬೀ, *ಅದೇ.*, ಪು. ೧೩, ಅ.ಟಿ. ೩೬-೩೭ ಮತ್ತು ಪು. ೧೧-೧೨

೧೧. *ಅದೇ.*, ಪು. ೧೨, ೧೫; ೧೭-೧೮. ಮುರುಗನ್, *ಅದೇ.*, ೯೬೦-೬೧, ೯೯೪. ಅಲ್ಲದೆ ಸೂತ್ರ ೯೬೬-೬೭ (ಪು. ೩೭೯)ಗಳಲ್ಲಿಯ 'ದೈವ, ಆಹಾರ, ಪಶು, ಪಕ್ಷಿ, ಕೋಲು, ಕೊಳಲು, ಕಸಬುಗಳು ಒಂದು ಪ್ರದೇಶದ ವೈಶಿಷ್ಟ್ಯವನ್ನು ರೂಪಿಸುವುವು' ಎಂಬ ಮಾತು ಗಮನಾರ್ಹ.

೧೨. *ಪೊರುನರ್-ಆಱ್ರುಪಡೈ* ೨೧೮-೨೨೬; *ಮಲೈಪಡುಕಡಾಮ್*, ೩೩೧-೩೩೪. ತಣಿನಾಯಗಮ್ ಝೇವಿಯರ್, ಎಸ್., *ಲ್ಯಾಂಡ್‌ಸ್ಕೇಪ್ ಅಂಡ್ ಪೊಯಟ್ರಿ : ಎ ಸ್ಟಡಿ ಆಫ್ ನೇಚರ್ ಇನ್ ಕ್ಲಾಸಿಕ್ ತಮಿಳ್ ಪೊಯಟ್ರಿ*, (ಚೆನ್ನೈ, ೧೯೯೭), ಪು. ೬೧-೬೨

೧೩. ಶೊಲ್. ೪೦೦. ನನ್ನೂಲ್, ೨೭೩. ಶಂಕರ ನಮಶ್ಶಿವಾಯರ್ ಟೀಕೆ, ಪು. ೨೫೫; ತಿರುನಾವಕ್ಕರಸು, *ಅದೇ.*, ಪು. ೪೩-೪೬, ಅ.ಟಿ. ೮. ಕಾರ್ತಿಗೇಸು ಶಿವತಂಬೀ, *ಅದೇ.*, ಪು. ೧೩, ಅ.ಟಿ. ೩೭. ಇಂದಿನ ತಮಿಳು ಸಮುದಾಯಗಳಲ್ಲಿ ಕಸಬು ಆಧಾರಿತ ವೆಳ್ಳಾಳ (ಕೃಷಿಕ), ಕರೈಯಾರ್ (ಕರಾವಳಿಯ ಮೀನುಗಾರ), ಪಳ್ಳರ್ (ಘಟ್ಟದ ಕೆಳಗಿನ ಕೃಷಿ ಶ್ರಮಿಕರು)ಗಳನ್ನು ಇಲ್ಲಿ ನಿರ್ದಿಶಿಸಬಹುದು.

೧೪. ಮುರುಗನ್, ಅದೇ., ಪು. XXII-XXIII

೧೫. *ಕುಱುಂದೊಗೈ*, ಪ. ೧೪೪, ಪು. ೧೭೮; ಕಂದಸ್ವಾಮಿ, ಎಸ್. ಎನ್., ಅದೇ., ಪು. ೪೮

೧೬. ಮುರುಗನ್, ಅದೇ., ಪು. XXIII : 'ಪನಂಪಾರನಾರ್ ಸೊಣ್ಣತ್ತು'.

೧೭. ಟೀಕಾಕಾರ (ಉರೈಯಾಶಿರಿಯರ್)ರಲ್ಲಿ ಇಳಂಪೂರಣರ್, ಪೇರಾಶಿರಿಯರ್, ತೆಯ್ವಚ್ಚಿಲೈಯಾರ್, ಕಲ್ಲಾಡನಾರ್ ಮತ್ತು ನಚ್ಚಿನಾರ್ಕ್ಕಿಣಿಯಾರ್ (ನಚ್ಚಿ) ಉಲ್ಲೇಖಾರ್ಹರು. ಇವರಲ್ಲೆಲ್ಲಾ ಹೆಸರಾಂತನು ನಚ್ಚಿ. ಇವನ ಟೀಕಾಗ್ರಂಥಕ್ಕೆ, ನೋ., ಕನಶೈಯರ್ (ಸಂ.) *ತೊಲ್ಕಾಪ್ಪಿಯಮ್-ಪೊರುಳತಿಕಾರಂ ನಚ್ಚಿನಾಟ್ಕ್ಕಿನಿಯಮ್*, (ಚುನ್ನಕಂ, ೧೯೪೮), ಪು. ೬೧; *ತೊಲ್ಕಾಪ್ಪಿಯಮ್-ಪೊರುಳದಿಗಾರಂ ಇಳಂಪೂರಣರ್*, (ಮದ್ರಾಸು, ೧೯೬೫), ಪು. ೨೦-೨೧. ಈ ಆಕರಗಳನ್ನು ಕಾರ್ತಿಗೇಸು ಶಿವತಂಬೀ (ಅದೇ., ಪು. ೧೩, ಅ.ಟಿ. ೩೬) ಗ್ರಂಥದಿಂದ ಪುನರ್ ಉಲ್ಲೇಖಿಸಲಾಗಿದೆ. ಈ ಉಲ್ಲೇಖಗಳ ಬಗ್ಗೆ ಚರ್ಚೆ ಮಾಡಲು ನನಗೆ ಅವಕಾಶ ಮಾಡಿಕೊಟ್ಟು ನನ್ನ ತಿಳುವಳಿಕೆಯನ್ನು ಹೆಚ್ಚಿಸಿದ, ಇಬ್ಬರು ಮಿತ್ರರನ್ನು ನಾನು ಪ್ರೀತ್ಯಾದರದಿಂದ ನೆನೆಯಬೇಕು. ಅವರಲ್ಲಿ ಒಬ್ಬರು ಚೆನ್ನೈನ ಡಾ. ಆರ್. ನಾಗಸ್ವಾಮಿ (ನಿವೃತ್ತ ನಿರ್ದೇಶಕರು, ತಮಿಳುನಾಡು ಡಿಪಾರ್ಟಮೆಂಟ್ ಆಫ್ ಆರ್ಕಿಯಾಲಜಿ, ಮತ್ತು ತಮಿಳು ಭಾಷಾ ಪಂಡಿತರು); ಇನ್ನೊಬ್ಬರು *ದಿ ಏಯ್ಟ್ ಆಂಥೋಲೊಜೀಸ್* ಗ್ರಂಥಕರ್ತೃವೂ ಶಂಗಂ ಸಾಹಿತ್ಯದ ಹೆಸರಾಂತ ಸ್ಕಾಟಿಷ್ ಸಂಶೋಧಕರಾದ ಮಾರ್, ಜೆ. ಆರ್. ಡಾ. ಮಾರ್‌ರವರು ಇತ್ತೀಚೆಗೆ ನಮ್ಮ ದೇಶಕ್ಕೆ ಬಂದಾಗ (೨೦೦೫, ಫೆಬ್ರವರಿ) ಹಲವಾರು ಘಂಟೆಗಳ ಕಾಲ ನನ್ನೊಡನೆ ಚರ್ಚಿಸುವ ಕೃಪೆ ತೋರಿದರು.

೧೮. *ಪಱಿನಾನೂಱು*. ೬೨, ಸಾ. ೭, *ಪತ್ತು*.. *ಮದುರೈಕಚ್ಚಿ* ಸಾ. ೭೦-೭೪: *ಶಿಲಪ್ಪದಿಗಾರಂ* VI. *ಕಡಲಾದು ಕಾದೈ*, ಸಾ. ೨೮-೩೧; *ವೇಣಾರ್‌ಕಾದೈ*, ಸಾ. ೧-೪

೧೯. *ಶಿಲಪ್ಪದಿಗಾರಂ-ವೇಣಾರ್‌ಕಾದೈ*, ಸಾ. ೧೭-೨೨

೨೦. ಅದೇ., *ಕಟ್ಟುರೈಕಾದೈ* XXII; *ಮದುರೈಕ್ಕಂಡಂ* ಸಾ. ೧೩-೨೨

೨೧. ವೆಂಕಟ ಸುಬ್ರಮಣಿಯನ್, ಟಿ.ಕೆ., ಅದೇ., ಪು. ೫೫

೨೨. ಅಹನಾ. *ಕಳಿಟ್ರುಯಾನ್ನೈನಿರೈ* ೮೫, ಸಾ. ೯: *ಮಣಿಮಿಡೈಪವಳಂ* ೩೬೫, ಸಾ. ೧೮-೨೦, ೩೮೯, ಸಾ. ೧೬-೧೮.

೨೩. *ಪಱಿನಾ*. ೩೮೫, ಸಾ. ೧೧, ೩೮೯, ಸಾ. ೧೧: *ಕಳಿಟ್ರುಯಾನ್ನೈನಿರೈ* ೨೭, ಸಾ. ೬

೨೪. *ಕುಱುಂದೊಗೈ*. ೧೧; *ಮಣಿಮಿಡಿಪವಳಂ*, ೨೧೧, ಸಾ. ೭-೮, ೩೯೩, ಸಾ. ೧೮-೨೦, ೩೮೯, ಸಾ. ೧೬-೧೮; ಸುಬ್ರಹ್ಮಣಿಯನ್, ಎನ್., ಅದೇ. ಪು. ೧೦೮, ೧೧೬-೧೧೭

೨೫. *ಮಣಿಮೇಗಲೈ* V, ಸಾ. ೪೦, ಇದರಂತೆ ಇವರು ವಿಚಿತ್ರ ಭಾಷೆಯನ್ನಾಡುವ ಜನಾಂಗಗಳೆಂದು *ಶಿಲಪ್ಪದಿಗಾರಂ* VI, ಸಾ. ೧೪೩ನಲ್ಲಿ ಉಲ್ಲೇಖಿಸಲಾಗಿದೆ.

೨೬. ಅ. ಟಿ. ೩ ನೋಡಿ.

೨೭. ಕರ್ನಾಟಕ-ಆಂಧ್ರದಲ್ಲಿ ಅಶೋಕ ಬರೆಸಿದ ಶಾಸನ ಮತ್ತು ಅವುಗಳ ವಿಶೇಷತೆಗೆ ನೋಡಿ, ಎಸ್. ಶೆಟ್ಟರ್, *ಫುಟ್ ಪ್ರಿಂಟ್ಸ್ ಆಫ್ ಆರ್ಟಿಜಾನ್ಸ್ ಇನ್ ಹಿಸ್ಟರಿ: ಸಮ್ ರಿಫ್ಲೆಕ್ಷನ್ಸ್ ಆನ್ ಅರ್ಲೀ ಆರ್ಟಿಜಾನ್ಸ್ ಆಫ್* ಇಂಡಿಯಾ (ಇಂಡಿಯನ್ ಹಿಸ್ಟರಿ ಕಾಂಗ್ರೆಸ್ ೬೪ನೆಯ ವಾರ್ಷಿಕ ಅಧಿವೇಶನದ ಸರ್ವಾಧ್ಯಕ್ಷ ಭಾಷಣ, ಮೈಸೂರು, ೨೦೦೩), ಪು. ೧-೪೮

೨೮. 'ಎರುಮೈ ಕುಡನಾಡ' (*ಅಹನಾ.* ೧೧೫-೫), 'ಎರುಮೈ ನಲ್‌ನಾಡು' (*ಅದೇ.,* ೨೫೩, ೧೯), 'ಎರುಮೈಯೂರಾನ್' (*ಅದೇ.,* ೩೬, ೧೭) ಎಂಬ ಉಲ್ಲೇಖಗಳಲ್ಲದೆ, ಇದು ತಮಿಳಗಂ ಪಶ್ಚಿಮ (ಬಹುಶಃ ಉತ್ತರ-ಪಶ್ಚಿಮ)ಕ್ಕಿದ್ದು ಅಯಿರಿನದಿಯಿಂದ ನೀರುಣ್ಣುವ ಪ್ರದೇಶವೆಂದೂ ಅದನ್ನು ವಟು(ಡು)ಕರ ನಾಯಕನೊಬ್ಬ ಆಳುತ್ತಿದ್ದನೆಂದೂ (*ಅದೇ.,* ೨೫೩; ೧೮-೨೦) ವರ್ಣಿಸಲಾಗಿರುವು ದಲ್ಲದೇ, ಕ್ರಿ.ಶ. ೧ನೆಯ ಶತಮಾನದ ಸಿತ್ತನ್‌ವಾಸಲ್ ತಮಿಳುಬ್ರಾಹ್ಮೀ ಶಾಸನದಲ್ಲಿಯೂ ಇದು ಉಲ್ಲೇಖಿಸಲ್ಪಟ್ಟಿದೆ. ಈ ಆಧಾರಗಳ ಮೇಲೆ ಇದನ್ನು ಶಾಸನಿತ ಪ್ರಪ್ರಥಮ ಕನ್ನಡ (ಕಾವೇರಿ ಉಗಮದ) ಪ್ರದೇಶವೆಂದು ನಾವು ಭಾವಿಸಬಹುದು.

೨೯. ನೋ. ಅಧ್ಯಾಯ ೩.

೩೦. *ಪದಿಟ್ರು.* II-೨೦; *ಕಲಿತ್ತೊಗೈ,* II ೫, ೩೯೮, *ಪುಱ.* ೬, ೧೩೭; *ಶಿಲಪ್ಪದಿಗಾರಂ*-ವನ್ಬಾ II, ೨೪೭-೨೫೫. ಅಲ್ಲದೆ ನೋ. *ಪದಿಟ್ರು.* II-ಪದಿಹಂ; *ಪುಱನಾ.* ೧೧. ೧-೨, ೧೩.೨. ಸಾ. ೭-೯ ಹೋಲಿಸಿ ನೋ. ಸುಬ್ರಹ್ಮಣಿಯನ್, ಎನ್., *ಅದೇ.* ಪ್ರ ೪೨, ೧೨೨

೩೧. *ಶಿಲಪ್ಪದಿಗಾರಂ* XXIII, ಕಟ್ಟುರೈಕಾದೈ-*ಅಟ್ಟಿಡುಕಡ್ಪೆ*; ಸುಬ್ರಹ್ಮಣಿಯನ್, ಎನ್., *ಅದೇ.,* ಪು. ೨೦೨.

೩೨. *ಪತ್ತು.* ಮದುರೈಕಾಂಜ್ಜಿ, ಸಾ. ೭೦-೭೪; ಸುಬ್ರಹ್ಮಣಿಯನ್, ಎನ್., *ಅದೇ.,* ಪು. ೧೬೯.

೩೩. *ಪುಱನಾ.* ೫೧, ೧೦೯, ೧೨೯, ೧೬೭

೩೪. *ಶಿಲಪ್ಪದಿಗಾರಂ,* ಪು. ೧೬೨

೩೫. *ಅದೇ., ನೂರ್‌ಕುಟ್ಟುರೈ* ೧೧.೧.೨; ಸುಬ್ರಹ್ಮಣಿಯನ್, ಎನ್., *ಅದೇ.,* ಪು. ೪೦೩

ಕಳೆದುಹೋಗಿದ್ದ ಕಳಚಿಕೊಂಡಿದ್ದ ಮತ್ತು ಕತ್ತಲಲ್ಲಿ ಅಡಗಿದ್ದ ಪರಂಪರೆಯ ಬಗ್ಗೆ ನಮ್ಮನ್ನು ಎಚ್ಚರಿಸಿ, ನಮ್ಮ ಸಂಸ್ಕೃತಿಯ ಸ್ವರೂಪವನ್ನು ಅರಿತುಕೊಳ್ಳುವಂತೆ ಮಾಡಿದ ಕಾಲ, ೧೯ನೆಯ ಶತಮಾನದ ಉತ್ತರಾರ್ಧ. ಕನ್ನಡದ ಅತ್ಯಂತ ಪುರಾತನ ಕೃತಿ ಎನಿಸಿರುವ ಕವಿರಾಜಮಾರ್ಗ ಮತ್ತು ಕನಿಷ್ಠ ಒಂದು ಶತಮಾನಕ್ಕಿಂತಲೂ ಹೆಚ್ಚು ಕಾಲ ಕತ್ತಲು ಪಾಲಾಗಿದ್ದ ತಮಿಳಿನ ಶಂಗಂ ಸಾಹಿತ್ಯವು ಪುನಃ ಬೆಳಕು ಕಂಡದ್ದು ಈ ಕಾಲದಲ್ಲಿ; ಕಾರಣ, ೧೯ನೆಯ ಶತಮಾನದ ಉತ್ತರಾರ್ಧವನ್ನು ಪುನರುತ್ಥಾನದ ಕಾಲವೆಂದು ಭಾವಿಸಿದರೆ ಅದು ೧೬ನೆಯ ಶತಮಾನದಲ್ಲಿ ಯುರೋಪಿನಲ್ಲಿ ಘಟಿಸಿದ 'ರಿನಯಝಾ'ಕ್ಕಿಂತ ಹೆಚ್ಚು ಪ್ರಸ್ತುತವೆನಿಸಬಹುದು. ಯುರೋಪಿನಲ್ಲಿ ಗ್ರೀಕ್-ಲ್ಯಾಟಿನ್ ಪುನರುತ್ಥಾನಕ್ಕಿಂತ ಹೆಚ್ಚು ಆದದ್ದು ನವಸಾಹಿತ್ಯ-ಸಂಸ್ಕತಿಯ ನಿರ್ಮಾಣ; ನಮ್ಮಲ್ಲಾದರೆ ಪಾರಂಪರಿಕ ಸಾಹಿತ್ಯ-ಸಂಸ್ಕೃತಿಯ ಪುನರುತ್ಥಾನದ ಕಾರ್ಯ ದಶಕಗಳ ಕಾಲ ಮುಂದುವರಿಯಿತು ಮಾತ್ರವಲ್ಲ ಅದಿನ್ನೂ ಮುಂದುವರಿಯುತ್ತಲೇ ಇದೆ. ಇದರ ಸೆರಗನ್ನು ಹಿಡಿದು ನವಯುಗದ ಮೌಲ್ಯಗಳೂ ಗೋಚರಿಸಿಕೊಂಡದ್ದು ಮತ್ತೊಂದು ವಿಷಯ.

೩

ಅಧ್ಯಾಯ-೩

# ಕಡಲು ಕುಡಿದ ಭೂಮಿಯ ನಕಾಶೆ

ಕಳೆದುಹೋಗಿದ್ದ, ಕಳಚಿಕೊಂಡಿದ್ದ ಮತ್ತು ಕತ್ತಲಲ್ಲಿ ಅಡಗಿದ್ದ ಪರಂಪರೆಯ ಬಗ್ಗೆ ನಮ್ಮನ್ನು ಎಚ್ಚರಿಸಿ, ನಮ್ಮ ಸಂಸ್ಕೃತಿಯ ಸ್ವರೂಪವನ್ನು ಅರಿತುಕೊಳ್ಳುವಂತೆ ಮಾಡಿದ ಕಾಲ, ೧೯ನೆಯ ಶತಮಾನದ ಉತ್ತರಾರ್ಧ. ಕನ್ನಡದ ಅತ್ಯಂತ ಪುರಾತನ ಕೃತಿ ಎನಿಸಿರುವ ಕವಿರಾಜಮಾರ್ಗ ಮತ್ತು ಕನಿಷ್ಠ ಒಂದು ಶತಮಾನಕ್ಕಿಂತಲೂ ಹೆಚ್ಚು ಕಾಲ ಕತ್ತಲು ಪಾಲಾಗಿದ್ದ ತಮಿಳಿನ ಶಂಗಂ ಸಾಹಿತ್ಯವು ಪುನಃ ಬೆಳಕು ಕಂಡದ್ದು ಈ ಕಾಲದಲ್ಲಿ; ಕಾರಣ, ೧೯ನೆಯ ಶತಮಾನದ ಉತ್ತರಾರ್ಧವನ್ನು ಪುನರುತ್ಥಾನದ ಕಾಲವೆಂದು ಭಾವಿಸಿದರೆ ಅದು ೧೬ನೆಯ ಶತಮಾನದಲ್ಲಿ ಯುರೋಪಿನಲ್ಲಿ ಘಟಿಸಿದ 'ರಿನಯಜ಼ಾ'ಕ್ಕಿಂತ ಹೆಚ್ಚು ಪ್ರಸ್ತುತವೆನಿಸಬಹುದು. ಯುರೋಪಿನಲ್ಲಿ ಗ್ರೀಕ್-ಲ್ಯಾಟಿನ್ ಪುನರುತ್ಥಾನಕ್ಕಿಂತ ಹೆಚ್ಚು ಆದದ್ದು ನವಸಾಹಿತ್ಯ-ಸಂಸ್ಕತಿಯ ನಿರ್ಮಾಣ; ನಮ್ಮಲ್ಲಾದರೆ ಪಾರಂಪರಿಕ ಸಾಹಿತ್ಯ-ಸಂಸ್ಕೃತಿಯ ಪುನರುತ್ಥಾನದ ಕಾರ್ಯ ದಶಕಗಳ ಕಾಲ ಮುಂದುವರಿಯಿತು ಮಾತ್ರವಲ್ಲ ಅದಿನ್ನೂ ಮುಂದುವರಿಯುತ್ತಲೇ ಇದೆ. ಇದರ ಸೆರಗನ್ನು ಹಿಡಿದು ನವಯುಗದ ಮೌಲ್ಯಗಳೂ ಗೋಚರಿಸಿಕೊಂಡದ್ದು ಮತ್ತೊಂದು ವಿಷಯ.

**ವಿಜ್ಞಾನ ಮತ್ತು ಪರಂಪರೆ - ೧೯ನೆಯ ಶತಮಾನದ ದೃಶ್ಯ:**

'ಲೆಮೂರ್' ಎಂಬುದು ಆರಂಭಕಾಲದ ಒಂದು ಕಪಿತಳಿ. ಈ ಅಪೂರ್ವ ಪ್ರಾಣಿ ಹಿಂದೂಮಹಾಸಾಗರದಿಂದ ಪ್ಯಾಸಿಫಿಕ್‌ಸಾಗರದವರೆಗೂ (ಇಂದಿನ ಮಡಗಾಸ್ಕರ್, ಇಂಡಿಯ ಮತ್ತು ಆಸ್ಟ್ರೇಲಿಯ ದೇಶಗಳನ್ನು ಒಳಗೊಂಡು) ವಿಸ್ತರಿಸಿದ್ದ ಅಪಾರ ಭೂಖಂಡದಲ್ಲಿ ಹಿಂದೊಮ್ಮೆ ವಾಸಿಸುತ್ತಿತ್ತೆಂದು ಬ್ರಿಟನ್ನಿನ ಪ್ರಾಣಿಶಾಸ್ತ್ರಜ್ಞ ಫಿಲಿಪ್ ಲುಟ್ಲೆ ಸ್ಕ್ಯಾಲ್ಬರ್ ೧೮೭೪ರಲ್ಲಿ ಒಂದು ಸಿದ್ಧಾಂತವನ್ನು ಮಂಡಿಸಿ, ಆ ಭೂಖಂಡವನ್ನು 'ಲೆಮೂರಿಯಾ' ಎಂಬ ಹೆಸರಿನಿಂದ ಗುರುತಿಸಿದನು. ಇದಾದ ಸುಮಾರು ಎರಡು ದಶಕಗಳ ನಂತರ ಆಸ್ಟ್ರಿಯಾದ ಸಸ್ಯಶಾಸ್ತ್ರಿ ಎಡುಆರ್ಡ್ ಸುಯಸ್ ಇದೇ ಪ್ರದೇಶದಲ್ಲಿ 'ಗೊಂಡ್ವಾನ' ಸಸ್ಯದ ಪಳೆಯುಳಿಕೆಯನ್ನು ಶೋಧಿಸಿ, ಇದಕ್ಕೆ 'ಗೊಂಡ್ವಾನ ಭೂಖಂಡ'ವೆಂಬ ಹೆಸರಿತ್ತನು. ೧೮೭೦-೯೦ರ ಕಾಲಾವಧಿಯ ವಿಜ್ಞಾನಿಗಳ ಗಮನವನ್ನು ವಿಶೇಷವಾಗಿ ಸೆಳೆದ ಈ ಭೂಖಂಡ ಇನ್ನೂ ಹಲವಾರು ಹೆಸರುಗಳಿಂದ ಗುರುತಿಸಿಕೊಂಡಿತು. ಅವುಗಳಲ್ಲಿ 'ಆಫ್ರಿಕಾನೋ-ಇಂಡಿಯಾನ ಕಾಂಟಿನೆಂಟ್', 'ಇಂಡಿಯಾನ-ಓಸಿಯಾನಿಯಾ', 'ಇಂಡೋ-ಮಡಗಾಸ್ಕರ್ ನಿಸ್ಸೂಲ' ಎಂಬವು ಕೆಲವು. ಈ ಭೂಖಂಡದ ಮಹತ್ವವನ್ನು

ಪ್ರಾಣಿ ಮತ್ತು ಸಸ್ಯಗಳಿಗೆ ಸೀಮಿತಗೊಳಿಸದೆ, ಇದು ಮಾನವ ಕುಲದ ಉಗಮಸ್ಥಾನವೇ ಆಗಿತ್ತೆಂದು ಕೆಲವು ವಿಜ್ಞಾನಿಗಳು ಪ್ರತಿಪಾದಿಸಿದರು. ಅಂಥವರಲ್ಲಿ ಜರ್ಮನಿಯ ಎರ್ನೆಟ್-ಹೈಕಲ್ ಪ್ರಮುಖ.[೧]

ಈ ಭೂಖಂಡದ ಬಗ್ಗೆ ವಿಜ್ಞಾನಿಗಳು ಕೊಟ್ಟ ವಿವರಗಳಲ್ಲಿ ಗಮನಾರ್ಹವಾದವುಗಳು ಇಂತಿವೆ:

೧. 'ಲೆಮೂರ್' ಪ್ರಾಣಿ ಮತ್ತು 'ಗೊಂಡ್ವಾನ' ಸಸ್ಯ ಅತ್ಯಂತ ಪುರಾತನ (ವಿಜ್ಞಾನಿಗಳ ಪರಿಭಾಷೆಯಲ್ಲಿ 'ಮೆಸೊಜೋಯಿಕ್') ಯುಗದಲ್ಲಿ ಭಾರತದ ದಕ್ಷಿಣಕ್ಕಿದ್ದ ಅಪಾರ ಭೂಖಂಡವನ್ನೆಲ್ಲಾ ವ್ಯಾಪಿಸಿದ್ದವು. ಆಗ ಈ ಭೂಖಂಡವು ದಕ್ಷಿಣ ಆಫ್ರಿಕೆಯಿಂದ ಆಸ್ಟ್ರೇಲಿಯವರೆಗೂ ಅಲ್ಲಿಂದ ದಕ್ಷಿಣ ಅಮೆರಿಕೆಯ ವರೆಗೂ ಹಬ್ಬಿತ್ತು.

೨. ಮುಂದೊಂದು ಕಾಲಘಟಕದಲ್ಲಿ (ಅವರ ಪರಿಭಾಷೆಯಲ್ಲಿ 'ಕ್ರೇಟೇಸಿಯನ್' ಯುಗದ ಹೊರ ಅಂಚು ಮತ್ತು 'ಯೋಸೆನ್' ಯುಗದ ಆರಂಭದಂಚು) ಸಂಭವಿಸಿದ ಮಹಾಪ್ರಳಯ ಅಥವಾ ಅಘೋರ ಸುನಾಮಿಯಲ್ಲಿ ಈ ಭೂಖಂಡ ಭಗ್ನಗೊಂಡು, (ಈಗ ಹಿಂದೂಮಹಾಸಾಗರದಲ್ಲಿ ಕಾಣುವ ಚಿಕ್ಕಪುಟ್ಟ ದ್ವೀಪಗಳನ್ನು ಮತ್ತು ಹೊರ ಅಂಚಿನಲ್ಲಿರುವ ಮಡಗಾಸ್ಕರ್, ಆಸ್ಟ್ರೇಲಿಯ ಮುಂತಾದ ಬೃಹತ್ ಘಟಕಗಳನ್ನು ಹೊರತುಪಡಿಸಿ) ಇದರ ಬಹುತೇಕ ಭಾಗ ಕಡಲಡಿ ಸೇರಿತು.

೧೮೭೦ರಲ್ಲಿ ಆರಂಭಗೊಂಡ ಈ ಚರ್ಚೆ ೧೯೩೦ರಲ್ಲಿ ದಿಕ್ಕನ್ನು ಬದಲಿಸಿಕೊಂಡು, ೧೯೯೦ರವರೆಗೂ ಮುಂದುವರಿಯಿತು. ಆದರೆ ಇದು ವಿಜ್ಞಾನಿಗಳಿಗೆ ಮಾತ್ರ ಸೀಮಿತಗೊಳ್ಳದೇ ಅತೀಂದ್ರಿಯ ಸಿದ್ಧಾಂತಿಗಳಾದ ತಿಯೋಸಾಫಿಸ್ಟರಿಗೂ ಭಾಷಾಭಕ್ತರಾದ ತಮಿಳರಿಗೂ ವಿಸ್ತರಿಸಿಕೊಂಡಿತು. ಈ ಮೂರು ಪ್ರಮುಖ ಪಂಗಡಗಳು ಹೇಗೆ ಈ ಪ್ರಶ್ನೆಯನ್ನು ಕೆಣಕಿದವು ಮತ್ತು ಅದರಿಂದಾಗಿ ಜನಾಂಗ, ಭಾಷೆ, ಪ್ರದೇಶಗಳ ನಕಾಶೆಗಳು ಹೇಗೆ ರೂಪಗೊಳ್ಳತೊಡಗಿದವು ಎಂಬುದನ್ನು ಅರಿತುಕೊಳ್ಳುವುದೆ ಈ ಲೇಖನದ ಪ್ರಮುಖ ಉದ್ದೇಶ. ಆದರೆ ದ್ರಾವಿಡ ಜನಾಂಗ, ಪ್ರದೇಶ ಮತ್ತು ಭಾಷೆಗೆ ಇದು ಒಂದಿಲ್ಲೊಂದು ಬಗೆಯಲ್ಲಿ ಸಂಬಂಧಪಟ್ಟಿರುವುದರಿಂದ ಪರೋಕ್ಷವಾಗಿ ಅದು ನಮಗೂ ಸಂಬಂಧಪಟ್ಟ ವಿಷಯವಾಗಿದೆ ಎಂಬುದು ನನ್ನ ಅನಿಸಿಕೆ.

## ಅಖಂಡ ಭೂಖಂಡದ ಪುರಾತನತೆ-ಪ್ರಸ್ತುತತೆ:

ಲೆಮೂರಿಯ ಒಂದು ಅಪಾರ ಮತ್ತು ಅಖಂಡ ಭೂಭಾಗವಾಗಿತ್ತೆನ್ನುವುದರ ಬಗ್ಗೆ ೧೯ನೆಯ ಶತಮಾನದ ವಿಜ್ಞಾನಿಗಳಲ್ಲಿ ಸ್ಥೂಲ ಸಹಮತವಿದ್ದರೂ ಅದು ಕಡಲಡಿ ಸೇರಿತೆನ್ನುವುದರ ಬಗ್ಗೆ ಮತ್ತು ಸೇರಿದ ಕಡಲಿನ ಬಗ್ಗೆ ಅವರಲ್ಲಿ ಒಮ್ಮತವಿರಲಿಲ್ಲ. 'ಭೂಖಂಡಗಳು ಅಚಲ, ಅವು ಕರಾವಳಿಯ ಕೊರೆತಕ್ಕೊಳಗಾಗಬಹುದೇ ಹೊರತು, ಕುಸಿದು, ಕಡಲಡಿ ಸೇರಲಾರವು' ಎಂಬ ಸಿದ್ಧಾಂತವನ್ನು ಪ್ರಕೃತಿ ವಿಜ್ಞಾನಿ ಎ. ಆರ್. ವ್ಯಾಲ್ಲೇಸ್ (೧೮೭೦) ಮತ್ತು 'ಭೂಖಂಡವು ಭಗ್ನಗೊಂಡಾಗ ಅದರ ಘಟಕಗಳು ದೂರದೂರ ಸರಿಯ(ಡ್ರಿಫ್ಟ್)ಬಲ್ಲವೇ ಹೊರತು, ಅವು ಸಮುದ್ರ ತಳಕ್ಕೆ ಇಳಿಯಲಾರವೆಂದು ಜರ್ಮನಿಯ ನೆಟಿಯೋ ಜೂಆಲಾಜಿಸ್ಟ್ (೨೦ನೆ ಶತಮಾನದ ಆರಂಭ) ಎ. ಎಲ್. ವೆಜ್‌ನರ್ ಮುಂತಾದವರು ವಾದಿಸಿ, ಭೂಖಂಡವು ಕಡಲಡಿ ಸೇರಿತೆಂಬ ಸಿದ್ಧಾಂತವನ್ನು ತಿರಸ್ಕರಿಸಿದರೂ ಲೆಮೂರಿಯ ಕಡಲುಪಾಲಾಯಿತೆಂಬ ನಂಬಿಕೆ ಹೆಚ್ಚು ಹೆಚ್ಚು ಪ್ರಸಾರಗೊಳ್ಳುತ್ತಲೇ ಮುಂದೆ ಸಾಗಿತು.[೨] ೧೯೨೦ರ ಸುಮಾರಿಗೆ ಈ ವಾದದಲ್ಲೊಂದು ಬಗೆಯ ಸ್ಥೂಲ ಒಮ್ಮತವೇರ್ಪಟ್ಟು ಸಾಗರದಾಳದ ಅನ್ವೇಷಣೆ ಕೈಕೊಳ್ಳಲು ಕೆಲವು ವಿಜ್ಞಾನಿಗಳನ್ನು ಪ್ರೇರೇಪಿಸಿತು. ಈ ಬಗೆಯ ಅನ್ವೇಷಣೆಗಳಲ್ಲಿ ೧೮೭೨-೭೪ರ 'ಅಟ್ಲಾಂಟಿಕ್ ಸಾಗರದ ಛಾಲೆಂಜರ್', ೧೮೩೩-೩೪ರ 'ಆಂಗ್ಲೋ-ಈಜಿಪ್ಷಿಯನ್ ಜಾನ್‌ಮರ‍್ರೀ', ೧೯೦೪ರ 'ಬ್ರಿಟಿಷ್ ಅಡ್ಮಿರಾಲ್ಟಿ ಸೀಲಾರ್ಕ್', ೧೯೫೯-೬೫ರ 'ಬಹುರಾಷ್ಟ್ರೀಯ ಸಾಗರತಳಶೋಧ' ಮತ್ತು ೧೯೬೮-೬೯ರ 'ಕೆರ್ಗೋಲಿನ್ ಪ್ರಸ್ತಭೂಮಿ'ಯ ಅನ್ವೇಷಣೆಗಳು ಉಲ್ಲೇಖಾರ್ಹ. ಈ ಅನ್ವೇಷಣೆಗಳ ಮೂಲಕ ಕಂಡುಕೊಂಡ ಸಮುದ್ರ ತಳದ ಭೂಸೇತುವೆ(ರಿಡ್ಜಸ್)ಗಳು, ಭೂಶಿಖರ(ಪೀಕ್ಸ್)ಗಳು, ಮಡುಗಟ್ಟಿ ನಿಂತಿದ್ದ ಕಗ್ಗಲ್ಲ(ಗ್ರೆನೈಟ್ ಮಾಸ್)ದಿನ್ನೆಗಳು, ಕೆಲವರನ್ನು ರೋಮಾಂಚನಗೊಳಿಸಿ ಲೆಮೂರಿಯ ಭೂಖಂಡದ ನಂಬಿಕೆಯನ್ನು ಇನ್ನಷ್ಟು ಗಟ್ಟಿಗೊಳಿಸಿದವು.[೩]

## ವಾರಸುದಾರಿಕೆಯ ಪ್ರತಿಪಾದನೆ:

ಭೂಖಂಡವೊಂದು ಬಹುಕಾಲ ಅಸ್ತಿತ್ವದಲ್ಲಿದ್ದು ಘೋರ ಸುನಾಮಿಯಲ್ಲಿ ಕಡಲಡಿ ಸೇರಿತೆಂಬ ವಾದ ಪ್ರಸಾರಗೊಳ್ಳುತ್ತಿದ್ದ ಕಾಲದಲ್ಲಿ ಅದು ಹಿಂದೊಮ್ಮೆ ತಮ್ಮ ಮಾತೃಭೂಮಿಯಾಗಿತ್ತೆಂದು ಪ್ರತಿಪಾದಿಸಿಕೊಳ್ಳುವ ವರ್ಗಗಳೂ ಹುಟ್ಟಿಕೊಳ್ಳತೊಡಗಿದವು. ಈ ಬಗೆಯ ವಾರಸುದಾರಿಕೆಯನ್ನು ಪ್ರತಿಪಾದಿಸಿಕೊಂಡ ಎರಡು ಪಂಗಡಗಳನ್ನು ಸುಲಭವಾಗಿ ಗುರುತಿಸಬಹುದು: ಒಂದು, ಪ್ಯಾಸಿಫಿಕ್-ಅಟ್ಲಾಂಟಿಕ್ ಪರದ್ದು; ಮತ್ತೊಂದು, ಹಿಂದೂಮಹಾಸಾಗರ ಪರದ್ದು. ಇವುಗಳಲ್ಲಿ ಮೊದಲನೆಯದು ಲೆಮೂರಿಯಾ-ಅಟ್ಲಾಂಟಿಸ್

ಭೂಖಂಡ ಜಲಾಂತರ್ಗತವಾದದ್ದು ಪ್ಯಾಸಿಫಿಕ್ ಸಾಗರದಲ್ಲಿ ಮತ್ತು ಅದರಲ್ಲಿ ಹೇಗೋ ಪಾರಾಗಿದ್ದು ಇಂದಿನ ಕ್ಯಾಲಿಫೋರ್ನಿಯಾ ಕರಾವಳಿ, ಎಂದು ವಾದಿಸಿತು; ಎರಡನೆಯದು ಲೆಮೂರಿಯ ಹಿಂದೂಮಹಾಸಾಗರದಡಿ ಸೇರಿ, ಆ ಅವಘಡದಿಂದ ಹೇಗೋ ಪಾರಾಗಿದ್ದು ಇಂದಿಗೂ ಕಾಣುವ ಚಿಕ್ಕಪುಟ್ಟ ದ್ವೀಪಗಳು ಮತ್ತು ಮಡಗಾಸ್ಕರ್-ಆಸ್ಟ್ರೇಲಿಯಾದಂತಹ ಬೃಹತ್ ಭೂತುಣುಕುಗಳು ಎಂದು ವಾದಿಸಿತು.

**ಪ್ಯಾಸಿಫಿಕ್-ಅಟ್ಲಾಂಟಿಕ್ ವಾರಸುದಾರರು:**

ಗ್ರೀಕ್ ತತ್ವಜ್ಞಾನಿ ಪ್ಲೇಟೋ ತನ್ನ ಎರಡು ಪ್ರಬಂಧ ('ಡಯಲಾಗ್ಸ್-ಟಿಮೂಸ್' ಮತ್ತು 'ಕ್ರೆಟಿಯಾಸ್')ಗಳಲ್ಲಿ ಜಿಬ್ರಾಲ್ಟರ್‌ನಿಂದಾಚೆ ಇದ್ದ ಅಟ್ಲಾಂಟಿಸ್ ಮಹಾದ್ವೀಪವನ್ನು ಪ್ರಸ್ತಾಪಿಸುತ್ತಾ ಅದು ಏಸ್ಸಿಯಾ ಮೈನರ್ ಮತ್ತು ಲಿಬಿಯ ಒಟ್ಟು ಕೂಡಿದರೆಷ್ಟಾಗುವುದೋ ಅಷ್ಟು ದೊಡ್ಡ ಭೂಖಂಡವಾಗಿತ್ತು, ಬಹುಕಾಲ ಉಚ್ಛ್ರಾಯ ಸಂಸ್ಕೃತಿಯನ್ನು ಅನುಭವಿಸಿದ ನಂತರ ಇದು ಸ್ಫೋಟಕ್ಕೊಳಗಾಗಿ ಒಂದು ಕಾಲದಲ್ಲಿ ಕಡಲಡಿ ಸೇರಿತು ಎಂದು ಪ್ರತಿಪಾದಿಸಿದ್ದನು.[೪] ಇವನಿಗಿಂತ ಮೊದಲು, ಅಂದರೆ ಸು.ಕ್ರಿ.ಪೂ. ೧೫೦೦ರಲ್ಲಿ ಈಜಿಪ್ತಿನ ಮೂಲಗಳು ಥೇರಾದ್ವೀಪದಲ್ಲಿ ಸಂಭವಿಸಿದ ಜ್ವಾಲಾಮುಖಿ ಕ್ರೀಟ್ ನಾಗರಿಕತೆಯನ್ನು ಸಾಗರಪಾಲು ಮಾಡಿದ್ದನ್ನು ತಿಳಿಸಿದ್ದವು.[೫] ಇವು – ಪ್ರಮುಖವಾಗಿ ಪ್ಲೇಟೋನ ಸಿದ್ಧಾಂತ–ಮಧ್ಯಕಾಲೀನ ಯುರೋಪಿಯನ್ನರ ಹೃದಯದಾಳಕ್ಕಿಳಿದವು ಮಾತ್ರವಲ್ಲ 'ರಿನಯಜ಼ಾ'ನಂತರ ಅವರನ್ನು ಅಮೆರಿಕಾ, ಸ್ಕ್ಯಾಂಡಿನೇವಿಯಾ ಮತ್ತು ಕನರೀ ದ್ವೀಪ ಪರಿಸರದ ಸಾಗರಶೋಧ ಕೈಕೊಳ್ಳಲು ಪ್ರಚೋದಿಸಿದ್ದವು. ಈ ಸಿದ್ಧಾಂತಕ್ಕೆ ಸ್ಪಷ್ಟ ಚಾಲನೆ ಕೊಟ್ಟವರಲ್ಲಿ ಮೊದಲಿಗನು ಇಗ್ನೇಷಿಯಸ್ ಡೊನ್ನೆಲ್ಲಿ.[೬] ೧೮೮೨ರಲ್ಲಿ ಇವನು ಮಂಡಿಸಿದ ಪ್ರಮುಖ ವಿಷಯಗಳೆಂದರೆ: (೧) ಕಡಲಡಿ ಸೇರಿದ ಭೂಖಂಡ ಲೆಮೂರಿಯ ಅಲ್ಲ ಅಟ್ಲಾಂಟಿಸ್; (೨) ಈ ಭೂಖಂಡವನ್ನು ಕಬಳಿಸಿದ್ದು ಹಿಂದೂಮಹಾಸಾಗರವಲ್ಲ ಪ್ಯಾಸಿಫಿಕ್.

೧೮೮೨ರಲ್ಲಿ ಪ್ರಾರಂಭಗೊಂಡ ಪ್ಯಾಸಿಫಿಕ್‌ಪರ ವಾದ ೧೯೬೦ವರೆಗೂ ಮುಂದುವರಿಯಿತು. ಆದರೆ ಅದರ ಪ್ರತಿಪಾದಕರಲ್ಲಿ ವಿಜ್ಞಾನಿಗಳಿಗಿಂತ ಹೆಚ್ಚು ಸಂಖ್ಯೆಯಲ್ಲಿದ್ದವರು ಅತೀಂದ್ರಿಯ ಸಿದ್ಧಾಂತಿಗಳಾದ ಥಿಯಾಸಾಫಿಸ್ಟರು ಮತ್ತು ಇವರ ವಾದವನ್ನು ಭಾಗಶಃ ಒಪ್ಪಿದ ಕೆಲವು ಸ್ವತಂತ್ರವಾದಿಗಳು. ಈ ವಾದಕ್ಕೆ ಜೀವ ತುಂಬಿದ ಆರಂಭಕಾಲದ ತಿಯಾಸಾಫಿಸ್ಟರಲ್ಲಿ ಹೆಲೆನ್ ಬ್ಲವಟಸ್ಕಿಗೆ ಅಗ್ರಸ್ಥಾನವಿದೆ; ಇವಳನ್ನು ಹಿಂಬಾಲಿಸಿ ಬಂದ ಹೆಸರಾಂತರಲ್ಲಿ ಅನ್ನಿಬೆಸೆಂಟ್, ಲೆಡ್‌ಬೀಟರ್, ಸ್ಕಾಟ್ ಇಲಿಯಟ್ ಮುಂತಾದವರಿರುವರು.[೭] ಇವರ ವಾದದ ತಿರುಳು ಹೀಗಿದೆ:

(ಅ) 'ಈಡನ್ ತೋಟ'ವೆಂಬುದು ಒಂದು ಭ್ರಮಿತ ಲೋಕವಲ್ಲ, ಅದು 'ಮೆಸೊಜೋಯಿಕ್' ಯುಗದಲ್ಲಿ ಲೆಮೂರಿಯ - ಅಟ್ಲಾಂಟಿಸ್ ಭೂಖಂಡದ ಅಂಗವಾಗಿತ್ತು, ಈ ಭೂಖಂಡ 'ಪೆಲರಿಯನ್' ಯುಗಾಂತ್ಯದವರೆಗೂ ವಿಜೃಂಭಿಸಿ 'ಯ್ಯೋಸೆನ್' ಯುಗದಲ್ಲಿ ನಶಿಸಿತು.

(ಆ) ಈ ಯುಗದಲ್ಲಿ ೧೨-೧೫ ಅಡಿಗಳೆತ್ತರದ, ಉನ್ನತ ಹಿಮ್ಮಡದ, ಕಪ್ಪು ವರ್ಣದ, ಮೂರು ಕಣ್ಣುಗಳ, ಜೋಲು ತೊಗಲಿನ (ಇಂದಿನ ಱೈನೋಸರಸ್ ಪ್ರಾಣಿಯಂತಹ) ಆದರೆ ಪರಿಪೂರ್ಣ ದೇಹವನ್ನು ಪಡೆದಿದ್ದ ಮಾನವನು ಪಾದವೂರಿ ನಿಂತು, ನಡೆಯಬಲ್ಲವನಾಗಿದ್ದನು. ಅವನ ಭೀಮಾಕಾರದ ವ್ಯಕ್ತಿತ್ವ ಮತ್ತು ಅಪಾರ ಬಲ ವೈಶಿಷ್ಟಪೂರ್ಣವಾಗಿದ್ದವು.

(ಇ) ಈ ಭೂಖಂಡ ಮಹಾಸುನಾಮಿಯ ಅವಘಡಕ್ಕೀಡಾಗಿ ಕಡಲಡಿ ಸೇರಿತಾದರೂ ಅಂದಿನವರಲ್ಲಿ ಕೆಲವರು ಹೇಗೋ ಉಳಿದು ಅಟ್ಲಾಂಟಿಕ್ ಸೇರಿದರು. ಸುಮಾರು ಇನ್ನೂರು ದಶಲಕ್ಷ ಕಾಲ ಅಸ್ತಿತ್ವದಲ್ಲಿದ್ದ ಈ ಭೂಖಂಡದಲ್ಲಿ ಮಾನವ ತಳಿ ವಿಕಾಸಗೊಂಡಿತು. ಆರಂಭ ಕಾಲದ ಈ ಮಾನವ ತಳಿಯನ್ನು 'ಶಾಲ್ಮಲೀ' ಎಂಬ ಪದದಿಂದ ಗುರುತಿಸಲಾಗಿತ್ತು.

(ಈ) ಡಾರ್ವಿನ್ ಪ್ರತಿಪಾದಿಸಿದಂತೆ ಕಪಿಯಿಂದ ಮಾನವನು ವಿಕಾಸ ಹೊಂದಲಿಲ್ಲ. ದೇವಾಂಶ ಸಂಭೂತನಾದ ಮಾನವ ವಿಕಾಸಗೊಂಡ ಬಹುಕಾಲದ ನಂತರ ಕಪಿತಳಿ ಫಲಿಸಿತು. ಬುದ್ಧಿ ಭ್ರಮಿತ ಮಾನವ ಸಮುದಾಯವೊಂದು ಪ್ರಾಣಿಕುಲದೊಡನೆ ಲೈಂಗಿಕ ಸಂಬಂಧ ಹೊಂದಿದುದರ ಪರಿಣಾಮವಾಗಿ ಈ ಪ್ರಮಾದ ಸಂಭವಿಸಿತು.

(ಉ) ಲೆಮೂರಿಯ ಮಾನವನು ದಟ್ಟ ಕಪ್ಪುವರ್ಣದವನಾಗಿದ್ದನು. ಅವನ ವಂಶೀಯರಿನ್ನೂ ಉಳಿದುಕೊಂಡಿದ್ದು, ಅವರಲ್ಲಿ ಕೆಲವರನ್ನು ಇಂದಿನ ಆಸ್ಟ್ರೇಲಿಯಾ ಮೂಲ ನಿವಾಸಿಗಳಲ್ಲಿ, ತಾಸ್ಮಾನಿಯಾ, ಮಲಯ, ಪಾಪುಯಾ, ಹೊಟೆಂಟೋ ಮತ್ತು ದಕ್ಷಿಣಭಾರತದ ದ್ರಾವಿಡರಲ್ಲಿ ಗುರುತಿಸಬಹುದು.

(ಊ) ಈ ಅವಘಡವಿನ್ನೂ ಮುಕ್ತಾಯಗೊಂಡಿಲ್ಲ. ಏಕೆಂದರೆ ೨೮ನೆಯ ಶತಮಾನದಲ್ಲಿ ಮತ್ತೊಂದು ಮಹಾದುರ್ಘಟನೆ ಸಂಭವಿಸಲಿದ್ದು ಅದರಲ್ಲಿ ಇಂದಿನ ಅಮೆರಿಕಾ ಖಂಡ ಜ್ವಾಲಾಮುಖಿಯ ಮಹಾಸ್ಫೋಟದಲ್ಲಿ ನಾಶಗೊಳ್ಳುವುದು. ಆಗ ಮತ್ತೊಂದು ಭೂಖಂಡ ನಿರ್ಮಾಣಗೊಂಡು ಈಗ ಸುಪ್ತಾವಸ್ಥೆಯಲ್ಲಿರುವ ಲೆಮೂರಿಯ ಮತ್ತೊಮ್ಮೆ ಚೇತನ ಪಡೆದುಕೊಳ್ಳುವುದು.[೮]

ಇವರು ಆ ಭೂಖಂಡಕ್ಕೆ ಸಂಬಂಧಿಸಿದ ಸಾಹಿತ್ಯವನ್ನು ತಮ್ಮ ಅತೀಂದ್ರಿಯ ಮತ್ತು ಮನಃಸಂಪರ್ಕ ತಂತ್ರದಿಂದ ಪಡೆದುಕೊಂಡು, ವಿಜ್ಞಾನಿಗಳಿಗೂ ಇತಿಹಾಸಕಾರರಿಗೂ ನಿಲುಕದಂತಹ ಮಾಹಿತಿಯನ್ನು ಪಡೆದುಕೊಂಡದ್ದಾಗಿ ಘೋಷಿಸಿಕೊಂಡರು. ಈ ಸಾಹಿತ್ಯವನ್ನು ಅವರು 'ಸ್ಟ್ಯಾಂಜಾಸ್ ಆಫ್ ದ್ಯಾಜ್ನ್' (ಬ್ಲವಟಸ್ಕಿ), 'ಅಕಾಷಿಕ್ ರೆಕಾರ್ಡ್ಸ್' (ಸ್ಟೀನರ್), 'ನಾಚಲ ಟ್ಯಾಬ್ಲೆಟ್ಸ್'(ಚರ್ಚ್‌ವಾರ್ಡ್), 'ಲೆಮೂರಿಯಾ ಸ್ಕ್ರಾಲ್ಸ್'('ಶಿವಯ ಸುಬ್ರಮಣಿಸ್ವಾಮಿ') ಎಂಬ ಹೆಸರುಗಳಿಂದ ಗುರುತಿಸಿದರು.[೯] ಇವನ್ನು ಎಲ್ಲಿ ಮತ್ತು ಹೇಗೆ ಶೋಧಿಸಿದರೆಂಬುದರ ಬಗ್ಗೆಯೂ ಅವರು ಸ್ವಾರಸ್ಯಕರವಾದ ವಿವರಗಳನ್ನು ಕೊಟ್ಟಿರುವರು. ಒಬ್ಬನು ಇವನ್ನು ಬರ್ಮಾ ದೇವಾಲಯಲವೊಂದರಲ್ಲಿ ಕಂಡದ್ದಾಗಿ ಹೇಳಿಕೊಂಡರೆ, ಇನ್ನು ಕೆಲವರು ಏಸ್ಸಿಯಾ ಮೈನರ್, ಟಿಬೆಟ್, ಹವಾಯಿ ದ್ವೀಪಗಳಲ್ಲಿಯ ರಹಸ್ಯ ಸ್ಥಳಗಳಲ್ಲಿ ಕಂಡದ್ದಾಗಿ ಹೇಳಿಕೊಂಡರು. ಈ ರಹಸ್ಯ ಸ್ಥಾನವನ್ನು ಲೆಮೂರಿಯಾದ ವಂಶಸ್ಥನಾದ 'ಫೈಲೋಸ್' ಎಂಬ ಟಿಬೆಟ್ ನಿವಾಸಿ ತನಗೆ ತಿಳಿಸಿದನೆಂದು ಎ ಡ್ವೆಲ್ಲರ್ ಆನ್ ದಿ ಟು ಪ್ಲ್ಯಾನೆಟ್ಸ್ ಕರ್ತೃವಾದ ಅಲಿವರ್ ೧೮೯೪ಳರಲ್ಲಿ ಹೇಳಿಕೆಯನ್ನಿತ್ತನು ಮಾತ್ರವಲ್ಲ, ಈ 'ಫೈಲೋಸ್' ಎಂಬ ಲೆಮೂರಿಯ ನಿವಾಸಿ ಜಲಾಂತರ್ಗತವಾದ ಭೂಖಂಡವನ್ನು ಬಿಟ್ಟು 'ಅಟ್ಲಾಂಟಿಸ್' ಸೇರಿ, ಅಲ್ಲಿಂದ ಕ್ಯಾಲಿಫೋರ್ನಿಯಾದ 'ಷಸ್ತಾ' ಬೆಟ್ಟ ತಲುಪಿ, ಈಗ ಆ ಗಿರಿಗರ್ಭದಲ್ಲಿ ನೆಲಸಿರುವುದಾಗಿ ಘೋಷಿಸಿದನು. ಇನ್ನೊಬ್ಬ ಅತೀಂದ್ರಿಯ ವಿಜ್ಞಾನಿಯಾದ ಜೆ. ಜಡ್. ನೈಟ್ ಎಂಬ ವಾಷಿಂಗ್ಟನ್ ನಿವಾಸಿ ಅದನ್ನು 'ರಮ್ತಾ' (ಭಾರತೀಯರ ಮಹಾಕಾವ್ಯ ಪುರುಷನಾದ ರಾಮ?) ಎಂಬವನಿಂದ ತಿಳಿದುಕೊಂಡದ್ದಾಗಿ ಸಾರಿಕೊಂಡನು. ಕಾಸ್ಮಿಕ್ ಪರದೆಯ ಮೇಲೆ ಕಾಣಿಸುತ್ತಿದ್ದುದನ್ನು ಸ್ವತಃ ಅಭ್ಯಸಿಸಿ ತಿಳಿದುಕೊಂಡದ್ದಾಗಿ ಗೈಲಾರ್ಡ್ ಎಂಬವನು ಸ್ಪಷ್ಟಪಡಿಸಿದನು. 'ಲೆಮೂರಿಯಾ-ಅಟ್ಲಾಂಟಿಸ್' ಎಂಬ ಚಕ್ರವರ್ತಿ, ಆ ರಹಸ್ಯ ಪ್ರದೇಶಕ್ಕೆ ಪಯಣಿಸಿ, ಅಲ್ಲಿ ಅದನ್ನು ಕಂಡದ್ದಾಗಿ ಡೇವಿಡ್ ಯುಂಗ್ಲಾಸ್ ಹೇಳಿಕೊಂಡನು. 'ಗುರುದೇವ ಶಿವಾಯ ಸುಬ್ರಮಣಿಸ್ವಾಮಿ' ಎಂದು ಹೆಸರಿಟ್ಟುಕೊಂಡ ಅಮೆರಿಕಾ ದೇಶದ ಹವಾಯಿ ದ್ವೀಪನಿವಾಸಿಯೊಬ್ಬನು, ಈ ಸಾಹಿತ್ಯ ಮೂಲದಲ್ಲಿ ಸಿದ್ಧಗೊಂಡದ್ದು ಲೆಮೂರಿಯಾದ ಒಂದು ಮಠ(ಮೊನಾಸ್ಟರಿ)ದಲ್ಲಿ; ಸುರುಳಿ-ದಾಖಲೆ(ಸ್ಕ್ರಾಲ್ಸ್)ಯನ್ನು ತನ್ನ ಅತೀಂದ್ರಿಯ ಜ್ಞಾನದಿಂದ ತಾನು ಅರಿತುಕೊಂಡದ್ದಾಗಿ ಆತನು ಇತ್ತೀಚೆಗೆ - ಅಂದರೆ ೧೯೯೮ರಲ್ಲಿ - ಹೇಳಿಕೆಯನ್ನಿತ್ತಿರುವನು. ತಾವು ಸಂಪಾದಿಸಿಕೊಂಡ ಜ್ಞಾನವನ್ನು ಪ್ರಚಾರಪಡಿಸಲು ಇವರಲ್ಲಿ ಕೆಲವರು ಸಂಘ-ಸಂಸ್ಥೆಗಳನ್ನೂ ಕಟ್ಟಿಕೊಂಡರು. ಅವುಗಳಲ್ಲಿ ಮ್ಯಾಕ್ಸ್ ಹೈಂಡೆಲ್ಸ್ ಸ್ಥಾಪಿಸಿದ 'ರೋಜಿ ಕ್ರೂಶಿಯನ್ ಫೆಲೋಷಿಪ್' ಅಥವಾ 'ಏನ್ಸಿಯಂಟ್ ಅಂಡ್ ಮಿಸ್ಟಿಕಲ್ ಆರ್ಡರ್ ಆಫ್ ದಿ ರೋಜಿ ಕ್ರೂಶಿಯನ್'(೧೯೦೭), ಅಲಿಸ್ ಬೈಲೀಯ 'ಆರ್ಕೇನ್ ಸೊಸೈಟಿ'(೧೯೨೩),

ಗೈ ಬಲ್ಲಾರ್ಡ್‌ನ 'ಮೈಟೀ ಐ ಯಾಮ್'(೧೯೩೧), ಶ್ರೀಮತಿ ಜೆ. ಜಡ್. ನೈಟ್‌ಳ 'ರಮ್ತಾ'(೧೯೪೯)ಗಳಲ್ಲದೆ, ಸಿದ್ಧಯೋಗಿ ಗುರುದೇವ ಶಿವಾಯ ಸುಬ್ರಮಣಿಸ್ವಾಮಿಯ '*ಕಮ್ ಟು ಲೆಮೂರಿಯಾ*' ಎಂಬ ಸಂಸ್ಥೆಯು ಇಂದಿಗೂ ವೆಬ್‌ಸೈಟ್‌ನಲ್ಲಿ ಪ್ರಚಲಿತವಿದೆ.[೧೦]

ಪ್ಯಾಸಿಫಿಕ್-ಅಟ್ಲಾಂಟಿಸ್ ವಾದಿಗಳು ಲೆಮೂರಿಯ ಮತ್ತು ಅಟ್ಲಾಂಟಿಕ್ ಕಡಲುಪಾಲಾದ ನಂತರ ಅಂದಿನ ನಿವಾಸಿಗಳಲ್ಲಿ ಕೆಲವರು ಹೇಗೋ ಬದುಕಿಕೊಂಡು ಇಂದಿನ ಕ್ಯಾಲಿಫೋರ್ನಿಯಾದ 'ಷಸ್ತಾ' ಪರ್ವತ ತಲುಪಿದರು ಎಂದು ಪ್ರತಿಪಾದಿಸಿದರು. ಕಾರಣ, ಕ್ಯಾಲಿಫೋರ್ನಿಯಾ ಅತ್ಯಂತ ಪುರಾತನವೂ ಪವಿತ್ರವೂ ಆದ ಭೂಖಂಡವಾಗಿದ್ದು ಅದು ಈಡನ್ ತೋಟವನ್ನು ತನ್ನ ಮಡಿಲಿನಲ್ಲಿ ಅಡಗಿಸಿಟ್ಟುಕೊಂಡಿದೆ ಎಂದೂ ಅವರು ನಂಬಿದರು. ಅಲ್ಲದೆ, ವಿಜ್ಞಾನಿಗಳು ಭಾವಿಸಿದಂತೆ, ಆದಿಮಾನವರು ಕಪ್ಪುವರ್ಣೀಯರಾಗಿರಲಿಲ್ಲ; ಅವರು ಸುಂದರ ಕೇಶದ ಬಿಳಿಯರಾಗಿದ್ದರು. ಮಾಯಾ ಜನಾಂಗದ ಸಂಪರ್ಕಕ್ಕೆ ಬಂದ ಇವರನ್ನು 'ಮು' ಎಂಬ ಪದದಿಂದ ಅಂದು ಗುರುತಿಸಲಾಗಿತ್ತು ಎಂದು ವಾದಿಸಿದರು. ಈ ಎಲ್ಲ ವಾದಗಳ ಅರ್ಥವೇನೆಂದರೆ ಕ್ಯಾಲಿಫೋರ್ನಿಯಾ ಕರಾವಳಿಯ 'ಷಸ್ತಾ' ಪರ್ವತ ಅತ್ಯಂತ ಪುರಾತನವೂ ಪವಿತ್ರವೂ ಆದ ಭೂಭಾಗವೆಂಬುದು.[೧೧]

### ಹಿಂದೂಮಹಾಸಾಗರದ ವಾರಸುದಾರರು:

ಥಿಯಾಸಾಫಿಸ್ಟ್‌ರಾದ ಬ್ಲವಟಸ್ಕಿ, ಅನ್ನಿಬೆಸೆಂಟ್ ಮುಂತಾದವರು ಚೆನ್ನೈನ ಅಡಿಯಾರ್‌ನಲ್ಲಿ ತಮ್ಮ ಸಂಸ್ಥೆಯನ್ನು ಸ್ಥಾಪಿಸುವುದಕ್ಕಿಂತ ನಾಲ್ಕಾರು ದಶಕಗಳ ಮುಂಚೆ 'ಹಿಂದೂಮಹಾಸಾಗರದಡಿ ಸೇರಿದ್ದ' ಭೂಖಂಡದ ಮೇಲೆ ತಮ್ಮ ಹಕ್ಕನ್ನು ತಮಿಳರು ಪ್ರತಿಪಾದಿಸಿಕೊಳ್ಳತೊಡಗಿದ್ದರು. ಇದಕ್ಕೆ ಚಾಲನೆ ಕೊಟ್ಟವರು ಪಾಶ್ಚಾತ್ಯ ಪಂಡಿತರು ಮತ್ತು ಕೆಲವು ವಿಜ್ಞಾನಿಗಳು. ಲೆಮೂರಿಯ ಸಿದ್ಧಾಂತ ಹೊರಬಿದ್ದ ಎರಡು ಮೂರು ವರ್ಷಗಳಲ್ಲಿಯೇ (೧೮೭೩ರಲ್ಲಿ) ಅತ್ಯಂತ ಪುರಾತನ ಯುಗದಲ್ಲಿ ಭಾರತ ಮತ್ತು ಆಫ್ರಿಕಾ ಒಂದೇ ಭೂಖಂಡದಲ್ಲಿದ್ದುದನ್ನು 'ಕ್ರೇಟೇಸಿಯಸ್' ಯುಗದಲ್ಲಿ ಸಂಭವಿಸಿದ ಬೃಹತ್ ಸ್ಫೋಟದಿಂದಾಗಿ ಅದು ಒಡೆದು ಬೇರ್ಪಟ್ಟದ್ದನ್ನು, ಹೆನ್ರಿ ಎಫ್. ಬ್ಲಾನ್‌ಫೋರ್ಡ್ ಹೊರಗೆಡವಿದ್ದನು. ಜಿಯಲಾಜಿಕಲ್ ಸರ್ವೇ ಆಫ್ ಇಂಡಿಯಾದ ವಿಜ್ಞಾನಿಗಳಾದ ಎಚ್. ಬಿ. ಮೆಡ್ಲಿಕಾಟ್ ಮತ್ತು ಡಬ್ಲ್ಯು. ಟಿ. ಬ್ಲಾನ್‌ಫೋರ್ಡ್ ೧೮೭೯ರ ಸರ್ವೇಕ್ಷಣದ ಕೈಪಿಡಿ(ಮ್ಯಾನುವಲ್)ಯಲ್ಲಿ ಈ ಸಿದ್ಧಾಂತವನ್ನು ಪ್ರಕಟಿಸಿ, ಅದಕ್ಕೆ ಅಧಿಕೃತ ಮುದ್ರೆಯನ್ನೊತ್ತಿದ್ದರು. ಅನಂತರ ಇದೇ ಇಲಾಖೆಯ ಪ್ರೊಫೆಸರ್ ಡಿ. ಎ. ವಾಡಿಯಾ ಇದೊಂದು ಅನುಮಾನಕ್ಕೆಡೆಯಿಲ್ಲದ ನಿಖರವಾಗಿ ಇತ್ಯರ್ಥಗೊಂಡ ವಿಷಯವಾಗಿದ್ದು

ಅದರ ಹೆಚ್ಚಿನ ಚರ್ಚೆ ಅನಾವಶ್ಯಕವೆಂದು ಘೋಷಿಸಿದ್ದರು. ೧೮೮೫ರಲ್ಲಿ ಮದ್ರಾಸ್ ಸರಕಾರದ ಸೇವೆಯಲ್ಲಿ ಐಸಿಎಸ್ ಅಧಿಕಾರಿಯಾಗಿದ್ದ ಚಾರ್ಲ್ಸ್ ಡಿ. ಮರ್ಲಿಯನ್ ಇದನ್ನು ಇನ್ನೂ ಮುಂದುವರಿಸಿ, ದಕ್ಷಿಣಭಾರತವೇ ಮಾನವ ಕುಲದ ಆದಿಭೂಮಿ; ದ್ರಾವಿಡರು ಈ ನೆಲದ ಮಕ್ಕಳಾಗಿರುವರಲ್ಲದೆ ಬೇರೆಲ್ಲಿಂದಲೋ ವಲಸೆ ಬಂದವರಲ್ಲ; ಆದಿಮಾನವರು ಮೆಡಿಟರೇನಿಯನ್ ಜನಾಂಗಗಳೂ ಮಾನವರಹಿತ ಪ್ರದೇಶಗಳಿಗೆ ವಲಸೆ ಹೋಗುವಾಗ ಈ ಭೂಭಾಗದ ಮೂಲಕವೇ ಸಾಗಿದರೆಂದು ವಾದಿಸಿದನು.[೧೨] ಇಲ್ಲಿಂದ ಆರಂಭಗೊಂಡ ಆದಿ ದ್ರಾವಿಡ ಭೂಮಿಯ ಜಿಜ್ಞಾಸೆ ಪ್ರಸಿದ್ಧ ಪಂಡಿತರನ್ನು ಇದರಲ್ಲಿ ತೊಡಗಿಸಿಕೊಳ್ಳುತ್ತಾ ೨೦ನೆಯ ಶತಮಾನದುದ್ದಕ್ಕೂ ಮುಂದುವರಿಯಿತು. ಈ ವಾದದಲ್ಲಿ ಸೇರಿಕೊಂಡ ಪ್ರಮುಖರಲ್ಲಿ ಎಡ್ಗರ್ ಥರ್ಸ್ಟನ್, ಹೆರ್ಬರ್ಟ್ ರಿಸ್ಲಿ ಮತ್ತು ಇ. ಎಮ್. ಫಾರ್ಸ್ಟರ್ ಗಮನಾರ್ಹರು. *ಎ ಪ್ಯಾಸ್ಸೇಜ್ ಟು ಇಂಡಿಯಾ* ಕಾದಂಬರಿಯನ್ನು ೧೯೨೪ರಲ್ಲಿ ಪ್ರಕಟಿಸಿ, ಭಾರತೀಯರ ಅಪಾರ ಪ್ರೀತ್ಯಾದರವನ್ನು ಗಳಿಸಿಕೊಂಡ ಫಾರ್ಸ್ಟರ್ ಕೊಟ್ಟ 'ಮರಬಾರ್' ಗುಹೆಗಳ ವರ್ಣನೆಯ ಒಂದು ಭಾಗವು ಸಂಗ್ರಹ ರೂಪದಲ್ಲಿ ಹೀಗೆ ಓದಿಸಿಕೊಳ್ಳುವುದು:

> ಗಂಗೆಯಾಗಲೀ ಹಿಮಾಲಯವಾಗಲೀ ಪುರಾತನತೆಯನ್ನೂ ಪಾವಿತ್ರ್ಯತೆಯನ್ನೂ ಪಡೆದುಕೊಳ್ಳುವುದಕ್ಕಿಂತ ಮುಂಚೆ, ಭೂನಿರ್ಮಾಣ ಕಾಲದ ಒಂದು ಹಂತದಲ್ಲಿ, ಈ ಪ್ರದೇಶವೆಲ್ಲವೂ ಜಲಮಯವಾಗಿತ್ತು. ನಂತರ ಹಿಮಾಲಯಗಳೆದ್ದವು. ದೇವತೆಗಳು ಅಲ್ಲಿಗೆ ಬಂದು ನೆಲೆಸಿದರು. ಈ ಪರ್ವತಗಳೇಳುವಾಗ ಸ್ಫೋಟಿಸಿದ ಧೂಳೀಕಣಗಳು ಕ್ರಮೇಣ ಹೆಪ್ಪುಗಟ್ಟುತ್ತಾ ಇಂಡಿಯಾ ಭೂಖಂಡ ನಿರ್ಮಾಣಗೊಂಡಿತು. ವಾಸ್ತವವಾಗಿ ಇದು ಅತ್ಯಂತ ಪುರಾತನವಾದ ಭೂಪ್ರದೇಶ. ಇತಿಹಾಸ ಪೂರ್ವ ಯುಗದಲ್ಲಿ ಇದು ರೂಪಗೊಳ್ಳುತ್ತಿರುವಾಗಲೇ ಅದರ ದಕ್ಷಿಣದ ಪರ್ಯಾಯದ್ವೀಪ (ಪೆನಿನ್ಸುಲರ್ ಇಂಡಿಯ)ವೂ ಅದರ ಬೃಹತ್ ಪ್ರಮಾಣದ ಬೆಟ್ಟಗಳೂ ನಿರ್ಮಾಣಗೊಂಡವು. ಆಗ, ಒಂದೆಡೆ, ಭಾರತ ಮತ್ತು ಆಫ್ರಿಕೆಯ ನಡುವೆ ಇದ್ದ ಭೂಖಂಡವು ಸಾಗರಪಾಲಾಗುವುದನ್ನು ಕಂಡರೆ ಇನ್ನೊಂದೆಡೆ ಸಾಗರದಾಳದಿಂದ ಮೇಲಕ್ಕೇಳುತ್ತಿದ್ದ ಹಿಮಾಲಯಗಳನ್ನು ಕಾಣಲಾಯಿತು. ವಿಶ್ವದಲ್ಲಿ ಕಾಣಸಿಗುವ [ಭೂಪ್ರದೇಶಗಳಲ್ಲಿಯೇ] ಇವು ಅತ್ಯಂತ ಪುರಾತನವಾದವುಗಳು.[೧೩]

### ಶಂಗಂ ಸಾಹಿತ್ಯ ಮತ್ತು ಕುಮರಿಕ್ಕಂಡಂ:

ದಕ್ಷಿಣ ಭಾರತದಂಚಿನಾಚೆ ವ್ಯಾಪಿಸಿದ್ದ 'ಭೂಖಂಡ' ಪೂರ್ವೇತಿಹಾಸ ಕಾಲಘಟ್ಟದಲ್ಲಿ ಕಡಲಡಿ ಸೇರಿತೆಂಬುದನ್ನು ವಿಜ್ಞಾನಿಗಳು ಪ್ರಕಟಿಸಿದಾಗ, ಕಡಲುಪಾಲಾದ ಆ ಭೂಮಿ ತಮ್ಮದಾಗದೆ ಮತ್ತಿನ್ನಾರದಾಗಿರಲು ಸಾಧ್ಯವೆಂಬ ವಾದವನ್ನು ತಮಿಳರು ಎತ್ತಿದರು.

'ಲೆಮೂರಿಯ' ಪದವನ್ನು ಅವರು ಆಗೊಮ್ಮೆ ಈಗೊಮ್ಮೆ ಬಳಸಿದರೂ ಕಾಲಕ್ರಮದಲ್ಲಿ ಅದನ್ನು ತಮಿಳು ಭಾಷಾಕುಲುಮೆಯಲ್ಲಿ ಬಡಿದು ತೆಗೆದು 'ಇಲೆಮೂರಿಯಾಕ್ಕಂಟಮ್' ಎಂದು ಮಾರ್ಪಡಿಸಿಕೊಂಡರು. ತಮಿಳು ಭಾಷಾಭಾವಕ್ಕೆ ಇನ್ನೂ ಹೆಚ್ಚು ಪ್ರಸ್ತುತಗೊಳಿಸಿಕೊಳ್ಳಲು 'ಕುಮರಿಕ್ಕಂಡಮ್' ಎಂಬ ದೇಸಿ ಪದವೊಂದನ್ನು ಟಂಕಿಸಿಕೊಂಡರು. ಕಾಕತಾಳೀಯವೆಂಬಂತೆ ಈ ಚರ್ಚೆ ಬಿಸಿಗೊಳ್ಳುತ್ತಿದ್ದ ಕಾಲದಲ್ಲಿಯೇ 'ಶಂಗಂ' ಸಾಹಿತ್ಯ ನಿಧಿಯೂ ನಕ್ಕೀರರ್ 'ಕಡಲ್ಕೋಳ್' ಪದವೂ ಅವರಿಗೆ ಲಭ್ಯವಾದವು. ಈ ಎಲ್ಲಾ ಕಾರಣಗಳಿಂದಾಗಿ ೧೯ನೆಯ ಶತಮಾನದ ಕೊನೆಯ ವರ್ಷಗಳು ಸಹಜವಾಗಿ ತಮಿಳರಿಗೆ ಸಂಭ್ರಮದ ದಶಕಗಳಾದವು.[೧೪]

**ಮೂರು ಶಂಗಂಗಳು:**

೧೯ನೆಯ ಶತಮಾನದ ಕೊನೆಯ ಮೂರು ಮತ್ತು ೨೦ನೆಯ ಶತಮಾನದ ಮೊದಲೊಂದು ದಶಕಗಳಲ್ಲಿ ಸಿ. ಡಬ್ಲ್ಯು. ದಾಮೋದರ ಪಿಳ್ಳೈ ಮತ್ತು ಯು. ವಿ. ಸ್ವಾಮಿನಾಥ ಐಯರ್‌ರವರ ಅವಿರತ ಶ್ರಮದ ಪಲವಾಗಿ ಬೆಳಕು ಕಂಡ ಶಂಗಂ ಸಾಹಿತ್ಯದಿಂದ ತಮ್ಮ ಅದ್ಭುತ ಮತ್ತು ಅನಾದಿ ಕಾಲದ ಸಂಪತ್ತನ್ನು ಅರಿತುಕೊಳ್ಳಲು ತಮಿಳರು ಪ್ರಾರಂಭಿಸಿದರು. ಈ ಕಾಲದಲ್ಲಿ ಅವರ ಹೃದಯವನ್ನು ವಿಶೇಷವಾಗಿ ಗೆದ್ದದ್ದು ಮೂರು ಶಂಗಂಗಳ ಐತಿಹ್ಯ. ಅದು ಇಂತಿದೆ:

೧. ತನ್ನ ರಾಜಧಾನಿ 'ತೆನ್‌ಮದುರೈ'(ದಕ್ಷಿಣ ಮದುರೈ, ಶ್ರೀಲಂಕೆಯ ಆಚೆಗಿದ್ದ ಭೂಭಾಗದ ಪಟ್ಟಣ)ಯಲ್ಲಿ ಪಾಂಡ್ಯರಾಜನು 'ಮುದಲ್ ಶಂಗಂ' ಅಥವಾ ಮೊದಲನೆಯ ಶಂಗಂ ಸ್ಥಾಪಿಸಿದನು. ಇದು ೪,೪೪೦ ವರ್ಷ ಕಾಲ ಅಸ್ತಿತ್ವದಲ್ಲಿತ್ತು. ಎಂಬತ್ತೊಂಬತ್ತು ಪಾಂಡ್ಯರಾಜರಿಂದ ಪೋಷಿಸಲ್ಪಟ್ಟ ಈ ಶಂಗಂ ೪,೪೪೯ ಕವಿಗಳಲ್ಲಿ ಏಳು ಜನ ರಾಜಕವಿಗಳೂ ಅಗಸ್ತ್ಯನೂ ಸೇರಿದ್ದರು. ಬೃಹತ್ ಪ್ರಮಾಣದ 'ಕಡಲ್ಕೋಳ್'ನಲ್ಲಿ ಮದುರೈ ಪಟ್ಟಣ ನಾಶಗೊಂಡಾಗ ಅದರಲ್ಲಿ 'ಮುದುನಾರೈ', 'ಮುದುಕುರುಕು' ಮತ್ತು 'ಕಳಿರಿಯಾವಿರೈ' ಮುಂತಾದ ಅಮೂಲ್ಯ ಗ್ರಂಥಗಳನ್ನೊಳಗೊಂಡ ಮೊದಲ ಶಂಗಂ ಸಾಹಿತ್ಯವೆಲ್ಲವೂ ನೀರುಪಾಲಾಯಿತು. ಇಷ್ಟೊಂದು ಪ್ರಮಾಣದ ಸಾಹಿತ್ಯವನ್ನು ಕಳೆದುಕೊಂಡಿದ್ದುದರಿಂದ ಕಂಗೆಟ್ಟಿದ್ದ ೨೦ನೆಯ ಶತಮಾನದ ತಮಿಳರಿಗೆ ೧೯೦೨ನೆಯ ವರ್ಷವು ಒಂದು ರೋಮಾಂಚಕರ ಸುದ್ದಿಯನ್ನು ತಂದಿತು. 'ಶೆಂಕೋನಕ್ಕೈಚಲುವು' ಎಂಬ ಒಂದು ಪುಸ್ತಿಕೆಯನ್ನು ಹೊರತಂದ ಒಬ್ಬ ತಮಿಳು ಆರಾಧಕನು ಅದು ಮೊದಲ ಶಂಗಂ ಕಾಲದ ಕೃತಿಯೆಂದೂ ಅದರ ವಸ್ತು

ಕಾವೇರಿ-ಪಖ್ರುಳಿ ನದಿ ಮಧ್ಯದ ಫಲವತ್ತಾದ 'ಪೆರುವಳನಾಟ್ಟಿ'ನ ಅಧಿಪತಿಯಾದ ಶೆಂಗೋನ್‌ಪಾಂಡಿಯನ್ ಎಂದೂ ಹೇಳಿಕೊಂಡನು. ಈ ವಾರ್ತೆಯಿಂದ ಕೆಲವು ತಮಿಳರು ಎಷ್ಟೊಂದು ಪುಳಕಿತಗೊಂಡರೆಂದರೆ, ಅವರಾರೂ ಈ ಗ್ರಂಥದ ಪ್ರಾಮಾಣಿಕತೆಯ ಬಗ್ಗೆ ಯೋಚಿಸಲೇ ಇಲ್ಲ. ಮುಂದೆ ಅದೊಂದು ಖೊಟ್ಟಿ ಕೃತಿ ಎಂಬುದು ದಟ್ಟಗೊಂಡಾಗಲೂ ತಮ್ಮ ಅಂತರಾಳಕ್ಕಿಳಿದಿದ್ದ ಈ ನಂಬಿಕೆಯನ್ನು ಬದಲಿಸಿಕೊಳ್ಳಲು ಅವರು ಇಷ್ಟಪಡಲಿಲ್ಲ. ಈಗ ಅಪರೂಪವಾಗಿ ಲಭ್ಯವಿರುವ ಈ ಕೃತಿಯ ನೆನಪು ಮಾತ್ರ ಕೆಲವು ಹಳೆಯ ತಲೆಮಾರಿನ ತಮಿಳರಲ್ಲಿ ಹಸಿರಾಗಿದೆ.

೨. 'ಇಡೈಚ್ಚಂಗಂ' ಅಥವಾ ಎರಡನೆಯ ಶಂಗಂ ಅಸ್ತಿತ್ವಕ್ಕೆ ಬಂದುದು ಕಪಾಡಪುರಂನಲ್ಲಿ. 'ತೆನ್‌ಮದುರೈ' ಕಡಲುಪಾಲಾದ ಮೇಲೆ ಇದನ್ನು ಸ್ಥಾಪಿಸಿ ತನ್ನ ರಾಜಧಾನಿಯನ್ನಾಗಿ ಪಾಂಡ್ಯರಾಜ ಮಾಡಿಕೊಂಡನು. ಅಗತ್ತಿಯರ್, ತೊಲ್ಕಾಪ್ಪಿಯನಾರ್ ಮುಂತಾದ ಪ್ರಸಿದ್ಧ ಪಂಡಿತರನ್ನೊಳಗೊಂಡ ೩,೭೦೦ ಕವಿಗಳ ಎರಡನೆಯ ಶಂಗಂ, ೩,೭೦೦ ವರ್ಷಕಾಲ, ೫೯ ಪಾಂಡ್ಯರಾಜರ ಪೋಷಣೆಯಡಿ ಬೆಳೆದು, ಮದುತಿರುಮಾರನ್ ಎಂಬ ಪಾಂಡ್ಯರಾಜನ ಕಾಲದಲ್ಲಿ ಅಂತ್ಯಗೊಂಡಿತು. ಆಗ ಸಂಭವಿಸಿದ ಕಡಲ ವಿಕೋಪದಲ್ಲಿ ರಾಜಧಾನಿ ಪಟ್ಟಣದೊಡನೆ ಅಲ್ಲಿಯವರೆಗೂ ಸಿದ್ಧಗೊಂಡಿದ್ದ ತಮಿಳು ಸಾಹಿತ್ಯವೆಲ್ಲವೂ ಕೊಚ್ಚಿಹೋಯಿತು. ಹೀಗೆ ಕಣ್ಮರೆಯಾದ ಸಾಹಿತ್ಯದಲ್ಲಿ 'ಅಗತ್ತಿಯರ್ ವ್ಯಾಕರಣ', 'ಮಾಯಾಪುರಾಣಂ', 'ಪೂತಪುರಾಣಂ', 'ಇಶೈನುಣುಕ್ಕಮ್' ಮೊದಲಾದ ಅಪೂರ್ವ ಕೃತಿಗಳು ಸೇರಿದ್ದವೆಂಬುದು ಮಧ್ಯಕಾಲೀನ ವ್ಯಾಖ್ಯಾನಕಾರರ ಅಭಿಮತ.

೩. 'ಕಡೈಶಂಗಂ' ಅಥವಾ ಕೊನೆಯ ಶಂಗಂ ಪಾಂಡ್ಯರಾಜ್ಯದ ಮೂರನೆಯ ರಾಜಧಾನಿಯಾದ ವೈಗೈ ನದಿದಡದ ಮೇಲೆ ಬೆಳೆದ ಮದುರೈ ಪಟ್ಟಣದಲ್ಲಿ ಅಸ್ತಿತ್ವಕ್ಕೆ ಬಂತು. ಅದಿಲ್ಲಿ ಸ್ಥಾಪನೆಗೊಳ್ಳುವುದಕ್ಕಿಂತ ಮುಂಚೆ ಕೆಲಕಾಲ 'ಮಣಲೂರಿ'ನಲ್ಲಿ ಕಾರ್ಯ ನಿರ್ವಹಿಸುತ್ತಿತ್ತೆಂದೂ ಆ ನಗರವೂ ಕಡಲಪಾಲಾದುದರಿಂದ ಅದನ್ನು ಮದುರೈಗೆ ವರ್ಗಾಯಿಸಲಾಯಿತೆಂದೂ ಹೇಳಲಾಗುವುದು. ೧,೮೫೦ ವರ್ಷಕಾಲ ಅಸ್ತಿತ್ವದಲ್ಲಿದ್ದ ಈ ಶಂಗಂನ ೪೭೩ ಕವಿ-ಕವಯಿತ್ರಿಯರು ರಚಿಸಿದ ೨,೩೮೧ ಕವನಗಳು ಇಂದಿಗೂ ಉಳಿದುಕೊಂಡಿರುವುದು ಗಮನಾರ್ಹ. ಈ ಶಂಗಂದ ಒಂದು ವೈಶಿಷ್ಟ್ಯವೆಂದರೆ, ಅದು ಪಾಂಡ್ಯರಾಜಧಾನಿಯಾದ ಮದುರೈಗೆ ಮಾತ್ರ ಸೀಮಿತಗೊಳ್ಳದೆ

ತಮಿಳುನಾಡು ಮತ್ತು ಅದರ ವಾಯವ್ಯ ಗಡಿಯ ಸ್ವತಂತ್ರ (ಇಂದಿನ ಕನ್ನಡ ಭಾಷಿಕರ) ರಾಜ್ಯಗಳಿಗೂ ಪಸರಿಸಿ, ಚೋಳ, ಚೇರರ ಪೋಷಣೆಯನ್ನೂ, ಅವರ ಸಾಮಂತ ರಾಜರ ಪೋಷಣೆಯನ್ನೂ ಪಡೆದುಕೊಂಡದ್ದು. ಇದರ ಮತ್ತೊಂದು ವಿಶೇಷತೆಯೆಂದರೆ, ಅದರ ಅಂತ್ಯಕ್ಕೆ ಕಡಲು ಕಾರಣವಾಗದೆ ಒಂದು ಪಿಡುಗು ಕಾರಣವಾದದ್ದು. ಹನ್ನೆರಡು ವರ್ಷಗಳ ಕಾಲ ತನ್ನ ರಾಜ್ಯ ಘೋರ ಕ್ಷಾಮಕ್ಕೊಳಗಾಗುವುದೆಂಬುದನ್ನು ತಿಳಿದ ಪಾಂಡ್ಯರಾಜನು, ತನ್ನ ಆಸ್ಥಾನ ಕವಿಗಳನ್ನು ಕರೆಸಿ ತಮ್ಮನ್ನು ರಕ್ಷಿಸಿಕೊಳ್ಳಲು ರಾಜಧಾನಿಯಿಂದ ದೂರ ಹೋಗಬೇಕೆಂದು ತಿಳಿಸಿ, ಮೂರನೆಯ ಶಂಗಂ ಸಂಘಟನೆಯನ್ನು ವಿಸರ್ಜಿಸಿದನೆಂದು ಒಂದು ಐತಿಹ್ಯ ತಿಳಿಸುವುದು. ಬಹುಶಃ ತಮಿಳಗಂ ತುಂಬಾ ಹಬ್ಬಿದ ಈ ಕ್ಷಾಮದ ಪರಿಣಾಮದಿಂದಾಗಿ ಉಳಿದ ರಾಜ್ಯಗಳಲ್ಲಿದ್ದ ಕವಿಗಳೂ ಪೋಷಣೆಯನ್ನು ಕಳೆದುಕೊಂಡರೆಂದು ಭಾವಿಸಬಹುದು.

ಮುಸಿರಿ ನೀಲಕಂಠನ್ ಲೇಖನಕ್ಕಿಳಿಸಿದ ಪಾಠದಲ್ಲಿ ಬರುವ ಒಂದು ಸ್ವಾರಸ್ಯಕರವಾದ ವಿಷಯವನ್ನು ಇಲ್ಲಿ ಪ್ರಸ್ತಾಪಿಸುವುದವಶ್ಯ. ಕ್ಷಾಮ ಕಳೆದನಂತರ ಪಾಂಡ್ಯನ ಆಸ್ಥಾನಕ್ಕೆ ಮರಳಿಬಂದ ಶಂಗಂ ಕವಿಗಳೆಲ್ಲರೂ 'ಪೊರುಳ್' (ಅಗಂ ಮತ್ತು ಪುಱಂ.) ಜ್ಞಾನವನ್ನು ಕಳೆದುಕೊಂಡಿದ್ದನ್ನು ತಿಳಿದ ಪಾಂಡ್ಯರಾಜ ಅತೀವ ದುಃಖಕ್ಕೀಡಾಗುವನು; ಅದನ್ನು ನಿವಾರಿಸಲು ನಲ್ವತ್ತೊಂಬತ್ತು ಕವಿಗಳು ಶ್ರಮಿಸಿದರೂ ಅವರಲ್ಲಿ ಒಮ್ಮತ ಮೂಡದಿದ್ದುದರಿಂದ, ಕೊನೆಗೆ ಮೂಕಮಗುವಿನ ರೂಪದಲ್ಲಿದ್ದ ಕಾರ್ತಿಕೇಯನ ಮೂಲಕ ನೀಲಕಂಠನ್ ರಚಿಸಿದ ವ್ಯಾಖ್ಯಾನ ಸರಿಯಾದುದೆಂಬುದನ್ನು ಅರಿತುಕೊಳ್ಳಲಾಗುವುದು.[೫]

### ಕಡಲ್ಕೋಳ್ ಸ್ವರೂಪ:

ಇಲೆಮೂರಿಯಾ ಖಂಡವನ್ನು ಹೆಚ್ಚು ಪ್ರಸ್ತುತಗೊಳಿಸಿಕೊಳ್ಳಲು, ೨೦ನೆಯ ಶತಮಾನದ ತಮಿಳರು ಆರಂಭ ಕಾಲದ ಶಂಗಂ ಸಾಹಿತ್ಯವನ್ನು, ಮಧ್ಯಕಾಲೀನ ಟೀಕಾಗ್ರಂಥಗಳನ್ನಲ್ಲದೆ ಕೆಲವು ಐತಿಹಾಸಿಕ ಆಕರ-ಐತಿಹ್ಯಗಳನ್ನು ಸಮರ್ಥವಾಗಿ ಬಳಸಿಕೊಂಡರು. ಟೀಕಾಕಾರರಿಂದ ಪಡೆದ 'ಕಡಲ್ಕೋಳ್' ಪದದಿಂದ ಮಾತ್ರ ತೃಪ್ತಿಗೊಳ್ಳದೆ 'ಕುಮರಿಕ್ಕಂಡಂ' ಎಂಬ ಹೊಸ ಪದವನ್ನು ಅವರು ಸೃಷ್ಟಿಸಿಕೊಂಡರು. ಸಂಸ್ಕೃತ ಪುರಾಣಗಳಲ್ಲಿ ಬರುವ 'ಕುಮಾರಿಖಂಡ' ಮತ್ತು 'ಕುಮಾರಿದ್ವೀಪ' ಎಂಬ ಪದಗಳಿಂದ ಇದನ್ನವರು ಪಡೆದುಕೊಂಡರೆಂಬುದರಲ್ಲಿ ಅನುಮಾನವಿಲ್ಲ. ಮಧ್ಯಕಾಲೀನ ಟೀಕಾಕಾರರು ಬಳಸಿದ್ದ 'ಕಡಲ್ಕೋಳ್' ಪದ ಕಡಲುಪಾಲಾಗಿದ್ದ ಶಂಗಂ ಸಾಹಿತ್ಯವನ್ನು ಸೂಚಿಸಿತ್ತಲ್ಲದೆ

ಪುರಾತನ ತಮಿಳರ ಭೂಪ್ರದೇಶವನ್ನಲ್ಲ; ಆದರೆ, ಅವರು ಉಲ್ಲೇಖಿಸಿದ ಆಧಾರದ ಮೇಲೆ ಪಖ್ರುಳಿ ಮತ್ತು ದಕ್ಷಿಣ ಕುಮಾರಿ ನದಿಗಳ ಭೂಭಾಗವೂ ಇದರಲ್ಲಿ ಮುಳುಗಡೆಯಾಯಿತೆಂದು ವಾದಿಸಲು ತಮಿಳರಿಗೆ ಸುಲಭಸಾಧ್ಯವಾಯಿತು.

ಪಾಂಡ್ಯರಾಜ ಆಚರಿಸಿದ ಒಂದು ಸಾಗರೋತ್ಸವ ಸಂದರ್ಭದಲ್ಲಿ ನೆಡಿಯೋನ್-ಕುಮಾರಿ ನದಿಗಳ ಪ್ರಸ್ತಾಪವನ್ನು ಪುಱನಾನೂಱಿನಲ್ಲಿ ಮಾಡಲಾಗಿದೆ.[೧೬] ಈ ನದಿಗಳ ನಡುವಿನ ಫಲವತ್ತಾದ ಭೂಪ್ರದೇಶವೇ ಆದಿ ತಮಿಳಗಂ ಆಗಿತ್ತಲ್ಲದೆ ಮೊದಲ ಶಂಗಂವನ್ನು ಪೋಷಿಸಿದ ದಕ್ಷಿಣ ಮದುರೈ ವಿಭಾಗವೂ ಆಗಿತ್ತು. ಆದರೆ ಈ ಗ್ರಂಥದಲ್ಲಿ 'ಕಡಲ್ಕೋಳ್'ದ ಪ್ರಸ್ತಾಪವಾಗಲೀ ಶಂಗಂನ ಪ್ರಸ್ತಾಪವಾಗಲೀ ಬರುವುದಿಲ್ಲ-ಇವು ಮೊದಲು ಕಾಣಸಿಕೊಳ್ಳುವುದು ನಕ್ಕೀರರ್ ಟೀಕಾಗ್ರಂಥದಲ್ಲಿ.[೧೭]

**ಕಳೆದುಕೊಂಡ ಭೂಪ್ರಮಾಣ:**

ಶಿಲಪ್ಪದಿಗಾರಂ ಕವಿ ಇಳಂಗೋವಡಿಗಳ್ ಸಮುದ್ರಪಾಲಾದ ಭೂಮಿಗೆ ಸಂಬಂಧಿಸಿದ ಇನ್ನೊಂದು ಘಟನೆಯನ್ನು ಹೀಗೆ ಸ್ಮರಿಸಿರುವನು: ಮಹಾಶೂರನಾದ ತೆನ್ನವನ್ ಪಾಂಡ್ಯನು ಶತ್ರುರಾಜರೆದುರು ತನ್ನ ಅಗ್ಗಳಿಕೆಯನ್ನು ಮೆರೆಯಲು ಸಮುದ್ರ ದಡದ ಮೇಲೆ ನಿಂತು ತನ್ನ ಆಯುಧವನ್ನು ಜಲರಾಶಿಯೆಡೆಗೆ ತೂರೆ ಎಸೆಯುವನು; ಇದರಿಂದ ಅವಮಾನಿತನಾದ ಸಮುದ್ರರಾಜನು ಪಖ್ರುಳಿ-ಕುಮಾರಿ ನದಿಗಳನ್ನೂ ಅವುಗಳ ಸುತ್ತಮುತ್ತಲ ಗಿರಿಪ್ರದೇಶಗಳನ್ನೂ ತನ್ನ ಒಡಲಿನೊಳಕ್ಕೆ ಸೆಳೆದುಕೊಂಡು ಸೇಡು ತೀರಿಸಿಕೊಳ್ಳುವನು.[೧೮] ಈ ಗ್ರಂಥಕ್ಕೆ ಮುಂದೊಮ್ಮೆ ಟೀಕೆಯನ್ನು ಒದಗಿಸಿದ ಅಡಿಯಾರ್ ಕುನಲ್ಲಾರ್ ಜಲಾಂತರ್ಗತವಾದ ಭೂಮಿಯ ಅಂದಾಜು ಕಟ್ಟಿ ಅದು ನಲ್ವತ್ತೊಂಬತ್ತು 'ನಾಡು'ಗಳನ್ನೊಳಗೊಂಡ, ಏಳುನೂರು 'ಗಾವದಂ' ಪ್ರಮಾಣದ, ಪ್ರದೇಶವಾಗಿತ್ತೆಂಬ ನಿರ್ಣಯಕ್ಕೆ ಬರುವನು. ಈ 'ನಾಡು' ಮತ್ತು 'ಗಾವದಂ'ಗಳನ್ನು ಆಧುನಿಕ ಪರಿಭಾಷೆಗೆ ತಂದುಕೊಂಡು ಮುಳುಗಡೆಯಾದ ಭೂಮಿಯ ವಾಸ್ತವ ಪ್ರಮಾಣವನ್ನು ಅರಿತುಕೊಳ್ಳುವ ಜಿಜ್ಞಾಸೆ ೨೦ನೆಯ ಶತಮಾನದ ತಮಿಳರನ್ನು ಕಾಡುವ ಅಗ್ರ ಪ್ರಶ್ನೆಯಾಯಿತು. ಊಹಾಪ್ರಮಾಣವನ್ನು ಬಿಟ್ಟರೆ ಬೇರಾವ ಅಳತೆಗೋಲೂ ಇಲ್ಲದಿದ್ದುದರಿಂದ ಅದನ್ನೇ ಬಳಸಿಕೊಂಡು ಕಡಲುಪಾಲಾದ ಭೂಮಿ ೬,೦೦೦-೭,೦೦೦ ಚದರು ಮೈಲಾಗಿತ್ತೆಂದು ಕೆಲವರು, ೧,೪೦೦-೨,೦೦೦ ಪ್ರದೇಶವಾಗಿತ್ತೆಂದು ಇನ್ನು ಕೆಲವರು ವಾದಿಸಿದರು. ಐತಿಹಾಸಿಕ ಕೇಂದ್ರಗಳಲ್ಲಿ ಮತ್ತು ಹೆಸರಾಂತ ಬಂದರು-ನಗರಗಳಲ್ಲಿ ದೊರೆತ ಕೆಲವು ಕುರುಹುಗಳನ್ನು ಬಳಸಿಕೊಂಡು ಇನ್ನೂ ಕೆಲವರು ಮುಳುಗಡೆಯಾದ ಪ್ರದೇಶ ಕೇವಲ ಕೆಲವು ಹಳ್ಳಿಗಳನ್ನು ಮಾತ್ರ ಒಳಗೊಂಡಿತ್ತು, ಬಹುಶಃ ಎರಡು 'ಕೂಱ್ರಂ'ಗಿಂತ ಮೀರದಷ್ಟಾಗಿತ್ತು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.[೧೯]

ಸ್ವಾತಂತ್ರ್ಯ ಆಂದೋಲನ ಮತ್ತು ಭಾಷಾ ಹೋರಾಟ ತೀಕ್ಷ್ಣಗೊಳ್ಳುತ್ತಿದ್ದ ಆ ಕಾಲದಲ್ಲಿ ಇಂತಹ ಚರ್ಚೆಗಳು ಭಾವಾವೇಶಕ್ಕೊಳಗಾದವರಿಂದಲೇ ಹೆಚ್ಚು ನಿರ್ಣಯ ಪಡೆದುಕೊಳ್ಳುತ್ತಿದ್ದವೆಂಬುದು ನಮಗೆಲ್ಲ ತಿಳಿದ ವಿಷಯವಾಗಿದೆ. ೧೯೩೫ರಲ್ಲಿ ಕೆ.ಅನ್ನಪೂರ್ಣೆ ಎಂಬ ಭಾಷಾ ಆರಾಧಕಳೊಬ್ಬಳು ಕಡಲು ಪಾಲಾದ ಭೂವಲಯದ ಒಂದು ಭವ್ಯ ಚಿತ್ರವನ್ನು ರಚಿಸಿ ಜನಸಾಮಾನ್ಯರ ಕಣ್ಮಣಿಯಾದಳು. ಅವಳ ಪ್ರಕಾರ ಏಳುನೂರು 'ಗಾವುದಂ' ಭೂಪ್ರದೇಶವು ಪಣ್ಣೈನಾಡು, ಕುಮಾರಿಕ್ಕೋಟು, ಮಣಿಮಲೈ ಗಿರಿಸಾಲು, ಮತ್ತೂರು ಮತ್ತು ಕಪಾಟಪುರಂ ಮುಂತಾದ ನಗರಗಳನ್ನೂ ಕುಮಾರಿ ಮತ್ತು ಪಖ್ರುಳಿ ನದಿಗಳನ್ನೂ ಒಳಗೊಂಡಿದ್ದು ವಿಜ್ಞಾನಿಗಳು ಸೂಚಿಸಿದ್ದ 'ಲೆಮೂರಿಯ' ಭೂವಲಯಕ್ಕೆ ಸರಿಸುಮಾರು ಸಮನಾಗಿತ್ತು.[೨೦] ಇದೇ ಬಗೆಯ ಚರ್ಚೆ ಮತ್ತು ನಿರ್ಣಯಗಳು ನಲ್ವತ್ತೊಂಬತ್ತು 'ನಾಡು'ಗಳ ಬಗ್ಗೆಯೂ ಆದವು.

**'ನಾಡು' ಎಂದರೇನು? ಅವು ಯಾವುವು?:**

'ನಾಟ್ಟು'(ನಾಡು) ಘಟಕದ ಪ್ರಪ್ರಥಮ ಉಲ್ಲೇಖ ಬರುವುದು ಶಂಗಂ ಸಾಹಿತ್ಯದಲ್ಲಿ. ಕಾತ್ತು, ಕೊಂಕು, ಕರಿ, ಪೆಣ್ಣೈ, ಮಲೈ, ಮುಕ್ಕಾವಳ್, ವೇಂಕಡ, ಕೋ ಮೊದಲಾದ ನಾಡುಗಳನ್ನು ಪುಱನಾನೂಱಿನಲ್ಲಿ ಹೆಸರಿಸಲಾಗಿದೆ.[೨೧] ಇದರ ಶಾಸನಿತ ಪ್ರಸ್ತಾಪ ಮೊಟ್ಟಮೊದಲು ಬರುವುದು ಕ್ರಿ.ಪೂ. ೧ನೆಯ ಶತಮಾನದ ಸಿತ್ತನ್ನವಾಸಲ್ (ಪುದುಕೋಟೆ ಜಿಲ್ಲೆ) ಏಳಡಿಪಟ್ಟಮ್ ಗಿರಿಗುಹೆಯ ಜೈನಶಾಸನದಲ್ಲಿ - ಅದು ಸಂಕೇತಿಸುವ ಪ್ರದೇಶ ಪಶ್ಚಿಮ ಘಟ್ಟದ ಇಂದಿನ ಕನ್ನಡ-ತುಳುನಾಡ ಭಾಗ.[೨೨] ಕುಮಾರಿ ಐತಿಹ್ಯಕ್ಕೆ ನೇರವಾಗಿ ಸಂಬಂಧಿಸಿದ ಮೊಟ್ಟಮೊದಲ ಉಲ್ಲೇಖ ಬರುವುದು ಶೆಂಗೋನ್ ಪಾಂಡ್ಯನು ಆಳಿದ ಪೆರುವಳ 'ನಾಡು'ಗೆ. ಇದು ದಕ್ಷಿಣಕಾವೇರಿ ಮತ್ತು ಪಖ್ರುಳಿ ನದಿ ನಡುವಣ ಪ್ರದೇಶವೆಂದು ಐತಿಹ್ಯಗಳು ತಿಳಿಸುವುವು.[೨೩]

ಇಲ್ಲಿ ಪ್ರಸ್ತಾಪಿಸಿರುವ ನಲ್ವತ್ತೊಂಬತ್ತು ನಾಡುಗಳ ಚರ್ಚೆಗೆ ಮೊದಲು ಕೈಹಾಕಿದವನು ಅಡಿಯರ್ ಕುನಲ್ಲಾರ್-ಇವನ ಅಭಿಮತದಂತೆ ಅವು ೭ ತೆಂಕು (ತೆಂಗು)ನಾಡು, ೭ ಮದುರೈ (ದಕ್ಷಿಣ ಮದುರೈ ಸುತ್ತಮುತ್ತಲ)ನಾಡು, ೭ ಮೇಟ್ಪಾಲೈ (ಮೇಲಿನ ಮರುಭೂಮಿ), ೭ ಪಿಟ್ಪಾಲೈ (ಕೆಳಗಿನ ಪಾಳುಭೂಮಿ), ೭ ಕುನ್ರು (ಗಿರಿಗ್ರಾಮಗಳು), ೭ ಗುಣಕಾರೈ (ಪೂರ್ವಕರಾವಳಿ), ೭ ಕುಟುಂಪಣ್ಣೈ (ಕುಬ್ಜ ತಾಳೆಮರಗಳ) ಪ್ರದೇಶಗಳನ್ನೊಳಗೊಂಡಿದ್ದವು. ಇನ್ನೊಂದು ಪರಿಭಾಷೆಯಲ್ಲಿ ಇವನ್ನು ನಾವೆಲ್‌ವೃಕ್ಷ, ಅಶ್ವತ್ಥವೃಕ್ಷ, ನೀರ್ದಂಟು (ರೀಡ್ಸ್) ಪ್ರದೇಶ, ಅಂದಿವ್ ಪಕ್ಷಿಧಾಮ, ಗಜಕ್ಷೇತ್ರ, ತೆಂಗುತೋಟ ಮತ್ತು ಅಡಕೆತೋಟಗಳ ಪ್ರದೇಶಗಳೆಂದು ಗುರುತಿಸಲಾಯಿತು. ಮತ್ತೊಂದೆಡೆ

ಪೆರುವಳನಾಡ(ಫಲವತ್ತಾದ ವಿಶಾಲ ಭೂಮಿ)ನ್ನು ಪನ್ನೈನಾಡು (ತಾಳೆಮರಗಳ ನಾಡು), ಒಳಿನಾಡು (ಬಯಲುನಾಡು), ಪನ್ಮಲೈನಾಡು (ಗಿರಿಸಮೂಹದ ನಾಡು) ಎಂಬವುಗಳಿಗೆ ಸಮೀಕರಿಸಲಾಯಿತು. ಕನ್ಯಾಕುಮಾರಿಯನ್ನು ಮೂರು ಸಾಗರಗಳು, ತಮಿಳಗಂವನ್ನು ಕುಮಾರಿಕ್ಕಡಲ್, ಕುಣಕ್ಕಡಲ್ ಮತ್ತು ತೆನ್‌ಕಡಲ್ ಸುತ್ತುವರಿದಿದ್ದವೆಂದೂ ಈಗ ಪಶ್ಚಿಮದಲ್ಲಿ ಉಗಮಗೊಂಡು ಪೂರ್ವದೆಡೆ ಹರಿಯುವ ದಕ್ಷಿಣ ಭಾರತದ ನದಿಗಳಂತೆ ಅಂದಿನ ದಕ್ಷಿಣಕುಮಾರಿ ಮತ್ತು ಪಖ್ರುಳಿ ನದಿಗಳೂ ಪಶ್ಚಿಮದಲ್ಲಿ ಉಗಮಿಸಿ ಪೂರ್ವದೆಡೆ ಹರಿಯುತ್ತಿದ್ದವೆಂದು ವಾದಿಸಲಾಯಿತು.[೨೪] ಈ ನದಿ ನಡುವಣ ಪ್ರದೇಶವನ್ನು ಸುತ್ತುವರಿದಿದ್ದ ಕುಮಾರಿಕ್ಕೋಡು, ಕುಮಾರಿಮಲೈ, ಕುಮಾರಿಕುನ್ರು, ಕೊಲ್ಲಂ ಮೊದಲಾದ ಪರ್ವತಗಳನ್ನು ಪ್ರಮಾಣದಲ್ಲಿ ಮತ್ತು ಪಾವಿತ್ರ್ಯತೆಯಲ್ಲಿ ಹಿಮಗಿರಿಗಳಿಗೆ ಸಮೀಕರಿಸಲಾಯಿತು.

**ಐತಿಹಾಸಿಕ ಕುರುಹುಗಳ ಬಳಕೆ:**

ಕಡಲುಪಾಲಾದ ತಮಿಳಗಂ ವಾಸ್ತವತೆಯನ್ನು ಪರಿಚಯಿಸಿಕೊಳ್ಳಲು, ೧೯೬೦ರ ದಶಕದಲ್ಲಿ ಕೆಲವು ಐತಿಹಾಸಿಕ ಕುರುಹುಗಳನ್ನು ಬಳಸಿಕೊಳ್ಳುವ ಪ್ರಯತ್ನಗಳು ನಡೆದವು. ಈ ಪ್ರದೇಶವನ್ನು ಆಳಿದ ಪಾಂಡ್ಯ, ಚೋಳ, ಚೇರರಲ್ಲದೆ ಇವರ ಸಾಮಂತರು ಮತ್ತು ಇವರ ಅಧೀನಕ್ಕೊಳಪಡದ ಕೆಲವು ಸ್ವತಂತ್ರ ಅರಸರು, ಪ್ರಸಿದ್ಧ ಬಂದರು-ನಗರಗಳನ್ನು ಕಟ್ಟಿ ಬೆಳೆಸಿದುದನ್ನು ಐತಿಹಾಸಿಕ ಆಕರಗಳಿಂದ ತಿಳಿದುಕೊಳ್ಳಲಾಯಿತು. ಇವುಗಳಲ್ಲಿ ಪಾಂಡ್ಯರ ಕೊರ್ಕೈ (ಗ್ರೀಕರ ಕೊಬ್ಬೆ?), ಚೋಳರ ಪುಗಾರ್ (ಪೂಂಪುಹಾರ್ ಅಥವಾ ಕಾವೇರಿ ಪಟ್ಟಿಣಂ), ಚೇರರ ಮುಶಿರಿ ಮತ್ತು ತೊಂಡೈಮಾನರ್‌ನ ನೀರ್ಪೆಯರ್‌ಗಳು ಅಂದಿನ ಅತ್ಯಂತ ಪ್ರಸಿದ್ಧ ಕೇಂದ್ರಗಳಾಗಿದ್ದವೆಂಬುದನ್ನು ಐತಿಹಾಸಿಕ ಆಕರಗಳು ಬೆಂಬಲಿಸಿದವು. ಹೆಸರೇ ಸೂಚಿಸುವಂತೆ ಇವುಗಳಲ್ಲಿ 'ನೀರ್ಪೆಯರ್' ಎಂಬುದು ಸಮುದ್ರದಲೆಗಳ ತುಂತುರು ಹನಿಗಳಿಂದ ತೊಯ್ದ ನಗರ; ಕಾರಣ, 'ಕಡಲ್‌ಮಲ್ಲೈ' ಎಂಬ ವಿಶೇಷಣದಿಂದ ಗುರುತಿಸಲ್ಪಟ್ಟ ಈ ಬಂದರು ಮತ್ತಿನ್ನಾವುದೂ ಆಗಿರದೆ ಇಂದಿನ ಚೆನ್ನೈ ಬಳಿಯ ಮಾಮಲ್ಲಪುರಂ (ಮಹಾಬಲಿಪುರಂ) ಆಗಿತ್ತು. ಮಾಮಲ್ಲಪುರಂವನ್ನು ಒಂದು ಕಾಲಘಟಕದಲ್ಲಿ ಸಮುದ್ರವು ಕಬಳಿಸಿತ್ತೆನ್ನಲು ಕೆಲವು ಐತಿಹ್ಯಗಳನ್ನೂ ಕೆಲವು ಐತಿಹಾಸಿಕ ಅವಶೇಷಗಳನ್ನೂ ದೊರಕಿಸಿಕೊಳ್ಳಲಾಯಿತು. ಇದನ್ನು ಗಟ್ಟಿಗೊಳಿಸಲು ಇತ್ತೀಚೆಗೆ (೨೬, ಡಿಸೆಂಬರ್ ೨೦೦೪) ಸುನಾಮಿಯು ತೆರೆದಿಟ್ಟ ಸಾಕ್ಷ್ಯಾಧಾರಗಳು ಈಗ ಇನ್ನಷ್ಟು ಸಹಕಾರಿಯಾಗಿರುವುವು. ಸಮುದ್ರ ತೀರವನ್ನು ಅಪ್ಪಳಿಸಿ ಹಿಂದಕ್ಕೆ ಸರಿಯುವಾಗ ಈ ಸುನಾಮಿಯ ದೈತ್ಯ ಅಲೆಗಳು ತನ್ನೊಡನೆ ಅಪಾರ ಮರಳದಿನ್ನೆಯನ್ನು ಅಪಹರಿಸಿ ಒಯ್ದುದರಿಂದ ತೀರದೇವಾಲಯ (ಷೋರ್ ಟೆಂಪಲ್) ಬಳಿಯ ಬಂಡೆಗಲ್ಲುಗಳನ್ನು, ಅವುಗಳ ಹೊರಮೈಯಲ್ಲಿ ಬಿಡಿಸಿದ ಪಲ್ಲವ ಕಾಲದ ಉಬ್ಬುಶಿಲ್ಪಗಳನ್ನು ಮತ್ತು ಬೃಹತ್

ಪ್ರಮಾಣದ ಶಿವದೇವಾಲಯದ ಅವಶೇಷಗಳನ್ನು ಈಗ ತೆರೆದಿಟ್ಟಿರುವುವು.[೨೫] ಇದರಂತೆ ಪಾಂಡ್ಯ ರಾಜ್ಯದ ಕೊರ್ಕೈಯ ಪ್ರಸ್ತಾಪವೂ *ಅಗನಾನೂಱು, ನಟ್ರಿಣ್ಱೈ* ಮತ್ತು *ಮಣಿಮೇಗಲೈ*ಗಳಲ್ಲಿ ಬರುವುದಲ್ಲದೆ ಅದನ್ನು ತಿರುನೆಲ್ವೇಲಿ ಜಿಲ್ಲೆ ಶ್ರೀವೈಕುಂಠಮ್ ತಾಲೂಕಿನ ಇದೇ ಹೆಸರಿನ ಗ್ರಾಮವೆಂದು ಗುರುತಿಸಲಾಯಿತು. ಈಗಿನ ಕೊರ್ಕೈ ಗ್ರಾಮ ಸಮುದ್ರದಿಂದ ಸುಮಾರು ಏಳು ಕಿ.ಮೀ. ದೂರದಲ್ಲಿರುವುದರಿಂದ ಮೂಲ ಪಟ್ಟಣವನ್ನು ಸಮುದ್ರ ವಶಪಡಿಸಿಕೊಂಡನಂತರ ಉಳಿದ ಅಥವಾ ಪುನಃ ಕಟ್ಟಿದ ಗ್ರಾಮವಿದಾಗಿದೆಯೆಂದು ಈಗ ವಾದಿಸಲಾಗುತ್ತಿದೆ. 'ಕೊಕ್ಕೈ' ಎಂಬ ತಮಿಳು ಪದವನ್ನು ಸಂಸ್ಕೃತೀಕರಿಸಿದ ಪರಿಣಾಮವಾಗಿ ಅದು 'ಕಪಾಡಪುರ' ಎಂದು ಕರೆಸಿಕೊಂಡಿತೆಂಬ ಅಭಿಮತವಿದೆ. ಇದು ಎರಡನೆಯ ಶಂಗಂ ಕೇಂದ್ರಸ್ಥಾನವಾಗಿತ್ತೆಂದು ತಮಿಳು ಐತಿಹ್ಯ ಪ್ರತಿಪಾದಿಸಿದರೆ, ಹೆಸರಾಂತ ಮುತ್ತು, ಮತ್ಸ್ಯ ಕೇಂದ್ರವಾಗಿತ್ತೆಂದು ಗ್ರೀಕ್ ಕೃತಿ *ಪೆರಿಪ್ಲಸ್* ಸಾಕ್ಷಿ ಒದಗಿಸುವುದು. ಕ್ರಿ.ಶ. ೩೦೬ರಲ್ಲಿ ಸಿಲೋನಿನ ಸುತ್ತ ಒಂದು ಸುನಾಮಿ ಸಂಭವಿಸಿತೆಂಬ ಜೇಮ್ಸ್ ಎಮರ್‌ಸನ್ ಟೆನ್ನೆಂಟ್‌ನ ವಾದವು ಕಡಲುಪಾಲಾದ ಕೊರ್ಕೈಯ ಬಗ್ಗೆ ಸಿದ್ಧಾಂತ ರೂಪಿಸಲು ಕೆಲವು ತಮಿಳರಿಗೆ ಪ್ರಬಲ ಆಧಾರವನ್ನೊದಗಿಸಿಕೊಟ್ಟಿತು.[೨೬] ಪ್ಲಿನಿ ಮತ್ತು ಪೆರಿಪ್ಲಸ್ ಕರ್ತೃವಿನ ಅಭಿಮತದಂತೆ ದಕ್ಷಿಣಭಾರತದ ಭೂ ಅಂಚು ಕನ್ಯಾಕುಮಾರಿಯಾಗಿರದೆ ಕೊರ್ಕೈಯಾಗಿತ್ತು; ಇಲ್ಲಿಂದ ನೇರ ದಕ್ಷಿಣಕ್ಕೆ ಒಂದು ದಿನ ಪ್ರಯಾಣ ಮಾಡಿದರೆ ತಪ್ರೋಬನೆ (ತಾಮ್ರಪರ್ಣಿ=ಶ್ರೀಲಂಕೆ) ಸಿಗುತ್ತಿತ್ತು. ಕೊರ್ಕೈ ಪಶ್ಚಿಮ ಮತ್ತು ಆಫ್ರಿಕಾ ಖಂಡದ ದಿಕ್ಕಿನೆಡೆ ಹಲವಾರು ಕಿ.ಮೀ. ವಿಸ್ತಾರದ ಭೂಮಿ ಇತ್ತೆಂದೂ ಅದರಲ್ಲಿ ಮಾಲ್ದೀವ್ಸ್, ಲಕ್ಷದ್ವೀಪ ಮೊದಲಾದವು ಸೇರಿದ್ದವೆಂದೂ ವಾದಿಸಲು ಕೆಲವರು ಈ ಆಧಾರಗಳನ್ನು ತಮ್ಮದೇ ಬಗೆಯಲ್ಲಿ ಬಳಸಿಕೊಂಡರು.[೨೭]

ಕ್ರಿ.ಶ. ಆರಂಭದಿಂದ ಪದಬಂಧದಲ್ಲಿಯೇ ಮುಂದುವರಿದ ಕಡಲುಪಾಲಾದ ತಮಿಳಗಂ ನಕಾಶೆ ೨೦ನೆಯ ಶತಮಾನದಲ್ಲಿ ಪಟರೂಪ ಪಡೆದುಕೊಂಡಿತು; ಮಾತ್ರವಲ್ಲ ಪಾಶ್ಚಾತ್ಯ ವಿಜ್ಞಾನಿಗಳು ಮೂಡಿಸಿದ್ದ ಲೆಮೂರಿಯ-ಗೊಂಡ್ವಾನ ಭೂನಕ್ಷೆಯೊಡನೆ ಪ್ರತಿ ಸ್ಪರ್ಧಿಸತೊಡಗಿತು. ಈ ಪಟನಕಾಶೆಯ ಇತಿಹಾಸವು ಇಷ್ಟೇ ಕುತೂಹಲಕರವೂ ಸ್ವಾರಸ್ಯಕರವೂ ಆಗಿದೆ.

**ರೇಖಾನಕಾಶೆಯ ಪ್ರಾರಂಭ ಮತ್ತು ಪ್ರಗತಿ:**

ಸ್ಥಳೀಯ ತಮಿಳರು ರೇಖಾನಕಾಶೆಯನ್ನು ಸಜ್ಜುಗೊಳಿಸುವುದಕ್ಕಿಂತ ಮುಂಚೆ, ಭಾರತೀಯ ಭೂಸರ್ವೇಕ್ಷಣದ ರಿಚರ್ಡ್ ಡಿ. ಓಲ್ಡ್ಹ್ಯಾಮ್ ಅದರ ರೂಪರೇಷೆಯನ್ನು ಸಿದ್ಧಪಡಿಸಿಕೊಟ್ಟಿದ್ದರು. ಈ ಮೊಟ್ಟಮೊದಲ ನಕಾಶೆಯನ್ನು ೧೮೯೦ರ *ಜಿಯೋಗ್ರಾಫಿಕಲ್*

ಜರ್ನಲ್‌ನಲ್ಲಿ ಪ್ರಕಟಿಸಲಾಗಿತ್ತು.[೨೮] ಆಲ್‌ಫ್ರೆಡ್ ವೆಜೆನರ್ ಎಂಬ ಜರ್ಮನೀಯನು ೧೯೨೨-೨೪ರ ಕಾಲಾವಧಿಯಲ್ಲಿ ಮೂರು ನಕಾಶೆಗಳನ್ನು ಪ್ರಕಟಿಸಿ, ಭೂಖಂಡದ ಸ್ವರೂಪವು ಹೇಗೆ ಕಾಲಕಾಲಕ್ಕೆ ಮಾರ್ಪಾಟುಗೊಂಡಿತೆಂಬುದನ್ನು ಚಿತ್ರಿಸಿ ತೋರಿಸಿದ್ದನು. ಇವೆರಡೂ ನಕ್ಷೆಗಳು ಹಿಂದೂಮಹಾಸಾಗರದ ಭೂವಲಯಕ್ಕೆ ನೇರವಾಗಿ ಸಂಬಂಧಪಟ್ಟವುಗಳಾಗಿದ್ದರೆ ಮತ್ತೊಂದೆಡೆ ಅಟ್ಲಾಂಟಿಕ್-ಪ್ಯಾಸಿಫಿಕ್ ಭೂವಲಯದ ನಕಾಶಾ ರಚನಾಕಾರ್ಯವು ಇದೇ ಬಗೆಯಲ್ಲಿ ಮುಂದುವರಿದಿತ್ತು. ಇದು ೧೮೬೬ರಲ್ಲಿ ಸ್ಕಾಟ್ ಇಲಿಯಟ್‌ನಿಂದ ಪ್ರಾರಂಭಗೊಂಡು, ೧೯೨೪ರಲ್ಲಿ ಥಿಯೋಸಾಫಿಸ್ಟ್‌ರ ಕೈಯಲ್ಲಿ ರೂಪಾಂತರ ಹೊಂದುತ್ತಾ ೧೯೬೦ರವರೆಗೂ ಮುಂದುವರಿಯಿತು. ಸುದೀರ್ಘವೂ ಜಟಿಲವೂ ಆದ ಅಟ್ಲಾಂಟಿಕ್-ಪ್ಯಾಸಿಫಿಕ್ ನಕಾಶೆಯ ಇತಿಹಾಸವನ್ನು ಬದಿಗಿಟ್ಟು, ನಮಗೆ ಇಲ್ಲಿ ಪ್ರಸ್ತುತವಾದ ತಮಿಳಗಂ ನಕಾಶೆದೆಡೆ ಗಮನ ಕೇಂದ್ರೀಕರಿಸಲು ನಾನು ಇಚ್ಛೆಪಡುವೆ.[೨೯]

ಕಡಲಡಿ ಸೇರಿದ ನಲ್ವತ್ತೊಂಬತ್ತು ನಾಡುಗಳ ಮೊಟ್ಟಮೊದಲ ಪಟನಕಾಶೆಯನ್ನು ಸಿದ್ಧಪಡಿಸಿದ ತಮಿಳರಲ್ಲಿ ಎಸ್. ಸುಬ್ರಮಣಿಶಾಸ್ತ್ರಿಗೆ ಒಂದು ವಿಶಿಷ್ಟ ಸ್ಥಾನವಿದೆ. ಇವರು ೧೯೧೪-೧೬ರ ಕಾಲಾವಧಿಯಲ್ಲಿ 'ತಮಿೞ್‌ನಾಡುಗಳ್' ಎಂಬ ಲೇಖನವನ್ನು ಪ್ರಕಟಿಸಿ, ಕಡಲಡಿ ಸೇರಿದ ಭೂಮಿಯ ಸಚಿತ್ರ ಸಿದ್ಧಾಂತವನ್ನು ಮೊಟ್ಟಮೊದಲ ಬಾರಿಗೆ ಮಂಡಿಸಿದರು. ಇದರ ಪ್ರಕಾರ ಮುಳುಗಡೆಯಾದ ಭೂಮಿಯ ಪ್ರಮಾಣವು ತಮಿಳು ಭಾವುಕರು ಭಾವಿಸಿದಂತೆ ಸಾವಿರಾರು ಚ.ಮೈ. ಪ್ರದೇಶವಾಗಿರಲಿಲ್ಲ; ಅದು ಅಂದಾಜು ಒಂದು ತಾಲೂಕು ವಿಸ್ತಾರ ಹೋಲುವಷ್ಟಾಗಿತ್ತು. ಶಾಸ್ತ್ರಿ ರಚಿಸಿದ ನಕಾಶೆಯ ವಿನ್ಯಾಸ ಇಂದಿನ ಪೆನಿನ್ಸುಲರ್ ಭೂಪಟವನ್ನು ಮಾದರಿಯನ್ನಾಗಿಸಿಕೊಂಡಿತ್ತು, ಆದರೆ ಅದರಲ್ಲಿ ಅಡಿಯರ್‌ಕ್ಕುನಲ್ಲರ್ ಸೂಚಿಸಿದ್ದ ಕನ್ಯಾಕುಮಾರಿಯ ದಕ್ಷಿಣಕ್ಕಿತ್ತೆನ್ನಲಾದ ಭೂಮಿಗೆ - ಅದರಲ್ಲೂ ಕುಮಾರಿ ಮತ್ತು ಪಖ್ರುಟಿ ನದೀ ಪ್ರದೇಶಕ್ಕೆ - ಸ್ಪಷ್ಟ ಅನುವು ಮಾಡಿಕೊಡಲಾಗಿತ್ತು.

ಸುಬ್ರಮಣಿಶಾಸ್ತ್ರಿಯಿಂದ ಪ್ರಾರಂಭಗೊಂಡ ತಮಿಳಗಂ ನಕಾಶೆ ನಿರ್ಮಾಣ ಕೃಷಿಯು ೨೦ನೆಯ ಶತಮಾನದುದ್ದಕ್ಕೂ ಮುಂದುವರಿಯಿತು. ಹೀಗೆ ಸಿದ್ಧಪಡಿಸಿದ ನಕಾಶೆಗಳಿಗೆ ಕೊಟ್ಟ ಶೀರ್ಷಿಕೆಗಳಿಂದಲೇ ಅವುಗಳ ನಿರ್ಮಾತೃಗಳ ಪ್ರಧಾನ ಗೊತ್ತುಗುರಿಯನ್ನು ಊಹಿಸಲು ಸಾಧ್ಯವಾಗುವುದರಿಂದ, ಅವುಗಳಲ್ಲಿ ಕೆಲವನ್ನಿಲ್ಲಿ ನಿದರ್ಶಿಸುವುದು ಉಚಿತವೆನಿಸುವುದು. 'ಪುರಾಣಿಕ್ ಇಂಡಿಯ ಬಿಫೋರ್ ದಿ ಡೆಲೂಜ್' (ಪ್ರಳಯಪೂರ್ವದ ಪೌರಾಣಿಕ ಭಾರತ), 'ಪುರಾಣಿಕ್ ಇಂಡಿಯ ಆಫ್ಟರ್ ದಿ ಡೆಲೂಜ್' (ಪ್ರಳಯೋತ್ತರ ಕಾಲದ ಪೌರಾಣಿಕ ಭಾರತ), 'ಪಟ್ಟೈಯ ತಮಿೞಗಂ' (ಪುರಾತನ ತಮಿಳರ ತವರುಮನೆ), 'ಬಿ.ಸಿ. ೩೦,೦೦೦ ಇಂಡಿಯಾ: ತಮಿೞ್‌ನಾಡು'

(ಕ್ರಿ.ಪೂ. ೩೦,೦೦೦ದ ಭಾರತ: ತಮಿಳುನಾಡು), 'ಕಡಲ್ಕೊಂಡ ಕುಮರಿಕ್ಕಂಡಂ' (ಕಡಲು ಕೊಂಡೊಯ್ದ ಕುಮಾರಿ ಭೂಖಂಡ), 'ಕಡಲ್‌ಕೊಂಡ ಕುಮರಿನಾಡು' (ಕಡಲು ಕೊಂಡೊಯ್ದ ಕುಮಾರಿ ನಾಡು), 'ವ್ಯಾನಿಷ್ಡ್ ಲೆಮೂರಿಯಾ ಕಾಂಟಿನೆಂಟ್' (ಅದೃಶ್ಯವಾದ ಲೆಮೂರಿಯಾ ಭೂಖಂಡ), 'ದಿ ಲೆಮೂರಿಯಾ ಕಾಂಟಿನೆಂಟ್ ವಿಚ್ ವಾಜ್ ಡೆಸ್ಟ್ರಾಯ್ಡ್ ಬೈ ದಿ ಸೀ' (ಕಡಲು ನಾಶಗೊಳಿಸಿದ ಲೆಮೂರಿಯಾ ಭೂಖಂಡ), 'ಲೂಮೂರಿಯಾ ಆರ್ ದಿ ಲಾಸ್ಟ್ ಕುಮಾರಿ ಕಾಂಟಿನೆಂಟ್ ಆರ್ ನವಲಂ ಐಲ್ಯಾಂಡ್' (ಲೆಮೂರಿಯಾ ಅಥವಾ ಕಣ್ಮರೆಯಾದ ಕುಮಾರಿ ಭೂಖಂಡ ಅಥವಾ ಜಂಬೂದ್ವೀಪ), 'ಕುಮರಿಕಂಡಂ ಅಲ್ಲದು ಕಡಲ್ಕೊಂಡ ತೆನ್ನಾಡು' (ಕುಮಾರಿ ಭೂಖಂಡ ಅಥವಾ ಕಡಲುಕೊಂಡ ದಕ್ಷಿಣನಾಡು), ಎಂಬವು ಅವುಗಳಲ್ಲಿ ಪ್ರಧಾನವಾದವುಗಳು.[೨೮]

**ಸಾಗರದಾಳದ ಅನ್ವೇಷಣೆ ಮತ್ತು ಕುಮರಿಕ್ಕಂಡಂ ಅವಶೇಷಗಳು (?):**

'ಇಲೆಮೂರಿಯ' ಎಂಬುದು ಒಂದು ಭ್ರಮಾಲೋಕವಲ್ಲ, ತಮಿಳರು ಶಾಶ್ವತವಾಗಿ ಕಳೆದುಕೊಂಡ ಭೂಪ್ರದೇಶವೆಂಬುದನ್ನು ಸಾಧಿಸಿ ತೋರಿಸುವುದೇ ನಕಾಶ ನಿರ್ಮಾಣ ಕಾರ್ಯದಲ್ಲಿ ತೊಡಗಿಸಿಕೊಂಡ ತಮಿಳರ ಪರಮೋದ್ದೇಶವಾಗಿತ್ತೆಂಬುದನ್ನು ಇಲ್ಲಿ ಮತ್ತೊಮ್ಮೆ ನೆನೆಯಬಹುದು. 'ಲೆಮೂರಿಯ' ಪದವನ್ನು ಆಗೊಮ್ಮೆ-ಈಗೊಮ್ಮೆ ಬಳಸಲು ಹಿಂಜರಿಯದಿದ್ದರೂ 'ಕಡಲ್ಕೊಂಡ' ಭೂಮಿಯನ್ನು ತಮಗೆ ಹೆಚ್ಚು ಪ್ರಸ್ತುತಗೊಳಿಸಿಕೊಳ್ಳಲು ದೇಸೀ ಪದಗಳಾದ 'ಕುಮರಿನಾಡು', 'ಕುಮರಿಕ್ಕಂಡಂ', 'ತಮಿೞ್‌ನಾಡು', 'ತಮಿೞಗಂ' ಎಂಬ ಪದಗಳನ್ನು ಬಳಸಲು ಅವರು ಹೆಚ್ಚು ಇಚ್ಛೆಪಟ್ಟರು. ಮುಳುಗಡೆಯಾಗುವ ಕಾಲದಲ್ಲಿ ಆ ಭೂಪ್ರದೇಶ ಪಾಂಡ್ಯರಾಜ್ಯದ ವಿಭಾಗವಾಗಿದ್ದುದನ್ನು ಗಮನಿಸಿದ ಕೆಲವರು ಅದನ್ನು 'ಕಡಲ್ಕೊಂಡ ಪಾಂಡ್ಯರಾಜ್ಯ'ವೆಂಬ ಹೆಸರಿನಿಂದ ಗುರುತಿಸಿದರು. ಕಡಲು ಕೊಂಡೊಯ್ದ ಭೂವಲಯದ ಬಗ್ಗೆ ಅಡಚಣೆಯಿದ್ದುದರಿಂದ, ವಿಜ್ಞಾನಿಗಳು 'ಲೆಮೂರಿಯಾ' ಭೂಖಂಡದಲ್ಲಿ ಕಂಡ ವಿಶೇಷತೆಗಳನ್ನೆಲ್ಲ ಅಳವಡಿಸಿಕೊಳ್ಳಲು ಕೆಲವು ತಮಿಳರು ಹಿಂಜರಿಯಲಿಲ್ಲ. ಇದರಿಂದಾಗಿ 'ಇಲೆಮೂರಿಯಾ ನಿಲೈ' (ಲೆಮೂರಿಯ: ಒಂದು ಪುರಾತನ ನೆಲೆ), 'ಇಲೆಮೂರಿಯಾ: ಕುಱುಕ್ಕಿಯ ನಿಲೈ' (ಲೆಮೂರಿಯ: ಸಂಕುಚಿತಗೊಂಡ ನೆಲೆ) ಎಂಬ ಹೆಸರುಗಳೂ ಹುಟ್ಟಿಕೊಂಡವು.

೧೯ನೆಯ ಶತಮಾನದ ಉತ್ತರಾರ್ಧದಲ್ಲಿ ಸಮುದ್ರದಾಳದಲ್ಲಿ ತಂತಿಸಂಪರ್ಕ ವನ್ನೇರ್ಪಡಿಸಲು (ಸಬ್‌ಮರೈನ್ ಟೆಲಿಗ್ರಾಫಿಕ್ ಕೇಬಲ್ಸ್) ಮಾಡಿದ ಸಾಗರದಾಳದ ಅನ್ವೇಷಣೆ ೨೦ನೆಯ ಶತಮಾನದಲ್ಲಿ ಹೆಚ್ಚು ತೀವ್ರತೆಯನ್ನು ಪಡೆದುಕೊಂಡಿತಲ್ಲದೆ, ಸಾಗರ ಗರ್ಭದಲ್ಲಿ

ಹುದುಗಿದ್ದ ಅನೇಕ ಅದ್ಭುತಗಳನ್ನು ಹೊರಗೆಡವಿತು. ಹೀಗೆ ಪಡೆದುಕೊಂಡ ಸಾಗರದಾಳದ ವಿವರಗಳಲ್ಲಿ ತಮ್ಮ ಸಿದ್ಧಾಂತಕ್ಕೆ ಒಗ್ಗುವ ಕೆಲವನ್ನು ತಮಿಳರು ಬಳಸಿಕೊಳ್ಳತೊಡಗಿದರು. ೧೯೩೩-೩೪ರ ಆಂಗ್ಲೋ-ಈಜಿಪ್ಷಿಯನ್ 'ಜಾನ್‌ಮರ್‍ರೀ' ಅನ್ವೇಷಣೆಯಲ್ಲಿ ಶೋಧಿಸಿದ ೧೦,೦೦೦ ಅಡಿ ಎತ್ತರದ ಒಂದು ಪರ್ವತ ಪಂಕ್ತಿ(ರಿಜ್) ಅರಾವಳೀ ಪರ್ವತದ ಬಡಾವಣೆಯೆಂದೂ ಅಲ್ಲಿಯ ಆಳ ಕಣಿವೆಯೊಂದನ್ನು ಸಿಂಧೂ ಕೊಳ್ಳದ ಬಡಾವಣೆಯೆಂದೂ ಪ್ರೊಫೆಸರ್ ಜೆ. ಎಸ್. ಗಾರ್ಡನರ್ ಲಂಡನ್ನಿನ *ಡೇಲಿಮೇಲ್‌*ಗೆ ಹೇಳಿಕೆ ಕೊಟ್ಟದ್ದನ್ನು ೨೯ ಮೇ ೧೯೫೪ರ ಮುಂಬಯಿ *ಇಲ್ಲಸ್ಟ್ರೇಟೆಡ್ ವೀಕ್ಲಿ* ಮರುಪ್ರಕಟಿಸಿದಾಗ ಅದೊಂದು ಭಾರತದಾದ್ಯಂತ ಕುತೂಹಲ ಕೆರಳಿಸಿದ ವಾರ್ತೆಯಾಯಿತು.[೩೦] ಇದರಂತೆ ೧೯೬೭ರ *ನ್ಯಾಷನಲ್ ಜಿಯೋಗ್ರಫಿ* ಪತ್ರಿಕೆಯಲ್ಲಿ ಪ್ರಕಟಗೊಂಡ ಹಿಂದೂಮಹಾಸಾಗರದ ಪರ್ವತಪಂಕ್ತಿಗಳ, ಚಿಕ್ಕ-ಪುಟ್ಟ ದಿನ್ನೆಗಳಿಂದ ವಿಭಜಿಸಲ್ಪಟ್ಟ ನದೀ ಕಣಿವೆಗಳ, ಅಲ್ಲಲ್ಲಿ ವಿಸ್ತರಿಸಿಕೊಂಡಿದ್ದ ಸಮತಟ್ಟಾದ ಭೂಪ್ರದೇಶಗಳ, ಕರಗಸದಂಚಿನ ಗಿರಿಸಾಲುಗಳ ಮತ್ತು ಬೆರಗುಗೊಳಿಸುವ ಪ್ರಪಾತಗಳ ವಿವರಗಳು ವಿಜ್ಞಾನಿಗಳಿಗೆ ಒಂದು ಬಗೆಯ ಆಧಾರಗಳನ್ನು ಒದಗಿಸಿದರೆ ತಮಿಳು ಭಾಷಾಭಕ್ತರಿಗೆ ಮತ್ತೊಂದು ಬಗೆಯ ಆಧಾರಗಳನ್ನು ಒದಗಿಸಿದವು. ಇವೆಲ್ಲವೂ ಭೂ ಹೊರಪದರಿನ ಹೊಯ್ದಾಟ (ಪ್ಲೇಟ್ ಮೂವ್‌ಮೆಂಟ್) ಮತ್ತು ಭೂಖಂಡಗಳ ಕದಲಾಟ(ಕಾಂಟಿನೆಂಟಲ್ ಡ್ರಿಫ್ಟ್)ಗಳನ್ನು ಸೂಚಿಸುವುವೆಂದು ಪ್ರತಿಪಾದಿಸಿ, ಭೂಖಂಡಗಳು ಕಡಲಡಿ ಸೇರುವ ಸಾಧ್ಯತೆಯೇ ಇಲ್ಲವೆಂಬ ವಾದವನ್ನು ವಿಜ್ಞಾನಿಗಳು ಮಂಡಿಸಿದರೆ, ಕಡಲಡಿ ಕಂಡುಬರುವ ಈ ಕುರುಹುಗಳೆಲ್ಲವೂ ಮುಳುಗಡೆಯಾದ ತಮ್ಮ ಪುರಾತನ ಭೂಮಿಯ ಅವಶೇಷ ಗಳೆಂದು ವಾದಿಸಲು ತಮಿಳು ಭಾಷಾ ಆರಾಧಕರ ಅಸ್ತ್ರಗಳಾದವು. ಇದಕ್ಕೆ 'ಕುಮರಿಕ್ಕಂಡತ್ತೊಡರ್' ಅಥವ ಕುಮಾರಿಖಂಡದ ಪರ್ವತಾವಳಿ ಎಂಬ ಹೆಸರನ್ನು ಕೊಟ್ಟು ಈ ಪರ್ವತಪಂಕ್ತಿಗಳು ಅಂದಿನ 'ತಮಿಳಗಂ' ಸುತ್ತುವರಿದಿದ್ದವೆಂದು (ವಿಶೇಷವಾಗಿ ಕನ್ಯಾ ಕುಮಾರಿಯ ದಕ್ಷಿಣಕ್ಕೆ ಹರಡಿದ್ದ) ಅವರು ಸಮರ್ಥಿಸಿಕೊಂಡರು. ತಮಿಳರು ಸಿದ್ಧಗೊಳಿಸಿದ ಈ ಕಾಲದ 'ಕುಮರಿಕ್ಕಂಡಂ' ನಕಾಶೆಯಲ್ಲಿ 'ಕುಮರಿ', 'ಪುಳ್ರಳಿ, 'ಕಣ್ಣಿ', 'ಪೇರಾಳಿ' ನದಿಗಳೂ 'ತೆನ್‌ಕಡಲ್'(ದಕ್ಷಿಣ ಸಾಗರ) 'ತೊಂಡುಮುದಲ್‌ಕಡಲ್' (ಆದಿಸಾಗರ), 'ತೋಡುಕಡಲ್'(ಅಕ್ಕಪಕ್ಕದ ಸಾಗರಗಳು) ಮಹತ್ವದ ಸ್ಥಾನ ಪಡೆದುಕೊಂಡವು.[೩೨]

## ಕಡಲ್ಕೋಳ್ ಐತಿಹ್ಯ ಮತ್ತು ಕ್ಷೇತ್ರ ಚರಿತ್ರೆಗಳು:

ಪುರಾತನ ಕಾಲದ 'ತಮಿಳಗಂ'ನ ಒಂದು ಭಾಗ ಕಡಲಡಿ ಸೇರಿತೋ-ಇಲ್ಲವೋ ಅದರ ಐತಿಹ್ಯ ಮಾತ್ರ ತಮಿಳರ ಅಂತರಾಳಕ್ಕಿಳಿದು ಅಲ್ಲಿ ಭದ್ರವಾಗಿ ಮನೆಮಾಡಿ ಕೊಂಡಿತೆನ್ನುವುದರಲ್ಲಿ ಎಳ್ಳಷ್ಟೂ ಅನುಮಾನವಿಲ್ಲ. ತಮಿಳುನಾಡಿನ ಅನೇಕ

ಕ್ಷೇತ್ರಪುರಾಣಗಳು (*ಚತ್ತಿರ ಪುರಾಣಂ*) ಇದನ್ನು ಸಮರ್ಥಿಸುವುವಲ್ಲದೇ ಇವು ಸಂಸ್ಕೃತ ಪುರಾಣಕಾರರ ಮೇಲೆ ಒಂದಿಲ್ಲೊಂದು ಬಗೆಯಲ್ಲಿ ಪ್ರಭಾವ ಬೀರಿದಂತೆ ಕಂಡುಬಂದಿರುವುವು. *ಭಾಗವತ ಪುರಾಣ*ದಲ್ಲಿ ಮನುವಿನ ಪಾತ್ರವನ್ನು 'ದ್ರಾವಿಡಾಧಿಪತಿ'ಯಾದ ಸತ್ಯವ್ರತನು ಪಡೆದುಕೊಂಡದ್ದನ್ನೂ *ಮತ್ಸ್ಯಪುರಾಣ*ದಲ್ಲಿ ತಪಸ್ಸನ್ನಾಚರಿಸಲು ಮಲಯಪರ್ವತವನ್ನು ಮನು ಆಯ್ಕೆ ಮಾಡಿಕೊಂಡದ್ದನ್ನೂ ಇಲ್ಲಿ ನಿದರ್ಶಿಸಬಹುದು.[೩೩]

ಪ್ರವಾಹ (ಸಂ), ಕಡಲ್ಕೋಳ್ (ತ), ಲೂಟಿ (ತ) ಮುಂತಾದವನ್ನು ಉಲ್ಲೇಖಿಸುವ ಆಕರಗಳನ್ನು ಸ್ಥೂಲವಾಗಿ ಎರಡು ಗುಂಪುಗಳಡಿ ತರಬಹುದೆಂದು ತೋರುವುದು: ಒಂದು, ಕನ್ಯಾಕುಮಾರಿಯಾಚೆಯ ಭೂಮಿ ಕಡಲುಪಾಲಾದುದನ್ನು ಪ್ರತ್ಯಕ್ಷ ಇಲ್ಲವೇ ಪರೋಕ್ಷವಾಗಿ ಸಮರ್ಥಿಸುವ ಶಂಗಂ ಮತ್ತು ಶಂಗಮೋತ್ತರ ತಮಿಳು ಸಾಹಿತ್ಯ; ಮತ್ತೊಂದು, ಮೌಖಿಕವಾಗಿ ಪ್ರಸಾರಗೊಳ್ಳುತ್ತಾ ಒಂದು ಕಾಲಘಟಕದಲ್ಲಿ ಲಿಖಿತ ಸ್ವರೂಪ ಪಡೆದುಕೊಂಡ ಸ್ಥಳಮಹಾತ್ಮೆಗಳು. ಮೊದಲನೆಯ ವರ್ಗದಲ್ಲಿ ಗಮನಾರ್ಹವಾದವುಗಳು *ಕಲಿತ್ತೊಗೈ, ಶಿಲಪ್ಪದಿಗಾರಂ* ಮತ್ತು *ಮಣಿಮೇಗಲೈ*; ಎರಡನೆಯದಕ್ಕೆ ಉತ್ತಮ ಮಾದರಿಗಳು, ಶೀಕಾಳಿ, ಕಾಂಚೀಪುರಂ, ಕನ್ಯಾಕುಮಾರಿ, ಮಹಾಬಲಿಪುರಂ, ತಿರುವೆಟ್ರಿಯೂರ್, ಕುಂಭಕೋಣಂ, ಕಾವೇರಿಪಟ್ಟಿಣಂ (ಪುಗಾರ್), ಮದುರೈ ಸ್ಥಳ ಪುರಾಣಗಳು.

ತನ್ನ ರಾಜ್ಯಾಂಗವನ್ನು ಕಡಲು ಕಬಳಿಸಿದಾಗ ಚೋಳ ಮತ್ತು ಚೇರರ ಭೂಮಿಯನ್ನು ವಶಪಡಿಸಿಕೊಂಡು ತನಗಾದ ಹಾನಿಯನ್ನು ಪಾಂಡ್ಯರಾಜನು ತುಂಬಿಕೊಂಡನೆಂದು *ಕಲಿತ್ತೊಗೈ* ತಿಳಿಸುವುದು. ತನ್ನ ಶಕ್ತಿ ಪ್ರದರ್ಶಿಸಲು ಸಮುದ್ರದೆಡೆಗೆ 'ಯಾಲ್' ಎಸೆದು ಕೆಣಕಿದ ಕಾರಣ ಸಿಟ್ಟಿಗೆದ್ದ ಸಾಗರದೊಡೆಯನು 'ಕುಮರಿಕ್ಕೋಡ್'ನ್ನು ಕುಡಿದಾಗ ತನಗಾದ ಹಾನಿಯನ್ನು ತುಂಬಿಕೊಳ್ಳಲು ಪಾಂಡ್ಯತೆಣ್ಣವಣ್ ಗಂಗಾ ಮತ್ತು ಹಿಮಾಲಯ ಪ್ರದೇಶಗಳನ್ನು ವಶಪಡಿಸಿಕೊಂಡನೆಂದು *ಶಿಲಪ್ಪದಿಗಾರಂ* ತಿಳಿಸುವುದು.[೩೪] ಈ ಮಹಾಕಾವ್ಯದಲ್ಲಿ ಬರುವ ಕಾವೇರಿಯ ಆರ್ಭಟಕ್ಕೆ ಸಂಬಂಧಿಸಿದ ಮತ್ತೊಂದು ಪ್ರಸಂಗವನ್ನೂ ಇಲ್ಲಿ ಗಮನಿಸಬಹುದು.[೩೫] ತನ್ನ ಪತಿಯ ಪ್ರತಿಮೆಯನ್ನು ಮರಳಿನಿಂದ ಮಾಡಿ ಅದನ್ನು ಪೂಜಿಸುತ್ತಿರುವಾಗ ಉಕ್ಕೇರಿ ಬಂದ ಕಾವೇರಿಯಿಂದ ರಕ್ಷಿಸಲು ಸತಿಯೊಬ್ಬಳು ಗಾಢವಾಗಿ ಅದನ್ನು ಅಪ್ಪಿಕೊಂಡು ರಕ್ಷಿಸುವಲ್ಲಿ ಸಫಲಳಾಗುವುದೇ ಆ ಪ್ರಸಂಗ. ಇದು ಆನುಷಂಗಿಕವಾಗಿ ಬರುವ ಘಟನೆಯಾಗಿರದೇ ತಮಿಳು ಗರತಿಯರ ಅಂತರಾಳಕ್ಕಿಳಿದ ಒಂದು ಆಚರಣೆಯಾಗಿ ಇಂದಿಗೂ ಉಳಿದುಕೊಂಡಿರುವುದು ಕುತೂಹಲಕಾರಕ. ವರ್ಷದ ಒಂದು ಶುಭ ದಿನದಂದು ಕುಲಸ್ಥ ಗರತಿಯರು ಕಾವೇರಿ ದಡದಲ್ಲಿ ಸೇರಿ, ಮರಳಿನ (ಪತಿಯ ಅಥವಾ ಸಮುದ್ರರಾಜನ) ಪ್ರತಿಮೆಯನ್ನು ಮಾಡಿ

ಆರಾಧಿಸಿ, ಉಟ್ಟಬಟ್ಟೆಯನ್ನು ಕಳಚಿ (ಆ ಮೂಲಕ ಪತಿಯೊಡನೆ ಸಾಂಕೇತಿಕವಾಗಿ ಐಕ್ಯಗೊಂಡು) ಹೊಸಬಟ್ಟೆ ಧರಿಸುವುದು ಇಂದಿಗೂ ರೂಢಿಯಲ್ಲಿದೆ.[೬೭] ಪ್ರೇಯಸಿಯಿಂದ ಅಗಲಿ ವಿರಹ ತಾಪದಲ್ಲಿದ್ದ ನೆಡುಮುಡಿಕ್ಕಿಳಿಯು ಪುಗಾರ್ ತೀರದಲ್ಲಿ ಆಚರಿಸಬೇಕಾಗಿದ್ದ ಇಂದ್ರಪೂಜೆಯನ್ನು ಮರೆತಾಗ, ಮಣಿಮೇಗಲೈದೇವಿ ಉಗ್ರಗೊಂಡು ಪುಗಾರ್ ನಗರವನ್ನು ಜಲಾಂತರ್ಗತಗೊಳಿಸುವ ಮಣಿಮೇಗಲೈ ಪ್ರಸಂಗವನ್ನು ಇದು ನೆನಪಿಗೆ ತಂದುಕೊಡುವುದು.[೬೭]

ಈ ಎಲ್ಲ ಸ್ಥಳಮಹಾತ್ಮೆಗಳಲ್ಲಿ ಕಾಣುವ ಒಂದೆರಡು ಸಾಮಾನ್ಯ ಅಂಶಗಳೆಂದರೆ-ಪ್ರವಾಹಕ್ಕೆ ಕಾರಣವಾಗಿ ಬರುವ ಸಾಮಾನ್ಯ ಖಳನಾಯಕ ದೈವ-ವರುಣ ಇಲ್ಲವೇ ಇಂದ್ರ; ಪ್ರವಾಹ ಸಂದರ್ಭಗಳಲ್ಲೆಲ್ಲಾ ಲೋಕರಕ್ಷಣೆಗಾಗಿ ಬರುವ ದೈವ-ಶಿವ ಇಲ್ಲವೇ ಶಕ್ತಿ. ಈ ನಿಯಮಕ್ಕೆ ಅಪವಾದವೆನ್ನುವಂತೆ ಶಿವ ಪ್ರಳಯಕಾರಕನೂ ಪ್ರಜಾರಕ್ಷಕನೂ ಆಗಿ ಇಬ್ಬಗೆಯ ಪಾತ್ರಗಳನ್ನಾಡುವ ಪ್ರಸಂಗಗಳುಂಟು.

ಮಹಾಬಲಿಪುರದ ಅದ್ಭುತ ಸೊಬಗನ್ನು ಕಂಡು ಮತ್ಸರಗೊಂಡ ಇಂದ್ರ ಅದನ್ನು ನಾಶಮಾಡದಿದ್ದರೆ ಇಂದ್ರಲೋಕದ ಅಂತಸ್ತಿಗೆ ಧಕ್ಕೆ ಬರುವುದೆಂದು ಭಾವಿಸಿ, ಸಮುದ್ರರಾಜನನ್ನು ಅಲ್ಲಿಗೆ ಅಟ್ಟಿ ಅದನ್ನು ಕಡಲುಪಾಲು ಮಾಡಲು ಆದೇಶವಿತ್ತನೆಂದು ಒಂದು ಐತಿಹ್ಯ ತಿಳಿಸುವುದು. ಇದರಂತೆ, ಪಾಂಡ್ಯರಾಜ ತೊಂಬತ್ತಾರು ಅಶ್ವಮೇಧ ಯಜ್ಞಗಳನ್ನು ಪೂರೈಸಿ ತನ್ನ ಪ್ರತಾಪವನ್ನು ಮೆರೆದಾಗ, ಮತ್ಸರಗೊಂಡ ಇಂದ್ರ ಅವನ ರಾಜಧಾನಿ ಪಟ್ಟಣವಾದ (ದಕ್ಷಿಣ) ಮದುರೈಯನ್ನು ಜಲಾವೃತಗೊಳಿಸಲು ಸಮುದ್ರರಾಜನಿಗೆ ಆದೇಶವನ್ನಿತ್ತನೆಂದು ಮತ್ತೊಂದು ಐತಿಹ್ಯ ತಿಳಿಸುವುದು.[೬೮] ಶಿವನೊಡನೆ ನೇರವಾಗಿ ಘರ್ಷಣೆಗಿಳಿದ ವರುಣ ಕೊನೆಗೆ ಅವನಿಗೆ ಶರಣಾದ ಕೆಲವು ಐತಿಹ್ಯಗಳೂ ಉಂಟು. ಇವುಗಳಲ್ಲಿ ಒಂದು ಮದುರೈ ಸ್ಥಳಮಾಹಾತ್ಮ್ಯಗಳಲ್ಲಿ ಸೇರಿಕೊಂಡಿದ್ದು ಅದರ ವಿವರ ಇಂತಿದೆ: ಶಿವನ ಸಾಮರ್ಥ್ಯವನ್ನು ಪರೀಕ್ಷಿಸಲೆಂದು ಅವನ ನೆಲೆಯಾದ ಮದುರೈ ಮುತ್ತಲು ಸಮುದ್ರರಾಜನಿಗೆ ವರುಣ ಆದೇಶವನ್ನೀಯುವನು; ಇದರಂತೆ ಕಾರ್ಮೋಡಗಳು ಅದನ್ನು ಸುತ್ತುವರಿದಾಗ, ಭಯಭೀತರಾದ ದೇವತೆಗಳೆಲ್ಲರೂ ಮದುರೆಯ ಅಧಿಪತಿಯಾದ ಆಲವಾಯ್(ಶಿವ)ನಲ್ಲಿ ಮೊರೆಹೋಗುವರು; ಆಗ ಶಿವ ನಾಲ್ಕು ಮಹಾಮೇಘಗಳನ್ನಟ್ಟಿ, ಏರಿಬರುತ್ತಿರುವ ಕಾರ್ಮೋಡಗಳನ್ನು ಕುಡಿಯಲು ಆದೇಶವೀಯುವನು; ಇದರಿಂದ ಮತ್ತಷ್ಟು ಕೋಪಗೊಂಡ ವರುಣ ಮಹಾಮೇಘಗಳಿಗೆ ಇನ್ನೊಂದು ಆದೇಶವನ್ನಿತ್ತು ಹುಚ್ಚು ಮಳೆಗರೆಯಲು ಹಚ್ಚುವನು; ಆಗ ಶಿವ ಘನ ಮೇಘಗಳನ್ನು ನಾಲ್ಕು ಗೋಪುರಗಳನ್ನಾಗಿ ಪರಿವರ್ತಿಸಿ, ಮದುರೆಯ ನಾಲ್ಕು ದಿಕ್ಕಿನಲ್ಲಿ ನಿಲ್ಲಿಸಿ, ನಗರವನ್ನು ರಕ್ಷಿಸುವನು: ಈ ನಾಲ್ಕು ಮೇಘಗಳು ಮಾಡಮ್(ಮಂದಿರ)ಗಳಾದುದರಿಂದ ಮದುರೆಗೆ 'ನಾನ್ ಮಾಡಕೂಡಲ್'

(ನಾಲ್ಕು ಮಂದಿರಗಳ ಸಂಗಮಸ್ಥಾನ) ಎಂಬ ಹೆಸರು ಬರುವುದು. ಕವಿಗಳಾದ ಪೆರುಂಪಜ್ರಿಪ್ಪುಲಿಯೂರ್‌ನಂಬಿ ಮತ್ತು ಪರಂಜ್ಯೋತಿಮಣಿವರಂ ಈ ಪ್ರಸಂಗವನ್ನು ಸಮಗ್ರವಾಗಿ ಬಣ್ಣಿಸಿರುವರು.[೩೯]

ಶಿವನೇ ಮೊದಲು ಪ್ರಳಯಕಾರಕನಾಗಿ ಕಾಣಿಸಿಕೊಂಡು ನಂತರ ಪ್ರಜಾರಕ್ಷಕನಾಗುವುದನ್ನು *ಕಾಂಜೀಪುರಾಣ*ದಲ್ಲಿ ಕಾಣುವೆವು. ವಿಶ್ವದ ಸಕಲ ಜಲರಾಶಿಯನ್ನು ಕಂಪೈನದಿಯಲ್ಲಿ ಸಂಗಮಗೊಳಿಸಿದಾಗ ಅದ್ಭುತ ಜಲಪ್ರವಾಹ ಉಂಟಾಗಿ ಕಾಂಚೀಪಟ್ಟಣ ಕೊಚ್ಚಿ ಹೋಗತೊಡಗುವುದು. ಆಗ ತಾನು ಆರಾಧಿಸುತ್ತಿದ್ದ ಕಾಂಚೀಲಿಂಗವನ್ನು ತನ್ನ ಬಾಹುಗಳಲ್ಲಿ ಬಂಧಿಸಿ, ತನ್ನನ್ನೇ ಪ್ರವಾಹಕ್ಕೆ ಒಡ್ಡಿಕೊಂಡು ಅದನ್ನು ರಕ್ಷಿಸುತ್ತಿದ್ದ ಉಮೆಯನ್ನು ಮೆಚ್ಚುತ್ತಾ ಆ ಜಲರಾಶಿಯ ಆರ್ಭಟವನ್ನು ಶಿವ ಶಮನಗೊಳಿಸಿದನೆಂದು ಕವಿ ಶೇಕ್ಕಿಟಾರ್ *ಪೆರಿಯಪುರಾಣ*ದಲ್ಲಿ ವರ್ಣಿಸಿರುವನು.[೪೦] ಶಿವ ಮತ್ತು ಉಮಾ ಒಡಗೂಡಿ ಪ್ರಳಯಕ್ಕೊಳಗಾದ ಜೀವರಾಶಿಯನ್ನು ಪಾರುಮಾಡುವುದನ್ನು *ಶೀಕಾಳಿಪುರಾಣ*ದಲ್ಲಿ ಉಲ್ಲೇಖಿಸಲಾಗಿದೆ. ಜೀವರಾಶಿಯೆಲ್ಲ ಅಪಾಯಕ್ಕೀಡಾದ ಸಂದರ್ಭದಲ್ಲಿ ತನ್ನ ಎಲ್ಲ ಅಲಂಕಾರ (ನಾಗ, ಅರ್ಧಚಂದ್ರ, ಕೊನ್ರೈಪೂಮಾಲೆ, ವ್ಯಾಘ್ರಚರ್ಮ ಮುಂ.)ಗಳನ್ನು ತ್ಯಜಿಸಿ, ಅರವತ್ತುನಾಲ್ಕು ಕಲೆಗಳನ್ನು ಮಾತ್ರ ತೊಟ್ಟು ವೇದಗಳನ್ನು ಘೋಷಿಸುತ್ತಾ ಪ್ರಣವ 'ತೋಣಿ'(ದೋಣಿ)ಯನ್ನು ನಿರ್ಮಿಸಿ ಉಮೆಯೊಡನೆ ಅದನ್ನೇರಿ, ಭೋರ್ಗರೆವ ಸಾಗರ ದಾಟಿ, ಶೀಕಾಳಿಯನ್ನು ಶಿವ ಸೇರುವನು. ಆಗ ತನ್ನ ಮೂರನೆಯ ಕಣ್ಣನ್ನು ತೆರೆದು, ಜಲರಾಶಿಯನ್ನು ಸುಟ್ಟು ಅದನ್ನೆಲ್ಲ ಒಣಗಿಸಿ, ಜೀವರಾಶಿಯನ್ನು ರಕ್ಷಿಸಿದುದರಿಂದ ಶೀಕಾಳಿಗೆ ತೋಣಿಪುರ(ದೋಣಿಪುರ)ವೆಂಬ ಮತ್ತೊಂದು ಹೆಸರು ಬಂತೆಂದು *ಶೀಕಾಟಿತ್ತಳ ಪುರಾಣಂ* ತಿಳಿಸುವುದು.[೪೧] ಮದುರೆಯ ಮತ್ತೊಂದು ಐತಿಹ್ಯ ತಮಿಳ್‌ಚೊಕ್ಕನ್ (ಶಿವ) ಪಾಂಡ್ಯರಸನಾದ ಉಕ್ಕಿರನ್‌ನನ್ನು ಕಡಲಿನ ದವಡೆಯಿಂದ ಹೇಗೆ ಪಾರುಮಾಡಿದನೆಂಬ ವಿವರ ಕೊಡುವುದು.[೪೨] ಅವನ ತಂದೆ ಸುಂತರಪಾಂಡ್ಯ ಆ ಮೊದಲು ಮಾಡಿದಂತೆ ಶಿವನ ಸಲಹೆಯ ಮೇರೆಗೆ ಉಕ್ಕಿರನ್‌ನೊಡನೆ ತನ್ನ 'ಯಾಲ್'ನ್ನು ಸಮುದ್ರದೆಡೆಗೆ ಬೀಸಿ ಎಸೆದಾಗ, ಸಮುದ್ರರಾಜನು ಹೆದರಿ ಅವನ ಪಾದಕ್ಕೆ ಬೀಳುವನು. ಆಗ ಶಿವ ಸ್ವತಃ ಅಲ್ಲಿಗೆ ಬಂದು ಒಂದು ಮಂಡಪವನ್ನು ಕಟ್ಟಿ 'ಇದು ಮೊದಲ ಮತ್ತು ಎರಡನೆಯ ಶಂಗಂಗಳ ನೆಲೆ; ಮೂರನೆಯ ಶಂಗಂ ಗಂಗಾತಟದ ಮೇಲೆ· ನಿರ್ಮಾಣಗೊಳ್ಳುವುದು' ಎಂದು ಹೇಳಿಕೆಯನ್ನಿತ್ತು ಹೋಗುವನು. ಇಲ್ಲಿ ಉಲ್ಲೇಖಗೊಂಡಿರುವ ಗಂಗಾತಟವು ಉತ್ತರ ಭಾರತದ ಗಂಗಾ ನದಿಯನ್ನುದ್ದೇಶಿಸಿ ಮಾಡಿದ್ದಲ್ಲ, ಮದುರೈ ನಗರದಲ್ಲಿರುವ 'ಪೊಜ್ರೊಮರೈ ಕಲ್ಯಾಣಿ'ಯನ್ನುದ್ದೇಶಿಸಿದ್ದು. ಶಂಗಂ ಕವಿಗಳ ಗೋಷ್ಠಿ ಪಟ್ಟಿಮಂಟಪದಲ್ಲಿ ಸೇರುತ್ತಿತ್ತೆಂಬುದನ್ನು ಇದು ನೆನಪಿಗೆ ತಂದುಕೊಡುವುದು.[೪೩]

ಮಹಾಕಾಳಿ ಅಥವಾ ದುರ್ಗೆಯ ಅವತಾರದಲ್ಲಿ ಶಕ್ತಿ ಕಡಲಿನ ಆರ್ಭಟವನ್ನು ಶಮನಗೊಳಿಸಿದ ಕೆಲವು ಐತಿಹ್ಯಗಳೂ ಉಂಟು. ಕಾಂಚೀಪುರದ ಮೇಲೇರಿ ಬರುತ್ತಿದ್ದ ಅಪಾರ ಜಲರಾಶಿಯನ್ನು ದುರ್ಗೆ ತನ್ನ ಕೈ ಕಪಾಲದಲ್ಲಿ ಬಂಧಿಸಿದುದರಿಂದ ಅವಳಿಗೆ 'ಪ್ರಳಯಬಂಧಿನಿ' ಎಂಬ ಹೆಸರು ಬಂತೆಂದು ಕಾಮಾಕ್ಷಿವಿಳಾಸ ತಿಳಿಸುವುದು.[೪೪] ಸ್ವತಃ ದೇವಿಯೇ ಪ್ರವಾಹವನ್ನುಂಟುಮಾಡಿ ಅದನ್ನು ಶಮನಗೊಳಿಸಿದ ಒಂದು ಪ್ರಸಂಗವನ್ನು *ಕನ್ಯಾಕುಮಾರಿ ಮಾಹಾತ್ಮ್ಯ*ದಲ್ಲಿ ಕಾಣುವೆವು. ಬಾಣಾಸುರನನ್ನು ಸಂಹರಿಸಿ ದೇವಿ ಅಲ್ಲಿಯೇ ನೆಲೆನಿಂತಾಗ, ದೇವತೆಗಳೆಲ್ಲರೂ ಬಂದು ತಮಗೆ ಸಮುದ್ರನೀರಿನ ಬದಲು ಸಿಹಿನೀರಿನ ಅನುಕೂಲತೆಯನ್ನು ಮಾಡಿಕೊಡಬೇಕೆಂದು ಪ್ರಾರ್ಥಿಸುವರು; ಆಗ, ದುರ್ಗೆ ತನ್ನ ಖಡ್ಗವನ್ನು ಭೂಮಿಗೊತ್ತಲು, ಸಿಹಿನೀರಿನ ಬುಗ್ಗೆ ಕಾಣಿಸಿಕೊಂಡು ಕ್ರಮೇಣ ಅದು ಮಹಾಪ್ರವಾಹದ ಸ್ವರೂಪ ಪಡೆದುಕೊಳ್ಳುವುದು. ಪಾತಾಳದ ಒಡಲಿನಿಂದ ಹೀಗೆ ಉಕ್ಕೇರಿ ಬರುವ ಜಲರಾಶಿಯನ್ನು ಕಂಡು ಭಯಭೀತರಾದ ದೇವತೆಗಳು ಅದರಿಂದ ರಕ್ಷಿಸಬೇಕೆಂದು ಕೇಳಿದಾಗ, ದೇವಿ ಆ ಜಲರಾಶಿಯನ್ನು ಪಾತಾಳದ ಪದರಿನಲ್ಲಿಯೇ ಬಂಧಿಸಿ ಕನ್ಯಾಕುಮಾರಿಯಲ್ಲಿ 'ಮೂಲಗಂಗಾ' ಕ್ಷೇತ್ರವನ್ನು ನಿರ್ಮಾಣ ಮಾಡುವಳು.[೪೫] ಜಲರಾಶಿಯನ್ನು ನಿಗ್ರಹಿಸುವ, ಉಕ್ಕೇರಿ ಬರುವ ಕಡಲನ್ನು ಶಮನಗೊಳಿಸುವ, ಕಬಳಿಸಲ್ಪಟ್ಟ ನೆಲವನ್ನು ಕಡಲ ಹಿಡಿತದಿಂದ ಬಿಡಿಸಿ ವಸತಿಯೋಗ್ಯ ವಲಯವನ್ನಾಗಿ ಪರಿವರ್ತಿಸುವ, ಪ್ರಸಂಗಗಳು ಹಲವಾರು ಪುರಾಣಗಳಲ್ಲಿ ಬರುವುವು. ಸಾಗರವನ್ನು ಅಗಸ್ತ್ಯ ಸ್ವಾಹಾ ಮಾಡುವುದು, ಕಡಲಿನೆಡೆ ಬಾಣ ಸಿಡಿಸಿ ಅದನ್ನು ಕಾರ್ತವೀರ್ಯನು ಜಯಿಸುವುದು, ಬಾಣದ ಮಳೆಗರೆದು ಜಲವನ್ನು ಭೀಷ್ಮ ಬತ್ತಿಸುವುದು, ಕೊಡಲಿಯನ್ನು ತೂರೆಸೆದು ಪರಶುರಾಮ ಕಡಲನ್ನು ಹಿಮ್ಮೆಟ್ಟಿಸುವುದು, ಸಮುದ್ರರಾಜನೊಡನೆ ಹೋರಾಡಿ ಭೂಮಿಯನ್ನು ಕೃಷ್ಣ ಪಡೆದುಕೊಂಡು ದ್ವಾರಕೆಯನ್ನು ಕಟ್ಟುವುದು, ಇವುಗಳಲ್ಲಿ ಕೆಲವು.[೪೬] ಸಮುದ್ರತೀರದ ಜನಾಂಗಗಳ ಹಾಡು, ನಾಣ್ನುಡಿ, ಹಬ್ಬದಾಚರಣೆಗಳಲ್ಲಿ ಅಡಕವಾಗಿರುವ ಇಂತಹ ಸಮುದ್ರ-ಸಂಘರ್ಷದ ವಿವರಗಳಿಗೆ ಲೆಕ್ಕ ಕಟ್ಟುವುದೇ ಕಷ್ಟ.[೪೭]

ಸ್ಥಳಮಹಾತ್ಮೆ, ಪುರಾಣ, ಐತಿಹ್ಯ, ದಂತಕತೆಗಳನ್ನು ಅಕ್ಷರಶಃ ನಂಬುವುದು ಎಷ್ಟು ಅಪಾಯಕಾರಿಯೋ ಅವನ್ನು ಸಂಪೂರ್ಣವಾಗಿ ಉಪೇಕ್ಷಿಸುವುದೂ ಅಷ್ಟೇ ದುರದೃಷ್ಟಕರ. ಇವುಗಳನ್ನು ಸರಿಯಾಗಿ ದುಡಿಸಿಕೊಳ್ಳುವ ಸಾಮರ್ಥ್ಯದ ಮೇಲೆ ಇತಿಹಾಸಕಾರನ ನೈಪುಣ್ಯ ನಿರ್ಧಾರವಾಗುವುದರಿಂದ ಅವನ್ನು ಬಹಳ ಎಚ್ಚರಿಕೆಯಿಂದ ಬಳಸಿಕೊಳ್ಳಬೇಕಾಗುವುದು. ಇದು ಏನೇ ಇರಲಿ, ಐತಿಹ್ಯಗಳೂ ಇತಿಹಾಸ ರಚನೆಗೆ ಒಂದು ಬಗೆಯ ಅಮೂಲ್ಯ ಆಕರಗಳನ್ನು ಒದಗಿಸುವುವು ಎಂಬುದನ್ನು ಮಾತ್ರ ಅಲ್ಲಗಳೆಯುವಂತಿಲ್ಲ. ಇದನ್ನು ವಿಜ್ಞಾನಿಗಳು ಒಪ್ಪಬಹುದು ಇಲ್ಲವೇ ಒಪ್ಪದಿರಬಹುದು.

## ಆಕರ ಟಿಪ್ಪಣಿ :


೧. ಸ್ಲಾಟರ್, ಪಿ. ಎಲ್., 'ದಿ ಮಾಮ್ಮಲ್ಸ್ ಆಪ್ ಮಡಗಾಸ್ಕರ್', *ಕ್ವಾರ್ಟರ್ಲೀ ಜರ್ನಲ್ ಆಫ್ ಸೈನ್ಸ್* I-2, ಪು. ೨೧೩-೧೯, ಎಡುಆರ್ಡ್ ಸುಯಸ್ಸ್ *ದಿ ಫೇಸ್ ಆಫ್ ದಿ ಅರ್ತ್* (ಇಂಗ್ಲಿಷ್ ಭಾಷಾಂತರ, ಎಚ್. ಬಿ . ಪಿ. ಸೊಲ್ಲಸ್ (ಓಯುಪಿ, ೧೯೦೪), ಹೈಕಲ್, ಎ., *ಹಿಸ್ಟರಿ ಆಫ್ ಕ್ರಿಯೇಷನ್*... (ನ್ಯೂಯಾರ್ಕ್, ೧೮೭೬). ಈ ಗ್ರಂಥಗಳಲ್ಲಿ ಸುದೀರ್ಘವಾಗಿ ಚರ್ಚಿಸಲಾದ ಸಿದ್ಧಾಂತಗಳ ಸಂಗ್ರಹಕ್ಕೆ ನೋ. ರಾಮಸ್ವಾಮಿ, ಸು., *ಫ್ಯಾಬುಲೆಸ್ ಜಿಯೋಗ್ರಫೀಸ್ ಕೆಟಾಸ್ಟ್ರೋಫಿಕ್ ಹಿಸ್ಟರೀಸ್ : ದಿ ಲಾಸ್ಟ್ ಲ್ಯಾಂಡ್ ಆಫ್ ಲೆಮೂರಿಯಾ* (ದೆಹಲಿ, ೨೦೦೫), ಪು. ೨೧-೫೨, ೨೪೨ ಅ.ಟಿ. ೫೧-೫೨. ಇತ್ತೀಚೆಗೆ ಪ್ರಕಟಗೊಂಡ ಸುಮತಿ ರಾಮಸ್ವಾಮಿಯವರ ಈ ಗ್ರಂಥ ಹೆಚ್ಚು ಮಾಹಿತಿಯನ್ನು ಒದಗಿಸಿ ಈ ಲೇಖನದ ಒಂದು ಭಾಗವನ್ನು ರೂಪಿಸಿದೆ. ಇದಲ್ಲದೆ, *ಎನ್‌ಸೈಕ್ಲೋಪೇಡಿಯಾ ಬ್ರಿಟಾನಿಕಾ* ಸಂಪುಟಗಳನ್ನೂ ನಾನಿಲ್ಲಿ ಧಾರಾಳವಾಗಿ ಬಳಸಿಕೊಂಡಿರುವೆ. ಆಕರಗ್ರಂಥಗಳಲ್ಲಿ ಬರುವ ಉಲ್ಲೇಖಗಳನ್ನು ಆದಷ್ಟು ಮೂಲ ಪಾಠಗಳೊಂದಿಗೆ ಹೋಲಿಸಿನೋಡಲು ಪ್ರಯತ್ನಿಸಿರುವೆ; ಎಲ್ಲಿ ಅದು ಸಾಧ್ಯವಾಗದಾಯಿತೋ ಅಲ್ಲಿ ಆ ಮುಂಚೆ ಅಭ್ಯಾಸ ಮಾಡಿದವರ ಲೇಖನಗಳಿಂದ ಅವನ್ನು ಆಯ್ದುಕೊಂಡು, ಪುನಃಪ್ರಸ್ತಾಪ ಮಾಡಿರುವುದನ್ನು ಸೂಚಿಸಿರುವೆ.

೨. ವ್ಯಾಲ್ಲೇಸ್, ಎ. ಆರ್., 'ಆನ್ ದಿ ಜೂಆಲಾಜಿಕಲ್ ಜಿಯೋಗ್ರಫಿ ಆಫ್ ದಿ ಮಲಯ ಆರ್ಖಿಪಿಲೆಗೋ' *ಜರ್ನಲ್ ಆಫ್ ದಿ ಪ್ರೊಸೀಡಿಂಗ್ಸ್ ಆಫ್ ದಿ ಲಿನ್ನೆಯಿನ್ ಸೊಸೈಟಿ ಆಪ್ ಲಂಡನ್*, (ಜೂಆಲಜಿ), ೧೮೬೮, ೪ : ಪು. ೧೭೨-೭೪; *ದಿ ಜಿಯೋಗ್ರಫಿಕಲ್ ಡಿಸ್ಟ್ರಿಬ್ಯೂಷನ್ ಆಫ್ ಆನಿಮಲ್ಸ್*, ಸಂ. ೧-೨ (ಲಂಡನ್, ೧೮೭೬); 'ಕಂಪ್ಯಾರೇಟಿವ್ ಅಂಟಿಕ್ವಿಟಿ ಆಫ್ ಕಾಂಟಿನೆಂಟ್ಸ್...', *ಪ್ರೊಸೀಡಿಂಗ್ಸ್ ಆಫ್ ದಿ ರಾಯಲ್ ಜಿಯೋಗ್ರಾಫಿಕಲ್ ಸೊಸೈಟಿ*, ೨೧, ಸಂ. ೬, ಪು. ೫೦೫-೩೫ ಮುಂ. ಹೋಲಿಸಿ ನೋ. ರಾಮಸ್ವಾಮಿ, *ಅದೇ* ಪು. ೨೨, ೩೩, ೪೮, ೫೧, ೫೭, ೨೪೦-೨೪೬ ಮುಂ. ಅಲ್ಲದೆ ನೋ. ವೆಜೆನರ್, ಎ. ಎಲ್., *ದಿ ಓರಿಜನ್ಸ್ ಆಫ್ ಕಾಂಟಿನೆಂಟ್ಸ್ ಅಂಡ್ ಓಷನ್ಸ್* (ಇಂಗ್ಲಿಷ್ ಅನು. ಸ್ಕೆರ್ಲ್ಸ್ ಜೆ. ಜಿ. ಎ., ನ್ಯೂಯಾರ್ಕ್, ೧೯೨೪, ೩ನೆಯ ಪು. ಮು.).

೩ ಹೆಸರಾಂತ ಸಂಸ್ಥೆಗಳೂ ಪ್ರಸಿದ್ಧ ತಜ್ಞರೂ ಇದರಲ್ಲಿ ಪಾಲ್ಗೊಂಡಿರುವುದರಿಂದ ಅವರು ಮಾಡಿದ ನಿರ್ಣಯಗಳ ಮಹತ್ವವನ್ನು ಅರಿತುಕೊಳ್ಳಬಹುದಾಗಿದೆ. ಕೇಂಬ್ರಿಜ್‌ನ ಜೀವಶಾಸ್ತ್ರಜ್ಞ ಸ್ಟ್ಯಾನ್ಲಿ ಗಾರ್ಡಿನರ್ ಇದರಲ್ಲಿ ನೇರವಾಗಿ ತೊಡಗಿಸಿಕೊಂಡಿದ್ದರು; ಲಂಡನ್ ಟೈಮ್ಸ್ ದಿನಪತ್ರಿಕೆಯು ಈ ಚರ್ಚೆಗೆ ವೇದಿಕೆಯನ್ನು ಒದಗಿಸಿಕೊಟ್ಟಿತು; ಮಾರಿಷಿಯಸ್ ರಾಜ್ಯಪಾಲನಾಗಿದ್ದ ಸರ್ ಹಿಲರಿ ಬ್ಲಡ್ ಈ ಬಗ್ಗೆ ಕೊಟ್ಟ ಹೇಳಿಕೆಯನ್ನು ೧೯೫೭ರ *ಜಿಯೋಗ್ರಾಫಿಕಲ್ ಮ್ಯಾಗಜೀನ್* ಪ್ರಕಟಿಸಿತು; *ಲಿಮೂರಿಯಾ: ದಿ ಲೆಸ್ಸರ್ ಡಿಪೆಂಡೆನ್ಸೀಸ್ ಆಫ್ ಮಾರಿಷಿಯಸ್*, ಎಂಬ ಗ್ರಂಥವನ್ನು ಓಯುಪಿ ಪ್ರಕಟಿಸಿತು; *ಪೀಕ್ಸ್ ಆಪ್ ಲಿಮೂರಿಯಾ : ದಿ ಸ್ಟೋರಿ ಆಫ್ ಡಿಯೋಗೋ ಗ್ರಾಸಿಯಾ* ಎಂಬ ಗ್ರಂಥವನ್ನು ಬ್ರಿಟಿಷ್-ಇಂಡಿಯನ್ ಓಸಿಯಾನಾ ಟೆರ್ರಿಟೊರಿ ಕಮಿಷನರ್ ಆದ ರಿಚರ್ಡ್ ಆಡ್ಲಿಸ್ ಹೊರತಂದನು.

೪. *ದಿ ಎನ್‌ಸೈಕ್ಲೋಪೆಡಿಯಾ ಬ್ರಿಟನ್ನಿಕಾ* (ಚಿಕಾಗೋ, ೧೯೬೨: ಹದಿನೈದನೆಯ ಪರಿಷ್ಕೃತ ಪ್ರಕಟನೆ) ಸಂ. ೧, ಪು. ೬೨೩-೭೪

೫. ಅಟ್ಲಾಂಟಿಸ್ ಮಹಾದ್ವೀಪವು ಏಷಿಯಾ ಮೈನರ್ ಮತ್ತು ಲಿಬಿಯ ಒಟ್ಟುಗೂಡಿದರೆ ಎಷ್ಟು ವಿಶಾಲವಾಗುವುದೋ ಅಷ್ಟು ವಿಶಾಲವಾಗಿತ್ತೆಂಬುದನ್ನು ಈಜಿಪ್ಟಿನ ಪುರೋಹಿತನೊಬ್ಬನು ಕಾನೂನು ನಿರ್ಮಾತೃವಾದ ಸೋಲೋಮನ್‌ಗೆ ತಿಳಿಸಿದನೆಂದು ಪ್ಲೇಟೋ ಹೇಳಿರುವನು. ನೋ. *ಅದೇ.* ಪು.೬೭೪

೬. ಡೊನೆಲ್ಲಿ ಇಗ್ನೇಷಿಯಸ್, *ಅಟ್ಲಾಂಟಿಸ್: ದಿ ಆಂಟಿಡೈಲೂಲಿಯನ್ ವರ್ಲ್ಡ್*, (ನ್ಯೂಯಾರ್ಕ್, ೧೮೮೨).

೭. ಸ್ಕಾಟ್, ಇಲಿಯಟ್, *ದಿ ಲಾಸ್ಟ್ ಲೆಮೂರಿಯಾ* (ಲಂಡನ್, ೧೯೦೪) ಮತ್ತು *ದಿ ಸ್ಟೋರಿ ಆಫ್ ಅಟ್ಲಾಂಟಿಸ್ ಆಂಡ್ ದಿ ಲಾಸ್ಟ್ ಲೆಮೂರಿಯಾ* (ಲಂಡನ್, ೧೯೫೪, ಪು. ಮು.); ಬ್ಲವಟಸ್ಕಿ, ಎಚ್. ಪಿ., 'ದಿ ಲ್ಯಾಂಡ್ ಆಫ್ ಮಿಸ್ಟರಿ', *ದಿ ಥಿಯೋಸಾಫಿಸ್ಟ್* ೧, (೧೯೨೮, ಆಗಸ್ಟ್) ಪು.೧೯೫-೭೩, ೨೨೪-೭, ೨೭೭-೭೯; ಲೆಡ್ ಬೀಟರ್, ಡಿ. ಎಮ್., *ದಿ ಬಿಗಿನ್ನಿಂಗ್ ಆಫ್ ದಿ ಸಿಕ್ಸ್ ರೂಟ್‌ರೇಸ್*, (ಮದ್ರಾಸು, ೧೯೩೧, ಪು. ಮು.) ಮತ್ತು *ದಿ ಹಿಡನ್ ಸೈಡ್ ಆಫ್ ಥಿಂಗ್ಸ್* (ಮದ್ರಾಸು, ೧೯೩೧, ಪು. ಮು.) ಅಲ್ಲದೆ ನೋ. ರಾಮಸ್ವಾಮಿ, *ಅದೇ.*, ಪು. ೨೧ ರಿಂದ.

೮. ರಾಮಸ್ವಾಮಿ, *ಅದೇ.*, ಪು. ೬೩

೯. *ಅದೇ.*, ಪು. ೮೫ರಿಂದ. ವಿಶೇಷವಾಗಿ ನೋ. ಪು. ೮೭, ೯೧, ೯೬, ೨೯೨, ಅ. ಟಿ. ೧೧೮

೧೦. *ಅದೇ.*, *'ರೋಜಿ ಕ್ರೂಶಿಯನ್'* (ಪು. ೬೯, ೨೫೫ ಅ. ಟಿ. ೮೯), 'ಆರ್ಕ್ಹಿನ್' (ಪು. ೭೦), 'ಮೈಟಿ ಐ ಯಾಮ್' (ಪು. ೭೭, ೮೯, ೨೫೯ ಅ. ಟಿ. ೧೩೫), ರಮ್ತಾ (ಪು. ೮೮, ೯೫), 'ಕಮ್ ಟು ಲೆಮೂರಿಯಾ' (ಪು. ೮೭, ೮೮, ೨೬೨ ಅ. ಟಿ. ೧೮೮)

೧೧. *ಅದೇ.*, ಪು. ೭೯. ಅಲ್ಲದೆ ನೋ. ೭೫-೭೭, ೮೪, ೯೧, ೧೮೫-೧೮೬, ೨೫೭-೮ ಅ. ಟಿ. ೧೨೪, ೨೬೦ ಅ. ಟಿ. ೧೫೩

೧೨. ಬ್ಲಾನ್ ಫೋರ್ಡ್, ಎಚ್. ಎಸ್., *ದಿ ರೂಡಿಮೆಂಟ್ಸ್ ಆಫ್ ಫಿಜಿಕಲ್ ಜಿಯೋಗ್ರಫಿ..* (ಕಲ್ಕತ್ತ, ೧೮೭೩) ಪು. ೧೧೯-೨೦; 'ಆನ್ನಿವರ್ಸರಿ ಆಡ್ರಸ್ ಆಫ್ ದಿ ಪ್ರೆಸಿಡೆಂಟ್ : ದಿ ಪರ್ಮನೆನ್ಸ್ ಆಫ್ ಓಷನ್ ಬೇಸಿನ್ಸ್', *ಕ್ವಾರ್ಟರ್ಲಿ ಜರ್ನಲ್ ಆಫ್ ದಿ ಜಿಯೊಲಾಜಿಕಲ್ ಸೊಸೈಟಿ* ೪೬, ಪು. ೧೧೯-೨೦; ಮ್ಯಾಕ್ಲಿನ್, ಸಿ. ಡಿ., *ದಿ ಮ್ಯಾನುಅಲ್ ಆಫ್ ದಿ ಮದ್ರಾಸ್ ಪ್ರಸಿಡೆನ್ಸಿ* ಸಂ. ೧ (ನ್ಯೂ ದೆಲ್ಲಿ ೧೯೮೭, ಪ್ರ. ಮು.), ಪು. ೩೩-೩೪; ವಾಡಿಯ, ಡಿ. ಎನ್., *ಜಿಯಾಲಜಿ ಆಫ್ ಇಂಡಿಯಾ ಫಾರ್ ಸ್ಟೂಡೆಂಟ್ಸ್* (ಲಂಡನ್, ೧೯೧೯), ಪು. ೧೧೦

೧೩. *ಎ ಪ್ಯಾಸ್ಸೇಜ್ ಟು ಇಂಡಿಯ* (ನ್ಯೂಯಾರ್ಕ್, ೧೯೮೪, ಪ್ರ. ಮು.) ಪು. ೧೩೫-೩೬

೧೪. ೧೯೦೦ರ ಸುತ್ತಮುತ್ತಲಲ್ಲಿ 'ಲೆಮೂರಿಯ' ಪದವನ್ನು ಕೆಲವರು ಬಳಸಿದರು, ಆದರೆ ೧೯೦೩ ಮತ್ತು ಆನಂತರ ಕಾಲದಲ್ಲಿ 'ಇಲೆಮೂರಿಯ', 'ಕುಮರಿನಾಡು' ಮೊದಲಾದವು ಹೆಚ್ಚು ಬಳಕೆಗೆ

ಬಂದವು. 'ಕುಮರಿನಾಡ'ನ್ನು ಮೊದಲು ೧೯೦೩ರಲ್ಲಿ ವಿ. ಜಿ. ಸೂರ್ಯನಾರಾಯಣಶಾಸ್ತ್ರಿ (*ತಮಿಲ್‌ಮೊಳಿಯಿನ್ ವರಲಾಱು* (ತಮಿಳುಭಾಷಾ ಇತಿಹಾಸ), ಮದ್ರಾಸು, ೧೯೦೩, ಪು. ೮) ಮತ್ತು 'ಕುಮರಿಕುಮ್ರ' ಎಂಬ ಪದವನ್ನು ೧೯೨೬ರಲ್ಲಿ ಮೊದಲು ಬಳಸಿದವನು ಎಂ. ಎಸ್. ಪಿಳ್ಳೈ. ರಾಮಸ್ವಾಮಿ, *ಅದೇ*, ಪು. ೨೬೮, ಅ. ಟಿ. ೩೬; ಮದ್ರಾಸು ವಿ. ವಿ. ಒಂದು ಬಹಿರಂಗ ಸಭೆಯಲ್ಲಿ ಕೊಟ್ಟ ಈ ಉಪನ್ಯಾಸವನ್ನು ತಂಜಾವೂರಿನ ತಮಿಳ್ ವಿಶ್ವವಿದ್ಯಾಲಯ ಪರಿಷ್ಕರಿಸಿ ೧೯೮೫ರಲ್ಲಿ ಪ್ರಕಟಿಸಿದೆ - ನೋ. *ತಮಿಳ್ ಲಿಟರೇಚರ್* (ರಿವೈಜ್ಡ್ ಅಂಡ್ ಎನ್‌ಲಾರ್ಜ್ಡ್), ತಂಜಾವೂರು, ೧೯೮೫ ಪು. ಮು.

೧೫. *ಇಱೈಯನಾರ್ ಅಗಪ್ಪೊರುಳ್ ಅಥವಾ ಇಱೈಯನಾರ್ ಕಳವಿಯಲ್* (ಇಱೈಯನಾರ್ ಎಂದರೆ ಶಿವ) ಎಂಬ ವ್ಯಾಕರಣ ಸೂತ್ರಕ್ಕೆ ನಕ್ಕೀರರ್ ಕೊಟ್ಟ ವ್ಯಾಖ್ಯೆಯು ಮೌಖಿಕವಾಗಿ ಗುರುಶಿಷ್ಯ ಪರಂಪರೆಯಲ್ಲಿ ಮುಂದುವರಿಯಿತು. ಈ ಟೀಕೆಯನ್ನು ರಕ್ಷಿಸಿಕೊಂಡು ಬಂದ ಪಂಡಿತರಲ್ಲಿ ಮದುರೈಕ್ಕಣಕ್ಕಾಯನಾರ್ ಮಗನಾರ್, ಕೀರನ್ ಕೊಟ್ರನಾರ್, ತೇನೂರ್ *ಕೀಱಾರ್*, ಪಡಿಯನ್ ಕೊಱ್ರನಾರ್, ಶೆಲ್ವತ್ತಾ ಶಿರಿಯರ್‌ಪುರಂ ಶಿವನಾರ್, ಶಲ್ಲೂರ್ ಆಶಿರಿಯಾರ್, ಆಂದೈಪ್ಪೆರುಮ್ ಕುಮಾರನಾರ್ ಪ್ರಮುಖರು. ಕ್ರಿ.ಶ. ೭ನೆಯ ಶತಮಾನದ ಸುಮಾರಿಗೆ ಇಳನಾಗನಾರ್ ಇದನ್ನು ಮುಶಿರಿ *ಆಶಿರಿಯಾರ್* ನೀಲಕಂಠನಾರ್‌ಗೆ ಬೋಧಿಸಿದಾಗ ಅವನದನ್ನು ಲಿಖಿತರೂಪಕ್ಕಿಳಿಸಿದನು. ನೀಲಕಂಡನ್ ಟೀಕಾಗ್ರಂಥದಲ್ಲಿ ಮೂರು ಶಂಗಂಗಳ, ಕವಿ-ಕಾವ್ಯಗಳ, ಹನ್ನೆರಡು ವರ್ಷ ಬಿದ್ದ ಕ್ಷಾಮದ, ಪುನರ್‌ಸಂಘಟನೆಗೊಂಡಾಗ ಇದ್ದ ನಲ್ವತ್ತೊಂಬತ್ತು ಹಿರಿಯ ಕವಿಗಳ, *ಪೊರುಳ್* ಬಗೆಗಿನ ಜ್ಞಾನವನ್ನೆಲ್ಲ ಕಳೆದುಕೊಂಡ ವಿವರಗಳು ದೊರೆಯುವುವು. ಇದರಿಂದ ಖಿನ್ನನಾದ ಪಾಂಡ್ಯರಾಜ ಆ ಪಂಡಿತರು ಹೇಗಾದರೂ ಮಾಡಿ *ಪೊರುಳ್* ಜ್ಞಾನವನ್ನು ಪುನಃ ಪಡೆದುಕೊಳ್ಳಬೇಕೆಂದು ಆಗ್ರಹಿಸುವನು. ಕೊನೆಗೆ ಐದು ವರ್ಷದ ಮೂಕ ಬಾಲಕ ಉರುತ್ತಿರಶನ್ಮನ್ (ವಾಸ್ತವವಾಗಿ 'ಕುಮಾರ' ಅಥವಾ 'ಕಾರ್ತಿಕೇಯ') ಅನುಜ್ಞೆಯ ಮೇರೆಗೆ ನೀಲಕಂಠನ್ *ಪೊರುಳ್* ವ್ಯಾಖ್ಯೆಯು ಅಧಿಕೃತವಾದುದೆಂದು ಅಂಗೀಕೃತವಾಯಿತೆಂದು ಇಲ್ಲಿ ವಿವರಿಸಲಾಗಿದೆ. (ಸೂ. ೧, ೧೪-೨೦; ಸುಬ್ರಹ್ಮಣಿಯನ್, ಎನ್., *ಒರಿಜಿನಲ್ ಸೋರ್ಸ್ ಫಾರ್ ದಿ ಹಿಸ್ಟರಿ ಆಫ್ ತಮಿಳ್‌ನಾಡ್* (ಉದುಮಲ್‌ಪೇಟ್, ೧೯೯೪, ಪು. ೨೨೪-೨೯).

೧೬. *ಇಱೈಯನಾರ್, ಅಗಪ್ಪೊರುಳ್,* ಸೂ. ೧ಕ್ಕೆ ಬರೆದ, ನಕ್ಕೀರರ್ *ಶಿಲಪ್ಪದಿಗಾರುಗೆ* ಬರೆದ, ಅಡಿಯರ್ ಕುನಲ್ಲಾರ್ ಟೀಕೆಗಳಲ್ಲಿ ಈ ವಿವರ ದೊರೆಯುವುದು. *ದಿ ಲೈಟ್ ಆಫ್ ಟ್ರುತ್ ಆರ್ ಸಿದ್ಧಾಂತ ದೀಪಿಕಾ* ೧೯೧೦-೧೧, ಪು. ೧೧, ೮೮; ಆರಾವಮುದನ್, ಟಿ. ಜಿ. 'ದಿ ಓಲ್ಡೆಸ್ಟ್ ಅಕೌಂಟ್ ಆಫ್ ದಿ ತಮಿಳ್ ಅಕಡೆಮೀಸ್', *ಜರ್ನಲ್ ಆಫ್ ಓರಿಯಂಟಲ್ ರೀಸರ್ಚ್*-೪, ಪು. ೧೮೩-೨೦೧; ೨೯-೩೧೭; ಜ್ವಲೆಬಿಲ್, ಕೆ., 'ದಿ ಅರ್ಲಿಯಸ್ಟ್ ಅಕೌಂಟ್ ಆಫ್ ದಿ ತಮಿಳ್ ಅಕಡೆಮೀಸ್', *ಇಂಡೋ-ಇರಾನಿಯನ್ ಜರ್ನಲ್*- ೧೫-ii, ಪು. ೧೦೯-೩೫; ಷೂಲ್‌ಮನ್, ಡಿ., 'ದಿ ತಮಿಳ್ ಫ್ಲಡ್ ಮಿತ್ಸ್ ಅಂಡ್ ದಿ ಶಂಕಂ ಲೆಜೆಂಡ್', ದುಂಡೆಸ್, ಎ.(ಸಂ.), *ದಿ ಫ್ಲಡ್ ಮಿತ್-ತಮಿಳ್,* (ಕ್ಯಾಲಿಫೋರ್ನಿಯಾ ಯುನಿವರ್ಸಿಟಿ ಪ್ರೆಸ್, ೧೯೮೮). ಕೊನೆಯ ಲೇಖನ *ಜರ್ನಲ್ ಆಫ್ ತಮಿಳ್ ಸ್ಟಡೀಸ್* ೧೪(೧೯೭೮) ಪು. ೧೦-೩೧ ರಲ್ಲಿ ಮರುಪ್ರಕಟವಾಗಿದ್ದು ಅದನ್ನೇ ಈ ಲೇಖನದಲ್ಲಿ ನಾನು ಬಳಸಿಕೊಂಡಿರುವೆ. ಅಲ್ಲದೆ ಡೇವಿಡ್ ಷೂಲ್‌ಮನ್ ಜರೂಶಲಮ್‌ನಿಂದ ನನ್ನೊಡನೆ ಈಮೇಲ್ ಮೂಲಕ ಈ ಬಗ್ಗೆ ಚರ್ಚಿಸಿ, ನನ್ನ ತಿಳಿವಳಿಕೆಯನ್ನು ವಿಸ್ತರಿಸಿಕೊಳ್ಳಲು ಸಹಾಯ ಮಾಡಿದರು.

೧೭. *ಪುಱನಾನೂಱು* ೬:೧-೨; ೧೭-೧, ೬೭-೬೮; *ಅಗಪ್ಪೊರುಳ್* ಸೂ. ೧; *ಕಲಿತ್ತೊಗೈ* ೧೦೪:೧-೪. ಅಲ್ಲದೇ ನೋಡಿ, ಅ.ಟಿ. ೧೬

೧೮. *ಶಿಲಪ್ಪದಿಗಾರಂ* ೨-ಸಾ. ೧೭-೨೨; ೭-೧-೨; ೯-೧೮-೨೦

೧೯. ಈ ಬಗ್ಗೆ ಪುರಾಣಲಿಂಗಂ ಪಿಳ್ಳೈ, ಸೂರ್ಯನಾರಾಯಣಶಾಸ್ತ್ರಿ ಅಬ್ರಾಹಿಮ್ ಪಂಡಿತರ್, ಐಯರ್ ಆರಿತಮ್, ದೇವಿನೇಯನ್, ರಾಘವ ಐಯ್ಯಂಗಾರ್ ಮುಂತಾದವರ ಚರ್ಚೆಗೆ, ನೋ. ರಾಮಸ್ವಾಮಿ, ಅದೇ., ಪು. ೧೩೨-೧೩೪

೨೦. ಅನ್ನಪೂರ್ಣ, ಕೆ., 'ತಮಿೞ್‌ನಾಡುಮ್ ಪಣ್‌ಡೈತ್ ತಮಿೞರ್ಗಳುಂ' (ತಮಿಳುನಾಡು ಮತ್ತು ಪುರಾತನ ತಮಿಳರು), *ಅಣ್ಣಂತಪೋಧಿನಿ*, XXI, ೪, ಪು. ೨೫೭-೬೨

೨೧. *ಪುಱನಾನೂಱು* ೧೫೦, ೩೨೩, ೧೨೨, ೧೨೮, ೧೬೦, ೮೦, ೬೧ ಸಕ್ರಮವಾಗಿ.

೨೨. ಎರುಮೈನಾಡಿಗೆ ಬರುವ ಸಾಹಿತ್ಯಿಕ ಉಲ್ಲೇಖಗಳಲ್ಲಿ ಕೆಲವನ್ನು ಈಗಾಗಲೇ ಗಮನಿಸಲಾಗಿದ್ದರೂ ಶಾಸನ ಪ್ರಸ್ತಾಪದ ಸಮಗ್ರ ಚರ್ಚೆ ನನ್ನ ಗಮನಕ್ಕೆ ಬಂದಿಲ್ಲ. ಬಹುಶಃ ಆಕಡೆ ನಮ್ಮ ಗಮನವಿನ್ನೂ ಹರಿದಿಲ್ಲವೆಂದು ನನಗನಿಸುವುದು. ಎರುಮೈನಾಡಿನ ಚರ್ಚೆಯನ್ನು ಮುಂದೆ ನಾನು ಕೈಗೊಳ್ಳುವೆನಾದರೂ ಕನ್ನಡಕ್ಕೆ ಸಂಬಂಧಿಸಿದ ಕೆಲವು ಪ್ರಮುಖ ವಿಷಯಗಳನ್ನು ಇಲ್ಲಿ ಸಂಗ್ರಹಿಸಿ ಹೇಳುವುದು ಪ್ರಸ್ತುತವೆನಿಸುವುದು.

೧೯೧೪ರಲ್ಲಿ ಮೊದಲು ವರದಿಯಾದ ಈ ಶಾಸನದ ಬಗ್ಗೆ ಹತ್ತಾರು ನಿಯತಕಾಲಿಕೆಗಳಲ್ಲಿ ಚರ್ಚೆಯಾಯಿತು, ಆದರೆ ಕನ್ನಡ ನಾಡಿಗೆ ನೇರ ಪ್ರಸ್ತುತವಾದ ಅಂಶಗಳನ್ನು ಕನ್ನಡಿಗರಾಗಲೀ ತಮಿಳರಾಗಲೀ ಚರ್ಚಿಸಿಲ್ಲವೆಂಬ ಭಾವನೆ ನನ್ನದಾಗಿದೆ. ಈ ಶಾಸನದ ಸಂಪೂರ್ಣ ಪಾಠ ಮತ್ತು ಚರ್ಚೆಗೆ ಇತ್ತೀಚೆಗೆ ಪ್ರಕಟಗೊಂಡಿರುವ ಇರಾವತಿ ಮಹದೇವನ್ ಅವರ *ಅರ್ಲಿ ತಮಿಳ್ ಎಪಿಗ್ರಫಿ (ಫ್ರಮ್ ದಿ ಅರ್ಲಿಯಸ್ಟ್ ಟೈಮ್ಸ್ ಟು ದಿ ಸಿಕ್ಸ್ತ್ ಸೆಂಚುರಿ ಎ.ಡಿ.* (ಚೆನ್ನೈ-ಹಾರ್ವರ್ಡ್ ಯುನಿವರ್ಸಿಟಿ, ಯು.ಎಸ್.ಎ., ೨೦೦೩), ಪು. ೩೮೪-೩೮೬, ಪು. ೧೫೨ ಮತ್ತು ಪು. ೫೭೭-೫೮೦ನ್ನು ನೋಡಿ. ಈ ಶಾಸನದಲ್ಲಿ ಬರುವ ಎರುಮಿ (ತ. ಎರುಮೈ), ನಾಟು>ನಾಡು (ತ. ನಾಟ್ಟು), ಮೊಸಿಲ್ (ಹೊಸಲು >ಹೊಸ್ತಿಲು), (ಮೊಷ್=ಪ್ರವೇಶ; ಪೋಷ್-ಆಟ್ : ದ್ವಾರಬಾಗಿಲು; ತ. ವಾಸಲ್, ವಾಯಿಲ್), ಇಳೆಯಾರ್ (ತುಳು ಯೋಧ), ಅತಿಟ್-ಅಣಂ > ಅತಿಟಾಣಂ/ತ) ಅಧಿಟ್ಠಾಣ (ಪಾಲೀ)=ಅಧಿಷ್ಠಾನ(ಸಂ.) ಎಂಬ ಅತ್ಯಂತ ಪುರಾತನ ಕಾಲದ ಕನ್ನಡ ಪದಗಳನ್ನು ಗುರುತಿಸಬಹುದು. ಇಲ್ಲಿ ಬರುವ 'ಇಳೆಯಾರ್'ನ ಪ್ರಸ್ತಾಪ *ಅಹನಾನೂಱಿನಲ್ಲಿ* (೮೩:೯-೧೦) ಬಂದಿದ್ದು ಅಲ್ಲಿ ಅವನನ್ನು 'ಅನಕ್ಷರಸ್ಥ' ಎಂದು ಗುರುತಿಸಲಾಗಿದೆ. ಇದು ತಮಿಳು ಭಾಷೆ ತಿಳಿಯದ ತುಳುಗನ್ನಡಿಗನನ್ನು ನಿರ್ದೇಶಿಸುವುದು ಎಂಬುದು ನನ್ನ ಅನಿಸಿಕೆ. ಇದು ಏನೇ ಇರಲಿ, ಈ ಶಾಸನದಲ್ಲಿ ಬರುವ ಪದಗಳು 'ಅತಿಪೂರ್ವದ ಕನ್ನಡವು ಅತಿಪೂರ್ವದ ತಮಿಳಿನ ಮೇಲೆ ಆರಂಭಕಾಲದಲ್ಲಿ ಬೀರಿದ ಪ್ರಭಾವವನ್ನು ಸಾಬೀತುಪಡಿಸುವುದು' ಎಂಬ ಮಹಾದೇವನ್ ಅವರ ಮಾತು (ಅದೇ., ಪು. ೫೮೦) ತುಂಬಾ ಗಮನಾರ್ಹವಾದುದು.

೨೩. ಸ್ವಾಮಿನಾಥ ಐಯರ್, *ಇಳಂಗೋವಡಿಗಳ್ ಅರುಳಿಚೆಯ್ದ ಶಿಲಪ್ಪದಿಗಾರ ಮೂಲಮುಂ ಅರುಂಪದ ಉರೈಯುಂ - ಅಡಿಯಾರ್ಕುನಲ್ಲಾರ್ ಉರೈಯುಂ* (ಇಳಂಗೋ ಅಡಿಗಳ *ಶಿಲಪ್ಪದಿಗಾರಂ* ಮತ್ತು

ಅದಿಯಾರ್‌ಕ್ಕುನಲ್ಲರ್ ಟೀಕೆ), ಮದ್ರಾಸು, ೧೯೫೦, ಪು. ೨೨೮; ಪೂರ್ಣಲಿಂಗ ಪಿಳ್ಳೈ, *ಪಟಿಂತಮಿಲ್* (ಪುರಾತನ ತಮಿಳು) ಪೆರುಚಿರಪುರಂ, ೧೯೪೫, ಪು. ೩; ಅಬ್ರಹಮ್ ಪಂಡಿತರ್, *ಕರುಣಾಮೃತಸಾಗರಂ*, ದೆಹಲಿ, ೧೯೮೪, ಪು.ಮು., ಪು. ೯೦. ಅಲ್ಲದೆ ನೋ. ರಾಮಸ್ವಾಮಿ, ಅದೇ. ಪು. ೧೬೯-೧೭೧, ೨೦೫

೨೪. ಚಿದಂಬರನಾರ್, ಟಿ., *ತಮಿಲ್ ಶಂಗಂಗಳಿನ್ ವರಲಾಟ್ರು* (ತಮಿಳ ಶಂಗಂಗಳ ಇತಿಹಾಸ) ಮದ್ರಾಸು, ೧೯೪೮, ಪು. ೧೫೦; ಕಂದಯ್ಯ ಪಿಳ್ಳೈ, ಎನ್. ಎಸ್., *ತಮಿಳಗಂ* (ತಮಿಳರ ತವರುಮನೆ), ಮದ್ರಾಸು, ೧೯೩೪, ಪು. ೨, ನೋ. ರಾಮಸ್ವಾಮಿ, ಅದೇ., ಪು. ೧೭೦-೧೭೧

೨೫. ಮಾಮಲ್ಲಪುರಂನಲ್ಲಿ ದೊರೆತ ಅವಶೇಷಗಳಲ್ಲದೆ ಕಡಲತೀರದ ದೇವಾಲಯ (ಷೋರ್ ಟೆಂಪಲ್) ಬಳಿ ಮರಳಿನಲ್ಲಿ ಮುಳುಗಿದ್ದ ಪಲ್ಲವ ಕಾಲದ ಶಿವದೇವಾಲಯವನ್ನು ಶೋಧಿಸಿ ಉತ್ಖನನ ಮಾಡಲಾಗಿದೆ. ಇದರ ಪ್ರಥಮ ವರದಿಗೆ ನೋ. ೨೯-೪-೨೦೦೫ರ *ಹಿಂದೂ* ದಿನಪತ್ರಿಕೆ (ಬೆಂಗಳೂರು) ಮತ್ತು *ಫ್ರಂಟ್‌ಲೈನ್* (ಅರ್ಧಮಾಸಿಕ), ಚೆನ್ನೈ, ೨೫ ಮಾರ್ಚ್ ೨೦೦೫, ಪು. ೧೨೯-೩೪

೨೬. ವೆಂಕಟಸುಬ್ರಹ್ಮಣಿಯನ್, ಟಿ. ಕೆ., *ಎನ್ವಿರೋನ್‌ಮೆಂಟ್ ಅಂಡ್ ಅರ್ಬನೈಜೇಷನ್ ಇನ್ ಅರ್ಲೀ ತಮಿಳಗಂ* (ತಂಜಾವೂರ್, ೧೯೮೮), ಪು. ೫೦-೫೬

೨೭. ರಾಮಸ್ವಾಮಿ, ಎಸ್., 'ಹಿಸ್ಟರಿ ಅಟ್ ಲ್ಯಾಂಡ್ಸ್ ಎಂಡ್: ಲೆಮೂರಿಯಾ ಇನ್ ತಮಿಲ್ ಸ್ಪೇಶಿಯಲ್ ಫ್ಯಾಬಲ್ಸ್', *ಜರ್ನಲ್ ಆಫ್ ಏಷಿಯಾಟಿಕ್ ಸ್ಟಡೀಸ್*, ೫೯, ೩, ಪು. ೫೭೫-೬೦೨

೨೮. *ಅಗಪ್ಪೊರುಳ್*, ಸೂ.-೧; *ಕಲಿತ್ತೊಗೈ* ೧೦೪:೧-೪; *ಪುಱನಾನೂಱು* ೬:೧-೨; ೧೭:೧; ೬೭-೬೮. ಇವು ಸಕ್ರಮವಾಗಿ ೧೮೮೩, ೧೮೮೭, ೧೮೯೪ರಲ್ಲಿ ಮತ್ತು *ಶಿಲಪ್ಪದಿಗಾರಂ* ೧೮೯೨ರಲ್ಲಿ ಬೆಳಕಿಗೆ ಬಂದವು.

೨೯. ರಾಮಸ್ವಾಮಿ, ಅದೇ., ೬- ಪು. ೧೮೨-೨೨೨

೩೦. ಅದೇ., ಪು. ೨೦೬-೨೦೭

೩೧. ಅದೇ., ಪು. ೨೧೦-೨೧೨

೩೨. ಅದೇ., ಪು. ೨೧೩

೩೩. *ಭಾಗವತಪುರಾಣ* (ಬಾಂಬೆ, ೧೯೦೫), ೮, ೨೪, ೧೩; *ಮತ್ಸ್ಯಪುರಾಣ* (ಆನಂದಾಶ್ರಮ ಸಾನ್ಸ್‌ಕ್ರಿಟ್ ಸೀರೀಸ್-೫೪, (ಪೂನಾ, ೧೯೦೯), ೧೦. ೧೧-೧೨

೩೪. *ಕಲಿತ್ತೊಗೈ* ೧೦೪, ೧-೪; *ಶಿಲಪ್ಪದಿಗಾರಂ* ೧೧. ೧೭-೨೨

೩೫. *ಶಿಲಪ್ಪದಿಗಾರಂ* ೨೧. ೬-೧೦

೩೬. ದೀಕ್ಷಿತ್, ವಿ. ಆರ್. ಆರ್., ಅದೇ., ಪು. ೨೫೧, ಅ.ಟಿ. ೪

೩೭. *ಮಣಿಮೇಗಲೈ* ೨೪. ೨೭-೭೪; ೨೫. ೧೭೮-೨೦೦

೩೮. ವೆಂಡಿ ಡೊನಿಗರ್ ಓ ಫ್ಲಹರ್ಟಿ, *ಹಿಂದೂ ಮಿತ್ಸ್* (ಹರ್ಮಂಡ್ಸ್‌ವರ್ತ್, ೧೯೭೫), ಪು. ೨೭೦-೭೧

೩೯. ಪೆರುಂ. ೧೨; ಪರಂ. ೧೮. ೧-೯; ೧೯. ೧-೨೬. ಅಲ್ಲದೆ ನೋ. ಪೆರುಂ. ೮, ೨೦, ೩೦, ೪೦, ೪೪, ೪೭, ೬೧, ೬೪; ಪರಂ ೯. ೧೪-೧೬, ೩೧, ೪೯, ೫೬, ೬೧ ಮುಂ.

೪೦. *ಪೆರಿಯಪುರಾಣ* (ಮದ್ರಾಸು, ೧೯೧೬), ೪.೫. ೬೨-೭೦; *ಕಾಂಜೀಪುರಾಣಂ* ೬೩. ೩೬೪-೪೦೧

೪೧. ಅರುಣಾಚಲಕ್ಕ ಪಿರಾಯರ್, *ಶೀಕಾಳಿತ್ತಳ ಪುರಾಣಂ*, (ಮದ್ರಾಸು, ೧೮೮೭), ೨. ೧೫-೪೧

೪೨. *ಪರಂಜ್ಯೋತಿ* ೨೧. ೧-೯

೪೩. *ಅದೇ.*

೪೪. *ಕಾಮಾಕ್ಷಿ ವಿಲಾಸ* (ಬೆಂಗಳೂರು, ೧೯೯೮), ೮. ೫೫-೭೦

೪೫. ಬಾರ್ನೆಲ್ ಹಸ್ತಪ್ರತಿ (ಐಓಎಲ್, ಲಂಡನ್), ೧೦ ಬಿ. ೪೬೮. ೬

೪೬. ಆರವಮುದನ್, ಟಿ. ಜಿ., 'ದಿ ಮತುರೈ ಕ್ರಾನಿಕಲ್ಸ್ ಅಂಡ್ ದಿ ತಮಿಳ್ ಅಕಾಡಮೀಸ್', *ಜರ್ನಲ್ ಆಫ್ ದಿ ಓರಿಯಂಟಲ್ ರೀಸರ್ಚ್*, (ಮದ್ರಾಸು, ೧೯೩೨), ಪು. ೨೯೧-೨೯೨; ನೀಲಕಂಠಶಾಸ್ತ್ರಿ ಕೆ. ಎ., *ಹಿಸ್ಟರಿ ಆಫ್ ಸೌತ್ ಇಂಡಿಯಾ* (ಮೂರನೆಯ ಪು. ಮು. ಮುಂಬೈ, ೧೯೯೯), ಪು. ೭೧-೭೪; ಸಾಲೆತೊರೆ, ಬಿ. ಎ., *ಏನ್ಷಿಯಂಟ್ ಕರ್ನಾಟಕ೧: ಹಿಸ್ಟರಿ ಆಫ್ ತುಳುವ* (ಪೂನಾ, ೧೯೩೬), ಪು. ೯-೩೮.

ಅನೇಕ ಲಿಪಿರಹಿತ ಭಾಷೆಗಳಿಗೆ ಅಪಾರ ಪುರಾತನತ್ವವಿರುವುದನ್ನು ನಾವು ಇತಿಹಾಸದಲ್ಲಿ ಕಾಣುವೆವು. ಲಿಪಿಯ ಸವಲತ್ತಿಲ್ಲದೆ ಭಾಷೆಗಳನ್ನು ಅತ್ಯಂತ ಎತ್ತರಕ್ಕೆ ಏರಿಸಿದ ನಿದರ್ಶನಗಳಿಗೂ ಕೊರತೆ ಇಲ್ಲ. ಮೌಖಿಕ ಮಾಧ್ಯಮದಿಂದಲೇ ಇಂತಹ ಮಟ್ಟವನ್ನು ಮುಟ್ಟಿದ ಭಾಷೆಗಳಲ್ಲಿ ಎರಡು ನಿದರ್ಶನಗಳನ್ನು ಕೊಡಬಹುದಾದರೆ, ಅವು ಸಹಜವಾಗಿ ವೈದಿಕ ಸಂಸ್ಕೃತ ಮತ್ತು ಶಂಗಂ ತಮಿಳಿಗೆ ಸಲ್ಲುವುವು, ಆದರೆ ಈ ಎರಡು ಭಾಷೆಗಳೂ ಲಿಪಿಗಳಿಸಿಕೊಳ್ಳುವುದಕ್ಕೆ ಬಹುಕಾಲ ಮುಂಚೆಯೇ, ಪ್ರಾಕೃತ ಭಾಷೆಯು ಬ್ರಾಹ್ಮೀ ಲಿಪಿಯನ್ನು ಗಳಿಸಿಕೊಂಡದ್ದು ಮತ್ತು ಗೌತಮಬುದ್ಧ ಮತ್ತು ವರ್ಧಮಾನ ಮಹಾವೀರರಂತಹ ಚಿಂತಕರ ಲೇಖನಾ-ಬೋಧನಾ ಮಾಧ್ಯಮವೂ ಮೌರ್ಯ ಸಾಮ್ರಾಜ್ಯದ ವ್ಯವಹಾರ ಮಾಧ್ಯಮವೂ ಆದದ್ದು ಗಮನಾರ್ಹ. ಪೂರ್ವೋತ್ತರ ಭಾರತದಿಂದ ಚಲಿಸಿ ಬಂದ ಈ ಅಪರೂಪ ಮಾಧ್ಯಮಗಳನ್ನು ಒಪ್ಪಿ ಒಗ್ಗೂಡಿಸಿಕೊಂಡ ದಖ್ಖಿಣದ ಜನಾಂಗಗಳು ಸಹಜವಾಗಿ ಅಂದಿನ ಅಕ್ಷರಸ್ಥ ಸಮಾಜದಲ್ಲಿ ಸೇರಿಕೊಂಡವು; ಇವನ್ನು ನಿರ್ಲಕ್ಷಿಸಿದ ಇಲ್ಲವೇ ಪ್ರತಿರೋಧಿಸಿದವುಗಳು ಅಷ್ಟೇ ಸಹಜವಾಗಿ ಲಿಪಿರಹಿತ ಜನಾಂಗಗಳಾಗಿ ಉಳಿದುಕೊಂಡರು. ಆರಂಭ ಕಾಲದ ದಕ್ಷಿಣಭಾರತದ ಇತಿಹಾಸದಲ್ಲಿ ಈ ಮಾಧ್ಯಮಗಳಿಂದ ವಂಚಿತರಾದವರಲ್ಲಿ ಎದ್ದು ಕಾಣುವವರು ತಮಿಳರು. ಒಂದು ಅಖಂಡ ಭೂಭಾಗದ ಅಂಗವಾಗಿಯೂ ಈ ಕಾರಣದಿಂದಾಗಿ ತಮಿಳಗಂ ಆಗ್ನೇಯ ಏಷಿಯಾದಲ್ಲಿ ಲಿಪಿಶೂನ್ಯ ದ್ವೀಪವಾಗಿ ಉಳಿಯಿತು; ಭೌಗೋಳಿಕವಾಗಿ ಒಂದು ಪ್ರತ್ಯೇಕ ದ್ವೀಪವಾಗಿದ್ದರೂ ಲಿಪಿಸಂಬಂಧ ಬೆಳೆಸಿಕೊಂಡ ಕಾರಣ ಅಂದಿನ ಸಿಂಹಳವು (ಶ್ರೀಲಂಕಾ) ಬೃಹತ್ ಭರತಖಂಡದ ಅಕ್ಷರಸ್ಥ ಸಮಾಜದೊಡನೆ ಬೆಸೆದುಕೊಂಡಿತು... ಒಂದು ಪ್ರಬುದ್ಧ ಮತ್ತು ಸಾಹಿತ್ಯಿಕ ಭಾಷೆಯಾಗಿ ಕ್ರಿಸ್ತಪೂರ್ವ ಶತಕಗಳಲ್ಲಿ ತಮಿಳು ಹೊರಹೊಮ್ಮಿರಲು ಸಾಧ್ಯ, ಆದರೆ ಎಷ್ಟು ಶತಮಾನಗಳ ಕಾಲ ಅದು ಮೌಖಿಕವಾಗಿ ಮುಂದುವರಿದಿತ್ತೆಂಬುದನ್ನು ನಿರ್ಧರಿಸಲು ತೊಡಕುಗಳಿವೆ.

# ೪

ಅಂಗವೈಕಲ್ಯ – [illegible]

↓

[illegible]

↓

[illegible]

# ದಕ್ಷಿಣ ಭಾರತ ಬೆಸೆದ ಬ್ರಾಹ್ಮೀ ಲಿಪಿ

ಕ್ರಿ.ಪೂ. ಸು. ೩ನೆಯ ಶತಮಾನದಿಂದ ಕ್ರಿ.ಶ. ಸು. ೩ನೆಯ ಶತಮಾನ ಕಾಲಾವಧಿಯಲ್ಲಿ ಶ್ರೀಲಂಕಾವನ್ನು ಒಳಗೊಂಡು ದಕ್ಷಿಣ ಭಾರತವನ್ನು ಬೆಸೆದ ಏಕೈಕ ಮಾಧ್ಯಮ ಎಂದರೆ ಬ್ರಾಹ್ಮೀ ಲಿಪಿ. ಇದಕ್ಕೆ ಪ್ರಧಾನ ಕಾರಣಪುರುಷ, ಮೌರ್ಯಸಾಮ್ರಾಟ ಅಶೋಕ.

ಮೌರ್ಯರ ಆಳ್ವಿಕೆಗಿಂತ ಮುಂಚೆ ಭರತಖಂಡವು ಲಿಪಿಶೂನ್ಯವಾಗಿತ್ತೆಂಬುದು ಈಗಿನ ಸ್ಥೂಲ ಅಭಿಪ್ರಾಯ.[೧] ಅಂದಿನ ವಾಯುವ್ಯ ಭಾರತದಲ್ಲಿ ಮಾತ್ರ ಅರಾಮ್ಯೆಕ್ ಮತ್ತು ಗ್ರೀಕ್ ಲಿಪಿ ಮತ್ತು ಭಾಷೆಗಳು ಬಳಕೆಯಲ್ಲಿದ್ದವು: ಇವುಗಳಲ್ಲಿ ಮೊದಲನೆಯದನ್ನು ಅನುಕರಿಸಿ ಅಶೋಕನ ಕಾಲದಲ್ಲಿ ಖರೋಷ್ಠೀ ರೂಪಗೊಂಡಿತೆಂದು, ಇದರಿಂದ ಸ್ಫೂರ್ತಿ ಪಡೆದುಕೊಂಡು ಅಥವಾ ಮತ್ತಿನ್ನಾವ ಸ್ವತಂತ್ರ ಕಾರಣದಿಂದ ಬ್ರಾಹ್ಮೀ ಜನಿಸಿತೆಂದು ವಾದಿಸಲಾಗಿದೆ. ಬ್ರಾಹ್ಮೀಯನ್ನು ಸಮರ್ಥವಾಗಿ ಬಳಸಿದ ಪ್ರಪ್ರಥಮರಲ್ಲಿ ಆದಿನಾಥ ಮತ್ತು ಗೌತಮಬುದ್ಧನನ್ನು ಜೈನ ಮತ್ತು ಬೌದ್ಧ ಐತಿಹ್ಯಗಳು ಕಂಡುಕೊಂಡಿರುವುವು. ಇದುವರೆಗೂ ದೊರೆತ ಈ ಲಿಪಿಯ ಅತ್ಯಂತ ಪುರಾತನ ಕುರುಹು ಇರುವುದು ಶ್ರೀಲಂಕಾದಲ್ಲಿ, ಇದರ ಕಾಲ ಸುಮಾರು ಕ್ರಿ.ಪೂ. ೫-೪ನೆಯ ಶತಮಾನ.[೨] 'ಬ್ರಾಹ್ಮೀ' ಪದದ ಬಳಕೆ ಮೊದಲು ಬರುವುದು ಕ್ರಿ.ಶ. ೩ನೆಯ ಶತಮಾನದ್ದೆನ್ನಲಾದ ಬೌದ್ಧ ಗ್ರಂಥ 'ಲಲಿತ ವಿಸ್ತರ' ದಲ್ಲಿ. ಬೋಧಿಸತ್ವ ಸಿದ್ಧಾರ್ಥ ಗೌತಮನು ಕಲಿತ ಲಿಪಿಗಳಲ್ಲಿ ಬ್ರಾಹ್ಮೀ ಮೊದಲಿನದಾಗಿತ್ತೆಂದು ಅಲ್ಲಿ ಹೇಳಲಾಗಿದೆ.[೩]

ಬ್ರಾಹ್ಮೀ ಒಂದು ಲಿಪಿ ಮಾತ್ರ, ಭಾಷೆಯಲ್ಲ. ಇದು ಹುಟ್ಟಿದ್ದೇ ಪ್ರಾಕೃತ ಭಾಷೆಯ ವಾಹನವಾಗಲು. ಈ ಎರಡು ಮಾಧ್ಯಮಗಳು ಭಾರತದಲ್ಲಿ ತಮ್ಮ ಸಾರ್ವಭೌಮತ್ವವನ್ನು ಸುಮಾರು ೬೦೦ ವರ್ಷ(ಕ್ರಿ.ಪೂ. ೩ರಿಂದ ಕ್ರಿ.ಶ. ೩ ಶತಕಗಳವರೆಗೆ)ಕಾಲ ಮೆರೆದವು. ಅಶೋಕಪೂರ್ವ ಕಾಲದಲ್ಲಿ ಸೀಮಿತ ಕ್ಷೇತ್ರದಲ್ಲಿ, ಅಪರೂಪವಾಗಿ ಮಾತ್ರ, ಬಳಕೆಯಾಗಿರಬಹುದಾಗಿದ್ದ ಬ್ರಾಹ್ಮೀ ಲಿಪಿ ಅವನ ಆಳ್ವಿಕೆಯ ಎರಡು ದಶಕಗಳಲ್ಲಿ (ಕ್ರಿ.ಪೂ. ೨೬೯-೨೯೩) ಆಗ್ನೇಯ-ಏಷಿಯಾದ ಬಹುಭಾಗವನ್ನು ಬೆಸೆಯುವ ಮಾಧ್ಯಮವಾಯಿತು. ತನ್ನ ಧರ್ಮಪ್ರಸಾರ ಮತ್ತು ನೀತಿ ಬೋಧನೆಗೆ ಅಶೋಕ ಇದನ್ನು ಶಾಸನಗಳಲ್ಲಿ ಬಳಸಿದ್ದು ಇದಕ್ಕೆ ಕಾರಣವಾಯಿತೆನ್ನಬಹುದು.

ಪೇಶಾವರ ಬಳಿಯ ಬುನೇರ್‌ನಿಂದ ದಖ್ಖಣ(ಕರ್ನಾಟಕ)ದ ಬ್ರಹ್ಮಗಿರಿಯವರೆಗಿನ ವಿಶಾಲ ಪ್ರದೇಶದಲ್ಲಿ ಕೊರೆಸಿದ ಶಾಸನಗಳಲ್ಲಿ ಪ್ರಾಕೃತಭಾಷೆಯನ್ನೂ ಬ್ರಾಹ್ಮೀಲಿಪಿಯನ್ನೂ

ಅಶೋಕ ಬಳಸಿದನಲ್ಲದೆ, ಸರಿಸುಮಾರು ಇದೇ ಕಾಲಾವಧಿಯಲ್ಲಿ ಸಿಂಹಳದಲ್ಲಿ ಇವು ಪ್ರಸಾರಕ್ಕೆ ಬರಲು ಪರೋಕ್ಷವಾಗಿ ಕಾರಣನಾದನು. ಇವನ ಶಾಸನಗಳಿಂದ ವಂಚಿತವಾದ ಪ್ರದೇಶದಲ್ಲಿ ಸಿಂಧೂಕೊಳ್ಳ (ತಕ್ಷಶಿಲೆಯಿಂದ ಗಿರಿನಾರ್ ಪ್ರದೇಶ) ಮತ್ತು ನರ್ಮದಾ-ಕೃಷ್ಣಾ ವಲಯ(ಪುಂಗರಿಯದಿಂದ ಸಣ್ಣತಿ)ಗಳು ಎದ್ದು ಕಾಣುತ್ತಿದ್ದರೂ ಇವು ಅಶೋಕನ ಆಳ್ವಿಕೆಯಿಂದ ಮತ್ತು ಪ್ರಾಕೃತ ಭಾಷೆಯಿಂದ ಸಂಪೂರ್ಣ ಮುಕ್ತವಾಗಿದ್ದವೆಂದು ಭಾವಿಸಲಾಗದು. ಆದರೆ ಬ್ರಹ್ಮಗಿರಿಯಿಂದ ಕನ್ಯಾಕುಮಾರಿವರೆಗಿನ ದಕ್ಷಿಣ ಭೂಭಾಗವು ಅವನ ಆಳ್ವಿಕೆಯಿಂದಲೂ ವ್ಯಾವಹಾರಿಕ ವಲಯದಿಂದಲೂ ಸಂಪೂರ್ಣವಾಗಿ ಮುಕ್ತವಾಗಿತ್ತೆನ್ನಲು ಅನುಮಾನಪಡಬೇಕಿಲ್ಲ.

**ಅಕ್ಷರಸ್ಥ ಸಮಾಜ ನಿರ್ಮಾಣ:**

ಮೌರ್ಯಸಾಮ್ರಾಜ್ಯದ ಹೊರವಲಯದ ಜನಾಂಗಗಳಲ್ಲಿ ಅಶೋಕನ ಭಾಷಾ ನೀತಿಯಿಂದ ಅತಿ ಹೆಚ್ಚು ಲಾಭ ಪಡೆದುಕೊಂಡವರು ಇಂದಿನ ಉತ್ತರ ಮತ್ತು ಮಧ್ಯ ಕರ್ನಾಟಕ ಮತ್ತು ಇದಕ್ಕೆ ಹೊಂದಿಕೊಂಡಿರುವ ಆಂಧ್ರಪ್ರದೇಶದ ಜನಾಂಗಗಳು. ಯಾರನ್ನು ತಮಿಳಿನ ಶಂಗಂ ಸಾಹಿತ್ಯದಲ್ಲಿ 'ವಡುಗರು' ಎಂದು ಹೆಸರಿಸಲಾಗಿದೆಯೋ ಅವರೇ ಇವರು. ಅಶೋಕನ ಸುಮಾರು ಮೂರು ಡಜನ್ ಬ್ರಾಹ್ಮೀ ಶಾಸನಗಳನ್ನು ಬಳಸಿದ ಶಿಲೆಯ ಆಧಾರದ ಮೇಲೆ ವಿಂಗಡಿಸಿದರೆ, ಅವು ಕಿಬ್ಬಂಡೆ, ಹೆಬ್ಬಂಡೆ, ಗುಹಾ, ಫಲಕ ಮತ್ತು ಸ್ತಂಭ ಎಂಬ ಐದು ವರ್ಗಗಳಡಿ ಬರುವುವು. ಕಿಬ್ಬಂಡೆ ಶಾಸನಗಳನ್ನು ಇವನು ಮೊಟ್ಟಮೊದಲು ಕೊರೆಸಿದನೆಂಬುದಕ್ಕೆ ಸರ್ವಮಾನ್ಯತೆ ದೊರಕಿರುವುದರಿಂದ, ಈ ಶಾಸನಗಳ ಮೂಲಕವೇ ಬ್ರಾಹ್ಮೀ ಲಿಪಿಯನ್ನೂ ಪ್ರಾಕೃತ ಭಾಷೆಯನ್ನೂ ಅವನು ದೇಶದ ವಿವಿಧ ಕೇಂದ್ರಗಳಿಗೆ ಮೊದಲು ತಲುಪಿಸಿದನೆನ್ನಬಹುದು. ಇವನ ಒಟ್ಟು ೧೮ ಕಿಬ್ಬಂಡೆ ಶಾಸನಗಳು ಇಲ್ಲಿಯವರೆಗೂ ಲಭ್ಯವಾಗಿದ್ದು ಅವುಗಳಲ್ಲಿ ೯ (ಅಂದರೆ ೫೦%) ಕರ್ನಾಟಕದಲ್ಲಿ ಮತ್ತು ಇನ್ನೆರಡು ಆಂಧ್ರ ಪ್ರದೇಶದ ಗಡಿಜಿಲ್ಲೆಗಳಲ್ಲಿ ದೊರಕಿವೆ. ಇಂದಿನ ಭಾಷಾ ಮತ್ತು ರಾಜಕೀಯ ಗಡಿರೇಖೆಗಳನ್ನು ಅಳಿಸಿ ನೋಡಿದರೆ, ಈ ಹನ್ನೊಂದು ಶಾಸನಗಳು ಒಂದು ನಿರ್ದಿಷ್ಟ ಪ್ರದೇಶವನ್ನು ಹಂಚಿಕೊಂಡು, ಕೈಕ್ಕೈ ಜೋಡಿಸಿ ನಿಂತಂತೆ ಕಾಣುವುವು. ಅಂದರೆ, ಚಾರಿತ್ರಿಕಯುಗದ ಆರಂಭಕಾಲದಲ್ಲಿ ಲಿಪಿ-ಭಾಷಾ ಮಾಧ್ಯಮಗಳನ್ನು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಪಡೆದುಕೊಂಡ ಹಿರಿಮೆ ಇಂದಿನ ಕರ್ನಾಟಕದ್ದಾಗಿತ್ತೆಂದು ಅರ್ಥ. ಇಂತಹ ಸೀಮಿತ ಪ್ರದೇಶದಲ್ಲಿ ಇಷ್ಟೊಂದು ದೊಡ್ಡಸಂಖ್ಯೆಯಲ್ಲಿ ಈ ಶಾಸನಗಳನ್ನು ಕೊರೆಸಲು ಅಶೋಕನಿಗೆ ಪ್ರಬಲವಾದ ಕಾರಣಗಳಿರಬೇಕೆನಿಸುವುದು, ಆದರೆ ಅದು ಧರ್ಮಪ್ರಸಾರವಂತೂ ಆಗಿರಲಿಲ್ಲ, ಏಕೆಂದರೆ ಕಿಬ್ಬಂಡೆ ಶಾಸನಗಳ ಮೂಲೋದ್ದೇಶ ಧರ್ಮಪ್ರಸಾರವಾಗಿರಲಿಲ್ಲ.

ಅನೇಕ ಲಿಪಿರಹಿತ ಭಾಷೆಗಳಿಗೆ ಅಪಾರ ಪುರಾತನತ್ವವಿರುವುದನ್ನು ನಾವು ಇತಿಹಾಸದಲ್ಲಿ ಕಾಣುವೆವು. ಲಿಪಿಯ ಸವಲತ್ತಿಲ್ಲದೆ ಭಾಷೆಗಳನ್ನು ಅತ್ಯಂತ ಎತ್ತರಕ್ಕೆ ಏರಿಸಿದ ನಿದರ್ಶನಗಳಿಗೂ ಕೊರತೆ ಇಲ್ಲ. ಮೌಖಿಕ ಮಾಧ್ಯಮದಿಂದಲೇ ಇಂತಹ ಮಟ್ಟವನ್ನು ಮುಟ್ಟಿದ ಭಾಷೆಗಳಲ್ಲಿ ಎರಡು ನಿದರ್ಶನಗಳನ್ನು ಕೊಡಬಹುದಾದರೆ, ಅವು ಸಹಜವಾಗಿ ವೈದಿಕ ಸಂಸ್ಕೃತ ಮತ್ತು ಶಂಗಂ ತಮಿಳಿಗೆ ಸಲ್ಲುವುವು, ಆದರೆ ಈ ಎರಡು ಭಾಷೆಗಳೂ ಲಿಪಿಗಳಿಸಿಕೊಳ್ಳುವುದಕ್ಕೆ ಬಹುಕಾಲ ಮುಂಚೆಯೇ, ಪ್ರಾಕೃತ ಭಾಷೆಯು ಬ್ರಾಹ್ಮೀ ಲಿಪಿಯನ್ನು ಗಳಿಸಿಕೊಂಡದ್ದು ಮತ್ತು ಗೌತಮಬುದ್ಧ ಮತ್ತು ವರ್ಧಮಾನ ಮಹಾವೀರರಂತಹ ಚಿಂತಕರ ಲೇಖನಾ-ಬೋಧನಾ ಮಾಧ್ಯಮವೂ ಮೌರ್ಯ ಸಾಮ್ರಾಜ್ಯದ ವ್ಯವಹಾರ ಮಾಧ್ಯಮವೂ ಆದದ್ದು ಗಮನಾರ್ಹ. ಪೂರ್ವೋತ್ತರ ಭಾರತದಿಂದ ಚಲಿಸಿ ಬಂದ ಈ ಅಪರೂಪ ಮಾಧ್ಯಮಗಳನ್ನು ಒಪ್ಪಿ ಒಗ್ಗೂಡಿಸಿಕೊಂಡ ದಖ್ಖಣದ ಜನಾಂಗಗಳು ಸಹಜವಾಗಿ ಅಂದಿನ ಅಕ್ಷರಸ್ಥ ಸಮಾಜದಲ್ಲಿ ಸೇರಿಕೊಂಡವು; ಇವನ್ನು ನಿರ್ಲಕ್ಷಿಸಿದ ಇಲ್ಲವೇ ಪ್ರತಿರೋಧಿಸಿದವುಗಳು ಅಷ್ಟೇ ಸಹಜವಾಗಿ ಲಿಪಿರಹಿತ ಜನಾಂಗಗಳಾಗಿ ಉಳಿದುಕೊಂಡರು. ಆರಂಭ ಕಾಲದ ದಕ್ಷಿಣಭಾರತದ ಇತಿಹಾಸದಲ್ಲಿ ಈ ಮಾಧ್ಯಮಗಳಿಂದ ವಂಚಿತರಾದವರಲ್ಲಿ ಎದ್ದು ಕಾಣುವವರು ತಮಿಳರು. ಒಂದು ಅಖಂಡ ಭೂಭಾಗದ ಅಂಗವಾಗಿಯೂ ಈ ಕಾರಣದಿಂದಾಗಿ ತಮಿಳಗಂ ಆಗ್ನೇಯ ಏಷಿಯಾದಲ್ಲಿ ಲಿಪಿಶೂನ್ಯ ದ್ವೀಪವಾಗಿ ಉಳಿಯಿತು; ಭೌಗೋಳಿಕವಾಗಿ ಒಂದು ಪ್ರತ್ಯೇಕ ದ್ವೀಪವಾಗಿದ್ದರೂ ಲಿಪಿಸಂಬಂಧ ಬೆಳೆಸಿಕೊಂಡ ಕಾರಣ ಅಂದಿನ ಸಿಂಹಳವು (ಶ್ರೀಲಂಕಾ) ಬೃಹತ್ ಭರತಖಂಡದ ಅಕ್ಷರಸ್ಥ ಸಮಾಜದೊಡನೆ ಬೆಸೆದುಕೊಂಡಿತು.

ಸಿಂಹಳ ಮತ್ತು ತಮಿಳಗಂಗಳನ್ನು ಬ್ರಾಹ್ಮೀ ಬರಹ ತಲುಪುವುದಕ್ಕಿಂತ ಮುಂಚೆಯೇ ಕರ್ನಾಟಕ ಮತ್ತು ಆಂಧ್ರಪ್ರದೇಶಗಳಲ್ಲಿ ಈ ಲಿಪಿ ವ್ಯವಹಾರವು ಭದ್ರನೆಲೆಯನ್ನು ಕಂಡು ಕೊಂಡಿತ್ತು. ಆರಂಭಕಾಲದಲ್ಲಿ ಇಲ್ಲಿ ಬಳಸಿದ ಲಿಪಿಗೆ ಒಂದು ವಿಶಿಷ್ಟ ಪ್ರಾದೇಶಿಕ ಮುದ್ರೆ ಇದ್ದುದರಿಂದ ಶಾಸನತಜ್ಞರು ಅದನ್ನು 'ದಕ್ಷಿಣಬ್ರಾಹ್ಮಿ' ಎಂಬ ಹೆಸರಿನಿಂದ ಗುರುತಿಸಿರು ವರು. ದಖ್ಖಣ(ಕರ್ನಾಟಕ-ಆಂಧ್ರ)ಕ್ಕೆ ಮಾತ್ರ ಸೀಮಿತವಾಗಿರುವ ಈ ಲಿಪಿ ಪ್ರಭೇದವನ್ನು ಕರ್ನಾಟಕಾಂಧ್ರ ಬ್ರಾಹ್ಮೀ ಎಂದು ಕರೆದಿದ್ದರೆ 'ತಮಿಳುಬ್ರಾಹ್ಮೀ' ಎಂದು ಕರೆದಷ್ಟೇ ಸಮಂಜಸವಾಗಿರುತ್ತಿತ್ತೇನೋ! ಇದು ಏನೇ ಇರಲಿ, 'ಬ್ರಾಹ್ಮೀ', 'ತಮಿಳುಬ್ರಾಹ್ಮೀ', 'ಸಿಂಹಳ-ಬ್ರಾಹ್ಮೀ', 'ದಕ್ಷಿಣ ಬ್ರಾಹ್ಮೀ' ಈ ಮುಂತಾದ ಪದಗಳಿಗೆ ಯಾವ ಆಕರಗಳ (ಬೌದ್ಧ -ಜೈನಗ್ರಂಥಗಳ, ಘಟನಾವಳಿಗಳ ಮತ್ತು ಶಾಸನಗಳ) ಒಲವೂ ಇಲ್ಲ. ಬಹುಕಾಲ ಸವಾಲಾಗಿದ್ದ ಅಶೋಕನ ಶಾಸನಗಳನ್ನು ಜೇಮ್ಸ್‌ಪ್ರಿನ್ಸೆಪ್ ಓದುವ ವಿಜ್ಞಾನವನ್ನು ಕಂಡು ಹಿಡಿದಾಗ, ಗೌತಮಬುದ್ಧನು ಕಲಿತನೆನ್ನಲಾದ ಮೊದಲ ಲಿಪಿ 'ಬ್ರಾಹ್ಮೀ' ಇದಾಗಿರಬಹು ದೆಂದು ಊಹಿಸಿ, ಇವನ್ನು ಬ್ರಾಹ್ಮೀ ಲಿಪಿಯ ಶಾಸನಗಳೆಂದು ಬಗೆದುದು ಒಂದು ಆಕಸ್ಮಿಕ.

**ದಕ್ಷಿಣವನ್ನು ಪ್ರವೇಶಿಸಿದ ಪ್ರಾಕೃತ:**

ದಕ್ಷಿಣದಲ್ಲಿ ಶಾಸನಗಳನ್ನು ಅಶೋಕ ಕಂಡರಿಸುವುದಕ್ಕಿಂತ ಬಹುಕಾಲ ಮುಂಚೆ ಉತ್ತರದ ಪ್ರಾಕೃತ ಭಾಷಾಜನಾಂಗಗಳು ಇಂದಿನ ಆಂಧ್ರ ಮತ್ತು ಕರ್ನಾಟಕದ ಕೆಲವು ಕೇಂದ್ರಗಳನ್ನು ತಲುಪಿದ್ದವೆಂಬುದಕ್ಕೆ ಎರಡು ಪ್ರಬಲ ಐತಿಹ್ಯಗಳಿವೆ. ಇವುಗಳಲ್ಲಿ ಒಂದು ಬೌದ್ಧಧರ್ಮಕ್ಕೆ ಸಂಬಂಧಿಸಿದರೆ ಮತ್ತೊಂದು ಜೈನಧರ್ಮಕ್ಕೆ ಸಂಬಂಧಿಸಿದೆ. ಮೊದಲನೆಯದು ಬೌದ್ಧರು ಆಂಧ್ರಪ್ರದೇಶದಲ್ಲಿ ಕ್ರಿ.ಪೂ. ೬-೫ನೆಯ ಶತಮಾನದಲ್ಲಿ ನೆಲೆಕಂಡುಕೊಂಡದ್ದನ್ನು, ಎರಡನೆಯದು ಜೈನರು ಕರ್ನಾಟಕದಲ್ಲಿ ಕ್ರಿ.ಪೂ. ೪-೩ನೆಯ ಶತಮಾನದಲ್ಲಿ ಸ್ಥಾನಪಡೆದುಕೊಂಡದ್ದನ್ನು ತಿಳಿಸುವುವು. ಈ ಐತಿಹ್ಯಗಳನ್ನು ಲಘುವಾಗಿ ಪರಿಗಣಿಸುವಂತಿಲ್ಲ, ಏಕೆಂದರೆ ಇವನ್ನು ಪೋಷಿಸುವ ಪುರಾತನ ಕಾಲದ ಮಹತ್ವದ ದಾಖಲೆಗಳೂ ಇವೆ.

ಬೌದ್ಧ ಐತಿಹ್ಯದಂತೆ, ಸ್ವತಃ ಬುದ್ಧನು ಧಾನ್ಯಕಟಕವನ್ನು ಸಂದರ್ಶಿಸಿ ಬೋಧಿಸಿದನು. ಅಮರಾವತಿ(ಅಂದಿನ ಧಾನ್ಯಕಟಕ)ಯ ಮಹಾಚೈತ್ಯದ ಪೂರ್ವದ್ವಾರದ ಭಗ್ನಾವಶೇಷಗಳಲ್ಲಿ ಪಾಲೀ ಭಾಷೆಯ ಒಂದು ಶಾಸನವೂ ಬುದ್ಧನು ಬೋಧಿಸುವ ಪ್ರಸಂಗವನ್ನು ಸೆರೆಹಿಡಿದ ಉಬ್ಬುಶಿಲ್ಪಗಳ ಒಂದು ಚತುರ್ಮುಖ ಸ್ತಂಭಫಲಕವೂ ದೊರಕಿರುವುವು. ರಾಜಗೃಹ, ಧಾನ್ಯಕಟಕ, ಶ್ರಾವಸ್ತಿ, ಕುಶಿನಗರಗಳಲ್ಲಿ ಸಂಭವಿಸಿದ ಬುದ್ಧನ ಜೀವನದ ಪ್ರಮುಖ ಘಟನೆಗಳನ್ನು ಈ ಸ್ತಂಭದ ನಾಲ್ಕು ಮುಖಗಳಲ್ಲಿ ಕೆತ್ತಲಾಗಿದೆ. ಅಲ್ಲದೆ 'ದಮ್ಮಾಕ್ಕಡ ವಂದನಾಮಗೋತಿ' ಎಂದು ಬ್ರಾಹ್ಮೀ ಲಿಪಿಯಲ್ಲಿ ಧಾನ್ಯಕಟಕದ ಘಟನೆಯನ್ನು ಸ್ಪಷ್ಟವಾಗಿ ಗುರುತಿಸಲಾಗಿದೆ. ಈ ಶಿಲ್ಪದಲ್ಲಿ ಕೃಷ್ಣಾನದಿ ಪೂರ್ವೋತ್ತರದೆಡೆ ತಿರುಗುವುದನ್ನೂ ಈ ನದಿಯಲ್ಲಿ ಪುಷ್ಪ-ಪಾದುಕಗಳನ್ನು (ಬುದ್ಧನು ಇಲ್ಲಿಗೆ ಬಂದ ಸಂಕೇತ) ಪ್ರದರ್ಶಿಸಿರುವುದನ್ನೂ ಕಾಣಬಹುದು.[೪] ಜರ್ಮನ್ ವಿದ್ವಾಂಸ ಹೆಲ್ಮುಟ್ ಹೊಫ್‌ಮನ್‌ನ ಅಭಿಪ್ರಾಯವನ್ನು ಅಂಗೀಕರಿಸುವುದಾದರೆ, ನಿಸ್ಸಂಶಯವಾಗಿಯೂ 'ಕಾಲಚಕ್ರ ಮೂಲತಂತ್ರ'ವನ್ನು (ಮಹಾಯಾನದ ಒಂದು ಸಿದ್ಧಾಂತ) ಇಲ್ಲಿಯ ಪ್ರಸಿದ್ಧ ಸ್ತೂಪದ ಬಳಿ ಬುದ್ಧ ಬೋಧಿಸಿದನೆಂಬುದನ್ನು ಒಪ್ಪಬೇಕಾಗುವುದು.[೫]

ಬುದ್ಧ ಧಾನ್ಯಕಟಕದ ಸುಮೇಧ ಪರ್ವತದಲ್ಲಿ ಜನಿಸಿದನೆಂಬ, ಇಲ್ಲಿಯ ವಿಹಾರವೊಂದರ ಬಳಿ ಪವಾಡಗಳನ್ನು ಮೆರೆದು ಅಸಂಖ್ಯಾತ ಅನುಯಾಯಿಗಳನ್ನು ಆಕರ್ಷಿಸಿದನೆಂಬ, ಉಲ್ಲೇಖಗಳು ಜಾತಕಗಳಲ್ಲಿ ಬರುವುವು. ಈ ಘಟನೆಯ ಗೌರವಾರ್ಥ ಅಶೋಕ ಒಂದು ಸ್ತೂಪವನ್ನು ಇಲ್ಲಿ ನಿರ್ಮಿಸಿದನೆಂಬ ವಾದವೂ ಇದೆ. ವೈಶಾಲಿಯಂತೆ ಧಾನ್ಯಕಟಕವೂ ಮಹಾಸಾಂಘಿಕರ ಪ್ರಬಲ ನೆಲೆಯಾಗಿತ್ತು. ಇವರ ಪ್ರಭಾವವು

ಮಗಧದವರೆಗೂ ಹಬ್ಬಿತ್ತೆಂಬುದಕ್ಕೆ ರಾಜಗೃಹದ ಬಳಿ ಸ್ಥಾಪಿಸಲಾದ 'ಅಂಧಕವಿಂದ' ಮತ್ತು ಶ್ರಾವಸ್ತಿ ಬಳಿ ನಿರ್ಮಿಸಲಾದ 'ಅಂಧಕವನ'ವನ್ನು ನಿದರ್ಶಿಸಲಾಗುವುದು. ರಾಜಗೃಹ, ಶ್ರಾವಸ್ತಿ, ವೈಶಾಲಿ ಮುಂತಾದ ಕೇಂದ್ರಗಳಿಂದ ಧಾನ್ಯಕಟಕಕ್ಕೆ ಬಂದ ಬೌದ್ಧ ಭಿಕ್ಷುಗಳು ಇಲ್ಲೊಂದು (ವೈಶಾಲಿಯ ಮಾದರಿಯ) ಮಣ್ಣಿನ ಸ್ತೂಪವನ್ನು ನಿರ್ಮಿಸಿದ್ದರೆಂದೂ ಅದನ್ನೇ ವಿಸ್ತರಿಸಿ, ಅಲಂಕರಿಸಿ, ಮಹಾಸ್ತೂಪವನ್ನಾಗಿ ಅಶೋಕ ಪರಿವರ್ತಿಸಿದನೆಂದೂ ಪ್ರತಿಪಾದಿಸಲಾಗಿದೆ.[೬]

ಮೌರ್ಯಪೂರ್ವಯುಗದಲ್ಲಿ ಇಲ್ಲಿ ನೆಲಸಿದ ಮಾಗಧಿಯರು ತಮ್ಮೊಡನೆ ಪಾಲೀ-ಪ್ರಾಕೃತ ಭಾಷೆಯನ್ನು ತಂದುದರಲ್ಲಿ ಅನುಮಾನವಿಲ್ಲ. ಆದರೆ ಅವರು ಬ್ರಾಹ್ಮೀ ಲಿಪಿಯಲ್ಲಿ ವ್ಯವಹರಿಸಬಲ್ಲವರಾಗಿದ್ದರೆಂಬುದಕ್ಕೆ ಆಧಾರಗಳಿಲ್ಲ. ಅಲ್ಲದೆ ಅಶೋಕಪೂರ್ವ ಕಾಲದ, ನಿಶ್ಚಿತ ಸ್ವರೂಪದ, ಬ್ರಾಹ್ಮೀ ಬರಹ ಇಲ್ಲಿ ಬಳಕೆಯಲ್ಲಿತ್ತೆಂಬುದಕ್ಕೂ ಆಧಾರಗಳು ದೊರಕುವುದಿಲ್ಲ. ಈ ಕಾರಣ ಬ್ರಾಹ್ಮೀ ಲಿಪಿಯನ್ನು ಈ ಜನಾಂಗಗಳಿಗೆ ಮೊದಲು ಪರಿಚಯಿಸಿಕೊಟ್ಟವನು ಅಶೋಕನೇ ಎನ್ನಬೇಕಾಗುತ್ತದೆ. ಅಮರಾವತಿಯಲ್ಲಿ ಈತನು ಕಂಡರಿಸಿದ ಏಳು ಸಾಲುಗಳ ಒಂದು ಸ್ತಂಭಶಾಸನ ಇದಕ್ಕೊಂದು ಆಧಾರ ಒದಗಿಸುವುದು. ತನ್ನ ಜೀವಿತದ ಕೊನೆಯ ಘಟ್ಟದಲ್ಲಿ ಇಂತಹ ಸ್ತಂಭಶಾಸನಗಳನ್ನು ಅಶೋಕ ಕೊರೆಸಿದನೆಂಬ ಅಭಿಮತವಿರುವುದರಿಂದ, ಕರ್ನಾಟಕ ವಲಯದ ಕಿಬ್ಬಂಡೆ ಶಾಸನಗಳನ್ನು ಕೊರೆಸಿ ಸುಮಾರು ಎರಡು ದಶಕಗಳ ನಂತರ, ಅಂದರೆ ಕ್ರಿ.ಪೂ. ೨೪೪-೨೪೩ರ ಕಾಲಾವಧಿಯಲ್ಲಿ ಅವನು ಸ್ತಂಭಶಾಸನವನ್ನು ಅಮರಾವತಿಯಲ್ಲಿ ಬರೆಸಿರಲು ಸಾಧ್ಯ.

ಇನ್ನು ಪ್ರಾಕೃತ ಭಾಷಿಕರು ಕರ್ನಾಟಕವನ್ನು ತಲುಪಿದ್ದು. ಭದ್ರಬಾಹು-ಚಂದ್ರಗುಪ್ತರ ಜೈನ ಐತಿಹ್ಯವು ನಮಗೆ ತುಂಬಾ ಪರಿಚಿತವಾಗಿರುವುದರಿಂದ, ಅದನ್ನು ಸವಿಸ್ತಾರವಾಗಿ ಪುನರುಕ್ತಿಗೊಳಿಸುವ ಆವಶ್ಯಕತೆ ಇಲ್ಲವೆಂದು ಭಾವಿಸುವೆ. ಚಂದ್ರಗುಪ್ತನ ಆಡಳಿತಾಂತ್ಯದಲ್ಲಿ (ಕ್ರಿ.ಪೂ. ಸು.೩೦೦) ಸಂಭವಿಸಿದ ಆರ್ಯಾವರ್ತದ ಒಂದು ಭಯಂಕರ ಕ್ಷಾಮದಿಂದ ರಕ್ಷಿಸಿಕೊಳ್ಳಲು, ಸಾವಿರಾರು ಅನುಯಾಯಿಗಳೊಡನೆ ಭದ್ರಬಾಹು-ಚಂದ್ರಗುಪ್ತರು ಉಜ್ಜೈನಿಯಿಂದ ದಕ್ಷಿಣಮುಖಿಗಳಾಗಿ ಬಂದದ್ದು, ಅವರು ಶ್ರವಣಬೆಳ್ಗೊಳದಲ್ಲಿ ಸಮಾಧಿ ಸಂಪಾದಿಸಿಕೊಂಡದ್ದು, ಭದ್ರಬಾಹುವಿನ ಶಿಷ್ಯರು ಅಲ್ಲಿಂದ ಇನ್ನೂ ದಕ್ಷಿಣಕ್ಕೆ ಮುಂದುವರಿದು ತಮಿಳಗಂ ತಲುಪಿದ್ದು, ಈ ಐತಿಹ್ಯದ ಪ್ರಧಾನ ಅಂಶಗಳು. ಇದನ್ನು ಪ್ರತಿಪಾದಿಸುವ ಅತಿ ಪೂರ್ವಕಾಲದ (ಕ್ರಿ.ಶ. ೬೦೦) ಶಾಸನಗಳು ಶ್ರವಣಬೆಳ್ಗೊಳದ ಚಿಕ್ಕಬೆಟ್ಟದಲ್ಲಿ ದೊರಕಿರುವುವಲ್ಲದೆ, ಆನಂತರ ಕಾಲದ ಇನ್ನಿತರ ದಾಖಲೆಗಳೂ ಬೇರೆಡೆ ಲಭ್ಯವಾಗಿರುವುವು.[೭]

ಬೌದ್ಧ ಐತಿಹ್ಯವನ್ನು ಪ್ರತಿಪಾದಿಸುವಂತಹ ವಿವರಣಾತ್ಮಕವಾದ ಶಿಲ್ಪನಿರೂಪಣೆ ಜೈನ ಐತಿಹ್ಯಕ್ಕೆ ದೊರೆಯದಿದ್ದರೂ ಚಂದ್ರಗಿರಿ ಮೇಲಿನ ಒಂದು ಗುಹಾಲಯ (ಅದರಲ್ಲಿ ಇರುವ 'ಭದ್ರಬಾಹು ಪಾದುಕೆ'), ಚಂದ್ರಗುಪ್ತ ಬಸದಿ ಮತ್ತು ಇದರ ಜಾಲಂಧ್ರದಲ್ಲಿ ಸೊಗಸಾಗಿ ನಿರೂಪಿತಗೊಂಡಿರುವ ಭದ್ರಬಾಹು-ಚಂದ್ರಗುಪ್ತರ ಗಾಥಾ, ಹಲವು ಬಗೆಯಲ್ಲಿ ಈ ಐತಿಹ್ಯವನ್ನು ಪೋಷಿಸುವುವು.

ಧಾನ್ಯಕಟಕವನ್ನು ಮೊದಲು ತಲುಪಿದ ಬುದ್ಧ ಮತ್ತು ಅವನ ಅನುಯಾಯಿಗಳ ಬಗ್ಗೆಯಾಗಲೀ ಶ್ರವಣಬೆಳ್ಗೊಳವನ್ನು ಮೊದಲು ತಲುಪಿದ ಭದ್ರಬಾಹು-ಚಂದ್ರಗುಪ್ತ ಮತ್ತು ಅವರ ಅನುಯಾಯಿಗಳ ಬಗ್ಗೆಯಾಗಲೀ ಸಮಕಾಲೀನ ಲಿಖಿತ ದಾಖಲೆಗಳನ್ನು ಬಯಸುವುದು ಸರಿಯಲ್ಲ, ಏಕೆಂದರೆ ಅದೊಂದು ಮೌಖಿಕ ವ್ಯವಹಾರಗಳ ಯುಗವಾಗಿತ್ತು. ಆದರೆ ಅಶೋಕ ಶಾಸನಗಳ ಬೆನ್ನಹಿಂದೆ ಬಂದ ೬೦೦ ವರ್ಷಕಾಲದ ಲಿಖಿತ ದಾಖಲೆಗಳಿಗೆ ಆಂಧ್ರದಲ್ಲಾಗಲೀ ಕರ್ನಾಟಕದಲ್ಲಾಗಲೀ ಕೊರತೆ ಇಲ್ಲ.

### ದಖ್ಖಿಣದಲ್ಲಿ ಅಶೋಕ ಸೃಷ್ಟಿಸಿದ ಶಾಸನಕ್ಷೇತ್ರ:

ಧಾನ್ಯಕಟಕದ ಪರಂಪರೆ ಅಶೋಕನನ್ನು ಸಾಕಷ್ಟು ಸೆಳೆದರೂ ಅವನು ತನ್ನ ಗಮನವನ್ನು ಹೆಚ್ಚು ಕೇಂದ್ರೀಕರಿಸಿದ್ದು ಮಧ್ಯ ದಖ್ಖಿಣದಲ್ಲಿ. ಇದರ ಉತ್ತರದ ಗಡಿ ಗುಲಬರ್ಗಾ ಜಿಲ್ಲೆಯ ಸಣ್ಣತಿಯಾಗಿದ್ದರೆ, ದಕ್ಷಿಣದ ಗಡಿ ಚಿತ್ರದುರ್ಗ ಜಿಲ್ಲೆಯ ಸಿದ್ದಾಪುರ-ಬ್ರಹ್ಮಗಿರಿ ಆಗಿತ್ತು. ಪಶ್ಚಿಮದ ಗಡಿ ಕೊಪ್ಪಳ ಜಿಲ್ಲೆಯ ಇದೇ ಹೆಸರಿನ ಪಟ್ಟಣವಾಗಿದ್ದರೆ, ಪೂರ್ವದ ಗಡಿ ಕರ್ನೂಲು ಜಿಲ್ಲೆಯ ಯರ್ರಗುಡಿಯಾಗಿತ್ತು. ಈ ಸೀಮಿತ ಕ್ಷೇತ್ರದಲ್ಲಿ ಅಶೋಕ ಹನ್ನೊಂದು ಕಿಬ್ಬಂಡೆ ಶಾಸನಗಳನ್ನಲ್ಲದೆ, ಹೆಬ್ಬಂಡೆ ಶಾಸನಗಳ ಒಂದು ಗುಚ್ಛವನ್ನೂ ವಿಶಿಷ್ಟ ಅಥವಾ ಪ್ರತ್ಯೇಕ ಶಾಸನವನ್ನೂ ಕೊರೆಸಿದನು. ಈ ಶಾಸನಗಳೆಲ್ಲವೂ ಸುಮಾರು ೧೨೫ ಕಿ.ಮೀ. (ಕೊಪ್ಪಳದಿಂದ ಯರ್ರಗುಡಿ; ಮಸ್ಕಿಯಿಂದ ಬ್ರಹ್ಮಗಿರಿ) ವಿಸ್ತೀರ್ಣದಲ್ಲಿ ದಟ್ಟೈಸಿ ಒಂದು ವಿಶಿಷ್ಟ ಬಗೆಯ ಶಾಸನ ಕ್ಷೇತ್ರವನ್ನು ನಿರ್ಮಿಸಿಕೊಂಡವು.

ತನ್ನ ಕಾಲದಲ್ಲಿ ಪ್ರಚಲಿತವಿದ್ದ ಬೌದ್ಧ ಪರಂಪರೆಯನ್ನನುಸರಿಸಿ ಮಧ್ಯ ದಖ್ಖಿಣದ (ಕರ್ನಾಟಕ-ಆಂಧ್ರ) ಎಲ್ಲಾ ಜನಾಂಗಗಳನ್ನು 'ಅಂಧಕ' ಎಂಬ (ಹೆಬ್ಬಂಡೆ ಶಾಸನ ೧೩ರಲ್ಲಿ) ಒಂದೇ ಹೆಸರಿನಿಂದ ಅಶೋಕನು ಗುರುತಿಸಿದನು. ಅಂದರೆ ತನ್ನ ಚಟುವಟಿಕೆಯ ಕೇಂದ್ರದಲ್ಲಿ ಕರ್ನಾಟಕದ ಜನಾಂಗಗಳನ್ನೂ ಇದರಲ್ಲಿ ಅವನು ಸೇರಿಸಿದ್ದನೆಂದರ್ಥ. ಕಳಿಂಗ ಯುದ್ಧದ ನಂತರ ಅಲ್ಲಿಯ ನಿವಾಸಿಗಳನ್ನು ಸಂತೈಸಲು ಹೊರಡಿಸಿದ ಮಾದರಿಯಲ್ಲಿ ಸಣ್ಣತಿಯಲ್ಲೂ ಅವನು ಒಂದು 'ವಿಶೇಷ ಶಾಸನ'ವನ್ನು ಹೊರಡಿಸಿದ್ದನ್ನು ಗಮನಿಸಿದರೆ,

ಭೀಮಾನದಿಯವರೆಗೂ ಅವನು ಸೇನಾಚರಣೆ ಕೈಕೊಂಡಿದ್ದನೆಂದು ತೋರಿಬರುವುದು. ಸಣ್ಣತಿ ಮೌರ್ಯಪೂರ್ವಯುಗದ ಬೌದ್ಧಕೇಂದ್ರವಾಗಿರದಿದ್ದರೂ ಅಶೋಕನ ವೈಯಕ್ತಿಕ ಆಸಕ್ತಿಯಿಂದಾಗಿ ಮೌರ್ಯಸಾಮ್ರಾಜ್ಯದ ಒಂದು ಪ್ರಧಾನ ಆಡಳಿತ ಮತ್ತು ಧಾರ್ಮಿಕ ಕೇಂದ್ರವಾಗಿ ಬೆಳೆಯಿತು. ಇಲ್ಲಿ ದೊರಕಿರುವ ಮಹಾಸ್ತೂಪ ಮತ್ತು ಹಲವು ವಿಹಾರಗಳ ಅವಶೇಷಗಳು ಅಶೋಕನ ಕಾಲದಲ್ಲಿ ಪ್ರಾರಂಭವಾದ ಧಾರ್ಮಿಕ ಚಟುವಟಿಕೆಗಳು ಹೇಗೆ ಮುಂದುವರಿದು ಇದನ್ನೊಂದು ಮಹತ್ವದ ಬೌದ್ಧ ಕೇಂದ್ರವನ್ನಾಗಿ ಬೆಳೆಸಿದವೆಂಬುದನ್ನು ಸೂಚಿಸುತ್ತವೆ.[೮]

ತನ್ನ ಸಾಮ್ರಾಜ್ಯದ ಮಹತ್ವದ ಆಡಳಿತ ಘಟಕವನ್ನಾಗಿ ಈ ಪ್ರದೇಶವನ್ನು ಪರಿವರ್ತಿಸಲು ಅಶೋಕ ಕೈಕೊಂಡ ಹಲವು ಕ್ರಮಗಳು ಗಮನಾರ್ಹವಾಗಿವೆ. ಸುವರ್ಣಗಿರಿಯನ್ನು ದಖ್ಖಿಣದ ರಾಜಧಾನಿಯನ್ನಾಗಿಸಿಕೊಂಡು, ಇಲ್ಲಿ ತನ್ನ 'ಆಯಪುತ' (ಆರ್ಯಪುತ್ರ)ನನ್ನು ನೇಮಕಮಾಡಿ, ಅವನ ಸಹಾಯಕ್ಕೆ ಮಹಾಮಾತ್ರರನ್ನಿಟ್ಟು ಈ ಕೇಂದ್ರದ ಘನತೆಯನ್ನು ಅವನು ಹೆಚ್ಚಿಸಿದನು. ಅಲ್ಲದೆ, ದಕ್ಷಿಣದ ಗಡಿಯಾದ 'ಇಸಿಲ' (ಬ್ರಹ್ಮಗಿರಿ?)ವನ್ನು ಭದ್ರಗೊಳಿಸಿ ಅದನ್ನು ನೇರವಾಗಿ ಮಹಾಮಾತ್ರರ ಅಧೀನಕ್ಕೆ ಒಪ್ಪಿಸಿದನು. ಈ ಮಾದರಿಯ ಆಡಳಿತ ವ್ಯವಸ್ಥೆಯನ್ನು ವಾಯವ್ಯಗಡಿಯ ತಕ್ಷಶಿಲೆ, ಮಧ್ಯಭಾರತದ ಉಜ್ಜೈನಿ, ಕಳಿಂಗಾ(ಒರಿಸ್ಸಾ)ದ ತೋಸಲಿಗಳಲ್ಲಿಯೂ ಮಾಡಿ, ಅವುಗಳ ಹೊಣೆಹೊರಲು 'ಕುಮಾರ'ರನ್ನು ಅಶೋಕ ನೇಮಿಸಿದನು. ಈ ಕುಮಾರರು ಅವನ ರಕ್ತಸಂಬಂಧಿಗಳಾಗಿದ್ದರೆ ಸುವರ್ಣಗಿರಿಯ ಆರ್ಯಪುತ್ರನು ಅವರಿಗಿಂತ ಅಧಿಕ ಅಂತಸ್ತಿನ ಮತ್ತು ಅವರಿಗಿಂತ ಸಮೀಪದ ಸಂಬಂಧಿಯಾಗಿದ್ದನೆಂದೆನಿಸುವುದು.[೯] ಇಸಿಲದಲ್ಲಿ ಮಾಡಿದಂತಹ ವ್ಯವಸ್ಥೆಯನ್ನು ಅವನು ಸಮಾಪಾ (ಕಳಿಂಗ) ಮತ್ತು ಕೋಸಾಂಬಿ (ಉತ್ತರಪ್ರದೇಶ)ಯಲ್ಲಿಯೂ ಮಾಡಿದನು.

**ಅಶೋಕನಿಗಿದ್ದ ಕಾರಣಗಳು:**

ತನ್ನ ನೆಲೆಯನ್ನು ಈ ಬಗೆಯಲ್ಲಿ ದಖ್ಖಿಣದಲ್ಲಿ ಭದ್ರಪಡಿಸಿಕೊಳ್ಳಲು ಅಶೋಕನಿಗಿದ್ದ ರಾಜಕೀಯ ಹಾಗೂ ರಾಜಕೀಯೇತರ ಕಾರಣಗಳಲ್ಲಿ ಕೆಲವನ್ನು ನಾವು ಸುಲಭವಾಗಿ ಗ್ರಹಿಸಬಹುದು. ಬ್ರಹ್ಮಗಿರಿಯ ದಕ್ಷಿಣಕ್ಕಿದ್ದ ಪ್ರದೇಶವನ್ನು ಈ ಕಾಲದಲ್ಲಿ ತಮಿಳೇತರ ವಡುಗರು (ಕಬನೀ-ಕಾವೇರೀ ನಡುವಣ ಪ್ರದೇಶ; ನೀಲಗಿರಿ-ವೆಂಕಟಾದ್ರಿಯ ಉತ್ತರ ಭಾಗ) ಮತ್ತು ತಮಿಳರು (ಮಧ್ಯ ಕಾವೇರಿಯಿಂದ ಕನ್ಯಾಕುಮಾರಿ) ಹಂಚಿಕೊಂಡಿದ್ದರು. ಅಶೋಕ ತನ್ನ ಹೆಬ್ಬಂಡೆ ಶಾಸನ ೧೩ ಮತ್ತು ೨ರಲ್ಲಿ ಸಕ್ರಮವಾಗಿ ಚೋಡ (ಚೋಳ), ಪಾಂಡಿಯ ರಾಜ್ಯಗಳಿಂದ ತಂಬಪಣ್ಣಿ (ತಾಮ್ರಪರ್ಣಿ ಅಥವಾ ಶ್ರೀಲಂಕಾ)ವರೆಗೆ

ಧರ್ಮಪ್ರಸಾರಕರನ್ನು ಕಳಿಸಿದ್ದನ್ನು ಮತ್ತು ಇವನ್ನೊಳಗೊಂಡು 'ಸತಿಯಪುತ್' ಮತ್ತು 'ಕೇರಳಪುತ್'ರ ರಾಜ್ಯಗಳಿಗೆ ವೈದ್ಯಕೀಯ ನೆರವನ್ನು ಒದಗಿಸಿದ್ದನ್ನು ತಿಳಿಸಿ, ಇವು ತನ್ನ ರಾಜ್ಯದ ಹೊರಗಿನ ಪ್ರದೇಶಗಳಾಗಿದ್ದವೆಂಬುದನ್ನು ಸ್ಪಷ್ಟಪಡಿಸಿರುವನು. ಇಲ್ಲಿ ತಮಿಳಗಂವನ್ನು ಹಂಚಿಕೊಂಡು ಆಳುತ್ತಿದ್ದ 'ಮೂವೇಂದರ್' (ಮೂವರು ಕಿರೀಟಧಾರಿ ಅರಸರುಗಳಾದ ಚೋಳ, ಚೇರ ಮತ್ತು ಪಾಂಡ್ಯ)ರನ್ನು ಬಿಟ್ಟು ಅಧಿರಾಜರಲ್ಲಿ ಸತಿಯಪುತ್ರನನ್ನಲ್ಲದೆ ಉಳಿದ ಯಾರನ್ನೂ ಅವನು ಹೆಸರಿಸುವುದಿಲ್ಲ; ಇದರಂತೆ ಬ್ರಹ್ಮಗಿರಿಯ ಕ್ಷಿಪ್ರ ನೈರುತ್ಯ ಪ್ರದೇಶದಲ್ಲಿ ಆಳುತ್ತಿದ್ದ ವಡುಗರಲ್ಲಿ ಪ್ರಮುಖರಾದ ಪುನ್ನಾಟ, ಎರುಮೈ, ತುಳು, ಕೊಂಗ, ಕಟಂಬು, ಮೋಹೂರ್, ಕೋಶರ್ ಮುಂತಾದವರನ್ನೂ ಹೆಸರಿಸುವುದಿಲ್ಲ.

ಸಮಾಜ ಸಂಘಟನೆ ಮತ್ತು ನೀತಿಬೋಧೆಯ ಕಾರ್ಯವನ್ನು ಸುವರ್ಣಗಿರಿಯಿಂದ ದಕ್ಷಿಣಕ್ಕೆ ವಿಸ್ತರಿಸುವ ಅಭೀಪ್ಸೆಯನ್ನು ಅಶೋಕ ಹೊಂದಿದ್ದರೂ ಸ್ವಾತಂತ್ರ್ಯ ಪ್ರಿಯರಾದ ಇಲ್ಲಿಯ ಜನಾಂಗಗಳು ಅವನ ಅರಸೊತ್ತಿಗೆಯನ್ನಾಗಲೀ ಪ್ರತಿಪಾದಿಸುತ್ತಿದ್ದ ಧರ್ಮವನ್ನಾಗಲೀ ಬಳಸುತ್ತಿದ್ದ ಲಿಪಿ-ಭಾಷೆಯನ್ನಾಗಲೀ ಒಪ್ಪದೆ, ಇವೆಲ್ಲವನ್ನೂ ಸಾರಾಸಗಟಾಗಿ ತಿರಸ್ಕರಿಸಿದರೆಂದು ತೋರುವುದು. ಈ ಪ್ರದೇಶವನ್ನು ತನ್ನ ರಾಜಕೀಯ ಕಕ್ಷೆಯೊಳಗೆ ತೆಗೆದುಕೊಳ್ಳಲು ಅಶೋಕನೇನೂ ನಿರಾಸಕ್ತನಾಗಿರಲಿಲ್ಲ. ಆದರೆ ಅದನ್ನು ಸಾಧಿಸಿಕೊಳ್ಳಲು ಅವನಿಗೆ ಅವಕಾಶ ದೊರೆಯದಂತೆ ಈ ಜನಾಂಗ ಶಕ್ತಿಗಳು ಹೇಗೆ ನೋಡಿಕೊಂಡವೆಂಬುದನ್ನು ತಮಿಳು ಆಕರಗಳಿಂದ ನಾವು ಅರಿತುಕೊಳ್ಳುವೆವು.

ಸಣ್ಣತಿಯವರೆಗೂ ಸೈನ್ಯಾಚರಣೆ ಕೈಕೊಂಡು, ಸುವರ್ಣಗಿರಿಯಲ್ಲಿ ಆರ್ಯಪುತನಿಗೆ ರಾಜಧಾನಿಪಟ್ಟಣವನ್ನು ನಿರ್ಮಿಸಿಕೊಟ್ಟು, ಅಲ್ಲಿಂದ ಕೆಳಗಣ ಪ್ರದೇಶದಲ್ಲಿ ನೆಲೆಸಿದ್ದ ಬೃಹತ್ ಶಿಲಾಯುಗದ ಜನಾಂಗಗಳನ್ನು ಸುಲಭವಾಗಿ ವಶಪಡಿಸಿಕೊಳ್ಳುತ್ತ ಇಸಿಲದವರೆಗೂ ಮುನ್ನಡೆದು, ಅಲ್ಲಿ ಒಂದು ಸೇನಾಠಾಣ್ಯವನ್ನು ಅಶೋಕ ಸ್ಥಾಪಿಸಿದ ಚಿತ್ರ ನಮಗೆ ದೊರಕುವುದು. ಅಲ್ಲಿಂದ ವಡುಗರಲ್ಲಿ ಕೆಲವರನ್ನು ತನ್ನೆಡೆಗೆ ಸೆಳೆದುಕೊಳ್ಳುತ್ತಾ ಇವರನ್ನು ತಮಿಳಗಂನ 'ಮೂವೇಂದರ್' ವಿರುದ್ಧ ಎತ್ತಿಕಟ್ಟಲು ಅವನು ಪ್ರಯತ್ನಿಸಿದಾಗ, ಇದರ ಲಾಭವನ್ನು ತಮಿಳಗಂ ಉತ್ತರದ ಕೆಲವು ನಾಯಕರು ಪಡೆದುಕೊಳ್ಳಲು ಹಿಂಜರಿಯಲಿಲ್ಲ. ಆದರೆ ಸ್ವಾತಂತ್ರ್ಯ ಪ್ರಿಯರಾದ ಅವರು ಕೂಡಾ ತಮಿಳರ ಅಧಿಪತ್ಯವನ್ನು ಎದುರಿಸಿದಂತೆ ಮೌರ್ಯರ ಅಧಿಪತ್ಯವನ್ನೂ ಎದುರಿಸಿದರೆಂದು ತೋರುವುದು. ಒಂದೆರಡು ಬಾರಿ ಮಾಡಿದ ತನ್ನ ಪ್ರಯತ್ನಗಳು ಬಯಸಿದ ಫಲ ಕೊಡದಿದ್ದಾಗ ತನ್ನ ರಾಜಕೀಯ ಆಮಿಷವನ್ನು ಕಡಿತಗೊಳಿಸಿ, ಧರ್ಮಪ್ರಸಾರ, ವೈದ್ಯಕೀಯ ನೆರವು, ಮೊದಲಾದವುಗಳನ್ನು ಒದಗಿಸಿ, ದಕ್ಷಿಣ ಜನಾಂಗಗಳ ಮೈತ್ರಿಸಂಪಾದಿಸಿಕೊಳ್ಳಲು ಅಶೋಕ ಪ್ರಯತ್ನಪಟ್ಟನು. ಇವೂ ಹೆಚ್ಚು ಫಲಿಸದಿದ್ದಾಗ ತನ್ನ ಗಮನವನ್ನು ಮಹಿಷಮಂಡಲ,

ಬನವಾಸಿ ಮತ್ತು ಸಿಂಹಳದೆಡೆ ಹೆಚ್ಚು ಕೇಂದ್ರೀಕರಿಸಿ, ಬೌದ್ಧಧರ್ಮ ಮತ್ತು ಬ್ರಾಹ್ಮೀ ಲಿಪಿಯನ್ನು ಪ್ರಸಾರಮಾಡುವ ಕಾರ್ಯದಲ್ಲಿ ಶ್ರಮಿಸಿ, ಅವನು ಸಾಕಷ್ಟು ಯಶಸ್ಸು ಪಡೆದುಕೊಂಡನೆನ್ನಬಹುದು.

ಅಶೋಕನ ಮೈತ್ರಿ ನೀತಿಯನ್ನು ಸ್ವಾಗತಿಸುವ ಮೂಲಕ ಸಿಂಹಳೀಯರು ಮಾಡಿದ ಪ್ರಗತಿಯನ್ನು ಮೊದಲು ಅರಿತುಕೊಂಡು, ಆ ನಂತರ ತಮಿಳಗಂನಲ್ಲಾದ ಬೆಳವಣಿಗೆಯನ್ನು ತಿಳಿದುಕೊಳ್ಳಲು ನಾವು ಪ್ರಯತ್ನಿಸಬಹುದು.

**ಶ್ರೀಲಂಕಾ ಪ್ರವೇಶಿಸಿದ ಬ್ರಾಹ್ಮೀ:**

ಭೌಗೋಳಿಕವಾಗಿ ತಮಿಳುನಾಡು ಮತ್ತು ಶ್ರೀಲಂಕಾ ಬಹು ಸಮೀಪವಿದ್ದರೂ ಸಾಂಸ್ಕೃತಿಕವಾಗಿ ಈ ಎರಡು ಪ್ರದೇಶಗಳು ಬಹು ದೂರವಾಗಿದ್ದುದು ಮೌರ್ಯ ಮತ್ತು ಮೌರ್ಯೋತ್ತರ ಕಾಲದ ಆಕರಗಳಿಂದ ವ್ಯಕ್ತಗೊಳ್ಳುವುದು. ಚಾರಿತ್ರಿಕ ಯುಗದ (ಕ್ರಿ.ಪೂ. ೩ನೆಯ ಶತಕ) ಆರಂಭದಿಂದಲೂ ಶ್ರೀಲಂಕಾ ಹೆಚ್ಚು ಸಂಪರ್ಕವಿಟ್ಟುಕೊಂಡಿದ್ದು ಉತ್ತರ ಭಾರತದೊಡನೆ ಮತ್ತು ದ್ರಾವಿಡೇತರ ಮಾಧ್ಯಮಗಳೊಡನೆ ಎಂಬುದು ಸ್ಪಷ್ಟಗೊಂಡಿದೆ. ಆಳವಾಗಿ ಬೇರುಬಿಟ್ಟ ಒಂದು ಐತಿಹ್ಯದಂತೆ ಬುದ್ಧನನ್ನು ಬಿಟ್ಟು ಈ ದ್ವೀಪವನ್ನು ತಲುಪಿದ ಮೊಟ್ಟ ಮೊದಲ 'ಆರ್ಯ', ಸಿಂಹಪುರದ ವಿಜಯ. ಇದು ಸಂಭವಿಸಿದ್ದು ಕ್ರಿ.ಪೂ. ೬-೫ ಶತಕಗಳಲ್ಲಿ. ಇವನು ಬಂಗಾಳ-ಕಳಿಂಗ ಪ್ರದೇಶದವನಾಗಿದ್ದನೆಂಬ ಒಂದು ವಾದವಿದೆ. ಶ್ರೀಲಂಕಾವನ್ನು ಆಳಿದ ಕ್ರಿ.ಶ. ೧೨ನೆಯ ಶತಮಾನದ ಒಂದು ಅರಸು ಮನೆತನವು ತಮ್ಮ ಪೂರ್ವಜರಾದ ಕಳಿಂಗೆಯ ಸಿಂಹಪುರದವರನ್ನು ಸ್ಮರಿಸಿರುವುದು.[೧೦] ಆರಂಭಕಾಲದ ಈ ಆರ್ಯರು ಸಿಂಹಳಕ್ಕೆ ಬಂದದ್ದು ವ್ಯಾಪಾರವನ್ನು ವಿಸ್ತರಿಸಿಕೊಳ್ಳಲು. ಮ್ಯಾಗಸ್ತನೀಸ, ಕೌಟಿಲ್ಯ ಮತ್ತು ಖಾರವೇಳನ (ಹಾತಿಗುಂಫ ಶಾಸನ) ಉಲ್ಲೇಖಗಳು ಈ ಕಾಲದ ವಾಣಿಜ್ಯ ಸಂಬಂಧವನ್ನು ದೃಢಪಡಿಸುವುವು. ಸಿಂಹಪುರದ ಉಲ್ಲೇಖಗಳು ತಮಿಳು ಮಹಾಕಾವ್ಯಗಳಾದ *ಶಿಲಪ್ಪದಿಗಾರಂ* ಮತ್ತು *ಮಣಿಮೇಗಲೈ*ಗಳಲ್ಲಿ ಕೂಡಾ ಬರುವುವು.[೧೧] ವಣಿಜಿಗನಾಗಿ ಬಂದ ವಿಜಯ ಕ್ರಮೇಣ ತನ್ನ ಅಧಿಕಾರವನ್ನು ವಿಸ್ತರಿಸಿಕೊಂಡು, ಪಾಂಡ್ಯರಾಜ್ಯದ ಹದಿನೆಂಟು ಶ್ರೇಣಿಗಳಿಗೆ ಸೇರಿದ ಒಂದು ಸಾವಿರ ಕನ್ಯೆಯರನ್ನು ಸಿಂಹಳಕ್ಕೆ ಕರೆತಂದನಂತೆ. ಶಂಗಂ ಕವಿಗಳಲ್ಲಿ ಕೆಲವರು - ಈಳತ್ತು ಪೆರುಂದೇವನಾರ್, ಈಳನಾಗನಾರ್, ಮುಸುರಿ ನೀಲಕಂಠನಾರ್ - ಶ್ರೀಲಂಕಾ ನೆಲದವರೆಂದು ತಮಿಳು ವಿದ್ವಾಂಸರು ವಾದಿಸುವರು. ಆದರೆ 'ಇಲಂಕೈ' ತುಂಬಾ ವಿರಳವಾಗಿ ಮಾತ್ರ ಶಂಗಂ ಸಾಹಿತ್ಯದಲ್ಲಿ ಉಲ್ಲೇಖಗೊಂಡಿರುವುದು ನನ್ನ ಗಮನಕ್ಕೆ ಬಂದ ವಿಷಯ.[೧೨]

ಧರ್ಮಪ್ರಸಾರಮಾಡಲು ಮಹೇಂದ್ರನನ್ನು ಸಿಂಹಳಕ್ಕೆ ಅಶೋಕ ಕಳಿಸಿದ್ದನ್ನು ಸಿಂಹಳದ ಘಟನಾವಳಿಗಳಲ್ಲದೆ ರಾಜಗಳಾದ ಒಂದು ಶಾಸನವೂ ಬೆಂಬಲಿಸುವುದು. ಈ ದ್ವೀಪದ ಪುಣ್ಯವಶಾತ್ *('ಇಮ ದಿಪ ಪಮಟಮಯ ಇದಿಯ ಅಗತನ')* ಅವನು ಇಲ್ಲಿಗೆ ಆಗಮಿಸಿದನೆಂದು ಅದು ತಿಳಿಸುವುದು.[೧೦] ಅಶೋಕ ಮತ್ತು ಅವನ ಸಮಕಾಲೀನ ಸಿಂಹಳದ ಅರಸರಿಬ್ಬರೂ 'ದೇವಾನಾಂಪಿಯ' ಎಂದು ಕರೆದುಕೊಂಡು, ಒಂದೇ ಶೈಲಿಯ (ಅಶೋಕಬ್ರಾಹ್ಮೀ) ಲಿಪಿಯನ್ನು ಬಳಸಿ, ನೈಸರ್ಗಿಕ ಬಂಡೆಗಳ ಮೇಲೆ ಶಾಸನಗಳನ್ನು ಕೊರೆಸಿದ್ದು ಒಂದು ಆಕಸ್ಮಿಕ ಮಾತ್ರ ಆಗಿರಲಾರದು. ಹೀಗೆ ಸಿಂಹಳದಲ್ಲಿ ಪ್ರಾರಂಭಗೊಂಡ ಬ್ರಾಹ್ಮೀ ಲಿಪಿಯ ಬಳಕೆ ಅವ್ಯಾಹತವಾಗಿ ೭ನೆಯ ಶತಮಾನದವರೆಗೂ ಮುಂದುವರಿಯಿತು. ಇದು ಪ್ರಾರಂಭವಾದ ಮೊದಲ ಮೂರು ಶತಮಾನಗಳಲ್ಲಿ ೩೭೪ ಕೇಂದ್ರಗಳನ್ನು ತಲುಪಿ ತನ್ನ ಸಂಖ್ಯೆಯನ್ನು ೧,೪೪೦ಕ್ಕೆ ವಿಸ್ತರಿಸಿಕೊಂಡಿತು. ಇವುಗಳಲ್ಲಿ ಕನಿಷ್ಠ ೫ ಶಾಸನಗಳು ಅಶೋಕನ ಕಾಲದವುಗಳೆಂದು ತೀರ್ಮಾನಿಸಲಾಗಿದೆ.[೧೧]

**ಸಿಂಹಳ-ಬ್ರಾಹ್ಮೀಯ ವಿಶೇಷತೆ:**

ಸಿಂಹಳದ ರಾಜಕೀಯ ಮತ್ತು ಧಾರ್ಮಿಕ ಇತಿಹಾಸದ ವಿವರಗಳನ್ನು ಬದಿಗಿಟ್ಟು ಬ್ರಾಹ್ಮೀ ಲಿಪಿಗೆ ಸಂಬಂಧಪಟ್ಟದ್ದನ್ನು ಮಾತ್ರ ಇಲ್ಲಿ ಗಮನಿಸಿದರೆ ಅದರಲ್ಲಿ ಎದ್ದು ಕಾಣುವ ಕೆಲವು ಅಂಶಗಳು ಇಂತಿವೆ:

(೧) ಧಾನ್ಯಕಟಕದೊಡನೆ ಬುದ್ಧ ನೇರ ಸಂಪರ್ಕ ಹೊಂದಿದಂತೆ ಸಿಂಹಳದೊಡನೆಯೂ ಹೊಂದಿದ್ದನೆಂಬ ಐತಿಹ್ಯವಿದೆ. ಸರಿಸುಮಾರು ಇದೇ ಕಾಲಾವಧಿಯಲ್ಲಿ ಸಿಂಹಪುರದ ವಿಜಯ ಹಲವು 'ಆರ್ಯ'ರೊಡನೆ ಇಲ್ಲಿಗೆ ಬಂದು ನೆಲಸಿದನೆಂದು ನಂಬಲಾಗಿದೆ. ಇದನ್ನು ಪರೋಕ್ಷವಾಗಿ ಪ್ರತಿಪಾದಿಸಲು ಇದೇ ಕಾಲದ್ದೆನ್ನಲಾದ ಮಡಕೆಯ ಮೇಲಿನ ಬ್ರಾಹ್ಮೀ ಗಿಚ್ಚು ಅನುರಾಧಪುರದ ಉತ್ಖನನದಲ್ಲಿ ದೊರಕಿದ್ದು ಅದು ಬ್ರಾಹ್ಮೀ ಲಿಪಿ ಮತ್ತು ಪ್ರಾಕೃತ ಭಾಷೆಯಲ್ಲಿರುವುದನ್ನು ಖಚಿತಪಡಿಸಿಕೊಳ್ಳಲಾಗಿದೆ.[೧೫] ಆರಂಭಕಾಲದ ಈ ಲಿಪಿಯನ್ನು ಬಂಗಾಳ-ಕಳಿಂಗ ಪ್ರದೇಶದಿಂದ ಬಂದ ಮೊದಲ ತಲೆಮಾರಿನ ಆರ್ಯರು ಸಿಂಹಳಕ್ಕೆ ತಂದಿರಲು ಸಾಧ್ಯ, ಆದರೆ ಅಲ್ಲಿಂದ ಅಶೋಕನ ಕಾಲದವರೆಗೂ ಭಾರತದಲ್ಲಾಗಲೀ ಸಿಂಹಳದಲ್ಲಾಗಲೀ ಈ ಲಿಪಿ ಏಕೆ ಮುಂದುವರಿಯಲಿಲ್ಲ ಎಂಬುದೊಂದು ಪ್ರಶ್ನೆ.

(೨) ಬ್ರಾಹ್ಮೀ ಲಿಪಿ, ಪ್ರಾಕೃತ ಭಾಷೆ ಮತ್ತು ಬೌದ್ಧಮತ ಅಶೋಕನ ಕಾಲದಲ್ಲಿಯೇ ಶ್ರೀಲಂಕಾದಲ್ಲಿ ಭದ್ರನೆಲೆ ಕಂಡುಕೊಂಡವೆನ್ನುವುದರಲ್ಲಿ ಅನುಮಾನವಿಲ್ಲ. ಕ್ರಿ.ಪೂ.೩ನೆಯ ಶತಮಾನದ ಕೊನೆಯ ದಶಕಗಳಲ್ಲಿ ಆಳಿದ ದೇವಾನಾಂಪಿಯ ತಿಸ್ಸನ ವಂಶಜನಾದ ಉತ್ತಿಯನೆಂಬ ಅರಸನ ಕಾಲದಲ್ಲಿ ಗುಹಾಲಯ ಬರವಣಿಗೆ ಪ್ರಾರಂಭಗೊಂಡು. ಮುಂದಿನ

ಮೂರು ಶತಕಗಳಲ್ಲಿ ಈ ದ್ವೀಪದ ಬಹುತೇಕ (ಉತ್ತರದ ಜಾಫ್ನಾ ಮತ್ತು ನೈರುತ್ಯದಂಚನ್ನು ಹೊರತುಪಡಿಸಿ) ಭಾಗಕ್ಕೆ ವಿಸ್ತರಿಸಿಕೊಂಡಿತು. ಈ ಅವಧಿಯಲ್ಲಿ ಕಂಡರಿಸಿದ ೧,೪೪೦ ಶಾಸನಗಳು ಅಂದಿನ ಬಿರುಸಿನ ಚಟುವಟಿಕೆಯನ್ನು ಪ್ರತಿಬಿಂಬಿಸುವುವು.[೧೬]

(೩) ಅಶೋಕನ ಬ್ರಾಹ್ಮೀ ಶಾಸನಗಳಿಗೂ ಆರಂಭಕಾಲದ ಸಿಂಹಳ-ಬ್ರಾಹ್ಮೀ' ಶಾಸನಗಳಿಗೂ ಲಿಪಿಸಾಮ್ಯವಿದ್ದರೂ ಹಲವು ಕುತೂಹಲಕಾರಿ ವ್ಯತ್ಯಾಸಗಳಿವೆ. ಇವುಗಳಲ್ಲಿ ಸುಮಾರು ೩೨ ಶಾಸನಗಳನ್ನು (ಖರೋಷ್ಠೀ ಮತ್ತು ಅರಾಮೈಕ್‌ನಂತೆ) ಬಲದಿಂದ ಎಡಕ್ಕೆ, ೭ ಶಾಸನಗಳನ್ನು ಹಾವಿನ ನಡಿಗೆಯಂತೆ (ಆರಂಭಕಾಲದ ಅಪರೂಪದ ಗ್ರೀಕ್ ಬರಹದಂತೆ), ಉಳಿದವುಗಳನ್ನು ಎಡದಿಂದ ಬಲಕ್ಕೆ ಬರೆಯಲಾಗಿದೆ. ಈ ವೈವಿಧ್ಯತೆ ಕ್ರಿ.ಶ. ೧ನೆಯ ಶತಮಾನದಲ್ಲಿ ಅಂತ್ಯಗೊಂಡು, ಆ ನಂತರ ಕಾಲದ ಎಲ್ಲ ಶಾಸನಗಳೂ ಎಡದಿಂದ ಬಲಕ್ಕೆ ಬರೆಯಲ್ಪಟ್ಟಿವೆ.[೧೭] ಇಷ್ಟೇ ಕುತೂಹಲಕರವಾದ ಮತ್ತೊಂದು ವಿಷಯವೆಂದರೆ, ಆರಂಭಕಾಲದಿಂದಲೇ ಸಿಂಹಳೀಯರು ಬ್ರಾಹ್ಮೀಯನ್ನು ತಮ್ಮ ನೆಲದ (ಇಂಡೋ-ಆರ್ಯನ್ ಮೂಲದ) ಸಿಂಹಳ ಭಾಷೆಗೆ ಅಳವಡಿಸಿಕೊಳ್ಳಲು ಪ್ರಯತ್ನಪಟ್ಟು ಪ್ರಾಕೃತವನ್ನು ಕ್ರಮೇಣ ಹಿಂದಕ್ಕೆ ಸರಿಸಿದ್ದು ಹೀಗೆ ಬ್ರಾಹ್ಮೀಲಿಪಿಯನ್ನು ಬರಮಾಡಿಕೊಂಡು ಅದನ್ನು ತನ್ನ ನುಡಿಗಟ್ಟಿನ ವಾಹನವನ್ನಾಗಿ ಮಾಡಿಕೊಂಡ ಭಾರತೀಯ ಮತ್ತು ಭಾರತೀಯೇತರ ಜನಾಂಗಗಳಲ್ಲಿ ಸಿಂಹಳೀಯರು ಮೊದಲಿಗರಾದರು. ಅಲ್ಲದೆ ಕ್ರಿ.ಶ. ೭ನೆಯ ಶತಮಾನದವರೆಗೂ ಅವ್ಯಾಹತವಾಗಿ ಬ್ರಾಹ್ಮೀ ಬರಹವನ್ನು ಮುಂದುವರಿಸಿ ಇವರು ಇನ್ನೊಂದು ದಾಖಲೆಯನ್ನು ನಿರ್ಮಿಸಿದರು.

(೪) ಸಿಂಹಳ-ಬ್ರಾಹ್ಮೀಗೆ ಕಾರಣ ಪುರುಷ ಅಶೋಕನ ಧರ್ಮ ರಾಯಭಾರಿಯಾದ ಮಹಿಂದ ಎಂಬುದನ್ನು ವಿನಯ ಟೀಕಾಗ್ರಂಥ *'ಸಮಂತಪಾಸಾದಿಕಾ'* ಸ್ಪಷ್ಟಪಡಿಸುವುದು. ಬುದ್ಧಶಾಸನವು ಸಿಂಹಳದಲ್ಲಿ ಭದ್ರನೆಲೆಯನ್ನು ಕಂಡುಕೊಳ್ಳಬೇಕಾದರೆ, ಅಲ್ಲಿಯೇ ಜನಿಸಿದ ವ್ಯಕ್ತಿಯೋರ್ವನು ದೀಕ್ಷೆಪಡೆದು ಸಂಘ ಸೇರಬೇಕು ಮತ್ತು ಅವನ ಮಾತೃಭಾಷೆಯಲ್ಲಿಯೇ ವಿನಯವನ್ನು ಅವನು ಪಠಿಸಬೇಕು, ಎಂದು ಮಹಿಂದನು ಬಯಸಿದನೆಂದು ಈ ಗ್ರಂಥದಲ್ಲಿ ತಿಳಿಸಲಾಗಿದೆ. ಇದರಂತೆ ಅಂದಿನ ಆಳರಸ ದೀಕ್ಷೆ ಪಡೆದುಕೊಂಡು ಸಂಘವನ್ನು ಸೇರಿದನಂತರ ಅನೇಕ ಸಿಂಹಳೀಯರೂ ಸಂಘ ಸೇರಿದರೆಂದು ಹೇಳಲಾಗಿದೆ. ಆರಂಭಕಾಲದ ಸಿಂಹಳ-ಬ್ರಾಹ್ಮೀ ಶಾಸನಗಳಲ್ಲಿಯ ಸಿಂಹಳೀಯ ಹೆಸರುಗಳು ಇದನ್ನು ಬೆಂಬಲಿಸುವುವು.[೧೮] ಇದಾದ ಹಲವು ದಶಕಗಳು ಗತಿಸಿದನಂತರ 'ತಮಿಳುಬ್ರಾಹ್ಮೀ' (ಕ್ರಿ.ಪೂ. ೨ನೆಯ ಶತಕ) ಬಳಕೆಗೆ ಬಂದುದರಿಂದ, ಬಹುಶಃ 'ಸಿಂಹಳ-ಬ್ರಾಹ್ಮೀ'ಯೇ, 'ತಮಿಳು-ಬ್ರಾಹ್ಮಿ'ಗೆ ಸ್ಫೂರ್ತಿ ನೀಡಿತೇನೋ ಅನಿಸುವುದು.

(೫) ಸಿಂಹಪುರದ ವಿಜಯನಾಗಲೀ ಅವನೊಡನೆ ಬಂದವರಾಗಲೀ ಬ್ರಾಹ್ಮೀ ಲಿಪಿಯಲ್ಲಿ ಬರೆದ ಪ್ರಾಕೃತ ಭಾಷೆಯ ಮಡಕೆಗಳನ್ನು ಅನುರಾಧಪುರಕ್ಕೆ ತಂದಿದ್ದರೆ, ಅವು ಅಂದಿನ ಬಂಗಾಳ-ಕಳಿಂಗಾ ಪ್ರದೇಶದಲ್ಲಿ ಪ್ರಚಾರದಲ್ಲಿದ್ದ ಮಾಧ್ಯಮಗಳಾಗಿರಬಹುದೆನ್ನಬಹುದು. ಆದರೆ 'ಅಶೋಕ-ಬ್ರಾಹ್ಮಿ' ಕೂಡಾ ಇದೇ ಮಾರ್ಗವನ್ನು ಹಿಡಿದು ಸಿಂಹಳ ತಲುಪಿತೆಂಬುದಕ್ಕೆ ಹಲವು ತೊಡಕುಗಳಿವೆ.

**ಬ್ರಾಹ್ಮೀ ತುಳಿದ ದಾರಿ:**

ಆರಂಭಕಾಲದ ಸಿಂಹಳ-ಬ್ರಾಹ್ಮೀ ಶಾಸನಗಳು ಇಲ್ಲಿಯವರೆಗೂ ದೊರಕಿರುವುದು ಈ ದ್ವೀಪದ ಉತ್ತರ ಅಥವಾ ಪೂರ್ವ ಭಾಗದಲ್ಲಲ್ಲ, ಪಶ್ಚಿಮಭಾಗದ ಪುತ್ತಳಂ ಜಿಲ್ಲೆಯಲ್ಲಿ. ಅಲ್ಲಿಂದ ಮಹಾವ್ಯೋ ಮತ್ತು ಕಲನಿ ನದಿಪಾತ್ರ ಹಿಡಿದು, ಬಲಗಲ್ ಕೊರಲೆಯಲ್ಲಿ ಮೊದಲು ಸ್ಥಾನ ಪಡೆದುಕೊಂಡು, ಅಲ್ಲಿಂದ (ಉತ್ತರದ ಜಾಫ್ನಾ ಮತ್ತು ನೈರುತ್ಯದಂಚನ್ನು ಹೊರತುಪಡಿಸಿ) ದ್ವೀಪದ ತುಂಬೆಲ್ಲಾ ವ್ಯಾಪಿಸಿಕೊಂಡವು.[೧೯] ಜಾಫ್ನಾ ಪ್ರದೇಶವು 'ಸಿಂಹಳ-ಬ್ರಾಹ್ಮಿ' ಶಾಸನಶೂನ್ಯವಾಗಿರುವುದರಿಂದ ತಮಿಳುನಾಡು ಮತ್ತು ಕೇರಳದಿಂದ ಈ ಲಿಪಿ ದ್ವೀಪವನ್ನು ಮುಟ್ಟಲಿಲ್ಲವೆಂಬುದು ಖಚಿತಗೊಳ್ಳುವುದು. ಕಳಿಂಗಾ ಅಥವಾ ಗೌಡ (ಬಂಗಾಳ) ಪ್ರದೇಶದಿಂದ ಸಮುದ್ರ ತೀರವನ್ನನುಸರಿಸಿ ಬ್ರಾಹ್ಮೀಯನ್ನು ಇಲ್ಲಿಗೆ ತಂದಿದ್ದರೆ ಸಹಜವಾಗಿ ಅದು ಮೊದಲು ಈ ದ್ವೀಪದ ಉತ್ತರ (ಜಾಫ್ನಾ) ಅಥವಾ ಪೂರ್ವ ಭಾಗದಲ್ಲಿ (ಟ್ರಿಂಕೋಮಲೀ, ಬಟ್ಟಿಕೊಲೋ, ಅಂಪಾರ ಜಿಲ್ಲೆಗಳಲ್ಲಿ) ನೆಲೆಕಂಡುಕೊಳ್ಳಬೇಕಿತ್ತು. ಇನ್ನು ಪಶ್ಚಿಮ ಭಾರತದ ಯಾವುದಾದರೊಂದು ಕೇಂದ್ರದಿಂದ ಅದು ಪಶ್ಚಿಮ ಲಂಕಾವನ್ನು ಮುಟ್ಟಿದ್ದರೆ ಅವುಗಳಲ್ಲಿ ಒಂದು ಗಿರಿನಾರ್ (ಗುಜರಾತ್) ಮತ್ತೊಂದು ಸೊಪಾರ (ಮಹಾರಾಷ್ಟ್ರ) ಇನ್ನೊಂದು ಬನವಾಸಿ (ಕರ್ನಾಟಕ) ಮಾತ್ರ ಆಗಿರಲು ಸಾಧ್ಯ.

ಗುಜರಾತಿನ ಗಿರಿನಾರ್ ಅಥವಾ ಮಹಾರಾಷ್ಟ್ರದ ಸೊಪಾರದಿಂದ 'ಅಶೋಕ ಬ್ರಾಹ್ಮೀ' ಸಿಂಹಳವನ್ನು ಮುಟ್ಟಿದ್ದಕ್ಕೆ ಆಧಾರವಾಗಲೀ ಐತಿಹ್ಯವಾಗಲೀ ಇಲ್ಲ. ಗಿರಿನಾರ್ ಮತ್ತು ಕಲ್ಸೀ ಶಾಸನಗಳಲ್ಲಿ ತಾಮ್ರಪರ್ಣಿಯ ಪ್ರಸ್ತಾಪ ಬರುವುದೇನೂ ನಿಜ, ಆದರೆ ಈ ಆಧಾರದ ಮೇಲೆ ಗುಜರಾತು ಮತ್ತು ಉತ್ತರಾಂಚಲಗಳೊಂದಿಗೆ ಈ ದ್ವೀಪದ ಸಂಪರ್ಕವನ್ನು ಕಲ್ಪಿಸಿಕೊಳ್ಳಲಾಗದು. ಇನ್ನು ಬನವಾಸಿಯಿಂದ ಅದು ಬಂದಿರಬಹುದೇ ಎಂಬ ಅನುಮಾನ ಉದ್ಭವಿಸುವುದು. ಬನವಾಸಿಗೆ ಸಂಬಂಧಪಟ್ಟ ಕೆಲವು ಕುತೂಹಲಕಾರಿ ವಿವರಗಳು ಇದನ್ನು ತಳ್ಳಿಹಾಕುವುದಿಲ್ಲ.

ಮೂರನೆಯ ಬೌದ್ಧ ಪರಿಷತ್ ವಿಸರ್ಜನೆಗೊಂಡ ನಂತರ ತನ್ನ ಧರ್ಮಪ್ರಸಾರಕರನ್ನು ಅನೇಕ ಕಡೆ ಅಶೋಕ ಕಳಿಸಿದ್ದನ್ನು ಮಹಾವಂಸದಲ್ಲಿ

ಸ್ಪಷ್ಟಪಡಿಸಲಾಗಿದೆ. ಇದರಲ್ಲಿ ವನವಾಸ ಮತ್ತು ಮಹಿಷಮಂಡಲ ಒಳಗೊಂಡಿದ್ದವು. ಇಲ್ಲಿಂದ ಮಹಿಂದನು ಲಂಕಾದ್ವೀಪವನ್ನು ತಲುಪಿದನೆಂಬುದಕ್ಕೆ ಆಧಾರವಿಲ್ಲ, ಆದರೆ ಅಶೋಕನ ಧರ್ಮಪ್ರಸಾರ ಕಾರ್ಯವು ವನವಾಸದಲ್ಲಿ ಫಲಿಸಿದಷ್ಟು ಬೇರೆಲ್ಲೂ ಫಲಿಸಲಿಲ್ಲವೆಂಬುದಕ್ಕೆ ಸಾಕಷ್ಟು ಆಧಾರಗಳಿವೆ. ಅಶೋಕಪೂರ್ವ ಯುಗದಲ್ಲಿಯೇ ಬನವಾಸಿ ಬೌದ್ಧ ಸಮಾಜದೊಡನೆ ಸಂಪರ್ಕ ಹೊಂದಿತ್ತೆಂಬ ಐತಿಹ್ಯ, ಬನವಾಸಿಯ ಉತ್ಖನನದಲ್ಲಿ ದೊರೆತ ಶಾತವಾಹನಪೂರ್ವಕಾಲದ ಅವಶೇಷಗಳು, ಸಿಂಹಳದ ಘಟನಾವಳಿಗಳಲ್ಲಿ ಬನವಾಸಿಯ ಥೇರ ರಖಿತನ ಮತ್ತು 'ಪಬ್ಬಜ್ಜಾ' ದೀಕ್ಷೆಯ ಪ್ರಸ್ತಾಪ, ಅರಸ ದುತ್ತಗಾಮಿನಿ ಸ್ಥಾಪಿಸಿದ ಸ್ತೂಪದ ಉದ್ಘಾಟನಾ ಸಂದರ್ಭದಲ್ಲಿ ೧೮,೦೦೦ ಬನವಾಸಿಯ ಭಿಕ್ಖುಗಳು ಸಿಂಹಳ ತಲುಪಿದ್ದು, ಫಾಯಿಯಾನ್ ಇಲ್ಲಿ ಗಮನಿಸಿದ ಮಹಿಶಾಸಕ (ಮಹಿಷ = ಮಹಿಷ ಮಂಡಳ) ಮತ್ತು ಅಸ್ಸಕ (ಆಸ್ಮಕ = ಮಹಾರಾಷ್ಟ್ರ) ಸಂಘದ ಪ್ರಭಾವ, ಹೂಯನ್‌ತ್ಸಾಂಗ್ ಈ 'ಕೊಂಕಣಪುರ'ದಲ್ಲಿ ಕಂಡ ಅಶೋಕಸ್ತೂಪ, ಬುದ್ಧ ಕರಂಡಕ, ಮೈತ್ರೇಯ ವಿಗ್ರಹ ಮತ್ತು ಹಲವಾರು ಸಂಘಾರಾಮಗಳು - ಮುಂತಾದವು ಅಶೋಕನ ಮತ್ತು ಆನಂತರದ ಕಾಲದಲ್ಲಿ ಬನವಾಸಿ ಬೌದ್ಧಕೇಂದ್ರವಾಗಿ ಬೆಳೆದ ಬಗೆಯಲ್ಲಿ ಸೂಚಿಸುವುವು. ಈ ಕಾರಣ ಬನವಾಸಿ ಮತ್ತು ಮಹಿಷಮಂಡಲವನ್ನು ತಲುಪಿದ (ಮಹದೇವ ಮತ್ತು ರಖಿತನ) ಧರ್ಮಪ್ರಚಾರಕ ತಂಡವು ಇಲ್ಲಿಂದ ಇನ್ನೂ ಮುಂದುವರಿದು ಸಿಂಹಳವನ್ನು ತಲುಪಿರಬಾರದೇಕೆ? ಎಂಬ ಅನುಮಾನ ಉಂಟಾಗುವುದು.

ಸಿಂಹಳ-ಬ್ರಾಹ್ಮೀ ಶಾಸನಗಳಲ್ಲಿ ಮಾಗಧಿಯ ಪ್ರಭಾವ ಅತ್ಯಲ್ಪವಾಗಿದ್ದು ವಾಯವ್ಯ ಪ್ರದೇಶದ ಪ್ರಾಕೃತ (ಉದಾ. ದೀರ್ಘಸ್ವರಾಕ್ಷರ ಮತ್ತು ಸಂಯುಕ್ತಾಕ್ಷರ, ಆ, ಐ, ಔ, ಈ, ಊ ಬಳಕೆಯಿಲ್ಲದಿರುವುದು) ಪ್ರಭಾವ ಎದ್ದುಕಾಣುವುದು. ಖರೋಷ್ಠೀ ಮತ್ತು ಅರಾಮೈಕ್ ಬರಹದಂತೆ ಗಣನೀಯ ಸಂಖ್ಯೆಯ ಶಾಸನಗಳನ್ನು ಇಲ್ಲಿ ಬಲದಿಂದ ಎಡಕ್ಕೆ ಬರೆದಿರುವುದು ಇಷ್ಟೇ ಎದ್ದುಕಾಣುವ ಮತ್ತೊಂದು ವಿಷಯ. ಮಹಿಂದ ಸಿಂಹಳವನ್ನು ತಲುಪಿದಾಗ, ಅವನ ಸಂಘದಲ್ಲಿ ಭಾರತದ ನಾನಾ ಪ್ರದೇಶದವರಿದ್ದು ಅವರಲ್ಲಿ ಕೆಲವರು (ವಾಯವ್ಯ ಪ್ರದೇಶದ) ಖರೋಷ್ಠೀಗಳೂ ಸೇರಿಕೊಂಡಿದ್ದರೆಂದು ತೋರುವುದು. ಇವರು ಬ್ರಹ್ಮಗಿರಿ ಮತ್ತು ಯರ್ರಗುಡಿಯನ್ನು ಹತ್ತಾರು ವರ್ಷಗಳ ಮುಂಚೆಯೇ ತಲುಪಿ ಅಲ್ಲಿ ಕಿಬ್ಬಂಡೆ ಶಾಸನಗಳನ್ನು ಕೊರೆದಿದ್ದರೆಂಬುದಕ್ಕೆ ಸ್ಪಷ್ಟ ಆಧಾರಗಳಿವೆ.[೨೦] ಇವರಲ್ಲಿ ಕೆಲವರು ಮಹಿಂದನೊಡನೆ ಸಿಂಹಳವನ್ನು ತಲುಪಿದ ಸಂಭವನೀಯತೆಯನ್ನು ತಳ್ಳಿಹಾಕುವಂತಿಲ್ಲ. ಆರಂಭಕಾಲದಲ್ಲಿ ಈ ಖರೋಷ್ಠೀಗಳು ಬಲದಿಂದ ಎಡಕ್ಕೆ ಸಿಂಹಳ-ಬ್ರಾಹ್ಮೀ ಶಾಸನಗಳನ್ನು ಕಂಡರಿಸಿದ್ದರೆ ಅದರಲ್ಲಿ ಆಶ್ಚರ್ಯಪಡಬೇಕಾದುದೇನೂ ಇಲ್ಲ.

ಮೊದಲ ತಲೆಮಾರಿನ ಭಾರತದ ಭಿಕ್ಖುಗಳನ್ನು ಸಿಂಹಳದಲ್ಲಿ ನೆಲೆಸಲು ಕಂಟಕ ಚತಿಯ ಬಳಿ ೬೮ ಗುಹೆಗಳನ್ನು ಸಿದ್ಧಗೊಳಿಸಬೇಕಾಯಿತೆಂದು ಮಹಾವಂಸ ತಿಳಿಸುವುದು.[೨೦] ಇವರು ಬೇರೆ ಬೇರೆ ನುಡಿಗಟ್ಟಿನವರಾಗಿದ್ದುದರಿಂದ, ಅವರೆಲ್ಲರೂ ಒಂದೇ (ನೆಲದ) ಭಾಷೆಯನ್ನು ರೂಢಿಸಿಕೊಂಡು, ವೆಸ್ಸಮುನಿಯ ಮಾರ್ಗದರ್ಶನದಲ್ಲಿ ಸಿಂಹಳ-ಬ್ರಾಹ್ಮೀಯನ್ನು ಅಭಿವೃದ್ಧಿಪಡಿಸಬೇಕೆಂಬುದು ಮಹಿಂದನ ಅಭೀಪ್ಸೆಯಾಗಿತ್ತೆಂದು ತೋರುವುದು.

**ಬನವಾಸಿಯ ಪಾತ್ರ?**

ಅಶೋಕನ ಕಾಲದಲ್ಲಿ ಆರಂಭಗೊಂಡ ಈ ಎರಡು ದೇಶಗಳ ಕೊಡು-ಕೊಳ್ಳುವಿಕೆ ಕನಿಷ್ಠ ಅರ್ಧಸಹಸ್ರಮಾನ ಕಾಲ ಅವ್ಯಾಹತವಾಗಿ ಮುಂದುವರಿಯಿತೆನ್ನುವುದರಲ್ಲಿ ಅನುಮಾನವಿಲ್ಲ. ಈ ಕಾಲಾವಧಿಯಲ್ಲಿ ಸಿಂಹಳ ಹೆಚ್ಚು ಸಂಪರ್ಕವಿಟ್ಟುಕೊಂಡದ್ದು ದಖ್ಖಣದೊಡನೆ (ಪ್ರಧಾನವಾಗಿ ಅಮರಾವತಿ, ನಾಗಾರ್ಜುನಕೊಂಡ, ಬನವಾಸಿ, ಮುಂ), ತಮಿಳಗಂನೊಡನಲ್ಲ. ಈ ಕಾಲದ ಭಾಷಾ ವಿನಿಮಯದ ಸಮಗ್ರ ಅಭ್ಯಾಸವಿನ್ನೂ ಆಗಬೇಕಾಗಿರುವುದರಿಂದ, ಅದರ ಪರಿಣಾಮ ಮತ್ತು ಪ್ರಭಾವದ ಬಗ್ಗೆ ಈಗ ಹೆಚ್ಚು ತಿಳಿಸಲು ಸಾಧ್ಯವಾಗುತ್ತಿಲ್ಲ. ಆದರೆ ಕೆಲವು ಕುತೂಹಲಕಾರೀ ವಿವರಗಳ ಕಡೆ ನಾನು ಗಮನ ಹರಿಸ ಬಯಸುವೆನು:

(ಅ) ಕ್ರಿ.ಪೂ. ೩ನೆಯ ಶತಮಾನದಲ್ಲಿ (೨೩೭-೨೧೫) ಅನುರಾಧಪುರದಿಂದ ಆಳುತ್ತಿದ್ದ ಸೂರತಿಸ್ಸನನ್ನು 'ತಮಿಳಗಂ'ನ ಸೇನ ಮತ್ತು ಗುತ್ತಕರೆಂಬ ವಣಿಕರು ಸೋಲಿಸಿ ಸುಮಾರು ೨ ದಶಕಕಾಲ ಆಳಿದರೆಂದು ಸಿಂಹಳದ ಘಟನಾವಳಿಗಳು ತಿಳಿಸುವುವು. ದಕ್ಷಿಣ ಭಾರತದ ಈ ಸೇನ ಮತ್ತು ಗುತ್ತಕರು ಕಡಲ ವ್ಯಾಪಾರಿಗಳಾಗಿದ್ದರೆಂದೂ ಬೌದ್ಧ ಧರ್ಮದ ವಿರೋಧಿಗಳಾಗಿರಲಿಲ್ಲವೆಂದೂ ಪುಣ್ಯತೀರ್ಥದಲ್ಲಿ ಮಿಂದರೆ ಪಾಪ ನಾಶವಾಗುವುದೆಂಬುದನ್ನು ನಂಬಿದ್ದರೆಂದೂ ವರ್ಣಿಸಲಾಗಿದೆ. ಅಲ್ಲದೆ ಅನುರಾಧಪುರದಿಂದ ಅನತಿ ದೂರದಲ್ಲಿ ಹರಿಯುತ್ತಿದ್ದ 'ಕದಂಬನದಿ'ಯನ್ನು ತಮ್ಮ ರಾಜಧಾನಿಯೆಡೆ ಅವರು ತಿರುಗಿಸಿಕೊಂಡರೆಂದು ತಿಳಿದು ಬರುವುದು. ಈ ಸೇನ-ಗುತ್ತಕರು ಯಾರು ಎಂಬುದು ಇತ್ಯರ್ಥವಾಗಿಲ್ಲ. ಈ ಹೆಸರಿನ ಚಿಟ್ರಸರನ್ನಾಗಲೀ ವಣಿಜಿಗರನ್ನಾಗಲೀ ಶಂಗಂ ಕಾವ್ಯದಲ್ಲಿ ಹೆಸರಿಸಿಲ್ಲ-ಕಾರಣ ಇವರು ತಮಿಳಗಂ ಹೊರವಲಯದ ವಡುಗರಾಗಿರಬಹುದೆನಿಸುವುದು. ಶಂಗಂ ಕಾಲದಲ್ಲಿ ಕಟಂಬು (ಕದಂಬ)ಗಳು ಪ್ರಸಿದ್ಧ ಕಡಲ ದೊರೆಗಳಾಗಿದ್ದರು. ಇವರನ್ನು ಕಡಲ್ಗಳ್ಳರೆಂದು ಶಂಗಂ ಕವಿಗಳು ಆಗಾಗ್ಗೆ ಪ್ರಸ್ತಾಪಿಸಿ, ಚೇರನ್ ಚೆಂಗುಟ್ಟುವನ್ ಇವರನ್ನು ನಿಗ್ರಹಿಸಲು ಮೇಲಿಂದಮೇಲೆ ಹೋರಾಡಬೇಕಾದುದನ್ನು ಪದಿಱ್ರುಪತ್ತು ಮತ್ತು *ಶಿಲಪ್ಪದಿಗಾರ*ದಲ್ಲಿ ತಿಳಿಸಲಾಗಿದೆ.[೨೨] ಈ ಕಡಲಾಧಿಪತಿಗಳು ಅನುರಾಧಪುರದ ಅರಿಪೋ

ನದಿಮುಖದಲ್ಲಿ ತಮ್ಮ ನೆಲೆಯನ್ನು ಗುರುತಿಸಿಕೊಂಡಿದ್ದರೆಂದು ಮತ್ತು ಇದನ್ನು ಅಂದು ಕದಂಬನದಿಯೆಂದು ಕರೆಯಲಾಗುತ್ತಿತ್ತೆಂದು ಇತಿಹಾಸಕಾರ ರಸನಾಯಗಂ ಅಭಿಪ್ರಾಯ ಪಟ್ಟಿರುವರು.[೨೩] ಸೆನ(ಕರ್ನಾಟಕದ ಸೇನ?) ಮತ್ತು ಗುತ್ತಕರು ಕದಂಬ ವಂಶಜರಾಗಿದ್ದರೋ ಇಲ್ಲವೋ ತಿಳಿಯದು, ಆದರೆ ಅವರು ಕದಂಬರನ್ನು ಗೌರವಿಸುತ್ತಿದ್ದರೆಂಬುದರಲ್ಲಿ ಮತ್ತು ಸಮುದ್ರ ವ್ಯಾಪಾರಿಗಳಾಗಿದ್ದರೆಂಬುದರಲ್ಲಿ ಅನುಮಾನವಿಲ್ಲ. ಇದು ಏನೇ ಇರಲಿ, ಈ ಕಾಲದಲ್ಲಿ ಕದಂಬರು ಸಿಂಹಳದೊಡನೆ ವಾಣಿಜ್ಯ ಸಂಬಂಧವನ್ನು ಹೊಂದಿ, ಅಲ್ಲಿ ಅವರ ಅಧಿಕಾರವನ್ನು ವಿಸ್ತರಿಸಿಕೊಳ್ಳಲು ಶ್ರಮಿಸಿದ್ದರೆ ಮತ್ತು ತಮಿಳರ ವಿರುದ್ಧ ಕಾದಾಡಬೇಕಾದ ಪ್ರಸಂಗ ಬಂದಿದ್ದರೆ ಆಶ್ಚರ್ಯಪಡಬೇಕಿಲ್ಲ. ಕನ್ನಡ ಮತ್ತು ವಟ್ಟೆಳುತ್ತು ಶಾಸನಗಳಿರುವ ೫ನೆಯ ಶತಮಾನದ (ಚಿತ್ರದುರ್ಗ ಜಿಲ್ಲೆಯ)ತಮಟಕಲ್ಲು ವೀರಗಲ್ಲು ಸೂಚಿಸುವ ಈ ಬಗೆಯ ಕಾದಾಟವನ್ನು ಇಲ್ಲಿ ನಾವು ಜ್ಞಾಪಿಸಿಕೊಳ್ಳಬಹುದು.

(೨) ಕದಂಬರಂತೆ 'ಮೊರಿಯ'ರೂ ಸಿಂಹಳದೊಡನೆ ಸಂಬಂಧವಿಟ್ಟುಕೊಂಡ ಬಗ್ಗೆ ಶಾಸನಿತ ಆಧಾರಗಳು ದೊರೆಯುವುವು. ೫ನೆಯ ಶತಮಾನದಾರಂಭದಲ್ಲಿ ತಮಿಳರು ಕೆಲ ಕಾಲ ಸಿಂಹಳವನ್ನು ಆಳಿದಾಗ ಅವರನ್ನು ಅಲ್ಲಿಂದ ಹೊರಹಾಕಿದವನು 'ಮೊರಿಯ' ವಂಶದ ಧಾಸುಸೆನ ('ಸೆನ' ಪದವನ್ನು ಗಮನಿಸಿ). ಇವನ ಪುತ್ರ ಕಸ್ಸಪನೇ ಪ್ರಖ್ಯಾತ ಸೀಗಿರಿಯ ರೂವಾರಿ. ಧಾಸುಸೆನನು ತನ್ನ ಜೀವನವನ್ನು ಸ್ವಇಚ್ಛೆಯಿಂದ (ಸಮಾಧಿಮರಣ?) ಅಂತ್ಯಗೊಳಿಸಿಕೊಂಡನು.[೨೪] ಶಂಗಂ ಕವಿಗಳು 'ಮೊರಿಯ' ಮತ್ತು 'ವಂಬಮೊರಿಯ'ರನ್ನು ಹಲವು ಬಾರಿ ಉಲ್ಲೇಖಿಸಿರುವರು. ಆದರೆ ಕ್ರಿ.ಶ. ೫ನೆಯ ಶತಮಾನದ ಈ ಮೊರಿಯರು ಕೊಂಕಣ ಮೌರ್ಯರಾಗಿರಲು ಸಾಧ್ಯ. ಅಂದರೆ ಕದಂಬರಂತೆ ಪಶ್ಚಿಮ ಕರಾವಳಿಯ ಪ್ರದೇಶದವರಾದ ಇವರೂ ಸಿಂಹಳದೊಡನೆ ಸಂಪರ್ಕ ಹೊಂದಿದ್ದರೆಂದು ಭಾವಿಸಬೇಕಾಗುವುದು.

(೩) ೨-೪ನೆಯ ಶತಮಾನಗಳ ಸಿಂಹಳ-ಬ್ರಾಹ್ಮೀ ಶಾಸನಗಳಲ್ಲಿ ಬರುವ ಹೆಂಗಸರು ತಮ್ಮ ಪತಿಯ ಹೆಸರಿನೊಡನೆ 'ಅಬ್ಬೆ' ಪ್ರತ್ಯಯವನ್ನು ಸೇರಿಸಿ ಕರೆದುಕೊಂಡಿರುವುದು ತುಂಬಾ ಕೂತೂಹಲಕರ. ಪುಸ್ಸಮಡದಿ 'ಪುಸಬಿ' ಎಂದು, ಕಾದನ ಹೆಂಡತಿ 'ಕಾದಬಿ' ಎಂದು ಕರೆದುಕ್ಕೊಂಡಂತೆ, ಮಿತಬಿ, ಚಿತಬಿ, ಅಮಲಬಿಯರು ಕರೆದುಕೊಂಡದ್ದು ಈ ಕಾಲದ ಶಾಸನಗಳಲ್ಲಿ ದೊರೆಯುವುವು. ಆರಂಭಕಾಲದಲ್ಲಿ ಅರಸಿಯರಿಗೆ ಮಾತ್ರ ಸೀಮಿತವಾಗಿದ್ದ ಈ ವಿಶೇಷಣವು ನಂತರ ಪ್ರತಿಷ್ಠಿತ ಮನೆತನದ ಹೆಂಗಸರಿಗೂ ಕಾಲಾನಂತರ ಸಾಮಾನ್ಯ ಗೃಹಿಣಿಯರಿಗೂ ವಿಸ್ತರಿಸಿತೆಂದು ಕಾಣುವುದು.[೨೫] ಈ 'ಅಬು', 'ಅಂಬು', 'ಅಬ್ಬೆ', 'ಬೆ' ಪ್ರತ್ಯಯಗಳು ಇಂದಿಗೂ ಬನವಾಸಿ ಪ್ರದೇಶವನ್ನು ಒಳಗೊಂಡು ಉತ್ತರ ಕರ್ನಾಟಕದಲ್ಲೆಲ್ಲಾ ಪ್ರಸಾರದಲ್ಲಿದ್ದು, ಸಾಮಾನ್ಯರ ನುಡಿಗಟ್ಟಿನ ಭಂಡಾರವನ್ನು ಸೇರಿ

ಕೊಂಡಿವೆ. ಈ ಪದದ ಪೂರ್ವೇತಿಹಾಸವನ್ನು ಶೋಧಿಸಿ ಇದು ಸಿಂಹಳದಲ್ಲಿ ಮೊದಲು ಪ್ರಚಾರಕ್ಕೆ ಬಂದ ಬಗೆಯನ್ನೂ ಆ ನಂತರ ಕಾಲದಲ್ಲಿ ಕರ್ನಾಟಕದಲ್ಲಿ ವಿಶೇಷವಾಗಿ ಗಟ್ಟಿಗೊಳ್ಳಲು ಇದ್ದ ಕಾರಣಗಳನ್ನು ನಾವು ತಿಳಿದುಕೊಳ್ಳಬೇಕಾಗಿದೆ.

## ತಮಿಳಗಂ ಮತ್ತು ಬ್ರಾಹ್ಮೀಲಿಪಿ:

ಒಂದು ಪ್ರಬುದ್ಧ ಮತ್ತು ಸಾಹಿತ್ಯಿಕ ಭಾಷೆಯಾಗಿ ಕ್ರಿಸ್ತಪೂರ್ವ ಶತಕಗಳಲ್ಲಿ ತಮಿಳು ಹೊರಹೊಮ್ಮಿರಲು ಸಾಧ್ಯ, ಆದರೆ ಎಷ್ಟು ಶತಮಾನಗಳ ಕಾಲ ಅದು ಮೌಖಿಕವಾಗಿ ಮುಂದುವರಿದಿತ್ತೆಂಬುದನ್ನು ನಿರ್ಧರಿಸಲು ತೊಡಕುಗಳಿವೆ. ಕ್ರಿ.ಪೂ. ೩–೨ನೆಯ ಶತಮಾನಗಳಲ್ಲಿ ತಮಿಳರು ಶ್ರೀಲಂಕೆಯೊಡನೆ ವಾಣಿಜ್ಯ ಮತ್ತು ರಾಜಕೀಯ ಸಂಪರ್ಕವನ್ನಿಟ್ಟುಕೊಂಡದ್ದನ್ನು ಅಲ್ಲಗಳೆಯುವಂತಿಲ್ಲ, ಆದರೆ ಅವರು ಈ ಕಾಲದಲ್ಲಿ ತಮಿಳನ್ನಾಗಲೀ ಸಿಂಹಳೀಯವನ್ನಾಗಲೀ ಬಳಸಿ ಸಿಂಹಳದಲ್ಲಿ ಒಂದೂ ಶಾಸನವನ್ನು ಹೊರಡಿಸಲಿಲ್ಲವೆಂಬುದು ಗಮನಾರ್ಹ. ಆರಂಭಕಾಲದ ಸಿಂಹಳ-ಬ್ರಾಹ್ಮೀ ಶಾಸನಗಳಲ್ಲಿ ಪ್ರಾಕೃತದ ಪ್ರಭಾವವನ್ನು ಗುರುತಿಸಲಾಗಿದೆಯೇ ಹೊರತು, ಸಂಸ್ಕೃತ, ಪಾಲಿ ಮತ್ತು ತಮಿಳಿನ ಪ್ರಭಾವವನ್ನಲ್ಲ. ತಮಿಳು ಮೂಲದ ಖದುದ್ದಪಾರಿಂದನು ಅನುರಾಧಪುರದಿಂದ ಕೆಲವು ಕಾಲ ೫ನೆಯ ಶತಮಾನದಲ್ಲಿ ಆಳಿದಾಗ, ಅವನ ಅರಸಿ ಸಿಂಹಳ-ಬ್ರಾಹ್ಮೀಯಲ್ಲಿ ಶಾಸನಗಳನ್ನು ಹೊರಡಿಸಿದಳಾಗಲಿ, ತಮಿಳಿನಲ್ಲಲ್ಲ. ಬ್ರಾಹ್ಮೀಯಿಂದ ಕ್ರಮೇಣ ಮುಕ್ತಗೊಳ್ಳುತ್ತಾ ಸಿಂಹಳಲಿಪಿ ಸ್ವಾತಂತ್ರ್ಯ ಪಡೆದುಕೊಂಡ ನಂತರ ಮಾತ್ರ ಪಲ್ಲವ ಗ್ರಂಥ ಮತ್ತು ಸಂಸ್ಕೃತ ಶಾಸನಗಳು ಸಿಂಹಳದಲ್ಲಿ ಬಳಕೆಗೆ ಬರತೊಡಗಿದವು, ಅಲ್ಲದೆ ಇದೇ ಕಾಲದ ಬಾದಾಮಿ ಚಾಳುಕ್ಯರ ಶಾಸನಗಳ ಪ್ರಭಾವವನ್ನೂ ಇಲ್ಲಿ ಗುರುತಿಸಲಾಗಿದೆ.[೨೬] ಇದು ಏನೇ ಇರಲಿ, ಈ ಕಾಲದಲ್ಲಿ ಒಂದು ತಮಿಳು ಶಾಸನವನ್ನೂ ಶ್ರೀಲಂಕೆಯಲ್ಲಿ ಕಾಣದಿರುವುದು, ತಮಿಳು ಮೂಲದ ಪದಗಳು ಇಲ್ಲವೆನ್ನುವಷ್ಟು ಅಪರೂಪವಾಗಿ ಸಿಂಹಳದ ಶಾಸನಗಳಲ್ಲಿ ೮ನೆಯ ಶತಮಾನದ ನಂತರವೂ ಕಾಣುವುದು ತುಂಬಾ ಕುತೂಹಲಕಾರಕ.

## ಶಂಗಂ ಕಾವ್ಯದ ನಂದ ಮತ್ತು ಮೌರ್ಯರು:

ಶಂಗಂ ಕವಿಗಳು ನಂದರನ್ನು ಜ್ಞಾಪಿಸಿಕೊಂಡರೂ ತಮಿಳಗಂನೊಡನೆ ಅವರನ್ನು ಪ್ರಸ್ತುತಗೊಳಿಸಿಕೊಳ್ಳುವುದಿಲ್ಲ. 'ವೇಲ್‌ಪೋರ್ ನಂದರ್' ಅಂದರೆ 'ಸುಪ್ರಸಿದ್ಧ ನಂದರು' ಎಂದು ಅವರನ್ನು ಗುರುತಿಸಿ, ಸಂಪದ್ಭರಿತ ಪಾಟಲೀಪುತ್ರದಿಂದ ಅವರು ಆಳುತ್ತಿದ್ದುದನ್ನೂ ಗಂಗಾನದಿಯಲ್ಲಿ ಸಂಗ್ರಹಿಸಿಟ್ಟ ಅವರ ಅಪಾರ ನಿಧಿಯನ್ನೂ ಕವಿ ಮಾಮೂಲನಾರ್ ಉಲ್ಲೇಖಿಸುವನು.[೨೭] ನಂದರನ್ನು ದೂರದಿಂದಲೇ ಕಂಡ ಈ ಕವಿ ಮೌರ್ಯರು ತಮಿಳಗಂ

ನುಗ್ಗಲು ಪ್ರಯತ್ನಿಸಿದ್ದನ್ನು ಕಣ್ಣಾರೆ ಕಂಡವನೆಂಬಂತೆ ವರ್ಣಿಸಿರುವನು. ಅಪಾರ ಸೈನ್ಯದೊಡನೆ ಮೌರ್ಯರು ತಮಿಳಗಂ ಕಡೆ ಬಂದುದನ್ನೂ, ಈ ಸೇನಾ ಮುಂಚೂಣಿಯಲ್ಲಿ ವಡುಗರು ನಿಂತು ಅವರಿಗೆ ಮಾರ್ಗದರ್ಶನ ಮಾಡಿದ್ದನ್ನೂ ತಮ್ಮ ಯುದ್ಧ ಯೋಜನೆಗೆ ಸಹಕಾರ ನೀಡದ ಮೋಹೂರ್ ಮುಂತಾದ ಗಡಿನಾಡ ನಾಯಕರನ್ನು ಸದೆಬಡಿಯಲು ಅವರು ಪ್ರಯತ್ನಿಸಿದ್ದನ್ನೂ ಈ ಕವಿ ವಿವರಿಸಿರುವನು.

'ಆಕಾಶವನ್ನು ಚುಂಬಿಸುವ ದುರ್ಗಮ ಗಿರಿಪ್ರದೇಶವನ್ನು ದಾಟಲು ಮೌರ್ಯರು ಸದೃಢ ರಥಗಳನ್ನು ತಂದರು; ಧ್ವಜಗಳಿಂದ ಅಲಂಕಾರಗೊಂಡಿದ್ದ ಅವುಗಳ ಚಕ್ರಗಳು ಉರುಳಿದೆಡೆಯಲ್ಲೆಲ್ಲಾ ಹೊಸಜಾಡು ಮಾಡಿಕೊಂಡು ಮುನ್ನುಗ್ಗಿದವು. ಫಳಫಳ ಹೊಳೆಯುವ ನದಿ ಝುರಿಗಳ ಈ ಗುಡ್ಡಗಾಡಿನಲ್ಲಿ ಹೆಬ್ಬುಲಿಯೊಂದನ್ನು ತನ್ನ ಧವಳದಂತದಲ್ಲಿ ಆನೆ ಬಂಧಿಸಿತ್ತು; ಈ ಬಂಧನದಿಂದ ತಪ್ಪಿಸಿಕೊಳ್ಳಲು ಆ ಹುಲಿ ಸೆಣೆಸಾಡಿದಾಗ ಅದನ್ನು ಮತ್ತೊಮ್ಮೆ ನೆಲಕ್ಕೊತ್ತಿ ಜಜ್ಜಿ ಗರ್ವದಿಂದ ತೇಗದ ಕಾಡಿನೆಡೆ ಧಾವಿಸಿತು' ಎಂದು ಒಂದೆಡೆ ಮಾಮೂಲಣಾರ್ ಬಣ್ಣಿಸುವನು.[೨೮] ಮೌರ್ಯರನ್ನು 'ವಂಬ' ಪೂರ್ವಪ್ರತ್ಯಯದಿಂದ ಶಂಗಂ ಕವಿಗಳು ಕೆಲವು ಬಾರಿ ಹೆಸರಿಸುವರು.[೨೯] 'ವಂಬ' ಎಂದರೆ 'ಹೊಸಬರು', 'ಹೊರಗಿನವರು', 'ಪರದೇಶಿಗರು', 'ದಾರಿಹೋಕರು', 'ಕದನಪ್ರಿಯರು' ಎಂಬ ಅರ್ಥಗಳನ್ನು ಕೊಡಲಾಗಿದೆ. ಮೌರ್ಯರ ನೆರವಿಗೆ ನಿಂತ ಕೋಶರನ್ನು ಬೆಂಬಲಿಸಲು ಅವರ ಶತ್ರುಗಳಾದ ಮೋಹೂರ್ ವಿರುದ್ಧ ಧಾವಿಸಿ ಬಂದುದನ್ನೂ ಈ ಕವಿ ಇನ್ನೊಂದೆಡೆ ವಿವರಿಸುವನು. ಬಿಲ್ಲು ಕಾಳಗದಲ್ಲಿ ಪ್ರಸಿದ್ಧರಾದ ವಡುಗರು ಮೌರ್ಯಸೈನ್ಯದ ಮುಂಚೂಣಿಯಲ್ಲಿ ನಿಂತು ಅದಕ್ಕೆ ಮಾರ್ಗದರ್ಶನ ಮಾಡುತ್ತಿದ್ದುದನ್ನೂ ಅವನು ಉಲ್ಲೇಖಿಸುವನು.[೩೦] ಬಹುಶಃ ಇಂತಹ ಒಂದು ಸಂದರ್ಭದಲ್ಲಿ 'ಪಾಟಿ' ಎಂಬ ನಾಯಕನ ಕೋಟೆಗೆ ಚೋಳ ಲಗ್ಗೆಹಾಕಿ, ವಂಬವಡುಗರ ತಲೆ ತೆರದು ಅವನ್ನು ನೆಲದ ಮೇಲೆ ಹೊದಿಸಿದಾಗ, ದಂತ ಕತ್ತರಿಸಿದ ಆನೆಗಳ ರುಂಡಗಳನ್ನು ಹೊದಿಸಿದಂತೆ ಅದು ಕಾಣುತ್ತಿತ್ತೆಂದು ಕವಿ ಇಡೈಯನ್ ಶೇಂದನ್ ಕೊಱ್ಱನಾರ್ ಕೊಟ್ಟಿರುವ ಚಿತ್ರಕ್ಕೂ ಮೌರ್ಯರೊಡನೆ ಕಾದಾಡಿದ ರಣರಂಗದ ಚಿತ್ರಕ್ಕೂ ಏನಾದರೂ ಸಂಬಂಧ ವಿರುವುದೇನೋ ಎಂಬ ಕುತೂಹಲ ಉಂಟಾಗುವುದು.[೩೧]

ದಕ್ಷಿಣದಂಚಿನ ಪೊದಿಯ ಬೆಟ್ಟದವರೆಗೂ ಮೌರ್ಯರು ದಾಳಿಮಾಡಿದರೆಂಬ ಒಂದು ಅಭಿಮತವಿದೆ. ಆದರೆ ಇದಕ್ಕೆ ಶಂಗಂ ಸಾಹಿತ್ಯದಲ್ಲಿ ಮನ್ನಣೆ ದೊರೆಯುವುದಿಲ್ಲ. ಒಂದು ವೇಳೆ ಇದು ನಿಜವಾಗಿದ್ದರೆ ತಮಿಳು ರಾಜಕೀಯ ಶಕ್ತಿಗಳು ಈ ದಾಳಿಯಿಂದ ಎಚ್ಚೆತ್ತು, ತಮ್ಮ ಸಂಘಟನೆಯನ್ನು ಬಲಪಡಿಸಿಕೊಂಡು, ಮೌರ್ಯರನ್ನು ತಮಿಳಗಂನಿಂದ ಹೊರಹಾಕಿದ್ದಲ್ಲದೆ ಮುಂದೆಂದೂ ಅವರು ಅಲ್ಲಿ ಕಾಲಿಡದಂತೆ ಕಟ್ಟೆಚ್ಚರ ವಹಿಸಿದರೆಂದು

ಕಾಣುವುದು. ಇದನ್ನು ಪ್ರತಿಪಾದಿಸಲು ಕ್ರಿ.ಪೂ. ೨ನೆಯ ಶತಮಾನದ ಕಳಿಂಗ ಖಾರವೇಳನ ಹಾತಿಗುಂಫ ಶಾಸನ ನೆರವಿಗೆ ಬರುವುದು. ೧೧೩ ವರ್ಷಕಾಲ ಅಸ್ತಿತ್ವದಲ್ಲಿದ್ದ 'ತ್ರಮಿಕದೇಶ ಸಂಘತಮ್' ಎಂಬ ಸೇನಾ ಒಕ್ಕೂಟವನ್ನೂ ಇದರಿಂದ ಕಳಿಂಗಾ ರಾಜ್ಯಕ್ಕೆ ಸದಾ ಇದ್ದ ವಿಪತ್ತನ್ನೂ ಈ ಶಾಸನದಲ್ಲಿ ಸ್ಪಷ್ಟವಾಗಿ ವಿವರಿಸಲಾಗಿದೆ.[೨] ಅಂದರೆ ಅಶೋಕನು ಕಳಿಂಗೆಯನ್ನು ಜಯಿಸಿ, ಅಲ್ಲಿಂದ ಸುವರ್ಣಗಿರಿಯನ್ನು ಯಶಸ್ವಿಯಾಗಿ ತಲುಪಿದಾಗ, ತಮಿಳರು ಒಂದು ಸೇನಾ ಒಕ್ಕೂಟವನ್ನು ನಿರ್ಮಿಸಿಕೊಂಡು ಮೌರ್ಯರನ್ನು ಎದುರಿಸಲು ಸನ್ನದ್ಧರಾದರೆಂದು ಭಾವಿಸಬಹುದು.

**ತಮಿಳಗಂ ತಲುಪಿದ ಲಿಪಿ:**

ಆರಂಭಕಾಲದ ತಮಿಳುನಾಡಿನ ಬ್ರಾಹ್ಮೀ ಶಾಸನಗಳನ್ನು ಮತ್ತು ತಮಿಳು ಸಾಹಿತ್ಯವನ್ನು ಆಧಾರವನ್ನಾಗಿಸಿಕೊಂಡು ನೋಡಿದರೆ, ಅಶೋಕನ (ರಾಜ)ನೀತಿಗಾಗಲೀ ಧರ್ಮಕ್ಕಾಗಲೀ ತಮಿಳಗಂನಲ್ಲಿ ಎಳ್ಳಷ್ಟೂ ಎಡೆಸಿಕ್ಕಲಿಲ್ಲವೆಂದೆನಿಸುವುದು. ಈ ಕಾರಣದಿಂದಾಗಿ ದಕ್ಷಿಣಭಾರತ ಮತ್ತು ಶ್ರೀಲಂಕೆಯನ್ನು ತಲುಪಿದ ಅಶೋಕಬ್ರಾಹ್ಮೀ ಲಿಪಿ ತಮಿಳಗಂ ತಲುಪದಾಯಿತು.

ಕ್ರಿ.ಪೂ. ಸುಮಾರು ೨ನೆಯ ಶತಮಾನದಲ್ಲಿ ಬ್ರಾಹ್ಮೀ ಲಿಪಿ ತಮಿಳಗಂನ್ನು ತಲುಪಿದ್ದು ಕರ್ನಾಟಕ ಮೂಲದಿಂದ. ಅಂದರೆ ಭದ್ರಬಾಹು-ಚಂದ್ರಗುಪ್ತರೊಡನೆ ಬಂದ ಜೈನರು ಕರ್ನಾಟಕದಲ್ಲಿ ನೆಲಸಿ ಸುಮಾರು ಒಂದು ಶತಮಾನಕ್ಕೂ ಹೆಚ್ಚು ಕಾಲದನಂತರ ಈ ಮಾಧ್ಯಮಗಳು ತಮಿಳಗಂ ತಲುಪಿದವು ಎಂದು ಅರ್ಥ. ಜೈನ ಸಂಘವನ್ನು ಅಲ್ಲಿಗೆ ಮೊಟ್ಟಮೊದಲಬಾರಿಗೆ ಕೊಂಡೊಯ್ದವನು ಭದ್ರಬಾಹು ಶಿಷ್ಯ ವಿಶಾಖಮುನಿ ಎಂಬುದನ್ನು ಒಂದು ಜೈನ ಐತಿಹ್ಯ ತಿಳಿಸುವುದು.

ಕ್ರಿ.ಪೂ. ೨ನೆಯ ಶತಮಾನದ ತಮಿಳಗಂನಲ್ಲಿ ದೊರೆತ ಅತ್ಯಂತ ಪುರಾತನ ಬರಹಗಳೆಲ್ಲವೂ ಜೈನಗುಹಾಲಯಗಳಿಗೆ ಸಂಬಂಧಿಸಿವೆ. ಆದರೆ ವೈಗೈ (ಮದುರೈ) ನದಿ ಪ್ರದೇಶದ ಹನ್ನೊಂದು ಕೇಂದ್ರಗಳಲ್ಲಿ ದೊರೆತ ಈ ಶಾಸನಗಳ ಒಟ್ಟು ಸಂಖ್ಯೆ ೩೫ ಮಾತ್ರ. ಮುಂದಿನ ಒಂದು ನೂರು ವರ್ಷಗಳಲ್ಲಿ (ಕ್ರಿ.ಪೂ. ೧ನೆಯ ಶತಕ) ೨೪ ಶಾಸನಗಳನ್ನು ಇದಕ್ಕೆ ಸೇರಿಸಿಕೊಂಡು, ಈ ಸಂಖ್ಯೆಯನ್ನು ೫೯ಕ್ಕೆ ವಿಸ್ತರಿಸಿಕೊಳ್ಳಲಾಯಿತು. ಕ್ರಿ.ಪೂ. ಯುಗದ ಈ ಜೈನ ಬರವಣಿಗೆಗಳು ದೊರಕಿರುವುದು ೨೮ ಕೇಂದ್ರಗಳಲ್ಲಿ ಮಾತ್ರ.

ಈ ಕಾಲದ 'ತಮಿಳುಬ್ರಾಹ್ಮೀ' ಬರಹಗಳೆಲ್ಲವೂ ಒಂದೆರಡು ಪದ ಇಲ್ಲವೇ ಒಂದೆರಡು ವಾಕ್ಯಗಳಲ್ಲಿ ಮುಕ್ತಾಯಗೊಳ್ಳುವ ತುಂಡು ಶಾಸನಗಳಾಗಿದ್ದು, ಇವರಲ್ಲಿ

ಸುದೀರ್ಘ ಶಾಸನವೆನಿಸಿಕೊಳ್ಳುವ ಮಂಗಳಂ ಶಾಸನ ೫೬ ಅಕ್ಷರಗಳನ್ನು ಮಿಕ್ಕಿಲ್ಲ. ಕ್ರಿ.ಶ. ೨ರಿಂದ ೪ನೆಯ ಶತಮಾನದ ಕಾಲಾವಧಿಯ ಶಾಸನಗಳಲ್ಲಿ ಕೂಡಾ ಇದು ಹೆಚ್ಚು ಬದಲಾಗಲಿಲ್ಲ, ಏಕೆಂದರೆ ಕ್ರಿ.ಶ. ೨, ೩ ಮತ್ತು ೪ ಶತಮಾನದವುಗಳೆನ್ನಲಾದ ೯, ೧೬ ಮತ್ತು ೫ ಶಾಸನಗಳಲ್ಲಿ ಯಾವೂ ೬೫ ಅಕ್ಷರಗಳನ್ನು ಮಿಕ್ಕಿಲ್ಲ.[೩೩] ಕ್ರಿ.ಪೂ. ೨ನೆಯ ಶತಕದಿಂದ ಕ್ರಿ.ಶ. ೪ನೆಯ ಶತಕ (ಸುಮಾರು ೬೦೦ ವರ್ಷಗಳ) ತಮಿಳುನಾಡಿನ ೩೦ ಕೇಂದ್ರಗಳಲ್ಲಿ ಕಂಡರಿಸಿದ ಇಂತಹ ಶಾಸನಗಳ ಸಂಖ್ಯೆ ನೂರರ ಗಡಿ ದಾಟಲಿಲ್ಲ; ಮಾತ್ರವಲ್ಲ ಇವಾವೂ ಜೈನೇತರ ವ್ಯವಹಾರಗಳಿಗೆ ವಿನಿಯೋಗವಾಗಲಿಲ್ಲವೆಂಬುದು ಗಮನಾರ್ಹ. ದೊಡ್ಡದೊಡ್ಡ ಅಕ್ಷರಗಳನ್ನು ವಕ್ರಸಾಲುಗಳಲ್ಲಿ ಮೂಡಿಸಿರುವ ಈ ಶಾಸನಗಳ ಲಿಪಿಕಾರರು ಅಕ್ಷರಾಭ್ಯಾಸಕ್ಕೆ ಮೊದಲ ಹೆಜ್ಜೆ ಇಟ್ಟ ಬಾಲಲಿಪಿಕಾರರನ್ನು ನೆನಪಿಗೆ ತಂದುಕೊಡುವುವು. ಬರೆಯಲು ಪ್ರಯಾಸಪಡುವವನು ಆದಷ್ಟು ಸಂಕ್ಷಿಪ್ತವಾಗಿ ವಿಷಯಸೂಚಿಸಿ ಮುಗಿಸುವಂತೆ, ಈ ಶಾಸನಗಳು ೨-೩ ರಿಂದ ೬೫ ಅಕ್ಷರಗಳಲ್ಲಿ ಮುಕ್ತಾಯಗೊಳ್ಳುವುವು. ಅಲ್ಲದೆ ಇವುಗಳೆಲ್ಲವೂ ೫ ಚಿಕ್ಕ ಸಾಲುಗಳನ್ನು ಮಿಕ್ಕಿಲ್ಲ.

ತಮಿಳುನಾಡಿನ ಈ ಬರಹ ಸಾಧನೆಯನ್ನು ಅದರ ಉತ್ತರ ಮತ್ತು ದಕ್ಷಿಣ ಪ್ರದೇಶಗಳ ಸಾಧನೆಗಳೊಡನೆ ಹೋಲಿಸಿ ನೋಡಿದರೆ, ಈ ಚಿತ್ರ ಇನ್ನೂ ಹೆಚ್ಚು ಅರ್ಥಪೂರ್ಣಗೊಳ್ಳುವುದು. ಕರ್ನಾಟಕ ಮತ್ತು ಆಂಧ್ರಪ್ರದೇಶದ ಜನಾಂಗಗಳು ಈ ಕಾಲದಲ್ಲಿ ಸುದೀರ್ಘ ಶಾಸನಗಳನ್ನು ಬರೆಯುವ, ಬರೆಸುವ, ಮತ್ತು ಲಿಪಿ ಮೂಲಕ ವ್ಯವಹರಿಸುವ ಬಗೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ಕರಗತಮಾಡಿಕೊಂಡಿದ್ದರೆನ್ನುವುದರಲ್ಲಿ ಅನುಮಾನವಿಲ್ಲ. ಅಶೋಕನ ಹೆಬ್ಬಂಡೆ, ಕಿಬ್ಬಂಡೆ, ಸ್ತಂಭ, ಶಿಲಾಫಲಕ ಶಾಸನಗಳಲ್ಲದೆ, ಶಾತವಾಹನ, ಇಕ್ಷ್ವಾಕು, ಸಾಲಂಕಾಯನ, ವಿಷ್ಣುಕುಂಡಿ, ಚುಟು, ಕದಂಬ, ಪ್ರಾಕೃತಪಲ್ಲವ, ಈ ಮುಂತಾದವರ ಸರಿಸುಮಾರು ಒಂದು ಸಾವಿರ ಶಾಸನಗಳು ಈ ಆರುನೂರುವರ್ಷಗಳಲ್ಲಿ ಕರ್ನಾಟಕ-ಆಂಧ್ರಪ್ರದೇಶದಲ್ಲಿ ಹೊರಬಂದುದಕ್ಕೆ ಆಧಾರಗಳಿವೆ. ಇಂತಹ ಅರವತ್ತಕ್ಕೂ ಮೀರಿದ ಕೇಂದ್ರಗಳಲ್ಲಿಯ ಶಾಸನಗಳಲ್ಲಿ ಅಮರಾವತಿಯಲ್ಲಿ ದೊರೆತ ಸು. ೨೧೨, ನಾಗಾರ್ಜುನಕೊಂಡದಲ್ಲಿ ದೊರೆತ ಸು. ೭೫, ಸಣ್ಣತಿಯಲ್ಲಿ ದೊರೆತ ಸು. ೮೦ ಶಾಸನಗಳನ್ನು ಗಮನಿಸಿದರೆ, ಬರಹ ವ್ಯವಹಾರದ ಆಳವನ್ನೂ ವಿಸ್ತಾರವನ್ನೂ ನಾವು ಅರಿತುಕೊಳ್ಳಬಹುದಾಗಿದೆ.[೩೪]

ಸಿಂಹಳ ಪುರಾತನ ತಮಿಳಗಂನ ಅಂಗವಾಗಿತ್ತೆಂಬ ಮತ್ತು ಮೊದಲ ಶಂಗಂ ಕಾಲದ ಸಾಹಿತ್ಯ ಇಲ್ಲಿಯ ಕಪಾಡಪುರಂನಲ್ಲಿ ರಚನೆಗೊಂಡಿತೆಂಬ ತಮಿಳರ ವಾದವನ್ನು ಹಿಂದಿನ ಲೇಖನಗಳಲ್ಲಿ ಗಮನಿಸಿದ್ದೇವೆ. ಆದರೆ 'ಬರಹ ಕ್ಷೇತ್ರ'ದಲ್ಲಿ ಸಿಂಹಳದ ವಾಸ್ತವ ಅನುಭವ ತಮಿಳುನಾಡಿನ ಅನುಭವಕ್ಕಿಂತ ತುಂಬಾ ಭಿನ್ನವಾಗಿರುವುದು ಎದ್ದುಕಾಣುವುದು. ಈ

ಆಧಾರದಿಂದ ಕ್ರಿ.ಪೂ ಯುಗದ ಶ್ರೀಲಂಕಾ ದ್ವೀಪ ತಮಿಳು ಸಾಹಿತ್ಯದ ಪ್ರಭಾವಕ್ಕೆ ಲವಲೇಶವೂ ಒಳಗಾಗದೇ ಭಿನ್ನ ಬಗೆಯಲ್ಲಿ ತನ್ನ ಭಾಷಾ ಮತ್ತು ಲಿಪಿಯ ಇತಿಹಾಸವನ್ನು ನಿರ್ಮಿಸಿಕೊಂಡಿತೆಂದು ಸಾಧಿಸಲಾಗಿದೆ. ಅಶೋಕ ಸಾಮ್ರಾಜ್ಯದ ಭಾಷೆ, ಲಿಪಿ, ಮೌಲ್ಯ, ಧರ್ಮ ಮತ್ತು ಸಂಸ್ಥೆಗಳೊಡನೆ ನಿಕಟ ಹಾಗೂ ನೇರ ಸಂಬಂಧವಿಟ್ಟುಕೊಂಡಿದ್ದರಿಂದ, ಸಿಂಹಳ ಇಷ್ಟೊಂದು ಪ್ರಗತಿ ಸಾಧಿಸಲು ಸಾಧ್ಯವಾಯಿತೆಂದು ಭಾವಿಸಬಹುದು.

ಕ್ರಿ.ಪೂ. ೩ರಿಂದ ಕ್ರಿ.ಶ. ೪ನೆಯ ಶತಕದ (೬೦೦ ವರ್ಷಗಳಲ್ಲಿ)ಲ್ಲಿ ಸಿಂಹಳೀಯರು ಒಟ್ಟು ೩,೪೪೦ ಶಾಸನಗಳನ್ನು ಬರೆಸಿ ತಮಿಳರಿಗಿಂತ ಸುಮಾರು ೩೫೦ ಹೆಚ್ಚುಪಟ್ಟು ಲಿಪಿ ವ್ಯವಹಾರದಲ್ಲಿ ತೊಡಗಿದ್ದುದು ಈ ಅಂಕೆಸಂಖ್ಯೆಗಳಿಂದ ವ್ಯಕ್ತಗೊಳ್ಳುತ್ತದೆ. ಇದಕ್ಕಿಂತಲೂ ಮುಖ್ಯವಾದ ಅಂಶವೆಂದರೆ ಕ್ರಿ.ಪೂ. ಕಾಲದ ಸಂಕ್ಷಿಪ್ತ ಗುಹಾಲಯ ಶಾಸನಗಳನ್ನು ಬಿಟ್ಟು ಉಳಿದ ಶಾಸನಗಳು ಸಿಂಹಳೀಯರ ರಾಜಕೀಯ, ಧಾರ್ಮಿಕ, ಸಾಮಾಜಿಕ ಹಾಗೂ ಆರ್ಥಿಕ ಜೀವನದ ಮೇಲೆ ಪೂರ್ಣಪ್ರಮಾಣದ ಬೆಳಕು ಚೆಲ್ಲುವುವು. ಇವರು ಬ್ರಾಹ್ಮೀ ಲಿಪಿಯನ್ನು ತಮ್ಮ ನೆಲದ ಭಾಷೆಗೆ ಅಳವಡಿಸಿಕೊಂಡು 'ಸಿಂಹಳ-ಬ್ರಾಹ್ಮೀ'ಯನ್ನು ಸೃಷ್ಟಿಸಿಕೊಂಡಿದ್ದನ್ನು ಅನುಕರಿಸಿ ಇಲ್ಲವೇ ಅದರಿಂದ ಸ್ಫೂರ್ತಿಪಡೆದು, ಅಂದಾಜು ಒಂದು ಶತಮಾನದ ನಂತರ, 'ತಮಿಳು-ಬ್ರಾಹ್ಮೀ'ಯನ್ನು ತಮಿಳರು ಅಳವಡಿಸಿಕೊಂಡರೆಂದರೆ ತಪ್ಪಾಗಲಿಕ್ಕಿಲ್ಲ. ಇದು ಏನೇ ಇರಲಿ, ಸುಮಾರು ಆರುನೂರು ವರ್ಷಕಾಲದ ಪ್ರಯತ್ನದ ನಂತರವೂ ತಮಿಳುಬ್ರಾಹ್ಮೀ, ಸಿಂಹಳ-ಬ್ರಾಹ್ಮೀಯ ಗುಣಮಟ್ಟವನ್ನಾಗಲೀ ವಿಷಯ ವೈಶಾಲ್ಯತೆಯನ್ನಾಗಲೀ ಸಂಪಾದಿಸಿಕೊಳ್ಳದೆ, ಅಸಮರ್ಪಕ ಮತ್ತು ಅಪಕ್ವ ಮಾಧ್ಯಮ ವಾಗಿಯೇ ಉಳಿಯಿತು. ತನ್ನ ಅಭಿವ್ಯಕ್ತಿ ಮಾಧ್ಯಮವನ್ನು ಉತ್ತಮಗೊಳಿಸಿಕೊಳ್ಳಲು ತಮಿಳು-ಬ್ರಾಹ್ಮೀಯಿಂದ ದೂರಸರಿಯುತ್ತಾ, ಕ್ರಿ.ಶ. ೫ನೆಯ ಶತಕದ ಆರಂಭದಲ್ಲಿ ವಟ್ಟೆಳುತ್ತು ಲಿಪಿಯನ್ನು ತಮಿಳರು ಹೆಚ್ಚು ಹೆಚ್ಚು ಅವಲಂಬಿಸತೊಡಗಿದರು. ವಟ್ಟೆಳುತ್ತು ಲಿಪಿ ಬಳಸಿ ಕರ್ನಾಟಕದ ಚಿತ್ರದುರ್ಗ ಜಿಲ್ಲೆಯವರೆಗೂ ಇವರು ವ್ಯವಹರಿಸಲು ಪ್ರಯತ್ನಿಸಿದರೆಂಬುದಕ್ಕೆ ತಮಟಕಲ್ಲಿನ ಒಂದು ಶಾಸನ ಆಧಾರ ಒದಗಿಸುವುದು.[೩೫] ಆದರೆ ಅರಸರ ಹೆಸರುಗಳನ್ನು ಮತ್ತು ಸಂಸ್ಕೃತ ಪದಗಳನ್ನು ಬರೆಯಲು ವಟ್ಟೆಳುತ್ತು ಲಿಪಿ ಸಹಕಾರಿಯಾಗದ ಕಾರಣ, ಇಂತಹ ಪದಗಳನ್ನು ಗ್ರಂಥಲಿಪಿಯಲ್ಲಿ ಬರೆದು ಅವರು ತೃಪ್ತಿಪಟ್ಟುಕೊಳ್ಳಬೇಕಾಯಿತು. ಸಂಸ್ಕೃತ ಪದಗಳು ಇನ್ನೂ ಹೆಚ್ಚತೊಡಗಿದಾಗ ವಟ್ಟೆಳುತ್ತುವಿನ ನಿಷ್ಪ್ರಯೋಜಕತೆ ಹೆಚ್ಚು ಮನವರಿಕೆಯಾಗತೊಡಗಿ ಕೊನೆಗೆ ಗ್ರಂಥವನ್ನು ಅವರು ಅವಲಂಬಿಸುವಂತೆ ಮಾಡಿತು. ದಕ್ಷಿಣಬ್ರಾಹ್ಮೀ (ಕರ್ನಾಟಕ-ಆಂಧ್ರ) ಲಿಪಿಯಲ್ಲಿ ತನ್ನ ಬೇರು ಕಂಡುಕೊಂಡ ಗ್ರಂಥಲಿಪಿಯನ್ನು ಇನ್ನೂ ಸರಳೀಕರಿಸಿ, ಅವಶ್ಯಕವಾದ ವಟ್ಟೆಳುತ್ತು ಅಕ್ಷರಗಳನ್ನು ಅದರಲ್ಲಿ ಸೇರಿಸಿಕೊಂಡು, ಅಂತಿಮವಾಗಿ ತಮಿಳು ಲಿಪಿಯನ್ನು ೮ನೆಯ

ಶತಮಾನದಲ್ಲಿ ಸಿದ್ಧಗೊಳಿಸಲಾಯಿತು. ಇದನ್ನು ಮೊದಲು ಪ್ರಚಾರಕ್ಕೆ ತಂದವರು ಪಲ್ಲವರು ಮತ್ತು ಅವರ ಸಾಮಂತರು. ಇದು ಪರಿಪೂರ್ಣತೆಯನ್ನೂ ಪ್ರೌಢಾವಸ್ಥೆಯನ್ನೂ ಕಂಡುಕೊಂಡದ್ದು ೧೦ನೆಯ ಶತಮಾನದ ಚೋಳರ ಕಾಲದಲ್ಲಿ.[೬೬] ತಮಿಳು ಈ ಬಗೆಯಲ್ಲಿ ಪ್ರೌಢ ಹಂತವನ್ನು ಮುಟ್ಟುವುದಕ್ಕೆ ಸುಮಾರು ಮೂರು ಶತಮಾನಗಳ ಮುಂಚೆಯೇ ಕನ್ನಡಲಿಪಿ ಮತ್ತು ಭಾಷೆ ಪರಿಪೂರ್ಣತೆಯನ್ನು ಗಳಿಸಿಕೊಂಡದ್ದನ್ನು ನಾವು ಹಲ್ಮಿಡಿಯ ಶಾಸನ(ಕ್ರಿ.ಶ. ಸು.೪೫೦)ದಲ್ಲಿ ಕಾಣುವೆವು. ಕದಂಬರ ಹಲ್ಮಿಡಿ (ಕ್ರಿ.ಶ. ಸು. ೪೫೦), ತಡಗಣಿ (ಸು.೫೦೦), ತಮಟಕಲ್ಲು (ಸು. ೫೦೦) ಮತ್ತು ಗಂಗರ ತಗರೆ, ಸಿರಿಗುಂದ (ಸು. ೬ನೆಯ ಶತಕ) ಮುಂತಾದ ಆರಂಭಕಾಲದ ಶಾಸನಗಳು ಕನ್ನಡ ಲಿಪಿ ಹೇಗೆ ಭದ್ರನೆಲೆಯನ್ನು ಕಂಡುಕೊಳ್ಳುತ್ತಾ ವಿಸ್ತರಿಸಿಕೊಳ್ಳತೊಡಗಿತೆಂಬುದನ್ನು ತೋರಿಸಿಕೊಡುವುವು. ಒಂದು ಸಹಸ್ರಮಾನ ಕಾಲದಲ್ಲಿ, ಮೂರು ದುಸ್ತರ ಮೆಟ್ಟಲೇರಿ – ತಮಿಳುಬ್ರಾಹ್ಮೀ, ವಟ್ಟೆಳುತ್ತು, ಗ್ರಂಥತಮಿಳು – ತಮಿಳರು ಸಾಧಿಸಿಕೊಂಡದ್ದನ್ನು, ಬ್ರಾಹ್ಮೀಯಿಂದ ಒಂದೇ ಮೆಟ್ಟಲೇರಿ ಕನ್ನಡ ಲಿಪಿ ಮತ್ತು ಭಾಷೆ ಸಂಪಾದಿಸಿಕೊಂಡದ್ದು ವಿಸ್ಮಯಕಾರಿಯಾಗಿದೆ. ಅಲ್ಲದೆ ಬ್ರಾಹ್ಮೀ ಯುಗದಲ್ಲಿ ಕೈಕೈಜೋಡಿಸಿ ನಡೆದಂತೆ, ತಮ್ಮದೇ ಆದ ಲಿಪಿಯನ್ನು ಗಳಿಸಿಕೊಂಡನಂತರವೂ ಕನ್ನಡಿಗರು ಮತ್ತು ತೆಲುಗರು ಕೆಲವು ಶತಮಾನಗಳ ಕಾಲ ಒಂದೇ ಲಿಪಿಯನ್ನು ಬಳಸಿಕೊಳ್ಳುತ್ತಾ ತಮ್ಮ ಭಾಷೆಯನ್ನು ಬೇರ್ಪಡಿಸಿಕೊಳ್ಳುತ್ತಾ ಬೆಳೆದದ್ದೂ ಇಷ್ಟೇ ಕುತೂಹಲಕಾರಿಯಾಗಿದೆ. ಈ ಆರುನೂರು ವರ್ಷ ಕಾಲದಲ್ಲಿ ಪ್ರಾಕೃತವನ್ನೇ ವ್ಯವಹಾರ ಭಾಷೆಯನ್ನಾಗಿ ಮಾಡಿಕೊಂಡ ದಖ್ಖಣರು, ಹೇಗೆ ಸ್ವತಂತ್ರ ಲಿಪಿಯನ್ನು ಸೃಷ್ಟಿಸಿಕೊಂಡರು ಮತ್ತು ಈ ಕಾಲಾವಧಿಯಲ್ಲಿ ಕನ್ನಡವನ್ನೂ ತೆಲುಗನ್ನೂ ಬೆಳೆಸಲು ಪ್ರಾಕೃತ ಹೇಗೆ ನೆರವಾಯಿತು ಹೇಗೆ ಅಡ್ಡಿಯಾಯಿತು, ಎಂಬುದನ್ನು ನಾವಿನ್ನೂ ಶೋಧಿಸಿ ಅರಿತುಕೊಳ್ಳಬೇಕಾಗಿದೆ.

**ಆಕರ ಟಿಪ್ಪಣಿ:**

೧. ಇದು ಇಂದಿನ ಮಟ್ಟಿಗೆ ತೀರ್ಮಾನಿತಗೊಂಡ ವಿಷಯ, ಆದರೆ ಅಂತಿಮ ನಿರ್ಣಯವೆನ್ನಲು ಬಾರದು. ಮ್ಯಾಗಸ್ತನೀಸ್ ಮತ್ತು ಸ್ಟ್ರಾಬೋ ಭಾರತೀಯರಿಗೆ ಲಿಪಿ ಜ್ಞಾನವಿರಲಿಲ್ಲವೆಂಬುದನ್ನು ಗಮನಿಸಿ ಈ ನಿರ್ಣಯಕ್ಕೆ ಬರಲಾಗಿದೆ. ಲಿಪಿಬಳಕೆ ಮಾಡದೇ ಹೇಗೆ ನಂದರು ಬೃಹತ್ ರಾಜ್ಯವನ್ನು ಆಳಿದರೆಂಬುದನ್ನು ನಿದರ್ಶಿಸಿ ಈ ವಾದವನ್ನು ಬಲಗೊಳಿಸಲಾಗಿದೆ. ಇದು ಏನೇ ಇರಲಿ ಮೌರ್ಯಪೂರ್ವಕಾಲದ ದೇಸಿ ಲಿಪಿಯ ಕುರುಹುಗಳು ತುಂಬಾ ಅಪರೂಪ, ರಾಜ್ಯದ ವ್ಯವಹಾರಕ್ಕೆ ಬಳಸಿದ ಶಿಲಾದಾಖಲೆಗಳು ಅಶೋಕನ ಕಾಲಕ್ಕಿಂತ ಮೊದಲು ಸಿಗುವುದಿಲ್ಲ. ಅನುರಾಧಪುರದಲ್ಲಿ ದೊರೆತ 'ಗಡಿಗೆ'ಗಿಚ್ಚು ಬ್ರಾಹ್ಮೀ ಲಿಪಿಯಲ್ಲಿರುವುದು ನಿಜ. ಆದರೆ ಅದೊಂದು ನಾಲ್ಕು ಅಕ್ಷರಗಳ ಚಿಕ್ಕಬರಹ ಮತ್ತು ಅದರ ಕಾಲ ಪ್ರಶ್ನಾರ್ಹ.

೨. ನೋ. ಕೆಳಗೆ ಅ.ಟಿ. ೧೫.

೩. ಮಿಶ್ರ ರಾಜೇಂದ್ರಲಾಲ್ (ಸಂ.). *ಲಲಿತವಿಸ್ತರ* (೧೮೭೭) ಪು.೧೮೨. - ಉಲ್ಲೇಖ, ಸಿರಿಸೋಮ "ಬ್ರಾಹ್ಮೀ ಇನ್ಸ್‌ಕ್ರಿಪ್ಷನ್ ಆಫ್ ಶ್ರೀಲಂಕ ಫ್ರಮ್ ಥರ್ಡ್ ಸೆಂಚುರಿ ಬಿ.ಸಿ. ಟು ೬೫ ಎ.ಡಿ", ಇನ್ಸ್‌ಕ್ರಿಪ್ಷನ್ಸ್ ಸಂ.೨, (ಆರ್ಕಿಯಲಾಜಿಕಲ್ ಡಿಪಾರ್ಟ್‌ಮೆಂಟ್ ಸೆಂಟಿನರಿ (೧೮೯೦-೧೯೯೦), ವಿಜಸೇಖರೆ, ನಂದದೇವ (ಪ್ರ.ಸಂ.),(ಶ್ರೀಲಂಕ, ೧೯೯೦) ಪು.೬, ಅಡಿ.ಟಿ. ೩೮ (ಪು.೩೬). ಜೈನ ಪರಂಪರೆಯಲ್ಲಿ *(ಪನ್ನವನಸುತ್ತ)* ಕೂಡಾ ಪ್ರಥಮ ಸ್ಥಾನವನ್ನು ಬಂಭಿ (ಬ್ರಾಹ್ಮೀ)ಗೆ ಕೊಡಲಾಗಿದೆ.

೪. ಶರ್ಮ ಐ.ಕೆ., "ಅರ್ಲಿ ಸ್ಕಲ್ಪ್ಚರ್ಸ್ ಅಂಡ್ ಎಪಿಗ್ರಫಿ ಫ್ರಂ ಸೌತ್‌ಈಸ್ಟ್ ಇಂಡಿಯ: ನ್ಯೂ ಎವಿಡೆನ್ಸ್ ಫ್ರಮ್ ಅಮರಾವತಿ", *ಇಂಡಿಯನ್ ಎಪಿಗ್ರಫಿ: ಇಟ್ಸ್ ಬೇರಿಂಗ್ ಆನ್ ದಿ ಹಿಸ್ಟರಿ ಆಫ್ ಆರ್ಟ್ಸ್* (ಸಂ.) ಅಷರ್, ಎಫ್.ಎಂ., ಮತ್ತು ಗಾಯ್, ಜಿ.ಎಸ್. (ನವದೆಹಲಿ, ೧೯೮೫), ಪು. ೧೯. ಚಿತ್ರ ೨೩.

೫. ಹೊಫ್ಫ್‌ಮನ್ನ್, ಎಚ್., "ಬುದ್ಧಾಸ್ ಪ್ರೀಚಿಂಗ್ ಆಫ್ ಕಾಲಚಕ್ರತಂತ್ರ ಅಟ್ ದಿ ಸ್ತೂಪ ಆಫ್ ಧಾನ್ಯಕಟಕ", *ಜರ್ಮನ್ ಸ್ಕಾಲರ್ಸ್ ಆನ್ ಇಂಡಿಯ,* ಸಂ.೧. (ವಾರಣಾಸಿ, ೧೯೭೩), ಪು.೧೪೦.

೬. ಶರ್ಮ ಐ.ಕೆ., *ಅದೇ.* ಅಲ್ಲದೆ ನೋ. *ಬುದ್ಧಿಸ್ಟ್ ಇನ್ಸ್‌ಕ್ರಿಪ್ಷನ್ಸ್ ಆಫ್ ಆಂಧ್ರದೇಶ,* (ಸಂ.). ಹನುಮಂತರಾವ್, ಬಿ.ಎಸ್.ಎಲ್. ಮುಂತಾದವರು, (ಸಿಕಂದರಾಬಾದ್, ೧೯೯೮). ಪು. ೩೯-೪೨.

೭. ಶ್ರವಣಬೆಳ್ಗೊಳದ ಕ್ರಿ.ಶ.೬೦೦ರ ಎರಡು ಶಾಸನಗಳು. ಶಿವಕೋಟ್ಯಾಚಾರ್ಯನ *ವಡ್ಡಾರಾಧನೆ* (೧೦ನೆಯ ಶತಕ) ಅಲ್ಲದೇ ಇನ್ನೂ ಕೆಲವು ಗ್ರಂಥ ಮತ್ತು ಶಾಸನ ಆಧಾರಗಳು ದೊರೆಯುವುವು. ನೋ. ಎಸ್. ಶೆಟ್ಟರ್, *ಶ್ರವಣಬೆಳ್ಗೊಳ,* (ಧಾರವಾಡ, ೧೯೮೧), ಪು.೧೦. ಈ ಐತಿಹ್ಯದ ಉಲ್ಲೇಖ ಹೇಮಚಂದ್ರನ *ಪರಿಶಿಷ್ಟ ಪರ್ವನ್,* ೮, ಪು. ೪೧೫ರಲ್ಲಿ ಬರುವುದೆಂದು ರೋಮಿಲ ಥಾಪರ್ ಹೇಳಿರುವರು, ಆದರೆ ಈ ಗ್ರಂಥದ ಹೆಚ್ಚಿನ ಮಾಹಿತಿ ಅವರ ಗ್ರಂಥಸೂಚಿಯಲ್ಲಿ ದೊರೆಯುವುದಿಲ್ಲ - ನೋ. *ಅಶೋಕ ಅಂಡ್ ದಿ ಡಿಕ್ಲೈನ್ ಆಫ್ ಮೌರ್ಯಾಸ್,* (ದೆಹಲಿ, ೧೯೯೮ ಪ್ರ.ಮು), ಪು.೧೪, ಅಡಿ.ಟಿ.೫.

೮. ಶರ್ಮ ಐ.ಕೆ. ಮತ್ತು ವರಪ್ರಸಾದರಾವ್, ಜೆ., *ಅರ್ಲಿ ಬ್ರಾಹ್ಮೀ ಇನ್ಸ್‌ಕ್ರಿಪ್ಷನ್ಸ್ ಫ್ರಮ್ ಸನ್ನತಿ,* (ನವದೆಹಲಿ, ೧೯೯೩), ಪು.೨-೮, ೧೦೪-೧೦೭. ಈ ಗ್ರಂಥ ಪ್ರಕಟನೆಯಾದ ನಂತರ ಸನ್ನತಿಯಲ್ಲಿ ಒಂದು ಮಹಾಸ್ತೂಪವನ್ನೂ ಅಶೋಕನದೆನ್ನಲಾದ ಭಾವಶಿಲ್ಪವನ್ನೂ ವರದಿಮಾಡಲಾಗಿದೆ. ನೋ. *ಇಂಡಿಯನ್ ಆರ್ಕಿಯಾಲಜಿ-ಎ ರಿವ್ಯೂ,* ೧೯೯೭-೧೯೯೮, ಪು. ೯೩-೯೫, ಚಿತ್ರ. ೭೨.

೯. 'ಅಯ'(ಸಂ. ಆರ್ಯ; ಪ್ರಾ. ಅಯ್ಯ)ಪುತನು ಆಳುವ ಅರಸನ ಪುತ್ರನಾಗಿದ್ದು ಮುಂದೆ ಪಟ್ಟಾಧಿಕಾರಿಯಾಗುವುದನ್ನು ಆರಂಭಕಾಲದ ಶ್ರೀಲಂಕಾ ಶಾಸನಗಳಿಂದ ತಿಳಿಯಬಹುದು. ಭಾರತದಲ್ಲಿ ಬ್ರಾಹ್ಮೀ ಶಾಸನಗಳಲ್ಲಿ 'ಅಯ' ಪದವು ಹೆಚ್ಚು ಬಾರಿ 'ಭಿಕ್ಕು'ಗಳನ್ನು ಸೂಚಿಸಲು, ಅಪರೂಪವಾಗಿ ರಾಜಪುತ್ರನನ್ನು ಸೂಚಿಸಲು ಬಳಕೆಯಾಗಿದೆ ಎಂಬ, ಶ್ರೀಲಂಕಾದ ಶಾಸನತಜ್ಞ ಪರನವಿತನ(*ಇನ್ಸ್‌ಕ್ರಿಪ್ಷನ್ಸ್ ಆಫ್ ಶ್ರೀಲಂಕ,* (ಶ್ರೀಲಂಕ, ೧೯೭೦), ಸಂ.೧, ಪು. ೧೦೬)ನ ಅಭಿಪ್ರಾಯವನ್ನು ಕೂಲಂಕಷವಾಗಿ ಪರೀಕ್ಷಿಸಬೇಕಾಗಿದೆ.

೧೦. ಸಿರಿಸೋಮ, *ಅದೇ.,* ಪು. ೩೧-೩೨.

೧೧. *ಶಿಲಪ್ಪದಿಗಾರಂ* ೨೩, ಸಾ. ೧೩೦-೧೪೦; *ಮಣಿಮೇಗಲೈ* ೨೬, ಸಾ. ೧೫-೧೭.

೧೨. *ಪದಿಟ್ರು.* ೩೯, ೧೫; *ಪುಱನಾ.* ೩೫೩, ೩; ೩೭೯, ೬; *ತಿರು.* ೧೧೯, ೧೨೦.

೧೩. ಸಿರಿಸೋಮ, ಅದೇ., ಪು. ೩೪. ಕ್ರಿ.ಪೂ. ೨ರ ರಾಜಗಳ ಶಾಸನ ಮಹಿಂದ ಥೇರನನ್ನು ಹೆಸರಿಸುವುದಲ್ಲದೆ ಅವನ ಚಿತಾಭಸ್ಮವನ್ನು ಸ್ತೂಪಗಳಲ್ಲಿ ರಕ್ಷಿಸಿಡಲು ಸಿಂಹಳದ ಅನೇಕ ವಿಹಾರಗಳಿಗೆ ವಿತರಿಸಲಾಗಿದ್ದನ್ನು ತಿಳಿಸುವುದು.

೧೪. ಅದೇ., ಪು. ೩. ಅಶೋಕನ ಸಮಕಾಲೀನನಾಗಿ ಸಿಂಹಳವನ್ನು ಆಳಿದ ದೇವಾನಾಂಪಿಯ ತಿಸ್ಸನ ಸೋದರನಾದ ಉತ್ತಿಯ ಸಾಂಪ್ರದಾಯಿಕ 'ಅಶೋಕ-ಬ್ರಾಹ್ಮೀ' ಲಿಪಿಯನ್ನು ಬಳಸಿ ಮಿಹಿಂತಲೆಯಲ್ಲಿ ಮೂರು, ಪಿಚ್ಚಂದಿಯವದಲ್ಲಿ ಎರಡು ಗುಹಾಶಾಸನಗಳನ್ನು ಕೊರೆಸಿದನು.

೧೫. ಇಲ್ಲಿಯವರೆಗೂ ಶ್ರೀಲಂಕಾದಲ್ಲಿ ದೊರೆತ ಅತ್ಯಂತ ಪೂರ್ವಕಾಲದ ಶಾಸನವಿದಾಗಿದೆ. ಕನಿಂಗ್ಹ್ಯಾಮ್, ಆರ್.ಎ.ಇ, ಅಲ್ಚಿನ್, ಎಫ್, ಆರ್., ಮುಂ. "ಪ್ಯಾಸೇಜ್ ಟು ಇಂಡಿಯ(?) ಅನುರಾಧಪುರ ಅಂಡ್ ಅರ್ಲಿ ಯೂಜ್ ಆಫ್ ಬ್ರಾಹ್ಮೀ ಸ್ಕ್ರಿಪ್ಟ್", *ಕೇಂಬ್ರಿಜ್ ಆರ್ಕಿಯಾಲಾಜಿಕಲ್ ಜರ್ನಲ್*, ೬, (೧), ಪು.೭೩-೯೭, ಆದರೆ ಮೂರು ಅಕ್ಷರಗಳ - ಅರಮ - ಈ ಶಾಸನದ ಕಾಲದ ಬಗ್ಗೆ ಪ್ರಶ್ನೆಗಳನ್ನು ಎತ್ತಲಾಗಿದೆ.

೧೬. ಸಿರಿಸೋಮ. ಅದೇ., ಪು.೩.

೧೭. ಅದೇ. ಪು. ೬.

೧೮. ಅದೇ. ಪು. ೩೫, ಅಡಿ.ಟಿ. ೧೬೮.

೧೯. ಅದೇ. ಪು. ೫, ಅಡಿ.ಟಿ. ೩೦ ಮತ್ತು ಪು. ೪೭ರಲ್ಲಿಯ ನಕಾಶ.

೨೦. ಎಸ್. ಶೆಟ್ಟರ್, *ಫುಟ್ ಪ್ರಿಂಟ್ಸ್ ಆಫ್ ಆರ್ಟಿಜಾನ್ಸ್ ಇನ್ ಹಿಸ್ಟರಿ...* ೬೪ನೆಯ ಇಂಡಿಯನ್ ಹಿಸ್ಟರಿ ಕಾಂಗ್ರೆಸ್ಸ್‌ನ ಸರ್ವಾಧ್ಯಕ್ಷ ಭಾಷಣ (ಮೈಸೂರು, ೨೦೦೩), ಪು. ೨೪-೩೪.

೨೧. ಸಿರಿಸೋಮ, ಅದೇ. ಪು. ೩೫.

೨೨. *ಪದಿಬ್ರಾ.* V, ೧೨. ಪು.೩; ೧೭, ಪು.೪-೫; *ಶಿಲಪ್ಪ* XXIX.

೨೩. ರಸನಾಯಗಂ, *ಎನ್ಸಿಯಂಟ್ ಜಾಫ್ನಾ* ಪು. ೧೨೩. ನೋ. ಪಿಳ್ಳೈ, ಕೆ.ಕೆ., *ಸೌತ್ ಇಂಡಿಯ ಅಂಡ್ ಶ್ರೀಲಂಕಾ: ಸರ್ ವಿಲಿಯಮ್ ಮೇಯರ್ ಎಂಡೋಮೆಂಟ್ ಲೆಕ್ಚರ್ಸ್*, (೧೯೫೮-೫೯), (ಚೆನ್ನೈ, ೨೦೦೧ ಪು.ಮು.) ಪು. ೩೪-೩೫ ಮತ್ತು ೮೩.

೨೪. ಮುದಿಯನ್ಸ್ ಎನ್., "ಇನ್ಸ್ಕ್ರಿಪ್ಷನ್ ಆಫ್ ಶ್ರೀಲಂಕಾ: ೪೦೦-೮೦೦", ವಿಜಸೇಖರೆ (ಸಂ.), ಅದೇ. ಪು.೧೦೦.

೨೫. ಹತ್ತಿರಚ್ಚಿ ಎ.ಎಸ್. "ಇನ್ವೆಸ್ಟಿಗೇಷನ್ ಆಫ್ ೨, ೩, ೪ ಸೆಂಚುರಿ ಇನ್ಸ್ಕ್ರಿಪ್ಷನ್ಸ್", ವಿಜಸೇಖರೆ (ಸಂ.), ಅದೇ. ಪು. ೫೭ರಿಂದ. ವಿಶೇಷವಾಗಿ ನೋ. ಪು. ೧೦೩.

೨೬. ಅದೇ., ಪು. ೧೧೯.

೨೭. ಅಹನಾ. ೨೫೧.೫; ೨೬೫.೪.

೨೮. ಅಹನಾ. ೨೫೧.೧೨; ಪುಜನಾ. ೧೭೫.೬.

೨೯. ಅಹನಾ ೨೫೧.೧೨.

೩೦. ಅದೇ.

೩೧. ಅದೇ. ೨೮೧-೮.

೩೨. ಎಪಿಗ್ರಾಫಿಯ ಇಂಡಿಕಾ ೨೦, ಪು.೭೯.

೩೩. ಮಹಾದೇವನ್, ಅದೇ. ಪು.೩೧೫.

೩೪. ಹನುಮಂತರಾವ್ ಮುಂ. ಅದೇ., ಪು. ೩೯-೯೨, ೧೩೩-೧೭೬; ಶರ್ಮ ಮತ್ತು ವರಪ್ರಸಾದರಾವ್, ಅದೇ. ಪು. ೧೦ರಿಂದ.

೩೫. ಎಪಿಗ್ರಾಫಿಯ ಕರ್ನಾಟಕ XI, ಚಿತ್ರದುರ್ಗ ೪೩.

೩೬. ತಮಿಳು ಲಿಪಿಯನ್ನು ಸಾಧಿಸಿಕೊಂಡ ನಂತರ ಅಲ್ಲಿಯವರೆಗೂ ಮೌಖಿಕವಾಗಿ ಪ್ರಸಾರದಲ್ಲಿದ್ದ ಶಂಗಂ, ನಾಯನ್ಮಾರ್ ಮತ್ತು ಆಳ್ವಾರರ ಕವಿತೆಗಳನ್ನು ವ್ಯವಸ್ಥಿತವಾಗಿ ಸಂಪಾದಿಸುವ ಕಾರ್ಯ ಪ್ರಾರಂಭ ವಾಯಿತೆಂಬುದನ್ನು ಇಲ್ಲಿ ಗಮನಿಸುವುದವಶ್ಯ.

ಕಾವೇರಿಯನ್ನು ಒಂದೇ ಒಂದು ಬಾರಿ ಹೆಸರಿಸಿದರೂ ಈ ನದಿಗೆ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ಶಾಶ್ವತ ಸ್ಥಾನವನ್ನು ಕಲ್ಪಿಸಿಕೊಟ್ಟು ಕನ್ನಡಿಗರಿಂದ ಅಪಾರ ಗೌರವವನ್ನು ಮಾರ್ಗಕಾರನು ಸಂಪಾದಿಸಿಕೊಂಡಿರುವನೆನ್ನಬಹುದು. ಆ ಮೊದಲು ಶಂಗಂಕವಿಗಳು ತಮಿಳು ಜನಾಂಗೀಯರಿಗೆ ಅವರ ಪ್ರದೇಶವನ್ನು ಗುರುತಿಸಿಕೊಟ್ಟಂತೆ, ಒಂಬತ್ತನೆಯ ಶತಮಾನದ ಪ್ರಾದೇಶಿಕ ಮೇರೆಗಳನ್ನು ಮಾರ್ಗಕಾರನು ಕನ್ನಡಿಗರಿಗೆ ಗುರುತಿಸಿಕೊಟ್ಟನು. ಆದರೆ ಭಾಷಾ ಗಡಿಯನ್ನು ಗುರುತಿಸುವ ಕ್ರಿಯೆ ಇಂದಿನಂತೆ ಅಂದೂ ಸುಲಭವಾಗಿರಲಿಲ್ಲವೆಂದು ತೋರುತ್ತದೆ; ಕಾರಣ ಶಂಗಂಕವಿಗಳಂತೆ ಮಾರ್ಗಕಾರನೂ ನಿರ್ದಿಷ್ಟ ಗಡಿರೇಖೆಯನ್ನು ಎಳೆಯುವ ಸಾಹಸಕ್ಕಿಳಿಯದೆ ಹೆಗ್ಗುರುತುಗಳನ್ನು ಮಾತ್ರ ಸೂಚಿಸಿ ತೃಪ್ತಿಪಟ್ಟುಕೊಂಡನೆನ್ನಬಹುದು... ಮಾರ್ಗಕಾರನು ನುಡಿಯಲ್ಲಿ ಸ್ಪಷ್ಟಪಡಿಸಿದರೂ ಭೌಗೋಳಿಕವಾಗಿ ಒಗಟಾಗಿಸಿಯೇ ಇಟ್ಟ ಗಡಿಯ ಬಗ್ಗೆ ನಮಗಿರುವ ಕೆಲವು ಅನುಮಾನಗಳನ್ನು ಬಗೆಹರಿಸಿಕೊಳ್ಳಬೇಕಾದ ಆವಶ್ಯಕತೆ ಈಗ ತೀವ್ರವಾಗಿದೆ, ಏಕೆಂದರೆ ಅವನ್ನು ಪರಿಹರಿಸಿಕೊಳ್ಳದೆ ಕನ್ನಡಿಗರ ಪಾರಂಪರಿಕ ದಕ್ಷಿಣ ಗಡಿಯನ್ನು ಮತ್ತು ತಮಿಳರ (ಮಲಯಾಳಿಗಳ) ಉತ್ತರ ಗಡಿಗಳನ್ನು ತಿಳಿದುಕೊಳ್ಳಲಾಗಲೀ ಇತಿಹಾಸದ ಆರಂಭ ಕಾಲದಲ್ಲಿ ದ್ರಾವಿಡ ಜಗತ್ತಿನೊಡನೆ ಕನ್ನಡಿಗರಿಗಿದ್ದ ಸಂಬಂಧದ ವಾಸ್ತವ ಸ್ವರೂಪವನ್ನು ಅರ್ಥಮಾಡಿಕೊಳ್ಳಲಾಗಲೀ ಸಾಧ್ಯವಾಗದು. ಈ ಹಿನ್ನೆಲೆಯಲ್ಲಿ, ಶಂಗಂ ಸಾಹಿತ್ಯವು ಇತಿಹಾಸಯುಗದ ಆರಂಭಕಾಲದ ಕನ್ನಡ ನಾಡಿನ ಬಗ್ಗೆ ಮತ್ತು ಕನ್ನಡಿಗರ ಬಗ್ಗೆ ಏನನ್ನು ಹೇಳುತ್ತದೆ ಮತ್ತು ಆರಂಭಕಾಲದ ಇತಿಹಾಸವನ್ನು ರೂಪಿಸಲು ಅದು ಯಾವ ಬಗೆಯಲ್ಲಿ ನಮಗೆ ಸಹಕಾರಿಯಾಗುತ್ತದೆ ಎಂಬುದನ್ನು ಅರಿತುಕೊಳ್ಳುವುದು ಈ ಲೇಖನದ ಉದ್ದೇಶ.

ಅಧ್ಯಾಯ-೫

# ಕಾವೇರಿ

## ಮಾರ್ಗಕಾರನು ಕನ್ನಡದೊಳ್ ಭಾವಿಸಿದ ಜನಪದದ ದಕ್ಷಿಣದಂಚಿನ ಚಾರಿತ್ರಿಕ ಹಿನ್ನೆಲೆ

'ಕನ್ನಡದೊಳ್ ಭಾವಿಸಿದ ಜನಪದ'ದ ದಕ್ಷಿಣ ಗಡಿಯನ್ನು ಕಾವೇರಿ ನದಿಯ ಮೂಲಕ ಮಾರ್ಗಕಾರನು ಗುರುತಿಸಿದಾಗ, ಈ ನದಿಗೆ ಸುಮಾರು ೮೦೨ ಕಿಮೀ. ಭೂಮಿತಿಯೂ ಒಂದು ಸಹಸ್ರವರ್ಷಕಾಲದ ಲಿಖಿತ ಇತಿಹಾಸವೂ ಇತ್ತು. ಇದರ ಜಲರೇಖೆಗಳಿಂದು ೩೮೦ ಕಿಮೀ. ಉದ್ದದ ಕನ್ನಡ ಪ್ರದೇಶವನ್ನು ಮತ್ತು ೩೫೭ ಕಿಮೀ. ಉದ್ದದ ತಮಿಳು ಪ್ರದೇಶವನ್ನು ಗುರುತಿಸುತ್ತಿವೆ. ಕೇರಳದ ಸ್ವಲ್ಪ ನೆಲವನ್ನು (೩.೫%) ತೊಯ್ದಿದರೂ ಇದು ಕರ್ನಾಟಕದ (೪೨.೨%) ಮತ್ತು ತಮಿಳುನಾಡಿನ (೫೪.೩%) ಪ್ರಧಾನ ನದಿಗಳಲ್ಲೊಂದಾಗಿದೆ; ಅಲ್ಲದೆ ಕನ್ನಡ-ತಮಿಳು ಪ್ರದೇಶಗಳ ೬೪ ಕಿ.ಮೀ. ಉದ್ದದ ಗಡಿಯನ್ನು ಗುರುತಿಸುತ್ತಲೂ ಇದೆ.[೧]

ಕಾವೇರಿಯನ್ನು ಒಂದೇ ಒಂದು ಬಾರಿ ಹೆಸರಿಸಿದರೂ ಈ ನದಿಗೆ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ಶಾಶ್ವತ ಸ್ಥಾನವನ್ನು ಕಲ್ಪಿಸಿಕೊಟ್ಟು ಕನ್ನಡಿಗರಿಂದ ಅಪಾರ ಗೌರವವನ್ನು ಮಾರ್ಗಕಾರನು ಸಂಪಾದಿಸಿಕೊಂಡಿರುವನೆನ್ನಬಹುದು.[೨] ಆ ಮೊದಲು ಶಂಗಂಕವಿಗಳು ತಮಿಳು ಜನಾಂಗೀಯರಿಗೆ ಅವರ ಪ್ರದೇಶವನ್ನು ಗುರುತಿಸಿಕೊಟ್ಟಂತೆ, ಒಂಬತ್ತನೆಯ ಶತಮಾನದ ಪ್ರಾದೇಶಿಕ ಮೇರೆಗಳನ್ನು ಮಾರ್ಗಕಾರನು ಕನ್ನಡಿಗರಿಗೆ ಗುರುತಿಸಿಕೊಟ್ಟನು. ಆದರೆ ಭಾಷಾ ಗಡಿಯನ್ನು ಗುರುತಿಸುವ ಕ್ರಿಯೆ ಇಂದಿನಂತೆ ಅಂದೂ ಸುಲಭವಾಗಿರಲಿಲ್ಲವೆಂದು ತೋರುತ್ತದೆ; ಕಾರಣ ಶಂಗಂಕವಿಗಳಂತೆ ಮಾರ್ಗಕಾರನೂ ನಿರ್ದಿಷ್ಟ ಗಡಿರೇಖೆಯನ್ನು ಎಳೆಯುವ ಸಾಹಸಕ್ಕಿಳಿಯದೆ ಹೆಗ್ಗುರುತುಗಳನ್ನು ಮಾತ್ರ ಸೂಚಿಸಿ ತೃಪ್ತಿಪಟ್ಟುಕೊಂಡನೆನ್ನಬಹುದು.

**ಒಗಟಾಗಿಟ್ಟ ಗಡಿರೇಖೆ:**

ಮಾರ್ಗಕಾರನು ನುಡಿಯಲ್ಲಿ ಸ್ಪಷ್ಟಪಡಿಸಿದರೂ ಭೌಗೋಳಿಕವಾಗಿ ಒಗಟಾಗಿಸಿಯೇ ಇಟ್ಟ ಗಡಿಯ ಬಗ್ಗೆ ನಮಗಿರುವ ಕೆಲವು ಅನುಮಾನಗಳನ್ನು ಬಗೆಹರಿಸಿಕೊಳ್ಳಬೇಕಾದ ಅವಶ್ಯಕತೆ ಈಗ ತೀವ್ರವಾಗಿದೆ. ಏಕೆಂದರೆ ಅವನ್ನು ಪರಿಹರಿಸಿಕೊಳ್ಳದೆ ಕನ್ನಡಿಗರ ಪಾರಂಪರಿಕ ದಕ್ಷಿಣ ಗಡಿಯನ್ನು ಮತ್ತು ತಮಿಳರ (ಮಲಯಾಳಿಗಳ) ಉತ್ತರ ಗಡಿಗಳನ್ನು

ತಿಳಿದುಕೊಳ್ಳಲಾಗಲೀ ಇತಿಹಾಸದ ಆರಂಭ ಕಾಲದಲ್ಲಿ ದ್ರಾವಿಡ ಜಗತ್ತಿನೊಡನೆ ಕನ್ನಡಿಗರಿಗಿದ್ದ ಸಂಬಂಧದ ವಾಸ್ತವ ಸ್ವರೂಪವನ್ನು ಅರ್ಥಮಾಡಿಕೊಳ್ಳಲಾಗಲೀ ಸಾಧ್ಯವಾಗದು. ಈ ಹಿನ್ನೆಲೆಯಲ್ಲಿ, ಶಂಗಂ ಸಾಹಿತ್ಯವು ಇತಿಹಾಸಯುಗದ ಆರಂಭಕಾಲದ ಕನ್ನಡ ನಾಡಿನ ಬಗ್ಗೆ ಮತ್ತು ಕನ್ನಡಿಗರ ಬಗ್ಗೆ ಏನನ್ನು ಹೇಳುತ್ತದೆ ಮತ್ತು ಆರಂಭಕಾಲದ ಇತಿಹಾಸವನ್ನು ರೂಪಿಸಲು ಅದು ಯಾವ ಬಗೆಯಲ್ಲಿ ನಮಗೆ ಸಹಕಾರಿಯಾಗುತ್ತದೆ ಎಂಬುದನ್ನು ಅರಿತುಕೊಳ್ಳುವುದು ಈ ಲೇಖನದ ಉದ್ದೇಶ.

ನಾನಿಲ್ಲಿ ಎತ್ತಿರುವ ಪ್ರಶ್ನೆಗಳಲ್ಲಿ ಕೆಲವು ನೇರವಾಗಿ ಕನ್ನಡಿಗರಿಗೆ ಸಂಬಂಧಪಟ್ಟಿದ್ದರೆ ಉಳಿದವು ಕನ್ನಡೇತರ ದ್ರಾವಿಡ ಜನಾಂಗಕ್ಕೆ ಸಂಬಂಧಪಟ್ಟವುಗಳಾಗಿವೆ. ಇದರಂತೆ, ನೇರವಾಗಿ ಇಲ್ಲವೇ ಸ್ವಲ್ಪ ಸುತ್ತಿಬಳಸಿ ಕೊಡುವ ಉತ್ತರಗಳಲ್ಲಿ ಎಲ್ಲವೂ ನಿರ್ಣಾಯಕ ಮಾತುಗಳಾಗಿರದೆ ಅವುಗಳಲ್ಲಿ ಕೆಲವು ಸಂಭಾವ್ಯತೆಯನ್ನು ಮಾತ್ರ ಸೂಚಿಸುವಂಥವು ಗಳಾಗಿವೆ ಎಂಬುದನ್ನು ಮೊದಲು ನಾನು ಸ್ಪಷ್ಟಪಡಿಸಬಯಸುವೆ. ಶಂಗಂ ಸಾಹಿತ್ಯವನ್ನು ಬಹುತೇಕ ತಮಿಳರ ದೃಷ್ಟಿಕೋನದಿಂದಲೇ ಇಲ್ಲಿಯವರೆಗೆ ಅಭ್ಯಸಿಸಿರುವುದರಿಂದ ಮತ್ತು ಅದರ ವ್ಯಾಪ್ತಿಯನ್ನು ತಮಿಳುನಾಡಿಗೇ ಸೀಮಿತಗೊಳಿಸಿರುವುದರಿಂದ, ಈ ಸಾಹಿತ್ಯದಲ್ಲಿ ಕನ್ನಡವನ್ನು ಹುಡುಕುವುದು ಒಂದು ಬಗೆಯಲ್ಲಿ ವ್ಯರ್ಥಸಾಹಸವೆಂದೆನಿಸಬಹುದು. ಆದರೆ ಸಂಶೋಧನೆಯ ಉದ್ದೇಶ ಶಾಶ್ವತ ಸಿದ್ಧಾಂತಗಳನ್ನು ಮಾತ್ರ ಒದಗಿಸುವುದಲ್ಲ, ಸುವ್ಯವಸ್ಥಿತ ಸ್ಪಂದನೆಗೆ ವೇದಿಕೆಯನ್ನು ಸಜ್ಜುಗೊಳಿಸಿ, ಭಿನ್ನಭಿನ್ನ ದೃಷ್ಟಿಕೋನಗಳಿಂದ ಸಮಸ್ಯೆಯನ್ನು ನೋಡಬಯಸುವವರಿಗೆ ಅನುವು ಮಾಡಿಕೊಡುವುದು, ಎಂದು ನಂಬಿರುವ ನನಗೆ ಇದೊಂದು ನಿರರ್ಥಕ ಪ್ರಯತ್ನವೆಂದೇನೂ ಅನಿಸುವುದಿಲ್ಲ.

**ಕಾವೇರಿ: ಅಂದು-ಇಂದು:**

ಕೊಡಗು (ಕೂರ್ಗ್ ಜಿಲ್ಲೆ) ಪ್ರದೇಶದ ಬ್ರಹ್ಮಗಿರಿಯಲ್ಲಿ ಹುಟ್ಟಿ, ಪಶ್ಚಿಮಘಟ್ಟದಲ್ಲಿ ಮುಗ್ಗರಿಸುತ್ತಾ ಪೂರ್ವ ಮತ್ತು ಆಗ್ನೇಯ ದಿಕ್ಕಿನೆಡೆ ಸಾಗುವಾಗ, ಕಾವೇರಿಗೆ ನೀರುಣಿಸಿ ಅದರ ಮೈತುಂಬುವ ನದಿಗಳಲ್ಲಿ ಕರ್ನಾಟಕದ ಹಾರಂಗಿ, ಹೇಮಾವತಿ, ಲಕ್ಷ್ಮಣತೀರ್ಥ, ಕಬಿನಿ, ಸುವರ್ಣಾವತಿ, ಶಿಂಷಾ, ಅರ್ಕಾವತಿಯನ್ನೂ ತಮಿಳುನಾಡಿನ ಭವಾನಿ, ನೋಯಿಲ್, ಅಮರಾವತಿ, ನಂಗಜಿ, ಕೊಡಗನ, ಪೊನ್ನಿಯಾರುಗಳನ್ನೂ ಹೆಸರಿಸಲೇಬೇಕು. ಇಂದಿನ ಕರ್ನಾಟಕದ ೩೪,೨೭೩ ಕಿ.ಮೀ. ಪ್ರದೇಶವನ್ನು ತೊಯ್ಸಿ, ೩೮೦ ಕಿ.ಮೀ. ದಾರಿಯನ್ನು ಕ್ರಮಿಸಿ, ಬೆಂಗಳೂರು ಜಿಲ್ಲೆಯ ಸಂಗಮದ ಬಳಿ ತೀವ್ರಗತಿಯಲ್ಲಿ ಮೈಮುರಿದು ಕೆಳಕ್ಕಿಳಿಯುತ್ತಾ ತಮಿಳುನಾಡನ್ನು ಪ್ರವೇಶಿಸುವ ಕಾವೇರಿಯ ಯಾವ ಘಟಕದಲ್ಲಿ ನಿಂತು ಮಾರ್ಗಕಾರನು ಒಂಬತ್ತನೆಯ ಶತಮಾನದ ಕನ್ನಡ ಜನಪದದ

ಗಡಿಯನ್ನು ಗುರುತಿಸಿದನೋ ನಮಗೆ ತಿಳಿಯದು; ಆದರೆ, ನಾವೇನಾದರೂ ಆ ಬಗೆಯ ಪ್ರಯತ್ನವನ್ನಿಂದು ಮಾಡಹೊರಟರೆ, ಅರ್ಧಕ್ಕಿಂತ ಹೆಚ್ಚು (ದಕ್ಷಿಣ)ಕೊಡಗನ್ನು, ಮಂಡ್ಯ ಜಿಲ್ಲೆಯ ಅಮೂಲ್ಯವಾದ ದಕ್ಷಿಣದಂಚನ್ನು, ಇಡೀ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳನ್ನು, ಕರ್ನಾಟಕದ ಹೊರಗಿಡಲು ಸಿದ್ಧರಾಗಬೇಕಾಗುವುದು. ಕನ್ನಡಿಗರಿಗೆ ಇದು ಎಂತಹ ಆಘಾತವನ್ನುಂಟುಮಾಡುವುದೆನ್ನುವುದನ್ನು ಊಹಿಸಲೂ ಕಷ್ಟ; ಆದರೆ ಇದನ್ನು ಕ್ಷಣಕಾಲ ಬದಿಗಿರಿಸಿ, ಮಾರ್ಗಕಾರನು ಈ ನಿರ್ಣಯಕ್ಕೆ ಬರಲು ಇದ್ದ ಕಾರಣಗಳನ್ನು ಮತ್ತು ಅವನ ನಿರ್ಣಾಯಕ ನುಡಿಯಲ್ಲಿ ಅಡಗಿರುವ ವಾಸ್ತವಾಂಶವನ್ನು ತಿಳಿದುಕೊಳ್ಳ ಬೇಕೆಂದೆನಿಸುವುದು.

ಕನ್ನಡ ಜನಪದದ ಪೂರ್ವ ಮತ್ತು ಪಶ್ಚಿಮದ ಗಡಿಗಳನ್ನು ಗುರುತಿಸಲು ಮಾರ್ಗಕಾರನು ಎಳ್ಳಷ್ಟೂ ಆಸಕ್ತಿ ತೋರಲಿಲ್ಲವಾದ ಕಾರಣ ಅದು ಇಂದಿನ ಕೇರಳದಲ್ಲೆಲ್ಲಿ ಪಶ್ಚಿಮದಂಚನ್ನು ಪಡೆದಿತ್ತು ಮತ್ತು ತಮಿಳುನಾಡಿನಲ್ಲೆಲ್ಲಿ ಪೂರ್ವದಂಚನ್ನು ಪಡೆದಿತ್ತು ಎಂಬುದನ್ನು ಗ್ರಹಿಸಲೂ ಸಾಧ್ಯವಾಗದಂತಾಗಿದೆ. ಅಲ್ಲದೆ, ರಾಷ್ಟ್ರಕೂಟಪೂರ್ವ ಕಾಲದ ಇತಿಹಾಸದಲ್ಲಿ ಈ ಪ್ರದೇಶಗಳನ್ನು ಯಾವ ಯಾವ ಹೆಸರುಗಳಿಂದ ಕರೆಯಲಾಗುತ್ತಿತ್ತು ಮತ್ತು ಕರುನಾಟ-ಚೇರ-ಚೋಳ-ಪಾಂಡ್ಯ ರಾಜಕೀಯ ಶಕ್ತಿಗಳು ಈ ಪ್ರದೇಶವನ್ನು ಹೇಗೆ ಹಂಚಿಕೊಂಡಿದ್ದವು ಎಂಬುದನ್ನು ಅರಿತುಕೊಳ್ಳಲೂ ಸಾಧ್ಯವಾಗುತ್ತಿಲ್ಲ.

ಕರ್ನಾಟಕ-ತಮಿಳುನಾಡು ಗಡಿರೇಖೆಯನ್ನು ಮೂಡಿಸುತ್ತಾ ಹೊಗೆನಕಲ್ಲು ಪ್ರಪಾತ ದಿಂದ ಇಳಿದು, ಮೆಟ್ಟೂರಿನಲ್ಲಿ ಸ್ವಲ್ಪಕಾಲ ಮಡುಗಟ್ಟಿ, ತಮಿಳುನಾಡನ್ನು ಹೊಕ್ಕು, ಅಲ್ಲಿಂದ ನೇರವಾಗಿ ದಕ್ಷಿಣಾಮುಖಿಯಾಗಿ ಹರಿದು, ಕರೂರ ಬಳಿ ಬಲಮುರಿಗೊಂಡು (ಶಂಗಂ ಕಾಲದ ಚೋಳ ರಾಜಧಾನಿಯಾದ ಉಱೈಯೂರ್) ಇಂದಿನ ತಿರುಚಿರಾಪಳ್ಳಿಯ ಪ್ರದೇಶವನ್ನು ಕಾವೇರಿ ತಲುಪುವುದು. ಶ್ರೀರಂಗಂ ಮುಟ್ಟುವ ಮುನ್ನ ಇಬ್ಭಾಗಗೊಂಡು, ಕೊಲೆನೂರ್ (ಕೊಲ್ಲಿಡಮ್) ಹೆಸರಿನ ಇದರ ಒಂದು ಶಾಖೆ ಈಶಾನ್ಯ ದಿಕ್ಕು ಹಿಡಿದು ಮೇಲೇರುತ್ತಾ ಪೋರ್ತುನೋವೋ (ಪರಂಗಿಪೇಟ್ಟೈ) ಬಳಿ ಬಂಗಾಳ ಸಮುದ್ರದ ಉಪ್ಪು ನೀರಿನಲ್ಲಿ ಬೆರೆತುಕೊಂಡರೆ, ತನ್ನ ಜನ್ಮನಾಮವನ್ನು ರಕ್ಷಿಸಿಕೊಂಡೇ ಮುನ್ನಡೆವ ಇನ್ನೊಂದು ಶಾಖೆ ಮೂರು ಡಜನ್ ರೆಂಬೆಗಳಲ್ಲಿ ವಿಸ್ತರಿಸಿಕೊಳ್ಳುತ್ತಾ ಅತಿರಾಮಪಟ್ಟಣಂ-ಕೋಡಿಕ್ಕರೈಗಳ ಪರಿಸರದ ಸಾಗರದಲ್ಲಿ ಸಂಗಮಗೊಳ್ಳುವುದು.

ಅಂದರೆ, ಕಾವೇರಿ ಹೆಚ್ಚು ಮೈ ತುಂಬಿಕೊಳ್ಳುವುದು ಕರ್ನಾಟಕದಲ್ಲಿ, ಮೈ ಕಳಚಿಕೊಳ್ಳುವುದು ತಮಿಳುನಾಡಿನಲ್ಲಿ ಎಂದರ್ಥ.

ಈ ನದಿಯ ಪಾವಿತ್ರ್ಯತೆಯ ಬಗ್ಗೆ ಇತಿಹಾಸಯುಗದಾರಂಭಕಾಲದ ಕನ್ನಡಿಗರಲ್ಲಿದ್ದ ಸದ್ಭಾವನೆಯ ಬಗ್ಗೆ ಅನುಮಾನವಿಲ್ಲ; ಆದರೆ, ರಾಷ್ಟ್ರಕೂಟಪೂರ್ವದ ಕನ್ನಡನಾಡಿನ (ಗಂಗರನ್ನು ಮೊದಲ್ಗೊಂಡು) ಅರಸುಮನೆತನಗಳು ಶಂಗಂ ಕಾಲದ ತಮಿಳರಂತೆ ಗಾಢವಾದ ಭಾವನಾತ್ಮಕ ಸಂಬಂಧವನ್ನು ಕಾವೇರಿಯೊಡನೆ ಹೊಂದಿರಲಿಲ್ಲವೆಂಬುದು ಮಾತ್ರ ಐತಿಹಾಸಿಕ ಸತ್ಯ. ಕಾವೇರಿಯನ್ನು ಹೆಸರಿಸುವ ಕೈ ಬೆರಳೆಣಿಸುವಷ್ಟು ದಾಖಲೆಗಳು ಈ ಕಾಲದ ಕನ್ನಡ ಪ್ರದೇಶದಲ್ಲಿ ದೊರೆತರೂ ಅವುಗಳಲ್ಲಿ ಹೆಚ್ಚಿನವು ಮಾರ್ಗಕಾರನು ಗುರುತಿಸಿದ ಸೀಮಾರೇಖೆಯ ಹೊರಗೆ (ಅಂದರೆ ಕಾವೇರಿಯ ದಕ್ಷಿಣಕ್ಕೆ) ಇರುವುದು ಮತ್ತು ಪೂರ್ವಾರ್ಧದ (ಮೇಲ್ಕಾವೇರಿ) ಕಾವೇರಿಯನ್ನಲ್ಲದೆ ಉತ್ತರಾರ್ಧದ (ಕರೂರು-ಕಾವೇರಿಪಟ್ಟಿಣಂ ಪ್ರದೇಶದ) ನದಿಯನ್ನೇ ಅವು ಹೆಚ್ಚು ಗುರುತಿಸಿರುವುದು ಕುತೂಹಲ ಕಾರಕ. ಇದಕ್ಕೆ ಭಿನ್ನವಾಗಿ ಕಾವೇರಿಯನ್ನು ಹೆಸರಿಸುವ-ಶ್ಲಾಘಿಸುವ ಉಲ್ಲೇಖಗಳಿಗೆ ಶಂಗಂ ಸಂಕಲನದಲ್ಲಾಗಲೀ ಶಂಗಂ ಕಾಲಾನಂತರದ ತಮಿಳು ಶಾಸನಗಳಲ್ಲಾಗಲೀ ಕೊರತೆ ಇಲ್ಲ.

## ಶಂಗಂ ಕವಿಗಳ 'ಕಾವಿರಿ':

ಕಾವೇರಿ ಪರಿಸರದಲ್ಲಿ ಪಟ್ಟಣಗಳನ್ನು ಕಟ್ಟಿ ಆಳಿದ ಶಂಗಂ ಅರಸರು ಮತ್ತು ನಿವಾಸಿಗಳು ಈ ನದಿಯನ್ನು 'ಕಾವಿರಿ' ಎಂದು ಗುರುತಿಸಿ, ಅದರೊಡನೆ ತಮಗಿದ್ದ ಭಾವನಾತ್ಮಕ ಹಾಗೂ ಭೌಗೋಳಿಕ ಸಂಬಂಧವನ್ನು ಘೋಷಿಸಿಕೊಂಡಿರುವರು.[೩] ಇವುಗಳಲ್ಲಿ ಕನಿಷ್ಠ ನಾಲ್ಕು ವರ್ಗಗಳನ್ನು ನಾವು ಗುರುತಿಸಬಹುದಾಗಿದ್ದು, ಅವು ಇಂತಿವೆ:

೧. 'ತಮಿಳಗಂ'ವನ್ನು ಹಂಚಿಕೊಂಡು ಆಳುತ್ತಿದ್ದ ಪ್ರಧಾನ ಅರಸುಮನೆತನಗಳಾದ 'ಮೂವೇಂದರ್' ಎಂದೇ ಹೆಸರುವಾಸಿಗಳಾದ ಪಾಂಡ್ಯ, ಚೋಳ ಮತ್ತು ಚೇರರುಗಳನ್ನು ಇಲ್ಲವೇ ಇವರಲ್ಲಿ ಒಬ್ಬಿಬ್ಬರನ್ನು ನೆನೆಯುವಾಗ ಶಂಗಂ ಕವಿ-ಕಬ್ಬಗಿತ್ತಿಯರು ಕಾವಿರಿಯನ್ನೂ ಸಂದರ್ಭಿಸುವರು.

೨. ಈ ನದೀ ದಡದ ಮೇಲಿದ್ದ 'ಉಱೈಯೂರ್' ಪಟ್ಟಣದಿಂದ ಆಳಿದ ಚೋಳರಿಗಂತೂ ಕಾವಿರಿ ಜೀವನಾಡಿಯೇ ಆಗಿತ್ತು. ಶಂಗಂ ಕಾವ್ಯಗಳಲ್ಲಿ ಬರುವ ಬಹುತೇಕ ಉಲ್ಲೇಖಗಳು, ಕರೂರಿನಿಂದ ಉಱೈಯೂರ್ ಸೇರಿ ಅಲ್ಲಿಂದ ಪುಗಾರ್ ಬಳಿ ಬಂಗಾಳ ಸಾಗರವನ್ನು ಕೂಡುವ ಕಾವಿರಿಯನ್ನು ಸೂಚಿಸುವುವು.

೩. ಚೋಳರ ಮಾಂಡಳಿಕರಾಗಿ ಇಲ್ಲವೆ ಸ್ವತಂತ್ರ ನಾಯಕರಾಗಿ ಆಳಿದ ಕೆಲವು ಅರಸರು ತಮ್ಮ ತಮ್ಮ ಪ್ರದೇಶದ ಕಾವಿರಿಯೊಡನೆ ಹತ್ತಾರು ಬಗೆಯಲ್ಲಿ ಗುರುತಿಸಿಕೊಂಡಿರುವರು.

೪. ಇವರೆಲ್ಲರ ಪೋಷಣೆ ಪಡೆದು ಕಾವಿರಿ ಪ್ರದೇಶದಲ್ಲಿ ನೆಲೆನಿಂತಿದ್ದ ಶಂಗಂ ಕವಿಗಳು ತಮ್ಮ ಪೋಷಕರನ್ನೂ ಅವರ ಅಧಿಕಾರ ಕಕ್ಷೆಯಲ್ಲಿದ್ದ ಭೂಪ್ರದೇಶವನ್ನೂ *(ನಾಟ್ಟುವಾೞ್ತ್ತು)* ಕೊಂಡಾಡುವಾಗ ತಮ್ಮ ಕವನಗಳಲ್ಲಿ ಕಾವಿರಿಯನ್ನೂ ಸ್ಮರಿಸುವರು.[೪]

ಮೂವೇಂದರಿಗೆಲ್ಲರಿಗೂ ಸಮಾನ ಪ್ರಮಾಣದಲ್ಲಿ ಪ್ರಸ್ತುತವಾಗಿರದೆ ಚೋಳರಿಗೆ (ಅವರ ಅಧೀನ ಅರಸರಿಗೆ) ಕಾವಿರಿ ಹೆಚ್ಚು ಪ್ರಸ್ತುತವಾಗಿತ್ತಲ್ಲದೆ ಇವಳು 'ಮಾನವಕುಲದ ಮಾತೃ'ವಿನಂತೆ ಅವರಿಗೆ ಕಂಡಳು.[೫] ಪಾಂಡ್ಯರ ರಾಜಧಾನಿಪಟ್ಟಣ ಕೂಡಲ್ (ಮದುರೈ) ವೈಯೈ (ವೈಗೈ) ನದಿ ದಡದ ಮೇಲೆ ಇದ್ದದ್ದು ಮತ್ತು ಚೇರರ ರಾಜಧಾನಿ ವಂಜಿಪೊರುಣ್ಣೈ ಅಥವಾ ಆನ್‌ಪೊರುಣ್ಣೈ ನದಿಗೆ ಹೊಂದಿಕೊಂಡಿದ್ದು ಇದಕ್ಕೆ ಕಾರಣವಾಗಿರಬಹುದು. ಕಾವೇರಿಯ ಉಗಮಸ್ಥಾನವಾದ ತಲಕಾವೇರಿಗೆ ಚೇರರು ತುಂಬಾ ಸನಿಹದಲ್ಲಿದ್ದರೂ ಚೇರ ಕವಿಗಳು ಈ ನದಿಯನ್ನು ಚೋಳರಂತೆ ತಮ್ಮ ಕಾವ್ಯವಸ್ತುವನ್ನಾಗಿ ಮಾಡಿಕೊಳ್ಳದಿರುವುದು ತುಂಬಾ ಕುತೂಹಲಕಾರಕ.

ಮೂವೇಂದರ್ ರಕ್ಷಣೆಯಲ್ಲಿದ್ದ 'ಮನಮೋಹಕ ಕಾವಿರಿ'ಯನ್ನೊಳಗೊಂಡ ತಮಿಳಗಂ ಮತ್ತು ಚೋಳ-ಪಾಂಡ್ಯರಿಬ್ಬರೂ 'ತಂಪುಕಾವಿರಿ' ದಡದ ಮೇಲೆ ಸಂಧಿಸಿದ ಒಂದು ಪ್ರಸಂಗ ಪುಱನಾನೂಱಿನಲ್ಲಿ ಪ್ರಸ್ತಾಪಿಸಲ್ಪಟ್ಟಿದೆ, 'ಚೋಳರ ಕಾವಿರಿ' ಅಥವಾ 'ಕಾವಿರಿಯ ಚೋಳದೇಶ'ವನ್ನು ಅಗನಾನೂಱು ಮತ್ತು ಪತ್ತುಪಾಟ್ಟು ಉಲ್ಲೇಖಿಸುವುವು.[೬]

ಅಲ್ಲದೆ, ಕಾವಿರಿ ಪ್ರವಹಿಸುವ ಮರುದಮ್ ಪ್ರದೇಶದಲ್ಲಿ ಆಳುತ್ತಿದ್ದ ಚೋಳನನ್ನು ಕಳವಟಿಯ ಕವಿ ಪೊಯ್‌ಗೈಯಾರ್ ಕೊಂಡಾಡಿರುವನು. ಶಂಗಂ ಚೋಳರಲ್ಲಿ ಕರಿಕಾಲ ಮತ್ತು ಕಿಳ್ಳಿ ವಿಶೇಷವಾಗಿ ಕಾವಿರಿಯೊಡನೆ ಗುರುತಿಸಿಕೊಂಡಿದ್ದರೆನ್ನಬಹುದು. ಶಿಷ್ಟಜನಪರಿಪಾಲಕನಾದ ಚೋಳನ 'ಕನ್ಯೆ'ಯೆಂದೇ ಕಾವಿರಿಯನ್ನು *ಮಣಿಮೇಗಲೈ* ಗುರುತಿಸಿದರೆ, ಇವನನ್ನು 'ಕಾವಿರಿನಾಡಾನ್' ಎಂದು *ಶಿಲಪ್ಪದಿಗಾರಂ* ಸಂಬೋಧಿಸುವುದು.[೭]

ಕೆಲವು ಚಿಕ್ಕಪುಟ್ಟ ಅರಸರು (ಶಿಱ್ರರಸರ್, ವೇಳಿರ್, ಮನ್ನರ್, ಉರ್ಕಿಲರ್, ಮುಂ.) ಕಾವಿರಿ ಪ್ರದೇಶವನ್ನು ಹಂಚಿಕೊಂಡು ಆಳುತ್ತಿದ್ದುದನ್ನು ಶಂಗಂ ಸಾಹಿತ್ಯದಲ್ಲಿ ಸ್ಪಷ್ಟಗೊಳಿಸಲಾಗಿದೆ. ಅಂಥವರಲ್ಲಿ 'ಐಯ್ಯೆ', 'ತಿತ್ತನ್', 'ಪಣ್ಣನ್', 'ಪರದವರ್‌ಮತ್ತಿ' ಮುಂತಾದವರು ಹೆಸರಾರ್ಹರು.[೮] ಅಂಬರ್ ಊರಿನ ದೊರೆಯಾದ ಅರುವಂದೈ ಹಾಗೂ ಕಾವಿರಿಯ ಒಡೆಯನೆಂದು ಕರೆದುಕೊಂಡ 'ವಳವನ್'ನನ್ನಲ್ಲದೆ ಈ ನದಿಯೊಡನೆ ನಿಕಟ ಸಂಬಂಧಹೊಂದಿದ್ದ ಕಿಳ್ಳಿ ಮತ್ತು ಅವನ ಸೋದರ ಮೂವಳತ್ತಾನ್‌ನನ್ನು ಪುಱನಾನೂಱು ಹೆಸರಿಸುವುದು.[೯]

ಕಾವಿರಿ ಪ್ರದೇಶದಲ್ಲಿ ನೆಲೆಸಿದ್ದ ಕನಿಷ್ಠ ಇಪ್ಪತ್ತು ಶಂಗಂ ಕವಿಗಳ ಬಗ್ಗೆ ಮಾಹಿತಿ ದೊರೆಯುವುದು. ಇವರಲ್ಲಿ ಕನಿಷ್ಠ ಐವರು *ಅಗನಾನೂಱುವಿನಲ್ಲಿ*, ಒಂಬತ್ತು ಪುಱನಾನೂಱುವಿನಲ್ಲಿ, ಮೂವರು ಪತ್ತುಪಾಟ್ಟುವಿನಲ್ಲಿ ತಮ್ಮ ಹೆಸರು ಬಿಟ್ಟಿರುವರು.[೧೦] ಇದಲ್ಲದೆ *ಕಳವಟಿ*, *ಮಣಿಮೇಗಲೈ* ಮತ್ತು *ಶಿಲಪ್ಪದಿಗಾರಂ* ಕರ್ತೃಗಳೂ ಈ ನದಿಯ ಬಗ್ಗೆ ಸಾಕಷ್ಟು ವಿವರಗಳನ್ನಿತ್ತಿರುವರು.[೧೧] ಇವರಲ್ಲಿ ಕೆಲವರು ತಮ್ಮ ಹುಟ್ಟೂರುಗಳಿಂದ ಗುರುತಿಸಿಕೊಂಡಿರುವುದರಿಂದ, ಈ ಮಾಹಿತಿಯನ್ನು ಬಳಸಿಕೊಂಡು ಕಾವಿರಿ ಪ್ರದೇಶದ ಶಂಗಂ ಕವಿಗಳ ಭೂಗೋಳವನ್ನು ಸಿದ್ಧಗೊಳಿಸಬಹುದು; ಆದರೆ ತಮಿಳು ವಿದ್ವಾಂಸನಿಗೆ ಇದು ಸುಲಭಸಾಧ್ಯವಾಗಬಲ್ಲದೇ ವಿನಃ ನನಗಲ್ಲ. ಇದು ಏನೇ ಇರಲಿ, ಕಾವಿರಿಪ್ಪೂಪಟ್ಟಿಣಂ ಪ್ರದೇಶದ ಕವಿಗಳನ್ನು ಗುರುತಿಸಲು ತುಂಬಾ ಶ್ರಮಪಡಬೇಕಾಗಿಲ್ಲ.[೧೨]

### ಶಂಗಂ ಕಾವೇರಿಯ ಕೆಲವು ನಿದರ್ಶನಗಳು:

ಶಂಗಂ ಕವಿಗಳಲ್ಲಿ ಕೆಲವರು ಕಾವಿರಿಯನ್ನು ಆನುಷಂಗಿಕವಾಗಿ ಮಾತ್ರ ಹೆಸರಿಸಿ ಅದರ ಬಗ್ಗೆ ಹೆಚ್ಚಿನ ವಿವರಗಳನ್ನು ಕೊಡುವುದಿಲ್ಲ. *ಅಗನಾನೂಱಿನ* ನೆಡುಂಕೀಱಣಾರ್, ಪುಱನಾನೂಱಿನ ಕೋವೂರ್‌ಕ್ಕಿಟಾರ್ ಇದಕ್ಕೆ ನಿದರ್ಶನ. ಈ ನದಿಯ ಬಗ್ಗೆ ಅಲ್ಪಸ್ವಲ್ಪ ವಿವರಕೊಡುವ ಕವಿಗಳಲ್ಲಿ ಕಾವಿರಿಪ್ಪೂಪ್ಪಟ್ಟಿನತ್ತು ಕಾರಿಕಣ್ಣನಾರ್ ಮತ್ತು ಮರೋಕತ್ತು

ನಪ್ಪಶಲ್ಲೈಯಾರ್ ನಿದರ್ಶನಾರ್ಹರು. ಕಾರಿಕಣ್ಣಾರ್ ಇದನ್ನು 'ತಂಪುಕಾವಿರಿ' ಎಂದು ಕರೆದರೆ, ಇದರ ಅದ್ಭುತ ಓಘದ ಮೂಲಕ ಅದರ ವೈಶಿಷ್ಟ್ಯವನ್ನು ನಪ್ಪಶಲ್ಲೈಯಾರ್ ಗುರುತಿಸಿರುವನು. ಸಾಗರದಲ್ಲಿ ಐಕ್ಯವಾಗುವ ಕಾವಿರಿಯನ್ನು ವಿವರಿಸುತ್ತಾ ಆ ಸಂಗಮ ಸ್ಥಾನದಲ್ಲಿದ್ದ 'ಸೋಮಗುಂಡಮ್' ಮತ್ತು 'ಸೂರ್ಯಗುಂಡಮ್' ಸ್ನಾನಘಟ್ಟಗಳನ್ನು ಇಳಂಗೋ ಅಡಿಗಳ್ ಪರಿಚಯಿಸಿಕೊಡುವನು.[೧೩]

ಚೋಳರಾಜ್ಯವನ್ನು ತೊಯ್ಯುತ್ತಾ ಮುನ್ನಡೆಯುವಾಗ ಇದು ಸಮೃದ್ಧಗೊಳಿಸುವ ಕ್ಷೇತ್ರಗಳಲ್ಲಿ ಕೆಲವು ಶಂಗಂ ಕವಿಗಳ ವಿಶೇಷ ಗಮನ ಸೆಳೆದವೆಂದು ಕಾಣುವುದು. ಕರಿಕಾಲನ ರಾಜ್ಯವನ್ನು ಈ ನದಿ ಎಷ್ಟು ಸಾರವತ್ತಾಗಿಸಿತ್ತೆಂಬುದನ್ನು ಮನದಟ್ಟು ಮಾಡಿಕೊಡಲು ಪತ್ತುಪಾಟ್ಟುವಿನ ಕವಿ ನಕ್ಕೀರರ್ 'ಇಲ್ಲಿಯ ಒಂದು ವೇಲಿ ಕ್ಷೇತ್ರವು ಒಂದು ಸಹಸ್ರ ಕಲಮ್ ಭತ್ತವನ್ನು ಉತ್ಪಾದಿಸುವುದು' ಎಂಬ ನಿದರ್ಶನದಿಂದ ಸಾಧಿಸಿ ತೋರಿಸಿರುವನು. ಇದು ಅನೇಕ ಜಲಚರ ಮತ್ತು ಖನಿಜ ಸಂಪತ್ತಿನ ಕಣಜವಾಗಿತ್ತೆಂಬುದನ್ನು ಮನದಟ್ಟು ಮಾಡಿಕೊಡಲು ಪುಗಾರ ಬಂದರುಪಟ್ಟಣದಲ್ಲಿ ನಡೆಯುತ್ತಿದ್ದ ಬಿರುಸಿನ ವ್ಯಾಪಾರದಲ್ಲಿ ಅವುಗಳ ಕೊಡ-ಕೊಳ್ಳುವಿಕೆಯಾಗುತ್ತಿದ್ದುದನ್ನು ಕಡಿಯಲೂರ್ ಉರುತ್ತಿರಂಗಣ್ಣಾರ್ ಚಿತ್ರಿಸಿರುವನು. ಈ ಕವಿಗಳಲ್ಲಿ ಅನೇಕರು ತಮ್ಮ ಹುಟ್ಟೂರುಗಳನ್ನು ತಿಳಿಸಿರುವುದಲ್ಲದೆ ಕಾವೇರಿ ದಡದ ಮೇಲಿನ ಕೆಲವು ಪಟ್ಟಣಗಳನ್ನೂ ಹೆಸರಿಸಿರುವರು. ಉಜ್ಜೈಯೂರನ್ನು ಕವಿ ಮಾಮೂಲಣಾರ್, ಕಟೂರನ್ನು ಕವಿ ಪರಣರ್, ಅರುವಂದೈಯನ್ನು ಕವಿ ಕಲ್ಲಾಡನಾರ್, ಆವೂರನ್ನು ಕವಿ ಮೂಲಂಕಿಟಾರ್, ಸಂಬಾಪತಿಪಟ್ಟಣ (ಕಾವೇರಿಪಟ್ಟಣ)ವನ್ನು ಕವಿ ಸೀತ್ತಲೈಸಾತ್ತನ್ನಾರ್ ಗುರುತಿಸಿರುವುದು ಇದಕ್ಕೆ ನಿದರ್ಶನ.

ಕಾವಿರಿ ನದಿ ದಡದ ಮೇಲೆ ಸಂಭವಿಸಿದ ಕೆಲವು ಘಟನೆಗಳು ಪರಣರ್ ಮತ್ತು ತಾಮಪ್ಪಲ್ ಕಣ್ಣಣಾರ್‌ಗಳ ಕಥನ ವಸ್ತುಗಳಾದವು. ಇಂತಹ ಒಂದು ಘಟನೆಯನ್ನು ನಿರೂಪಿಸಲು ಕನಿಷ್ಠ ನಾಲ್ಕು ಕವನಗಳನ್ನು ರಚಿಸಿ ಶಂಗಂ ಸಾಹಿತ್ಯದಲ್ಲಿ ಒಂದು ಬಗೆಯ ದಾಖಲೆಯನ್ನೇ ಪರಣರ್ ನಿರ್ಮಿಸಿದನು. ಇದು ಕಾವಿರಿ ನದೀದಡದ ಕಟೂರ್ ಪಟ್ಟಣಕ್ಕೆ ಸಂಬಂಧಪಟ್ಟದ್ದಾಗಿತ್ತು. ಪರದವರ್(ಮೀನುಗಾರರ ನಾಯಕ)ಮತ್ತಿ ಈ ಪಟ್ಟಣದ ಅಧಿ ಪತಿಯಾಗಿದ್ದಾಗ,[೧೪] ಆಟ್ಟನತ್ತಿ ಎಂಬ ನಟುವನು ಕಟೂರ್ ಜಲಪಾತದ ಬಳಿ ನರ್ತಿಸುತ್ತಾ (ಒತ್ತೇರಿಬಂದ) ಈ ನದಿಯಲ್ಲಿ ಬಿದ್ದು ಕೊಚ್ಚಿಹೋಗುವನು; ಇದನ್ನು ಕಣ್ಣಾರೆಕಂಡ (ಅವನ ಪ್ರೇಯಸಿ) ಆದಿಮಂದಿ ಅವನನ್ನು ರಕ್ಷಿಸಲು ಪ್ರಯತ್ನಿಸಿ ಅವಳೂ ಜಲಸಮಾಧಿ ಯಾಗುವಳು. ಚೋಳ ಅರಸನಾದ ಕರಿಕಾಲನು ತನ್ನ ಬಂಧುಬಳಗದೊಂದಿಗೆ ಜಲಕ್ರೀಡೆಯಲ್ಲಿ ತೊಡಗಿದ್ದಾಗಲೇ ಈ ಘಟನೆ ಸಂಭವಿಸುವುದು.[೧೫]

ತಾಮಪ್ಪಲ್ ಕಣ್ಣನಾರ್ ಬಣ್ಣಿಸಿರುವ ಘಟನೆಯೂ ಇಷ್ಟೇ ಸ್ವಾರಸ್ಯಕರವಾಗಿದೆ. ಒಮ್ಮೆ ನಳಂಕಿಳ್ಳಿ ತನ್ನ ತಮ್ಮನಾದ ಮಾವಳತ್ತಾನ್ ಜೊತೆಗೂಡಿ ಈ ಕವಿಯೊಡನೆ ಪಗಡೆಯಾಡುತ್ತಿದ್ದಾಗ ಆಟದ ಒಂದು ಘಟ್ಟದಲ್ಲಿ ಯಾವುದೋ ಕಾರಣದಿಂದಾಗಿ ಉದ್ರಿಕ್ತಗೊಂಡ ಮಾವಳತ್ತಾನ್ ದಾಳಗಳನ್ನು ಕವಿಯಕಡೆ ತೂರಿಬಿಸಾಡುವನು. ಈ ಅಸಹಜ ವರ್ತನೆಯಿಂದ ಅಸಮಾಧಾನಗೊಂಡ ಕಣ್ಣನಾರ್ 'ಸಿಬಿಯ ವಂಶಸ್ಥನೂ ಸುಪ್ರಸಿದ್ಧ ಕಿಳ್ಳಿಯ ಸೋದರನೂ ಆದವನಿಂದ ಇಂತಹ ವರ್ತನೆಯನ್ನು ನಾನು ಎಣಿಸಿರಲಿಲ್ಲ' ಎಂಬ ಮಾತುಗಳಿಂದ ಅರಸುಕುಮಾರನನ್ನು ಛೇಡಿಸುವನು. ಅವನ ಪೂರ್ವಜರೆಲ್ಲರೂ 'ಪಾರ್‌ಪ್ಪಾರ್' (ಪಂಡಿತ ಅಥವಾ ಪೂಜ್ಯಮುನಿ)ಗಳನ್ನು ಗೌರವಿಸಿಕೊಂಡು ಬಂದಿದ್ದ ಬಗೆಯನ್ನೂ ಅವನ ಗಮನಕ್ಕೆ ತಂದುಕೊಡುವನು. ಇದರಿಂದ ತನ್ನ ತಪ್ಪನ್ನರಿತುಕೊಂಡ ಅರಸುಕುಮಾರ ಕ್ಷಮೆಯಾಚಿಸಿ, ಕಾವಿರಿ ದಡದ ಮೇಲೆ ಕಣ್ಣನಾರ್ ನೆಲೆನಿಲ್ಲುವ ಕೃಪೆ ತೋರಬೇಕೆಂದು ಪ್ರಾರ್ಥಿಸಿಕೊಳ್ಳುವನು.[೧೬]

ಇಲ್ಲಿ ಬರುವ ಮೊದಲನೆಯ ಘಟನೆ *ಅಗನಾನೂಱು* ಪ್ರಭೇದಕ್ಕೆ ಸೇರಿದ್ದರೆ, ಎರಡನೆಯದು *ಪುಱನಾನೂಱು* ಪ್ರಭೇದಕ್ಕೆ ಸೇರಿದೆ.[೧೭]

**ತಮಿಳು ಶಾಸನಗಳಲ್ಲಿ ಕಾವಿರಿ:**

ಆರಂಭಕಾಲದ ತಮಿಳು ಶಾಸನಗಳಲ್ಲಿ (ಕ್ರಿ.ಪೂ. ೨ರಿಂದ ಕ್ರಿ.ಶ. ೫ನೆಯ ಶತಕ) ಕಾವಿರಿಯ ಪ್ರಸ್ತಾಪವಿಲ್ಲ. ವಾಸ್ತವವಾಗಿ ತಮಿಳುನಾಡಿನ ಯಾವ ನದಿಯನ್ನೂ ತಮಿಳುಬ್ರಾಹ್ಮೀ (ಕ್ರಿ.ಪೂ. ೨ರಿಂದ ಕ್ರಿ.ಶ. ೪ನೆಯ ಶತಕ) ಮತ್ತು ಆರಂಭಕಾಲದ ವಟ್ಟೆಳುತ್ತು (ಕ್ರಿ.ಶ. ೫-೬ನೆಯ ಶತಕಗಳಲ್ಲಿ) ಶಾಸನಗಳು ಹೆಸರಿಸುವುದಿಲ್ಲ.[೧೮] ಆದರೆ ಆ ನಂತರದ ಶಾಸನಗಳಲ್ಲಿ ಇದರ ಉಲ್ಲೇಖ ಅಷ್ಟೇನೂ ಅಪರೂಪವಾಗಿಲ್ಲ. ಇವುಗಳಲ್ಲಿ ಕೆಲವನ್ನು ಇಲ್ಲಿ ಗಮನಿಸಬಹುದು:

೧. ತನ್ನ ಉಗಮಸ್ಥಾನದಿಂದ ಸಮುದ್ರ ಸೇರುವವರೆಗಿನ ಪ್ರದೇಶದಲ್ಲಿ ಪ್ರವಹಿಸುವ ಕಾವಿರಿ ನದಿಯ ಇದ್ದಂಡೆಗಳಗುಂಟ ಅನೇಕ ದೇವಾಲಯಗಳನ್ನು ಚೋಳ ವಿಜಯಾಲಯನ ಪುತ್ರನಾದ ರಾಜಕೇಸರಿ ಕಟ್ಟಿಸಿದನೆಂದೂ ಕರಿಕಾಲನು ಇದಕ್ಕೆ ಒಂದು ಒಡ್ಡು ಇಕ್ಕಿಸಿದನೆಂದೂ ಅನ್ಬಿಲ್ ಮತ್ತು ಲೈಡನ್ ತಾಮ್ರಪಟಶಾಸನಗಳಲ್ಲಿ ವಿವರಿಸಲಾಗಿದೆ. ಈ ವಿವರಗಳು *ಕಲಿಂಗತ್ತುಭರಣಿ, ವಿಕ್ಕಿರಮ ಚೋಳನ್ ಉಲಾ, ಶಂಕರಚೋಳನ್ ಉಲಾ* ಮುಂತಾದ ಅರೆ-ಐತಿಹ್ಯ ಗ್ರಂಥಗಳಲ್ಲಿಯೂ ಮರುಧ್ವನಿಸಿವೆ.[೧೯]

೨. ತ್ರಿಶುರಾಪಲ್ಲಿ (ತಿರುಚಿನಾಪಳ್ಳಿ) ಗುಹಾಲಯದ ಎರಡು ಸ್ತಂಭಶಾಸನಗಳು ಕಾವಿರಿ ನದಿದಡದ ಮೇಲೆ ಪಲ್ಲವ ಗುಣಭದ್ರನು ಕೊರೆಸಿದ ಶಿವಾಲಯದ ವಿವರಗಳನ್ನು

ಕೊಡುವುವು. 'ಕಣ್ಣೂರೆಗೊಳಿಸುವ ಝುರಿ, ವನಮಾಲೆಗಳಿಂದ ಶೋಭಿಸುವ ಪರಿಶುದ್ಧ ಕಾವಿರಿಯನ್ನು ಕಂಡು, (ಸಹಜವಾಗಿ) ನದಿಗಳಿಗೆ ಮನಸೋಲುವ ಶಿವನು ಪರಸತಿಯಾಗಿದ್ದ ಇವಳಲ್ಲಿಯೂ ಅನುರಕ್ತನಾಗಿಬಿಡುವನೇನೋ ಎಂಬ ಭಯದಿಂದ ಗಿರಿರಾಜನ ಪುತ್ರಿ (ಪಾರ್ವತಿ) ತನ್ನ ತಂದೆಯ ಮನೆಯನ್ನು ಶಾಶ್ವತವಾಗಿ ತ್ಯಜಿಸಿ, ಪಲ್ಲವರಿಗೆ ಪ್ರಿಯವಾದ ಕಾವಿರಿ ಪ್ರವಹಿಸುವ ಈ ಬೆಟ್ಟದ ಮೇಲೆ ಭದ್ರವಾಗಿ ನೆಲೆ ನಿಲ್ಲಲು ಬಂದಳು' ಎಂದು ಈ ಶಾಸನ ಕವಿಯು ವರ್ಣಿಸಿರುವನು. 'ಭೂಮಿಯ ಮೇಲಿನ ಈ ದೇವಕುಳದಲ್ಲಿ ನಿಂತು ಹೇಗೆ ತಾನೆ ಚೋಳರಾಜ್ಯದ ವಿಶಾಲ ಸಂಪತ್ತನ್ನಾಗಲೀ ಕಾವಿರಿಯ ವೈಶಾಲ್ಯತೆಯನ್ನಾಗಲೀ ನಾನು ಕಂಡುಕೊಳ್ಳಲು ಸಾಧ್ಯ?', ಎಂದು ಶಿವ ಪ್ರಶ್ನಿಸಿಕೊಂಡನೆಂದು ಇನ್ನೊಂದು ಸ್ತಂಭಶಾಸನದ ಕವಿ ತಿಳಿಸುವನು.[೨೮]

೩. ಪೆಣ್ಣಾಗಡಮ್ (ತಂಜಾವೂರು ಜಿಲ್ಲೆಯ ಗ್ರಾಮ)ದ 'ಕಾಡವ'ನನ್ನು ಕಾವಿರಿಯ ದಕ್ಷಿಣ ದಡದ ಮೇಲೆ ನೆಡುಂಚೆಟಿಯನ್ ಸೋಲಿಸಿದ ವಿವರ ಕ್ರಿ.ಶ. ಸು. ೭೫೦ರ ವೇಳ್ವಿಕುಡಿ ತಾಮ್ರಪಟದಲ್ಲಿ ಬರುವುದು. ಬಳ್ಳಿ ಮತ್ತು ಬಿರಿಮೊಗ್ಗುಗಳಿಂದ ತುಂಬಿ ತುಳುಕುವ ಕೊಳಗಳಿಂದೊಡಗೂಡಿದ, ದಟ್ಟವಾದ ವನಪ್ರದೇಶದಲ್ಲಿ ಹರಿಯುವ 'ಕಾವಿರಿ' ಯನ್ನು ದಾಟಿ, ಮಟಕೊಂಗಮನ್ ಮತ್ತು ಪಾಂಡಿಕ್ಕೊಡುಮಿಡಿಯರ್‌ಗಳನ್ನು ಶರಣಾಗತಿಸಿ ಕೊಂಡು, ಸುಗಂಧ ಪುಷ್ಪಮಾಲೆಯಿಂದ ಸದಾ ಅಲಂಕರಿಸಿಕೊಳ್ಳುವ ಗಂಗರಾಜ [ಗಂಗಮಂಡಲದ ಅರಸ]ನೊಡನೆ ವಿವಾಹ ಸಂಬಂಧವನ್ನು ಬೆಳೆಸಿಕೊಂಡ ತೇರುಮಾಱನ್ (ರಥಾರೂಢ ಮಾಱನ್)ನನ್ನು ಇಲ್ಲಿ ಹೊಗಳಲಾಗಿದೆ.[೨೯]

ಈ ಕಾವಿರಿ ಗಂಗರಾಜ್ಯದ ಗಡಿಯಾಗಿತ್ತೊ ಅಥವಾ ಅದಕ್ಕಿಂತ ಇನ್ನೂ ಸ್ವಲ್ಪ ದಕ್ಷಿಣಕ್ಕೆ ಹರಿಯುವ ನದಿಯಾಗಿತ್ತೋ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಕಷ್ಟ. ಇಲ್ಲಿ ತಲಕಾಡು ಪ್ರದೇಶದ ಕಾವೇರಿಯನ್ನು ಮತ್ತು ಗಂಗಮಂಡಲದ ದಕ್ಷಿಣ (ಆದರೆ ಕಾವಿರಿಯ ಉತ್ತರಕ್ಕಿದ್ದ) ಭಾಗವನ್ನು ಆಳುತ್ತಿದ್ದ *ಕೊಂಗ* ಮತ್ತು *ಪಾಂಡಿಯರ*ನ್ನು ಹೆಸರಿಸಿ, ಇವರೆಲ್ಲರನ್ನೂ ನೆಡುಂಜಡೆಯನ್ ಸೋಲಿಸಿದನೆಂದು ತಿಳಿಸಲಾಗಿದೆ. ಅಲ್ಲದೆ ಕೊಂಗಶೈಡೈಯಣ್‌ನನ್ನು ಸ್ಪಷ್ಟವಾಗಿ '*ಮಧುರ ಕರುನಾಡಕನ್*' ಎಂದು ಗುರುತಿಸಲಾಗಿದೆ. 'ಕೊಂಗ' ಪ್ರತ್ಯಯ ಹೊಂದಿದ ಈತನನ್ನು 'ಕರುನಾಡಕನ್' ಎಂದಿರುವುದು ತುಂಬಾ ಗಮನಾರ್ಹ. ಅಲ್ಲದೆ ಮರುದೂರು ಬಳಿ ಕಾದಾಡಿ ಈ ಪಾಂಡ್ಯನು 'ಆಯವೇಳ್'ನನ್ನು ಸೋಲಿಸಿ, ಬಿರಿಮೊಗ್ಗುಗಳ ಮಾಧುರ್ಯದಿಂದ ತುಂಬಿದ್ದ ತಟಾಕಗಳ ಬಳಿ 'ಕೇಕಿ'ಗಳೊಂದಿಗೆ ಕೋಗಿಲೆಗಳು ಕೆಳೆತನಗಳಿಸಿಕೊಂಡು ಕುಣಿಯುತ್ತಿದ್ದ ಮಂಗಳಪುರ (ಮಂಗಳೂರು) ಪ್ರದೇಶದ ಮಹಾರಥನನ್ನು ಸೋಲಿಸಿದ, ಕರಾವಳಿಯು ಸರ್ವರ ಸೊತ್ತೆಂಬ ವಾದವನ್ನು ಅಳಿಸಿಹಾಕಿ ಅದು ತನ್ನ ಏಕಮೇವ ಸ್ವಾಮ್ಯಕ್ಕೊಳಪಟ್ಟದ್ದೆಂದು (ಕರಾವಳಿ ಪ್ರದೇಶವನ್ನು ವಶಪಡಿಸಿಕೊಂಡು) ಘೋಷಿಸಿಕೊಂಡ ವಿವರಗಳೂ ಅಷ್ಟೇ ಗಮನಾರ್ಹ.

ಕವಿರಾಜಮಾರ್ಗ‌ದ ಸಾಲುಗಳು ಸೆಳೆದಷ್ಟು ಗಮನವನ್ನು ವೇಳ್ವಿಕುಡಿ ಶಾಸನದ ಸಾಲುಗಳು ಸೆಳೆದಿಲ್ಲವಾದರೂ ಕನ್ನಡ ನಾಡಿನ ಬಗ್ಗೆ ಈ ಶಾಸನಕವಿ ಕೊಟ್ಟ ನಿರ್ಣಾಯಕ ನುಡಿಗಳು ನೂರು ವರ್ಷಗಳ ನಂತರದ ಮಾರ್ಗಕಾರ ಕೊಡುವ ನುಡಿಗಳಷ್ಟೇ ಮಾರ್ಮಿಕವಾಗಿವೆ. ವಿಭಿನ್ನ ಭಾಷಾ ಸಂಸ್ಕೃತಿಯೊಂದನ್ನು ಪ್ರತಿನಿಧಿಸುವ ತಮಿಳು ಕವಿಯೊಬ್ಬನಿಂದ ಗುರುತಿಸಲ್ಪಟ್ಟ ಕಾವಿರಿ ನದಿಯ ಉತ್ತರ ಭಾಗದ ಅಧಿಪತಿಯಾದ 'ಮಧುರ ಕರುನಾಡಕನ್'ನ ಬಗ್ಗೆ ಮತ್ತು 'ಕೊಂಗ', 'ಪಾಂಡ್ಯ', 'ಗಂಗ' ಮತ್ತು 'ಮಹಾರಥ'ರ ಬಗ್ಗೆ ಇಲ್ಲಿ ಬರುವ ವಿವರಗಳು ಕಾವೇರಿ ಪ್ರದೇಶದ ಕನ್ನಡನಾಡಿನ ಇತಿಹಾಸ ರಚನೆಗೆ ತುಂಬಾ ಮಹತ್ವದ ಆಕರಗಳಾಗಿವೆ. ಮೇಲ್ಕಾವೇರಿಯ ಬಗ್ಗೆ ಅಪರೂಪವಾಗಿ ಬರುವ ರಾಷ್ಟ್ರಕೂಟಪೂರ್ವ ಯುಗದ ಶಾಸನಿತ ಉಲ್ಲೇಖಗಳಲ್ಲಿ ಇದು ಅತ್ಯಂತ ಮಹತ್ವದ್ದೆಂಬುದಕ್ಕೆ ಮಾತ್ರವಲ್ಲದೆ ಒಂದು ಶತಮಾನ ಮುಂಚೆಯೇ ಮಾರ್ಗಕಾರನ ನುಡಿಯನ್ನು ಪರೋಕ್ಷವಾಗಿ ನಿರೀಕ್ಷಿಸಿರುವುದಕ್ಕೂ ಇದೊಂದು ಗಮನಾರ್ಹ ದಾಖಲೆ ಎನಿಸಿದೆ.

**ವೇಂಕಟ ಮತ್ತು ಕಾವಿರಿ:**

'ಕಾವಿರಿ'ಯನ್ನು ಈ ಬಗೆಯಲ್ಲಿ ಕಂಡ ಶಂಗಂ ಕವಿಗಳಿಗೆ ಅದರ ಉಗಮ ಮತ್ತು ಪೂರ್ವಾರ್ಧದ (ಕರ್ನಾಟಕ ಪ್ರದೇಶದ) ಬಗ್ಗೆ ಹೆಚ್ಚಿನ ಜ್ಞಾನವಿರಲಿಲ್ಲವೆಂದೆನಿಸುವುದು; ಇದ್ದರೂ ಅದು ಅವರಿಗೆ ಪ್ರಸ್ತುತವೆನಿಸಿರಲಿಲ್ಲವೆಂದು ಕಾಣುವುದು. ವೇಂಕಟವನ್ನು ಉತ್ತರದ ಸ್ಪಷ್ಟ ಗಡಿಯನ್ನಾಗಿ ಮಾಡಿಕೊಂಡಂತೆ ಅವರು ಮೇಲ್ಕಾವೇರಿಯನ್ನು ಯಾವ ಬಗೆಯಲ್ಲೂ ತಮಗೆ ಪ್ರಸ್ತುತಗೊಳಿಸಿಕೊಳ್ಳಲಿಲ್ಲ. ವಾಸ್ತವವಾಗಿ ಅವರು ತಮಿಳಗಂನ ನೇರ ಉತ್ತರದ ಮತ್ತು ವಾಯವ್ಯದ ಗಡಿಗಳನ್ನು ಗುರುತಿಸುವ ಗೊಡವೆಗೇ ಹೋಗಲಿಲ್ಲ. ಬಹುಶಃ ಇವನ್ನು ನಿರ್ಧರಿಸುವುದೂ ಅವರಿಗೆ ಸುಲಭ ಸಾಧ್ಯವಾಗಲಿಲ್ಲವೆಂದು ಕಾಣುತ್ತದೆ; ಏಕೆಂದರೆ, ಮೂವೇಂದರರ ಮುಷ್ಠಿಯಿಂದ ಮೇಲಿಂದ ಮೇಲೆ ನುಸುಳಿಕೊಳ್ಳುತ್ತಿದ್ದ ಈ ಪ್ರದೇಶದಲ್ಲಿ ಯಾವುದು ತಮ್ಮದು ಮತ್ತು ಯಾವುದು ಹೊರಗಿನದು ಎಂಬುದನ್ನು ಗ್ರಹಿಸಲು ಅವರಿಗೆ ಸಾಕಷ್ಟು ತೊಂದರೆಗಳಿದ್ದವು. ಇಂತಹ ತೊಂದರೆಗಳು 'ಉತ್ತರದ' - ವಾಸ್ತವವಾಗಿ ಪೂರ್ವೋತ್ತರದ - ಗಡಿಯನ್ನು ಗುರುತಿಸಿಕೊಳ್ಳಲು ಅವರನ್ನು ಕಾಡಲಿಲ್ಲವೆಂಬುದಕ್ಕೆ ವೇಂಕಟಗಿರಿ ಪ್ರದೇಶದವರೆಗೂ ಆಳುತ್ತಿದ್ದ ತಮಿಳು ಅರಸರ ಬಗ್ಗೆ ಅವರು ಕೊಟ್ಟಿರುವ ವಿವರಗಳು ಸಾಕ್ಷಿ ಒದಗಿಸುವುವು.

ಪುಱನಾನೂಱುವಿನ ಒಬ್ಬ ಕವಿ ಆತ್ರಿರೇಯನಾರ್ ನಲ್ಲೇರ್ 'ವೆಂಕಟದ ಅಧಿಪತಿಯಾದ ಮತಿಯನ್'ನನ್ನು ಸಂಬೋಧಿಸುವನು.[೨೨] ಅಗನಾನೂಱಿನ ಕೆಲವು ಕವಿಗಳು ವೇಂಕಟದ ಪವತ್ತಿರಿಪಟ್ಟಣವು ತೊಂಡೈಯಾರ್ ಎಂಬ ಗಿರಿನಾಯಕನ ಅಧಿಕಾರಕ್ಕೊಳಪಟ್ಟಿತ್ತೆಂದು ತಿಳಿಸುವರು.[೨೩] 'ತೊಂಡೈ' ಎಂಬುದು ಒಂದು

ವಂಶಬಳ್ಳಿ (totem)ಯ ಸಂಕೇತ; ವೇಂಕಟದಿಂದ ತಂಜಾವೂರುವರೆಗಿನ ಪ್ರದೇಶವನ್ನು ಶಂಗಂ ಕಾಲಾನಂತರ ಆಳಿದ ಪಲ್ಲವರು (ತೊಂಡೈಮಾನ್) ಇದನ್ನು ವಂಶಸಂಕೇತವನ್ನಾಗಿ ಮಾಡಿಕೊಂಡದ್ದನ್ನು ಇತಿಹಾಸದಲ್ಲಿ ಗುರುತಿಸಲಾಗಿದೆ. ವೇಂಕಟ ಪರಿಸರದ ತೊಂಡೈಮಂಡಲಮ್ ಪ್ರದೇಶವನ್ನು ಕರುಂಬಣೂರ್ ಕಿಟಾನ್ ಎಂಬ ನಾಯಕನು ಆಳುತ್ತಿದ್ದನೆಂದು *ಪುಱನಾನೂಱಿನ* ಮತ್ತೊಬ್ಬ ಕವಿ ಪುಱತ್ತಿಣೈನಣ್ಣಾಕ್ಕಣಾರ್ ತಿಳಿಸುವನು. ತಿರುಪತಿಯ ಬಳಿ ಇರುವ ಇಂದಿನ ಕರುಂಬೂರ್ ಪಟ್ಟಣವೇ ಶಂಗಂಕಾಲದ ಕರುಂಬನೂರ್ ಎಂಬ ವಾದವಿದೆ.[೨೪] ವೇಂಕಟವನ್ನು ಆಳುತ್ತಿದ್ದ ಪುಲ್ಲಿಯನ್ನು ಕವಿ ಕಲ್ಲಾಡನಾರ್ ಉಲ್ಲೇಖಿಸುವನು. *ಅಗನಾನೂಱಿನ* ಕವನವೊಂದರಲ್ಲಿ ವೇಂಕಟದ ಉತ್ತರಕ್ಕಿರುವ ಪ್ರದೇಶ (ಅಂದರೆ ಇಂದಿನ ಆಂಧ್ರಪ್ರದೇಶದ)ದಿಂದ ತಾನು ಬಂದವನೆಂದು ಇವನು ಸ್ಪಷ್ಟವಾಗಿ ಹೇಳಿಕೊಂಡಿರುವನು. ಮಾಮೂಲಣಾರ್ ಕೂಡ ವೇಂಕಟವನ್ನಾಳುತ್ತಿದ್ದ ಪುಲ್ಲಿಯನ್ನು ಉಲ್ಲೇಖಿಸಿ, ಅವನ ರಾಜ್ಯದ ಗಿರಿಜನರು ವಡುಗರಾಗಿರುವರೆಂದೂ ತಮಿಳರಿಗಿಂತ ಭಿನ್ನವಾದ ಭಾಷೆಯನ್ನಾಡುತ್ತಿದ್ದರೆಂದೂ ತಿಳಿಸುವನು.[೨೫] ಈ ಉಲ್ಲೇಖಗಳೆಲ್ಲವೂ ವೇಂಕಟದ ಬಗ್ಗೆ ಅಂದಿನ ತಮಿಳರಿಗಿದ್ದ ನಿಕಟ ಸಂಪರ್ಕವನ್ನು ಸೂಚಿಸುವುವು.

ಇದಕ್ಕೆ ಹೋಲಿಸಿ ನೋಡಿದರೆ ಕಾವೇರಿಯ ಉಗಮ(ಪ್ರದೇಶ)ದ ಬಗ್ಗೆ ಶಂಗಂ ಕವಿಗಳಿಗಿದ್ದ ಮಾಹಿತಿ ತುಂಬಾ ಅತ್ಯಲ್ಪವೆನಿಸುವುದು. ಈ ಪ್ರಶ್ನೆಯನ್ನು ಒಡ್ಡಿ ಅಂದಿನ ಸಾಹಿತ್ಯವನ್ನು ಶೋಧಿಸಿದರೆ ಅಪರೂಪವಾಗಿ ಒಂದೆರಡು ಉಲ್ಲೇಖಗಳು ಮಾತ್ರ ದೊರೆಯಬಹುದೇನೋ!

ಪಶ್ಚಿಮ ಪರ್ವತಾವಳಿಯಲ್ಲಿ ಕಾವಿರಿ ಉಗಮಗೊಳ್ಳುವುದೆಂದು ಪತ್ತುಪಾಟ್ಟುವಿನ *(ಮಲೈಪಡುಕಡಾಮ್)* ಕವಿ ಕೌಶಿಕನಾರ್ ಮಾಡಿದ ಅಪರೂಪದ ನಿದರ್ಶನ ಇಂಥವುಗಳಲ್ಲಿ ಒಂದು.[೨೬] ಇದು ಕೊಡಗಿನ ಬ್ರಹ್ಮಗಿರಿಯನ್ನು ಕುರಿತು ಮಾಡಿದ ಉಲ್ಲೇಖ. ಇದಕ್ಕಿಂತ ಹೆಚ್ಚಿನ ಜ್ಞಾನ ಈ ನದಿಯ ಉಗಮಸ್ಥಾನದ ಬಗ್ಗೆ ಅವರಲ್ಲಿದ್ದಿದ್ದರೆ ಅದನ್ನು ಗುರುತಿಸಲು ನಮಗಿಂದು ಸಾಧ್ಯವಾಗುತ್ತಿಲ್ಲ. ಇದು ಏನೇ ಇರಲಿ, ತಮಿಳು ಮಹಾಕಾವ್ಯಗಳ ಕಾಲಕ್ಕೆ (೫-೬ನೆಯ ಶತಕ) ಕಾಲಿಟ್ಟಾಗ, *ಮಣಿಮೇಗಲೈ* ಕವಿಯಂಥವನಿಗೆ ಕಾವಿರಿಯ ಐತಿಹ್ಯದ ಪರಿಕಲ್ಪನೆ ಇತ್ತೆಂಬುದು ಸ್ಪಷ್ಟಗೊಳ್ಳುವುದು. ಅಗಸ್ತ್ಯಮುನಿಯ ಕಮಂಡಲು ಉರುಳಿಬಿದ್ದಾಗ ಅದರಿಂದ ಹೊರಚೆಲ್ಲಿ ಕಾವಿರಿ ಪ್ರವಹಿಸತೊಡಗಿದಳೆಂದೂ ಸಂಬಾಪತಿಪಟ್ಟಣದಿಂದ ಅವಳು ಪೂರ್ವಮುಖಿಯಾಗಿ ಮುಂದುವರಿದಳೆಂದೂ ಇಲ್ಲಿ ನಿರೂಪಿಸಲಾಗಿದೆ.[೨೭] ಇದೊಂದು ಬಗೆಯ ಸಂಸ್ಕೃತೀಕರಣ ಪ್ರಕ್ರಿಯೆ; ಆದರೆ ಶಂಗಂ ಸಾಹಿತ್ಯದಲ್ಲಿ ಈ ಐತಿಹ್ಯಕ್ಕೆ ಪ್ರಾಧಾನ್ಯತೆ ದೊರೆತಿಲ್ಲ. ದೇವತೆಗಳ

ಅಭೀಷ್ಟೆಯ ಮೇರೆಗೆ ಅಗತ್ತಿಯರ್ ಭೂಲೋಕಕ್ಕೆ ಬಂದನೆಂದೂ ಗಂಗೈಯನ್ನು ಸಂದರ್ಶಿಸಿ ಅವನಿಂದ [ಅವಳಿಂದ] ಕಾವಿರಿಯನ್ನು ಪಡೆದುಕೊಂಡನೆಂದೂ ತೊಲ್ಕಾಪ್ಪಿಯಮ್‌ನ ಮಧ್ಯಕಾಲೀನ ಟೀಕಾಕಾರ ನಚ್ಚಿನಾರ್‌ಕ್ಕಿನಿಯರ್ ವಿವರಿಸಿರುವುದು ಬೇರೆ ವಿಷಯ.[೨೫]

ಕಾವಿರಿ-ಅಗಸ್ತ್ಯರ ಐತಿಹ್ಯ ಯಾವಾಗ ಸೃಷ್ಟಿಗೊಂಡಿತೆಂಬುದನ್ನು ತಿಳಿದುಕೊಳ್ಳುವುದು ಕಷ್ಟಸಾಧ್ಯ. ಇದನ್ನು ಪ್ರಸ್ತಾಪಿಸುವ ಪುರಾಣಗಳ (ಅಲ್ಲದೆ ಮಹಾಕಾವ್ಯಗಳಲ್ಲಿ ಬರುವ ಉಲ್ಲೇಖಗಳ) ಕಾಲವೇ ಅನಿಶ್ಚಿತವಾಗಿರುವುದರಿಂದ, ಅಗ್ನಿ ಸ್ಕಂದ ಮುಂತಾದ ಪುರಾಣಗಳ ಆಧಾರದ ಮೇಲೆ ಇದನ್ನು ತೀರ್ಮಾನಿಸುವುದು ಸರಿಯೆನಿಸಲಾರದು. ಅಂದಮಾತ್ರಕ್ಕೆ ಮಣಿಮೇಗಲೈಯಲ್ಲಿ ಬರುವ ಉಲ್ಲೇಖವೇ ಅತ್ಯಂತ ಪುರಾತನವಾದದ್ದೆನ್ನಲೂ ಬಾರದು. ಇದು ಏನೇ ಇರಲಿ, ಅಗಸ್ತ್ಯನ ಐತಿಹ್ಯವನ್ನು ಪುರಸ್ಕರಿಸುವ ಕಾವ್ಯಪರಂಪರೆ ಕನ್ನಡ ಮತ್ತು ತುಳು ಭಾಷೆಗಳಲ್ಲಿ ೧೬-೧೭ನೆಯ ಶತಮಾನದಿಂದೀಚೆಗೆ ಗಟ್ಟಿಗೊಂಡಿತೆಂದೆನಿಸುವುದು. ತುಳುಭಾಷೆಯ ಪುರಾತನ (೧೭ನೆಯ ಶತಮಾನ) ಕೃತಿಗಳಲ್ಲೊಂದಾದ *ಕಾವೇರಿ* ಗ್ರಂಥವಲ್ಲದೇ ಹಲವಾರು ಕನ್ನಡ ಪುರಾಣಗಳು ಮತ್ತು ಮಹಾತ್ಮೆಗಳು ಈ ಕಾಲದಲ್ಲಿ ಹುಟ್ಟಿಕೊಂಡ ಬಗ್ಗೆ ಸಾಕಷ್ಟು ಪುರಾವೆಗಳು ದೊರೆಯುವವು.[೨೬]

ಶಂಗಂ ಮತ್ತು ಶಂಗಂ ತರುವಾಯದ ತಮಿಳು ಕವಿಗಳಿಗೆ ಕಾವಿರಿ ಎಂದರೆ 'ಕರೂರ್-ಉಱೈಯೂರ್-ಪುಗಾರ್' ಪ್ರದೇಶದಲ್ಲಿ ಹರಿಯುವ ನದಿ ಮಾತ್ರವಾಗಿತ್ತೆಂಬುದಕ್ಕೆ ಮಣಿಮೇಗಲೈ ಕೂಡ ಪುಷ್ಟಿಕೊಡುವುದು. ಇಲ್ಲಿ ಸಂಬಾಪುರ (ಕಾವಿರಿ ಪಟ್ಟಿಣಂ) ಬಳಿ ಹರಿಯುವ ಕಾವಿರಿಯನ್ನು ಪ್ರಸ್ತಾಪಿಸಲಾಗಿದೆಯೇ ಹೊರತು ಅದರ ಪೂರ್ವಾರ್ಧದ ಸುದೀರ್ಘ ಪ್ರವಾಹವನ್ನಲ್ಲ ಎಂಬುದನ್ನು ಗಮನಿಸಿದರೆ ಈ ಮಾತು ಮನವರಿಕೆಯಾಗುವುದು.

### ಶಂಗಂಕಾಲದ ಪ್ರಸಿದ್ಧ ನದಿ:

ಕಾವಿರಿಯನ್ನು ಮಾತ್ರ ಗಮನದಲ್ಲಿಟ್ಟುಕೊಂಡು ಶಂಗಂ ಸಾಹಿತ್ಯವನ್ನು ಅಭ್ಯಸಿಸಿದರೆ ಈ ಬಗೆಯ ಚಿತ್ರ ಲಭ್ಯವಾಗುವುದೇನೊ ನಿಜ. ಆದರೆ ಶಂಗಂ ಸಾಹಿತ್ಯದಲ್ಲಿ ಬರುವ ಸಮಗ್ರ ನದಿಗಳನ್ನೆಲ್ಲ ಅಭ್ಯಸಿಸಿದರೆ ಇದರ ಸ್ವರೂಪ ತುಂಬಾ ಬದಲಾಗಿ, ವೈಗೈ ನದಿಗೆ ಸಿಗುವ ಮಾನ್ಯತೆ ಕಾವಿರಿಗೆ ದೊರಕದಿರುವ ವಾಸ್ತವ ಚಿತ್ರ ಹೊರಹೊಮ್ಮುವುದು.

ಪಾಂಡ್ಯರ ರಾಜಧಾನಿಪಟ್ಟಣವಾದ ಮದುರೈ (*ನಾಙ್-ಮಾಡಙ್-ಕೂಡಲ್*) ಮತ್ತು ಅದರೊಡನೆ ಬೆಸೆದುಕೊಂಡಿದ್ದ ಪರಂಕುನ್ರಮ್ (ತಿರುಪ್ಪರಂಕುನ್ರಂ) ಪಟ್ಟಣಗಳು ವೈಗೈ

ನದೀದಡವನ್ನು ಹಂಚಿಕೊಂಡಿದ್ದವು. ವೈಗೈ ತಮಿಳರಿಗೆ ಅತ್ಯಂತ ಪವಿತ್ರವೂ-ಪ್ರಮುಖವೂ ಆದ ನದಿಯಾಗಿತ್ತಲ್ಲದೆ ಶಂಗಂ ಅಕಾದೆಮಿಯ ಕೇಂದ್ರಸ್ಥಾನವೂ (?) ಆಗಿತ್ತು. ಇದನ್ನು ಒತ್ತಿಹೇಳಲೇನೋ ಎಂಬಂತೆ, *ಪಱಿಪಾಡಲ್*‌ನ ಕವಿಯೊಬ್ಬ ಉಱೈಯೂರ್ (ಚೋಳ ರಾಜಧಾನಿ) ಅಥವಾ ವಂಜಿ (ಚೇರ ರಾಜಧಾನಿ)ಯ ನಿವಾಸಿಗಳು ಕುಕ್ಕುಟದ ಕೂಗನ್ನು ಕೇಳುತ್ತಾ ರಾತ್ರಿಯ ನಿದ್ರೆಯನ್ನು ಮುರಿದೆದ್ದರೆ ಮದುರೈ ನಿವಾಸಿಗಳು ವೇದಘೋಷಣೆಯನ್ನಾಲಿಸುತ್ತಾ ಮುಂಜಾವನ್ನು ಬರಮಾಡಿಕೊಳ್ಳುವರೆಂದು ಹೇಳಿ ಅವುಗಳಲ್ಲಿಯ ಅಂತರವನ್ನು ಸೂಚಿಸಿರುವನು.[೩.೦] ಕಾವಿರಿಗಿಂತಲೂ ಹೆಚ್ಚಿನ ಗೌರವವನ್ನು ವೈಗೈ ನದಿ ದೊರಕಿಸಿಕೊಂಡಿತ್ತೆನ್ನಲು ಈ ನದಿಯನ್ನೇ ಪ್ರಧಾನ ವಸ್ತುವನ್ನಾಗಿ ಮಾಡಿಕೊಂಡು ಶಂಗಂ ಕವಿಗಳು ರಚಿಸಿದ ಇಪ್ಪತ್ತಾರು ಸುದೀರ್ಘ ಕವನಗಳು ಸಹಾಯಕ್ಕೆ ಬರುವವು. ಈಗ ಲಭ್ಯವಿರುವ ಎಂಟು ಕವನಗಳ ೧,೩.೧೪ ಸಾಲುಗಳ ಆಧಾರದ ಮೇಲೆ ಅಂದಾಜು ಕಟ್ಟಿದರೆ, ನಾಲ್ಕು ಸಾವಿರಕ್ಕೂ ಹೆಚ್ಚು ಸಾಲುಗಳಲ್ಲಿ *ಪಱಿಪಾಡಲ್* ಕವಿಗಳು ಈ ನದಿಯನ್ನು ವರ್ಣಿಸಿರಲು ಸಾಧ್ಯವೆಂದೆನಿಸುವುದು.[೩.೧] ಶಂಗಂಕಾಲದ ಸಮಾಜವನ್ನು - ಅದರಲ್ಲೂ ನಗರ ಜೀವನದ ಆಡಂಬರಪೂರ್ಣ ಬಾಳನ್ನು - ಬೇರೆಲ್ಲಿಗಿಂತಲೂ ಹೆಚ್ಚಾಗಿ ವೈಗೈ ನದೀದಡದ ಮೇಲೆ ಈ ಕವಿಗಳು ಕಂಡರೆಂದು ತೋರುವುದು. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ, ಚೋಳರಿಗೆ ಪ್ರಸ್ತುತವಾದ ಕಾವಿರಿ ಪಾಂಡ್ಯರಿಗೆ ಗೌಣವಾಗಿದ್ದು ಮತ್ತು ಚೇರರಿಗೆ ಹೆಚ್ಚೂಕಡಿಮೆ ಅಪ್ರಸ್ತುತವೆನಿಸಿದ್ದು. ಕಾವೇರಿಯ ಉಗಮಸ್ಥಾನವಾದ ಬ್ರಹ್ಮಗಿರಿ ಪ್ರದೇಶವು ಕೈಚಾಚಿದರೆ ಮಾತ್ರ ನಿಲುಕುವ ಅಂತರದಲ್ಲಿದ್ದರೂ ಚೇರ ಕವಿಗಳು ಇದರೆಡೆ ಕಣ್ಣು ಹಾಯಿಸದಿರುವುದಕ್ಕೆ ಭೌಗೋಳಿಕ ಕಾರಣಗಳಿಗಿಂತಲೂ ರಾಜಕೀಯ-ಸಾಂಸ್ಕೃತಿಕ ಕಾರಣಗಳಿದ್ದರಲು ಸಾಧ್ಯ; ಆದರೆ ಅವುಗಳನ್ನೆಲ್ಲ ಅರಿತುಕೊಳ್ಳಲು ನಮಗಿಂದು ಸಾಧ್ಯವಾಗುತ್ತಿಲ್ಲ.

ಕೊಂಗುನಾಡಿನ ಅಧಿಪತಿಯಾದ ಇಳಂಚೇರಲ್ ಪಶ್ಚಿಮಘಟ್ಟದ 'ನಱವು' (ತುಳುಭಾಷೆಯಲ್ಲಿ ಇದನ್ನು 'ನಾಱಾವಿ' ಎಂಬ ಪದದಿಂದ ಗುರುತಿಸಲಾಗಿದೆ) ಪಟ್ಟಣದಿಂದ ಆಳುತ್ತಿದ್ದನೆಂದು ಒಬ್ಬ ಕವಿ ವಿವರ ಕೊಟ್ಟಿರುವನು.[೩.೨] ನಱವು ಅಂದಿನ ಪ್ರಮುಖ ಪಟ್ಟಣವಾಗಿತ್ತು. ಕ್ರಿಸ್ತಶಕ ಆರಂಭದ ಶತಕಗಳಲ್ಲಿ ದಕ್ಷಿಣ ಭಾರತವನ್ನು ಸಂದರ್ಶಿಸಿದ ಪೆರಿಪ್ಲಸ್ ಗ್ರಂಥಕರ್ತೃವೂ ಭೂಗೋಳಿಕನಾದ ಟೋಲಮಿಯೂ 'ನೌರ' ಮತ್ತು 'ನಿತ್ರೈಯ್' ಎಂಬ ಹೆಸರುಗಳಿಂದ ಇದನ್ನು ಗುರುತಿಸಿರುವರು. ಪೆರಿಪ್ಲಸ್‌ನ ಆಧಾರದ ಮೇಲೆ ಚೇರರ ಆಳ್ವಿಕೆಯ ವ್ಯಾಪ್ತಿ ನೀಲಗಿರಿ ಪ್ರದೇಶಕ್ಕೆ ಸೀಮಿತಗೊಂಡಿತ್ತೆಂದೂ ಈ ಕಾರಣದಿಂದಾಗಿ ಈ ಗಿರಿಯಾಚೆ (ಉತ್ತರಕ್ಕೆ)ಗಿದ್ದ ಕಾವೇರಿಯೊಂದಿಗೆ ಅವರು ಗುರುತಿಸಿಕೊಳ್ಳಲು ಸಾಧ್ಯವಾಗಲಿಲ್ಲವೆಂದೂ ವಾದಿಸಬಹುದು.

**ಆರಂಭಕಾಲದ ಕನ್ನಡ ಸಾಹಿತ್ಯದಲ್ಲಿ ಕಾವೇರಿ:**

ಆರಂಭಕಾಲದ ತಮಿಳು ಸಾಹಿತ್ಯದಲ್ಲಿ ಮೂಡಿರುವ ಈ ಚಿತ್ರದ ಹಿನ್ನೆಲೆಯಲ್ಲಿ ಮಾರ್ಗಕಾರನಿಗಿಂತ ಮುಂಚಿನ ಕನ್ನಡ ಪ್ರದೇಶದ ಕಾವೇರಿಯ ಬಗ್ಗೆ ತಿಳಿದುಕೊಳ್ಳುವ ಕುತೂಹಲ ಸಹಜವಾಗಿ ಉದ್ಭವಿಸುವುದು. ಕಾವ್ಯಮಾಧ್ಯಮದ ಮೂಲಕ ಕಾವೇರಿಯನ್ನು ಪ್ರಸ್ತಾಪಿಸುವ ಮೊಟ್ಟಮೊದಲ ಕನ್ನಡಕವಿ ಮಾರ್ಗಕಾರನೆನ್ನುವುದರಲ್ಲಿ ಸಂಶಯವಿಲ್ಲ; ಇದರಂತೆ ಅದು ಕನ್ನಡ ಜನಪದದ ದಕ್ಷಿಣದಂಚಿನ ನದಿ ಎಂದು ಮೊಟ್ಟಮೊದಲು ತೀರ್ಮಾನಿಸಿದವನೂ ಇವನೆಂಬುದರಲ್ಲೂ ಅನುಮಾನವಿಲ್ಲ. ಆದರೆ ಮಾರ್ಗಕಾರನ ಈ ನಿರ್ಣಾಯಕ ನುಡಿಗಳನ್ನು ಮುಂದಿನ ತಲೆಮಾರಿನ ಕನ್ನಡ ಕವಿಗಳು ಅಷ್ಟೇನೂ ಗಹನವಾಗಿ ಪರಿಗಣಿಸಲಿಲ್ಲವೆಂದೆನಿಸುವುದು.

ಹತ್ತನೆಯ ಶತಮಾನದ ಕವಿ ಸಾರ್ವಭೌಮನಾದ ಪಂಪನ ಎರಡು ಮಹಾಕಾವ್ಯಗಳಲ್ಲಿ ಕಾವೇರಿಗೆ ಸ್ಥಾನ ದೊರೆತಿದ್ದರೆ ಅದು ನನ್ನ ಕೈಗೆ ಎಟುಕುತ್ತಿಲ್ಲ. ಬನವಾಸಿ ನಾಡಿಗೆ ಮರುಳಾದ ಪಂಪನ ಮಾತಿರಲಿ, ಕಾವೇರಿ ಪರಿಸರದಲ್ಲಿಯೇ ಜೀವನ ಕಳೆದ ಚಾವುಂಡರಾಯನ *ತ್ರಿಷಷ್ಟಿಶಲಾಕಪುರುಷಚರಿತೆ*ಯಲ್ಲಿಯೂ ಕಾವೇರಿಗೆ ಸ್ಥಾನವಿಲ್ಲವೆಂದೆನಿಸುವುದು. ಆದರೆ ಪಂಪ ಮತ್ತು ಚಾವುಂಡರಾಯರಿಬ್ಬರೂ ಕ್ರಮವಾಗಿ ಗೋದಾವರಿ ನದಿಯನ್ನೂ ಗೋದಾವರಿ ಕನ್ಯೆಯನ್ನೂ ಉಲ್ಲೇಖಿಸಿರುವರು. ಈ ಕಾಲದ ಶಿವಕೋಟ್ಯಾಚಾರ್ಯ ಕೂಡಾ *ವಡ್ಡಾರಾಧನೆ*ಯಲ್ಲಿ ಈ ನದಿಯನ್ನು ಗುರುತಿಸಿದಂತೆ ಕಾಣುವುದಿಲ್ಲ. ಕಾರಣ ಮಾರ್ಗಕಾರನ ನಂತರ ಕಾವೇರಿಯನ್ನು ಉಲ್ಲೇಖಿಸಿದ ಗೌರವ ಕನ್ನಡ ಕವಿ ಪೊನ್ನನಿಗೆ ಸಲ್ಲಬಹುದೇನೋ. ಕಾವೇರಿ ದಡದ ಮೇಲೆ ನಡೆದ ಗೋವಿಂದ-ತೈಲಪನ ಕದನವನ್ನು *ಅಜಿತತೀರ್ಥಕರ ಪುರಾಣ*ದಲ್ಲಿ ರನ್ನ ಪ್ರಸ್ತಾಪಿಸಿದರೂ ಇದಕ್ಕಿಂತಲೂ ಕುತೂಹಲಕರವಾದ ವಿವರಗಳನ್ನು ಪೊನ್ನ *ಶಾಂತಿಪುರಾಣ*ದಲ್ಲಿ ಒದಗಿಸಿರುವನು. 'ಕವೇರ ಕನ್ನಿಕೆ'ಯ ಉಭಯತಟಗಳಲ್ಲಿ ಶಾಂತೀಶ್ವರನು ತನ್ನ ಸೈನ್ಯದೊಡನೆ ಬೀಡುಬಿಟ್ಟದ್ದನ್ನೂ 'ಕಾವೇರಿ'ಯನ್ನು ದಾಟಿ *('ಕಾವೇರಿ-ಸ್ರವಂತೀ-ಸಮುತ್ತರಣಾನಂತರಂ')* ಪಾಂಡ್ಯರಾಜ್ಯದ ಗಡಿಸೇರಿದ್ದನ್ನೂ *ಶಾಂತಿಪುರಾಣ*ದಲ್ಲಿ ಈತನು ಪ್ರಸ್ತಾಪಿಸುವನು. ಇದು ಕನ್ನಡದ ಅಗ್ರ ಕವಿಯೊಬ್ಬ ಕಾವೇರಿಗೆ ಕೊಟ್ಟ ಮೊಟ್ಟಮೊದಲ ವಿಶೇಷ ಗಮನವೆಂದೆನ್ನಬಹುದು.[೩೨] ಆದರೆ ಕಾವ್ಯಪರಂಪರೆಯಲ್ಲಿ ಇದನ್ನು ಗಮನಿಸಿದರೆ, ಕಾಳಿದಾಸನು *ರಘುವಂಶ*ದಲ್ಲಿ ಹಾಕಿಕೊಟ್ಟ ಮೇಲ್ಪಂಕ್ತಿಯನ್ನು ಅನುಕರಿಸುತ್ತಾ (ಅಲ್ಲದೆ ಕಾಳಿದಾಸನನ್ನು ಮೊಟ್ಟಮೊದಲಬಾರಿಗೆ ಇತಿಹಾಸದ ಪದರಿನೊಳಗೆ ತರುತ್ತಾ) ಅವನ ನುಡಿಗಳನ್ನು ಗೌರವದಿಂದ ಮರುಧ್ವನಿಸಿದ ಕನ್ನಡನಾಡಿನ ಸಂಸ್ಕೃತ ಕವಿ (ಐಹೊಳೆ, ಮೇಗೂತಿ ಶಾಸನದ ಕರ್ತೃ) ರವಿಕೀರ್ತಿಗೆ ಸಲ್ಲುವುದು. ಈ ಸಂಸ್ಕೃತ ಸಾಹಿತ್ಯಿಕ ಪರಂಪರೆಯನ್ನು ಪೊನ್ನ ಹತ್ತನೆಯ ಶತಮಾನದಲ್ಲಿ ಕನ್ನಡಿಗರಿಗೆ, ಅವರ ಭಾಷೆಯಲ್ಲಿ,

ಪರಿಚಯಿಸಿಕೊಟ್ಟನೆನ್ನಬಹುದು.[೨೪] ತಮಿಳು 'ಕಾವಿರಿ'ಗೆ ಅತಿ ಸಮೀಪವಾದ 'ಕವೇರ' ಪದವನ್ನು ಬಳಸಿದ ವಿಶೇಷತೆಯೂ ಪೊನ್ನನದಾಗಿದೆ. ಆದರೆ ಈ ಮೂವರು ಮಹಾಕವಿಗಳು ಉಲ್ಲೇಖಿಸುವ ನದಿ ಕನ್ನಡ ಪ್ರದೇಶದ್ದಾಗಿರದೆ ಚೋಳನಾಡಿನಲ್ಲಿ ಪ್ರವಹಿಸುವ ಕಾವಿರಿಯಾಗಿತ್ತೆಂಬುದನ್ನು ಗಮನಿಸುವುದವಶ್ಯ.

**ಆರಂಭಕಾಲದ ಕನ್ನಡನಾಡಿನ ಶಾಸನಗಳಲ್ಲಿ ಕಾವೇರಿ:**

ಇನ್ನು ಕ್ರಿ.ಶ. ಮೊದಲ ಸಹಸ್ರಮಾನದ ಕನ್ನಡನಾಡಿನ ಶಾಸನಗಳಲ್ಲಿ ಕಾವೇರಿಗೆ ಯಾವ ಸ್ಥಾನ ದೊರಕಿದೆ ಎಂಬ ಪ್ರಶ್ನೆ. ಈ ಪ್ರಶ್ನೆಯನ್ನು ಎತ್ತಿಕೊಂಡೊಡನೆ ನಮ್ಮ ಗಮನವನ್ನು ಸೆಳೆಯುವ ಮೊದಲ ರಾಜವಂಶ, ಕಾವೇರಿ ದಡದ ಮೇಲೆ ರಾಜಧಾನಿಯನ್ನು ಸ್ಥಾಪಿಸಿ, ಬಹುಕಾಲ ಆಳಿದ ಗಂಗರದು. ಆರಂಭಕಾಲದ ಗಂಗರ ರಾಜಧಾನಿಯ ಬಗ್ಗೆ ಸ್ಪಷ್ಟ ಮಾಹಿತಿ ದೊರಕುವುದಿಲ್ಲ; ಕಾರಣ ೪-೫ರಿಂದ ೮-೯ನೆಯ ಶತಮಾನಗಳವರೆಗೆ ಯಾವ ಕೇಂದ್ರದಿಂದ ಅವರು ಆಳುತ್ತಿದ್ದರೆಂಬುದನ್ನು ಸ್ಪಷ್ಟಪಡಿಸಿಕೊಳ್ಳಲು ಇತಿಹಾಸಕಾರರು ತುಂಬಾ ಶ್ರಮಪಡಬೇಕಾಗಿದೆ. ಆರ್ಯವರ್ಮ-ಹರಿವರ್ಮನ (ಸಿಂಹವರ್ಮನ) ಕಾಲದಲ್ಲಿ (ಕ್ರಿ.ಶ. ಸು. ೪೫೦-೪೭೫) ತಳವನಪುರ (ತಲಕಾಡು) ರಾಜಧಾನಿ ಪಟ್ಟಣವಾಗಿತ್ತೆಂಬ ಒಂದು ವಾದವಿದೆ; ಆದರೆ, ಆನಂತರದ ಕಾಲದಲ್ಲಿ ಗಂಗರಾಜ್ಯ ಇಬ್ಭಾಗಗೊಂಡುದರಿಂದ ಯಾವ ಶಾಖೆಯ ಅರಸರು ಯಾವ ರಾಜಧಾನಿ ಪಟ್ಟಣದಿಂದ ಆಳುತ್ತಿದ್ದರೆಂಬ ಅನಿಶ್ಚಿತತೆ ಇದೆ. ಕಾಲಾನಂತರದ ಐತಿಹ್ಯಗಳು ಗಂಗರ ಆರಂಭಕಾಲದ ರಾಜಧಾನಿಯು ಕುವಳಾಲ (ಕೋಲಾರ) ಎಂದೂ ತಳವನಪುರ (ತಲಕಾಡು) ಎಂದೂ ಪ್ರತಿಪಾದಿಸುತ್ತಾ ಈ ಸಮಸ್ಯೆಯನ್ನು ಇನ್ನಷ್ಟು ಗೋಜಲುಗೊಳಿಸಿವೆ. ಇದು ಏನೇ ಇರಲಿ, ಇಲ್ಲಿ ನಾವು ಗಮನಿಸಬೇಕಾದ ಮುಖ್ಯ ವಿಷಯವೆಂದರೆ ಮೊದಲ ಸಹಸ್ರಮಾನದ ಗಂಗ ಶಾಸನಗಳಲ್ಲಿ ಕಾವೇರಿಯ ಪ್ರಸ್ತಾಪ ಇಲ್ಲವೇ ಇಲ್ಲವೆನ್ನುವಷ್ಟು ಅಪರೂಪವಾಗಿರುವುದನ್ನು. ಮಾರ್ಗಕಾರನಿಗಿಂತ ಮುಂಚಿನ ಮತ್ತು ರಾಷ್ಟ್ರಕೂಟರ ಸಮಕಾಲೀನರಾದ ಗಂಗರು ಕಾವೇರಿ ನದೀದಡದ ಮೇಲಿನ ತಳವನಪುರವನ್ನು (ತಲಕಾಡು) ರಾಜಧಾನಿ ಪಟ್ಟಣವನ್ನಾಗಿ ಮಾಡಿಕೊಂಡು ಆಳಿದ್ದರೆ, ಅವರ ಶಾಸನಗಳಲ್ಲಿ ಈ ನದಿಯ ಪ್ರಸ್ತಾಪ ಬಾರದಿರುವುದು ತುಂಬಾ ಆಶ್ಚರ್ಯಕರವಲ್ಲವೇ?

ಕಾವೇರಿ-ಗಂಗರ ಸಂಬಂಧವನ್ನು ಗಮನದಲ್ಲಿಟ್ಟುಕೊಂಡು, ಕೊಡಗು, ಮೈಸೂರು, ಚಾಮರಾಜನಗರ, ಮಂಡ್ಯ ಮತ್ತು ಬೆಂಗಳೂರು ಪ್ರದೇಶಗಳಲ್ಲಿ ಇಲ್ಲಿಯವರೆಗೂ ದೊರೆತ ಶಾಸನಗಳನ್ನೆಲ್ಲ ಜಾಲಾಡಿದರೂ ನನಗೆ ದೊರೆತ ಫಲ ಅತ್ಯಲ್ಪ. ಈ ಶೋಧವನ್ನು ಕೈಕೊಂಡಾಗ ನಾನು ರಚಿಸಿದ ಚೌಕಟ್ಟುಗಳೆಂದರೆ:

೧. ಮಾರ್ಗಕಾರನಿಗಿಂತ ಪೂರ್ವದ ಮತ್ತು ಮಾರ್ಗಕಾರಾನಂತರದ ಎರಡು ಹಂತದ ಕಾಲಮಾನಗಳು;

೨. ಮಾರ್ಗಕಾರನ 'ಕನ್ನಡ ಜನಪದ' ಮತ್ತು ಅದರಿಂದ ಹೊರಗಿನ (ಇಂದಿನ) ಕರ್ನಾಟಕದ ಎರಡು ಪ್ರಾದೇಶಿಕ ಘಟಕಗಳು.

ಮೊದಲ ಕಾಲಮಾನದಲ್ಲಿ ಕಾವೇರಿಯಿಂದ ಗೋದಾವರಿಯವರೆಗೂ ವಿಸ್ತರಿಸಿದ್ದ ಕನ್ನಡ ಪ್ರದೇಶದ ಶಾಸನಗಳಲ್ಲಿ ಕಾವೇರಿಯ ಪ್ರಸ್ತಾಪ ಬರುವುದು ಅಪರೂಪವೆನ್ನುವುದನ್ನು ಒಪ್ಪಲೇಬೇಕು. ಮಾರ್ಗಕಾರನು ಹೊರಗಿಟ್ಟ (ಕಾವೇರಿಯ ದಕ್ಷಿಣಕ್ಕಿದ್ದ ಅಂದರೆ ಶಂಗಂ ಕವಿಗಳು ಒಂದಿಲ್ಲೊಂದು ಬಗೆಯಲ್ಲಿ ಗುರುತಿಸಿಕೊಂಡ) ಪ್ರದೇಶದಲ್ಲಿ, ಅದರಲ್ಲೂ ಕಾವೇರಿ-ಕಬಿನೀ ಪ್ರದೇಶದ ಆಕರಗಳಲ್ಲಿ ಕೂಡ ಈ ಚಿತ್ರ ಅಷ್ಟೊಂದು ಭಿನ್ನವಾಗಿಲ್ಲವಾದರೂ ಮೊದಲಿನ ಘಟಕದಡಿಯಲ್ಲಿರುವುದಕ್ಕಿಂತ ಹೆಚ್ಚು ಆಶಾದಾಯಕವಾಗಿದೆ ಎನ್ನಬಹುದು.

ಅಪರೂಪವಾಗಿ, ಆನುಷಂಗಿಕವಾಗಿ ಉಲ್ಲೇಖಿಸುವ ಮಾರ್ಗಕಾರ ಪೂರ್ವಯುಗದ ಕರ್ನಾಟಕದ ಶಾಸನಗಳಲ್ಲಿ ಕಾವೇರಿ ನದಿಗೆ ದೊರಕಿರುವ ಸ್ಥಾನದ ಸ್ಥೂಲಚಿತ್ರ ಇಂತಿದೆ:

**ಪುನ್ನಾಟ ರಾಜ್ಯದ ಕಾವೇರಿ:**

ತಲಕಾಡಿನಿಂದ ಬಹುಕಾಲ ಆಳಿದ ಗಂಗರ ಶಾಸನಗಳಲ್ಲಿ ಕಾವೇರಿಗೆ ಉಲ್ಲೇಖ ಇಲ್ಲವೇ ಇಲ್ಲವೆನ್ನುವಷ್ಟು ಅಪರೂಪವೆಂಬುದನ್ನು ಈಗಾಗಲೇ ಗಮನಿಸಿದ್ದೇನೆ. ಆದರೆ ಅವರ ನೆರೆಯಲ್ಲಿದ್ದ (ಕಾವೇರಿ-ಕಬಿನೀ ಒಡಲಿನ) 'ಪುನ್ನಾಟ'ವೆಂಬ ಚಿಕ್ಕದೊಂದು ರಾಜಮನೆತನದವರು ಕಾವೇರಿಯನ್ನು ಹೆಸರಿಸಿರುವರು. 'ಕರ್ನಾಟಕ'ದ ರಾಜಮನೆತನವೊಂದು ಕಾವೇರಿಗೆ ಮಾಡುವ ಪ್ರಪ್ರಥಮ ಉಲ್ಲೇಖವಿದೆಂದೆನ್ನಬಹುದು. ಯಳಂದೂರು ತಾಲ್ಲೂಕಿನ ಮಾಂಬಳ್ಳಿಯಲ್ಲಿ ದೊರೆತ ಒಂದು ತಾಮ್ರಪಟ ಶಾಸನದಲ್ಲಿ (೫-೬ನೆಯ ಶತಕ) ಇವರ ರಾಜ್ಯವನ್ನು ಕಾಬೇರೀ-ಕಪಿನೀ *('ಕಾಬೇರೀ ಕಪಿನೀತ್ರೀನದೀಭಿರಲಂಕೃತಸ್ಯ')* ನದಿಗಳು ಅಲಂಕರಿಸಿದ್ದವೆಂದು ಸ್ಪಷ್ಟಗೊಳಿಸಲಾಗಿದೆ. ಚಿಕ್ಕದಾದರೂ ಈ ರಾಜ್ಯವಂಶವು ಸುಮಾರು ೫೦೦ ವರ್ಷಗಳಿಗೂ ಹೆಚ್ಚು ಕಾಲ ಇತಿಹಾಸದಲ್ಲಿ ತನ್ನತನವನ್ನು ಕಾಪಾಡಿಕೊಂಡಿತ್ತು. ಈ ಅವಧಿಯಲ್ಲಿ ಇದು ಹೇಗೆ ಬೆಳೆಯಿತು ಮತ್ತು ಹೇಗೆ ಗಂಗವಾಡಿ-೯೬೦೦೦ ಘಟಕವಾಯಿತು ಎಂಬುದನ್ನು ನಾನು ಮುಂದಿನ ಲೇಖನದಲ್ಲಿ ಪ್ರಸ್ತಾಪಿಸುವೆ; ಆದರೆ, ಇಲ್ಲಿ ನಮಗೆ ಪ್ರಸ್ತುತವಾದ ಒಂದು ಮಹತ್ವದ ವಿಷಯದ ಬಗ್ಗೆ ಗಮನ ಸೆಳೆಯಬಯಸುವೆ.

ಶಂಗಂ ಮತ್ತು ಶಂಗಂ ಕಾಲಾನಂತರದ ಚೇರ, ಕೊಂಗ, ಮೈಸೆನಾಡ (ಕೊಡಗು-ಮೈಸೂರು) ಮುಂತಾದ ರಾಜಕೀಯ ಶಕ್ತಿಗಳೊಡನೆ ಘರ್ಷಣೆಗಿಳಿಯುತ್ತಾ ಕ್ರಿ.ಶ. ೩ನೆಯ ಶತಮಾನದ ನಂತರ ಒಂದು ಸ್ಪಷ್ಟ ರಾಜಕೀಯ ಶಕ್ತಿ (ಗಂಗರು ಇಷ್ಟೇ ಸ್ಪಷ್ಟವಾಗಿ ಹೊರಹೊಮ್ಮುವುದಕ್ಕಿಂತ ಮುಂಚೆ)ಯಾಗಿ, ಕಾವೇರಿಯ ದಕ್ಷಿಣ ಮತ್ತು ಪಶ್ಚಿಮಕ್ಕೆ ಹರಡಿದ್ದ ಪ್ರದೇಶದಲ್ಲಿ ಈ ಅರಸು ಮನೆತನವು ಅಧಿಕಾರ ಗಳಿಸಿಕೊಂಡಿತ್ತು. ಈ ಪುನ್ನಾಟರು ಮೂಲತಃ ಗಿರಿರಾಜ(ಮಲೆಪ)ರಾಗಿದ್ದರೆಂದು ತೋರುವುದು, ಏಕೆಂದರೆ ಇವರು ಹೆಮ್ಮೆಯಿಂದ ತಮ್ಮದೆಂದು ಹೇಳಿಕೊಂಡಿರುವುದೆಲ್ಲವೂ ಅರಣ್ಯ ಸಂಪತ್ತನ್ನೇ. ಎಮ್ಮೆ ಆಕಳು, ಕುದುರೆ, ಕುರಿ (ಅವುಗಳ ಕೂದಲಿನಿಂದ ಮಾಡಿದ ಕಂಬಳಿ)ಗಳ ಪ್ರಾಣಿಸಂಪತ್ತು, ಭತ್ತ, ಯವ, ಗೋಧಿ, ದ್ವಿದಳಗಳನ್ನು ಬೆಳೆಯುವ ಕ್ಷೇತ್ರಸಂಪತ್ತು, ಬಂಗಾರ, ಬೆಳ್ಳಿ, ಮುತ್ತು, ರತ್ನ ಹವಳಗಳನ್ನು ಒದಗಿಸುವ ಖನಿಜಸಂಪತ್ತು ಅವುಗಳಲ್ಲಿ ಪ್ರಧಾನವಾಗಿದ್ದವು. ಈ ರಾಜ್ಯದ ನಾಗರಿಕರಾದರೋ ಸದಾಕಾಲ ಕುಶಲಚಿತ್ತರಾಗಿ, ಮದುವೆ ಮುಂತಾದ ಸಡಗರದ ಸಮಾರಂಭಗಳಲ್ಲಿ ನಾಟಕ-ನೃತ್ಯ ಮುಂತಾದ ಮನಕದಿಯುವ ಕಲೆಗಳಲ್ಲಿ ತೊಡಗಿಸಿಕೊಂಡವರಾಗಿದ್ದರು. ಇವರ ರಾಜ್ಯದ 'ಕಾಬೇರೀ-ಕಪಿನೀ' ನದಿಗಳ ಇದ್ದಂಡೆಗಳು ದಟ್ಟ ಕಾಡಿನಿಂದ ಆವರಿಸಿದ್ದವು. ಅಲ್ಲಿ ಬಾಳೆ, ಅಡಕೆ, ತೆಂಗು, ಕಬ್ಬು ಹಲಸು, ಸಂಪಿಗೆ, ವೀಳೆ, ವಕುಳ, ಅಶೋಕ, ಪುನ್ನಾಗ ಗಿಡಮರಗಳು ದಷ್ಟಪುಷ್ಟವಾಗಿ ಬೆಳೆದು, ನೆಳಲು ಚೆಲ್ಲಿ ಕಾನನದ ಕತ್ತಲೆಯನ್ನು ಮತ್ತಷ್ಟೂ ಕಿಟ್ಟಗೊಳಿಸಿದ್ದವು. ಈ ಕಾವೇರಿಯನ್ನು 'ಕಾಬೇರೀ' ಎಂದು ಇಲ್ಲಿ ಕರೆಯಲಾಗಿದೆ.[೩೫] ಇದೇ ರಾಜಮನೆತನದ ಇನ್ನೊಂದು ತಾಮ್ರಪಟದಲ್ಲಿ ಈ ನದಿಯನ್ನು 'ಸಹ್ಯಜಾ' (*'ಸಹ್ಯಜಾ-ಲೋಲ-ಕಲ್ಲೋಲ-ಧಾರಾಸ್ರಾವಿತ-ದಿಕ್ತಲೆ....'*) ಎಂದು ಕರೆಯಲಾಗಿರುವುದಲ್ಲದೆ ಅದು ಇವರ ರಾಜ್ಯದ ಗಡಿಯನ್ನು ಗುರುತಿಸುವ ನದಿಯೆನ್ನಲಾಗಿದೆ.[೩೬] ಅಂದರೆ ಕಾವೇರಿ ನದಿ ಈ 'ಕನ್ನಡ ರಾಜ್ಯ'ದ ದಕ್ಷಿಣಗಡಿಯಾಗಿರದೆ ಉತ್ತರದ ಗಡಿಯಾಗಿತ್ತೆಂಬುದು ಇದರಿಂದ ಸ್ಪಷ್ಟಗೊಳ್ಳುವುದು.

ಈ ವಿವರಗಳು ನೇರವಾಗಿ ಮೇಲ್ಕಾವೇರಿ (ಕೊಡಗಿನ ತಲಕಾವೇರಿಯಿಂದ ತಿರುಮಕೂಡಲು-ನರಸೀಪುರದಲ್ಲಿ ತಲಕಾಡನ್ನು ತಲುಪುವ ನದೀಪಾತಳಿ)ಗೆ ಸಂಬಂಧಿಸಿದ ಅಪರೂಪದ ಉಲ್ಲೇಖಗಳಾಗಿವೆ ಎಂಬುದನ್ನು ಒತ್ತಿ ಹೇಳಬೇಕಾಗಿಲ್ಲ, ಆದರೆ ಕರ್ನಾಟಕದಲ್ಲಿ ಇಲ್ಲಿಯವರೆಗೂ ದೊರಕಿರುವ ವಿವರಗಳಿಗಿಂತ ಪುನ್ನಾಟರ ಶಾಸನಗಳು ಕೊಡುವ ಈ ವಿವರಗಳು ಭಿನ್ನವಾಗಿವೆ ಎಂಬುದನ್ನು ನೆನಪಿಸಿಕೊಡುವ ಆವಶ್ಯಕತೆಯಿದೆ, ಏಕೆಂದರೆ ಉಳಿದವುಗಳೆಲ್ಲವೂ ದೂರದ ಚೋಳರಾಜ್ಯದ, ಕರುವೂರ್-ಕಾವೇರಿಪಟ್ಟಣಗಳ ನಡುವೆ ಹರಿಯುವ ಕಾವೇರಿಯನ್ನು ಮಾತ್ರ ಉಲ್ಲೇಖಿಸುವುವು. ಈ ಮಾತನ್ನು ಬದಾಮಿ ಚಾಳುಕ್ಯರ ಶಾಸನಗಳೂ ಸಾಧಿಸಿ ತೋರಿಸುತ್ತಿದ್ದು ಅವನ್ನಲ್ಲಿ ಗಮನಿಸುವುದವಶ್ಯ.

**ಬದಾಮಿ ಚಾಳುಕ್ಯರ ಕಾವೇರಿ:**

ಇಮ್ಮಡಿ ಪುಲಿಕೇಶಿ (ಕ್ರಿ.ಶ. ೬೩೪-೩೫)ಯಿಂದ ಮೊದಲ್ಗೊಂಡು ವಿಜಯಾದಿತ್ಯನ (ಕ್ರಿ.ಶ.೭೪೪-೫) ಕಾಲಾವಧಿಯ ಕನಿಷ್ಠ ಆರು ಶಾಸನಗಳು ಕಾವೇರಿ(ಕವೇರ, ಕಮೇರ)ಯನ್ನು ಉಲ್ಲೇಖಿಸುವುವು.[೩೭] ಇವುಗಳಲ್ಲಿ ಅತ್ಯಂತ ಪುರಾತನವಾದದ್ದು ರವಿಕೀರ್ತಿಯ ಶಿಲಾಶಾಸನ. ಪುಲಕೇಶಿಯ ಗಜಸೇನೆ ಸಮುದ್ರ ಸೇರಲು ಕಾವೇರಿಗೆ ಹೇಗೆ ಅಡ್ಡಿಯನ್ನುಂಟುಮಾಡಿತೆಂಬುದನ್ನು ತನ್ನದೇ ಆದ ಪದಪುಂಜಗಳಲ್ಲಿ ರವಿಕೀರ್ತಿ ವಿವರಿಸಿರುವನು. ಚೋಳ ನಾಡಿನ ಕಾವೇರಿ ಬಂಗಾಳ ಸಮುದ್ರದಲ್ಲಿ ಸೇರುವುದಕ್ಕೆ ಮಾಡಿದ ಅಡಚಣೆ ಇದೆಂಬುದನ್ನು ಸುಲಭವಾಗಿ ಊಹಿಸಬಹುದು. ಕ್ರಿ.ಶ. ೬೭೪ರ ಮೊದಲ ವಿಕ್ರಮಾದಿತ್ಯನ ಮತ್ತೊಂದು ತಾಮ್ರಪಟ ಶಾಸನವು ಸವಣೂರಿನಲ್ಲಿ ದೊರಕಿದ್ದು ಕಾವೇರಿಯ ದಕ್ಷಿಣಕ್ಕಿದ್ದ ಉಗ್ರಪುರವನ್ನು ಅವನು ವಶಪಡಿಸಿಕೊಂಡ ವಿವರ ಇದರಲ್ಲಿ ಬರುವುದು. ಇದು ಪ್ರಾಚೀನ ಚೋಳರಾಜಧಾನಿ ಉಜ್ಜೈಯೂರ್ (ಇಂದಿನ ತಿರಚಿನಾಪಳ್ಳಿಯ ಜಿಲ್ಲೆ)ಗೆ ಮಾಡಿದ ಉಲ್ಲೇಖ. ಇದಾದ ನಾಲ್ಕೈದು ದಶಕಗಳ ನಂತರ ವಿಜಯಾದಿತ್ಯನು ಕೆಲವು ತಾಮ್ರಪಟ ಶಾಸನಗಳನ್ನು ಬಿಡುಗಡೆ ಮಾಡಿದನು. ಅವುಗಳಲ್ಲಿ ಅವನು 'ಕಮೇರ' ಅಥವಾ 'ಕವೇರ', ಪಾರಸಿಕ ಮತ್ತು ಸಿಂಹಳ ದ್ವೀಪಗಳನ್ನು ವಶಪಡಿಸಿಕೊಂಡ ವಿವರಗಳಿವೆ. ಇಲ್ಲಿಯ 'ಕವೇರ' ಒಂದು ದ್ವೀಪವೆಂಬ ಅರ್ಥ ಬರುವುದರಿಂದ ಇದು ಇಡೀ ಚೋಳರಾಜ್ಯದ ಪ್ರದೇಶವಾಗಿರದೆ 'ಶ್ರೀರಂಗಂ' ನಡುಗಡ್ಡೆಯಾಗಿರಬಹುದೆಂಬ ಸೂಚನೆ ಇದೆ. ಸಿಂಹಳ ಒಂದು ದ್ವೀಪವೆಂಬುದರ ಬಗ್ಗೆ ಯಾವ ಅನುಮಾನಕ್ಕೂ ಎಡೆ ಇಲ್ಲ; ಆದರೆ ಪಾರಸಿಕ(ಪರ್ಶಿಯನ್ನರ) ದ್ವೀಪ ಯಾವುದೆಂಬುದೊಂದು ಯಕ್ಷ ಪ್ರಶ್ನೆ. ಈ ಘಟನೆಯನ್ನು ಇಮ್ಮಡಿ ಕೀರ್ತಿವರ್ಮನ (ಕ್ರಿ.ಶ. ೭೫೭) ವಕ್ಕಲೇರು ತಾಮ್ರಪಟಶಾಸನದಲ್ಲಿಯೂ ಸ್ಮರಿಸಲಾಗಿದ್ದು, ಅಲ್ಲಿ ಈ ನದಿಯನ್ನು 'ಕವೆರ' ಎಂದು ಕರೆಯಲಾಗಿದೆ.

ಬದಾಮಿ ಚಾಳುಕ್ಯರ ಈ ಉಲ್ಲೇಖಗಳು ತಮಿಳುನಾಡಿನ ಚೋಳರಾಜ್ಯ (ಉಜ್ಜೈಯೂರ್-ಪುಗಾರ್ ನಡುವಣ)ದಲ್ಲಿ ಹರಿಯುವ ನದಿಗೆ ಸಂಬಂಧಿಸಿವೆ ಎಂಬುದನ್ನು ವಿವರಿಸಿ ಹೇಳಬೇಕಾಗಿಲ್ಲ. ಚಾಳುಕ್ಯ ಇಮ್ಮಡಿ ಪುಲಿಕೇಶಿ, ವಿಕ್ರಮಾದಿತ್ಯ, ವಿಜಯಾದಿತ್ಯರು, ಪಲ್ಲವರನ್ನಲ್ಲದೆ ಮತ್ತಿನ್ನಿತರ ತಮಿಳು ಅರಸರಮೇಲೆ ದಂಡೆತ್ತಿಹೋದಾಗ ಸಂಭವಿಸಿದ ಘಟನೆಗಳು ಇವಾಗಿದ್ದವೆಂಬುದನ್ನೂ ಪುನರುಚ್ಚರಿಸಬೇಕಿಲ್ಲ. ಆದರೆ ಇಲ್ಲಿ ಗಮನಿಸಬೇಕಾದ ಒಂದು ಪ್ರಮುಖ ಅಂಶವೆಂದರೆ, ಚಾಳುಕ್ಯರನ್ನು ಒಳಗೊಂಡು ಈ ಕಾಲದ ಕರ್ನಾಟಕದ ಯಾವ ಅರಸು ಮನೆತನಗಳೂ ಕನ್ನಡ-ಕಾವೇರಿಯನ್ನು ಆನುಷಂಗಿಕವಾಗಿಯಾದರೂ ಉಲ್ಲೇಖಿಸದಿರುವುದು.

**ರಾಷ್ಟ್ರಕೂಟರ ಕಾವೇರಿ:**

ಕಾವೇರಿಯನ್ನು ನೇರವಾಗಿ ಹೆಸರಿಸುವ ಮಾರ್ಗಕಾರಪೂರ್ವಕಾಲದ ರಾಷ್ಟ್ರಕೂಟ ಶಾಸನಗಳು ಚಾಳುಕ್ಯ-ಕರ್ನಾಟಕದಲ್ಲಿ ದೊರೆತ ಶಾಸನಗಳಿಗಿಂತಲೂ ವಿರಳವಾಗಿದ್ದು ಅಂತಹ ಅಪರೂಪ ನಿದರ್ಶನಗಳಲ್ಲಿ ಕ್ರಿ.ಶ. ೮೬೦ರ ಕೊಣ್ಣೂರಿನ ಶಾಸನ ಒಂದಾಗಿದೆ.[೩೮] ರಾಷ್ಟ್ರಕೂಟ ನೃಪತುಂಗನಿಗೂ ದಕ್ಷಿಣ ಕಾವೇರಿ ದಡದ ಮೇಲೆ ರಾಜಧಾನಿಪಟ್ಟಣ ಕಟ್ಟಿ ಆಳಿದ ತಲಕಾಡಿನ ಗಂಗರಿಗೂ ನೇರವಾಗಿ ಸಂಬಂಧಿಸಿದ ದಾಖಲೆ ಇದಾಗಿದೆ. ನೃಪತುಂಗನ ಅನುಜ್ಞೆಯ ಮೇರೆಗೆ ಅವನ ಬಂಟನಾದ ಬಂಕೇಶನು ಗಂಗವಾಡಿಯನ್ನು ಮುತ್ತಿ, ಕೇಡಳದುರ್ಗವನ್ನು ವಶಪಡಿಸಿಕೊಂಡನಲ್ಲದೆ, ತಳವನಪುರಾಧೀಶ್ವರ (ತಲಕಾಡಿನ ಗಂಗ)ನನ್ನು ಬೆನ್ನಟ್ಟಿ ಓಡಿಸಿ, ಅಲ್ಲಿಯ *'ಗುರುಪೂರ-ದುರ್ಗ್ಗಮತಮ'* ವಾದ ಕಾವೇರಿಯನ್ನು ದಾಟಿ, ಅದರ ದಕ್ಷಿಣಕ್ಕೆ ಆಳುತ್ತಿದ್ದ ಅರಸರನ್ನೆಲ್ಲಾ (ಅವರನ್ನು ಹೆಸರಿಸಿಲ್ಲ) ಸೋಲಿಸುವನು. ಇದು ಸಂಭವಿಸಿದ್ದು ಕ್ರಿ.ಶ. ೮೬೦ರಲ್ಲಿ - ಅಂದರೆ, ಸರಿಸುಮಾರು *ಕವಿರಾಜಮಾರ್ಗ* ರಚನೆಯಾದ ಕಾಲದಲ್ಲಿ ಎಂದರ್ಥ.

ಕೊಣ್ಣೂರಿನ ಶಾಸನವು ಕಾವೇರಿಯನ್ನು ಸ್ಪಷ್ಟವಾಗಿ ಹೆಸರಿಸುವ ಮೊದಲ ರಾಷ್ಟ್ರಕೂಟ ದಾಖಲೆ ಎಂದು ಹೊರತೋರಿಕೆಗೆ ಕಂಡುಬಂದರೂ ಕಾವೇರಿ ಪ್ರದೇಶದೊಡನೆ ರಾಷ್ಟ್ರಕೂಟರ ಸಂಪರ್ಕವೇರ್ಪಟ್ಟು ಈ ಕಾಲಕ್ಕಾಗಲೇ ಅರ್ಧಶತಮಾನಕ್ಕೂ ಹೆಚ್ಚು ಕಾಲ ಉರುಳಿತ್ತೆಂಬುದನ್ನು ನಿರ್ಲಕ್ಷಿಸುವಂತಿಲ್ಲ. ಸ್ಥಳೀಯ ದಾಖಲೆಗಳೇ ಇದನ್ನು ಸ್ಪಷ್ಟಗೊಳಿಸುವುವು.[೩೯]

ನೃಪತುಂಗನ ತಂದೆ ಮುಮ್ಮಡಿ ಗೋವಿಂದನ ಆಳ್ವಿಕೆ (ಸು. ೭೯೩-೮೧೪)ಯ ಕೊನೆಯ ದಶಕದಲ್ಲಿ, (ಅಂದರೆ ಸುಮಾರು ನೃಪತುಂಗನ ಜನನಕಾಲದಲ್ಲಿ), 'ಗಂಗಮಂಡಲ' ಎಂಬ ಸ್ಥೂಲ ಹೆಸರಿನಿಂದ ಗುರುತಿಸಲ್ಪಟ್ಟಿದ್ದ ಈ ಪ್ರದೇಶವನ್ನು ರಾಷ್ಟ್ರಕೂಟರಿಗೆ ದೊರಕಿಸಿಕೊಟ್ಟ ಬಂಟರಲ್ಲಿ ಪ್ರಪ್ರಥಮನು ರಣಾವಲೋಕ ಕಂಬಯ್ಯ. ಇಂದಿನ ಬೆಂಗಳೂರು-ನೆಲಮಂಗಲ ಪ್ರದೇಶವನ್ನು ರಾಷ್ಟ್ರಕೂಟ ಸೇನೆಯು ಒಂಬತ್ತನೆಯ ಶತಮಾನದ ಆರಂಭದಲ್ಲಿ ಮೊದಲು ವಶಪಡಿಸಿಕೊಂಡಿತೆನ್ನಬಹುದು. ಆಗ ಮಣ್ಣೆಯನ್ನು ನೆಲೆಯನ್ನಾಗಿ ಮಾಡಿಕೊಂಡು ಗಂಗರು ಇಲ್ಲಿ ಆಳುತ್ತಿದ್ದರು. ಮುಮ್ಮಡಿ ಗೋವಿಂದನ ಬಂಟನಾದ (ವಾಸ್ತವವಾಗಿ ಸೋದರನಾದ) ಕಂಭ(ಸ್ತಂಭ)ದೇವನು *'ಪ್ರಭೂತವರ್ಷ (ಗೋವಿಂದ) ಅನುಜ್ಞಾನಮತೇನ'* ೮೦೨ರಲ್ಲಿ ಈ ಪ್ರದೇಶವನ್ನು ವಶಪಡಿಸಿಕೊಂಡು, ಎಡೆದಿಂಡೆ ವಿಷಯದ ಪೆರ್ವ್ವಡಿಯನ್ನು ದಾನಮಾಡಿ, ಈ ನೆಲ ರಾಷ್ಟ್ರಕೂಟರ ಸ್ವಾಮ್ಯದ್ದೆಂದು ಸಾರಿದ್ದನು.[೪೦] ಅಲ್ಲಿಂದ ಪಶ್ಚಿಮಕ್ಕೆ ತನ್ನ ಅಧಿಕಾರವನ್ನು ವಿಸ್ತರಿಸಿಕೊಂಡ

ಎನ್ನಲು ಕಂಬಯ್ಯನನ್ನು ಹೆಸರಿಸುವ ಶ್ರವಣಬೆಳ್ಗೊಳದ ಒಂದು ಶಾಸನ ಸಹಾಯಕ್ಕೆ ಬರುವುದು. ಶ್ರವಣಬೆಳ್ಗೊಳಕ್ಕೆ ಭೂ ದತ್ತಿ ಹಾಕಿಕೊಟ್ಟ ಶ್ರಾವಕರಲ್ಲಿ ಈ ರಣಾವಲೋಕನೇ ಮೊಟ್ಟಮೊದಲಿಗನೆಂಬುದನ್ನೂ ಇವನ(?) ಅರಸಿಯಾದ ಮನಸಿಜಳು ಕೈಕೊಂಡ ಮರಣಾಂತಿಕ ವ್ರತವೇ ಈ ಕ್ಷೇತ್ರದಲ್ಲಿ ಶ್ರಾವಕಿಯೊಬ್ಬಳು ಆಚರಿಸಿದ ಪ್ರಪ್ರಥಮ ಆಚರಣೆಯೆಂಬುದನ್ನೂ ನಾನು ಬೇರೆಡೆ ವಿವರಿಸಿದ್ದೇನೆ.[೪೧] ಅದು ಏನೇ ಇರಲಿ, ಈ ಪ್ರದೇಶವೂ ರಾಷ್ಟ್ರಕೂಟರ ಸ್ವಾಮ್ಯಕ್ಕೊಳಪಟ್ಟಿತ್ತೆಂಬುದನ್ನು ಗೋವಿಂದವಾಡಿಯಲ್ಲಿ ಮಾಡಿದ ದತ್ತಿಕಾರ್ಯದ ಮೂಲಕ ಕಂಬನು ತೋರಿಸಿಕೊಟ್ಟನು. ಅಲ್ಲಿಂದ ಸ್ತಂಭನು ನೇರ ದಕ್ಷಿಣಕ್ಕೆ ಸಾಗಿ, ಕಾವೇರಿ-ಕಬಿನೀ ನಡುವಣ ಪ್ರದೇಶದಲ್ಲಿ ಆಳುತ್ತಿದ್ದ ಪುರಾತನ ಪುನ್ನಾಟ ರಾಜ್ಯದ ಇತಿಹಾಸವನ್ನು ಬಹುತೇಕ ಬದಲಿಸಿದನೆಂದು ಕಾಣುವುದು. ಇದು ಸಂಭವಿಸಿದ್ದು ೮೦೮ರಲ್ಲಿ. ಪುನ್ನಾಡು-ಎಡೆನಾಡು ವಿಷಯದ ಮೇಲೆ ರಾಷ್ಟ್ರಕೂಟರ ಸ್ವಾಮ್ಯವನ್ನು ಪ್ರದರ್ಶಿಸಲು ಅವನು ಚಂದುಗ್ರಾಮವನ್ನು ದತ್ತಿಹಾಕಿಕೊಟ್ಟನು. ಆದರೆ ಅವನ ಪ್ರಧಾನ ಗುರಿ ಇದಾಗಿರದೆ, ಕಾವೇರಿ ಮೇಲಿನ ತಳವನಪುರವನ್ನು ಜಯಿಸಿ ಕೊಳ್ಳುವುದಾಗಿತ್ತು. ಇದನ್ನೂ ಸಾಧಿಸಿಕೊಂಡು ಅವನು ವಿಜಯೋತ್ಸವವನ್ನು ಆಚರಿಸಿದನು.[೪೨] ಕಬಿನೀ-ಕಾವೇರೀ ಕೂಡುವ ತಿರುಮಕೂಡಲು-ನರಸೀಪುರದ ಪೂರ್ವ ದಿಶೆಯಲ್ಲಿ, ಕಾವೇರಿಯ ಎಡದಂಡೆ(ಪೂರ್ವ)ಯ ಮೇಲಿದ್ದ ತಲಕಾಡು, ಇವನು ಜಯಿಸಿಕೊಂಡ ಪಟ್ಟಣವಾಗಿತ್ತು.

ಮುಮ್ಮಡಿ ಗೋವಿಂದನ ಈ ಶಾಸನಗಳಿಂದ ವ್ಯಕ್ತವಾಗುವ ಒಂದು ಪ್ರಮುಖ ಅಂಶವೆಂದರೆ ಕಾವೇರಿ ಪ್ರದೇಶವು ರಾಷ್ಟ್ರಕೂಟರಿಗೆ ಪರಿಚಯವಾದದ್ದು ಎಂಟನೆಯ ಶತಮಾನದ ಉತ್ತರಾರ್ಧದಲ್ಲಿ ಮತ್ತು ಅದು ಅವರ ನೇರ ಅಂಕಿತಕ್ಕೆ ಒಳಗಾದದ್ದು ಒಂಬತ್ತನೆಯ ಶತಮಾನದ ಆರಂಭದಲ್ಲಿ ಎಂಬುದು. ರಾಷ್ಟ್ರಕೂಟ ರಾಜಕುಮಾರ ರಣಾವಲೋಕ ('ದಂತಿದುರ್ಗನ ಖಡ್ಗಾವಲೋಕ' ಬಿರುದನ್ನು ನೆನಪಿಗೆ ತರುವ ಬಿರುದು) ಸ್ತಂಭನು ನೇರವಾಗಿ ಇದರಲ್ಲಿ ತೊಡಗಿಸಿಕೊಂಡದ್ದೂ ಅವನೇ ಪುನ್ನಾಟವಿಷಯ ಮತ್ತು ಗಂಗಮಂಡಲದ ಅಧಿಪತಿಯಾಗಿ ಆಳಿದ್ದೂ ಇಲ್ಲಿ ಗಮನಾರ್ಹ.

ಕಂಬನ ಕಾಲಾನಂತರ ಗಂಗಮಂಡಲದ ಸಾರಥ್ಯವನ್ನು ಗೋವಿಂದನ ಮತ್ತೊಬ್ಬ ಬಂಟ ವಹಿಸಿಕೊಂಡನು. ಅವನೇ ೮೧೦ರ ಕಡಬ ತಾಮ್ರಪಟದಲ್ಲಿ ಹೆಸರಿಸಲಾಗಿರುವ ಜಾಕಿರಾಜ.[೪೩] ತನ್ನ ಅಧಿಕಾರ ಕಕ್ಷೆಯಲ್ಲಿದ್ದ ಕುರುವಲ್ಕೆ ವಿಷಯದ ಒಂದು ಗ್ರಾಮವನ್ನು ದಾನಮಾಡಿದ್ದಲ್ಲದೆ, '*ಅಶೇಷ ಗಂಗಮಂಡಲ* ಅಧಿರಾಜನೆಂದು ಇವನು ಘೋಷಿಸಿ ಕೊಂಡನು. ಇವನ ಸೋದರಳಿಯನೂ ಚಾಳುಕ್ಯ ವಂಶಜನೂ ಆದ ವಿನಯಾದಿತ್ಯನು

ಮಣ್ಣೆಯ ಪಶ್ಚಿಮಕ್ಕಿದ್ದ ಕುನುಂಗಿಲ್ (ಕುಣಿಗಲ್ಲು)ದೇಶವನ್ನು ಆಳುತ್ತಿದ್ದನೆಂಬ ವಿವರ ಇದೇ ಶಾಸನದಲ್ಲಿ ದೊರೆಯುವುದು.[೪೪] ಅಂದರೆ ಮುಮ್ಮಡಿ ಗೋವಿಂದನ ಆಳ್ವಿಕೆಯ ಸರಿಸುಮಾರು ಅಂತ್ಯದವರೆಗೂ (೮೧೬) ಕಾವೇರಿಯನ್ನೊಳಗೊಂಡ ಗಂಗಮಂಡಲವು ರಾಷ್ಟ್ರಕೂಟರ ವಶದಲ್ಲಿತ್ತೆಂದಾಯಿತು. ಈ ಕಾಲದಲ್ಲಿ ಗಂಗಮಂಡಲದ ಒಂದು ಮೂಲೆಗೊತ್ತಲ್ಪಟ್ಟ ಗಂಗವಂಶಜರು ರಾಷ್ಟ್ರಕೂಟರ ಅಪಾರ ಬಲದ ಒತ್ತಡದಡಿ ಚಡಪಡಿಸುವ ಸಂದಿಗ್ಧತೆಗೊಳಗಾಗಿದ್ದರೆನ್ನಲು ಅನುಮಾನಪಡಬೇಕಾಗಿಲ್ಲ.

**ಅಮೋಘವರ್ಷ ಮತ್ತು ಕಾವೇರಿ :**

ಅತಿ ಚಿಕ್ಕವಯಸ್ಸಿನಲ್ಲಿ ಪಟ್ಟಕ್ಕೆ ಬಂದ ಅಮೋಘವರ್ಷ-ನೃಪತುಂಗನು ತಂದೆಯಿಂದ ಬಳುವಳಿಯಾಗಿ ಬಂದ ಕಾವೇರಿ ಪ್ರದೇಶವನ್ನು ಸಹಜವಾಗಿ ತನ್ನ ಅಧಿಕಾರ ಕಕ್ಷೆಯಲ್ಲಿಟ್ಟುಕೊಳ್ಳಲು ಬಯಸಿದನು; ಆದರೆ ಅದು ಸಾಧ್ಯವಾಗದೆ, ಸು. ೮೧೭ರಿಂದ ಸು. ೮೬೦ರ (ಅರ್ಧ ಶತಕದ) ಕಾಲಾವಧಿಯಲ್ಲಿ, ನೃಪತುಂಗನ ಮುಷ್ಟಿಯಿಂದ ಮೇಲಿಂದ ಮೇಲೆ ನುಸುಳಿಕೊಳ್ಳುತ್ತಿತ್ತೆನ್ನಬಹುದು. ಇದಕ್ಕೊಂದು ಪರಿಹಾರ ಕಂಡುಕೊಳ್ಳಲು ನೃಪತುಂಗನು ತನ್ನ ಬಂಟ ಬಂಕೇಶನ ಮೂಲಕ ಗಂಗರಾಚಮಲ್ಲನನ್ನು ನಿಗ್ರಹಿಸಲು ಮತ್ತು ಕಾವೇರಿ ಪ್ರದೇಶದ ಮೇಲೆ ರಾಷ್ಟ್ರಕೂಟ ಸ್ವಾಮ್ಯವನ್ನು ಸಾಧಿಸಿಕೊಳ್ಳಲು ಪ್ರಯತ್ನಿಸಿದನೆಂದು ಕಾಣುವುದು. ಆದರೆ ಬಂಕೇಶ ತನ್ನ ಜೀವಿತಾವಧಿಯಲ್ಲಿ ಕೊಡಮಾಡಿದ ದತ್ತಿ-ದಾನಗಳೆಲ್ಲವೂ ಗದಗು ಜಿಲ್ಲೆಯ ಕೊಣ್ಣೂರು ಗ್ರಾಮದ ಸುತ್ತಮುತ್ತಲಿರುವುದರಿಂದ ಕಾವೇರಿ ಪ್ರದೇಶದಲ್ಲಿ ರಣಾವಲೋಕನಷ್ಟು ಈ ದಳಪತಿಯು ಯಶಸ್ವಿಯಾಗಲಿಲ್ಲ. ಗಂಗಮಂಡಲದಲ್ಲಿ ಕಾರ್ಯನಿರತನಾದ ಬಂಕೇಶನಿಗೆ ತುರ್ತು ಕರೆಕೊಟ್ಟು ಮಾಳಖೇಡದ ಸುತ್ತಮುತ್ತಲಲ್ಲಿ ಹರಡಿದ್ದ ಅರಾಜಕತೆಯನ್ನು ಅಡಗಿಸಲು ನೃಪತುಂಗ ಹೇಳಿದ್ದು ಇದಕ್ಕೆ ಕಾರಣವಾಗಿರಬಹುದು. ಇದು ಏನೇ ಇರಲಿ, ಗಂಗರೊಡನೆ ವೈವಾಹಿಕ ಸಂಬಂಧವನ್ನು ಏರ್ಪಡಿಸಿಕೊಂಡು, ಗಂಗಮಂಡಲದ ಅಧಿಪತ್ಯವನ್ನು ಹೆಚ್ಚೂಕಡಿಮೆ ಅವರಿಗೇ ಬಿಟ್ಟುಕೊಟ್ಟು ಕಾವೇರಿ ಪ್ರದೇಶದ ಸಮಸ್ಯೆಯನ್ನು ನೃಪತುಂಗ ಬಗೆಹರಿಸಿಕೊಂಡನೆಂಬುದು ಇತಿಹಾಸಕಾರರ ಅಭಿಪ್ರಾಯ.[೪೫]

**ಕನ್ನಡದೊಳ್ ಭಾವಿಸಿದ ಜನಪದ:**

ಇತಿಹಾಸ ಪುಟದ ಈ ವಿವರಗಳೆಲ್ಲವನ್ನೂ ಗಮನದಲ್ಲಿಟ್ಟುಕೊಂಡು *"ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡದಾ ಕನ್ನಡದೊಳ್ ಭಾವಿಸಿದ ಜನಪದಂ"* ಎಂಬ ಮಾರ್ಗಕಾರನ ಮಾತನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿದೆ.

ಇಲ್ಲಿಯ 'ಕಾವೇರಿ' ಮತ್ತು 'ಗೋದಾವರಿ' ಪದಗಳಿಗೆ ಸಂಕುಚಿತ ಅರ್ಥಕೊಟ್ಟು ಇವು ನದಿಗಳನ್ನು ಮಾತ್ರ ಸೂಚಿಸುವುವೆನ್ನುವುದಕ್ಕಿಂತ ಅವು ಕಾವೇರಿ ಮತ್ತು ಗೋದಾವರಿ ಪ್ರದೇಶಗಳನ್ನು ಸೂಚಿಸುವುವೆಂದು ಬಗೆದರೆ ಹೆಚ್ಚು ಸಹಜ ಎನಿಸುವುದು. ರಾಜ್ಯಗಳ ಗಡಿಗಳನ್ನು ಇತಿಹಾಸದಲ್ಲಿ ನಿರ್ಣಯಿಸುವಾಗಲೆಲ್ಲಾ ನೈಸರ್ಗಿಕ ಘಟಕಗಳಾದ ನದಿ, ಬೆಟ್ಟ, ಕಾಡು ಮತ್ತು ಸಾಗರಗಳನ್ನೇ ಹೆಚ್ಚು ಬಳಸಿಕೊಳ್ಳಲಾಗಿರುವುದಲ್ಲದೆ ಅಶಾಶ್ವತವೂ ಅಸಮರ್ಪಕವೂ ಆದ ಆಡಳಿತ ಘಟಕಗಳನ್ನಲ್ಲ. ಈ ಸಂಪ್ರದಾಯವನ್ನು ಅನುಸರಿಸಿ ಮಾರ್ಗಕಾರನು 'ಗಂಗಮಂಡಲ'ವೆಂಬ ಆಡಳಿತ ಘಟಕವನ್ನು ಹೆಸರಿಸದೆ ಕಾವೇರಿಯನ್ನು ಮೇರೆಮಾಡಿಕೊಂಡು ಕನ್ನಡ ಜನಪದವನ್ನು 'ಭಾವಿಸಿ'ಕೊಂಡನೆನ್ನಬಹುದು. ಈ 'ಕಾವೇರಿ ಪ್ರದೇಶ' ಕಬನಿಯನ್ನು ದಾಟಿ ಎಷ್ಟು ದೂರ ದಕ್ಷಿಣಕ್ಕೆ ಹಬ್ಬಿತ್ತು ಎಂಬುದನ್ನು ನಿರ್ಣಯಿಸುವ ಕಾರ್ಯ ನಮಗಿಂದು ಜಟಿಲವೆನಿಸಿದರೂ ಅದು ಒಂದೆಡೆ ನೀಲಗಿರಿ ಬೆಟ್ಟದವರೆಗೆ ಮತ್ತೊಂದೆಡೆ ಪಾಲಾರ್ ನದಿಯವರೆಗೆ ವಿಸ್ತರಿಸಿತೆನ್ನಲು ಸಮಸ್ಯೆಗಳಿಲ್ಲ. ಇದು ಬರಿ ಊಹೆಯಲ್ಲ, ಶಂಗಂ ಸಾಹಿತ್ಯ ಮತ್ತು ರಾಷ್ಟ್ರಕೂಟಪೂರ್ವ ಯುಗದ ಶಾಸನಗಳಿಂದ ಸಮರ್ಥಿಸಲ್ಪಟ್ಟ ನಿರ್ಣಾಯಕ ನುಡಿ.

### ೧. ಶಂಗಕಾಲದ ಸಾಹಿತ್ಯದಲ್ಲಿ ತಮಿಳೇತರರು:

ಕ್ರಿ.ಶ. ಮೊದಲರ್ಧ ಸಹಸ್ರಮಾನದ ತಮಿಳು ಸಾಹಿತ್ಯದಲ್ಲಿ ತಮಿಳು ಮತ್ತು ತಮಿಳೇತರರ ಪ್ರಸ್ತಾಪ ಬರುವುದನ್ನೂ ತಮಿಳೇತರರನ್ನು 'ವಡುಗ' ಎಂಬ ಪದದಿಂದ ಗುರುತಿಸಿರುವುದನ್ನೂ ಈಗಾಗಲೇ ಕೆಲವು ಬಾರಿ ಪ್ರಸ್ತಾಪಿಸಿದ್ದೇನೆ. ಸ್ಥೂಲವಾಗಿ ಈ 'ವಡುಗ'ರ ಪ್ರದೇಶವು ಒಂದೆಡೆ ವೆಂಕಟಾದ್ರಿಯ, ಮತ್ತೊಂದೆಡೆ ನೀಲಗಿರಿಯ ಉತ್ತರಕ್ಕೆ ಹಬ್ಬಿತ್ತು. ತಮಿಳ-ತಮಿಳೇತರರ ರಾಜಕೀಯ ಸಂಬಂಧಗಳು ಕಾಲಕಾಲಕ್ಕೆ ಸ್ಥಿತ್ಯಂತರಗೊಳ್ಳುತ್ತಾ ಕೆಲವು ಬಾರಿ ಸೌಹಾರ್ದಯುತವಾಗಿ ಇನ್ನೂ ಕೆಲವು ಬಾರಿ ದ್ವೇಷಪೂರ್ಣವಾಗಿ ಇರುತ್ತಿದ್ದವು ಎಂಬುದನ್ನು ಶಂಗಂ ಸಾಹಿತ್ಯವೇ ಸಮರ್ಥವಾಗಿ ಪ್ರತಿಬಿಂಬಿಸಿರುವುದು. ಉದಾಹರಣೆಗೆ ಅಗನಾನೂಱಿನ ಕವಿ ಮಾಮೂಲನಾರ್ ತಮಿಳೇತರ ಜನಾಂಗಗಳಿಗೆ ರಕ್ಷಣೆ ಒದಗಿಸಿದ ಮೂವರು ತಮಿಳು ಅರಸರನ್ನು ಒಂದೆಡೆ ಉಲ್ಲೇಖಿಸಿರುವನು.[೪೬] ಪತ್ತುಪಾಟ್ಟುವಿನ ಕವಿ ಕಪಿಲರ್ ಆರ್ಯ (ಉತ್ತರದ) ಅರಸನಿಗೆ ತಮಿಳು ಬೋಧಿಸಲೆಂದೇ ಒಂದು ಕಾವ್ಯ ರಚಿಸಿದನೆಂದು ಹೇಳಿಕೊಂಡಿರುವನು. ತಮ್ಮ ಉತ್ತರದ ಗಡಿಯಾಚೆಯ ಜನಾಂಗವನ್ನು ತಮಿಳರು ಒಮ್ಮೊಮ್ಮೆ 'ಆರ್ಯ' ಪದದಿಂದ ಗುರುತಿಸಲು ಅವರು ತಮಿಳು ಮಾತನಾಡದಿರುವುದು ಒಂದು ಕಾರಣವಾಗಿದ್ದರೆ, ಈ

ಜನಾಂಗವು ಮೌರ್ಯರಿಂದ ಮೊದಲ್ಗೊಂಡು ಶಾತವಾಹನ-ಇಕ್ಷ್ವಾಕುಗಳೊಡನೆ ಹೊಂದಾಣಿಕೆ ಮಾಡಿಕೊಂಡು ಪ್ರಾಕೃತ ಭಾಷೆಯನ್ನು ಅಂಗೀಕರಿಸಿದ್ದು ಮತ್ತೊಂದು ಕಾರಣವಾಗಿತ್ತೆನ್ನಬಹುದು. ತುಂಗಭದ್ರಾ ಪ್ರದೇಶದವರೆಗೆ ವಿಸ್ತರಿಸಿದ್ದ ಮೌರ್ಯ ಆಳ್ವಿಕೆಯ ಹಿನ್ನೆಲೆಯಲ್ಲಿ ಬನವಾಸಿಯ ಚುಟುಗಳು, ಕೊಂಕಣದ ಮೊರೆಯರು (ಮೌರ್ಯರ ಶಾಖೆಯವರು), ದಖ್ಖಿಣದಲ್ಲೆಲ್ಲಾ ಹಬ್ಬಿದ್ದ ಶಾತವಾಹನರು, ಆಂಧ್ರದಲ್ಲಿ ಬೇರುಬಿಟ್ಟು ಬನವಾಸಿಯ ಚುಟುಗಳೊಡನೆ ವೈವಾಹಿಕ ಸಂಬಂಧ ಹೊಂದಿದ್ದ ಇಕ್ಷ್ವಾಕರು, ಈ ಆರ್ಯ ವರ್ಗದಡಿ ಗುರುತಿಸಿಕೊಂಡವರಾಗಿದ್ದರೇನೋ. ಆರ್ಯರನ್ನಲ್ಲದೆ, ಹೊಲಿದ ಕೋಟನ್ನು ಧರಿಸುತ್ತಿದ್ದ ಯವನರನ್ನೂ, ಸನ್ನೆಮಾಡುತ್ತಾ ಮೂಕಿಭಾಷೆಯನ್ನಾಡುತ್ತಿದ್ದ ಮಿಲಚ್ಚರನ್ನೂ ಶಂಗಂ ತಮಿಳರು ತಮ್ಮ ಉತ್ತರದ ಗಡಿಯಾಚೆಯಲ್ಲಿದ್ದ ಜನಾಂಗಗಳಲ್ಲಿ ಗುರುತಿಸಿದ್ದರು. ಶಾತಕರ್ಣಿಗಳನ್ನು ತಮಿಳಿನಲ್ಲಿ 'ನೂಱ್ರುವರ್ ಕಣ್ಣರ್' ಎಂದು ಅವರು ಸಂಬೋಧಿಸಿರುವರು. ಪುಱನಾನೂಱಿನ ಕವಿ ಮುರಂಜಿಯೂರ್ ಮುಡಿನಾಗನಾರ್ 'ನೂಱ್ರುವರ್ ಕಣ್ಣರ್'ರೊಡನೆ ಕಾದಾಡಿದ ಘಟನೆಯೊಂದನ್ನು ವಿವರಿಸಿರುವನು.[೪೭] ತಮಿಳಗಂ ಅರಸರು ತಮ್ಮ ತಮ್ಮ ರಾಜ್ಯಗಳಲ್ಲಿ ಕೆಲವು ವಿಶಿಷ್ಟ ಸೇವೆಗಳನ್ನು ಪೂರೈಸಿಕೊಳ್ಳಲು 'ಉತ್ತರ'ದವರನ್ನು ನಿಯಮಿಸಿಕೊಳ್ಳುತ್ತಿದ್ದ ನಿದರ್ಶನಗಳುಂಟು. ಅಂಕುಶದಿಂದ ಆನೆಗಳನ್ನು ಮೀಟುತ್ತಾ ಅವುಗಳನ್ನು ನಿಗ್ರಹಿಸುತ್ತಿರುವಾಗ ಉತ್ತರದ ಮಾವುತರು ಹೇಗೆ ತಮ್ಮದೇ ಆದ ತಮಿಳೇತರ ಭಾಷೆಯಲ್ಲಿ ಕೂಗುತ್ತಿದ್ದರೆಂಬುದನ್ನು ಪತ್ತುಪಾಟ್ಟುವಿನ ಕವಿ ನಪ್ಪೂದಣಾರ್ ವಿಶೇಷವಾಗಿ ಗಮನಿಸಿದ್ದನು.[೪೮] ಆನೆಗಳನ್ನು ಪಳಗಿಸುವ ಕಲೆಯಲ್ಲಿ ಇಂದಿಗೂ ನಿಷ್ಣಾತರಾಗಿರುವ ಕಬನೀ-ನೀಲಗಿರಿ ಪ್ರದೇಶದ ಜನಾಂಗಗಳು ಇಲ್ಲಿ ನೆನಪಿಗೆ ಬಾರದೇ ಇರವು.

**ಲಿಪಿರಹಿತ ಬಹುಭಾಷಾ ಜನಾಂಗಗಳು:**

ನೀಲಗಿರಿಯ ಉತ್ತರ ವಲಯದ ಅಂದಿನ ನಿವಾಸಿಗಳು ಬಹುಭಾಷಾ ಜನಾಂಗಗಳಾಗಿದ್ದು, ಅವರಲ್ಲಿ ತಮಿಳೇತರರು (ಅಂದರೆ ಕನ್ನಡ, ಕೊಂಕಣಿ, ತುಳು, ಕೊಡಗು ಮುಂ.) ಹೆಚ್ಚು ಸಂಖ್ಯೆಯಲ್ಲಿದ್ದರೆಂದು ಕಾಣುವುದು. ಇವರಾರೂ ಲಿಪಿಮಾಧ್ಯಮವನ್ನು ರೂಢಿಸಿಕೊಂಡವರಾಗಿರಲಿಲ್ಲ; ತಮಿಳು ಲಿಪಿಗಳನ್ನೂ ಅವರು ಅಂಗೀಕರಿಸಿರಲಿಲ್ಲ. ಕಾಸರಗೋಡಿನಿಂದ ಮಾಹೆವರೆಗಿನ ಪ್ರದೇಶದಲ್ಲಿ ಆರಂಭಕಾಲದ ತಮಿಳು ಶಾಸನಗಳು ಅಪರೂಪವಾಗಿರುವುದು. ಇದಕ್ಕೊಂದು ಸಾಕ್ಷಿ, ಕ್ರಿ.ಶ. ೨-೪ರ ಕಾಲಾವಧಿಯ ತಮಿಳು-ಬ್ರಾಹ್ಮೀ ಲಿಪಿಯ ಒಂದೇ ಒಂದು ಶಾಸನ ಮತ್ತು ಆನಂತರದ ಎರಡು ಶತಮಾನಗಳಲ್ಲಿ ಹೊರಡಿಸಿದ ವಟ್ಟೆಳುತ್ತು ಲಿಪಿಯ ಒಂದು ಶಾಸನ

ಇಂದಿನ ವೈನಾಡುವಿನಲ್ಲಿ ದೊರಕಿದ್ದು, ಇದು ವೈಗೈ ನದಿ ಪ್ರದೇಶದಲ್ಲಿ ದೊರಕಿರುವ ಅಪಾರ ಸಂಖ್ಯೆಯ ಶಾಸನಗಳ ದೃಶ್ಯಕ್ಕಿಂತ ತುಂಬಾ ಭಿನ್ನತರದ್ದಾಗಿದೆ.[೪೯] ತಮಿಳಗಂ ಉತ್ತರಕ್ಕಿದ್ದ ಜನಾಂಗಗಳು ನೀಲಗಿರಿ ಪರಿಸರದ ಪ್ರದೇಶವನ್ನು ಚೇರರೊಡನೆ ಹಂಚಿಕೊಂಡಿದ್ದರಾಗಲೀ ಅದನ್ನೆಲ್ಲವನ್ನೂ ಅವರಿಗೆ ಸಮರ್ಪಿಸಿರಲಿಲ್ಲ ಎಂಬ ಮಾತು ಇದರಿಂದ ವ್ಯಕ್ತವಾಗುವುದು. ಈ ಮಾತನ್ನು ತಮಿಳು ಸಾಹಿತ್ಯ ಪೋಷಿಸುತ್ತಿದ್ದು ಅವುಗಳಲ್ಲಿ ಕೆಲವು ನಿದರ್ಶನಗಳನ್ನಿಲ್ಲಿ ಗಮನಿಸಬಹುದು.

**ಕೊಂಕಣ ಮತ್ತು ಕರುನಾಟ:**

ಬ್ರಾಹ್ಮಣರನ್ನು 'ವಡಮೊಟಿಯಾಳರ್' (ಉತ್ತರದ ಭಾಷೆಯನ್ನಾಡುವವರು) ಎಂದು ತಮಿಳರು ಕರೆಯುತ್ತಿದ್ದರೆಂದು *ಮಣಿಮೇಗಲೈ* ತಿಳಿಸುವುದು.[೫೦] ಇವರು ತಮಿಳುನಾಡಿನ ಉತ್ತರಕ್ಕಿದ್ದ ಪ್ರದೇಶದ ಸ್ಥಳೀಕರಾಗಿದ್ದರೆಂದಾಗಲೀ ಪ್ರಾಕೃತ ಅಥವಾ ಸಂಸ್ಕೃತದಲ್ಲಿ ವ್ಯವಹರಿಸುತ್ತಿದ್ದ ನೆಲಸಿಗರೆಂದಾಗಲೀ ಅರ್ಥೈಸಬಹುದು. ಇದೇ ಗ್ರಂಥದಲ್ಲಿ ಬರುವ ಇಂತಹ ಒಬ್ಬ ಬ್ರಾಹ್ಮಣನು ತಾನು ಪಶ್ಚಿಮಘಟ್ಟದ ಮಂಗೋಡಿ (ಮಂಗಳೂರು?)ನಿಂದ ಬಂದವನೆಂದು ಹೇಳಿಕೊಂಡಿರುವನು. ಈತನು ಕೊಂಗನಾಡ ಬ್ರಾಹ್ಮಣನಾಗಿದ್ದನೆನ್ನುವುದರಲ್ಲಿ ಎಳ್ಳಷ್ಟೂ ಅನುಮಾನವಿಲ್ಲ; ಆದರೆ ಇವನ ಮಾತೃಭಾಷೆ ಆದಿಕೊಂಕಣಿಯಾಗಿತ್ತೋ ತುಳು ಆಗಿತ್ತೋ ಅಥವಾ ಹಳೆಗನ್ನಡವಾಗಿತ್ತೋ ಎಂಬುದನ್ನು ನಿರ್ದಿಷ್ಟಪಡಿಸಿಕೊಳ್ಳಲು ನಮಗಿಂದು ಸಾಧ್ಯವಾಗುತ್ತಿಲ್ಲ.[೫೦] ಈ ಕಾವ್ಯದ ಇನ್ನೊಂದೆಡೆ ಉತ್ತರದ 'ಕೊಂಗಣರ್', 'ಕರುನಾಡರ್', 'ಗಂಗರ್' ಅಲ್ಲದೆ (ಇನ್ನುಳಿದ) 'ಆರ್ಯ'ರ ಮೇಲೆ ಚೇರನು ಜಯ ಸಾಧಿಸಿಕೊಂಡ ಪ್ರಸ್ತಾಪ ಬರುವುದು.[೫೧] ತನ್ನ ಸೈನ್ಯದೊಡನೆ ಉತ್ತರ ನೀಲಗಿರಿಯೆಡೆಗೆ ಶೆಂಗುಟ್ಟುವನ್ ಸಾಗುತ್ತಿರುವಾಗ, ಆ ವಿಜಯೀ ಯಾತ್ರೆಯ ಮುಂಚೂಣಿಯಲ್ಲಿದ್ದ 'ಕೊಂಕಣ' ಮತ್ತು 'ಕರುನಾಟ' ನೃತ್ಯವೃಂದಗಳು ಇದಕ್ಕೆ ದಾರಿಮಾಡಿಕೊಟ್ಟ ವಿವರ ಬರುವುದು. ಶರಣಾಗತಿಗೊಳಿಸಿಕೊಂಡ ಶತ್ರುರಾಜರ ವಾರಾಂಗನೆಯರನ್ನೂ ನಟುವರನ್ನೂ ವಿಜಯೀ ಅರಸರು ವಶಪಡಿಸಿಕೊಂಡು ತಮ್ಮ ಅಗ್ಗಳಿಕೆಯನ್ನು ಮೆರೆಯುತ್ತಿದ್ದುದು ಅಂದಿನ ಸಂಪ್ರದಾಯವಾಗಿದ್ದುದರಿಂದ, ಕೊಂಕಣ ಮತ್ತು ಕರುನಾಟರ ಮೇಲೆ ಸಾಧಿಸಿದ ವಿಜಯ ವನ್ನು ಸಂಕೇತಿಸಲು ಈ ವಿವರವನ್ನು ಚೇರ ಕವಿ ಕೊಟ್ಟಿರುವನೆಂದು ಭಾವಿಸಬಹುದು.[೫೩]

ಶೆಂಗುಟ್ಟುವನ್ ಹೋರಾಡಿ ವಿಜಯಿಯಾದನೋ ಹೊಂದಾಣಿಕೆಮಾಡಿಕೊಂಡು ತನ್ನ ಹಿರಿಮೆಯನ್ನು ಮೆರೆದನೋ ಎಂಬುದು ನಮಗೆ ಮುಖ್ಯವಲ್ಲ, ನಮಗಿಲ್ಲಿ ಮುಖ್ಯವಾಗಿರು ವುದು ನೀಲಗಿರಿ ಉತ್ತರಾರ್ಧದಲ್ಲಿ ನೆಲೆಸಿದ್ದ ಕೊಂಕಣರು ಮತ್ತು ಕರುನಾಟರು

ಚೇರರೊಡನೆ ಘರ್ಷಣೆಗಿಳಿಯುತ್ತಿದ್ದರೆಂಬುದು ಮತ್ತು ಈ ಪ್ರದೇಶದ ಮೇಲೆ ತಮ್ಮ ಹಕ್ಕನ್ನು ಮೇಲಿಂದಮೇಲೆ ರುಜುವಾತುಮಾಡಿಕೊಳ್ಳುತ್ತಿದ್ದರೆಂಬುದು. ಈ ಬಗೆಯ ಸೆಣಸಾಟ ನೀಲಗಿರಿ ಪ್ರದೇಶಕ್ಕೆ ಮಾತ್ರ ಸೀಮಿತಗೊಳ್ಳದೆ ಇನ್ನುಳಿದ ತಮಿಳು-ತಮಿಳೇತರ ಗಡಿ ಪ್ರದೇಶಕ್ಕೂ ವಿಸ್ತರಿಸಿತ್ತೆನ್ನಲು ಚೇರ-ಕದಂಬರ ನಡುವಿನ, ನಱವು ಪಟ್ಟಣಕ್ಕೆ ಸಂಬಂಧಿಸಿದ ಪ್ರಸಂಗವನ್ನು ಇಲ್ಲಿ ಪುನಃ ಪ್ರಸ್ತಾಪಿಸಬಹುದು. ಈ ಪಟ್ಟಣದ ಉಲ್ಲೇಖ ಪತಿಱ್ರುಪತ್ತುವಿನಲ್ಲಿ ಎರಡು ಬಾರಿ ಬಂದಿದ್ದು, ಅದನ್ನಾಳುತ್ತಿದ್ದ ಇಳಂಚೇರಲ್‌ನನ್ನು ವಾಣಿ ನದಿಗೆ ಹೋಲಿಸಿದ್ದಲ್ಲದೆ, ಅವನನ್ನು ಕೊಂಕನಾಡುವಿನ ಅಧಿಪತಿಯೆಂದೂ ಘೋಷಿಸಲಾಗಿದೆ.[೫೪] ನೀಲಗಿರಿಯಲ್ಲಿ ಹುಟ್ಟಿ, ಕೊಯಮತ್ತೂರಿನ ಉತ್ತರಕ್ಕೆ ಸಾಗಿ, ಕಾವೇರಿಯನ್ನು ಸೇರುವ ನದಿಯೇ ಈ ವಾಣಿ ಎಂಬ ಅಭಿಪ್ರಾಯವಿದೆ. ಪೆರಿಪ್ಲಸ್ ಕರ್ತೃ ಮತ್ತು ಟೋಲಮಿ ಈ ಪಟ್ಟಣವನ್ನು ವಿಶೇಷವಾಗಿ ಗಮನಿಸಿ, ಇದು 'ಕಡಲ್ಗಳ್ಳರ' ಸ್ವಾಮ್ಯದಲ್ಲಿತ್ತೆಂದು ಹೇಳಿರುವರು.[೫೫] ಈ 'ಕಡಲ್ಗಳ್ಳರು' ಮತ್ತಾರೂ ಆಗಿರದೆ ಸಮುದ್ರಾಧಿಪತಿಗಳೂ ಕನ್ನಡ ನೆಲದವರೂ ಆದ ಕದಂಬರಾಗಿದ್ದರು. ಕೊಂಕನಾಡು (ಇಂದಿನ ಸೇಲಂ ಮತ್ತು ಕೊಯಮತ್ತೂರು) ಕೆಲವು ಕಾಲ ಚೇರರ ಅಧಿಪತ್ಯದಲ್ಲಿದ್ದರೆ, ಕೆಲವು ಕಾಲ ಕದಂಬರ ವಶದಲ್ಲಿರುತ್ತಿತ್ತೆಂಬುದನ್ನು ಪೆರಿಪ್ಲಸ್ ಕರ್ತೃ ಮತ್ತು ಟೋಲಮಿ ಇಲ್ಲಿ ಸ್ಪಷ್ಟಪಡಿಸುತ್ತಿರುವರೆಂಬ ಭಾವನೆ ಬರುವುದು.

## ೨. ಸಮಕಾಲೀನ ಶಾಸನಗಳಲ್ಲಿ ಕನ್ನಡ ಜನಾಂಗಗಳು :

ಈ ಉಲ್ಲೇಖಗಳೆಲ್ಲವೂ ಶಂಗಂ ಮತ್ತು ತಮಿಳು ಮಹಾಕಾವ್ಯ ಕಾಲದ ಸಾಹಿತ್ಯಕ್ಕೆ ಸೀಮಿತಗೊಂಡಿದ್ದು ಅವುಗಳನ್ನೆಲ್ಲಾ ಬೆಂಬಲಿಸಲು ಶಾಸನಾಧಾರಗಳು ದೊರೆಯುವುದಿಲ್ಲ. ಆದರೆ ಶಂಗಂ ಸಾಹಿತ್ಯದಿಂದಲೂ ಸಮಕಾಲೀನ ಶಾಸನಗಳಿಂದಲೂ ಪೋಷಿಸಲ್ಪಟ್ಟ ತಮಿಳುನಾಡಿನ ಪಶ್ಚಿಮೋತ್ತರ ಪ್ರದೇಶದ ಆಕರಗಳಿಗೇನೂ ಕೊರತೆಯಿಲ್ಲ. ಇಂಥವುಗಳಲ್ಲಿ ಒಂದೆರಡನ್ನು ನಾನಿಲ್ಲಿ ನಿದರ್ಶಿಸಬಯಸುವೆ:

*ಅಗನಾನೂಱಿ*ನಲ್ಲಿ ಕುಡನಾಡಾಧಿಪತಿಯನ್ನು ಕೆಲವು ಬಾರಿ ಹೆಸರಿಸಲಾಗಿದೆ.[೫೬] 'ಕುಡ' ಅಂದರೆ ಪಶ್ಚಿಮ; 'ನಾಡು' ಎಂದರೆ ದೇಶ, ಪ್ರದೇಶ, ಆಡಳಿತಾ ಘಟಕ. ಈ ಅಧಿಪತಿಯನ್ನು ಎರುಮೈ ಊರವನೆಂದೂ ಗುರುತಿಸಲಾಗಿದೆ. ಪಾಂಡ್ಯನು ಸೋಲಿಸಿದ ಅರಸರಲ್ಲಿ ಎರುಮೈ-ಊರನ್ ಒಬ್ಬನಾಗಿದ್ದನೆಂದು *ಪುಱನಾನೂಱು* ಮತ್ತು *ಅಗನಾನೂಱು* ತಿಳಿಸುವುವು.[೫೭] ಇವನನ್ನು 'ಆರ್ಯ' ಅರಸರ ವರ್ಗದಡಿ ತಂದು, ಕಣ್ಣಗೆಯ ಮೂರ್ತಿಯನ್ನು ಪ್ರತಿಷ್ಠಾಪಿಸುವಾಗ ಸೆರೆಮನೆಯಿಂದ ಬಿಡುಗಡೆಮಾಡಿದ ಕೆಲವು 'ಆರ್ಯ' ಅರಸರಲ್ಲಿ ಕುಡಗಿನ ಕೊಂಗನೂ ಒಬ್ಬನಾಗಿದ್ದನೆಂದು *ಶಿಲಪ್ಪದಿಗಾರಂ*

ತಿಳಿಸುವುದು.[೫೮] ಈ ವಡುಗ ಅಧಿಪತಿಯ ರಾಜ್ಯ 'ಅಯಿರಿ' ನದಿಯ ಭೂಪ್ರದೇಶವನ್ನು ಒಳಗೊಂಡಿತ್ತೆಂದೂ ಇಲ್ಲಿ ತಿಳಿಸಲಾಗಿದೆ.[೫೯]

ತಮಿಳಗಂನ ಉತ್ತರ ಗಡಿಯಾಚೆ ಆಳುತ್ತಿದ್ದ ವಡುಗ ಅಥವಾ ಆರ್ಯ ಜನಪದಾಧಿಕಾರಿಯೊಬ್ಬನನ್ನು ಸ್ಪಷ್ಟವಾಗಿ ಹೆಸರಿಸಿರುವ ಕ್ರಿ.ಪೂ. ೧ನೆಯ ಶತಮಾನದಷ್ಟು ಪೂರ್ವದ ಒಂದು ದಾಖಲೆ ಇದೆ. ತಂಜಾವೂರಿನಿಂದ (ಅಥವಾ ಕಾವೇರಿಯಿಂದ) ದೂರ ದಕ್ಷಿಣಕ್ಕಿರುವ ಪುದುಕ್ಕೋಟೆ ಜಿಲ್ಲೆಯ ಸಿತ್ತನ್ನವಾಸಲ್‌ನ 'ಏಳಡಿಪಟ್ಟಂ' ಗುಹಾಲಯದಲ್ಲಿ ಆರಂಭಕಾಲದ ತಮಿಳು-ಬ್ರಾಹ್ಮೀ ಲಿಪಿ ಮತ್ತು ಶಂಗಂ ತಮಿಳಿನಲ್ಲಿ ಬರೆದು-ಕೊರೆಸಿದ ಬಂಡೆಗಲ್ಲ ಜೈನಶಾಸನ ಇದಾಗಿದೆ.[೬೦] ಅಯಿರಿ ನದಿಯನ್ನು ಕನಿಷ್ಠ ಎರಡು ಬಾರಿ ಅಹನಾನೂಱಿನಲ್ಲಿ ಹೆಸರಿಸಲಾಗಿದ್ದು[೬೧] ಅದು ವಡುಗರ ನದಿ ಎಂದೇ ಸ್ಪಷ್ಟಪಡಿಸಲಾಗಿದೆ. ಆದರೆ ಈ ನದಿಯನ್ನು ಗುರುತಿಸಲು ಇಲ್ಲಿಯವರೆಗೂ ಸಾಧ್ಯವಾದಂತಿಲ್ಲ. ಇದು ಚೇರನಾಡಿನ ಅಯಿರೈ ಬೆಟ್ಟಸಾಲಿನ ನದಿಯೇನಾದರೂ ಆಗಿದ್ದರೆ ಅದನ್ನು ತಮಿಳುನಾಡಿನ ದಿಂಡಿಗಲ್ ಜಿಲ್ಲೆಯ (ಅಥವಾ ಕೊಯಂಬತ್ತೂರು ಜಿಲ್ಲೆಯ ದಕ್ಷಿಣ-ಪೂರ್ವಕ್ಕಿರುವ ಪಳನಿಯಿಂದ ೧೪ ಕಿ.ಮೀ. ಪಶ್ಚಿಮದಲ್ಲಿ ಹರಿಯುವ) ಐವಾರ್‌ಮಲೈ ನದಿ ಎಂದು ಗುರುತಿಸಬಹುದೇನೋ.[೬೨] ಇದು ಪಾಂಡ್ಯರಾಜ್ಯಕ್ಕೆ ಉತ್ತರ (ಪಶ್ಚಿಮೋತ್ತರ)ದಲ್ಲಿದ್ದುದೇನೂ ನಿಜ, ಆದರೆ ಕೊಡಗು-ಮೈಸೂರು ಪ್ರದೇಶದಿಂದ ಸ್ವಲ್ಪ ದೂರವೆನಿಸುವ ಅಂತರದಲ್ಲಿದೆ. ಎರುಮೈ-ಊರವರು ಶಂಗಂ ಅರಸರ ವಿರುದ್ಧ ಸದಾ ಹೋರಾಡುತ್ತಿದ್ದರೆಂಬ ಚಿತ್ರ ಇಲ್ಲಿ ಬರುವುದರಿಂದ, ಪಳನಿಯ ಪ್ರದೇಶದವರೆಗೂ ದಾಳಿಮಾಡಿ ಕೆಲಕಾಲವಾದರೂ ಐವಾರ್‌ಮುಲೈಯಲ್ಲಿ ಅವರು ನೆಲೆನಿಂತ ಸಾಧ್ಯತೆಗಳುಂಟೆನಿಸುವುದು. ಇಲ್ಲಿಂದ ಸಿತ್ತನ್ನವಾಸಲ್ ನೇರ ಪೂರ್ವಕ್ಕಿರುವ ಪಕ್ಕದ ಜಿಲ್ಲೆ. ಈ ಎರುಮೈನಾಡವರು ಕೊಡಗು, ಕೊಂಕಣಿ, ತುಳು ಮತ್ತು ಕನ್ನಡ ಭಾಷೆಗಳಲ್ಲಿ ಯಾವ ಭಾಷೆಯನ್ನು ತಾಯ್ನೆಲದಲ್ಲಿ ಬಳಸುತ್ತಿದ್ದರೆಂಬುದನ್ನು ನಮಗಿಂದು ಸ್ಪಷ್ಟಪಡಿಸಿಕೊಳ್ಳಲಾಗುತ್ತಿಲ್ಲ. ಆದರೆ ತಾವು ದಾಳಿ ಮಾಡಿದ ಪ್ರದೇಶದಲ್ಲಿ ಪ್ರಚಾರದಲ್ಲಿದ್ದ (ತಮಿಳು-ಬ್ರಾಹ್ಮೀ) ಲಿಪಿಯನ್ನು ಮತ್ತು (ತಮಿಳು)ಭಾಷೆಯನ್ನು ಅವರು ಬಳಸಲು ಹಿಂಜರಿಯಲಿಲ್ಲವೆನ್ನಬಹುದು.

ಯುದ್ಧದಲ್ಲಿ ಮಡಿದ ವೀರರ ಗೌರವಾರ್ಥ ಶಂಗಂ ಕಾಲದಲ್ಲಿ 'ನಡುಕಲ್ಲು'ಗಳನ್ನು ನೆಡುವ ಪದ್ಧತಿ ಇತ್ತು. ಇಂತಹ ಸ್ಮೃತಿಕಲ್ಲುಗಳ ಪ್ರಸ್ತಾಪಗಳು ಶಂಗಂ ಕಾವ್ಯಗಳಲ್ಲಿ ಬರುವುವು.[೬೩] ಈ ಕಾಲದ ನಡುಕಲ್ಲುಗಳೆಲ್ಲವೂ ದಿಂಡಿಗಲ್ ಜಿಲ್ಲೆ (ಕರ್ನಾಟಕ-ತಮಿಳುನಾಡುವಿನ ಗಡಿಭಾಗ)ಯಲ್ಲಿ ಹೆಚ್ಚು ಕೇಂದ್ರೀಕೃತವಾಗಿರುವುದು ಒಂದು ವಿಶೇಷ.[೬೪]

ಈ ನಡುಕಲ್ಲುಗಳು ಉತ್ತರದ (ಬಹುತೇಕ ಕನ್ನಡ ಪ್ರದೇಶದ) ವೀರರೊಡನೆ ಹೋರಾಡುತ್ತಾ ಮಡಿದ ತಮಿಳು ಯೋಧರ ಗೌರವಾರ್ಥ ನೆಟ್ಟ ಸ್ಮಾರಕಗಳಾಗಿರುವವೆನಿಸುವುವು. ಶಂಗಂ ಅಥವಾ ಆನಂತರ ಕಾಲದ ತಮಿಳರು ಒಮ್ಮೊಮ್ಮೆ ಕನ್ನಡ ನೆಲದಲ್ಲಿಯೂ ಹೋರಾಡಿ ವೀರಗಲ್ಲುಗಳನ್ನು ಪಡೆದ ಸಂಕೇತಗಳಿವೆ. ಚಿತ್ರದುರ್ಗದ ತಮಟಕಲ್ಲಿನಲ್ಲಿ ದೊರೆತ, ವಟ್ಟೆಳುತ್ತು ಲಿಪಿಯ (ಕ್ರಿ.ಶ. ೫ನೆಯ ಶತಕ), ವೀರಗಲ್ಲೊಂದು ಇದಕ್ಕೆ ಸಾಕ್ಷಿ.[೬೫]

**ಆರಂಭಕಾಲದ ತಮಿಳಿನ ಮೇಲೆ ಕನ್ನಡದ ಪ್ರಭಾವ:**

ಅಶೋಕ ಬ್ರಾಹ್ಮೀಯಲ್ಲಿ ಬರೆದ ಪ್ರಾಕೃತ ಶಾಸನಗಳನ್ನು ಬಿಟ್ಟರೆ 'ಕರುನಾಟ'ವನ್ನು ಪರೋಕ್ಷವಾಗಿ ಪ್ರತಿನಿಧಿಸುವ ಅತ್ಯಂತ ಪುರಾತನ ದಾಖಲೆ, ಸಿತ್ತನ್ನವಾಸಲ್ ತಮಿಳುಬ್ರಾಹ್ಮೀ ಶಾಸನವೆನ್ನಬಹುದು. ಈ ಶಾಸನವನ್ನು ಇತ್ತೀಚಿಗೆ ಮತ್ತೊಮ್ಮೆ ಪರಿಶೀಲಿಸಿದ ಖ್ಯಾತ ತಮಿಳು ಶಾಸನ ತಜ್ಞರೊಬ್ಬರು, ಶಂಗಂಕಾಲದ (ಕ್ರಿ.ಪೂ. ೧ನೆಯ ಶತಮಾನದ) ತಮಿಳಿನ ಮೇಲೆ ಬೀರಿರುವ ಕನ್ನಡದ ಪ್ರಭಾವವನ್ನು ಇದರಲ್ಲಿ ಗುರುತಿಸಿರುವರು.[೬೬] ತಮಿಳಿನ 'ಎರುಮೈನಾಡು'ವಿನ ಕನ್ನಡ ರೂಪಾಂತರವೇ 'ಎರುಮಿನಾಡು' ಎಂದು ಅವರು ಸ್ಪಷ್ಟಪಡಿಸಿರುವರು. ಇಂದಿನ ಕೊಡಗು, ದಕ್ಷಿಣ ಕನ್ನಡ (ಕೊಂಕಣ), ಮೈಸೂರು, ಅಲ್ಲದೆ ಉತ್ತರ ಕೇರಳದ ಸ್ವಲ್ಪ ಪ್ರದೇಶವನ್ನು ಈ ನಾಡು ಒಳಗೊಂಡಿತ್ತು. ಈ ಪ್ರದೇಶವನ್ನು ಕೇಂದ್ರವನ್ನಾಗಿ ಮಾಡಿಕೊಂಡು, ಈ ಎರುಮೈನಾಡಿನ ಅಧಿಪತಿಗಳು ತಮ್ಮ ರಾಜಕೀಯ ಪ್ರಭಾವವನ್ನು ದಿಂಡಿಗಲ್ ಜಿಲ್ಲೆಯ ಐವಾರ್‌ಮಲೈವರೆಗೂ ವಿಸ್ತರಿಸಿಕೊಂಡಿದ್ದರಲ್ಲದೆ, ಸಾಂಘಿಕ ಒಡನಾಟವನ್ನು ಪುದುಕ್ಕೋಟೆಯ ಸಿತ್ತನ್ನವಾಸಲ್‌ವರೆಗೂ ವಿಸ್ತರಿಸಿಕೊಂಡಿದ್ದರೆಂದು ಕಾಣುವುದು. ಕ್ರಿಸ್ತಪೂರ್ವಕಾಲದ ಕನ್ನಡಿಗರಿಗೆ ತಮ್ಮದೇ ಆದ ಲಿಪಿ ಇರದೆ, ಅವರಲ್ಲಿ ಕೆಲವರು ತುಂಗಭದ್ರಾ ಪ್ರದೇಶದಲ್ಲಿ ಅಶೋಕಬ್ರಾಹ್ಮೀ ಲಿಪಿಯನ್ನೂ ಪ್ರಾಕೃತ ಭಾಷೆಯನ್ನೂ ವ್ಯವಹಾರಕ್ಕೆ ಅಳವಡಿಸಿಕೊಂಡ ಹಾಗೆ ಕಾವೇರಿಯಾಚೆಯ ಪ್ರದೇಶದಲ್ಲಿ ತಮಿಳುಬ್ರಾಹ್ಮೀ ಲಿಪಿಯನ್ನೂ ತಮಿಳು ಭಾಷೆಯನ್ನೂ ಬಳಸಿಕೊಂಡ ನಿದರ್ಶನಗಳು ದೊರಕುವುವು. ಈ ಎರುಮೈನಾಡಿನ ಮೂಲ ಜನಾಂಗ ಕೊಡಗಿನವರಾಗಿದ್ದರೆ, ಅವರು ತಮಿಳರಿಗಿಂತ ಭಿನ್ನವಾದ ಭಾಷಾ ಜನಾಂಗವಾಗಿದ್ದುದು ಮಾತ್ರವಲ್ಲದೆ ಮುಂದೊಂದು ಕಾಲದಲ್ಲಿ ಗೌಡಕನ್ನಡ, ಜೇನುಕನ್ನಡ, ಮುಂತಾದ ಹಲವು ಕನ್ನಡ ಪ್ರಭೇದಗಳ ಜನಕರೂ ಆದರೆಂದೆನ್ನಬಹುದು.

ಮೈಸೆ, ಪುನ್ನಾಟ, ಕೊಂಗ, ಎಂಬ ಪ್ರಾದೇಶಿಕ ಹೆಸರುಗಳ ಮೂಲಕವೇ ಅಲ್ಲಿಯ ಅರಸರನ್ನು ಗುರುತಿಸಿರುವುದನ್ನು ನೋಡಿದರೆ, ಶಂಗಂ ಮತ್ತು ಶಂಗಂ ನಂತರದ ತಮಿಳರಿಗೆ ಅವರ ಭಾಷಾಪ್ರದೇಶದ ಉತ್ತರದಲ್ಲಿ ಆಳುತ್ತಿದ್ದ ಅರಸುಮನೆತನಗಳ ಸ್ಪಷ್ಟ ಕಲ್ಪನೆ ಇರಲಿಲ್ಲವೆಂದೆನಿಸುವುದು; ಅಂತಹ ಕಲ್ಪನೆ ಇದ್ದರೂ ಅರಸೊತ್ತಿಗೆಯಲ್ಲಿ ಅವರಿಗಿದ್ದ ಅಂತಸ್ತನ್ನು ಗುರುತಿಸುವ ಇಚ್ಛೆ ಶಂಗಂ ತಮಿಳರಿಗೆ ಇರಲಿಲ್ಲವೇನೋ. ಇಂತಹ ಪ್ರಾದೇಶಿಕ ಅಥವಾ ಬುಡಕಟ್ಟು ಅರಸುಮನೆತನಗಳಲ್ಲಿ ಪುನ್ನಾಟರು ಅತ್ಯಂತ ಪ್ರಭಾವಿಗಳಾಗಿದ್ದರೆಂಬುದನ್ನು ಈಗಾಗಲೇ ಗಮನಿಸಿದ್ದೇವೆ. ಕರ್ನಾಟಕದ ಅತಿಪೂರ್ವ ಕಾಲದ ಅರಸು ಮನೆತನಗಳಲ್ಲಿ ಒಂದಾದ ಈ ಮನೆತನವು ಆದಿಕದಂಬರಿಗೆ ಸರಿಸಮನಾದ ಇತಿಹಾಸವನ್ನು ಹೊಂದಿದಂತೆ ಕಾಣುವುದು. ಇವರ ಪ್ರಪ್ರಥಮ ಉಲ್ಲೇಖವನ್ನು *ಅಗನಾನೂಱಿನ* ಕವಿ ಪರಣರ್ ಮಾಡುವನು; ನಂತರ ಕ್ರಿ.ಶ. ೨ನೆಯ ಶತಕದ ಟೋಲಮಿ 'ಬನೌಸೆ'ಯ ಜೊತೆಗೆ 'ಪುನ್ನಾಟ'ವನ್ನು ಹೆಸರಿಸುವನು. ಇವರು ಶಂಗಂ ಕಾಲದ ಕನ್ನಡ ಪ್ರದೇಶದ ಅರಸರೆಂಬುದನ್ನು ಈ ಪ್ರಾಚೀನ ಉಲ್ಲೇಖಗಳು ಖಚಿತಪಡಿಸುವುವು.[೬೭] ಕ್ರಿ.ಶ. ೩-೪ನೆಯ ಶತಮಾನದ ಚಂದ್ರವಳ್ಳಿ ಶಾಸನದಲ್ಲಿ, ೫ನೆಯ ಶತಮಾನದ ಗುಡ್ನಾಪುರ, ತಾಳಗುಂದ, ಮಲುಹಳ್ಳಿ, ಮಡಕೇರಿ ಶಾಸನಗಳಲ್ಲಿ ಮತ್ತು ೬ನೆಯ ಶತಮಾನದ ಮಾಂಬಳ್ಳಿ, ಸಾಲಿಗ್ರಾಮ, ಮೊದಲಾದ ಶಾಸನಗಳಲ್ಲಿ ಈ ಪುನ್ನಾಟರ ಪ್ರತ್ಯಕ್ಷ ಹಾಗೂ ಪರೋಕ್ಷ ಉಲ್ಲೇಖಗಳು ಬರುತ್ತಿದ್ದು ಇವರು ಗಂಗ ಮತ್ತು ಕದಂಬರೊಡನೆ ಹೆಚ್ಚು ನಿಕಟ ಸಂಬಂಧವಿಟ್ಟುಕೊಂಡು, ತಮಿಳರಿಂದ ದೂರ ನಿಂತಿರುವುದು ಸ್ಪಷ್ಟಗೊಂಡಿರುವುದು.[೬೮] ಈ ಕಾರಣದಿಂದ ಇವರನ್ನು ತಮಿಳಗಂ ಉತ್ತರದಲ್ಲಿದ್ದ ವಡುಗಪ್ರಧಾನರಲ್ಲಿ ಒಬ್ಬರೆಂದು ಬಗೆಯಬಹುದು.

ಪುನ್ನಾಟರಂತೆ ಕೊಂಗ ಪ್ರದೇಶವನ್ನು ಆಳುತ್ತಿದ್ದ ಕೊಂಗಾಳ್ವ (ಕೊಂಗದೇಶವನ್ನು ಆಳುವವ) ಮನೆತನವೂ ಕರ್ನಾಟಕದ ಇತಿಹಾಸದಲ್ಲಿ ಹೆಸರುಗಳಿಸಿಕೊಂಡಿರುವುದು. ಇವರ ಅತ್ಯಂತ ಪುರಾತನ ಉಲ್ಲೇಖಗಳಲ್ಲೊಂದು ಕ್ರಿ.ಶ. ೫ನೆಯ ಶತಕದ ಗುಡ್ನಾಪುರ ಶಾಸನದಲ್ಲಿದೆ.[೬೯] ಈ ಕೊಂಗರಿಗೂ ಕ್ರಿ.ಶ. ೭೫೦ರ ವೇಳ್ವಿಕುಡಿ ತಮಿಳು ಶಾಸನದಲ್ಲಿ ಉಲ್ಲೇಖಗೊಂಡಿರುವ 'ಮಧುರ ಕರುನಾಡಗನ್' ಕೊಂಗನಿಗೂ ಸಂಬಂಧವಿದ್ದರೆ, ಮಧ್ಯಕಾಲೀನ ಕರ್ನಾಟಕದ ಇತಿಹಾಸದಲ್ಲಿ ಖ್ಯಾತಗೊಂಡ ಕೊಂಗಾಳ್ವರ ಪೂರ್ವಜರೇ ಇವರಾಗಿದ್ದರೆಂದು ಬಗೆಯಬಹುದು. ಇವರೂ ತಮಿಳೇತರರಾಗಿ 'ಕಾವೇರಿ' ಪ್ರದೇಶದಲ್ಲಿ ಅಭಿವೃದ್ಧಿಗೊಂಡವರಲ್ಲಿ ಒಬ್ಬರು.

## ದಿಗ್ಭ್ರಮೆ ದೇಸಿ - ತಿರುಳ್ ಕನ್ನಡ :

ಮಾರ್ಗಕಾರನಿಗಿಂತ ಶತಶತಮಾನಕಾಲ ಪೂರ್ವದಲ್ಲಿ ವಡುಗ ಅರಸರು ಕಾವೇರಿ ಆಚೆ (ದಕ್ಷಿಣದ) ಈಚೆ (ಉತ್ತರದ)ಯ ಪ್ರದೇಶದಲ್ಲಿ ಆಳುತ್ತಿದ್ದರೆಂಬುದನ್ನು ಈ ಎಲ್ಲ ಆಕರಗಳು ಸ್ಪಷ್ಟಪಡಿಸಿರುವುವು. ಈ ಜನಾಂಗಗಳು ಕೊಂಕಣಿ, ಕೊಡಗು, ತುಳು ಮತ್ತು ಕನ್ನಡ ಭಾಷೆಗಳನ್ನು ಹಂಚಿಕೊಂಡಿದ್ದವು. ಈ ಹಿನ್ನೆಲೆಯಲ್ಲಿ ಕನ್ನಡದೊಳ್ ಭಾವಿಸಿದ ಜನಪದದ ದಕ್ಷಿಣದಂಚಿನ ಹೆಗ್ಗುರುತಾದ 'ಕಾವೇರಿ'ಯನ್ನು ನಾವು ಕಂಡರೆ, ಅದು ಅಕ್ಷರಶಃ ಒಂದು ನದಿಯೆಂದೆನಿಸದೆ, ನದಿಯೊಂದು ಸಂಕೇತಿಸುವ ವಿಶಾಲ ಪ್ರದೇಶವೆಂದೆನಿಸುವುದು. ಕಾವೇರಿ ನದಿಯಿಂದ ಅದು ಎಷ್ಟು ದೂರ ದಕ್ಷಿಣಕ್ಕಿದ್ದ ಪ್ರದೇಶವನ್ನು ನಿರ್ದೇಶಿಸುತ್ತಿತ್ತೆಂಬುದನ್ನು ಗ್ರಹಿಸಿಕೊಳ್ಳಲು ನಮಗಿಂದು ಸಾಧ್ಯವಾಗದಿರಬಹುದು. ಆದರೆ ಅದೊಂದು ತಮಿಳೇತರ ವಲಯವಾಗಿತ್ತೆಂದರೆ ವಿವಾದಕ್ಕೆ ಎಡೆ ಬರಲಾರದು. ಈ 'ವಿಶದ'-ವಿಷಯದ-ವಿಶೇಷತೆಯೆಂದರೆ ಲಿಪಿರಹಿತ ಜನಪದೀಯ ನುಡಿಗಟ್ಟುಗಳು. ಮಾರ್ಗಕಾರನ ಕಾಲದಲ್ಲಿ ಇವು ದಿಗ್ಭ್ರಮೆಗೊಳಿಸುವಷ್ಟು ವೈವಿಧ್ಯವನ್ನೂ ದೇಸೀ-ಪ್ರಬುದ್ಧತೆಯನ್ನೂ ಸಂಪಾದಿಸಿ ಕೊಂಡಿದ್ದವೆಂದು ಕಾಣುವುದು. "ತಂತಮ್ಮ ನುಡಿಯೊಳೆಲ್ಲರ್ ಜಾಣರ್" ಎನಿಸಿದ್ದ ಈ ಚದುರ ನಾಡವರ್ಗಳು 'ಕುಱಿತೋದದೆಯುಂ ಕಾವ್ಯ ಪ್ರಯೋಗಮತಿಗಳ್' ಆಗಿದ್ದುದೇನೋ ನಿಜ, ಆದರೆ ಇಲ್ಲಿಯ ದೇಸಿ ನುಡಿಗಳು 'ಬೇಱೆಬೇಱಪ್ಪುದಱಿಂ', ಇವುಗಳನ್ನು 'ವಾಸಗಿಯುಮಱಿಯಲಾರದೆ ಬೇಸಱಿಗು'ವಂತೆ ಮಾಡಿದ್ದವು. ಹೀಗೆ ದಂಗುಬಡಿಸುವ ದೇಸೀ ವೈವಿಧ್ಯತೆಗಳನ್ನು ಉಳಿದೆಡೆ ಪ್ರಚಲಿತವಿದ್ದ ಸು-ಸಂಸ್ಕೃತ ಕನ್ನಡದೊಡನೆ ಹೋಲಿಸಿನೋಡಿದಾಗ, ಕಿಸುವೊಳಲು-ಕೊಪಣ, ಪುಲಿಗೆಱೆ-ಒಕ್ಕುಂದಗಳ ನಡುವಣ ನಾಡು (ಕನ್ನಡದ ಮಟ್ಟಿಗೆ ಶೂನ್ಯ ಸಾಹಿತ್ಯದ ವಲಯವಾಗಿದ್ದರೂ) 'ಕನ್ನಡದ ತಿರುಳ್', ಎಂದು ಮಾರ್ಗಕಾರನಿಗೆ ಅನಿಸಿದುದರಲ್ಲಿ ಆಶ್ಚರ್ಯವೇನೂ ಇಲ್ಲ![೭೮]

## ಆಕರ ಟಿಪ್ಪಣಿ :

೧. ಕರ್ನಾಟಕ ಮತ್ತು ತಮಿಳುನಾಡಿನ ಗಡಿಗಳನ್ನು ಕಾವೇರಿಯಂತೆ ಪಾಲಾರ್, ಪೆಣ್ಣಾರ್ ಮತ್ತು ಮಾಯಾರ್ ನದಿಗಳೂ ಗುರುತಿಸುವುವು. ಮೈಸೂರು-ಕೊಯಮತ್ತೂರು ನಡುವಣ ಗಡಿಯನ್ನು ಪಾಲಾರ್ ಗುರುತಿಸಿದರೆ, ನೀಲಗಿರಿಯಿಂದ ಮೈಸೂರನ್ನು ಪ್ರತ್ಯೇಕಿಸುವ ಕಾರ್ಯವನ್ನು ಮಾಯಾರ್ ನದಿ ಮಾಡುವುದು. ತಮಿಳುನಾಡಿನ ಪ್ರಧಾನ ನದಿಗಳಾದ ಉತ್ತರ ಮತ್ತು ದಕ್ಷಿಣ ಪೆಣ್ಣಾರ್‌ಗಳು ಕರ್ನಾಟಕದ ಕೋಲಾರ ಜಿಲ್ಲೆಯನ್ನಲ್ಲದೆ, ೧/೩ ಭಾಗ ಬೆಂಗಳೂರು ಮತ್ತು ೧/೫ ಭಾಗ ತುಮಕೂರು ಜಿಲ್ಲೆಗಳ ಪ್ರದೇಶಗಳನ್ನು ತೊಯ್ಯುವುವು. ಕೋಲಾರ ಜಿಲ್ಲೆಯ ಹರವನಸೆಟ್ಟಿಹಳ್ಳಿಯ (ನಂದಿದುರ್ಗದ) ಬಳಿ ಜನ್ಮತಾಳುವ ದಕ್ಷಿಣ ಪಿನಾಕಿನಿ, ಕೋಲಾರ ಮತ್ತು ಬೆಂಗಳೂರು ಜಿಲ್ಲಾ ಪ್ರದೇಶದಲ್ಲಿ ೩೯ ಕಿ.ಮೀ.

ದೂರವನ್ನು ಕ್ರಮಿಸಿದ ಬಳಿಕ ತಮಿಳುನಾಡನ್ನು ಪ್ರವೇಶಿಸುವುದು. ಇದರಂತೆ ಕೋಲಾರ ಜಿಲ್ಲೆಯ ತಲಗ್ವರ (ನಂದಿದುರ್ಗದಾಚೆ)ದಲ್ಲಿ ಉಗಮಗೊಳ್ಳುವ ಪಾಲಾರ್ ಕರ್ನಾಟಕ, ಆಂಧ್ರ ಮತ್ತು ತಮಿಳುನಾಡುಗಳನ್ನು ಬೇರ್ಪಡಿಸುವುದು ಮತ್ತು ಬೆಸೆಯುವುದು.

೨. *ಕರಾಮಾ.* ೧-೩೬. ಆದರೆ ೧೭ನೆಯ ಶತಮಾನದ ನಂಜುಂಡಕವಿ ತನ್ನ *ರಾಮನಾಥ ಚರಿತೆಯಲ್ಲಿ* 'ಕಾವೇರಿಯಿಂದಮಾ ಗೋದಾವರಿವರೆಗಿರ್ಪನಾಡ'ನ್ನು (ಕನ್ನಡ ಜನಪದವನ್ನು ಹೆಸರಿಸದೇ) ಗುರುತಿಸಿರುವನು. ಪಂಪ, ಪೊನ್ನ ನಾಗಸೇನರನ್ನು ನೆನೆವ ಈ ಕವಿ ಮಾರ್ಗಕಾರನನ್ನು ಹೆಸರಿಸದಿರುವುದು ಕುತೂಹಲಕಾರಕ.

೩. *ಪುಱನಾನೂಱ*ನಲ್ಲಿ ಕಾವಿರಿಯನ್ನಲ್ಲದೆ, ಆನ್‌ಪೊರುಣೈ, ಪೊರುಣೈ, ಕರಿಆರ್, ವೈಗೈ, ಪೆಣ್ಣಾರ್, ಪಖ್ರುಳಿ ಮತ್ತು ಕುಮಾರಿ ನದಿಗಳನ್ನು ಹೆಸರಿಸಲಾಗಿದೆ. ಇವುಗಳಲ್ಲಿ ಕೊನೆಯವೆರಡು ಈಗಿಲ್ಲದ ಐತಿಹ್ಯದ ನದಿಗಳು. ಪೊರುಣೈ ಮತ್ತು ಆನ್‌ಪೊರುಣೈ ಒಂದೇ ನದಿಯ ಎರಡು ಹೆಸರುಗಳೆಂಬ ಅಭಿಮತವಿದೆ. *ಪುಱನಾ.* ೯, ೩೫, ೪೩, ೪೭, ೫೮, ೭೧, ೧೨೬ ಮುಂ.

೪. *ಪುಱನಾ.* ಕವಿಗಳು ಚೋಳ, ಪಾಂಡ್ಯ ಮತ್ತು ಚೇರರ ಬಗ್ಗೆ ಕನಿಷ್ಠ ೧೪೦ ಕವನಗಳನ್ನು ಚಿಟ್ರರಸರ ಬಗ್ಗೆ ೧೨೧ ಕವನಗಳನ್ನು ರಚಿಸಿರುವರು. ಇದರಲ್ಲಿ ೧೬, ೧೬, ೧೩ ಮತ್ತು ೫೨ ಕವಿಗಳು ಸ್ರಮವಾಗಿ ಚೇರ, ಚೋಳ, ಪಾಂಡ್ಯ ಮತ್ತು ಚಿಟ್ರರಸರನ್ನು ಶ್ಲಾಘಿಸುವರು. ಇವು ೧೮ ಚೇರ, ೭೧ ಚೋಳ, ೩೧ ಪಾಂಡ್ಯ ಮತ್ತು ೧೪೧ ಸಾಮಂತರನ್ನು ಹೆಸರಿಸುವುವು. ಮಾರ್, ಜಾ.ರಾ., *ದಿ ಏಯ್ಟ್ ಆಂಥೋಲಜೀಸ್,* (ಮದ್ರಾಸು, ೧೯೮೫), ಪು. ೯೦, ೯೩, ೧೨೮, ೧೫೬, ೧೮೭, ೨೪೬ ಮುಂ. ಅಲ್ಲದೆ ನೋ. ಎನ್. ಸುಬ್ರಹ್ಮಣಿಯನ್, *ಒರಿಜಿನಲ್ ಸೋರ್ಸ್ ಫಾರ್ ದಿ ಹಿಸ್ಟರಿ ಆಫ್ ತಮಿಳ್ನಾಡು,* (ಉಡುಮಲೈಪೇಟೆ, ೧೯೯೪), ಪು. ೧೫೭-೧೬೧.

೫. *ಪುಱನಾ.* ೩೫, ೪೩, ೫೮.

೬. *ಪುಱನಾ.* ೩೯೯, ಸಾ. ೧೨-೧೩; *ಅಹನಾ. II, ಮಣಿಮಿಡೈ ಪವಳಂ,* ೨೧೩, ಸಾ. ೨೧-೨೨; *ಪತ್ತು. ಪಟ್ಟಿನಪಾಲೈ,* ಸಾ. ೬.

೭. *ಮಣಿಮೇಗಲೈ, ಪದಿಹಂ.* ಸಾ. ೨೩; *ಶಿಲಪ್ಪದಿಗಾರಂ I. ಪುಗಾರ್‌ಕ್ಕಾಂಡಮ್,* ೧.೫.

೮. *ಅಹನಾ. ಕಳಿಱ್ರುಯಾನೈ ನಿರೈ,* ೬, ಸಾ. ೩. ೮; *ಮಣಿಮಿಡೈ ಪವಳಂ,* ೧೭೭, ಸಾ. ೧೬-೧೭, ೨೨೯. ಸಾ. ೭-೮.

೯. *ಪುಱನಾ.* ೩೮೫.೧.೮; ೩೯೩. ೨೩-೨೪; ೪೩. ೧-೧೦ ಕ್ರಮವಾಗಿ.

೧೦. ಕಾವಿರಿಯನ್ನು ಸ್ಮರಿಸಿರುವ *ಅಹನಾ.* ಕವಿಗಳಲ್ಲಿ ಮಾಮೂಲಣಾರ್, ನೆಡುಂಕೀಱಣಾರ್, ಶೆಯಲೂರ್ ಇಳಂಪೊನ್, ಪರಣರ್ ಮತ್ತು ತಾಯಂಕಣ್ಣನಾರ್ ಪ್ರಮುಖರು (*ಕಱ.* ೬. ಸಾ. ೩, ೮; *ಮಣಿ* ೧೬೬. ಸಾ. ೧೪, ೧೭೭, ಸಾ. ೧೬-೧೭, ೧೮೧, ಸಾ. ೧೨, ೧೨೨, ಸಾ. ೫-೧೨, ೨೨೬, ಸಾ. ೭-೮. ೩೯೭, ಸಾ. ೪-೧೦, ೩೯೯, ಸಾ. ೧೧-೧೪, ೨೨೨, ಸಾ. ೨೧-೨೨). ಇದರಂತೆ *ಪುಱನಾ.* ಕವಿಗಳಲ್ಲಿ ವೆಳ್ಳೈಕುಡಿ ನಾಗಣಾರ್, ತಾಮಪ್ಪಲ್ ಕಣ್ಣಣಾರ್, ಕಾವಿರಿಪ್ಪೂಂಪಟ್ಟಿನತ್ತುಕ್ಕಾರಿ ಕಣ್ಣಣಾರ್,

ಕೋವೂರ್ ಕ್ಕಿಲಾರ್, ಮರೋಕತ್ತುನಪ್ಪಶಿಲ್ಲೈಯಾರ್, ಕಲ್ಲಾಡನಾರ್, ಆವೂರ್‌ಮೂಲಂ ಕಿಳಾರ್, ಐಯ್ ಮುಟುವಣಾರ್, ನಲ್ಲಿಜ್ಜಿಯಣಾರ್ ಮೊದಲಾದವರನ್ನು ಇಲ್ಲಿ ಹೆಸರಿಸಬಹುದು (೩೫.೧.೮; ೪೩.೧.೧೦; ೫೮.೧.೧; ೬೮.೧.೯; ೧೭೪.೧.೮; ೩೮೫, ೧.೮; ೧೬೬. ೨೧-೨೬, ೨೮-೩೦; ೩೯೯.೧೨-೧೩; ೩೯೩.೨೩-೨೪). ಈ ವರ್ಗದಡಿ ಬರುವ ಪತ್ತುಪಾಟ್ಟಿನ ಕವಿಗಳಲ್ಲಿ ನಕ್ಕೀರರ್, ಕಡಿಯಲೂರ್ ಉರುತ್ತಿರಂಗಣ್ಣಾರ್, ಇರಣಿಯ ಮುಟ್ಟತ್ತುಪ್ಪೆರುಂ, ಕುಣ್ರೋರ್‌ಪ್ಪೆರುಂ, ಕೌಶಿಕಣಾರ್‌ಗಳನ್ನೂ ತರಬಹುದು (*ತಿರುಮುರು.* ೧೪೬-೧೪೮; *ಪಟ್ಟಿನಾ.* ಸಾ. ೬; *ಮಲೈಪಡು.* ೧.೫೨೭).

೧೧. ಪೊಯ್‌ಗೈಯಾರ್, *ಕಳನಲಿ*; ಸೀತ್ತಲೈಸಾತ್ತನ್ನಾರ್, *ಮಣಿಮೇಗಲೈ, ಪದಿಹಂ.* ಸಾ. ೧೧-೧೩; *ಶಿಲಪ್ಪದಿಗಾರಂ* I. ಸಾ. ೫; IV. ಸಾ. ೧೬೫; VI, ಸಾ. ೧೬೩; VII. ಸಾ. ೧೯, ೨೫-೨೯; IX. ೫೭-೫೯; XXI, ೧೧-೧೫; XXV, ೧೨೨-೧೨೩.

೧೨. ಇವರಲ್ಲಿ ಕಂತರತ್ತಣಾರ್ (*ಅಗನಾ.* ೩೪೨), ಕಾರಿಕಣ್ಣಣಾರ್ (*ಪುಱನಾ.* ೫೭, ೧೬೯, ೧೭೧, ೩೫೩; *ಅಗನಾ.* ೧೦೭, ೧೨೩, ೧೮೫, *ಕುರುಂದೊಗೈ, ೨೯೭; ನಱ್ರಿನೈ, ೨೩೭*), ಶಂಕಣ್ಣಣಾರ್ (*ಅಗನಾ.* ೧೦೩, ೨೭೧; *ನಟ್ರಿಣೈ,* ೩೮೯), ಶೇಂತಕ್ಕಣ್ಣಣಾರ್ (*ಅಗನಾ.* ೩೪೭), ನಪ್ಪೂದಣಾರ್ (*ನಟ್ರಿಣೈ, ೨೯*)ಗಳನ್ನು ಸುಲಭವಾಗಿ ಗುರುತಿಸಬಹುದು. ಅವರೆಲ್ಲರೂ 'ಕಾವಿರಿಪ್ಪೂಂಪಟ್ಟಿನತ್ತಾರ್' ಎಂಬ ವಿಶೇಷಣವನ್ನು ತಮ್ಮ ಹೆಸರುಗಳೊಡನೆ ಜೋಡಿಸಿಕೊಂಡಿರುವರು.

೧೩. *ಶಿಲಪ್ಪ* VI, ೧೬೩; IX, ೫೭-೫೯.

೧೪. ಪರದವರ್ ಎಂಬ (ಮೀನುಗಾರ) ಸಾಮಾಜಿಕ ವರ್ಗವು ನದಿ ಮತ್ತು ಸಮುದ್ರ ಸಂಪತ್ತನ್ನು ಅವಲಂಬಿಸಿದ್ದು ಮೀನು ಸಂಗ್ರಹ ಮತ್ತು ಮುತ್ತು ಶೋಧನೆ ಅವರ ಪ್ರಧಾನ ಉದ್ಯೋಗಗಳಾಗಿದ್ದವು (*ಕಲಿತ್ತೊಗೈ,* ೧೩೧, ೨೨). ಇವರ ವಂಶಜರು ನೀರಿನಾಳಕ್ಕಿಳಿದು ಸುಮಾರು ೫೮-೬೦ ಸೆಕೆಂಡ್‌ಕಾಲ ಉಸಿರನ್ನು ನಿರ್ಬಂಧದಲ್ಲಿಡುವ ಕಲೆಯನ್ನು ಕರಗತ ಮಾಡಿಕೊಂಡಿರುವುದನ್ನು ಇತ್ತೀಚಿನ ಸಂಶೋಧನೆಯಲ್ಲಿ ಕಂಡುಕೊಳ್ಳಲಾಗಿದೆ. ನೋ. ಅಥಿಯಮಾನ್, *ಟ್ರೆಡಿಷನಲ್ ಪರ್ಲ್ ಅಂಡ್ ಚೌಂಕ್ ಡೈವಿಂಗ್ ಇನ್ ಮನ್ನಾರ್ ಗಲ್ಫ್,* (ನ್ಯೂ ದೆಹಲಿ, ೧೯೯೭).

೧೫. *ಅಗನಾ. ಮಣಿ.* ೨೨೬, ಸಾ. ೭-೮; ೩೬೭, ಸಾ. ೪-೧೦; ೩೫೬, ಸಾ. ೧೧-೧೪.

೧೬. *ಪುಱನಾ.* ೪೩.೧.೧೦

೧೭. ಕಾವೇರಿಯನ್ನು ಉಲ್ಲೇಖಿಸುವ *ಅಗನಾ.* ಮತ್ತು *ಪುಱನಾ.* ಕವನಗಳಲ್ಲಿ ಕೆಲವನ್ನು (*ಎ ಕನ್‌ಸೈಜ್ ಕಂಪೆಂಡಿಯಮ್ ಆಫ್ ಶಂಕಂ ಲಿಟರೇಚರ್,* ಸಂ. ೧, ತಂಜಾವೂರು, ೧೯೯೦, ಸಂ. ಕೆ.ಜಿ. ಶೇಷಾದ್ರಿ) ಆಯ್ದು ಇಲ್ಲಿ ನಿದರ್ಶಿಸಬಹುದು.

★ ಸೂರ್ಯನು ನಾಲ್ಕು ದಿಕ್ಕಿನಲ್ಲಿ ಉದಯಿಸಿದರೂ ಶುಕ್ರನು ದಕ್ಷಿಣಾಪಥವನ್ನು ತುಳಿದರೂ ಅನೇಕ ಝರಿಗಳಲ್ಲಿ ಸರ್ವಋತುಗಳಲ್ಲಿ ಪ್ರವಹಿಸುವ ಕಾವಿರಿ ಈ ಭೂಮಂಡಲಕ್ಕೆಲ್ಲಾ ನೀರುಣಿಸುತ್ತಲೇ ಇರುವುದು (*ಪುಱನಾ.* ೩೫: ೬-೮).

★ ಉಕ್ಕೇರಿ ಹರಿಯುತ್ತಾ ಮರಗಳನ್ನು ಬುಡಮೇಲು ಮಾಡುತ್ತಾ ಅವುಗಳನ್ನು ದಡಕ್ಕೆ ತಂದೊಡ್ಡುವ ಕಾವಿರಿ ಹಾಲುತುಂಬಿ ಒಸರುವ ಮೊಲೆಯಿಂದ ಮಗುವಿಗೆ ಹಾಲುಣಿಸುವ ತಾಯಿಯಂತೆ ಈ ಪ್ರಪಂಚದ ಸರ್ವಜೀವಿಗಳಿಗೆ ಉಣಬಡಿಸುವಳು (ಪುಜಿನಾ. ೬೮:೮-೧೦).

★ ತನ್ನ ದಡದ ಮೇಲೆ ಹರಿಹಾಯುವ ಕಾವೇರಿ ಚೋಳ ದೇಶವನ್ನು ಸಮೃದ್ಧಗೊಳಿಸಿದೆ. (ಪುಜಿನಾ. ೧೭೪: ೭-೯).

★ ರಾಡಿನೀರಿನಿಂದ [ಭೂಮಿಯನ್ನು] ಸಮೃದ್ಧಿಗೊಳಿಸುತ್ತಾ ಪೂರ್ವದಿಕ್ಕಿನೆಡೆ ಪ್ರವಹಿಸುವ ಕಾವಿರಿಯ ನೀರುಂಡ ಫಲವತ್ತಾದ ಪ್ರದೇಶವು ತಂಪು ಗದ್ದೆಗಳ ಅನೇಕ ಶ್ರೀಮಂತ ಗ್ರಾಮಗಳಿಂದೊಡಗೂಡಿದೆ (ಪದಿಱ್ರು. ೯೦:೪೬-೪೭).

★ ಕಾವಿರಿಗೆ ಆಶ್ರಯಕೊಟ್ಟ ಚೋಳ ಕರಿಕಾಲ್‌ಪೆರುವಳತ್ತಾನನ ಒಂದು ವೇಲಿ ಕ್ಷೇತ್ರವು ಒಂದು ಸಹಸ್ರ ಕಳಮ್ ಭತ್ತವನ್ನು ಉತ್ಪಾದಿಸುವುದು (ಪೊರುನರಾಱ್ರುಪ್ಪಡೈ, ೨೪೬-೨೪೮).

★ ಕಾವೇರಿ ಪ್ರವಾಹವು [ದಡದ ಮೇಲೆ] ತಂದೊಟ್ಟುವ ಮರಳ ದಿನ್ನೆಯಮೇಲೆ, ನಿಶಾಂತ್ಯದ ಒಂದು ಘಳಿಗೆ ಕಾಲ ಸುಂಕಾಧಿಕಾರಿ ನಿದ್ದೆ ಮಾಡುತ್ತಿರುವನು (ಪಟ್ಟಿಣ. ೧೧೫-೧೧೭).

★ ಸಮುದ್ರ ಸೇರುವ ಪುಗಾರ್ ನದೀಮುಖದ ಕಾವಿರಿಯಂತೆ ನಣ್ಣನ್ ಅರಮನೆಯ ಮುಖಮಂಟಪದಲ್ಲಿ ವೈವಿಧ್ಯಮಯ ವಸ್ತುಗಳ ಅಪಾರ ಬೆಟ್ಟವೇ ಬಿದ್ದಿದೆ. (ಮಲೈಪಡು. ೫೨೭-೫೨೯).

★ ಪೂರ್ವದಿಕ್ಕಿನ ದಾರಿಯನ್ನು ಕ್ರಮಿಸುವಾಗ ಸುಂದರ ಹಾಗೂ ಶೀತಲ ಕಾವಿರಿ ಒಡ್ಡುಗಳನ್ನು ಒಡೆಯುತ್ತಾ ದಡಗಳನ್ನು ಅಡಗಿಸುತ್ತಾ ಆಟ್ಟನತ್ತಿಯನ್ನು ಸೆಳೆದೊಯ್ದು ಅದಿಮಂದಿಯ ಅಳಲಿನ ಮೇರೆಯನ್ನು ಒಡೆಯಿತು (ಅಗನಾ. ೭೬: ೧೦-೧೩).

★ ಕಾವಿರಿ ತೊಯ್ಸುವ ಪಳಯಣನ ಭೂಪ್ರದೇಶದಲ್ಲಿ ಪೂಒರ್ ಹೆಸರಿನ ಪ್ರಸಿದ್ಧ ಪಟ್ಟಣವಿದೆ (ಅಹನಾ. ೧೮೬: ೧೫, ೧೬).

★ ಭುವಿಯ ಅನೇಕ ಜೀವಿಜಂತುಗಳಿಗೆ ಉಣಬಡಿಸುವ ಕಾವಿರಿಯ ಜಲರಾಶಿಯು ಸದಾಕಾಲ ದಡಗಳನ್ನು ಆಲಂಗಿಸುತ್ತಾ ಹರಿಹಾಯುವುದು (ಅಹನಾ. ೩೪೧: ೪, ೫).

★ ಕಾವಿರಿ ದಡದ ಮೇಲಿರುವ ಚೋಳನ ಉಱೈಯೂರ್‌ನಂತೆ ನಾಯಕಿಯ ತಂದೆಯ ಊರು ಸಂಪದ್ಭರಿತವೂ ಸುಪ್ರಸಿದ್ಧವೂ ಆಗಿದೆ (ಅಹನಾ. ೩೮೫: ೪, ೫).

★ ತನ್ನ ಭೇರಿಘೋಷಣ [ಹೊಗಳುಭಟ್ಟ] ಕವಿಯ ನುಡಿಗಳನ್ನು ಒಗ್ಗೂಡಿಸಿಕೊಂಡು, ಐಯೂರ್ ಮುಡವನಾರ್ ಕಾವಿರಿಯಾಱ್ರುಕ್ಕುೞಿವಣ್ (ಕಾವಿರಿ ಅಧಿಪತಿಯಾದ) ಕಿಳ್ಳಿವಳವನ್‌ನನ್ನು ಕಾಣಲು ಹೋಗುತ್ತಿರುವನು; ಇವನ [ರಾಜ್ಯದ] ಕ್ಷೇತ್ರ ಮತ್ತು ವನಗಳು ಸತತವಾಗಿ [ಕಾವಿರಿ] ನದಿಯ ನೀರುಣ್ಣುತ್ತಿವೆ (ಪುಜಿನಾ. ೩೯೯: ೧೧-೧೩).

* ಕಾವಿರಿ ನದಿಯ ನೀರುಂಡು ಸಮೃದ್ಧಗೊಂಡ ಚೋಳರ ಸುಭಿಕ್ಷ ಕ್ಷೇತ್ರಗಳ ನವಿಲುಗಳು, ರೈತರು ಗದ್ದೆಯಲ್ಲಿ ಬಾರಿಸುವ ತಮಟೆಯ ಪಟ್ಟುಗಳನ್ನು ಗುಡುಗೆಂದು ಭ್ರಮಿಸಿ, ನಲಿವಿನಿಂದ ನರ್ತನಗೈಯ್ಯುತ್ತಿವೆ; ತಣ್ಣೀರಿನಲ್ಲಿ ಸ್ನಾನಮಾಡುವವರ ಕೇಳಿ ಕೂಗಾಟದಲ್ಲಿ ಯುದ್ಧವೀರರ ಭೇರಿಘೋಷವು ಬೆರೆತುಕೊಂಡಿದೆ; ಸಿರಿವಂತರ ಮನೆಗಳಿಂದ ಹೊರಹೊಮ್ಮುವ ಹೋರಿಗಳ ಹೂಂಕಾರವು ಉಕ್ಕಿ ಭೋರ್ಗರೆವ ನೀರಿನಲೆಗಳಲ್ಲಿ ಮರುಧ್ವನಿಸುವಂತಿದೆ (*ಪದಿಱ್ರು*. ೯೦: ೪೧-೪೭).
* ಕಾವಿರಿ ದೇಶದ ಅಧಿಪತಿಯಾದ ಪಳವನ್‌ನ 'ಪೋರ್' ನಗರದಂತೆ ನಾಯಕನ ಸೂಳೆ ಸುಂದರವಾಗಿರುವಳು (*ಅಹನಾ*. ೧೮೬: ೧೫, ೧೬).

೧೮. ಮಹಾದೇವನ್, ಐ., *ಅರ್ಲಿ ತಮಿಳ್‌ಎಪಿಗ್ರಫಿ*, ಪು. ೩೧೩ರಿಂದ ೬೩೯.

೧೯. ಎಇ XV, ೪೮, ಅ.ಟಿ. ೧; XII, ಪು. ೨೫೫; XXXVII, ಪು. ೨೩೩

೨೦. *ಅದೇ*. I, ಪು. ೫೮.

೨೧. *ಅದೇ*. XVII, ಪು. ೨೯೧-೩೦೯.

೨೨. *ಪುಱನಾ*. ೩೮೯.೧.೧೧

೨೩. *ಅಹನಾ*. ೨೧೩.೧೧.೧-೩; ೩೪೦, ೧೧. ೬,೭. ಅಲ್ಲದೆ ನೋ. *ಪುಱನಾ*. ೧-೬.

೨೪. ಮಾರ್ರ್, *ಅದೇ*. ಪು. ೨೪೩.

೨೫. *ಪುಱನಾ*. ೩೮೫.೧೧.೮.೧೦; *ಅಹನಾ*. ೩೯೧.೧೧.೧೩-೧೭ ಮತ್ತು ೬೧.೩.೯೩. ಇಲ್ಲಿ ತಮಿಳೇತರರನ್ನು *'ವೇಲಿ ಪೆಯರ್ ಮೇಯೆಂ'* ಎಂಬ ಪದದಿಂದಲೂ ಗುರುತಿಸಲಾಗಿದೆ (*ಅಹನಾ*. ೨೯೫. ೩೧, ೨೭).

೨೬. *ಪತ್ತು. ಮಲೈ*. ೧-೫೨೭.

೨೭. *ಮಣಿ. ಪದಿಹಂ*. ೧೧-೧೩.

೨೮. *ಎಟ್ಟುತ್ತದಿಗಾರಮ್*. ಸಾ. ೧೦-೧೧.

೨೯. ಬೊಬ್ಬೂರು ರಂಗಕವಿಯ *ಕಾವೇರಿಪುರಾಣ*, ಗೊರೂರು ನರಸಿಂಹಾರ್ಯನ *ಕಾವೇರಿಪುರಾಣ*, ಮುಮ್ಮಡಿ ಕೃಷ್ಣರಾಜನ *ಅಖಂಡ ಕಾವೇರಿ ಮಹಾತ್ಮೆ*, ಚಲುವಾಂಬೆಯ *ತಲಕಾವೇರಿಮಹಾತ್ಮೆ*, ಮೈರ್ಪಾಟು ವೆಂಕಟ್ರಮಣಯ್ಯನ *ಕಾವೇರಿಮಹಾತ್ಮೆ*, ಅಜ್ಞಾತ ಕವಿಯೊಬ್ಬನ *ಸಹ್ಯಾದ್ರಿಖಂಡ*, ಇವುಗಳಲ್ಲಿ ಗಮನಾರ್ಹ. ನೋ. ಪುಣಿ ಚತ್ತಾಯರು, *ಕಾವೇರಿ ಪ್ರಾಚೀನ ತುಳುಕಾವ್ಯ*, (ಉಡುಪಿ, ೧೯೧೭), ಪು.೬.

೩೦. *ಪರಿಪಾ.* ಅನುಬಂಧ-೭.

೩೧. ಸಾ. ೬-೨೧೨, ೭-೧೫೪, ೧೦-೨೧೭, ೧೧-೨೧೦, ೧೨-೧೫, ೧೭-೯೩, ೨೦-೧೯೬, ೨೨-೮೧.

೩೨. *ಅಹನಾ.* ೮೬, ೧೧, ೧೨, ೧೩.

೩೩. ರನ್ನ, *ಅಜಿತತೀರ್ಥಂಕರ ಪುರಾಣಂ,* (ಸಂ. ಬಿ.ಎಸ್. ಸಣ್ಣಯ್ಯ ಮತ್ತು ರಾಮೇಗೌಡ, ಬೆಂಗಳೂರು, ೨೦೦೪, ೧-೩೬)ದಲ್ಲಿ ಗೋವಿಂದ ಮತ್ತು ತೈಲಪರ ಕಾಳಗವು 'ಕಾವೇರೀ ಸರಿತ್ತೀರದೊಳ್ ನಡೆಯಿತು' (೧-೩೬) ಎಂದಿರುವುದನ್ನು 'ಕರ್ನಾಟಕ ಕಾವೇರಿ'ಯೆಂದು ಬಗೆಯಬಹುದೇನೋ. ಆದರೆ *ಶಾಂತಿಪುರಾಣಂ* (ಸಂ. ಹಂಪ ನಾಗರಾಜಯ್ಯ, ಬೆಂಗಳೂರು, ೧೯೮೨, ೧೧. ೧-೫)ದಲ್ಲಿ ಬರುವ ಉಲ್ಲೇಖವು ಖಂಡಿತವಾಗಿಯೂ ತಮಿಳುನಾಡಿನ ಕಾವೇರಿಯನ್ನು ಉದ್ದೇಶಿಸಿದ್ದಾಗಿದೆ. ಗೋದಾವರಿಯ ಉಲ್ಲೇಖಕ್ಕೆ ನೋ. ಪಂಪ, *ವಿಕ್ರಮಾರ್ಜುನ ವಿಜಯ* ೧೪-೩೧; ಚಾವುಂಡರಾಯ', *ತ್ರಿಷಷ್ಠಿಶಲಾಕ ಪುರುಷ ಚರಿತೆ.* ಪು. ೪೧೨.

೩೪. ರಘುವಂಶ IV. ೪೫ (೪ನೆಯ ಶತಕ) ಕಾಳಿದಾಸ ಕೊಟ್ಟ ಕಾವೇರಿಯ ವರ್ಣನೆಯನ್ನು ಸಂಸ್ಕೃತ ಶಾಸನಕವಿ ರವಿಕೀರ್ತಿ (೭ನೆಯ ಶತಕ) ಮತ್ತು ಕನ್ನಡ ಕವಿ (೧೦ನೆಯ ಶತಕ) ಪೊನ್ನ ಹೇಗೆ ಬಳಸಿಕೊಂಡಿರುವರು-ಮಾರ್ಪಾಟು ಮಾಡಿಕೊಂಡಿರುವರು ಎಂಬುದನ್ನು ಹೋಲಿಸಿ ನೋಡಬಹುದು:

- ★ *ಸ ಸೈನ್ಯ ಪರಿಭೋಗೇಣ ಗಜದಾನ ಸುಗಂಧನಾ ಕಾವೇರಿಂ ಸರಿತಾಂ ಪತ್ಯುಃ ಶಂಕನೀಯಾಮ್ ಇವ-ಅಕರೋತ್* (*ವರ್ಕ್ಸ್ ಆಫ್ ಕಾಳಿದಾಸ,* (ಸಂ. ೨), ಸಂ. ಮತ್ತು ಅನು. ಸಿ.ಆರ್. ದೇವಧರ್, (ದೆಹಲಿ, ೧೯೮೬, ಪು.ಮು., IV. ೪೫.)
- ★ *ಕಾವೇರೀ ದೃತ-ಶಫರೀ-ವಿಲೋಲನೇತ್ರ ಚೋಳಾನಾಂ ಸಪದಿ ಜಯೋದ್ಯಾತಸ್ಯ ಯಸ್ಯ ಪ್ರಶ್ಚ್ಯೋತಾನ್ಮದ ಗಜಸೇತುರುದ್ಧನೀರಾ ಸಂಸ್ಪರ್ಶಂ ಪರಿಹರಿತಿ ಸ್ಮ ರತ್ನರಾಶೇಃ* (ಎರಡನೇ *ಪುಲಕೇಶಿಯ ಐಹೊಳೆ ಶಾಸನ,* ಎಇ VI, ಪು. ೧-೧೨; ಪ. ೧೪, ಪು. ೬).
- ★ *ಸ್ಕಂಧಾವಾರೇಭ ಮದೋದ್ಗಂಧಾ ವಿಲೆಯಂ ಕವೇರ ಕನ್ನಿಕೆಯುತತ್ಸಿಂಧುಪತಿಗಿಂಬಿನಿಂದತಿ ಸಂಧಿಸಿದಂ ನೃಪತಿ ಬಿಟ್ಟು ತದುಭಯ ತಟದೊಳ್* - *ಶಾಂತಿಪುರಾಣಂ,* ೧೧-೨, ಪು. ೪೪೪.

ವೀರರಸ ಪ್ರಧಾನವಾದ ಈ ಕಾವ್ಯಗಳಲ್ಲಿ ಕಾಳಿದಾಸ ಮತ್ತು ರನ್ನರಿಬ್ಬರೂ ವೀರ್ಯಸ್ಖಲನ ಮಾಡಿಸಿ ಕಾವೇರಿಯ ಶೀಲಶಂಕಿಸಲು ಎಡೆಮಾಡಿಕೊಟ್ಟಿರುವರು; ರವಿಕೀರ್ತಿಯಾದರೋ ಅವಳು ಸಮುದ್ರರಾಜನಲ್ಲಿ ಮಿಲನಗೊಳ್ಳಲು ಬಿಡದೆ ಪೀಡಿಸಿರುವನು.

೩೫. ಮಾಂಬಳ್ಳಿ ಶಾಸನವನ್ನು ಕ್ರಿ.ಶ. ೫೫೦ರಲ್ಲಿ ಹೊರಡಿಸಲಾಯಿತೆಂಬ ಅಭಿಮತವಿದೆ. ಎಕ IV, ಯಳಂ. ೧೯೭ ಅಥವಾ ಎಕ XIV, ಯಳಂ. ೧೭೫. ಅಲ್ಲದೆ ನೋ. ಎಮ್ಎಎಆರ್ ೧೯೩೬, ಸಂ. ೫೩, ಪು. ೧೨೬-೧೩೯. ಈ ಶಾಸನದಲ್ಲಿ ಬರುವ ಗಿರಿ ಸಂಪತ್ತಿನ ವರ್ಣನೆ ಇಂತಿದೆ:

*ಮಹಿಷೀ-ಗವಾಶ್ವಾನಿಕ-ಮಣಿ-ಕನಕ-ರಜತ-ಮುಕ್ತಾ-ಪ್ರವಳಾನೇಕ-ಧನಾಢ್ಯ-ಸ್ಥಿತ ಜನವತ್-ಕುಕ್ಕುಟ-ಸಂಪಾತ್ಯ-*
*ಗ್ರಾಮಸ್ಥ-ಶಾಲಿ-ವ್ರೀಹಿ-ಯವ-ಗೋಧೂಮರಾಢಕಾದಿ-ಪ್ರತಿವರ್ಷ-ನಿಷ್ಪನ್ನ-ಸಸ್ಯಾಭರಣಸ್ಯ*
*ಆವಾಹ-ವಿವಾಹ-ನಟ-ನರ್ತನಾದ್ಯುತ್ಸವೇಷು-ನಿತ್ಯಪ್ರವೃತ್ತ-ರಾಷ್ಟ್ರೀಯ ಜನಸ್ಯ*
*ಕದಳೀ-ಕ್ರಮುಕ-ನೀಳಿಕೇರ-ಇಕ್ಷು-ಪನಸ-ಚಂಪಕ-ತಾಂಬೂಲ-ವಕುಲ-ಅಶೋಕ-ಪುನ್ನಾಗ*
*ನಾಗದ್ಯ-ಅನೇಕ ವನ-ಷಂಡ-ಗಹನ-ಘನಛಾಯಾ-ಪರಿತೋಭಯ-ತಟ-ರೇಖಾಭಿಃ*
*ಕಾಬೇರೀ-ಕಪಿನೀ-ಶ್ರೀನದೀಭಿರ್- ಅಲಂಕೃತಸ್ಯ....* (ಸಾ. ೮-೧೩).

ಮಾರ್ಗಕಾರಪೂರ್ವ ಯುಗದಲ್ಲಿ ಕಾವೇರಿಗೆ ಬರುವ ಶಾಸನಾಧಾರಗಳನ್ನು ಹುಡುಕುವ ಕಾರ್ಯದಲ್ಲಿ ನನ್ನ ನೆರವಿಗೆ ಬಂದ ಡಾ.ಕರುಣಾ ವಿಜಯೇಂದ್ರ ಮತ್ತು ಶ್ರೀ ಎಂ.ವಿ.ಪ್ರದೀಪ್‌ಕುಮಾರ್ ಅವರನ್ನು ಅಭಿಮಾನಪೂರ್ವಕವಾಗಿ ಇಲ್ಲಿ ನೆನಪಿಸಿಕೊಳ್ಳುವೆನು. ತಮಿಳಿನ ಹಲವಾರು ಪದಗಳನ್ನೂ ಹೆಸರುಗಳನ್ನೂ ಇಂಗ್ಲಿಷ್ ಭಾಷಾಂತರಗಳ ಮೂಲಕ ಪಡೆದುಕೊಂಡು ಈ ಮಾಲಿಕೆಯಲ್ಲಿ ಬಳಸುತ್ತಿರುವಾಗ ಆಗುತ್ತಿದ್ದ ದೋಷಗಳನ್ನು ಗಮನಿಸಿ, ಅವುಗಳನ್ನು ತಿದ್ದಿ ಸರಿಪಡಿಸಲು ನೆರವನ್ನಿತ್ತ ಶ್ರೀ ಗೋವಿಂದರಾಜು ಅವರನ್ನು ಅವಶ್ಯವಾಗಿ ನಾನು ಸ್ಮರಿಸುವೆ.

೩೬. ಎಮ್‌ಎಆರ್, ಅದೇ, ಸಾ.೮, ಪು. ೧೨೮-೧೨೯.

೩೭. ಎಇ VI, ಪು. ೧-೧೨; XXVII, ಪು. ೧೧೫-೧೧೯, ಸಾ. ೨೩; XXXII, ಪು. ೩೧೭-೩೨೪; XXV, ಪು. ೨೧-೨೪; XXVI, ಪು. ೩೨೨-೩೨೬. ಕೀರ್ತಿವರ್ಮನ ವಕ್ಕಲೇರು ತಾ.ಪ.ಶಾಸನಕ್ಕೆ ನೋ.ಇಆ್ಯ VIII, ಪು.೨೪.

೩೮. ಎಇ VI, ಪು. ೨೫-೩೮.

೩೯. ಇದು ವಾಸ್ತವವಾಗಿ ಆರಂಭಗೊಳ್ಳುವುದು ಮೊದಲ ಕೃಷ್ಣನ ಆಳ್ವಿಕೆ ಕಾಲದಲ್ಲಿ, ಕ್ರಿ.ಶ. ೭೬೮ರ ತಲೆಗಾವ್ ತಾ.ಪ. ಶಾಸನದಲ್ಲಿ '*ಗಂಗನನುಪ್ರೈ ವಿಜಯಸ್ಕಂಧಾವಾರಮನ್ನಗರ* (ಎಇ XIII ಪು. ೨೭೫-೮೨, ಸಾ. ೨೫-೨೬)ವನ್ನು ಪ್ರಸ್ತಾಪಿಸಲಾಗಿದೆ. ಇದು ರಾಷ್ಟ್ರಕೂಟರು ಕೈಕೊಂಡ ಬಿರುಗಾಳಿ ಬಗೆಯ ದಾಳಿಯಾಗಿದ್ದು ಅವರ ರಾಜ್ಯದ ಗಡಿ ಈ ಕಾಲದಲ್ಲಿ ಕಾವೇರಿವರೆಗೂ ವಿಸ್ತರಿಸಲಿಲ್ಲವೆನ್ನಬಹುದು. ಇದಾದ ನಂತರ ಮಹಾರಾಷ್ಟ್ರದ ಪುಣೆಯ ಬಳಿ ಮೊದಲ ಕೃಷ್ಣನು ದಾನಕಾರ್ಯ ಮಾಡಿದನು. ಒಂಬತ್ತನೆಯ ಶತಮಾನದ ಆರಂಭದಲ್ಲಿ ಮುಮ್ಮಡಿ ಗೋವಿಂದನು ಕೈಕೊಂಡ ದಾಳಿಯ ಪರಿಣಾಮ ಇದಕ್ಕಿಂತ ಭಿನ್ನವಾಗಿರುವುದರಿಂದ, ಈ ಉಲ್ಲೇಖವನ್ನಿಲ್ಲಿ ಗಹನವಾಗಿ ಪರಿಗಣಿಸಿಲ್ಲ. ಮುಮ್ಮಡಿ ಗೋವಿಂದನ ಕಾಲದ ಶಾಸನಗಳಿಗೆ ನೊ. ಎಮ್‌ಎಆರ್ ೧೯೨೭, ಪು.೧೩೯; ಎಕ III (೧೯೭೪), ಪು. ೨೭೮. ಈ ರಣಾವಲೋಕ ಕಂಭಯ್ಯ ಜೈನನಾಗಿದ್ದನೆಂಬುದನ್ನು ಶ್ರವಣಬೆಳ್ಗೊಳದ ಒಂದು ಶಾಸನದಿಂದ (ಎಕ II, (೧೯೭೩) ೩೮) ತಿಳಿಯಬಹುದು.

೪೦. ಎಕ IX, ನೆಲಮಂ. ೬೧.

೪೧. *ಅದೇ* II, ಶ್ರ.ಬೆ. ೩೮. ನೋ. ಎಸ್. ಶೆಟ್ಟರ್, *ಇನ್‌ವೈಟಿಂಗ್ ಡೆತ್* (ಧಾರವಾಡ, ೧೯೮೯) ಪು.೧೫-೧೬ ಅಥವಾ ಷ. ಶೆಟ್ಟರ್, *ಸಾವಿಗೆ ಆಹ್ವಾನ* ಅನು. ಸದಾನಂದ ಕನವಳ್ಳಿ ಮತ್ತು ಷ. ಶೆಟ್ಟರ್ (ಕ.ಪು.ಪ್ರಾ. ಬೆಂಗಳೂರು, ೨೦೦೪), ಪು. ೧೪-೧೫.

೪೨. *ಎಕ* III, ನಂಜನಗೂಡು ೨೭೮, ಪು. ೩೫೨-೫೭; *ಎಕ* IX, ನೆಲಮಂ. ೬೧ ಅಥವಾ ಎಮ್‌ಎಸ್‌ಎಂಎಆರ್ ೧೯೨೭, ದೇವನೂರು ೧೨೨. ಈ ಶಾಸನದಲ್ಲಿ ರಣಾವಲೋಕನು 'ಧಾರಾವರ್ಷ ಶ್ರೀವಲ್ಲಭ ಮಹಾರಾಜಾಧಿರಾಜಸ್ಯ ಪುತಃ ಶೌಚಾಚಾರ ಪ್ರಭುರಗುಣಗಣ.... ರಣಾವಲೋಕ ಶ್ರೀ ಕಮ್ಬರಾಜಃ ಪುನ್ನಾಡ-ಎಡೆನಾಡುವಿಷಯೇ..... ತಲವನನಗರಮಧಿವಸತಿ ವಿಜಯಸ್ಕನ್ದಾವಾರೇ' ಎಂದು ಸ್ಪಷ್ಟಪಡಿಸಿಕೊಂಡಿರುವನು. 'ಶೌಚ' ವಿಶೇಷಣವು ಅವನ ಮೊಟ್ಟಮೊದಲ ಶಾಸನದಲ್ಲಿಯೂ ಬಂದಿರುವುದು – ನೋ *ಎಕ*IX, ನೆಲ. ೬೧

೪೩. *ಕ್ವಾರ್ಟರ್ಲಿ ಜರ್ನಲ್ ಆಫ್ ಮಿಥಿಕ್ ಸೊಸೈಟಿ*, ಸಂ. ೨೪-೨, ಪು. ೮೨-೮೮ ಮತ್ತು *ಎಇ* IV, ೪೯, ಪು. ೩೩೮.

೪೪. ಮೇಲಿನದರಲ್ಲಿ ಎರಡನೆಯ ಶಾಸನ.

೪೫. ನೃಪತುಂಗನು ತನ್ನ ಪುತ್ರಿ ಚಂದ್ರೋಬಲಬ್ಬೆಯನ್ನು ಇಮ್ಮಡಿ ಬೂತುಗನೊಡನೆ ಮದುವೆಮಾಡಿ ಈ ಬಾಂಧವ್ಯವನ್ನು ಸಂಪಾದಿಸಿಕೊಂಡನೆಂಬುದನ್ನು ಇತಿಹಾಸಕಾರರು ಸಮರ್ಥಿಸಿ ತೋರಿಸಿರುವರು.

೪೬. *ಅಹನಾ. ಕಟಿ.* ೩೧. ೩೫-೩೫.

೪೭. *ಪತ್ತು*, IV, ಸಾ. ೪೧೫-೪೧೭; *ಪದಿಟ್ರು*, II, ಸಾ. ೫-೬.

೪೮. *ಪುಱನಾ.* V, ೨.

೪೯. *ಪತ್ತು.* ಸಾ. ೩೫-೩೬.

೫೦. ಮಹಾದೇವನ್, *ಅದೇ.* ಪು. ೩೫, ನಕ್ಷೆ ೧. ಪುಟ ೩೬ರಲ್ಲಿ ಕೊಟ್ಟಿರುವ ನಕ್ಷೆಯೊಡನೆ ಇದನ್ನು ಹೋಲಿಸಿ ನೋಡಿ.

೫೧. *ಮಣಿ.* V, ಸಾ. ೪೦; *ಶಿಲಪ್ಪ* II, ೧-೫೧.

೫೨. *ಶಿಲಪ್ಪ* XXV, ಸಾ. ೧೫೬-೧೫೯. ಇದೇ ಕಾವ್ಯದಲ್ಲಿ ಮಂಗಳಮಡಂದೈ (ಮಂಗಳದೇವಿ) ದೇವಾಲಯದ ಪ್ರಸ್ತಾಪವಿದೆ. XXIX, ವಳ್ಳೈಪ್ಪಾಟ್ಟು ೪, ಸಾ. ೫೩.

೫೩. *ಪದಿಟ್ರು.* VI, ೫೫. ಸಾ. ೩-೬; IX, ೮೫, ೮. ೮. ಗಣಿಕೆಯರನ್ನು ಹೇಗೆ ವಿಜಯೀ ಪಾರಿತೋಷಕವನ್ನಾಗಿ ಪಡೆದುಕೊಳ್ಳುತ್ತಿದ್ದರೆಂಬುದರ ಬಗ್ಗೆ ಈಗಾಗಲೇ ನಾನು ಗಮನ ಸೆಳೆದಿರುವೆ. ನೋ. *ಸಂಕಲನ* ೧೯ (ಜನ-ಫೆಬ್ರ. ೨೦೦೫), ಪು. ೪೬-೪೭.

೫೪. *ಪದಿಟ್ರು.* ೮೬, ೧೧-೧೩. ಕದಂಬರ ಜೊತೆಗೆ ಘರ್ಷಣೆಗಿಳಿಯುತ್ತಿದ್ದ ಚೇರರ ಬಗ್ಗೆ ನೋ. ಮಾರ್. ಜೆ. ಆರ್, *ಅದೇ.* ಪು. ೩೨೪.

೫೫. ಮ್ಯಾಕ್‌ಕ್ರಿಂಡ್ಲ್ ಜೆ.ಡಬ್ಲ್ಯು, *ಏನ್ಷಿಯಂಟ್ ಇಂಡಿಯ* IV (ಬಾಂಬೆ, ೧೮೮೫) ಭಾಗ ೭-೮; *ಪೆರಿಪ್ಲಸ್ ಆಫ್ ದಿ ಎರಿತ್ರಿಯನ್ ಸೀ-ವಿತ್ ಟ್ರಾನ್ಸ್‌ಲೇಷನ್ ಅಂಡ್ ಆನ್ನೊಟೇಷನ್* (ಫಿಲಡೆಲ್ಫಿಯ, ೧೯೧೭), ಅಧ್ಯಾಯ. IV, ಪು. ೯೬-೯೯. ಕಣ್ಣಾನೂರಿನ ಉತ್ತರಕ್ಕಿದ್ದ ಪ್ರದೇಶವೆಲ್ಲವೂ ಕಡಲ್ಗಳ್ಳರ ಕೈಯಲ್ಲಿತ್ತೆಂದು ಪೆರಿಪ್ಲಸ್ ಸಂಪಾದಕ, ಡಬ್ಲ್ಯು. ಎಚ್. ಸ್ಕೋಫ್ ಅಭಿಪ್ರಾಯ ಪಟ್ಟಿರುವನು - ನೋ. ಪು. ೨೦೪, ಅ.ಟಿ. ಅಲ್ಲದೇ ನೋ. ಮಾರ್‍, ಅದೇ, ಪು. ೩೧೬, ೩೧೭ ಮತ್ತು ೩೨೧.

೫೬. *ಅಹಸಾ. ಕಳಿಟ್ರ್.* ೯೧, ೧೧೫.

೫೭. ಪುಜಿಸಾ-೧೯; ಅಹಂ. ೩೬. ಎರುಮ್ಮೈ ಕುಡನಾಡು (*ಅಹಸಾ.* ೧೧೫.೫), ಎರುಮ್ಮೈನಲ್ನಾಡು (ಅದೇ. ೨೫೩;೧೯.)

೫೮. *ಶಿಲಪ್ಪ* XXX, ೧೫೭-೧೬೦.

೫೯. *ಅಹಸಾ.* ೨೫೩: ೧೮-೨೦.

೬೦. ಮಹಾದೇವನ್, *ಅದೇ* , ಪು.೩೮, ೩೮೬; ೫೭೭-೫೮೦.

೬೧. *ಅಹಸಾ.* ೧೭೭.೧; ೨೫೩-೧೯.

೬೨. *ಪದಿಟ್ರ್.*ವಿನಲ್ಲಿ ಅಯಿರಿ ಉಲ್ಲೇಖಗಳು ಅನೇಕ ಕಡೆ ಬರುವುವು - ೨೧, ೨೯; ೭೦, ೨೬; ೭೯, ೧೮; ೮೮, ೧೨; ೯೦, ೧೯. ಅಲ್ಲದೆ ನೋ. ಮಾರ್‍. *ಅದೇ.* ಪು. ೪೯೦; ಕೆ.ಜಿ.ಶೇಷ ಐಯ್ಯರ್, *ಚೇರ ಕಿಂಗ್ಸ್ ಆಫ್ ದಿ ಸಂಗಂ ಪಿರಿಯಡ್* (ಲಂಡನ್, ೧೯೨೭), ಪು. ೧೫.

೬೩. ಪುಜಿಸಾ. ೩೨:೩, ೬ ಮತ್ತು ೨೨೧: ೧೨, ೧೩; *ಅಹಸಾ.* ೩೪೩: ೪-೮; ೩೮೭; ೧೩-೧೬. *ಪಟ್ಟಿಣಪ್ಪಾಲೈ*, ೭೮, ೭೯.

೬೪. ಎಸ್. ಶೆಟ್ಟರ್ ಮತ್ತು ಜಿ.ಡಿ. ಸೊಂಥೈಮರ್ (ಸಂ.), *ಮೆಮೋರಿಯಲ್ ಸ್ಟೋನ್ಸ್: ಎ ಸ್ಟಡಿ ಆಫ್ ದೇರ್ ಆರಿಜನ್, ಸಿಗ್ನಿಫಿಕೆನ್ಸ್ ಅಂಡ್ ವೆರೈಟಿ* (ಧಾರವಾಡ-ಹೈಡಲ್‌ಬರ್ಗ, ೧೯೮೨), ಪು. ೫೯-೭೬, ೧೮೪-೧೮೭.

೬೫. *ಮಹಾದೇವನ್, ಅದೇ.* ಶಾ.ಸಂ. ೧೨೧, ಪು.೪೮೧, ೬೩೯; ಎಕ XI, ಚಿತ್ರದುರ್ಗ ೪೨.

೬೬. ಮಹಾದೇವನ್. *ಅದೇ.* ಪು. ೧೫೨.

೬೭. *ಅಗಸಾ.* ೩೯೬; ಸುಬ್ರಮಣಿಯನ್. ಎನ್., *ಅದೇ* ಪು.೨೭೭.

೬೮. ಗೋಪಾಲ, ಬಿ.ಆರ್. *ಸೆ. ಕಾರ್ಪಸ್ ಆಫ್ ಕದಂಬ ಇನ್‌ಸ್ಕ್ರಿಪ್ಷನ್ಸ್*, ಸಂ.೧ (ಶಿರಸಿ, ೧೯೮೫), ಪು.XI, XXXII, LIV ಪು. ೮೬ ಮುಂ. ಅಲ್ಲದೆ ನೋ. *ಮೈಸೂರು ಪ್ರಾಕ್ತನ ವರದಿ (ಮೈಪ್ರಾವ)* ೧೯೧೦-೧೧. ಎಸ್. ಶೆಟ್ಟರ್ (ಸಂ.). *ಎಎಸ್‌ಎಂಎಆರ್* ೧೯೧೦-೧೧, ಎ ಸ್ಟಡಿ, ಸಂ. III ಪು. ೧೪೦-೧೪೧, ಪ್ಲೇ. VI; ಮೈಪ್ರಾವ ೧೯೨೯, ಪು. ೭-೮. ಮಡಕೇರಿ (ಎ.ಕ. I, ಕೂರ್ಗ ೧). ಚಂದ್ರವಳ್ಳಿ ಶಾಸನ (ಗೋಪಾಲ, *ಅದೇ.* ಪು. ೭), ಗುಡ್ನಾಪುರ (*ಅದೇ.* ಪು. ೮೬-೮೯),

ಸಾಲಿಗ್ರಾಮ (ಮೈಪ್ರಾವ ೧೯೪೨, ಪು. ೧೨೮-೧೩೧), ಕುಲಗಾಣ (ಅದೇ. ೧೯೨೫, ಪು. ೯೦-೯೨), ಮಲುಹಳ್ಳಿ (ಎಕ. IX. ದೊಡ್ಡಬಳ್ಳಾಪುರ. ೬೮), ಹೆಬ್ಬೂರು (ಎಕ. XII. ತುಮಕೂರು ೨೩), ಮುಂತಾದವು.

೬೯. ಗೋಪಾಲ, ಅದೇ. ಪು. LIX.

೭೦. ಕರಾಮಾ. ೧-೩೮, ೩೯ ಮತ್ತು ೪೬. ಇದಲ್ಲದೆ ಬೇರಾವ ಕಾರಣ ಮಾರ್ಗಕಾರನನ್ನು ತಿರುಳ್‌ಕನ್ನಡ ಪ್ರದೇಶವನ್ನು ಹುಡುಕಲು ಹಚ್ಚಿರಲು ಸಾಧ್ಯವೆಂಬುದನ್ನು ಗ್ರಹಿಸಲು ನನಗಾಗುತ್ತಿಲ್ಲ. ಇದಲ್ಲದೆ ಈ ಪ್ರದೇಶದಲ್ಲಿ ಬೆಳೆದ ಶುದ್ಧ ಕನ್ನಡ ಭಾಷಾ ಸಾಹಿತ್ಯವು ಈ ನಿರ್ಣಯಕ್ಕೆ ಬರಲು ಅವನನ್ನು ಪ್ರಚೋದಿಸಿತೆನ್ನಲು ಬೆಳವೊಳದ ಸುತ್ತಮುತ್ತ ಅಂತಹ ಸಾಹಿತ್ಯ ಕೃಷಿಯಾದ ಕುರುಹೇ ಇಲ್ಲದ್ದನ್ನು ಸಂಪೂರ್ಣವಾಗಿ ಉಪೇಕ್ಷಿಸುವಂತಿಲ್ಲ.

'ವಡುಗರು' ಮತ್ತು 'ವಡಮೊಟಿಯಾಳರ್' ಎಂಬ ಪದಗಳನ್ನು ಯಾವ ಯಾವ ಅರ್ಥದಲ್ಲಿ ಶಂಗಂ ಕವಿಗಳು ಬಳಸಿರುವರೆಂಬುದನ್ನು ಹಿಂದೊಮ್ಮೆ ಸಂಕ್ಷಿಪ್ತವಾಗಿ ಚರ್ಚಿಸಿರುವುದರಿಂದ ಪುನಃ ಅದರ ಪ್ರಸ್ತಾಪವಿಲ್ಲಿ ಅನಾವಶ್ಯಕ. ಆದರೆ ತಮಿಳಗಂ ಗಡಿಯಾಚೆಗಿದ್ದ ತಮಿಳೇತರರಾಗಿದ್ದ ಈ ವಡುಗರನ್ನು ನಾವಿನ್ನೂ ಸ್ಪಷ್ಟವಾಗಿ ಗುರುತಿಸಿ ಅವರ ಬಗ್ಗೆ ಇನ್ನೂ ಹೆಚ್ಚು ಅರಿತುಕೊಳ್ಳಬೇಕಾಗಿದೆ... ಕವಿ ಕುಡವಾಯಿಲ್ ಕೀರತ್ತಣಾರ್ ಪ್ರಕಾರ ವಡುಗ ಪ್ರದೇಶವು ಬಹುದೂರದವರೆಗೆ ಚಾಚಿಕೊಂಡ ಉನ್ನತಗಿರಿಶಿಖರಗಳ ನಾಡಾಗಿತ್ತು; ಅಬ್ಬರಮಾಡುವ ಮದ್ದಳೆಗಳನ್ನು ಬಾರಿಸುತ್ತಾ ಉಗ್ರಭಯಂಕರ ಸೆಡೆನಾಯಿಗಳೊಡನೆ ಬೇಟೆಯಾಡುವ ಜನಾಂಗಗಳು ಇಲ್ಲಿಯ ನಿವಾಸಿಗಳಾಗಿದ್ದರು. ಅಲ್ಲದೆ ಅಪಾರ ಪ್ರಮಾಣದ ಬರಡು ಭೂಪಟ್ಟಿ ವಡುಗ ಮತ್ತು ತಮಿಳಗಂವನ್ನು ಬೇರ್ಪಡಿಸಿತ್ತು. ಕವಿ ಮಾಮೂಲಣಾರ್ ಈ ಚಿತ್ರವನ್ನು ಇನ್ನಷ್ಟು ವಿಸ್ತರಿಸಿ ತಮಿಳಗಂ ವಾಯವ್ಯ ಮತ್ತು ಈಶಾನ್ಯ ಪ್ರದೇಶಗಳಲ್ಲಿದ್ದ ಎರಡು ವರ್ಗಗಳನ್ನು ಪರಿಚಯಿಸಿಕೊಟ್ಟಿರುವನು. ಮಂಜುಮುಚ್ಚಿ ಆಕಾಶವನ್ನು ಚುಂಬಿಸುತ್ತಿದ್ದ ಗಿರಿಶಿಖರಗಳಲ್ಲಿ ನೆಲಸಿದ್ದ '*ಮುರಸ್ ಮಿಗುವಡುಗ*'ರು ಬಿಲ್ಲವಿದ್ಯೆಯಲ್ಲಿ ಅತ್ಯಂತ ನಿಷ್ಣಾತರಾಗಿದ್ದರೆಂದು ಅವನು ತಿಳಿಸುವನು. ತಮಿಳಗಂ ಸಮೃದ್ಧ ಪ್ರದೇಶದಿಂದ ದೂರ, 'ಬಹು-ಶೂಲ'ಗಳ ವೀರನಾದ ಚೇರಕಟ್ಟೀಯ ರಾಜ್ಯದ ಗಡಿಯಾಚೆ (ಚೇರ ಅಥವಾ ಇಂದಿನ ಕೇರಳ ರಾಜ್ಯದ ಉತ್ತರಕ್ಕೆ) ಗಿದ್ದ ವಡುಗರನ್ನು ಪ್ರಸ್ತಾಪಿಸುತ್ತಾ ಅವರು ತುಳಸೀ ಪುಷ್ಪಮಾಲೆಗಳಿಂದ ಅಲಂಕರಿಸಿಕೊಳ್ಳುತ್ತಿದ್ದರೆಂದೂ ತಮಿಳರಿಗೆ ಅರ್ಥವಾಗದ ಬೇರೊಂದು ಭಾಷೆ (*ಮೊಳಿ ಪೆಯರ್ ತೇಯಂ*)ಯನ್ನಾಡುತ್ತಿದ್ದರೆಂದೂ ಹೇಳುವನು. ಈ ಎರಡು ಉಲ್ಲೇಖಗಳೂ ನೀಲಗಿರಿಯಾಚೆಯ ಇಂದಿನ ಕನ್ನಡ ಪ್ರದೇಶದವರನ್ನು ಸೂಚಿಸುತ್ತಿದ್ದವೆಂಬುದರಲ್ಲಿ ಅನುಮಾನವಿಲ್ಲ.

೬

ಅಧ್ಯಾಯ-೬

# ಮುಸುಕು ಮುಂಜಾವಿನ ಕನ್ನಡ ನಾಡು-ನುಡಿ

## ೧. ಎರುಮೈಊರವರು

ಶಂಗಂ ಸಾಹಿತ್ಯವನ್ನು ಇಲ್ಲಿಯವರೆಗೂ ಬಹುತೇಕ ತಮಿಳರ ದೃಷ್ಟಿಕೋನದಿಂದ ಅಭ್ಯಸಿಸಲಾಗಿದೆ, ಆದರೆ ಇದನ್ನು ಸ್ವಲ್ಪ ವಿಸ್ತರಿಸಿ ನೋಡಿದರೆ 'ತಮಿಳಗಂ' ಉತ್ತರಕ್ಕಿದ್ದ ಹಲವಾರು ರಾಜಸತ್ತೆಗಳ ಬಗ್ಗೆ ವಿವರಗಳನ್ನು ಪಡೆದುಕೊಳ್ಳಲು ಮತ್ತು ದಕ್ಷಿಣಭಾರತ ಇತಿಹಾಸದ ಆರಂಭಕಾಲದ ಬಗ್ಗೆ ನಮ್ಮ ಜ್ಞಾನವನ್ನು ವಿಸ್ತರಿಸಿಕೊಳ್ಳಲು ಸಾಧ್ಯವಾಗುವುದು. ಕಳೆದ ನೂರುವರ್ಷಗಳಲ್ಲಿ 'ವಡುಗ' ಪದವನ್ನು ತಮಿಳು ಮತ್ತು ತಮಿಳೇತರ (ಪಾಶ್ಚಾತ್ಯ) ವಿದ್ವಾಂಸರು ಒಂದೇ ಬಗೆಯಲ್ಲಿ ಅರ್ಥೈಸಿ, ಅದು ವೇಂಕಟದ ಉತ್ತರಕ್ಕಿರುವ ಇಂದಿನ ಆಂಧ್ರಪ್ರದೇಶವನ್ನು ಸೂಚಿಸುವುದೆಂದು ಪ್ರತಿಪಾದಿಸುತ್ತಾ ಬಂದಿರುವರು. ತಮಿಳಗಂ ಉತ್ತರಕ್ಕಿದ್ದ ಭೂಪ್ರದೇಶವನ್ನೆಲ್ಲಾ ಇದು ಒಳಗೊಳ್ಳದಿರುವುದರಿಂದ, ಈ ವ್ಯಾಖ್ಯೆಯನ್ನು ನಾವಿಂದು ಪ್ರಶ್ನಿಸಬೇಕಾಗಿದೆ.

### ಸೆನ್‌ತಮಿಲ್ ಮತ್ತು ತಿಸೈಸೊಲ್:

ತಮಿಳು ಭಾಷಿಕರನ್ನು ಎರಡು ಗುಂಪುಗಳಡಿ ತೊಲ್ಕಾಪ್ಪಿಯರ್ ತಂದದ್ದನ್ನೂ ಇವುಗಳಲ್ಲಿ ಹದಿಮೂರು ನಾಡುಗಳನ್ನೊಳಗೊಂಡ 'ಸೆನ್‌ತಮಿಳ್' ಮತ್ತು ಅದನ್ನು ಸುತ್ತುವರಿದಿದ್ದ ಹನ್ನೆರಡು ನಾಡುಗಳ 'ತಿಸೈಸೊಲ್'ನ್ನು ಅವನು ಹೆಸರಿಸಿದ್ದನ್ನೂ ಈ ಹಿಂದೆ ಕಂಡಿದ್ದೇವೆ.[೧] ವಾಸ್ತವವಾಗಿ, 'ಸೆಂದಮಿಳ್' ಎಂಬುದು ವೈಗೈ ನದಿಯನ್ನು ಉತ್ತರದ ಗಡಿಮಾಡಿಕೊಂಡು ಮರುತರು(ದ), ಕರವೂರು(ಪೂ) ಮತ್ತು ಮರವೂರ್(ಪ)ಗೆ ಸೀಮಿತಗೊಂಡ ಪ್ರದೇಶವಾಗಿತ್ತು; ವೈಗೈ ನದಿಯಿಂದ ಸರಿಸುಮಾರು ವೇಂಕಟಾದ್ರಿವರೆಗಿನ (ಅಂದಿನ ಚೋಳ ಮತ್ತು ಅವರ ಸಾಮಂತರ ಅಂಕಿತದಲ್ಲಿದ್ದ) ಪ್ರದೇಶ ತಿಸೈಸೊಲ್‌ನಲ್ಲಿ ಸೇರಿತ್ತು. ತಮಿಳಗಂ ಉತ್ತರ ಭಾಗವನ್ನೆಲ್ಲ ಒಳಗೊಂಡ ಈ ತಿಸೈಸೊಲ್ ಅದರ ಪಶ್ಚಿಮ ಮತ್ತು ವಾಯವ್ಯ (ಅಂದರೆ ಚೇರ ರಾಜ್ಯಕ್ಕೆ ಹೊಂದಿಕೊಂಡ ಉತ್ತರ ಮತ್ತು ಪೂರ್ವೋತ್ತರ) ಪ್ರದೇಶವನ್ನು ಯಾವ ಬಗೆಯಲ್ಲಿ ಪ್ರಸ್ತುತಗೊಳಿಸಿಕೊಂಡಿತ್ತೆಂಬುದನ್ನು ಅಂದಿನ ಕವಿಗಳಾಗಲೀ ಇಂದಿನ ಸಂಶೋಧಕರಾಗಲೀ ಎಲ್ಲಿಯೂ ಸ್ಪಷ್ಟಪಡಿಸಿಲ್ಲ. ಕನ್ನಡ ಜನಾಂಗಕ್ಕೆ ಸಂಬಂಧಪಟ್ಟ ಈ ಪ್ರಶ್ನೆಗೆ ಉತ್ತರ ಹುಡುಕುವುದು ಮತ್ತು ಶಂಗಂ ಕಾಲದ ಕನ್ನಡನಾಡಿನ ಬಗ್ಗೆ

ತಿಳಿದುಕೊಳ್ಳಬೇಕಾದುದು ನಮ್ಮ ಹೊಣೆಗಾರಿಕೆಯಾಗಿರುವುದರಿಂದ ಈ ಪ್ರಶ್ನೆಯನ್ನು ಇಲ್ಲಿ ಕೈಗೆತ್ತಿಕೊಳ್ಳಬೇಕಾಗಿದೆ.

ಇಲ್ಲಿ ಮೊದಲು ಗಮನಿಸಬೇಕಾದ ಒಂದು ಅಂಶವೆಂದರೆ ತಮಿಳಗಂ ನೆತ್ತಿಯ ಮೇಲಿನ ಪೂರ್ವಾರ್ಧ ಮತ್ತು ಪಶ್ಚಿಮಾರ್ಧದಲ್ಲಿದ್ದ ಅಂತರದ ಬಗ್ಗೆ. ವೈಗೈಯಿಂದ ಕಾವೇರಿಯ ಮೂಲಕ ವೇಂಕಟವನ್ನು ಮುಟ್ಟುವ ಪೂರ್ವಾರ್ಧ ಪ್ರದೇಶದಲ್ಲಿ ಶಂಗಂ ಕಾಲದಲ್ಲಿ ತಮಿಳಿನ ಏಕಸ್ವಾಮ್ಯವಿತ್ತು ; ಉಳಿದರ್ಧವು (ತಮಿಳಗಂನ ನೇರ ಉತ್ತರ ಮತ್ತು ವಾಯುವ್ಯ ಭಾಗದಲ್ಲಿ, ಅಂದರೆ ಸ್ಥೂಲವಾಗಿ ನೀಲಗಿರಿ ಬೆಟ್ಟಸಾಲಿನಿಂದ ಉತ್ತರಕ್ಕೆ) ಈ ಏಕಸ್ವಾಮ್ಯವನ್ನು ಪ್ರಶ್ನಿಸುವ ತಮಿಳೇತರ ಜನಾಂಗಗಳ ಪ್ರದೇಶವಾಗಿತ್ತು. ಇದನ್ನು ಒಪ್ಪುವುದಾದರೆ, ತಮಿಳರ ಏಕಸ್ವಾಮ್ಯವನ್ನು ಪ್ರಶ್ನಿಸಿದ ಜನಾಂಗಗಳಾವು? ಅವರು ತಮಿಳೇತರರಾಗಿದ್ದರೆನ್ನಲು ಇರುವ ಆಧಾರಗಳಾವು? ಎಂಬ ಪ್ರಶ್ನೆಗಳಿಗೆ ನಾವು ಉತ್ತರ ಕೊಡಬೇಕಾಗುತ್ತದೆ.

**ಶಂಗಂಕಾಲದ ರಾಜಮನೆತನಗಳು:**

ತಮಿಳಗಂ ಹಂಚಿಕೊಂಡು ಶಂಗಂ ಕಾಲದಲ್ಲಿ ಆಳುತ್ತಿದ್ದ ಪ್ರಧಾನ ಅರಸು ಮನೆತನಗಳಲ್ಲಿ ಪಾಂಡ್ಯ, ಚೋಳ ಮತ್ತು ಚೇರರನ್ನು ಸುಲಭವಾಗಿ ಗುರುತಿಸಬಹುದು; ಆದರೆ ಉಪಪ್ರಧಾನ ಅಥವಾ 'ವೇಳಿರ್' ಎಂಬ ಸ್ವತಂತ್ರ ಅರಸು ಮನೆತನಗಳನ್ನು ಗುರುತಿಸುವುದು ಇದರಷ್ಟು ಸುಲಭವಲ್ಲ. ಇದಕ್ಕೆ ಎರಡು ಕಾರಣಗಳುಂಟು: ಶಂಗಂ ಕಾಲಾವಧಿ (ಕ್ರಿ.ಪೂ ೩ರಿಂದ ಕ್ರಿ.ಶ. ೩ರವರೆಗೆ) ಸುದೀರ್ಘವಾಗಿದ್ದುದು ಇದರಲ್ಲಿ ಒಂದಾದರೆ, ಅಂದಿನ ರಾಜಕೀಯದಲ್ಲಿ ಮೇಲಿಂದ ಮೇಲೆ ಸ್ಥಿತ್ಯಂತರಗಳಾಗುತ್ತಿದ್ದುದು ಮತ್ತೊಂದು. ಕಳೆದ ಶತಮಾನದ ಆರಂಭದ ದಶಕಗಳಲ್ಲಿ ಮಾಡಿದ ಒಂದು ಅಂದಾಜಿನಂತೆ, ಇದು ಮೂವರು ಕಿರೀಟಧಾರಿ ಅರಸರನ್ನೂ ನೂರಿಪ್ಪತ್ತು ಅಧಿರಾಜರನ್ನೂ ಒಳಗೊಂಡಿತ್ತು.[೨] ಆದರೆ ಇದೇ ಶತಮಾನದ ಕೊನೆಯ ದಶಕದಲ್ಲಿ ಮಾಡಿದ ಮತ್ತೊಂದು ಅಂದಾಜಿನಂತೆ, ಈ ಸಂಖ್ಯೆ ನೂರಾಎಪ್ಪತ್ತೈದಕ್ಕಿಂತ ಕಡಿಮೆ ಇರಲಿಲ್ಲ.[೬] ಇದರಲ್ಲಿ ಮೂವೇಂದರರು, ವೇಳಿರ್‌ಗಳು, ಅಲ್ಲದೆ ಚಿಟ್ಟರಸರ್, ವೇಂತರ್, ಕುರುನಿಲಮನ್ನಾರ್, ಕೋಮಕರ್, ಕುರುಂಪುಗಳ್, ಕೀಲರ್ ಮುಂತಾದ ವರ್ಗಗಳು ಒಳಗೊಂಡಿದ್ದವು. ಶಂಗಂ ಕಾಲದ ಹಲವಾರು ಪ್ರಾದೇಶಿಕ ಜನಾಂಗಗಳನ್ನು ಪ್ರತಿನಿಧಿಸುತ್ತಿದ್ದ ಇವು ತಮಿಳಗಂ ಒಳಹೊರಗಿನ ಪ್ರದೇಶವನ್ನೆಲ್ಲಾ ವ್ಯಾಪಿಸಿಕೊಂಡಿದ್ದವು. ಈ ಜನಾಂಗಗಳಲ್ಲಿ ಮಲವರ್, ಪರದವರ್, ವಡುಗರ್, ಕೋಶರ್, ಕೊಂಗರ್, ಎರುಮೈಊರವರ್, ಕುಡುನಾಡವರ್, ಕೊಂಕಾಣರ್

ಅಥವಾ ಕರ್ಕನಾಡವರ್ ಮುಂತಾದವುಗಳಿದ್ದವು. ಇಂದಿನ ಕರ್ನಾಟಕ, ಕೇರಳ ಮತ್ತು ತಮಿಳುನಾಡುಗಳನ್ನು ಬೆಸೆದಿದ್ದ ಇವರಲ್ಲಿ ಕೊಂಕಣ, ಕೊಡವ, ತುಳು ಮತ್ತು ಕನ್ನಡ ಜನಾಂಗಗಳ ಪಾತ್ರ ಗಮನಾರ್ಹವಾಗಿತ್ತೆಂದು ಕಂಡುಬರುವುದು.

**'ವಡುಗರು' ಎಂದರೆ ಯಾರು?:**

'ವಡುಗರು' ಮತ್ತು 'ವಡಮೊಟಿಯಾಳರ್' ಎಂಬ ಪದಗಳನ್ನು ಯಾವ ಯಾವ ಅರ್ಥದಲ್ಲಿ ಶಂಗಂ ಕವಿಗಳು ಬಳಸಿರುವರೆಂಬುದನ್ನು ಹಿಂದೊಮ್ಮೆ ಸಂಕ್ಷಿಪ್ತವಾಗಿ ಚರ್ಚಿಸಿರುವುದರಿಂದ ಅದರ ಪುನಃ ಪ್ರಸ್ತಾಪವಿಲ್ಲಿ ಅನಾವಶ್ಯಕ.[೪] ಆದರೆ ತಮಿಳಗಂ ಗಡಿಯಾಚೆಗಿದ್ದ ತಮಿಳೇತರರಾಗಿದ್ದ ಈ ವಡುಗರನ್ನು ನಾವಿನ್ನೂ ಸ್ಪಷ್ಟವಾಗಿ ಗುರುತಿಸಿ ಅವರ ಬಗ್ಗೆ ಇನ್ನೂ ಹೆಚ್ಚು ಅರಿತುಕೊಳ್ಳಬೇಕಾಗಿದೆ. *ಅಗನಾನೂಱಿನಲ್ಲಿ* ಕನಿಷ್ಠ ಏಳು ಬಾರಿ, *ಪುಱನಾನೂಱು, ಕುಱುಂತೊಗೈ* ಮತ್ತು *ನಟ್ರಿಣೈ*ಗಳಲ್ಲಿ ಕನಿಷ್ಠ ಒಂದೊಂದು ಬಾರಿ ಪ್ರಸ್ತಾಪಮಾಡಿ, ವಡುಗರ ಬಗ್ಗೆ ಕುತೂಹಲಕಾರೀ ಮಾಹಿತಿಯನ್ನು ಕೆಲವು ಶಂಗಂ ಕವಿಗಳು ಒದಗಿಸಿರುವರು.[೫] ಅವುಗಳನ್ನಿಲ್ಲಿ ಗಮನಿಸಬಹುದು.

ಕವಿ ಕುಡವಾಯಿಲ್ ಕೀರತ್ತಣಾರ್ ಪ್ರಕಾರ ವಡುಗ ಪ್ರದೇಶವು ಬಹುದೂರದವರೆಗೆ ಚಾಚಿಕೊಂಡ ಉನ್ನತಗಿರಿಶಿಖರಗಳ ನಾಡಾಗಿತ್ತು; ಅಬ್ಬರಮಾಡುವ ಮದ್ದಳೆಗಳನ್ನು ಬಾರಿಸುತ್ತಾ ಉಗ್ರಭಯಂಕರ ಸೆಡೆನಾಯಿಗಳೊಡನೆ ಬೇಟೆಯಾಡುವ ಜನಾಂಗಗಳು ಇಲ್ಲಿಯ ನಿವಾಸಿಗಳಾಗಿದ್ದರು. ಅಲ್ಲದೆ ಅಪಾರ ಪ್ರಮಾಣದ ಬರಡು ಭೂಪಟ್ಟಿ ವಡುಗ ಮತ್ತು ತಮಿಳಗಂವನ್ನು ಬೇರ್ಪಡಿಸಿತ್ತು.[೬] ಕವಿ ಮಾಮೂಲಣಾರ್ ಈ ಚಿತ್ರವನ್ನು ಇನ್ನಷ್ಟು ವಿಸ್ತರಿಸಿ ತಮಿಳಗಂ ವಾಯವ್ಯ ಮತ್ತು ಈಶಾನ್ಯ ಪ್ರದೇಶಗಳಲ್ಲಿದ್ದ ಎರಡು ವರ್ಗಗಳನ್ನು ಪರಿಚಯಿಸಿಕೊಟ್ಟಿರುವನು. ಮಂಜುಮುಚ್ಚಿ ಆಕಾಶವನ್ನು ಚುಂಬಿಸುತ್ತಿದ್ದ ಗಿರಿಶಿಖರಗಳಲ್ಲಿ ನೆಲೆಸಿದ್ದ '*ಮುರನ್ ಮಿಗುವಡುಗ*'ರು ಬಿಲ್ಲವಿದ್ಯೆಯಲ್ಲಿ ಅತ್ಯಂತ ನಿಷ್ಣಾತರಾಗಿದ್ದರೆಂದು ಅವನು ತಿಳಿಸುವನು. ತಮಿಳಗಂ ಸಮೃದ್ಧ ಪ್ರದೇಶದಿಂದ ದೂರ, 'ಬಹು-ಶೂಲ'ಗಳ ವೀರನಾದ ಚೇರಕಟ್ಟೀಯ ರಾಜ್ಯದ ಗಡಿಯಾಚೆ (ಚೇರ ಅಥವಾ ಇಂದಿನ ಕೇರಳ ರಾಜ್ಯದ ಉತ್ತರಕ್ಕೆ)ಗಿದ್ದ ವಡುಗರನ್ನು ಪ್ರಸ್ತಾಪಿಸುತ್ತಾ ಅವರು ತುಳಸೀ ಪುಷ್ಪಮಾಲೆಗಳಿಂದ ಅಲಂಕರಿಸಿಕೊಳ್ಳುತ್ತಿದ್ದರೆಂದೂ ತಮಿಳರಿಗೆ ಅರ್ಥವಾಗದ ಬೇರೊಂದು ಭಾಷೆ (*ಮೊಳಿ ಪೆಯರ್ ತೇಯಂ*)ಯನ್ನಾಡುತ್ತಿದ್ದರೆಂದೂ ಹೇಳುವನು.[೭] ಈ ಎರಡು ಉಲ್ಲೇಖಗಳೂ ನೀಲಗಿರಿಯಾಚೆಯ ಇಂದಿನ ಕನ್ನಡ ಪ್ರದೇಶದವರನ್ನು ಸೂಚಿಸುತ್ತಿದ್ದವೆಂಬುದರಲ್ಲಿ ಅನುಮಾನವಿಲ್ಲ.

ಎರಡು ದಿಕ್ಕಿನಲ್ಲಿದ್ದ ವಡುಗ ಪಂಗಡಗಳು:

ಮಾಮೂಲಣಾರ್ ಒಳಗೊಂಡು ಇನ್ನೂ ಕೆಲವು ಶಂಗಂ ಕವಿಗಳು ವೇಂಕಟದಾಚೆಗಿದ್ದ ವಡುಗರನ್ನು ಉಲ್ಲೇಖಿಸಿರುವರು. ವೇಂಕಟದಾಚೆಗಿದ್ದ ಪುಲ್ಲಿನಾಯಕನ 'ಪರಭಾಷಾ (ತಮಿಳೇತರ ಭಾಷಾ) ಪ್ರದೇಶ'ವನ್ನು ಮತ್ತು ಯಥೇಚ್ಛವಾಗಿ ಮದ್ಯಸೇವಿಸಿ, ಬಿಲ್ಲುಗಳಿಗೆ ಅಂಬುಗಳನ್ನು ಹೂಡಿ ಆರ್ಭಟಿಸುತ್ತಿದ್ದ ವಡುಗರನ್ನು ಅವನು[೮] ಒಂದೆಡೆ ಉಲ್ಲೇಖಿಸುವನು. ಬಹುಶಃ ಇವರನ್ನೇ 'ವಂಬ ವಡುಗರ್' ಎಂದು ಇಡೆಯನ್ ಶೇಂದನ್ ಕೊಱ್ರನಾರ್ ಗುರುತಿಸಿದನೆಂದು ಕಾಣುವುದು. ಈ ಪ್ರದೇಶದ ಭದ್ರಕೋಟೆಯಾಗಿದ್ದ 'ಪಾಳಿ'ಯನ್ನು ಚೋಳನು ನೆಲಸಮಮಾಡಿ, ವಡುಗರ ತಲೆಗಳನ್ನು ತರಿದುಹಾಕಿ, ದಂತ ತೆರೆದುಕೊಂಡಿದ್ದ ಆನೆಗಳ ರುಂಡಗಳಿಂದ ಈ ಪ್ರದೇಶವನ್ನು ಹೊದಿಸಿದನೆಂದು ಇವನು ವರ್ಣಿಸಿರುವನು.[೯] ವಡುಗರ ಭದ್ರಕೋಟೆಯಾಗಿತ್ತೆನ್ನಲಾದ ಈ 'ಪಾಳಿ'ಯ ಬಗ್ಗೆ ನಾವು ಹೆಚ್ಚು ವಿವರಗಳನ್ನು ಸಂಗ್ರಹಿಸಬೇಕಾಗಿದೆ. ತಾಯಂಕಣ್ಣ ಎಂಬ ಚೋಳನಾಡಿನ ಇನ್ನೊಬ್ಬ ಕವಿ ವೇಂಕಟದಾಚೆಯ ವಡುಗನಾಡನ್ನು ಮತ್ತು ಅಲ್ಲಿಯ ವಡುಗರನ್ನು ತುಂಬಾ ನೈಜ ನುಡಿಗಳಲ್ಲಿ ಪರಿಚಯಿಸಿಕೊಟ್ಟಿರುವನು. ಗಜಕಾಳಗದಲ್ಲಿ ಸಿದ್ಧಹಸ್ತನಾದ ತೊಂಡೈ ಅಧಿಪತಿ ವೇಂಗಡವನ್ನು ದಾಟಿ ತುರುಗಳನ್ನು ಅಪಹರಿಸಿದ ಘಟನೆಯೊಂದನ್ನು ವಿವರಿಸುತ್ತಾ ಅದು ನೀರಿಲ್ಲದ, ರಣರಣ ಬಿಸಿಲಿನ, ಪ್ರದೇಶವಾಗಿತ್ತೆಂದೂ ಅಲ್ಲಿಯ ನಿವಾಸಿಗಳು ಬೆಳ್ಳಕ್ಕಿಯ ಅನ್ನವನ್ನು ಕೊಬ್ಬಿ(ಮಾಂಸ)ನಲ್ಲಿ ಮಿಶ್ರಣಮಾಡಿ ಉಣ್ಣುತ್ತಿದ್ದರೆಂದೂ ಅವನು ತಿಳಿಸುವನು.[೧೦] ವೇಂಕಟಾದ್ರಿಯ ಉತ್ತರಕ್ಕಿರುವ ಆಂಧ್ರಪ್ರದೇಶದ ಪ್ರಕೃತಿ ಚಿತ್ರವನ್ನು ಮತ್ತು ಬದುಕಿನ ಬಗೆಯನ್ನು ಇದಕ್ಕಿಂತಲೂ ಹೆಚ್ಚು ನೈಜವಾಗಿ ವಿವರಿಸುವುದು ಕಷ್ಟ. ಇಂತಹ ನೀರಿಲದ ಸುಡುಬಿಸಿಲಿನ ವಡುಗನಾಡಿನ ಮೇಲೆ ದಾಳಿಮಾಡಲು ಹೋದ ನಾಯಕನನ್ನು ಸದಾ ತುಂಬಿ ತುಳುಕುವ ಕಾವೇರಿ ನದಿಯ ತಂಪು ನೆಲದಲ್ಲಿದ್ದ ಅವನ ಪ್ರಿಯತಮೆ ನೆನಪಿಸಿಕೊಂಡು ಪರಿತಪಿಸುವುದನ್ನು ಈ ಕವಿ ಸೊಗಸಾಗಿ ಚಿತ್ರಿಸಿರುವನು. ಕವೇರಿಯ ಕಪ್ಪುಮರಳಿನ ವರ್ಣವನ್ನು ಹೋಲುವ ಕೂದಲಿನ, ಚೇರನ ಕೊಲ್ಲಿಮಲೈಯಲ್ಲಿ ಸೊಂಪಾಗಿ ಬೆಳೆವ ಎಳೆ ಬಿದುರಿನಂತಹ ಬಾಹುಗಳ, ಈ ನಾಯಕಿಯ ಅಳಲನ್ನು ಪರಿಚಯಿಸುವಾಗ, ಈ ಎರಡು ಪ್ರದೇಶಗಳ ಭೌಗೋಳಿಕ ಹಾಗೂ ಜನಾಂಗೀಯ ವೈವಿಧ್ಯತೆಯನ್ನೂ ಅವನು ಪರಿಚಯಿಸಿಕೊಟ್ಟಿರುವುದು ಗಮನಾರ್ಹ.

ಹೀಗೆ ವೇಂಕಟಾದ್ರಿ ಮತ್ತು ನೀಲಗಿರಿಗಳ ಉತ್ತರಕ್ಕಿದ್ದ ವಡುಗ ಜನಾಂಗಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಪರಿಚಯಿಸುವುದಲ್ಲದೆ ಅವರಲ್ಲಿದ್ದ ಕೆಲವು ಸಮಾನ ಗುಣಧರ್ಮಗಳನ್ನೂ ಶಂಗಂ ಕವಿಗಳು ಸೆರೆಹಿಡಿದಿರುವರು. ಕಾವಿರಿಪೂಂಪಟ್ಟಿಣತ್ತು

ಕಾರಿಕಣ್ಣನಾರ್ 'ಯುದ್ಧವರಸೆಯನ್ನು ಬಿಟ್ಟು ಬೇರೇನನ್ನೂ ಅರಿಯದ ಈ ವಡುಗರು ಭಯಾನಕ ಬೇಟೆ ನಾಯಿಗಳನ್ನು ಸಂಗಾತಿಗಳನ್ನಾಗಿ ಮಾಡಿಕೊಂಡ, ಸುದೀರ್ಘ ಹಾಗೂ ಸುಸ್ಪಷ್ಟ ನುಡಿಗಳ ಗಂಡುಗಲಿ'ಗಳಾಗಿದ್ದರೆಂದು ತಿಳಿಸುವನು.[೧೧] ನಡುಕ ಹುಟ್ಟಿಸುವ ಬೇಟೆ ನಾಯಿಗಳು ಇವರ ಪ್ರೀತಿಯ ಸಂಗಾತಿಗಳಾಗಿದ್ದವೆಂಬುದನ್ನು ಮದುರೈ ಇಳಂ ಗೌಸಿಕನಾರ್ ಕೂಡಾ ಬಹಿರಂಗಪಡಿಸಿರುವನು. ದನಕರುಗಳ ಚರ್ಮವನ್ನು ಹೊದಿಸಿ ಕಟ್ಟಿದ ಗುಡಿಸಲುಗಳಲ್ಲಿ ಅಡಗಿಸಿಟ್ಟ ಸೆಡೆನಾಯಿಗಳನ್ನು ಬಾಣಬಿಡುವಂತೆ ಛೂಬಿಟ್ಟು ದಾರಿಹೋಕರನ್ನು (ತಮ್ಮ ನಾಡನ್ನು ಪ್ರವೇಶಿಸಿದ ಪರಕೀಯರನ್ನು) ಈ ವಡುಗರು ಪೀಡಿಸುತ್ತಿದ್ದರೆಂದು ಇವನು ತಿಳಿಸುವನು.[೧೨].

**ಎರುಮೈಊರವರು:**

'ವಡುಗರು' ಎಂಬ ಸಾಮಾನ್ಯ ಪದದಿಂದ ತಮಿಳಗಂ ಉತ್ತರ ದಿಕ್ಕಿನ ಜನಾಂಗಗಳನ್ನು ಸ್ಥೂಲವಾಗಿ ಗುರುತಿಸಿ ಅವರ ಪ್ರಾದೇಶಿಕ ಲಕ್ಷಣಗಳನ್ನು ಆಗೊಮ್ಮೆ ಈಗೊಮ್ಮೆ ಸೂಚಿಸಿದರೂ ಈ ಜನಾಂಗಗಳನ್ನಾಗಲೀ ಅವರ ಆಡುಭಾಷೆಗಳನ್ನಾಗಲೀ ಶಂಗಂ ಕವಿಗಳು ಸ್ಪಷ್ಟವಾಗಿ ಹೆಸರಿಸುವುದಿಲ್ಲ. ಇದಕ್ಕೆ ಒಂದೇ ಒಂದು ಅಪವಾದ ಕವಿ ನಕ್ಕೀರರ್ ಎನಿಸುವುದು.[೧೩] 'ಎರುಮೈಊರವನು ವಡುಗನಾಗಿದ್ದನೆಂದು ಸ್ಪಷ್ಟವಾಗಿ ಹೇಳಿ, ತುರುಗೋಳ್ ಕಾಳಗದಲ್ಲಿ ನಿಷ್ಣಾತನಾದ ಈ ನಾಯಕನು ಕ್ಷೇತ್ರಗಳಲ್ಲಿ ತಂಗಿದ್ದ ದನಕರುಗಳನ್ನು ಸೆರೆಹಿಡಿದೆಳೆದು ತಂದು, ಅವುಗಳನ್ನು ತನ್ನ ಗ್ರಾಮದ ದೊಡ್ಡಿಯಲ್ಲಿ ಕೂಡಿಹಾಕಿದ ಒಂದು ಚಿತ್ರವನ್ನು ಕೊಡುವನು. ಇದು ತುರುಗೋಳ್ ಪ್ರಸಂಗವನ್ನು ಸೂಚಿಸುವುದನ್ನು ಮತ್ತು ಇದರ ಉದ್ದೇಶ ಎದುರಾಳಿಯನ್ನು ಕದನಕ್ಕೆ ಆಹ್ವಾನಿಸುವುದಾಗಿತ್ತೆಂಬುದನ್ನು ಹೆಚ್ಚಿಗೆ ವಿವರಿಸಿ ಹೇಳಬೇಕಾಗಿಲ್ಲ. ಅತ್ಯಂತ ಬಲಶಾಲಿಯಾದ (ಪೋರ್ವ್ವೆಕ್ಕೋಪ್ಪೆರುವರ್‌ಕಿಳ್ಳಿ) ಒಬ್ಬ ವೀರನನ್ನು ಶಂಗಂ ಕಾಲದಲ್ಲಿ 'ಎರುಮೈಮಱಮ್' (ಎಮ್ಮೆಯ ಬಲದವನು ಅಥವಾ ಕೋಣದ ಕಸುವಿನವನು) ಎಂದೇ ಗುರುತಿಸಲಾಗುತ್ತಿತ್ತು.[೧೪] ಎರುಮೈಯವರಿಂದ ಈ ನುಡಿ ಲೋಕಾರೂಢಿಯಾಯಿತೋ ಅಥವಾ ಅದಕ್ಕೆ ಬೇರೊಂದು ಕಾರಣವಿತ್ತೋ ಎಂಬುದನ್ನು ಊಹಿಸಿಮಾತ್ರ ಗ್ರಹಿಸಲು ಸಾಧ್ಯ.

**ಶಂಗಂಕಾಲದ ರಾಜಕೀಯದಲ್ಲಿ ಎರುಮೈಯವರ ಸ್ಥಾನ :**

ವಡುಗನಾಯಕರೆಂದು ಸ್ಪಷ್ಟವಾಗಿ ಗುರುತಿಸಿಕೊಂಡ ಏಕಮೇವ ರಾಜಮನೆತನದವರು ಇವರಾಗಿರುವುದರಿಂದ ಮತ್ತು ಇವರು ಕನ್ನಡನಾಡಿಗೆ ನೇರವಾಗಿ

ಸಂಬಂಧಪಟ್ಟಿರುವುದರಿಂದ, ಎರುಮೈನಾಯಕರ ಬಗ್ಗೆ ದೊರಕುವ ಮಾಹಿತಿಗಳನ್ನೆಲ್ಲಾ ಸಂಗ್ರಹಿಸಿ, ಅವರ ರಾಜಕೀಯ ಅಂತಸ್ತನ್ನು ಸ್ಪಷ್ಟಪಡಿಸಿಕೊಳ್ಳಬೇಕಾಗಿದೆ. ತಮಿಳಿನ 'ಎರುಮೈ' ಪದದ ಕನ್ನಡ ಅರ್ಥ 'ಎಮ್ಮೆ'; ಇದರಿಂದಾಗಿ 'ಎರುಮೈನಾಡು' 'ಎರುಮೈಊರು' ಎಂಬ ಪದಗಳು 'ಎಮ್ಮೆಯನಾಡು' 'ಎಮ್ಮೆಯಊರು' ಎಂಬ ಅರ್ಥವನ್ನು ಸಹಜವಾಗಿ ಪಡೆದುಕೊಳ್ಳುವುವು. ಕರ್ನಾಟಕದಲ್ಲಿ ಇಂದಿಗೂ ಪ್ರಚಲಿತವಿರುವ 'ಎಮ್ಮಿಗನೂರು'ಗಳಿಗೆ ಮತ್ತು ತಮಿಳುನಾಡಿನಲ್ಲಿರುವ 'ಎರುಮೈನಾಯಕನ್‌ಪಟ್ಟಿ' ಮುಂತಾದವುಗಳಿಗೆ ಇವು ಸಮಾನ ಪದಗಳು. ಶಂಗಂ ಕವಿಗಳು 'ಎರುಮೈನಾಡು' ಎಂದು ಗುರುತಿಸಿದ ಪ್ರದೇಶವು ಇಂದಿನ ಮೈಸೂರು ವಲಯವಾಗಿತ್ತೆಂದು ಸಂಶೋಧಕರೆಲ್ಲರೂ ಒಮ್ಮತದಿಂದ ಅಂಗೀಕರಿಸಿರುವರು; ಮೌರ್ಯರ ಕಾಲದಲ್ಲಿ ಇದನ್ನು ಮಹಿಷಮಂಡಳ ವೆಂದು ಕರೆಯಲಾಗುತ್ತಿತ್ತೆಂಬುದು ಇಷ್ಟೇ ಸುಸ್ಪಷ್ಟಗೊಂಡ ಅಂಶ.

ಎರುಮೈ ಅರಸರು ತುರುಗಾಳಗದಲ್ಲಿ ನಿಷ್ಣಾತರಾಗಿದ್ದರೆಂಬುದನ್ನು ಈಗಾಗಲೇ ನಿದರ್ಶಿಸಿದ ನಕ್ಕೀರರ್ ಕವನವು ಸಾಬೀತುಪಡಿಸುವುದು. ಆದರೆ ಅವರು ಈ ಬಗೆಯ ಚಿಕ್ಕಪುಟ್ಟ ಸಾಹಸಗಳಿಗೆ ಮಾತ್ರ ತಮ್ಮನ್ನು ತಾವು ಸೀಮಿತಗೊಳಿಸಿಕೊಳ್ಳದೆ, ಶಂಗಂ ಕಾಲದ ತಮಿಳು ರಾಜಕೀಯದಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿ, ದೊಡ್ಡ ದೊಡ್ಡ ಯುದ್ಧಗಳನ್ನು ಮಾಡಿದ ಕಲಿಗಳೂ ಆಗಿದ್ದರು.

ಇಂತಹ ಒಂದು ಮಹಾಯುದ್ಧ ಮದುರೈ ಪಾಂಡ್ಯರಾಜನಾದ ನೆಡುಂಚೆಳಿಯನ್ ಮತ್ತು ತಮಿಳಗಂನ ಉಳಿದೆಲ್ಲ ಏಳು ರಾಜ್ಯಶಕ್ತಿಗಳ ನಡುವೆ ಆದದ್ದನ್ನು ಕನಿಷ್ಠ ಹದಿಮೂರು ಪಾಂಡ್ಯಕವಿಗಳು ಉಲ್ಲೇಖಿಸಿ, ಈ ಯುದ್ಧದ ಯಶಸ್ವೀ ವೀರನಾದ ನೆಡುಂಚೆಳಿಯನ್ ಪ್ರತಾಪವನ್ನು ಕೊಂಡಾಡಿದ್ದಾರೆ.[೧೫] ಇದು ನಡೆದದ್ದು ಅಲಂಕಾನಮ್ ಅಥವಾ ತಲೈಯಾಲಂಕಾನತ್ತುವಿನಲ್ಲಿ. ಆಗ ನೆಡುಂಚೆಳಿಯನ್ ಇನ್ನೂ ಬಾಲಕನಾಗಿದ್ದು, ಹಾಲುಬಿಟ್ಟು ಬಾನ ಉಣ್ಣಲು ತೊಡಗಿದ್ದನೆಂದು ಕವಿ ಇಡೈಕುನ್ರುಕೀಟಾರ್ ತಿಳಿಸುವನು.[೧೬] ಹಗುರು ಮಾತಿನಿಂದ ಈ ಪೋರನನ್ನು ಜರಿಯುತ್ತಾ ದೊಡ್ಡ ದೊಡ್ಡ ರಥ, ಆನೆ, ಅಶ್ವ ಮತ್ತು ಕಾಲ್ದಳಗಳೊಡನೆ ಏರಿಬಂದ ಸಪ್ತಕೂಟದ ಅಪಾರ ದಳವನ್ನು ಕಂಡು, 'ನನ್ನ ಛತ್ರದಡಿಯ ಪ್ರಜೆಗಳು ಬೇಕಾದರೆ ನನ್ನನ್ನು ಮಹಾ ಕ್ರೂರಿಯೆಂದು ಬಗೆದು ನನ್ನ ವಂಶವನ್ನು ಮೂದಲಿಸಲಿ, ಕವಿಶ್ರೇಷ್ಠನಾದ ಮಾಂಗುಡಿ ಮರದನ್ ಕೂಡಾ ನನ್ನನ್ನು ಹೊಗಳಿ ಹಾಡುವುದನ್ನು ನಿಲ್ಲಿಸಲಿ, ನಾನು ಮಾತ್ರ ಇವರೆಲ್ಲರ ಸೊಲ್ಲನ್ನಡಗಿಸದೆ ಬಿಡೆನು' ಎಂದು ಪ್ರತಿಜ್ಞೆ ಮಾಡುತ್ತಾ ಯುದ್ಧರಂಗಕ್ಕಿಳಿದದ್ದನ್ನು ಸ್ವತಃ ಕವಿಯಾದ ನೆಡುಂಚೆಳಿಯನ್ ರಚಿಸಿದ

ಒಂದು ಕವನದಿಂದ ಅರಿತುಕೊಳ್ಳುವೆವು.[೭೭] ಇವನ ವಿರುದ್ಧ ಹರಿಹಾಯ್ದು ಬಂದವರಲ್ಲಿ ಶಂಗಂ ಕಾಲದ ಹೆಸರಾಂತ ಇಬ್ಬರು ಕಿರೀಟಧಾರಿ ಅರಸರು (ಚೇರ ಮತ್ತು ಚೋಳ) ಮತ್ತು ಮಹಾಪರಾಕ್ರಮಿಗಳಾದ ಐವರು ಪೆರುವೇಳಿರ್‌ಗಳು ಇದ್ದರು.[೭೮].

ಈ ಯುದ್ಧದಲ್ಲಿ ತೊಡಗಿಸಿಕೊಂಡ 'ಏಳುನಾಯಕರ'ನ್ನು ಸುಮಾರು ಅರ್ಧಡಜನ್ ಕವನಗಳಲ್ಲಿ ಉಲ್ಲೇಖಿಸಲಾಗಿದ್ದರೂ ಅವರಾರನ್ನೂ ಈ ಕವಿಗಳು ಹೆಸರಿಸುವುದಿಲ್ಲ. ಇವರೆಲ್ಲರನ್ನು ಗುರುತಿಸಿ ಹೆಸರಿಸಿದ ಕೀರ್ತಿ ಮದುರೈ ನಕ್ಕೀರರ್‌ಗೆ ಮಾತ್ರ ಸಲ್ಲುವುದೆನ್ನಬಹುದು.[೭೯] ಚೇರ, ಚೋಳರಲ್ಲದೆ, ತಿದಿಯನ್, ಎಟಿನಿ, ಎರುಮೈಊರನ್, ಇರುಂಗೋವೇಣ್ಮಾನ್ ಮತ್ತು ಪೊರುನನ್ ಎಂಬ ಐವರು ನಾಯಕರು ಈ ಒಕ್ಕೂಟದಲ್ಲಿ ಸೇರಿದ್ದರೆಂದು ಅವನು ಸ್ಪಷ್ಟಗೊಳಿಸಿರುವನು. ಅಂದಿನ ಆಳರಸರಾದ ಚೇರನನ್ನಾಗಲೀ ಚೋಳನನ್ನಾಗಲೀ ಈ ಕವಿ ಹೆಸರಿಸುವುದಿಲ್ಲ. ಆದರೆ ಉಳಿದವರನ್ನು ವ್ಯಕ್ತಿನಾಮದಿಂದಲೋ ಇಲ್ಲವೇ ವಂಶನಾಮದಿಂದಲೋ ಗುರುತಿಸಿ ಅವರ ಪ್ರಮುಖ ಗುಣಗಳನ್ನು ಪರಿಚಯಿಸಿಕೊಡುವನು. ತಿದಿಯನ್ ವೀರರಲ್ಲಿಯೇ 'ಅತ್ಯುಗ್ರ'ನೆನಿಸಿದ್ದನು; ಎಟಿನಿ 'ಗಜಪಡೆಯನ್ನು ವಶಮಾಡಿಕೊಳ್ಳುವುದರಲ್ಲಿ ನಿಷ್ಣಾತನೂ ಕನಕಾಭರಣ ಪ್ರಿಯನೂ' ಆಗಿದ್ದನು; ಎರುಮೈಊರವನ್ 'ನಾರಿನ ಜರಡಿ(ಪನ್ನಾಡೆ)ಯಿಂದ ಸೋಸಿ ಸಿದ್ಧಪಡಿಸಿದ ಸಿಹಿಸೇಂದಿಯ ಸೇವನಾಸಕ್ತ'ನಾಗಿದ್ದನು; ಇರುಂಗೋವೇಣ್ಮಾನ್ 'ಜೇನು ಕಂಪು ಸೂಸುವ ಎದೆಯಮೇಲೆ ಚಂದನ ಲೇಪಿಸಿಕೊಳ್ಳುವ ಹವ್ಯಾಸಿ'ಯಾಗಿದ್ದನು; ಪೊರುವಣ್ 'ಶ್ರೇಷ್ಠ ರಥಗಳನ್ನೇರಿ ಕಾಳಗ' ಮಾಡಲು ಆತುರನಾಗಿರುತ್ತಿದ್ದನು, ಎಂದು ನಕ್ಕೀರರ್ ತಿಳಿಸುವನು.

ಈ ಐವರು 'ಪೆರುವೇಳಿರ್'ಗಳಲ್ಲಿ ಯಾರು ತಮಿಳಗಂ ಪ್ರದೇಶದವರಾಗಿದ್ದರು ಮತ್ತು ಯಾರು ವಡುಗರಾಗಿದ್ದರು ಎಂಬುದನ್ನು ಇನ್ನೂ ದೃಢಪಡಿಸಿಕೊಳ್ಳಬೇಕಾಗಿದೆ. ಇವರಲ್ಲಿ ಕೆಲವರನ್ನು ಗುರುತಿಸುವ ಪ್ರಯತ್ನವನ್ನು ಮಾಡಲಾಗಿದ್ದರೂ ವಡುಗ ಪ್ರದೇಶಕ್ಕೆ ಅವರನ್ನು ಪ್ರಸ್ತುತಗೊಳಿಸಿರುವ ವಿವರಗಳಾವೂ ನನಗೆ ಸಿಗುತ್ತಿಲ್ಲ.

ಈ ಐವರು 'ಪೆರುವೇಳಿರ್'ಗಳಲ್ಲಿ ಎರುಮೈಊರವರು ಮೈಸೂರು ಪ್ರದೇಶ ದವರಾಗಿದ್ದರು. ಆದರೆ ಇವರ ಕಾರ್ಯಕ್ಷೇತ್ರ ಅಥವಾ ಕದನಕ್ಷೇತ್ರವನ್ನು ಸ್ಪಷ್ಟವಾಗಿ ನಿರ್ಧರಿಸಲು ಸಾಧ್ಯವಾಗುತ್ತಿಲ್ಲ. ಶಂಗಂ ಕಾಲದ ವೇಳಿರ್‌ಗಳಿಗೆ ತಮ್ಮದೆಂಬ ಪ್ರಾದೇಶಿಕ ಕ್ಷೇತ್ರಗಳಿದ್ದಿರಲು ಸಾಧ್ಯ, ಆದರೆ ಅವರಿಗೆ ನಿಶ್ಚಿತವಾದ ಕದನಕಾರ್ಯದ ಗಡಿಗಳಿರಲಿಲ್ಲವೆಂದು ತೋರುವುದು, ಏಕೆಂದರೆ ಒದಗಿಬಂದ ಅವಕಾಶಗಳನ್ನೆಲ್ಲಾ

ಬಳಸಿಕೊಂಡು ತಮ್ಮ ರಾಜಕೀಯ ಹಾಗೂ ಸಾಮಾಜಿಕ ಪ್ರಭಾವವನ್ನು ಹೆಚ್ಚಿಸಿಕೊಳ್ಳುವುದು. ಅದಕ್ಕೆ ತಕ್ಕಂತೆ ತಮ್ಮ ರಾಜಕೀಯ ಮಿತ್ರತ್ವವನ್ನೂ ಶತ್ರುತ್ವವನ್ನೂ ಬದಲಿಸಿಕೊಳ್ಳುವುದು. ಅವರ ಪ್ರವೃತ್ತಿಯಾಗಿತ್ತು.

ಒಂದು ಕಾಲದಲ್ಲಿ 'ಅಯಿರಿ' ನದಿ ಎರುಮೈಯೂರವರ ರಾಜ್ಯದ ಗಡಿಯನ್ನು ಗುರುತಿಸುತ್ತಿತ್ತೆಂದು ತಿಳಿದುಬರುವುದು.[೨೦] ದಟ್ಟಕಾಡಿನ ಮಧ್ಯದಲ್ಲಿದ್ದ ಈ ಪ್ರದೇಶವು ನವಿಲುಗಳ ತಾಣವಾಗಿತ್ತೆಂಬುದನ್ನು ಬಿಟ್ಟರೆ 'ಅಯಿರಿಯಾಱು'ವಿನ ಬಗ್ಗೆ ಹೆಚ್ಚಿನ ವಿವರಗಳು ನಮಗೆ ದೊರಕುವುದಿಲ್ಲ. ಈ ನದಿಗೂ ಅಯಿರೈ (ಚೇರನಾಡಿನ ಉತ್ತರಕ್ಕೆ, ಪಳನಿಯ ಪಶ್ಚಿಮಕ್ಕೆ, ಇರುವ ಐವಾರ್‌ಮಲೈ) ಬೆಟ್ಟಪ್ರದೇಶಕ್ಕೂ ಏನಾದರೂ ಸಂಬಂಧವಿದ್ದರೆ, ಅದನ್ನು ಇಂದಿನ ದಿಂಡಿಗಲ್ ಜಿಲ್ಲೆಯ ವಾಯವ್ಯಭಾಗದಲ್ಲಿ ಗುರುತಿಸಬೇಕಾಗುವುದು. ಶಂಗಂ ಕಾಲದ ಈ ನದಿ ಎಲ್ಲೇ ಹರಿದಿರಲಿ, ದಿಂಡಿಗಲ್ ಪ್ರದೇಶದವರೆಗೂ ಎರುಮೈ ನಾಯಕರು ತಮ್ಮ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದ್ದರೆಂಬುದಕ್ಕೆ ಬಲವಾದ ಸಾಂದರ್ಭಿಕ ಸಾಕ್ಷಿಗಳು ನೆರವಿಗೆ ಬರುವವು. ಪಳನಿಯ ಸಮೀಪ, ನತ್ತಂ ಮತ್ತು ದಿಂಡಿಗಲ್‌ಗಳ ನಡುವೆ, 'ಎರುಮೈನಾಯಕನ್‌ಪಟ್ಟಿ' ಎಂಬ ಗ್ರಾಮ ಇಂದಿಗೂ ಉಳಿದು ಬಂದಿರುವುದು ಇಲ್ಲಿ ಗಮನಾರ್ಹ.[೨೧] ಎರುಮೈ ರಾಜ್ಯವು ದಿಂಡಿಗಲ್‌ವರೆಗೂ ವಿಸ್ತರಿಸಿತ್ತೋ ಇಲ್ಲವೋ ತಿಳಿಯದು, ಆದರೆ ಅವರ ಕಾರ್ಯ(ಕದನ)ಕ್ಷೇತ್ರವು ಅದನ್ನು ತಲುಪಿತ್ತೆಂಬುದರಲ್ಲಿ ಅನುಮಾನವಿಲ್ಲ. ಉಳಿದ ಅರಸರೊಡಗೂಡಿ ಇವನು ಪಾಂಡ್ಯನ ವಿರುದ್ಧ ಹೋರಾಡಿದ್ದು ತಲೈಯಾಲಂಕಾನಂನಲ್ಲಿ ಎಂಬುದನ್ನು ಈಗಾಗಲೇ ಗಮನಿಸಿದ್ದೇವೆ. ಇದು ತಂಜಾವೂರು ಜಿಲ್ಲೆಯ ನೀಡಾಮಂಗಳ ಎಂದು ಗುರುತಿಸಲಾಗಿರುವುದರಿಂದ ಎರುಮೈನಾಯಕರ ಕಾರ್ಯಕ್ಷೇತ್ರವು ತಂಜಾವೂರು ಜಿಲ್ಲೆಯವರೆಗೂ ವಿಸ್ತರಿಸಿತ್ತೆನ್ನಲು ಯಾವ ಆತಂಕವೂ ಇಲ್ಲ.[೨೨]

ಶಂಗಂ ಕಾವ್ಯದಲ್ಲಿ ಬರುವ ಎಲ್ಲ ವೇಳಿರ್‌ಗಳ ಚರ್ಚೆ ನಮಗಿಲ್ಲಿ ಅಪ್ರಸ್ತುತ, ಆದರೆ ಪಾಂಡ್ಯನನ್ನು ವಿರೋಧಿಸಿ ನಿಂತ 'ಎೞಿನಿ'ಯನ್ನು ಮಾತ್ರ ನಿರ್ಲಕ್ಷಿಸುವಂತಿಲ್ಲ. ಇವನು ಪ್ರಸಿದ್ಧ ನಾಯಕನೂ ಕವಯಿತ್ರಿ ಅವ್ವೈಯಾರ್ ಪೋಷಕನಾದ ಅಂಚಿಯ ಪುತ್ರನೂ ಮಾತ್ರನಾಗಿರದೆ ಕನ್ನಡನಾಡಿಗೆ ಅಂಟಿಕೊಂಡ ಪ್ರದೇಶದವನಾಗಿದ್ದನು. ಇವನ ಮತ್ತೊಂದು ಹೆಸರು ಅತಿಯಮಾನ್ ಪೊಕುಟ್ಟೆೞಿನಿ ಎಂದು.[೨೩] ಶಂಗಂ ಕಾಲದ ಅತ್ಯಂತ ಖ್ಯಾತ ಕವಯಿತ್ರಿಯಾದ ಅವ್ವೈಯಾರ್ ಇವನನ್ನು ಕುರಿತು ಹದಿನೇಳು ಕವನಗಳನ್ನು ಬರೆದಿರುವಳು.[೨೪] ಅತಿಯಮಾನರು ದಿಂಡಿಗಲ್ ಜಿಲ್ಲೆಯ ಕುದುರೆಮಲೈ ಪ್ರದೇಶದ ಮಳವರ ನಾಯಕರಾಗಿ, ತಗಡೂರನ್ನು (ಧರ್ಮಪುರಿಯನ್ನು) ಕೇಂದ್ರವನ್ನಾಗಿಸಿಕೊಂಡು. ಬಹುಕಾಲ ಆಳಿದ ವಿವರಗಳು ನಮಗೆ ದೊರಕುವುವು.[೨೫]

## ಬಹುಭಾಷಾ ಪ್ರದೇಶ ತಗಡೂರು:

ತಮಿಳುನಾಡಿನ ವಿಳುಪ್ಪುರಂ ಜಿಲ್ಲೆಯ ತಿರುಕ್ಕೋವಲೂರ್ ಬಳಿ ಜಂಬೈ ಎಂಬಲ್ಲಿ ಕ್ರಿ.ಪೂ. ಒಂದನೆಯ ಶತಮಾನದ ತಮಿಳುಬ್ರಾಹ್ಮೀ ಶಾಸನ ದೊರಕಿದ್ದು ಈ ಶಾಸನದ ಆಧಾರದ ಮೇಲೆ ಅಂಜ್ಞಿ ಮತ್ತು ಅವನ ಪುತ್ರ ಎಟಿನಿ ಅತಿಯಮಾನ ವಂಶಜರಾಗಿದ್ದರೆಂದೂ ಅವರ ಆಡಳಿತ ಕೇಂದ್ರವು ತಗಡೂರು (ಇಂದಿನ ಧರ್ಮಪುರಿ) ಆಗಿತ್ತೆಂದೂ ತೀರ್ಮಾನಿಸಲಾಗಿದೆ.[೨೬] 'ಸತಿಯಪುತ'ರೆಂದು(?) ಹೆಸರಾಂತರಾದ ಇವರು ಶಂಗಂ ಕಾಲದ ಪ್ರಧಾನ 'ವೇಳಿರ್'ಗಳಲ್ಲಿ ಒಬ್ಬರಾಗಿದ್ದರು.

ನೆಡುಂಚೆಳಿಯನ್ ಮತ್ತು ಸಪ್ತದಳಕೂಟದ ನಡುವೆ ಕಾಳಗ ಸಂಭವಿಸಿದಾಗ ತಗಡೂರಿನ (ಧರ್ಮಪುರಿ) ಸುತ್ತಮುತ್ತಲ ಪ್ರದೇಶವು ತಮಿಳರ ಏಕಸ್ವಾಮ್ಯದಲ್ಲಿರದೆ 'ಬಹುಭಾಷಿಕರ ಪ್ರದೇಶ'ವಾಗಿತ್ತೆಂದು ಶಂಗಂಕಾಲದ ಸುಪ್ರಸಿದ್ಧ ಕವಿಗಳಲ್ಲಿ ಒಬ್ಬನಾದ ಪರಣರ್ ತಿಳಿಸುವನು.[೨೭] ಇಂದಿನ ತಮಿಳುನಾಡಿನ ಗಡಿಜಿಲ್ಲೆಯಾದ ಧರ್ಮಪುರಿ ಕರ್ನಾಟಕದ ಗಡಿಜಿಲ್ಲೆಯಾದ ಚಾಮರಾಜನಗರಕ್ಕೆ ಹೊಂದಿಕೊಂಡಿದ್ದು ಈ ಎರಡು ಪ್ರಾದೇಶಿಕ ಘಟಕಗಳನ್ನು ಕಾವೇರಿ ನದಿ ಬೆಸೆದಿರುವುದು. ಅಂದರೆ ಧರ್ಮಪುರಿಯಿಂದ ಪಶ್ಚಿಮದ ಅರಬ್ಬೀಸಾಗರದವರೆಗೆ ಚಾಚಿರುವ (ಇಂದಿನ ಚಾಮರಾಜನಗರ, ಮಂಡ್ಯ–ಮೈಸೂರು, ಮಡಕೇರಿ ಮತ್ತು ಅದರಿಂದಾಚೆಯ ಕೇರಳ ಮತ್ತು ದಕ್ಷಿಣ ಕನ್ನಡದ) ಪ್ರದೇಶಗಳು ಆ ಕಾಲದಲ್ಲಿ ಬಹು ಭಾಷಾ ಜನಾಂಗಗಳ ವಾಸಸ್ಥಾನಗಳಾಗಿದ್ದವೆಂದೂ ಇಂತಹ ಜನಾಂಗಗಳ ನಾಯಕರುಗಳಲ್ಲಿ ಎರುಮೈ ಮತ್ತು ಅತಿಯಮಾನರು ಹೆಸರಾಂತ ವೇಳಿರ್‌ಗಳಾಗಿದ್ದರೆಂದೂ ನಾವು ಭಾವಿಸಬಹುದು. ತಮಿಳು ರಾಜಕೀಯದೊಡನೆ ಗುರುತಿಸಿಕೊಂಡ ಈ ತಮಿಳೇತರ ಪ್ರದೇಶದ (ವಡುಗ) ನಾಯಕರು ತಮಿಳಿಗೆ ಕೊಟ್ಟ ಸ್ಥಾನವನ್ನು ತಮ್ಮ ತಾಯ್ನುಡಿಗೂ ಅಲ್ಲದೆ ಸುತ್ತಮುತ್ತಲಲ್ಲಿ ಪ್ರಸಾರದಲ್ಲಿದ್ದ ಜನಾಂಗ ನುಡಿಗಳಿಗೂ ಕೊಟ್ಟಿದ್ದರೆಂಬುದು ಇದರಿಂದ ಸ್ಪಷ್ಟಗೊಳ್ಳುವುದು.

## ಶಂಗಂ ಸಾಹಿತ್ಯಕ್ಕೆ ಎರುಮೈಯವರ ಕೊಡುಗೆ:

ಚೇರ ಮತ್ತು ಚೋಳರಲ್ಲದೆ 'ಸತಿಯಪುತ'ರಂಥವರಿಗೆ ಸಮಾನರೆನಿಸಿ, ಪಾಂಡ್ಯರ ವಿರುದ್ಧ ಹೋರಾಡಿದ ಎರುಮೈನಾಯಕರ ರಾಜಕೀಯ ಅಂತಸ್ತು, ಶಂಗಂ ಕಾಲದ 'ಪೆರುವೇಳಿರ್'ಗಳಲ್ಲಿ ಯಾರಿಗೂ ಕಡಿಮೆಯಾಗಿರಲಿಲ್ಲವೆಂಬುದನ್ನು ಗಮನಿಸುವುದವಶ್ಯ. ಶ್ವೇತಛತ್ರ ಮತ್ತು ರಾಜಡಿಂಡಿಮದ ಗೌರವವನ್ನು ಪಡೆದಿದ್ದ ಇವರು ತಮ್ಮ ಕದನ ಕಲಾಪವನ್ನು ತಮಿಳಗಂ ಹೃದಯಭಾಗವಾದ ಕಾವೇರಿ ಮತ್ತು ವೈಗೈ ನದಿಯವರೆಗೂ

ವಿಸ್ತರಿಸಿಕೊಂಡಿದ್ದರು ಮಾತ್ರವಲ್ಲ, ಶಂಗಂ ಕಾಲದ ಪ್ರಸಿದ್ಧ ರಾಜಮನೆತನಗಳಂತೆ ಇವರೂ ಶಂಗಂ ಕವಿಗಳನ್ನು ಪೋಷಿಸಿ ತಮ್ಮ ಜೇಷ್ಠತೆಯನ್ನು ಮೆರೆದಿದ್ದರು. ಇವರ ನೆಲದವರೇ ಆದ 'ಎರುಮೈವೆಳಿಯನಾರ್' ಮತ್ತು ಅವನ ಪುತ್ರ *(ಮಕನಾರ್)* 'ಕಡಲನಾರ್' ಎಂಬ ಇಬ್ಬರು ಕವಿಗಳು 'ಎರುಮೈವೇಲಿ' ಗ್ರಾಮದಲ್ಲಿ ಜನಿಸಿದ್ದರು. ಈ ತಂದೆ ಮಗ ರಚಿಸಿದ ನಾಲ್ಕು ಕವನಗಳು ಶಂಗಂ ಭಂಡಾರದಲ್ಲಿ ಪ್ರವೇಶಪಡೆದುಕೊಂಡಿರುವುವು. ಇವುಗಳಲ್ಲಿ ಮೂರು ಕವನಗಳನ್ನು ರಚಿಸಿದ ಕೀರ್ತಿ ತಂದೆಗೆ ಸಂದರೆ, ಉಳಿದೊಂದನ್ನು ರಚಿಸಿದ ಕೀರ್ತಿ ಮಗನಿಗೆ ಸಲ್ಲುವುದು. ಹಿರಿಯನ ಒಂದು ಗೀತೆ ಪ್ರೇಮಪ್ರಕರಣಕ್ಕೂ ಎರಡು ಗೀತೆಗಳು ಶೌರ್ಯಪ್ರದರ್ಶನಕ್ಕೂ ಸಂಬಂಧಿಸಿದ್ದರೆ ಕಿರಿಯನ ಗೀತೆ ಪ್ರೇಮಪ್ರಕರಣಕ್ಕೆ ಸೀಮಿತಗೊಂಡಿದೆ.[೨೮] ಈ ಕಾವ್ಯಗಳ ಹಿಂತೆರೆಯಲ್ಲಿ ಕಂಡುಕೊಂಡ ವಿವರಗಳು ಕಾನನದ ಸಂಪತ್ತು ಮತ್ತು ಬರಡು ಭೂಮಿಯ ಬೇಗುದಿ; ಕಾವ್ಯರಂಗದಲ್ಲಿ ಕಾಣಿಸಿಕೊಂಡು ಕಣ್ಮರೆಯಾಗುವ ಪಾತ್ರಗಳು - ಕಾಡುಬೆಕ್ಕು, ಕಾಡುಕರಡಿ, ಹುತ್ತದ ಸುತ್ತ ಝೇಂಕರಿಸುವ ಮಿನುಗುಹುಳುಗಳು, ಮಳೆಗಾಲದ ಮಿಂಚು, ಕಮ್ಮಾರನ ತಿದಿ ಮತ್ತು ಅವನ ಬಡಿಗಲ್ಲು.

**ಒಳನುಡಿ-ಹೊರನುಡಿ:**

ತಮಿಳು ಸಾಹಿತ್ಯಕ್ಕೆ ವಡುಗರು ಕೊಟ್ಟ ಪ್ರೋತ್ಸಾಹದ ಬಗ್ಗೆ ಆಶ್ಚರ್ಯಪಡಬೇಕಾದುದೇನೂ ಇಲ್ಲ. ಏಕೆಂದರೆ ಲಿಪಿಮೂಲಕ ಗುರುತಿಸಿಕೊಂಡಿದ್ದ ಸಾಹಿತ್ಯಿಕ ಹಾಗೂ ಸಂಪರ್ಕ ಮಾಧ್ಯಮದಲ್ಲಿ ಆಗ ತಮಿಳಿಗೆ ಏಕಸ್ವಾಮ್ಯವಿದ್ದು 'ಮಾರ್ಗೀ' ಭಾಷೆಯಾಗಿದ್ದ ತಮಿಳಿನಲ್ಲಿ ಸ್ಪಂದಿಸುವುದು ತಮಿಳು ರಾಜ್ಯಗಳೊಡನೆ ಸಂಪರ್ಕಹೊಂದಿದ್ದ ಅಂದಿನ ವಡುಗರಿಗೆ ಅನಿವಾರ್ಯವಾಗಿತ್ತು. ವ್ಯಾವಹಾರಿಕ ಮತ್ತು ಸಾಹಿತ್ಯಿಕ ಭಾಷೆಗಳು ಕೈಕೈ ಹಿಡಿದು ಸಹಬಾಳ್ವೆ ಮಾಡಿರುವುದನ್ನು ಇತಿಹಾಸದುದ್ದಕ್ಕೂ ನಾವು ಕಾಣುವೆವು. ಸ್ಥಳೀಯ ವ್ಯವಹಾರ, ಆಂತರಿಕ ಆಡಳಿತ, ಕೌಟುಂಬಿಕ, ಗ್ರಾಮೀಣ ಮತ್ತು ಜನಪದೀಯ ಕಲಾಪ ಮುಂತಾದವುಗಳು ಸಾಮಾನ್ಯವಾಗಿ ದೇಸೀ ಮಾಧ್ಯಮಗಳನ್ನು ಹೆಚ್ಚು ಅವಲಂಬಿಸಿದ್ದರೆ, ಸಾಹಿತ್ಯಿಕ ಹಾಗೂ ಅಂತರ-ಪ್ರಾದೇಶಿಕ ಸಂಪರ್ಕಕ್ಕೆ ಸಾಮಾನ್ಯವಾಗಿ ಮಾರ್ಗೀ ಮಾಧ್ಯಮವನ್ನು ಬಳಸಿಕೊಳ್ಳಲು ಹೆಚ್ಚು ಒಲವನ್ನು ತೋರಿಸಿರುವುದನ್ನು ನಾವು ಇತಿಹಾಸದ ಅನೇಕ ಘಟಕಗಳಲ್ಲಿ ಕಾಣುವೆವು. ಇದೊಂದು ಕಡ್ಡಾಯ ನಿಯಮವಾಗಿರಲಿಲ್ಲ, ಸಹಜವಾಗಿ ಬೆಳೆದ ಒಲವಾಗಿತ್ತು. ಕನ್ನಡದ ನೆಲದಲ್ಲಿ ರಾಜ್ಯಕಟ್ಟಿ ಸಾಮ್ರಾಟ ಹಂತಕ್ಕೇರಿದ ಕದಂಬ, ಬದಾಮಿ ಚಾಳುಕ್ಯ ಮತ್ತು ರಾಷ್ಟ್ರಕೂಟರು ಸಂಸ್ಕೃತಕ್ಕೆ ಕೊಟ್ಟ ಸ್ಥಾನವನ್ನು ಅರ್ಥಮಾಡಿಕೊಂಡರೆ ಇವರೆಲ್ಲರಿಗಿಂತ ಪೂರ್ವಕಾಲದಲ್ಲಿದ್ದ ಕನ್ನಡ ಪ್ರದೇಶದ ರಾಜಕೀಯ ಶಕ್ತಿಯಾದ ಎರುಮೈಯವರು ತಮಿಳಿಗೆ ಕೊಟ್ಟ ಸ್ಥಾನವನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದು.

## ಎರುಮೈಯವರು ಮತ್ತು ತಮಿಳುಬ್ರಾಹ್ಮೀ:

ಕ್ರಿಸ್ತಪೂರ್ವಕಾಲದ ದಕ್ಷಿಣಭಾರತದಲ್ಲಿ ಲಿಪಿರಹಿತ ಜನಾಂಗಗಳಿಗೆ ತಮ್ಮ ಬದುಕಿನ ಬಗೆಯನ್ನೂ ಭಾವನೆಯನ್ನೂ ಮೌಖಿಕವಾಗಿ ಅಭಿವ್ಯಕ್ತಿಗೊಳಿಸಲು ಅವರವರ ತಾಯ್ನುಡಿಗಳಿದ್ದವು, ಆದರೆ ತಮ್ಮ ಸಾಧನೆಗಳನ್ನು ರಕ್ಷಿಸಲು ಮತ್ತು ಅವನ್ನು ಶಾಶ್ವತಗೊಳಿಸಲು, ಅವರಿಗಿದ್ದ ಏಕಮೇವ ಮಾಧ್ಯಮವೆಂದರೆ ಪ್ರೌಢಾವಸ್ಥೆ ಮುಟ್ಟಿದ್ದ ತಮಿಳು ಭಾಷೆ. ಎರುಮೈಯವರು ಕೂಡಾ ಆಂತರಿಕ ವ್ಯವಹಾರಗಳನ್ನು ತಮ್ಮ ತಾಯ್ನುಡಿಯಲ್ಲಿ ನಡೆಸುತ್ತಾ ತಮಿಳನ್ನು ಸಂಪರ್ಕಭಾಷೆಯನ್ನಾಗಿ ಮಾಡಿಸಿಕೊಂಡ ಸಾಧ್ಯತೆಗಳುಂಟು. ತಮಿಳೇತರರಾದ ಇವರ ತಾಯ್ನುಡಿಯ ಸ್ಪಷ್ಟ ಸುಳಿವು ನಮಗೆ ದೊರಕುವುದಿಲ್ಲ - ಕಾರಣ ಅದು ಯಾವುದಾಗಿತ್ತು ಎಂಬುದನ್ನು ನಿರ್ಧರಿಸಲು ಹೆಚ್ಚಿನ ಮಾಹಿತಿಗಾಗಿ ಕಾಯಬೇಕಾಗಿದೆ. ಆದರೆ ತಮಿಳಗಂ ಕಾರ್ಯಕ್ಷೇತ್ರದಲ್ಲಿ ತಮ್ಮ ವ್ಯವಹಾರಕ್ಕೆ ತಮಿಳುಬ್ರಾಹ್ಮೀ ಬಳಸಿಕೊಂಡರೆಂಬುದಕ್ಕೆ ಅವರು ಕೊರೆಸಿದ ಶಾಸನವೊಂದು ಸಾಕ್ಷಿ ಒದಗಿಸುವುದು. ಪ್ರಾಗೈತಿಹಾಸಕಾಲದ ಕೊನೆಯ ಅಂಚಿನಲ್ಲಿ, ತಮಿಳಗಂ ಪ್ರದೇಶದ ಹೊರ ಅಂಚಿನಲ್ಲಿದ್ದ ಲಿಪಿರಹಿತ ವಡುಗ ಜನಾಂಗವೊಂದು ಮಾಡಿದ ಪ್ರಪ್ರಥಮ ಸಾಧನೆ ಇದೆನ್ನಬಹುದು. ಇದರಿಂದಾಗಿ ಎರುಮೈಯರವರಿಗೆ ಲಿಖಿತ ಇತಿಹಾಸದಲ್ಲಿ ಶಾಶ್ವತ ಸ್ಥಾನ ದೊರಕಿರುವುದು ಮಾತ್ರವಲ್ಲದೆ, ಕನ್ನಡ ಪ್ರದೇಶದ ಅತಿಪೂರ್ವಕಾಲದ ರಾಜಮನೆತನದ ಬಗ್ಗೆ ತಿಳಿದುಕೊಳ್ಳಲು ನಮಗೆ ಶಾಸನಿತ ಆಧಾರವೂ ದೊರೆತಂತಾಗಿದೆ.

ಕನ್ನಡನಾಡಿನ ಇತಿಹಾಸದ ಮೈಲುಗಲ್ಲಾದ ಈ ತಮಿಳುಬ್ರಾಹ್ಮೀ ಶಾಸನದ ಪೂರ್ಣ ಪಾಠವನ್ನೂ, ಅದರಿಂದ ಹೊರಹೊಮ್ಮುವ ಕನ್ನಡದ ಸೊಡರನ್ನೂ ಪರಿಚಯಿಸಿಕೊಳ್ಳಬೇಕಾದ ಆವಶ್ಯಕತೆ ಇದೆ. ಈ ಶಾಸನವಿರುವುದು ಪುದುಕ್ಕೋಟ್ಟೈ ಜಿಲ್ಲೆಯ ಸಿತ್ತನ್‌ವಾಸಲ್‌ನ ಏಳಾಟಿಪಟ್ಟಂ ಗುಹೆಯಲ್ಲಿ, ಇದರ ಕಾಲ, ಕ್ರಿ.ಪೂ. ೧ನೆಯ ಶತಕ. ಇದಕ್ಕೆ ಬಳಸಿದ ಲಿಪಿ, ತಮಿಳುಬ್ರಾಹ್ಮೀ. ಈ ಶಾಸನದ ಕನ್ನಡ ರೂಪಾಂತರ ಇಂತಿದೆ:

ಎರುಮಿನಾಡ ಕುಮುಟೂರಿನಲ್ಲಿ ಜನಿಸಿದ (ಪಿಱಂತು) ಕುವಡಿ (ಕುವಡಿ ಎಂಬ ಹೆಸರಿನ; ಅಥವಾ ಗವುಡಿ=ಗೌಡಿ). ತೆಣ್ಣು-ಶಿಱುಪೊಶಿಲ್‌ನ ಇಳಯರ್ ಮಾಡಿ(ಸಿ)ದ ಅತಿಟಣಮ್ (ಅಧಿಷ್ಠಾನ; ವೇದಿಕೆ).[೨೯] ಅಂದರೆ ಮೈಸೂರು ಪ್ರದೇಶದ ಕುಮಳೂರಿನಲ್ಲಿ (ಕುಂಬಳೂರು=ಕುಂಬ್ಳೂರು) ಜನಿಸಿದ [ಜಿನ ಭಕ್ತೆಯಾದ] ಕುವಡಿ [ಗೌಡತಿ]ಯೊಬ್ಬಳ [ಸಮಾಧಿ ಆಚರಣೆಗೆ] ಒಂದು ಅಧಿಷ್ಠಾನ (ಶಿಲಾ ವೇದಿಕೆ ಅಥವಾ ಹಾಸಿಗೆ)ವನ್ನು ಗುಡ್ಡದ ಹೊಸ್ತಿಲ ಪ್ರದೇಶದವನಾದ ಇಳಯಾರ್ [ಎಂಬ ವೀರನು ಅಥವಾ ನಾಯಕನು] ಮಾಡಿ(ಸಿ) ಕೊಟ್ಟನು, ಎಂದು ಅರ್ಥ.

## ಶಂಗಂ ತಮಿಳಿನ ಮೇಲೆ ಕನ್ನಡದ ಪ್ರಭಾವ:

ಈ ಶಾಸನದ ಪಾಠವನ್ನು ಅರ್ಥೈಸುವಾಗ ಇದರೊಂದಿಗೆ 'ತಿರುಪ್ಪರಂಕುನ್ರಮ್', 'ಅದಕಲ್-ಅ' ಮತ್ತು 'ನೆಡನೂರ್‌ಪತ್ತಿ'ಯಲ್ಲಿ ದೊರೆತ ಮೂರು ತಮಿಳುಬ್ರಾಹ್ಮೀ ಶಾಸನಗಳನ್ನು ಹಿನ್ನೆಲೆಯನ್ನಾಗಿಸಿಕೊಂಡು, ಕ್ರಿ.ಪೂ. ೧ರಿಂದ ಕ್ರಿ.ಶ. ೪ನೆಯ ಶತಮಾನದ ಕಾಲಾವಧಿಯಲ್ಲಿ ತಮಿಳಿನ ಮೇಲೆ ಹಳೆಗನ್ನಡ ಬೀರಿದ ಪ್ರಭಾವವನ್ನು ತಮಿಳುನಾಡಿನ ಗೌರವಾನ್ವಿತ ಶಾಸನತಜ್ಞರಾದ ಡಾ|| ಐರಾವತಂ ಮಹದೇವನ್ ಗುರುತಿಸಿದ್ದಾರೆ. ಅದು 'ಇಲ್ಲಿಯವರೆಗೂ ಯಾರೂ ಶಂಕಿಸಲಾರದಂತಹ' ಅದ್ಭುತವೆಂಬುದನ್ನು ಅವರೇ ಸ್ಪಷ್ಟಪಡಿಸಿದ್ದಾರೆ. ಕ್ರಿಸ್ತಪೂರ್ವಕಾಲದ ಕೊನೆಯ ಎರಡು-ಮೂರು ಶತಮಾನಗಳಲ್ಲಿ ಕನ್ನಡದ ಪದಕೋಶ, ವ್ಯಾಕರಣ ಪ್ರಯೋಗ, ಸಂಬೋಧಕ ಪ್ರಕ್ರಿಯೆ, ಎಷ್ಟರಮಟ್ಟಿಗೆ ಬೆಳೆದಿದ್ದವು ಮತ್ತು ಇವೆಲ್ಲವೂ [ಜೈನ ವಲಸೆಗಾರರ ಮೂಲಕ] ಸಮಕಾಲೀನ ತಮಿಳುಬ್ರಾಹ್ಮೀ ಮೇಲೆ ಯಾವ ಬಗೆಯಲ್ಲಿ ಪರಿಣಾಮ ಬೀರಿದ್ದವು ಎಂಬುದನ್ನು ಅವರು ಅನಾವರಣಗೊಳಿಸಿದ್ದಾರೆ. ಸಂಕ್ಷಿಪ್ತವಾಗಿ ಅವರ ವಾದ ಇಂತಿವೆ :

೧. 'ಎರುಮಿನಾಡು' ಎಂಬ ಕನ್ನಡ ಪದದ ತಮಿಳು ರೂಪಾಂತರ, 'ಎರುಮೈನಾಡು', ಇವುಗಳಲ್ಲಿ 'ಎರುಮಿ' ಎಂಬುದೇ (ತಮಿಳಿನ ಎರುಮೈ, ತುಳುವಿನ 'ಎರ್ಮೆ', ಗೋಂಡಿಯ 'ಎರ್ಮಿ') ಮೂಲ ನುಡಿಗಟ್ಟು

೨. 'ಕವುಡಿ' ಎಂಬುದು ಒಬ್ಬ ವ್ಯಕ್ತಿಯ ಅಥವಾ ಮನೆತನದ ಹೆಸರು. ಇದು 'ಗವುಡಿ', 'ಗೌಡಿ'ಗೆ ಸಮಾನ.

೩. 'ಪೊಶಿಲ್' ಎಂದರೆ ದ್ವಾರ ಅಥವಾ ಬಾಗಿಲು. 'ತೆಣ್ಕ-ಶಿರು-ಪೊಶಿಲ್' ಎಂಬುದು ಒಂದು ಪ್ರದೇಶವನ್ನು ನಿರ್ದೇಶಿಸುವ ಪದ. 'ಪೊಶಿಲ್' ಎಂಬ ಪದ ತಮಿಳಿನಲ್ಲಿ ರುಜುವಾತು ಪಡೆದಿರುವುದಿಲ್ಲ; ಇದು ಕನ್ನಡ ಮೂಲದ 'ಹೊಸಿಲು'ವಿನಿಂದ ಪಡೆದುಕೊಂಡಿದ್ದು. ಆನಂತರದ ತಮಿಳು ಶಾಸನಗಳಲ್ಲಿ 'ವಾಯಿಲ್' ರುಜುವಾತು ಪಡೆದುಕೊಳ್ಳುವುದು, 'ಪೊಶಿಲ್' ಅಲ್ಲ.

೪. ತಮಿಳುಬ್ರಾಹ್ಮೀ ಶಾಸನವೊಂದರಲ್ಲಿ 'ತಾಯಿಯರ್' (ಎಂಬ ಗೌರವಸೂಚಕ ಪದ) ಬಳಕೆಯಾಗಿರುವುದು. ಈ ಪದ ನಿಸ್ಸಂಶಯವಾಗಿಯೂ ಕನ್ನಡ ಮೂಲದ್ದು. ಹಳೆಗನ್ನಡ ದಾಖಲೆಗಳಲ್ಲಿ ಇದು ಕಾಣಿಸಿಕೊಳ್ಳದಿರಬಹುದು, ಆದರೆ ಅವಶ್ಯವಾಗಿ ಆ ಕಾಲದ ಆಡುನುಡಿಯಲ್ಲಿ ಅದು ಪ್ರಚಾರದಲ್ಲಿತ್ತೆಂಬುದರಲ್ಲಿ ಅನುಮಾನವಿಲ್ಲ.

೫. ವ್ಯಕ್ತಿನಾಮ ಮತ್ತು ಗೌರವ ಸೂಚಕ ತಮಿಳು ಪದಗಳ ಮೇಲೆ ಆದ ಕನ್ನಡದ ಪ್ರಭಾವವನ್ನೂ ಗುರುತಿಸಬಹುದು. ಅಯ(ಶ್)ಶ [ಅಯಶ್ಶ], ಪೊಲಾಲ್(ಅ) [ಪೊಲಾಲ] ಮತ್ತು ಆದಿ ಪ್ರತ್ಯಯಗಳಾದ 'ಅಣ್ಣ', ಅ(ಪ್)ಪ [ಅಪ್ಪ] ಮತ್ತು ಅ(ಯ)ಯಣ [ಅಯ್ಯಣ]ಗಳು ಹಳೆಗನ್ನಡದ ಧ್ವನ್ಯಾನುಕರಣ ನಿಯಮಕ್ಕೆ ಹೆಚ್ಚು ಸಲೀಸಾಗಿ ಹೊಂದಿಕೊಳ್ಳುವುವೇ ಹೊರತು ತಮಿಳಿಗೆ ಅಲ್ಲ.

೬. ವ್ಯಾಕರಣ ಪ್ರಯೋಗಗಳಲ್ಲಿ '-ಆ' (ದೀರ್ಘ) ಷಷ್ಠೀವಿಭಕ್ತಿಯ ಆದಿಪ್ರತ್ಯಯವು '-ಅ' (ಹ್ರಸ್ವ) ಪ್ರತ್ಯಯಕ್ಕಿಂತ ಪೂರ್ವಕಾಲದ್ದಾಗಿದ್ದು ಇದರ ಬಳಕೆಯನ್ನು ಹಳೆಗನ್ನಡದ ಶಾಸನಗಳಲ್ಲಿ ಮೊಟ್ಟಮೊದಲು ಕಾಣುವೆವು; ತಮಿಳಿನಲ್ಲಿ ಇದಕ್ಕೆ ಸ್ಥಾನಾವಕಾಶವಿಲ್ಲ. ಇದರಂತೆ ಮೃದುಧ್ವನಿ ಮೇಳದಿಂದ ಅಂತ್ಯಗೊಳ್ಳುವ ಮಧುರಾದಿಪ್ರತ್ಯಯಕ್ಕೆ (ಉದಾ. '*ಊರು*') ಪುರಾತನ ತಮಿಳಿನಲ್ಲಿ ಅವಕಾಶವಿಲ್ಲ; ಹಳೆಗನ್ನಡದಲ್ಲಿ ಇದಕ್ಕೆ ಬರವಿಲ್ಲ.

೭. ಭಾಷೆ, ವ್ಯಾಕರಣ, ಪದಕೋಶ ಮತ್ತು ಪದಬಳಕೆಗೆ ಸಂಬಂಧಿಸಿದವುಗಳಲ್ಲದೆ, ತಮಿಳಗಂ ಮೇಲೆ ಕನ್ನಡನಾಡು ಬೀರಿದ ಪ್ರಭಾವವನ್ನು ಆರಂಭಕಾಲದ ಜೈನರ ಒಡನಾಟದಿಂದ ಸ್ಪಷ್ಟಪಡಿಸಿಕೊಳ್ಳಬಹುದು. ಜೈನರು ಸಾಕಷ್ಟು ಸಂಖ್ಯೆಯಲ್ಲಿ ಕರ್ನಾಟಕದಿಂದ ತಮಿಳುನಾಡಿಗೆ ವಲಸೆ ಹೋಗಿ ಅಲ್ಲಿ ಕೆಲವು ಕೇಂದ್ರಗಳನ್ನು ಸ್ಥಾಪಿಸಿದರೆಂಬುದಕ್ಕೆ ತಮಿಳುನಾಡಿನ ಗುಹಾಲಯಗಳಲ್ಲಿರುವ ತಮಿಳುಬ್ರಾಹ್ಮೀ ಶಾಸನಗಳೇ ಸಾಕ್ಷಿ. ೨೮ ಕೇಂದ್ರಗಳಲ್ಲಿ ಕೊರೆಸಿದ ೮೪ ಜೈನ ಶಾಸನಗಳು ಇಲ್ಲಿಯವರೆಗೂ ದೊರಕಿದ್ದು ಇವುಗಳ ಪಾಠಗಳಲ್ಲಿ ಹಲವಾರು ಕನ್ನಡ ಪದಗಳು (ಪ್ರಾಕೃತ, ಸಂಸ್ಕೃತ ಪದಗಳು ಕನ್ನಡ ಪ್ರದೇಶದ ಮೂಲಕ) ತಮಿಳುನಾಡನ್ನು ತಲುಪಿದ್ದನ್ನು ತೋರಿಸಿಕೊಡುವವು.[೩೮] ಈ ಶಾಸನಗಳಲ್ಲಿ ಬರುವ ಹಳೆಗನ್ನಡದ ಪದಗಳಲ್ಲಿ '*ಕಣಿ*' (ಗಣಿ), *ಅಮಣನ್* (ಪ್ರಾ. ಸಮಣ-ತಮಿಳಿನಲ್ಲಿ 'ಶ' ಲುಪ್ತಗೊಂಡಿರುವುದು), '*ಉಪಶನ್*' (ಪ್ರಾ. ಉಪಝಾಯ (ಕ) ಉವಜ್ಜರ್=ಓಜರ್), 'ಆಶಾರಿಯರ್' (ಸಂ. ಆಚಾರ್ಯರು); 'ಕಂತಿ' (ಕ. ಗಂತಿ, ಕಂತಿ; ನಾಮಪದವಾದಾಗ ಕವುಂತಿ) ಗಮನಾರ್ಹವಾದವುಗಳು.

ಈ ಆಧಾರಗಳ ಮೇಲೆ ಲಿಪಿರಹಿತವಾಗಿದ್ದರೂ ಶಂಗಂಕಾಲಕ್ಕಾಗಲೇ ಕನ್ನಡವು ಬೆಳೆದ ಭಾಷೆಯಾಗಿತ್ತೆಂಬುದು ಮತ್ತು ಪ್ರಬುದ್ಧಾವಸ್ಥೆಯನ್ನು ಮುಟ್ಟಿದ್ದ ತಮಿಳಿನ ಮೇಲೆ ಪ್ರಭಾವ ಬೀರಬಲ್ಲ ಜಿಗುಟುತನವನ್ನು ಗಳಿಸಿಕೊಂಡಿತ್ತೆಂಬುದು ಸ್ಪಷ್ಟಗೊಳ್ಳುವುದು.

ಮಹಾದೇವನ್ ಗಮನವನ್ನು ವಂಚಿಸಿದ ಒಂದೆರಡು ಪದಗಳನ್ನಿಲ್ಲಿ ಪ್ರಸ್ತಾಪಿಸಿ, ಅವುಗಳ ಮೂಲವನ್ನು ಶೋಧಿಸಲು ನಾವಿಲ್ಲಿ ಪ್ರಯತ್ನಿಸಬಹುದು. ದಕ್ಷಿಣ ಭಾರತದ ಇತಿಹಾಸದಲ್ಲಿ ಪ್ರಮುಖ ಪಾತ್ರವಹಿಸಿರುವ 'ನಾಡು' ಎಂಬ ಆಡಳಿತ ಘಟಕಕ್ಕೆ ಮಧ್ಯಕಾಲದವರೆಗಿನ ತಮಿಳು, ಕನ್ನಡ, ತೆಲುಗು ಶಾಸನಗಳಲ್ಲಿ ಸಾಕಷ್ಟು ಉಲ್ಲೇಖಗಳು ದೊರೆಯುವುವು. ಇದರ ಬಗ್ಗೆ ಇತ್ತೀಚಿಗೆ ಆಳವಾದ ಸಂಶೋಧನೆಯನ್ನೂ ಮಾಡಲಾಗಿದೆ. ಆದರೆ ಈ ಪದವನ್ನು ಸೃಷ್ಟಿಸಿ ಜಾರಿಗೆ ತಂದವರು ಯಾರು ಮತ್ತು 'ನಾಡು' ಎಂಬ ಆಡಳಿತ ಘಟಕವು ಮೊದಲು ಪ್ರಾರಂಭವಾದದ್ದು ಎಲ್ಲಿ? ಎಂಬುದರ ಬಗ್ಗೆ ಮಾಡಿದ ನಿರ್ಣಯವು ನನಗೆ ನಿಲುಕುತ್ತಿಲ್ಲ. ಇತಿಹಾಸಕಾರರೆಲ್ಲರೂ ಈಗ ನಂಬಿರುವಂತೆ ಇದು ತಮಿಳುನಾಡಿನ ಆಡಳಿತ ಇತಿಹಾಸದಲ್ಲಿ ಹಾಸುಹೊಕ್ಕಾದ ಪದ. 'ನಾಡು', 'ನಾಟ್ಟು' ಪದಗಳು ಶಂಗಂ ಸಾಹಿತ್ಯದಲ್ಲಿ ಬರುವುವಾದರೂ[೩೧] ಕಾಲದ ಬಗ್ಗೆ ವಿವಾದವಿರುವ ಈ ಸಾಹಿತ್ಯಿಕ ಆಕರವನ್ನೇ ಆಧರಿಸಿ ಈ ಆಡಳಿತ ಘಟಕದ ಮೂಲವನ್ನು ನಿರ್ಧರಿಸುವುದು ಕಷ್ಟಸಾಧ್ಯ. ಮೊಟ್ಟಮೊದಲ ಬಾರಿಗೆ 'ನಾಡು' ಪದವನ್ನು ದಾಖಲಿಸಿದವರು ಎರುಮಿನಾಟವರು.[೩೨] ಈಗಾಗಲೇ ಕಂಡಂತೆ ಈ 'ಎರುಮಿನಾಡು' ಎಂಬುದು ತಮಿಳಗಂ ಉತ್ತರಕ್ಕಿದ್ದ ಮೈಸೂರು ಪ್ರದೇಶ. ಅವರನ್ನು 'ಕುಡನಾಡ' ಎರುಮೈಗಳೆಂದು ಶಂಗಂ ಕವಿ ಮಾಮೂಲಣಾರ್ ಒಂದೆಡೆ ತಿಳಿಸುವನು.[೩೩] ಈ ಕುಡನಾಡನ್ನು 'ಕೊಡಗು'ನಾಡು ಎಂದು ಗುರುತಿಸಲಾಗಿದೆ.

ಇದು ಏನೇ ಇರಲಿ, ದಕ್ಷಿಣ ಭಾರತದ ಇತಿಹಾಸದಲ್ಲಿ ಪ್ರಪ್ರಥಮ 'ನಾಡು' ಘಟಕವು ಮೈಸೂರು ಪ್ರದೇಶದಲ್ಲಿ ಸ್ಥಾಪನೆಗೊಂಡಿತ್ತೆಂಬುದನ್ನು ಇದು ಸ್ಪಷ್ಟಪಡಿಸುವುದು. ಇದಕ್ಕೆ ಬೆಂಬಲವನ್ನು ಆರಂಭಕಾಲದ ತಮಿಳು ಮತ್ತು ಕನ್ನಡ ಶಾಸನಗಳು ಒದಗಿಸುವುವು. ಸಿತ್ತನ್ನವಾಸಲ್ ಶಾಸನದ 'ಎರುಮಿನಾಡಿ'ನ ಉದಾಹರಣೆಯನ್ನು ಹೊರತುಪಡಿಸಿದರೆ, ಕ್ರಿ.ಪೂ. ೨ನೆಯ ಶತಮಾನದಿಂದ ಕ್ರಿ.ಶ. ೬ನೆಯ ಶತಮಾನದವರೆಗಿನ ಎಂಟುನೂರು ವರ್ಷಕಾಲಾವಧಿಯ ತಮಿಳುಬ್ರಾಹ್ಮೀ ಮತ್ತು ವಟ್ಟೆಲುತ್ತು ಶಾಸನಗಳಲ್ಲೆಲ್ಲಿಯೂ 'ನಾಟು, ನಾಟ್ಟು ನಾಡು' ಪದಗಳು ಕಾಣಿಸಿಕೊಳ್ಳುವುದಿಲ್ಲ ಎಂಬುದು ಗಮನಾರ್ಹ.[೩೪] ಅಂದರೆ ಶಂಗಂ ಕಾವ್ಯದಲ್ಲಿ ಬರುವ ಉಲ್ಲೇಖಗಳು ಅಂದಿನ ವಾಸ್ತವಿಕ ಆಡಳಿತ ಘಟಕಗಳನ್ನು ಪ್ರತಿನಿಧಿಸುತ್ತಿದ್ದರೆ ಅವುಗಳಲ್ಲಿ ಒಂದಾದರೂ ಐತಿಹಾಸಿಕ ದಾಖಲೆಗಳಲ್ಲಿ ಏಕೆ ಸ್ಥಾನಪಡೆದುಕೊಳ್ಳಲಿಲ್ಲ, ಎಂಬ ಪ್ರಶ್ನೆ ಉದ್ಭವಿಸುವುದಲ್ಲವೆ? ಕ್ರಿ.ಶ. ೬ನೆಯ ಶತಕದ ವಟ್ಟೆಲುತ್ತು ಶಾಸನವು ತಮಿಳುನಾಡಿನ ಪರಯನ್‌ಪತ್ತು ಗುಹಾಲಯದಲ್ಲಿದ್ದರೂ ಇದು 'ಪಾನಾಟ' ಜೈನ ಮುನಿಯ ಆರಾಧನಾ ನಿಶಿದಿಕೆಯಾಗಿರುವುದೆಂಬುದನ್ನು ನಿರ್ಲಕ್ಷಿಸುವಂತಿಲ್ಲ. ಎರುಮಿನಾಡಿನಂತೆ ಈ 'ಪಾನಾಟ'ವೂ (ಕಾವೇರಿ-ಕಬಿನೀ ಪ್ರದೇಶದ) ಪುನ್ನಾಟದ ಪರಿಸರದಲ್ಲಿತ್ತೆಂದು ಕಾಣುವುದು.

ತಮಿಳುನಾಡಿನ ಈ ಚಿತ್ರಕ್ಕೆ ಬದಲಾಗಿ ಕ್ರಿ.ಪೂ. ೨ನೆಯ ಶತಕದಿಂದ 'ನಾಡು' ಎಂಬ ಆಡಳಿತ (ರಾಜ್ಯ) ಘಟಕವು ಕನ್ನಡ ಪ್ರದೇಶದಲ್ಲಿ ಅವಿಚ್ಛಿನ್ನವಾಗಿ ಮುಂದುವರಿದಿತ್ತು ಎನ್ನಲು ಹಲ್ಮಿಡಿಯ ಪ್ರಪ್ರಥಮ ಕನ್ನಡ ಶಾಸನ ಸಹಾಯಕ್ಕೆ ಬರುವುದು.[೩೫] ಮೈಸೂರು ಪರಿಸರದಲ್ಲಿಯೇ ಇರುವ ಈ ಶಾಸನ 'ನರಿದಾವಿ[ಳೆ]ನಾಡ'ನ್ನು ಉಲ್ಲೇಖಿಸುವುದರಿಂದ, ಈ ಪದಬಳಕೆ ಮತ್ತು ಈ ಪದ ಸೂಚಿಸುವ ಆಡಳಿತಾ ಘಟಕಗಳು 'ತಮಿಳಗಂ'ಗಿಂತ ಹೆಚ್ಚು ಆಳವಾಗಿ ಇಲ್ಲಿ ಬೇರುಬಿಟ್ಟಿದ್ದವೆನ್ನಬಹುದು. ವಲಸೆ ಹೋದ ಜೈನರು ತಮ್ಮ ತವರೂರಿನಲ್ಲಿದ್ದ 'ನಾಡು' ಘಟಕಗಳನ್ನು ಸಿತ್ತನ್ನವಾಸಲ್‌ನಂತೆ ಉಳಿದೆಡೆ ತಮಿಳರಿಗೆ ಪರಿಚಯಿಸಿಕೊಟ್ಟಿರಲು ಸಾಧ್ಯವಿಲ್ಲವೇ, ಎಂಬ ಅನುಮಾನ ಬಾರದಿರದು. ಈ ಆಧಾರದ ಮೇಲೆ, ಕನ್ನಡ ಪ್ರದೇಶದಲ್ಲಿ ಹೆಚ್ಚು ಬೇರುಬಿಟ್ಟಿದ್ದ 'ನಾಟು=ನಾಡು' ಪದವನ್ನು ಕಾಲಾನಂತರದಲ್ಲಿ ತಮಿಳರು ಪಡೆದುಕೊಂಡರೆಂದೂ ಕ್ರಿ.ಶ. ೬ನೆಯ ಶತಮಾನದ ನಂತರ ಇದನ್ನು ತಮ್ಮದನ್ನಾಗಿಸಿಕೊಂಡು ಹೆಚ್ಚು ಪ್ರಸಾರಕ್ಕೆ ತಂದರೆಂದೂ ವಾದ ಮಾಡಲು ಅನುವು ದೊರೆಯುವುದು. ಇದು ಏನೇ ಇರಲಿ, ತಮಿಳರ ಪ್ರದೇಶವು 'ತಮಿಳಗಂ' (ತಮಿಳುನಾಡು ಎಂದಲ್ಲ) ಎಂದೇ ಪ್ರಚಾರದಲ್ಲಿದ್ದ ಕಾಲದಲ್ಲಿ 'ನಾಡು' ಪ್ರತ್ಯಯವನ್ನು ಹೊಂದಿದ 'ಕರು–ನಾಡು' ಘಟಕವು ಅದರ ಉತ್ತರದಲ್ಲಿ ಅಸ್ತಿತ್ವದಲ್ಲಿದ್ದುದನ್ನು ಮರೆಯುವಂತಿಲ್ಲ.[೩೬]

ಸಿತ್ತನ್ನವಾಸಲ್ ತಮಿಳುಬ್ರಾಹ್ಮೀ ಶಾಸನದಲ್ಲಿ ಉಲ್ಲೇಖಗೊಂಡಿರುವ 'ಇಳಯರ್' ಪದದ ಬಗ್ಗೆಯೂ ಒಂದು ಅಡಿಟಿಪ್ಪಣಿ ಅವಶ್ಯವೆನಿಸುವುದು. ಮಹಾದೇವನ್ ಈ ಪದವನ್ನು 'ಯುದ್ಧವೀರರ ಬಿರುದು' ಎಂದು ಅರ್ಥೈಸಿ, ಅವರನ್ನು 'ಇಳಾಮಕ್ಕಳ್' ಎಂದೂ ಕರೆಯಲಾಗುತ್ತಿತ್ತೆಂದು ತಿಳಿಸಿರುವರು.[೩೭] ಇದರಂತೆ 'ತೇಣ್ಕು-ಶಿಱು-ಪೊಶಿಲ್' ಎಂಬುದು ಬೆಟ್ಟದ ಹೊಸಲಿನಲ್ಲಿದ್ದ ಒಂದು 'ಪುರಾತನ ಆಡಳಿತಾ ಘಟಕ' ಎಂದು ಅವರು ಅರ್ಥೈಸಿರುವರು. ಆದರೆ ಈ ಯುದ್ಧವೀರರು ಯಾರು ಮತ್ತು ಆ ಬೆಟ್ಟ ಪರಿಸರವು ಯಾವುದಾಗಿತ್ತೆಂಬ ಪ್ರಶ್ನೆಗಳನ್ನು ಅವರು ಎತ್ತಿರುವುದಿಲ್ಲ. ಶಂಗಂ ಕಾವ್ಯದ ಆಧಾರದ ಮೇಲೆ ಈ ಪ್ರಶ್ನೆಗಳಿಗೆ ಉತ್ತರ ಕೊಡಬಹುದೆನಿಸುತ್ತದೆ. ಅಗನಾನೂಱಿನ ಕವಿ ಕಲ್ಲಾಡನಾರ್ ಒಂದೆಡೆ ಇಳೆಯಾರ್‌ರನ್ನು 'ಅನಕ್ಷರಸ್ಥರು' ಎಂಬ ಅರ್ಥದಲ್ಲಿ ಸಂಬೋಧಿಸಿರುವನು.[೩೮] ಇದನ್ನು ತಮಿಳು ಭಾಷೆಯನ್ನು ಅರಿಯದವರೆಂದು ಅರ್ಥೈಸಬಹುದೆಂದು ನಾನು ಹಿಂದೊಮ್ಮೆ ಸೂಚಿಸಿರುವುದನ್ನು ನೆನಪಿಸಿಕೊಡಬಯಸುವೆ.[೩೯] ಗಿರಿಪ್ರದೇಶದಲ್ಲಿ ನೆಲಸಿದ್ದ ತಮಿಳೇತರ ವೀರ(ಇಳವರ್)ಮನೆತನದ ಜೈನನೊಬ್ಬನು ಈ ಶಾಸನವನ್ನು ಕೊರೆಸಿದನೆಂದೂ ಅವನು ಮತ್ತಾರೂ ಆಗಿರದೆ ಘಟ್ಟದ ಆಚೀಚೆ ಚಾಚಿಕೊಂಡಿದ್ದ ಎರುಮಿನಾಟಿನವನು ಆಗಿದ್ದನೆಂದೂ ನಾವು ನಿರ್ಣಯಿಸಬಹುದು.

**ಆಕರ ಟಿಪ್ಪಣಿ:**

೧. ಅಧ್ಯಾಯ ೨.

೨. ಸ್ಮಿತ್, ವಿ.ಎ. *ಅರ್ಲಿ ಹಿಸ್ಟರಿ ಆಫ್ ಇಂಡಿಯ*, ಪು.೪೫೭.

೩. ತಿರುನಾವಕ್ಕರಸು, ಕೆ.ಡಿ. *ಚೀಫ್ಟನ್ಸ್ ಆಫ್ ದಿ ಸಂಗಂ ಏಜ್*, (ಮದ್ರಾಸು, ೧೯೯೪), ಪು.೭೭-೮೫.

೪. ಅಧ್ಯಾಯ ೨.

೫. *ಅಗನಾ*. ೧೦೭, ೨೧೩, ೨೫೩, ೨೮೧, ೨೯೫, ೩೭೫, ೩೮೧; *ಕುರುಂದೊಗೈ*. ೧೧; *ನಟ್ರಿಣೈ*. ೨೧೨; *ಪುಱನಾ*. ೩೭೮.

೬. *ನಟ್ರಿಣೈ* ೨೧೨.

೭. *ಅಗನಾ*. ೨೮೧ ಮತ್ತು *ಕುಱುಂದೊಗೈ*. ೩೭೨. ಎರಡನೆಯ ಕವನಕ್ಕೆ ನೋ. ಅಧ್ಯಾಯ ೯.

೮. *ಅಗನಾ*. ೨೯೫.

೯. *ಅದೇ*. ೩೭೫.

೧೦. *ಅದೇ*. ೨೧೩.

೧೧. *ಅಗನಾ*. ೧೦೭. ಅಲ್ಲದೆ ನೋ. *ಪುಱನಾ*. ೩೭೮.

೧೨. *ಅಗನಾ*. ೩೮೧.

೧೩. *ಅದೇ*. ೨೫೩.

೧೪. *ಪುಱನಾ*. ೮೦. ಅಲ್ಲದೆ ನೋ. ೭೪-೭೫.

೧೫. *ಪುಱನಾ*. ೧೮-೧೯, ೨೩-೨೬, ೭೨, ೭೬-೭೯; ೩೭೧-೩೭೨. ಸ್ವತಃ ಕವಿಯಾದ ನೆಡುಂಚೆಳಿಯನ್ ಒಂದು ಕವನದಲ್ಲಿ ಈ ಪ್ರಸಂಗವನ್ನು ವರ್ಣಿಸಿರುವನು (*ಪುಱನಾ*. ೭೨). ಈ ಘಟನೆಯನ್ನು ಇನ್ನೂ ಹಲವಾರು ಶಂಗಂ ಕವಿಗಳು ಪ್ರಸ್ತಾಪಿಸಿರುವರು. ಇವರಲ್ಲಿ ಕುಟುಪುಲವಿಯಾಣಾರ್ (*ಪುಱನಾ*. ೧೮-೧೯), ಕಲ್ಲಾಡನಾರ್ (*ಅದೇ*. ೨೩, ೨೫, ೩೭೧), ಮಾಂಗುಡಿ ಕಿಲಾರ್ (*ಅದೇ*. ೨೪, ೨೬, ೩೭೨), ಇಟ್ಟೈಕುಣ್ರಾ ಕಿಳಾರ್ (*ಅದೇ*. ೭೬-೭೯) ಹೆಸರಾರ್ಹರು.

೧೬. *ಅದೇ*. ೨೩, ೭೭.

೧೭. *ಪುಱನಾ*. ೭೨.

೧೮. *ಅದೇ*. ೧೯.

೧೯. *ಅಗನಾ*. ೩೬.

೨೦. *ಅಗನಾ*. ೧೭೭, ೨೫೩ ಅಲ್ಲದೆ ನೋ. *ಸಂಕಲನ* ೨೬, ಪು.೭೦.

೨೧. ಈ ವಿಷಯವನ್ನು ನನ್ನ ಗಮನಕ್ಕೆ ತಂದ ಡಾ॥ ಮೀನಾಕ್ಷಿ ಸುಂದರಮ್, ಐ.ಎ.ಎಸ್. ಇವರಿಗೆ ನಾನು ಉಪಕೃತ.

೨೨. ಶಿವರಾಜ ಪಿಳ್ಳೈ, ಕೆ.ಎನ್. *ಕ್ರೋನಾಲಾಜಿ ಆಫ್ ದಿ ಅರ್ಲೀ ತಮಿಳ್ಸ್* (ಮದ್ರಾಸು, ೧೯೩೨), ಪು. ೧೨೮-೨೯.

೨೩. ಮಾರ್, ಜಾ.ರಾ. *ದಿ ಏಯ್ಟ್ ಆಂಥೋಲಜೀಸ್...* (ಮದ್ರಾಸು, ೧೯೮೫), ಪು. ೧೮೬-೧೮೭.

೨೪. ಪುಅನಾ. ೧೦೫-೧೨೧; ೨೩೬.

೨೫. ಅದೇ. ೧೫೮; ಅಗನಾ. ೧೪೩; ಅದೇ. ೮೮, ೨೩೦.

೨೬. ಮಹಾದೇವನ್, ಐ. *ಅರ್ಲಿ ತಮಿಳ್ ಎಪಿಗ್ರಫಿ* (ಚೆನ್ನೈ, ೨೦೦೩), ಪು. ೧೧೯-೧೨೦, ಶಾ.ಸ. ೫೯.

೨೭. ಅಗನಾ. ೨೧೨; ಪತಿಱ್ರು. V.

೨೮. ಅಗನಾ. ೭೩, ಪುಅನಾ. ೨೭೩, ೩೦೩; ಅಗನಾ. ೭೨. 'ಎರಮೈ' ಪ್ರತ್ಯಯ ಹೊಂದಿದ ಕವಿಗಳಂತೆ 'ವಡುಗ' ಪ್ರತ್ಯಯವನ್ನು ಹೊಂದಿರುವ ಕೆಲವು ಶಂಗಂ ಕವಿಗಳನ್ನು ಗಮನಿಸಬಹುದು. ಇದಕ್ಕೆ ನಿದರ್ಶನ: ವಡಮವೆಣ್ಣಕ್ಕಮ್ ಪೆರುಂಶಾತ್ತನ್ (ಪುಅನಾ. ೧೨೫), ವಡುಮವಣ್ಣಕ್ಕನ್ ದಾಮೋದರನ್ (ಪುಅನಾ. ೧೭೨), ವಡನೆಡುಂತತ್ತಣಾರ್ (ಪುಅನಾ. ೧೭೯), ವಡುಮವೆಣ್ಣಕ್ಕನ್ ಬೇರಿಶಾತ್ತನ್ (ಪುಅನಾ. ೧೯೮). ನೋ. ಅಧ್ಯಾಯ ೯.

೨೯. ಮಹಾದೇವನ್, ಅದೇ., ಶಾ.ಸಂ. ೪೯, ಪು.೩೮೫.

೩೦. ಅದೇ. ಪು.೧೨೮.

೩೧. ವಿವರಕ್ಕಾಗಿ ನೋ. *ಸಂಕಲನ* ೨೩, ಪು.೪೫ರಿಂದ.

೩೨. ಮಹದೇವನ್, ಅದೇ. ಶಾ.ಸಂ. ೪೯, ಪು.೩೮೫.

೩೩. ಅಹನಾ. ೧೧೫, ೯೧.

೩೪. ಮಹಾದೇವನ್, ಅದೇ. ಶಾ.ಸಂ. ೧-೧೨೧ಗಳನ್ನು ಗಮನಿಸಿರಿ. 'ಕೂಱ್ರಂ', 'ಕೋಟ್ಟಂ', 'ನಾಡು' ಘಟಕಗಳನ್ನು ಉಲ್ಲೇಖಿಸುವ ಅತ್ಯಂತ ಪುರಾತನ ತಮಿಳು (ವಟ್ಟೆಳುತ್ತು) ಶಾಸನಗಳೆಂದರೆ ರಾಮನಾಡು ಜಿಲ್ಲೆಯ ಪೂಲಂಗುರುಚಿಯ ಮೂರು ಬಂಡೆಗಲ್ಲ ಶಾಸನಗಳು. ಇವನ್ನು ಕೊರೆಸಿದವನು ಶೇಂದಣ್ ಕೂಱ್ರಣ್ ಎಂಬ ಅರಸ. ಈತ ತಮಿಳಗಂ ವೇಳಿರನಾಗಿರದೆ, ತಮಿಳು ರಾಜ್ಯಗಳ ಮೇಲೆ ಧಾಳಿಮಾಡಿ, ತಮಿಳರ ಜೀವನವನ್ನು ಅಲ್ಲೋಲಕಲ್ಲೋಲಗೊಳಿಸಿದ ಕಳಭ್ರನಾಗಿದ್ದನೆಂಬ ಅಭಿಮತವಿದೆ. ಕಳಭ್ರರು ಬರಿ ಧಾಳಿಗಾರರಾಗಿರದೆ ಮಹಾಶೂರರೂ ಧರ್ಮಭೀರುಗಳೂ ಆಗಿದ್ದರೆಂಬುದನ್ನು ಈ ಶಾಸನದಿಂದ ಕಂಡುಕೊಳ್ಳಬಹುದು. ತಮಿಳುನಾಡಿನಲ್ಲಿ ದೇವಕುಳಗಳನ್ನು ಮತ್ತು ಬ್ರಹ್ಮಾದೇಯಗಳನ್ನು ನಿರ್ಮಿಸಿದ, ಕೂಱ್ರಂ, ಕೋಟ್ಟಂ, ನಾಡು, ಪುರ, ಊರು, ಮುಂತಾದ ಘಟಕಗಳನ್ನು ಸ್ಥಾಪಿಸಿದ ಶ್ರೇಯಸ್ಸು ಇವರಿಗೆ ಸಲ್ಲುವುದೆಂಬುದನ್ನೂ ಇಲ್ಲಿ ಗಮನಿಸಬಹುದು. ಸುಮಾರು ೬ನೆಯ ಶತಮಾನದ ಆರಂಭಕಾಲದ ಈ ಶಾಸನದಲ್ಲಿ ತಮಿಳಗಂ ಒಳಗೆ (ವನ್‌ಪಾಂಡಿನಾಡು, ವೆಣ್ಣಾಡು, ಕೂಡಲೂರುನಾಡು) ಮತ್ತು ಅದರ ಹೊರಗೆ ಇದ್ದ ನಾಡುಗಳನ್ನು (ಉ. ಕೊಂಗನಾಡು) ಉಲ್ಲೇಖಿಸಲಾಗಿದೆ. ತಮಿಳುನಾಡಿನ ಮೇಲೆ ಧಾಳಿಮಾಡಿದ ಕಳಭ್ರರು ಉತ್ತರ(ವಡುಗ)ದ ಕಡೆಯಿಂದ ಬಂದವರೆಂಬ ಅಭಿಪ್ರಾಯವಿದೆ - ಇವರು ಕನ್ನಡ ನಾಡಿನವರು (ಅದರಲ್ಲೂ ಕೊಂಗ-ಕೊಡವ ಪ್ರದೇಶದವರು) ಆಗಿದ್ದರೆನ್ನಲು ಇನ್ನೂ ಬಲವಾದ

ಸಾಕ್ಷ್ಯಾಧಾರಗಳು ದೊರೆಯಬೇಕಾಗಿದೆ. ನೋ. ವೈ. ಸುಬ್ಬರಾಯಲು, 'ದಿ ಪೂಲಂಗುರಿಚಿ ಇನ್‌ಸ್ಕ್ರಿಪ್ಷನ್', *ಸ್ಟಡೀಸ್ ಇನ್ ಚೋಳ ಹಿಸ್ಟರಿ*, (ಚೆನ್ನೈ, ೨೦೦೧), ಪು. ೧–೬.

೩೫. *ಎಕ.* ೯ (ಮೈಸೂರು, ೧೯೯೦), ಬೇಲೂರು ೨೩೬.

೩೬. ಅಧ್ಯಾಯ ೫.

೩೭. ಮಹದೇವನ್, *ಅದೇ.* ಪು.೩೮೫, ಅ.ಟಿ. ೯.

೩೮. *ಅಗನಾ.* ೮೩.

೩೯. ಅಧ್ಯಾಯ ೩. ಅ.ಟಿ. ೨೨.

ಕ್ರಿ.ಶ. ೩ನೆಯ ಶತಮಾನಕ್ಕಿಂತ ಮುಂಚಿನ ಕನ್ನಡಭಾಷೆ ಮತ್ತು ಲಿಪಿಯ ಬಗ್ಗೆ ನಮಗೆ ಅಸ್ಪಷ್ಟ ಕಲ್ಪನೆ ಮಾತ್ರ ಇದೆ. ಈ ಕಾಲಾವಧಿಯಲ್ಲಿ ನಾಯಕಸ್ಥಾನಕ್ಕೇರಿದ್ದ ಸ್ಥಳೀಯರೆಲ್ಲರೂ ಮೌಖಿಕವಾಗಿಯೇ ತಮ್ಮ ವ್ಯವಹಾರವನ್ನು ನಿರ್ವಹಿಸಿಕೊಳ್ಳುತ್ತಿದ್ದುದರಿಂದ ಕನ್ನಡವನ್ನಾಗಲೀ ಇನ್ನಾವ ಭಾಷೆಯನ್ನಾಗಲೀ ಬಳಸುವ ಆವಶ್ಯಕತೆ ಅವರಿಗೆ ಉಂಟಾಗಲಿಲ್ಲ. ಲಿಖಿತ ವ್ಯವಹಾರದ ಆವಶ್ಯಕತೆಯನ್ನು ಅವರು ಅರಿತುಕೊಂಡದ್ದು ತಮ್ಮ ಅಂತಸ್ತನ್ನೂ ವಂಶಾವಳಿಯನ್ನೂ ಉತ್ತಮಪಡಿಸಿಕೊಂಡು, ತಮ್ಮ ಅರಸೊತ್ತಿಗೆಯನ್ನು ಅಧಿಕೃತಗೊಳಿಸಿಕೊಳ್ಳಬೇಕೆಂಬ ದಾಹ ಉಂಟಾದಾಗ. ಇದನ್ನು ಪೂರೈಸಿಕೊಳ್ಳಲು ಅವರು (ಅಹಿಚ್ಛತ್ರ ಮುಂತಾದ) ದೂರದೇಶದ ವಿದ್ವಾಂಸರನ್ನು ಬರಮಾಡಿಕೊಂಡು, ಪೋಷಣೆ ಒದಗಿಸಿ, ಇಲ್ಲಿ ನೆಲೆಸಲು ಅವರ ಮನವೊಲಿಸ ಬೇಕಾಯಿತೆಂದು ಕಾಣುವುದು. ಈ ಪ್ರಕ್ರಿಯೆ ಆರಂಭಕಾಲದ ಕದಂಬರ ಶಾಸನಗಳಲ್ಲಿ ಹೆಚ್ಚು ಸ್ಫುಟಗೊಂಡಿರುವುದು... ಕೆಲವು ಶತಮಾನಗಳ ಕಾಲ ಸಮುದ್ರ ಸಂಪತ್ತಿನ ಮೇಲೆಯೇ ಅವಲಂಬನ ಹೊಂದಿದ್ದ ಕದಂಬರನ್ನು, ಇಲ್ಲಿ ಬ್ರಾಹ್ಮಣೋತ್ತಮ ಮತ್ತು ಕ್ಷತ್ರಿಯಶ್ರೇಷ್ಠ ಎಂದು ಹೊಗಳಲು ಕಾರಣ ಫಲದಾಯಿಗಳು ಬ್ರಾಹ್ಮಣರಾಗಿದ್ದುದು ಎನಿಸುವುದು. ಅವರಿಗೆ ಭವ್ಯ ವಂಶಾವಳಿಯನ್ನೂ ಕುಲ-ಗೋತ್ರವನ್ನೂ ಒದಗಿಸಿ, ಗುಪ್ತ ಮುಂತಾದ ಸಾಮ್ರಾಟರೊಡನೆ ಮಾಡಿದ ಅವರ ನೆಂಟಸ್ತಿಕೆಯನ್ನು ಕೊಂಡಾಡುವುದು ಅವರ ಮುಖ್ಯ ಉದ್ದೇಶವಾಗಿತ್ತೆಂಬ ಭಾವನೆ ಬರುವುದು. ಆರಂಭಕಾಲದ ಕಡಲ ಮೇಲಿನ ಶ್ರಮಜೀವನವನ್ನು ಎಷ್ಟು ಸಾಧ್ಯವೋ ಅಷ್ಟು ಮಂದಗೊಳಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಅವರು ತೋಡಿಸಿದ ಕೆಲವು ಕೆರೆ-ತಟಾಕಗಳ ಪ್ರಸ್ತಾಪ ಬಿಟ್ಟರೆ, ಬಹುಸಂಖ್ಯಾತ ಸಮಾಜಕ್ಕೆ ಸಂಬಂಧಪಟ್ಟ ಅವರ ಜನಪರ ಕಾರ್ಯಗಳ ಪ್ರಸ್ತಾಪ ಇಲ್ಲವೇ ಇಲ್ಲವೆನ್ನುವಷ್ಟು ಅಪರೂಪವಾಗಿದೆ. ಅಂದರೆ ಇಲ್ಲಿ ಬಳಸಿದ ಭಾಷೆ ಬಹುಸಂಖ್ಯಾತ ಸಮಾಜಕ್ಕೆ ಸಂಬಂಧಿಸಿದ್ದಾಗಿರದೆ ಆಶ್ರಿತ ಬ್ರಾಹ್ಮಣ ವಿದ್ವಾಂಸರಿಗೆ ಸಂಬಂಧಪಟ್ಟದ್ದಾಗಿದೆಯೆಂದು ಅರ್ಥ. ಈ ಕಾಲದಲ್ಲಿ ಸ್ಥಳೀಯ ಭಾಷೆಯನ್ನೂ ಜನಪದ ಸಂಸ್ಕೃತಿಯನ್ನೂ ರಕ್ಷಿಸಿಕೊಂಡು ಬಂದವರು ಅರಸರಲ್ಲ, ಜನಸಾಮಾನ್ಯರು. ರಾಜ್ಯದ ವ್ಯವಹಾರ ವೃದ್ಧಿಸಿ ಸಮಾಜದ ಎಲ್ಲ ವರ್ಗಗಳೊಡನೆ ಒಂದಿಲ್ಲೊಂದು ಬಗೆಯಲ್ಲಿ ಸ್ಪಂದಿಸಬೇಕಾದ ಅನಿವಾರ್ಯತೆ ಉಂಟಾದಾಗ ಮಾತ್ರ ಈ ಕಾಲದ ಆಳರಸರು ಜನನುಡಿಯಲ್ಲಿ ವ್ಯವಹರಿಸಲು ಆಸಕ್ತರಾದರೆಂದು ಕಾಣುವುದು.

೭

ಅಧ್ಯಾಯ-೭

# ಮುಸುಕು ಮುಂಜಾವಿನ ಕನ್ನಡ ನಾಡು-ನುಡಿ

## ೧. ಕದಂಬರು ಮತ್ತು ಪುನ್ನಾಟರು

ಇತಿಹಾಸದ ಮುಸುಕು ಮುಂಜಾವಿನ ಕಾಲದ ಕರ್ನಾಟಕ ಎರಡು ವಿಭಾಗಗಳಲ್ಲಿ ಹಂಚಿಕೊಂಡಿತ್ತು: ಒಂದು, ಮೌರ್ಯ-ಪ್ರಾಕೃತ ಪ್ರಭಾವಕ್ಕೊಳಗಾಗಿದ್ದ (ಕಲಬುರ್ಗಿಯಿಂದ ಚಿತ್ರದುರ್ಗ ಜಿಲ್ಲೆವರೆಗಿನ) ಉತ್ತರಾರ್ಧ; ಇನ್ನೊಂದು, ಮೌರ್ಯ ಪ್ರಭಾವದಿಂದ ಹೊರಗಿದ್ದು ತಮಿಳರೊಂದಿಗೆ ಒಂದಿಲ್ಲೊಂದು ಬಗೆಯಲ್ಲಿ ಸ್ಪಂದಿಸುತ್ತಿದ್ದ ದಕ್ಷಿಣಾರ್ಧ. ಉತ್ತರ ಘಟಕದ ಬೃಹತ್ ಶಿಲಾಯುಗದ ಜನಾಂಗಗಳ ಮೇಲೆ ಅಧಿಕಾರ ಸಾಧಿಸಿ ಕೊಂಡವರಲ್ಲಿ ಮೌರ್ಯರಲ್ಲದೆ ಶಾತವಾಹನರು ಪ್ರಧಾನರಾಗಿದ್ದರು. ಇವರ ಒತ್ತಡಕ್ಕೆ ಇಲ್ಲವೆ ಒಂದಿಲ್ಲೊಂದು ಬಗೆಯ ಅನಿವಾರ್ಯತೆಗೆ ಒಳಗಾಗಿ ಈ ಜನಾಂಗಗಳು ಬ್ರಾಹ್ಮೀಲಿಪಿ ಮತ್ತು ಪ್ರಾಕೃತ ಭಾಷೆಯನ್ನು ವ್ಯವಹಾರ ಮಾಧ್ಯಮವನ್ನಾಗಿ ಮಾಡಿಕೊಂಡವು. 'ದಕ್ಷಿಣಬ್ರಾಹ್ಮೀ' ಪ್ರಭೇದವೊಂದು ಇಲ್ಲಿ ಅಸ್ತಿತ್ವದಲ್ಲಿದ್ದು, ಕಲಬುರ್ಗಿ(ಸನ್ನತಿ)ಯಿಂದ ಚಿತ್ರದುರ್ಗ(ಚಂದ್ರವಳ್ಳಿ), ಬಳ್ಳಾರಿ(ಹಿರೇಹಡಗಲಿ) ಉತ್ತರಕನ್ನಡ (ಬನವಾಸಿ)ದವರೆಗೂ ಅದು ಬಳಕೆಯಲ್ಲಿದ್ದುದನ್ನು ಆರಂಭಕಾಲದ ಶಾಸನಗಳು ತಿಳಿಸುವುವು. ಅಲ್ಲದೆ, ಈ ಕಾಲದ ಶಾತವಾಹನ ಹಾಲ ಪ್ರಾಕೃತದಲ್ಲಿ ರಚಿಸಿದ ಕೃತಿಯೊಂದು *(ಸತ್ತಸಯೀ)* ಅಂದಿನ ಸಾಹಿತ್ಯ ಮಾಧ್ಯಮವನ್ನು ಪರಿಚಯಿಸುವುದು.

ಈ ಬಗೆಯ ಚಿತ್ರಣ ದಕ್ಷಿಣ ಘಟಕದಲ್ಲಿ ದೊರೆಯದಿದ್ದರೂ ಇಲ್ಲಿಯ ಬೃಹತ್ ಶಿಲಾಯುಗದ ಜನಾಂಗಗಳು ತಮಿಳಿಗಿಂತ ಭಿನ್ನವಾದ 'ವಡುಗ' ಭಾಷೆಯನ್ನು ಬಳಸುತ್ತಿದ್ದರೆಂಬುದನ್ನು ಶಂಗಂ ಸಾಹಿತ್ಯ ಸ್ಪಷ್ಟಗೊಳಿಸಿರುವುದು. ಇವುಗಳಲ್ಲಿ ಕೆಲವಾದರೂ ಬ್ರಾಹ್ಮೀಯನ್ನು ಪರಿಚಯಿಸಿಕೊಂಡಿದ್ದ ಸಾಧ್ಯತೆಯಿದೆ, ಆದರೆ ಸ್ಪಷ್ಟ ಆಧಾರಗಳಿಲ್ಲ. ಜೈನ ಧರ್ಮದೆಡೆ ವಾಲಿದ್ದ 'ಎರುಮೈ', 'ಪುನ್ನಾಟ' ಮುಂತಾದವರು ಬ್ರಾಹ್ಮೀಲಿಪಿಯನ್ನು ತಮಿಳುನಾಡಿನ ಗುಹಾಲಯಕ್ಕೆ ಕೊಂಡೊಯ್ದ ಸಾಧ್ಯತೆ ಇಲ್ಲದಿಲ್ಲ. ವಿರಳವಾಗಿಯಾದರೂ ಬೌದ್ಧರ ನೆಲೆಗಳು ಇಲ್ಲಿದ್ದು ಬ್ರಾಹ್ಮೀ ಮತ್ತು ಪ್ರಾಕೃತ ಬಳಕೆಯೂ ಇಲ್ಲಿದ್ದವೆನ್ನಲು ಬೆಂಗಳೂರು ಬಳಿಯ ರಾಜಘಟ್ಟದಲ್ಲಿ ಬೆಳಕು ಕಂಡ, ಕ್ರಿ.ಶ. ಸು. ೪-೫ನೆಯ ಶತಮಾನದ ಕುರುಹುಗಳು ಸಾಕ್ಷಿ ಒದಗಿಸುವುವು.[1] ಇದು ಏನೇ ಇರಲಿ, ಕನ್ನಡ ಭಾಷೆಯ ಮೊದಲ ಮೊಳಕೆಗಳು ಒಡೆದದ್ದು ಪ್ರಾಕೃತ ಪ್ರಭಾವದ ಹೊರವಲಯದಲ್ಲಿದ್ದ ದಕ್ಷಿಣ

ಕರ್ನಾಟಕದಲ್ಲಾಗಲಿ ಮೌರ್ಯ-ಶಾತವಾಹನರ ಪ್ರಭಾವಕ್ಕೊಳಗಾಗಿದ್ದ ಉತ್ತರ ಕರ್ನಾಟಕದಲ್ಲಲ್ಲ ಎಂಬುದರ ಬಗ್ಗೆ ಅನುಮಾನವಿಲ್ಲ. ಇದಾದ ಹಲವು ಶತಮಾನಗಳ ನಂತರ ಮಾರ್ಗಕಾರನು ಬೆಳ್ವೊಲ ಪರಿಸರದಲ್ಲಿ ತಿರುಳ್ಗನ್ನಡವನ್ನು ಗುರುತಿಸಿದ್ದು ಮತ್ತು ಪುಲಿಗೆರೆ-ಬನವಾಸಿಯಲ್ಲಿ ಕನ್ನಡದ ಕಂಪನ್ನು ಪಂಪ ಸ್ವಾದಿಸಿದ್ದು ಬೇರೆ ಮಾತು.

## ಮೈಸೂರು ಪ್ರದೇಶದ ಆದಿ ಕನ್ನಡಿಗರು:

ತಮ್ಮ ದಕ್ಷಿಣದ ರಾಜಧಾನಿಯನ್ನು ಸುವರ್ಣಗಿರಿಯಲ್ಲಿ ಮೌರ್ಯರು ಸ್ಥಾಪಿಸಿಕೊಳ್ಳುತ್ತಿದ್ದ ಕಾಲದಲ್ಲಿ ಇಂದಿನ ಮೈಸೂರು ಪ್ರದೇಶ ಕೆಲವು ಸ್ವತಂತ್ರ ಜನಪದಗಳ ಅಂಕಿತಕ್ಕೊಳಗಾಗಿತ್ತು. ಇವು ಮೌರ್ಯರೊಡನೆ ಘರ್ಷಣೆಗಿಳಿಯುತ್ತಿದ್ದವೆಂಬುದಕ್ಕಾಗಲೀ ಅಶೋಕ ಮಹಿಷಮಂಡಳಕ್ಕೆ ಕಳಿಸಿದ ಧರ್ಮಪ್ರಸಾರಕರನ್ನು ಪ್ರತಿರೋಧಿಸುತ್ತಿದ್ದರೆಂಬುದಕ್ಕಾಗಲೀ ಆಧಾರಗಳಿಲ್ಲ. ಅಂಥವರಲ್ಲಿ ಮೊದಲಿಗರು ಎರುಮೈನಾಯಕರು - ಅಥವಾ ಮಹಿಷಮಂಡಲದ ಒಡೆಯರು. ಕಾವೇರಿಯಾಚೆಯ ರಾಜಮಂಡಲದಲ್ಲಿ ತಮ್ಮ ಸ್ಥಾನ ಗಳಿಸಿಕೊಳ್ಳುವ ಹೆಬ್ಬಯಕೆ ಹೊಂದಿದ್ದ ಎರುಮೈಗಳು ತುರುಗೋಳ್ ಕದನ ಪ್ರಚಂಡರಾಗಿದ್ದರೆಂಬುದನ್ನು ಕಂಡಿದ್ದೇವೆ.[೨] ಇಂತಹ ಚಿಕ್ಕಪುಟ್ಟ ಕದನಗಳಲ್ಲಿಯೇ ಸಾರ್ಥಕತೆಯನ್ನು ಕಂಡುಕೊಳ್ಳದೆ ಇವರು ತಮಿಳುನಾಡಿನ ಮೂವರು ಕಿರೀಟಧಾರಿ ಅರಸರಾದ ಪಾಂಡ್ಯ, ಚೋಳ ಮತ್ತು ಚೇರರನ್ನು ಕೆಣಕಲೂ ಹಿಂಜರಿಯಲಿಲ್ಲವೆಂಬುದನ್ನೂ ಗಮನಿಸಿದ್ದೇವೆ. ಪಾಂಡ್ಯರಾಜನ ಮೇಲೆ ದಂಡೆತ್ತಿ ಹೋದ ಅಂದಿನ ಏಳು ಪ್ರಧಾನ ರಾಜಶಕ್ತಿಗಳಲ್ಲಿ ಇವರೂ ಒಬ್ಬರಾಗಿದ್ದರೆಂಬುದನ್ನೂ 'ಎರುಮೈ ನಲ್‌ನಾಡು'ವಿನ ಗಡಿ ಒಂದು ಕಾಲದಲ್ಲಿ 'ಅಯಿರಿ' ನದಿಯಿಂದ ಗುರುತಿಸಲ್ಪಟ್ಟಿತ್ತೆಂದು ತಿಳಿದುಬಂದಿರುವುದು.[೩] ಈ ನದಿಗೂ ಐವಾರ್ ಬೆಟ್ಟ ಪ್ರದೇಶಕ್ಕೂ ಏನಾದರೂ ಸಂಬಂಧವಿದ್ದರೆ, ಇಂದಿನ ದಿಂಡಿಗಲ್ ಜಿಲ್ಲೆಯ ವಾಯವ್ಯ ಪ್ರದೇಶಕ್ಕೆ ಇವರ ಅಧಿಕಾರ ವಿಸ್ತರಿಸಿತ್ತೆನ್ನಬೇಕಾಗುವುದು. ಅಲ್ಲದೆ ಇವರನ್ನು ಕುಡನಾಡ-ಎರುಮೈಗಳೆಂದು ಕವಿ ಮಾಮೂಲಣಾರ್ ಗುರುತಿಸಿರುವುದರಿಂದ ಇವರು ಕೊಡಗಿನ ಒಡೆಯರೂ ಆಗಿದ್ದರೆನ್ನಬೇಕಾಗುವುದು.[೪] ಅಂದರೆ ಎರುಮೈನಾಯಕರ ಅಧಿಕಾರ ಕ್ಷೇತ್ರವು ಒಂದೆಡೆ ಕೊಡಗಿಗೆ ಇನ್ನೊಂದೆಡೆ ದಿಂಡಿಗಲ್ ವಾಯವ್ಯಭಾಗಕ್ಕೆ ವಿಸ್ತರಿಸಿತ್ತೆಂಬುದು ಮತ್ತು ಅವರ ಕಾರ್ಯಕ್ಷೇತ್ರವು ತಮಿಳುನಾಡಿನ ತಂಜಾವೂರನ್ನು ತಲುಪಿತ್ತೆಂಬುದು ಸ್ಪಷ್ಟಗೊಂಡಿರುವುದು.

ರಾಜಕೀಯ ಕ್ಷೇತ್ರದಲ್ಲಿ ಮಾತ್ರವಲ್ಲದೆ ಸಾಹಿತ್ಯಕ್ಷೇತ್ರದಲ್ಲಿಯೂ ತಮಿಳಗಂನ ಪ್ರಧಾನ ಅರಸರನ್ನು ಸರಿಗಟ್ಟಲು ಎರುಮೈ ನಾಯಕರು ಪ್ರಯತ್ನಪಟ್ಟರೆಂಬುದಕ್ಕೆ ಅವರ ಪೋಷಣೆಯಲ್ಲಿದ್ದ ಕವಿಗಳನ್ನು ನಿದರ್ಶಿಸಲಾಗಿದೆ.[೫]

ಸ್ವತಃ ಎರುಮೈನಾಯಕರ ಇಲ್ಲವೆ ಅವರ ಕೆಲವು ಅಧಿಕಾರ ವರ್ಗದವರ ಒಲವು ಜೈನಧರ್ಮದೆಡೆ ವಾಲಿತ್ತೆಂದು ತೋರುವುದು. ಎರುಮೈನಾಡಿನ ಕುಮಟೂರು (ಕುಂಬಳೂರು > ಕುಂಬ್ಳೂರು) ಗ್ರಾಮದ ಕವಟಿ(ಗೌಡತಿ)ಯೊಬ್ಬಳ ಬಗ್ಗೆ ಬರೆಸಿದ ಕ್ರಿ.ಪೂ. ೧ನೆಯ ಶತಮಾನದ ಶಾಸನದಿಂದ ಇದು ಸ್ಪಷ್ಟಗೊಳ್ಳುವುದು. ಸಮಾಧಿವ್ರತಾಚರಣೆಗೆ ಸಿದ್ಧಳಾಗಿ ತಮಿಳುನಾಡಿನ ಸಿತ್ತನ್ನವಾಸಲ್ ಗುಹಾಲಯವನ್ನು ತನ್ನ ದೇಹದಂಡನೆಗೆ ಆಯ್ಕೆ ಮಾಡಿಕೊಂಡಾಗ ಅವಳ ಅನುಕೂಲಕ್ಕಾಗಿ ಶಿಲಾಧಿಷ್ಠಾನವನ್ನು ಕೊರೆಸಿಕೊಟ್ಟ ವಿವರ ಈ ಶಾಸನದಲ್ಲಿ ಬರುವುದು.[೬]

ಸು. ೫ನೆಯ ಶತಮಾನದ ಕದಂಬರ ಶಾಸನಗಳಲ್ಲಿ 'ಎರುಮೈ' ಪದವು ಸಂಸ್ಕೃತೀಕರಣಗೊಂಡು 'ಮಹಿಷ-ವಿಷಯ'ವೆಂದು ರೂಪಾಂತರ ಪಡೆದು ಇದೇ ಹೆಸರಿನಲ್ಲಿ ೮-೯ನೆಯ ಶತಮಾನದ ಗಂಗರ ಶಾಸನಗಳಲ್ಲಿಯೂ ಈ ರಾಜ್ಯಘಟಕ ಪ್ರಸಾರಗೊಂಡಿತೆನ್ನಬಹುದು.[೭] ಇದು ಏನೇ ಇರಲಿ, ಮಧ್ಯಕಾಲದವರೆಗೂ ಎರುಮೈ ಪದವು ಬಳಕೆಯಲ್ಲಿತ್ತೆನ್ನಲು ೧೧ನೆಯ ಶತಮಾನದ ಚೋಳ ಶಾಸನದಲ್ಲಿ ಬರುವ 'ಎರುಮೈ ನಾಲ್ ಕಾಮುಂಟ'ನ ಪ್ರಸ್ತಾಪ ಸಾಕು.[೮]

**ಆದಿ ಕದಂಬರು ಮತ್ತು ಶಂಗಂ ಸಾಹಿತ್ಯ:**

ಬನವಾಸಿಯನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು, ದಖ್ಖಣದ ಪ್ರಧಾನ ಅರಸರುಗಳಲ್ಲೊಬ್ಬರಾಗುವುದಕ್ಕಿಂತ ಸುಮಾರು ಅರ್ಧ ಸಹಸ್ರಮಾನ ಕಾಲ ಮುಂಚೆ, ಅರಬ್ಬೀ ಸಮುದ್ರ ಮತ್ತು ಹಿಂದೂ ಮಹಾಸಾಗರದಲ್ಲಿ ಕದಂಬರು ತಮ್ಮ ಅಧಿಕಾರವನ್ನು ಪ್ರತಿಪಾದಿಸಿಕೊಳ್ಳತೊಡಗಿದ್ದರೆಂಬುದನ್ನು ಶಂಗಂ ಸಾಹಿತ್ಯದಿಂದ ತಿಳಿಯಬಹುದು. *ಪದಿಟ್ರುಪತ್ತು* ಮತ್ತು *ಅಗನಾನೂಱಿ*ನಲ್ಲಿ ಮಾತ್ರವಲ್ಲದೆ *ಶಿಲಪ್ಪದಿಗಾರಂ* ನಲ್ಲಿ ಕದಂಬ(ಕಟಂಬು)ರೆಂಬ ಸಮುದ್ರ ನಾಯಕರ ವಿರುದ್ಧ ಹೋರಾಡಿದ ಚೇರರಸರ ಬಗ್ಗೆ ಕವಿಗಳಾದ ಕುಮಟ್ಟೂರ್ ಕಣ್ಣನಾರ್, ಮಾಮೂಲಣಾರ್ ಮತ್ತು ಇಳಂಗೋ ಅಡಿಗಳ್ ವಿವರ ಕೊಟ್ಟಿರುವರು.[೯] ನೆಡುಂಚೇರಲ್ (ಅವನ ಮತ್ತೊಂದು ಹೆಸರು ಅದನ್ ನಾರ್ಮುಡಿ ಚೇರಲ್) ಮತ್ತು ಪೆರುಂಚೇರಲ್ ಶೆಂಗುಟ್ಟುವನ್ ಎಂಬ ಚೇರ ಅರಸರನ್ನು ಹೆಸರಿಸುವ ಈ ಕವಿಗಳು ಅವರನ್ನು ಎದುರಿಸಿ ನಿಂತ ಕದಂಬ ನಾಯಕರಾರನ್ನು ಹೆಸರಿಸುವುದಿಲ್ಲ, ಆದರೆ ಈ ಕಾದಾಟ ಒಬ್ಬ ಚೇರರಸನ ಕಾಲಕ್ಕೆ ಸೀಮಿತಗೊಳ್ಳದೆ ಬಹುಕಾಲ ಮುಂದುವರಿದಿತ್ತೆನ್ನುವುದರಲ್ಲಿ ಅನುಮಾನವಿಲ್ಲ.

ಇವರ ಕುಲಸಂಕೇತವಾದ ಕದಂಬ ವೃಕ್ಷವು 'ಕಡಂಪಿನ್ ಪೆರುವಾಯಿಲ್' (ಅಂದರೆ ಕದಂಬನ ದೊಡ್ಡ ಅರಮನೆಯ), ದ್ವಾರಮಂಟಪದ ಬಳಿ ಇದ್ದುದನ್ನು ಮತ್ತು ಅದರಲ್ಲಿ

ಅರಳುವ ಪುಷ್ಪಗಳು ರಥಚಕ್ರಾಕಾರವನ್ನು ಹೋಲುತ್ತಿದ್ದವೆಂಬುದನ್ನು *ಪದಿಟ್ರುಪತ್ತು*ವಿನಲ್ಲಿ ವಿವರಿಸಲಾಗಿದೆ. ಈ ವೃಕ್ಷವನ್ನು ಬೇರುಸಹಿತ ಬುಡಮೇಲುಮಾಡಿ ನೆಡುಂಚೇರಲ್ ಆದನ್ ನಾಶಪಡಿಸಿದನೆಂದು ಹೇಳಿರುವುದಲ್ಲದೆ, ಇದರ ಕಾಂಡದಿಂದ ನಗಾರಿಯೊಂದನ್ನು ಸಿದ್ಧಪಡಿಸಿಕೊಂಡ ಅವನು ತನ್ನ ಅಗ್ಗಳಿಕೆಯನ್ನು ಮೆರೆದನೆಂದು *ಪದಿಟ್ರುಪತ್ತು* ಮತ್ತು *ಅಗನಾನೂಱು*ವಿನಲ್ಲಿ ವರ್ಣಿಸಲಾಗಿದೆ. *ಶಿಲಪ್ಪದಿಗಾರಂ* ಕವಿ ಕೂಡಾ ಈ ಘಟನೆಯನ್ನು ಸ್ಮರಿಸುವನು.[೧೦]

**ಕಡಲ್ಗಳ್ಳರು? ಸಮುದ್ರಾಧಿಪತಿಗಳು? :**

ಚೇರ-ಕದಂಬರ ಈ ಕಾದಾಟ ನಡೆಯುತ್ತಿದ್ದುದು ಸದಾ ಸಮುದ್ರದ ಮೇಲೆ, ನೆಲದ ಮೇಲಲ್ಲ. ಕಡಲ ದಾಳಿ ಕೈಕೊಂಡು ಒಂದು ದ್ವೀಪದಲ್ಲಿ ಶತ್ರುವಿನ ವಿರುದ್ಧ ನೆಡುಚೇರಲ್ ಹೋರಾಡಿದನೆಂದು *ಪದಿಟ್ರುಪತ್ತು* ತಿಳಿಸುವುದು. 'ಸಮುದ್ರ ಕಾಳಗ ತುಂಬಾ ದುಸ್ತರ ಎಂಬ ಮಾತನ್ನು ಶೆಂಗುಟ್ಟುವನ್ ಸುಳ್ಳುಮಾಡಿದನು' ಎಂದು ಇಲ್ಲಿ ಘೋಷಿಸಲಾಗಿದೆ.[೧೧] ಅದನ್ ರವಿಮಂಡಲದವರೆಗೆ ತನ್ನ ಹಡಗು ಪಡೆಯನ್ನು ಕೊಂಡೊಯ್ಯಬಲ್ಲವನಾಗಿದ್ದನೆಂದು ಕವಿ ಮಾಮೂಲಣಾರ್ ವರ್ಣಿಸಿರುವನು.[೧೨] 'ಕಡಲ್ಗಳ್ಳರಾದ ಕದಂಬರನ್ನು ನಾಶಮಾಡಿದ ಅರಸ [ಶೆಂಗುಟ್ಟುವನ್]ನ ಕೀರ್ತಿ [ಸರ್ವದಿಕ್ಕಿಗೂ] ಹರಡಲಿ',[೧೩] ಎಂಬ ಆಶಯವನ್ನು ವ್ಯಕ್ತಪಡಿಸಿದ *ಶಿಲಪ್ಪದಿಗಾರಂ* ಕವಿ, ಅವನ ಪ್ರತಾಪವನ್ನು ಉತ್ತರದ ಅರಸರಿಗೆ ತಿಳಿಸುತ್ತಾ 'ಕಪ್ಪ ತಂದೊಪ್ಪಿಸಿ ಕರುಣೆ ಗಳಿಸಿಕೊಳ್ಳಿ, ಇಲ್ಲವೇ ಕಡಂಬುವಿನ ಅನುಭವವನ್ನು ನೆನಪಿಸಿಕೊಳ್ಳಿ' ಎಂದು ಎಚ್ಚರಿಕೆ ಕೊಡುವನು.[೧೪] ಇಲ್ಲಿ ಉಲ್ಲೇಖಿಸಿರುವ ಉತ್ತರದ ಅರಸರಲ್ಲಿ ಕೊಂಗಣರ್, ಕರುನಾಡರ್, ಗಂಗರ್, ಆರ್ಯರ್, ನೂಱ್ರುವರ್ ಕಣ್ಣರ್ ಸೇರಿದ್ದರು.[೧೫]

ಚೇರರಸನು ತನ್ನ ರಾಜಧಾನಿ ಪಟ್ಟಣ ವಞ್ಜ(ಇಂದಿನ ಕರೂರು)ಯಿಂದ ಸಾಗರ ಪ್ರವೇಶಿಸಿ, ಕದಂಬರನ್ನು ನಾಶಮಾಡಿದನೆಂದು ಶಿಲಪ್ಪದಿಗಾರಂ ತಿಳಿಸುವುದು.[೧೬] ಅಂದರೆ ತನ್ನ ರಾಜಧಾನಿಯ ಬಳಿಯೇ ಲಂಗರು ಹಾಕಿದ್ದ ಕದಂಬನನ್ನು ಅಲ್ಲಿಂದ ಹಿಂದೂಡಲು ಅವನು ಸಮುದ್ರ ಕಾಳಗಕ್ಕಿಳಿಯಬೇಕಾಯಿತೆಂದು ಇದನ್ನು ಅರ್ಥೈಸಬಹುದು. ಆದರೆ ಈ ಕದನ ಸಂಭವಿಸಿದ ದ್ವೀಪವನ್ನು ಗುರುತಿಸಲು ಸಾಧ್ಯವಾಗುತ್ತಿಲ್ಲ. ಇದು ಕರಾವಳಿಗಂಟಿಕೊಂಡಿದ್ದ ಒಂದು ಗಡ್ಡೆಯಾಗಿತ್ತೋ 'ಕದಂಬದ್ವೀಪ'ಗಳಲ್ಲೊಂದಾಗಿತ್ತೋ ಇಲ್ಲವೇ ಶ್ರೀಲಂಕೆಯಾಗಿತ್ತೋ ಎಂಬುದು ಸ್ಪಷ್ಟಗೊಳ್ಳುತ್ತಿಲ್ಲ. ಒಂದು ಕಾಲದಲ್ಲಿ ಅರಿಪೋ ನದಿಮುಖದಲ್ಲಿ 'ತಮಿಳು ಬುಡಕಟ್ಟಿನ' ಜನಾಂಗವೊಂದಿತ್ತೆಂದೂ ಆಗ ಅದನ್ನು ಕದಂಬನದಿ ಎಂದು ಕರೆಯಲಾಗುತ್ತಿತ್ತೆಂದು ತಿಳಿದು ಬರುವುದು. 'ತಮಿಳು ಬುಡಕಟ್ಟಿನ' ಜನಾಂಗ

ಎಂದು ತಪ್ಪಾಗಿ ಗುರುತಿಸಲ್ಪಟ್ಟವರು ವಾಸ್ತವವಾಗಿ ಈ ನದಿಗೆ ತಮ್ಮ ಹೆಸರು ಕೊಟ್ಟ ಕದಂಬರಾಗಿರಲು ಸಾಧ್ಯ.[೧೭] 'ಕದಂಬರೆಂದು ಕರೆಯಲಾಗುತ್ತಿದ್ದ ಈ ಜನಾಂಗದವರು ಕಡಲ್ಗಳ್ಳತನವನ್ನು ವೃತ್ತಿಯನ್ನಾಗಿಸಿಕೊಂಡ ಬಗ್ಗೆಯಾಗಲೀ ಬನವಾಸಿ ಕದಂಬರ ಪೂರ್ವಜರಾಗಿದ್ದರೆನ್ನುವುದರ ಬಗ್ಗೆಯಾಗಲೀ ಅನುಮಾನವಿಲ್ಲ' ಎಂದು ಪ್ರೊಫೆಸರ್ ಕೆ.ಕೆ. ಪಿಳ್ಳೈ ಅಭಿಪ್ರಾಯಪಟ್ಟಿರುವರು.[೧೮] ಕ್ರಿ.ಶ. ೧-೨ನೆಯ ಶತಮಾನದ ಗ್ರೀಕ್ ಮತ್ತು ರೋಮನ್ ದಾಖಲೆಗಳಲ್ಲಿ ನೌರ, ಮಲ್ಪೆ, ಓಲಖೌರ ಮುಂತಾದ ಕರಾವಳಿ ನೆಲೆಗಳ ಪ್ರಸ್ತಾಪವಿದೆ. ಟಾಲಮಿ ಉಲ್ಲೇಖಿಸುವ ಕಡಲ್ಗಳ್ಳರ ಕರಾವಳಿ ಪ್ರದೇಶವು ನಿತ್ರಣದಿಂದ ಮಂಗಳೂರಿನವರೆಗೂ ಹಬ್ಬಿತ್ತೆಂದು ಜೆ.ಡಬ್ಲ್ಯೂ ಮೆಕ್‌ಕ್ರಿಂಡ್ಲ್ ವಾದಿಸಿರುವನು.[೧೯] ಕಾರವಾರದ ಸುತ್ತಮುತ್ತಲಿದ್ದ ಕಡಲ್ಗಳ್ಳರ ಬಗ್ಗೆ ಪೆರಿಪ್ಲಸ್‌ನಲ್ಲಿಯೂ ಉಲ್ಲೇಖ ಬರುವುದಲ್ಲದೆ, ನಿತ್ರೈಯ್ ಅವರ ನೆಲೆಯಾಗಿತ್ತೆಂಬುದನ್ನು ಪ್ಲಿನಿ ಕೂಡಾ ತಿಳಿದಿದ್ದನೆಂಬುದಕ್ಕೆ ಆಧಾರಗಳಿವೆ. ಅಂದರೆ ಕದಂಬರಿಂದ ರಕ್ಷಿಸಿಕೊಳ್ಳಲು ಗ್ರೀಕ್ ಮತ್ತು ರೋಮನ್ ಹಡಗುಗಳು ಹರಪ್ರಯತ್ನ ಮಾಡಬೇಕಾಗುತ್ತಿದ್ದವೆಂಬುದು ಈ ಆಕರಗಳಿಂದ ಹೊರಹೊಮ್ಮುವುದು.

ಸಮುದ್ರಾಧಿಪತಿಗಳಾದ ಕದಂಬರು ಕ್ರಿಸ್ತಶಕದಾರಂಭದಲ್ಲಿ ಬನವಾಸಿಯಿಂದ ಶ್ರೀಲಂಕಾವರೆಗಿನ ಉಪ್ಪುನೀರಿನ ಮೇಲೆ ತಮ್ಮ ಅಧಿಪತ್ಯ ಸಂಪಾದಿಸಿಕೊಂಡಿದ್ದರೆಂದು ಕಾಣುವುದು. ಆರಂಭಕಾಲದ ತಮಿಳು ಆಕರಗಳನ್ನು ಏಕಮುಖೀಯವಾಗಿ ನೋಡಿದರೆ ಕದಂಬ ವೃಕ್ಷವನ್ನು ಚೇರರು ಮೇಲಿಂದ ಮೇಲೆ ತೆಗೆದು ಹಾಕಿದಂತೆಯೂ ಇವರನ್ನು ಅನೇಕ ಸಲ ನಾಶಗೊಳಿಸಿದಂತೆಯೂ ತೋರಬಹುದು, ಆದರೆ ಎಂದೂ ಮಣಿಯದ ಈ ಸಮುದ್ರಾಧಿಪತಿಗಳು ಕ್ರಿ.ಶ. ೪ನೆಯ ಶತಮಾನದಲ್ಲಿ ಬನವಾಸಿಯನ್ನು ನೆಲೆಯನ್ನಾಗಿ ಮಾಡಿಕೊಂಡು, ಒಂದು ರಾಜ್ಯದ ಒಡೆಯರಾಗಿ, ಕರ್ನಾಟಕದ ಇತಿಹಾಸದಲ್ಲಿ ಮೆರೆದದ್ದು ನಮಗೆಲ್ಲಾ ತಿಳಿದ ವಿಷಯ.

### ಪುನ್ನಾಟರು ಮತ್ತು ಶಂಗಂ ಸಾಹಿತ್ಯ:

ಕದಂಬರಷ್ಟು ಯಶಸ್ವೀ ಸ್ಥಾನವನ್ನು ಇತಿಹಾಸದಲ್ಲಿ ಪಡೆದುಕೊಳ್ಳದಿದ್ದರೂ ಅವರ ಸಮಕಾಲೀನರಾಗಿ, ಸ್ವಲ್ಪ ಕಾಲ ಅವರ ವಿರುದ್ಧ ಸೆಣಸಾಡುತ್ತಾ ಒಂದು ಸ್ವತಂತ್ರ ಶಕ್ತಿಯಾಗಲು ಶ್ರಮಿಸಿದವರಲ್ಲಿ 'ಪುನ್ನಾಟ' ನಾಯಕರಿಗೆ ವಿಶಿಷ್ಟ ಸ್ಥಾನವಿದೆ. ಇವರ ಬಗ್ಗೆ ಹಿಂದೊಮ್ಮೆ ಪ್ರಸ್ತಾಪಿಸಿ ಆರಂಭಕಾಲದ ಕರ್ನಾಟಕ ಇತಿಹಾಸದಲ್ಲಿಯ ಅವರ ಪಾತ್ರದ ಬಗ್ಗೆ ಮತ್ತೊಮ್ಮೆ ಚರ್ಚಿಸುವುದಾಗಿ ತಿಳಿಸಿದ್ದೆ; ಅದನ್ನಿಲ್ಲಿ ಪೂರೈಸಿಕೊಡಲು ಪ್ರಯತ್ನಿಸುವೆ.[೨೦]

ಮೊಟ್ಟಮೊದಲು ಶಂಗಂ ಸಾಹಿತ್ಯದಲ್ಲಿ ಕಾಣಿಸಿಕೊಳ್ಳುವ 'ಪುನ್ನಾಟ' ಹೆಸರನ್ನು 'ಪುಳ್ಳುನಾಟು', 'ಪುಣಣಾಡು' ಎಂಬ ಪದಗಳಲ್ಲಿ ಗುರುತಿಸಲು ತಮಿಳು ವಿದ್ವಾಂಸರು

ಪ್ರಯತ್ನಿಸಿರುವರು.[೨೧] ತೊಲ್ಕಾಪ್ಪಿಯನಾರ್ ರಚಿಸಿದ ಭಾಷಾ ನಕ್ಷೆಯ ಹನ್ನೆರಡು ಕೋಟ್ಟಂ-ತಮಿಳ್-ನಾಟುಗಳಲ್ಲಿ (ಅಂದರೆ ಸೆನ್ತಮಿಳಿನ ಹೊರವಲಯದಲ್ಲಿ ಬಳಸುತ್ತಿದ್ದ ತಮಿಳು ಜನಾಂಗಗಳಲ್ಲಿ) 'ಪುಣಣಾಟು' ಒಂದಾಗಿತ್ತೆಂದು ತಮಿಳು ಲೆಕ್ಸಿಕನ್ ಸೂಚಿಸುವುದು.[೨೨] *'ಪೊನಲ್ ಎನ್ನಾಳುಂ ಪೊಯ್ಯಾದು ಅಳಿಕ್ಕುಂ ಪುನ್ನಾಡು'* ಎಂಬ ವಿವರ *ಪೆರಿಯಪುರಾಣ*ದಲ್ಲಿ ಬರುವುದರಿಂದ ಸತತವಾಗಿ ಕಾವೇರಿಯಿಂದ ನೀರುಣ್ಣುತ್ತಿದ್ದ ಪ್ರದೇಶ ಇದಾಗಿತ್ತೆಂಬುದರಲ್ಲಿ ಅನುಮಾನವಿಲ್ಲ.[೨೩]

ಕ್ರಿ.ಶ. ೧೦೦೦ದಲ್ಲಿ *ತೊಲ್ಕಾಪ್ಪಿಯಮ್-ಸೊಲ್ಲದಿಗಾರ*ಕ್ಕೆ ವ್ಯಾಖ್ಯಾನ ಬರೆದ ಸೇನಾವರೈ ಗ್ರಂಥವನ್ನು ಸಂಪಾದಿಸಿದ ಕಂದಸ್ವಾಮಿ ಮತ್ತು ಪಾದಾಣರ್ ಸೆನ್ತಮಿಳನ್ನು ಸುತ್ತುವರಿದಿದ್ದ ಘಟಕಗಳನ್ನು ಗುರುತಿಸುತ್ತಾ ೧೨ ಕೋಟ್ಟುಂ ನಾಡುಗಳಲ್ಲಿ ಒಂದಾದ ಅರುವವಡತಲೈ ಎಂಬ ನಾಡೇ ಪುನ್ನಾಟವಾಗಿತ್ತೆಂಬ ನಿರ್ಣಯಕ್ಕೆ ಬಂದಿರುವರು.[೨೪] ಅಲ್ಲದೆ, 'ಕಡಲಪಡಂದ್ವೀಪಂ' (ಕಡಲಿನ ಪುರಾತನ ದ್ವೀಪ)ಗಳಾದ ಕೊಲ್ಲಂ, ಕೂಮಗಂ, ಸಿಂಗಳಂ, ತಮಿಳಗಂನ ಗಡಿಪ್ರದೇಶದಲ್ಲಿದ್ದವೆಂದೂ ಕನ್ನಡಂ, ವಡುಗಂ, ತೆಲಿಂಗಮ್, ಕೊಂಕಣಂ, ತುಳುವಂ, ಕುಡಗಂ, ಕುನ್ರಗಂ ಮುಂತಾದವುಗಳು ಅದರ ಸಮೀಪದಲ್ಲಿದ್ದ ವೆಂದೂ ವಿವರಣೆ ಕೊಟ್ಟಿರುವರು. ಇದು ಏನೇ ಇರಲಿ, ಕ್ರಿ.ಶ. ೨ನೆಯ ಶತಮಾನದ ಆರಂಭದಿಂದ ಪುನ್ನಾಟರ ಅಧಿಕೃತ ದಾಖಲೆಗಳು ನಿಖರಗೊಳ್ಳುತ್ತಾ ೧೪ನೆಯ ಶತಮಾನ ದವರೆಗೂ ಮುಂದುವರಿಯುವುವೆಂಬುದು ಇಲ್ಲಿ ಗಮನಾರ್ಹ. ಟಾಲಮಿ 'ಪೌನ್ನಟ'ದ ಪ್ರಸಿದ್ಧ ಪಚ್ಚೆಗಳ ಬಗ್ಗೆ ಕ್ರಿ.ಶ. ೧೫೦ರಲ್ಲಿ ಅರಿತುಕೊಂಡಿದ್ದ.[೨೫] ಇವನಿಗಿಂತ ಒಂದು ಶತಮಾನ ಮುಂಚೆ ಪ್ಲಿನಿ (ಕ್ರಿ.ಶ.೨೩-೭೯)ಕೂಡಾ ಇಲ್ಲಿಯ ಪಚ್ಚೆಕಲ್ಲುಗಳ ಮಾಹಿತಿ ಪಡೆದುಕೊಂಡಿದ್ದುದರಿಂದ ಅವನಿಗೂ ಪುನ್ನಾಟ ಪ್ರದೇಶದ ಪರಿಚಯವಿತ್ತೆನ್ನಬಹುದು.

**ಶಾಸನದಲ್ಲಿ ಪುನ್ನಾಟರು:**

ಪುನ್ನಾಟದ ಶಾಸನಿತ ಉಲ್ಲೇಖ ಪ್ರಾರಂಭವಾಗುವುದು ಕ್ರಿ.ಶ. ೪ನೆಯ ಶತಮಾನದಲ್ಲಿ. ಕದಂಬ ಮಯೂರವರ್ಮನು ಜಯಿಸಿದ ರಾಜ್ಯಗಳಲ್ಲಿ ಪುನ್ನಾಟವೂ ಒಂದಾಗಿತ್ತೆಂದು ಚಂದ್ರವಳ್ಳಿಯ ಶಾಸನ ತಿಳಿಸಿದರೆ, ಕದಂಬ ಕುಲವಧು ಪ್ರಭಾವತಿ ಪುನ್ನಾಟ ರಾಷ್ಟ್ರವರ್ಮನನ್ನು ವರಿಸಿದ್ದನ್ನು ಕಾಕುತ್ಸವರ್ಮನ ತಾಳಗುಂದ ಶಾಸನ ತಿಳಿಸುವುದು.[೨೬] ಪಾಂಡ್ಯ, ಕೊಂಗಾಳ್ವ, ಅಳೂಪ ಮತ್ತು ಗಂಗ ರಾಜ್ಯಗಳನ್ನಲ್ಲದೆ ಪುನ್ನಾಟ ರಾಜ್ಯವನ್ನು ರವಿವರ್ಮನು ವಶಪಡಿಸಿಕೊಂಡದ್ದನ್ನು (ಕ್ರಿ.ಶ. ೫-೬ನೆಯ ಶತಮಾನದ) ಗುಡ್ನಾಪುರ ಶಾಸನದಲ್ಲಿ ಹೇಳಲಾಗಿದೆ.[೨೭]

ಇದಕ್ಕಿಂತಲೂ ಕುತೂಹಲಕರವಾದ ವಿವರಗಳು ಗಂಗ ಅವನೀತ (ಕ್ರಿ.ಶ. ೪೩೦-೪೮೨)ನ ಶಾಸನದಲ್ಲಿದ್ದು ಇದರಂತೆ ಕಳಿಗಂಗನು ಪುನ್ನಾಟ ರಾಜಕುಮಾರಿಯನ್ನು ಮದುವೆಯಾದುದಲ್ಲದೆ ಪುನಾಡು-೬೦೦೦ರ ವಿಭಾಗವಾದ ಎಡನಾಡು-೭೦ರ ಬಡಣಗುಪ್ಪೆ ಗ್ರಾಮವನ್ನು ತಳವನ ನಗರಜಿನಾಲಯಕ್ಕೆ ದತ್ತಿಬಿಟ್ಟನು.[೨೮] ಅವನೀತ ಮತ್ತು ಈ ಪುನ್ನಾಟ ರಾಜಕುವರಿಗೆ ಜನಿಸಿದವನೇ ಗಂಗ ದುರ್ವಿನೀತ.[೨೯] ತನ್ನ ಮಗಳು ಜನಿಸಿದ ದಿನದಿಂದಲೇ ಅವಳನ್ನು ಇಂಥವನಿಗೇ ಕೊಟ್ಟು ಮದುವೆಮಾಡಬೇಕೆಂದು ಅಂದುಕೊಂಡ ಪುನ್ನಾಟ ಸ್ಕಂಧವರ್ಮನ ಸಂಕಲ್ಪವನ್ನು ತಿರಸ್ಕರಿಸಿ ಸ್ವಇಚ್ಛೆಯಿಂದ ಗಂಗನನ್ನು ಅವಳು ವರಿಸಿದಳೆಂದು ಗಂಗದುರ್ವಿನೀತನ ಶಾಸನದಲ್ಲಿ ವಿವರಿಸಲಾಗಿದೆ. ಇದರ ಫಲವಾಗಿ ಈ ಗಂಗನು ಫನ್ನಾಡು ಹಾಗೂ ಪುನ್ನಾಡು ಘಟಕಗಳ ಅಧಿಪತ್ಯ ಪಡೆದು ಕೊಂಡನೆಂದೆನ್ನಲಾಗಿದೆ.

ಈ ಸಾಧನೆಯ ಬಗ್ಗೆ ಗಂಗರು ಎಷ್ಟೊಂದು ಹೆಮ್ಮೆಪಟ್ಟುಕೊಂಡಿದ್ದರೆಂದರೆ ಮುಂದಿನ ಮೂರು ಶತಮಾನ ಕಾಲದ ಇವರ ವಂಶಜರು ಇದನ್ನು ಪುನಃ ಪುನಃ ನೆನಪಿಸಿಕೊಳ್ಳುವ ಉತ್ಸಾಹ ತೋರಿದರು. ೬ನೆಯ ಶತಮಾನದ ದುರ್ವಿನೀತನ ಸಾಲಿಗ್ರಾಮ ಶಾಸನ, ೭ನೆಯ ಶತಮಾನದ ಮುಷ್ಕರನ ಕಿರುಮೋರೆಕೋಳಿ ಶಾಸನ ಮತ್ತು ಶಿವಮಾರನ ಕುಲಗಾಣ ಶಾಸನ, ಸು. ೭೦೦ರ ನವಕಾಮನ ಹೆಬ್ಬೂರು ತಾಮ್ರಪಟ ಮತ್ತು ೮೧೦ರ ದೇಬೂರು ಶಾಸನ ಇದಕ್ಕೆ ಸಾಕ್ಷಿ ಒದಗಿಸುವುವು.[೩೦] ಇವೆಲ್ಲವೂ ಗಂಗ-ಪುನ್ನಾಟರ ವೈವಾಹಿಕ ಸಂಬಂಧದ ವಿವರವಿತ್ತರೆ, ಮುಷ್ಕರನ ತಾಮ್ರಪಟವು ಈತನ ತಾಯಿ ದಗ್ಧಚರಣ(ಕರಿಕಾಲ)ಚೋಳಮನೆತನದ ವಸುಮತಿಯಾಗಿದ್ದಳೆಂಬ ಮತ್ತು ಕಪುನಿ (ಕಬಿನಿ)ಯ ದಕ್ಷಿಣ ದಡದ ಒಂದು ಗ್ರಾಮವನ್ನು ಈತನು ದಾನಮಾಡಿದನೆಂಬ ವಿವರ ಒದಗಿಸುವುದು.

**ರಾಜ್ಯದ ವ್ಯಾಪ್ತಿ:**

ಪುನ್ನಾಟರು ಕಾವೇರಿ-ಕಬಿನೀ ನಡುವಣ ಪ್ರದೇಶದ ಅಧಿಪತಿಗಳಾಗಿದ್ದರೆಂಬುದನ್ನು *(ಕಾಬೇರೀ ಕಪಿನೀ ಶ್ರೀನದೀಭಿರಲಂಕೃತಸ್ಯ)* ೫-೬ನೆಯ ಶತಮಾನದ ಮಾಂಬಳ್ಳಿ ಶಾಸನ ತಿಳಿಸುವುದು. ಈ ಪ್ರದೇಶದ ಮೇಲಿನ ಅವರ ಅಧಿಕಾರವು ಕೆಲವು ಶತಮಾನಗಳ ಕಾಲ ಮುಂದುವರಿಯಿತೆಂದು ತೋರುವುದು. ಅಂದರೆ *ಪೆರಿಯಪುರಾಣ*ದಲ್ಲಿ ಬರುವ ಪುನ್ನಾಟರ ಕಾವೇರಿ ಚೋಳದೇಶದಲ್ಲಿ ಹರಿಯುತ್ತಿದ್ದ ನದಿಯಾಗಿರದೆ ಕಬಿನಿಯ ಜೊತೆಗಾರ್ತಿಯಾದ ಮೇಲ್ಕಾವೇರಿಯಾಗಿದ್ದಳೆಂಬುದಿಲ್ಲಿ ಸ್ಪಷ್ಟಗೊಳ್ಳುವುದು.

ಪುನ್ನಾಟವು ಚೇರರಾಜ್ಯದ ಉತ್ತರಕ್ಕಿದ್ದ (ಅಂದರೆ ಇಂದಿನ ದಕ್ಷಿಣ ಕನ್ನಡಜಿಲ್ಲೆಯ) ಪ್ರದೇಶವನ್ನು ಆವರಿಸಿತ್ತೆಂದೂ ಅದು ಇಂದಿನ ಮೈಸೂರು ಪ್ರದೇಶವಾಗಿತ್ತೆಂದೂ ಈ ಎರಡನ್ನೂ ಒಳಗೊಂಡ ಭೂಘಟಕವಾಗಿತ್ತೆಂದೂ ವಾದಿಸಲಾಗಿದೆ. ಇದು ಮೈಸೂರಿನ ಪಶ್ಚಿಮ-ದಕ್ಷಿಣಕ್ಕಿರುವ, ಇಂದಿನ ಹೆಗ್ಗಡದೇವನಕೋಟೆ ತಾಲೂಕನ್ನು ಒಳಗೊಂಡ, ಪ್ರದೇಶವೆಂಬ ಸೂಚನೆಯೂ ಇದೆ.[೩೧] ೧೬ನೆಯ ಶತಮಾನದ ಶಾಸನಗಳಲ್ಲಿ ಬರುವ 'ಪದಿನಾಡು' (ಹತ್ತುನಾಡು) ಮತ್ತು ಕಬಿನಿ-ಕಾವೇರಿ ನದಿಗಳ ಸಂಗಮದಲ್ಲಿರುವ ಇಂದಿನ ಹದಿನಾಱು (ಹದಿನಾರು) ವಿಭಾಗವೇ ಅಂದಿನ ಪುನ್ನಾಡಾಗಿತ್ತೆಂದು ಲೂಯೀಸ್ ರೈಸ್ ವಾದಿಸಿದರೆ ಈ ಎರಡು ಘಟಕಗಳ ಸಂಬಂಧವನ್ನು ಜೆ.ಎಫ್.ಫ್ಲೀಟ್ ಪ್ರಶ್ನಿಸಿರುವರು.[೩೨]

ಪುನ್ನಾಟ ರಾಜ್ಯದ ಗಡಿ ಆಗಾಗ್ಗೆ ಬದಲಾಗುತ್ತಿದ್ದರೂ ಕಾವೇರಿ-ಕಬಿನಿ ನಡುವಣ ಪ್ರದೇಶ ಇದರ ಹೃದಯಭಾಗವಾಗಿತ್ತೆಂಬುದರಲ್ಲಿ ಮತ್ತು ಒಂದು ಹಂತದಲ್ಲಿ ಕೀರ್ತಿಪುರ(ಕಿತ್ತೂರು) ಅದರ ರಾಜಧಾನಿಯಾಗಿತ್ತೆಂಬುದರಲ್ಲಿ ಅನುಮಾನವಿಲ್ಲ. ಒಂದು 'ನಾಡ' ಘಟಕವಾಗಿ, 'ವಿಷಯ' ಘಟಕವಾಗಿ 'ರಾಜ್ಯ'ವಾಗಿ, ಪುನಾಡು-೭೦, ಪುನಾಡು-೧೦೦೦, ಪುನಾಟ-೬೦೦೦, ಎಂಬ 'ವಲಯ' ಘಟಕಗಳಾಗಿ, [ಗಂಗವಾಡಿ]-೯೬,೦೦೦ರ ವಿಭಾಗವಾಗಿ, ಶಾಸನಗಳಲ್ಲಿ ಇದು ಕಾಣಿಸಿಕೊಂಡಿರುವುದು.[೩೩] ೧೧ನೆಯ ಶತಮಾನದಲ್ಲಿ ಕೇರಳನಾಡು ಎಂಬ ಘಟಕವು ಪುನ್ನಾಟದ ವಿಭಾಗವಾಗಿತ್ತೆಂದು ತಿಳಿದು ಬರುವುದು.[೩೪]

'ಪುನ್ನಾಟ'ವನ್ನು ಪ್ರಸ್ತಾಪಿಸುವ ಇತ್ತೀಚಿನ ದಾಖಲೆಯೆಂದರೆ ದೊಡ್ಡಬಳ್ಳಾಪುರ ತಾಲೂಕಿನ ಶಿವಪುರದ ಕ್ರಿ.ಶ. ೧೩೨೦ರ ಶಾಸನ. ಇದರಲ್ಲಿ 'ಪುನ್ನಾಟ-೭೦'ರ ಪ್ರಸ್ತಾಪವಿದೆ.[೩೫]

ಕ್ರಿ.ಶ. ೩ನೆಯ ಶತಮಾನದಲ್ಲಿ ಬನವಾಸಿಯಿಂದ ಆಳತೊಡಗಿದ ಕದಂಬರಿಗೆ ಅವರ ರಾಜ್ಯದ ದಕ್ಷಿಣ(ದಕ್ಷಿಣ-ಪೂರ್ವ)ಕ್ಕಿದ್ದ ಪುನ್ನಾಟರೊಡನೆ ಘರ್ಷಣೆಗಿಳಿಯುವುದು ಅನಿವಾರ್ಯವಾಯಿತೆಂದು ಕಾಣುವುದು. ಇವರ ಚಂದ್ರವಳ್ಳಿ, ತಾಳಗುಂದ, ಗುಡ್ನಾಪುರ, ಮುಂತಾದ ಶಾಸನಗಳಲ್ಲಿ ಇದು ಸ್ಪಷ್ಟವಾಗಿ ವ್ಯಕ್ತಗೊಂಡಿದೆ. ಆದರೆ ಕದಂಬರು ಎಷ್ಟೇ ಪ್ರಯತ್ನಿಸಿದರೂ ಪುನ್ನಾಟರನ್ನು ಅವರ ನೆಲೆಯಿಂದ ಕದಲಿಸಲಾಗಲಿಲ್ಲವೆಂಬುದನ್ನು ಮತ್ತು ಕಾಲಕ್ರಮದಲ್ಲಿ ಅವರೊಡನೆ ರಕ್ತಸಂಬಂಧ ಬೆಳೆಸಿಕೊಂಡು ಸೌಹಾರ್ದ ಸಂಪಾದಿಸಿಕೊಳ್ಳ ಬೇಕಾಯಿತೆಂಬುದನ್ನು ಕದಂಬ ಪ್ರಭಾವತಿ ಮತ್ತು ಪುಂರಾಜ ರಾಷ್ಟ್ರವರ್ಮರ ವಿವಾಹ ಪ್ರಸಂಗದಿಂದ ಅರಿತುಕೊಳ್ಳಬಹುದು. ಸುಮಾರು ೬ನೆಯ ಶತಮಾನದಲ್ಲಿ ಕದಂಬರು ಬದಾಮಿ ಚಾಳುಕ್ಯರ ಒತ್ತಡಕ್ಕೊಳಗಾಗಿ ತತ್ತರಿಸತೊಡಗಿದಾಗ, ಆ ಸಂದರ್ಭದವಕಾಶವನ್ನು

ಪಡೆದುಕೊಂಡು ಗಂಗರು ತಮ್ಮ ಪ್ರಭಾವವನ್ನು ಪುನ್ನಾಟರ ಮೇಲೆ ಬೀರಲು ತೊಡಗಿದರು. ಇದನ್ನು ಇವರ ಮಡಕೆರೆ (ಸು. ೪೬೬), ಸಾಲಿಗ್ರಾಮ (ಸು. ೬ನೆಯ ಶತಕ) ತಿರುಮೋರೆಕೋಳಿ (ಸು. ೭ನೆಯ ಶತಕ), ಕುಲಗಾಣ, ದೇಬೂರು ಮತ್ತು ಹೆಬ್ಬೂರು (ಸು. ೭-೮ನೆಯ ಶತಮಾನ) ಮೊದಲಾದ ಶಾಸನಗಳು ಸ್ಪಷ್ಟಪಡಿಸುವುವು. ಸಾಧ್ಯವಾದಾಗ ಒಬ್ಬರ ಮೇಲೆ ಮತ್ತೊಬ್ಬರು ಪ್ರಭಾವ ಬೀರುವುದು, ಅನಿವಾರ್ಯವಾದಾಗ ಒಂದು ಮನೆತನವು ಮತ್ತೊಂದು ಮನೆತನದೊಡನೆ ವೈವಾಹಿಕ ಸಂಬಂಧವನ್ನು ಏರ್ಪಡಿಸಿಕೊಳ್ಳುವುದು, ಈ ಮೂರು ಕರ್ನಾಟಕ ಮನೆತನಗಳ ಕಾಯಕವಾಗಿತ್ತೆಂಬುದು ಇದರಿಂದ ವ್ಯಕ್ತಗೊಳ್ಳುವುದು.

**ಇತಿಹಾಸದಲ್ಲಿ ಸ್ಥಾನ:**

ಕದಂಬ ಹಾಗೂ ಗಂಗರಿಗೆ ದೊರೆತ ಸ್ಥಾನ ಕರ್ನಾಟಕ ಆರಂಭಕಾಲದ ಇತಿಹಾಸದಲ್ಲಿ ಪುನ್ನಾಟರಿಗೆ ದೊರತಿಲ್ಲವೆಂಬುದನ್ನು ನಾವು ಒಪ್ಪಲೇಬೇಕು. ಇತಿಹಾಸಕಾರರು ಒಂದು ಬಗೆಯಲ್ಲಿ ಇವರನ್ನು ಉಪೇಕ್ಷಿಸಿರುವುದು ಇದಕ್ಕೊಂದು ಕಾರಣವಾದರೆ, ಇವರ ಬಗ್ಗೆ ದೊರಕುವ ದಾಖಲೆಗಳು ಅತ್ಯಲ್ಪವಾಗಿರುವುದು ಇನ್ನೊಂದು ಕಾರಣ. ಸುಮಾರು ಒಂದೂವರೆ ಸಹಸ್ರಮಾನ ಕಾಲ ತಮ್ಮ ಹೆಸರನ್ನು ಇತಿಹಾಸದಲ್ಲಿ ಉಳಿಸಿಕೊಂಡ ಈ ಮನೆತನವು ಹಾಕಿಸಿದ ಮೂರು ಶಾಸನಗಳು ಮಾತ್ರ ಇಲ್ಲಿಯವರೆಗೂ ಲಭ್ಯವಾಗಿರುವುವು. ಇವು ಮತ್ತು ಇನ್ನಿತರ ಪರೋಕ್ಷ ಉಲ್ಲೇಖಗಳ ಸಹಾಯದಿಂದ ಇವರ ಆಳ್ವಿಕೆಯ ದಾಖಲಿತ ಇತಿಹಾಸವನ್ನು ೪ನೆಯ ಶತಮಾನದ ಆರಂಭಕ್ಕೆ ಕೊಂಡೊಯ್ಯಲು ಸಾಧ್ಯ, ಆದರೆ ಇದಕ್ಕಿಂತ ಪುರಾತನ ಇತಿಹಾಸ ಅವರಿಗಿತ್ತೆಂಬುದನ್ನು ಶಂಗಂ ಸಾಹಿತ್ಯ ಮಾತ್ರ ತಿಳಿಸುವುದು. ಬಹುಕಾಲ ತಮ್ಮ ನಾಯಕವಾಡಿಯ ವ್ಯವಹಾರವನ್ನು ಮೌಖಿಕವಾಗಿ ನಿರ್ವಹಿಸಿಕೊಂಡುಬಂದ ಇವರು ಕದಂಬರೊಡನೆ ಒಡನಾಟ ಹೊಂದಿದ ನಂತರ, ಬಹುಶಃ ಅವರಿಂದ ಪ್ರಭಾವಿತರಾಗಿ, ಶಾಸನಗಳನ್ನು ಬರೆಸತೊಡಗಿದರೆಂದು ಕಾಣುವುದು. ಆದರೆ ಇದನ್ನವರು ಬಹುಕಾಲ ಮುಂದುವರಿಸಲಿಲ್ಲ.

ಬುಡಕಟ್ಟು ಜನಾಂಗವೊಂದರ ನಾಯಕರಾಗಿದ್ದ ಪುನ್ನಾಟರು ಅನಿವಾರ್ಯವಾದಾಗ ಮಾತ್ರ ಸುತ್ತಮುತ್ತಲ ನಾಯಕರೊಡನೆ ಘರ್ಷಣೆಗಿಳಿಯುತ್ತಿದ್ದರೆಂದು ಕಾಣುವುದು. ಕೊಂಕಣಾಧಿಪತಿಯಾದ ನಣ್ಣನ್ ಮತ್ತು ಇವರ ನಡುವಿನ ಇಂತಹ ಒಂದು ಘಟನೆಯನ್ನು ಶಂಗಂ ಸಾಹಿತ್ಯದಲ್ಲಿ ದಾಖಲಿಸಲಾಗಿದೆ. ಗುಡ್ಡಗಾಡುಗಳ ಮಧ್ಯ ನೆಲೆಸಿದ್ದ ಇವರ ಆಶೋತ್ತರಗಳು ತುಂಬಾ ಸರಳವೂ ಸೀಮಿತವೂ ಆಗಿದ್ದವಲ್ಲದೆ, ಅವು ಹೆಚ್ಚು ಕೇಂದ್ರೀಕೃತವಾಗಿದ್ದುದು ಅವರ ಸ್ವಾತಂತ್ರ್ಯ ರಕ್ಷಣೆಯೆಡೆಗೆ. ಸ್ಥಳೀಯವಾಗಿ ಲಭ್ಯವಿದ್ದ ಪಶು,

ಕ್ಷೇತ್ರ ಮತ್ತು ಖನಿಜಸಂಪತ್ತನ್ನು ರಕ್ಷಿಸಿಕೊಂಡು, ಕಾಡಿನ ನಡುವೆ ಮಾಡಿಕೊಂಡಿದ್ದ ಹೊಲಗದ್ದೆ ಮತ್ತು ತೋಟಪಟ್ಟಿಗಳಲ್ಲಿ ಭತ್ತ, ಗೋಧಿ, ಯವ ಮತ್ತು ದ್ವಿದಳಧಾನ್ಯ, ಕಬ್ಬು, ತೆಂಗು, ಬಾಳೆ, ಅಡಕೆ, ಎಲೆ, ಹಲಸು, ಚಂಪಕ, ವಕುಲ, ಅಶೋಕ, ಪುನ್ನಾಗ ಮೊದಲಾದವುಗಳನ್ನು ಬೆಳೆದು, ಸಾಂಪ್ರದಾಯಿಕ ಮನರಂಜನೆಗಳಾದ ನಾಟಕ, ನಾಟ್ಯ, ಉತ್ಸವ ಮತ್ತು ವಿವಾಹ-ಸಮಾರಂಭಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು, ಆನೆಗಳನ್ನು ಪಳಗಿಸುವ ಕಲೆಯಲ್ಲಿ ಹೆಮ್ಮೆಪಟ್ಟುಕೊಂಡು, ಕಾಲಕಳೆಯುತ್ತಿದ್ದ ಇವರ ಸರಳ ಜೀವನದ ಒಂದು ಚಿತ್ರ ಮಾಂಬಳ್ಳಿ ಶಾಸನದಿಂದ ಹೊರಹೊಮ್ಮುವುದು.[೩೬] ಇದರಲ್ಲಾಗಲೀ ಇನ್ನುಳಿದ ಶಾಸನಗಳಲ್ಲಾಗಲೀ ಅವರು ತಮ್ಮ ರಾಜಕೀಯ ಸಾಧನೆಯ ಬಗ್ಗೆ ಹೇಳಿಕೊಂಡಿರುವುದು ಅತ್ಯಲ್ಪ.

**ಪ್ರಾಕೃತದಿಂದ ಸಂಸ್ಕೃತಕ್ಕೆ:**

ಆರಂಭಕಾಲದ ಕರ್ನಾಟಕದ ಇತಿಹಾಸದಲ್ಲಿ ಹೆಜ್ಜೆಯ ಸ್ಪಷ್ಟ ಗುರುತನ್ನು ಮೂಡಿಸಿದವರಲ್ಲಿ ಮೊದಲಿಗರಾದ ಪುನ್ನಾಟರು ಮತ್ತು ಕದಂಬರು ಮೂಲತಃ ಶೂದ್ರರಾಗಿದ್ದರೆಂಬುದನ್ನು ತಮಿಳು ಶಂಗಂ ಸಾಹಿತ್ಯದಿಂದ ಅರಿತುಕೊಳ್ಳಬಹುದು. ಕಡಲ ಸಂಪತ್ತನ್ನೇ ಅವಲಂಬಿಸಿದ್ದ ಮೊದಲ ತಲೆಮಾರಿನ ಕದಂಬರು ಹಲವು ಶತಮಾನ ಕಾಲ ಶಾಸನಗಳನ್ನು ಹಾಕಿಸಬೇಕಾದ ಅವಶ್ಯಕತೆಯನ್ನು ಕಂಡುಕೊಳ್ಳಲಿಲ್ಲವೆಂಬುದನ್ನು ಈಗಾಗಲೇ ಗಮನಿಸಿದ್ದೇವೆ. ಬನವಾಸಿಯಲ್ಲಿ ಭದ್ರನೆಲೆಯನ್ನು ಕಂಡುಕೊಂಡ ನಂತರ ಈ ಪ್ರದೇಶದಲ್ಲಾಗಲೇ ಬೇರು ಬಿಟ್ಟಿದ್ದ ಬ್ರಾಹ್ಮೀಲಿಪಿ ಮತ್ತು ಪ್ರಾಕೃತ ಭಾಷೆಯನ್ನು ಬಳಸಿಕೊಂಡು, ಅವರು ತಮ್ಮ ಮೊದಲ ಶಾಸನಗಳನ್ನು ಹೊರಡಿಸಿದರು. ಶಿವಮೊಗ್ಗೆ ಜಿಲ್ಲೆಯ ಶಿಕಾರಿಪುರ ತಾಲೂಕಿನ ಮಳವಳ್ಳಿ ಶಾಸನ ಇದಕ್ಕೊಂದು ನಿದರ್ಶನ.[೩೭] ಅಶೋಕನ ಕಾಲದಲ್ಲಿ ಪ್ರಾರಂಭವಾದ ಈ ಮಾಧ್ಯಮಗಳ ಬಳಕೆ ಶಾತವಾಹನರ ಕಾಲದಲ್ಲಿ (ಸಣ್ಣತಿ, ಬನವಾಸಿ, ಹಿರೇಹಡಗಲಿ ಮುಂ.) ಮುಂದುವರಿದು ಕದಂಬರ ಕಾಲದಲ್ಲಿ ಅಂತಿಮ ಘಟ್ಟವನ್ನು (ಶಿವಮೊಗ್ಗ-ಚಿತ್ರದುರ್ಗ ಜಿಲ್ಲೆಯಲ್ಲಿ) ಮುಟ್ಟಿತೆನ್ನಬಹುದು. ಪ್ರಾಕೃತ ಮಿಶ್ರಿತ ಸಂಸ್ಕೃತದಲ್ಲಿ ಬರೆದ ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿಯ ಬ್ರಾಹ್ಮೀ ಶಾಸನದಲ್ಲಿ ಈ ಮಾಧ್ಯಮದ ಮತ್ತೊಂದು ರೂಪಾಂತರವನ್ನು ಕಾಣುವೆವು.[೩೮]

**ಕನ್ನಡ ಲಿಪಿಯ ಪ್ರವೇಶ:**

ಪ್ರಾಕೃತದ ಪ್ರಭಾವ ಕುಗ್ಗಿ ಅದರ ಸ್ಥಾನವನ್ನು ಸಂಸ್ಕೃತ ಪಡೆದುಕೊಳ್ಳುವ ಸರಿಸುಮಾರು ಕಾಲದಲ್ಲಿ- ಅಂದರೆ ಕ್ರಿ.ಶ. ೪ನೆಯ ಶತಮಾನದಾರಂಭದಲ್ಲಿ- ಬ್ರಾಹ್ಮೀಸ್ಥಾನವನ್ನು ಕನ್ನಡಲಿಪಿ ಪಡೆದುಕೊಳ್ಳಲು ಮುಂದಾಗಿದ್ದುದನ್ನು ಇಲ್ಲಿ

ಗಮನಿಸುವುದವಶ್ಯ. ಕದಂಬರು ಸಂಸ್ಕೃತ ಭಾಷೆಯಲ್ಲಿ ಶಾಸನಗಳನ್ನು ಬರೆಸತೊಡಗಿದಾಗ 'ಪೆಟ್ಟಿಗೆ ತಲೆಕಟ್ಟಿನ ದಕ್ಷಿಣ ಲಿಪಿ'ಯನ್ನು ಅವರು ಬಳಸಿದರು. ಈ ಲಿಪಿಗೂ ಕನ್ನಡಲಿಪಿಗೂ ಗಾಢಸಂಬಂಧವಿದೆ ಎಂದು ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟರೆ, ಅದು ತುಂಬಾ ಗೌಣವೆಂದು ಇನ್ನು ಕೆಲವರು ವಾದಿಸಿರುವರು. ಇದು ಏನೇ ಇರಲಿ, ಪುನ್ನಾಟರು ಕನ್ನಡ ಲಿಪಿಯಲ್ಲಿ ಬರೆಸಿದ ಮೂರು ಶಾಸನಗಳಲ್ಲಿ ಒಂದು ಪೂರ್ಣ ಸಂಸ್ಕೃತ ಭಾಷೆಯಲ್ಲಿದ್ದರೆ ಇನ್ನೆರಡು ಕನ್ನಡ ಪದಗಳನ್ನು ಪೋಣಿಸಿಕೊಂಡ ಅಶುದ್ಧ ಸಂಸ್ಕೃತದಲ್ಲಿವೆ. ಇಪ್ಪತ್ತೊಂದು ಸಾಲುಗಳ ಅಪೂರ್ಣ ಮಾಂಬಳ್ಳಿ ಶಾಸನ(ಕ್ರಿ.ಶ. ೫೫೦)ದಲ್ಲಿಯ ಪ್ರಬುದ್ಧ ಸಂಸ್ಕೃತ ಪಾಠವನ್ನು ಕನ್ನಡ ಲಿಪಿ ಸಮರ್ಥವಾಗಿ ನಿರ್ವಹಿಸಿರುವುದನ್ನು ನೋಡಿದರೆ, ಈ ಕಾಲಕ್ಕಾಗಲೇ ಕನ್ನಡಲಿಪಿ (ಮತ್ತು ಭಾಷೆ) ಪ್ರಬುದ್ಧಾವಸ್ಥೆಯನ್ನು ತಲುಪಿ ಶತಮಾನಗಳೇ ಗತಿಸಿರಬೇಕೆನಿಸುವುದು. ಅನುಷಂಗಿಕವಾಗಿ, ಈ ಕಾಲದ ಕನ್ನಡ ಬೆಳವಣಿಗೆಯ ಮೂರು ಪ್ರಭೇದಗಳನ್ನು ನಾವು ಗುರುತಿಸಬಹುದು. ಒಂದು, ಕನ್ನಡ ಭಾಷೆಯ ವಾಹನವಾಗಿ ಕನ್ನಡ ಲಿಪಿ ವಿಕಾಸಗೊಳ್ಳುವುದು; ಎರಡು, ಸಂಸ್ಕೃತ ಭಾಷೆಯನ್ನು ಕನ್ನಡ ಲಿಪಿ ಸಮರ್ಥವಾಗಿ ನಿರ್ವಹಿಸುವುದು; ಮತ್ತು ಮೂರು, ಸಂಸ್ಕೃತ ಪಾಠಗಳಲ್ಲಿ ಕನ್ನಡ ವಾಕ್ಯಗಳನ್ನು ಕೂಡಿಸಿಕೊಂಡು ಸಂಸ್ಕೃತ-ಕನ್ನಡ ಮಿಶ್ರ ಪಾಠಗಳನ್ನು ಸೃಷ್ಟಿಸುವುದು.

**ಕನ್ನಡಭಾಷೆಯ ಪ್ರವೇಶ:**

ಕನ್ನಡ ಲಿಪಿಯನ್ನು ಬಳಸಿ ಬರೆದ ಕನ್ನಡ ಶಾಸನಗಳ ಪ್ರಾರಂಭವನ್ನು ಕ್ರಿ.ಶ. ೫ನೆಯ ಶತಮಾನದ ಹಲ್ಮಿಡಿಯಲ್ಲಿ ಗುರುತಿಸಿರುವೆವು. ಇಲ್ಲಿಂದ ಮುಂದಿನ ಐವತ್ತು ವರ್ಷಗಳಲ್ಲಿ ಈ ಮಾಧ್ಯಮ ಬಲಗೊಂಡದ್ದು ದಕ್ಷಿಣ ಕರ್ನಾಟಕದಲ್ಲೆಂಬುದನ್ನು ಕೆಳಗುಂದಿ (ಸೊರಬ ತಾ), ಮಲ್ಲೋಹಳ್ಳಿ (ಬೆಂಗಳೂರು ತಾ) ಮತ್ತು ತಮಟಕಲ್ಲು (ಚಿತ್ರದುರ್ಗ ತಾ) ಶಾಸನಗಳಿಂದ ಅರಿತುಕೊಳ್ಳಬಹುದು.[೩೯] ಮಲೆನಾಡ ಸೆರಗಿನಲ್ಲಿ ಮುಂದುವರಿದು, ತಗರೆ (ಬೇಲೂರು ತಾ), ಆಡೂರು (ಹಾನಗಲ್ಲು ತಾ), ಸಿರಿಗುಂದ (ಚಿಕ್ಕಮಗಳೂರು ತಾ)ಗಳ ಮೂಲಕ, ಇದು ೬ನೆಯ ಶತಮಾನದ ಕೊನೆಗೆ ಉತ್ತರ ಕರ್ನಾಟಕದ ಬದಾಮಿಯನ್ನು ತಲುಪಿತೆಂದು ಕಂಡುಬರುವುದು.[೪೦] ೬-೭ನೆಯ ಶತಮಾನಗಳಲ್ಲಿ ಇದು ಕವಲೊಡೆದು ಮಡುಗಟ್ಟಿದ್ದು ಆಂಧ್ರ ಪ್ರದೇಶದ ಗುಂಟೂರು (ಮಾಡುಗಲ) ಮತ್ತು ಕರ್ನೂಲು (ಸಾತನಿಕೇಟ) ತಾಲೂಕುಗಳಲ್ಲಲ್ಲದೆ ಕರ್ನಾಟಕದ ಹಾಸನ ಜಿಲ್ಲೆಯ ಶ್ರವಣಬೆಳ್ಗೊಳದಲ್ಲಿ.[೪೧]

**ಸಂಸ್ಕೃತ ಪದ್ಯದಲ್ಲಿ ಕನ್ನಡಕ್ಕೆ ಸ್ಥಾನ:**

ಸಂಸ್ಕೃತ ಭಾಷೆಯ ವಾಹನವಾಗಿ ಮಾತ್ರವಲ್ಲದೆ, ಸಂಸ್ಕೃತ ಪದ್ಯದಲ್ಲಿ ಸಹಸ್ಥಾನ ಪಡೆದುಕೊಂಡು ಪರಿಣಾಮಕಾರಿಯಾಗಿ ಕನ್ನಡ ಭಾಷೆ ತನ್ನ ಅಸ್ತಿತ್ವವನ್ನು ಪ್ರತಿಪಾದಿಸಿಕೊಂಡ

ಶಾಸನಗಳು ಮೊದಲು ಕಾಣಿಸಿಕೊಳ್ಳುವುದೂ ದಕ್ಷಿಣ ಕರ್ನಾಟಕದಲ್ಲಿ. ಇದರ ಆರಂಭವನ್ನು ಗುರುತಿಸಲು ನನಗೆ ಸಾಧ್ಯವಾಗಿರುವುದು ಸು. ೫-೬ನೆಯ ಶತಮಾನಗಳ ಮಲ್ಲೋಹಳ್ಳಿ (ಬೆಂಗಳೂರು ತಾ.) ಮತ್ತು ತಗರೆ (ಬೇಲೂರು ತಾ.)ಯ ಗಂಗರ ಶಾಸನಗಳಲ್ಲಿ.[೪೨] ತಗರೆಯಿಂದ ಪಶ್ಚಿಮೋತ್ತರ ಮುಖವಾಗಿ ಮುಂದುವರಿದು, ಆಸಂದಿ ಮತ್ತು ಮಲ್ಲೇನಹಳ್ಳಿ (ಎರಡೂ ಕಡೂರು ತಾ.), ಮಾಚೇನಹಳ್ಳಿ (ತರೀಕೆರೆ ತಾ.), ಹರಿಹರ (ಹರಿಹರ ತಾ.) ಮೂಲಕ ಹಾಯ್ದು ಈ ಮಿಶ್ರಭಾಷಾ ಮಾಧ್ಯಮವೂ ೭ನೆಯ ಶತಮಾನದ ಕೊನೆಯಲ್ಲಿ ಚಾಳುಕ್ಯ ರಾಜಧಾನಿ ಬದಾಮಿಯನ್ನು ತಲುಪಿತೆಂದು ತೋರುವುದು.[೪೩]

ಸು. ೭೦೦-೮೦೦ರ ಅವಧಿಯಲ್ಲಿ ಪುನ್ನಾಟರು ಬರಸಿದ ಬಸವನಪುರ (ನಂಜನಗೂಡು ತಾ.) ಮತ್ತು ಕೊಮರಲಿಂಗಂ (ಕೊಯಂಬತ್ತೂರು ಜಿಲ್ಲೆಯ ಉಡುಮಲೆಪೇಟೆ ತಾ.) ತಾಮ್ರಪಟಗಳು ಈ ಮಿಶ್ರಮಾಧ್ಯಮದ ವೈಲಕ್ಷಣಗಳನ್ನು ಸಮರ್ಥವಾಗಿ ಬಿಂಬಿಸುವುವು.

ಈ ಎರಡು ಶಾಸನ ಕವಿಗಳಿಗೆ ಸಂಸ್ಕೃತಕ್ಕಿಂತ ಕನ್ನಡ ಭಾಷೆಯ ಮೇಲೆ ಹೆಚ್ಚು ಪ್ರಭುತ್ವವಿತ್ತೆನ್ನಲು ಇಲ್ಲಿಯ ಸಂಸ್ಕೃತ ಪಾಠದಲ್ಲಿರುವ ಹೇರಳ ಮತ್ತು ಕನ್ನಡ ಪಾಠದಲ್ಲಿರುವ ವಿರಳ ದೋಷಗಳು ತೋರಿಸಿಕೊಡುವುವು. ಬಸವನಪುರದ ತಾಮ್ರಪಟ ಸಂಸ್ಕೃತ ಭಾಷೆಯ ಗದ್ಯಪದ್ಯದಲ್ಲಿದೆ. ದಾನಕ್ಷೇತ್ರದ ಮೇರೆಗಳನ್ನು ಇಲ್ಲಿ ಕನ್ನಡದಲ್ಲಿ ಗುರುತಿಸಲಾಗಿರುವುದಲ್ಲದೆ ಸಂಸ್ಕೃತದಲ್ಲಿರುವ ಶಾಪೋಕ್ತಿಯನ್ನು ಕನ್ನಡದಲ್ಲಿ ಪುನರುಕ್ತಿಗೊಳಿಸಲಾಗಿದೆ. ಸಂಸ್ಕೃತ ಬಲ್ಲ ಫಲಾನುಭವಿಗಳು ಮಾತ್ರವಲ್ಲದೆ ಕನ್ನಡ ಬಲ್ಲ ಸ್ಥಳೀಯರು ಇದನ್ನು ಅರಿತುಕೊಂಡು ಶಾಸನವನ್ನು ಗೌರವಿಸಬೇಕೆಂಬುದು ಇದರ ಉದ್ದೇಶವಾಗಿದ್ದರೂ ವಲಸೆ ಬಂದವರ ಮತ್ತು ನಾಡ ನಿವಾಸಿಗಳ ಭಾಷೆಗಳನ್ನು ಅರಿತುಕೊಳ್ಳಲು ಇಂತಹ ಶಾಸನಗಳು ಎಷ್ಟು ಉಪಯುಕ್ತವಾಗಿದ್ದವು ಎಂಬುದನ್ನು ನಾವಿಲ್ಲಿ ಕಂಡುಕೊಳ್ಳಬಹುದು.

ಈ ಮಿಶ್ರಭಾಷಾ ಪ್ರಯೋಗದ ಮತ್ತೊಂದು ಮುಖವನ್ನು ಕೊಮರಲಿಂಗಂ ತಾಮ್ರಪಟ ಪರಿಚಯಿಸುವುದು. ತುಂಬಾ ಅಶುದ್ಧ ಹಾಗೂ ಅಪೂರ್ಣ ಸಂಸ್ಕೃತ ಗದ್ಯ-ಪದ್ಯಗಳಿಂದ ಪ್ರಾರಂಭವಾಗುವ ಈ ಶಾಸನದ ಸಂಸ್ಕೃತಪದಗಳ ಮಧ್ಯಮಧ್ಯ ಒಮ್ಮೆಲೇ ಕನ್ನಡ ಪದಗಳು ಪ್ರವೇಶಿಸಿ ಪುನಃ ಸಂಸ್ಕೃತ ಪದಗಳಿಗೆ ಎಡೆಮಾಡಿಕೊಡುವುವು.[೪೪] ಸಂಸ್ಕೃತ-ಕನ್ನಡ ಪದಗಳನ್ನು ಮಿಶ್ರಮಾಡಿದಂತೆ, ದ್ರಾವಿಡ 'ಱ' ಮತ್ತು 'ೞ'ಕಾರ ಪ್ರಯೋಗಗಳನ್ನೂ ಅಲ್ಲಲ್ಲಿ ಬಳಸಿ ಬರೆಯಲಾಗಿದೆ. ಈ ಕಾರಣಗಳಿಂದಾಗಿ ಕೊಮರಲಿಂಗ ತಾಮ್ರಪಟದ ಸಂಸ್ಕೃತ-ಕನ್ನಡ ಪದಗಳ ಮಿಶ್ರಣದ ಸ್ವರೂಪವು ಬಸವನಪುರ ಶಾಸನದಲ್ಲಿಯ ಸಂಸ್ಕೃತ-ಕನ್ನಡ ವಾಕ್ಯಗಳ ಮಿಶ್ರಣಕ್ಕಿಂತ ಭಿನ್ನವೆನಿಸುವುದು.

**ಆರಂಭಕಾಲದ ಅರಸರ ಸಂಸ್ಕೃತ ವ್ಯಾಮೋಹ:**

ಇಲ್ಲಿ ಉದ್ಭವವಾಗುವ ಪ್ರಶ್ನೆಯೆಂದರೆ - ಹೊರಗಿನಿಂದ ಬಂದು ಕರ್ನಾಟಕ ಪ್ರದೇಶದಲ್ಲಿ ಆಳಿದ ಮೌರ್ಯ, ಶಾತವಾಹನ, ಮುಂತಾದವರು ತಾವೇ ತಂದ ಪ್ರಾಕೃತ ಭಾಷೆಯಲ್ಲಿ ವ್ಯವಹರಿಸಿದ್ದು ಸಹಜವೆನಿಸಿದರೂ ಆರಂಭಕಾಲದ ಸ್ಥಳೀಯ ಜನಾಂಗ ನಾಯಕರುಗಳಾದ ಕದಂಬ, ಪುನ್ನಾಟ, ಗಂಗ ಮುಂತಾದವರು ಕನ್ನಡವನ್ನು ಬಿಟ್ಟು ಸಂಸ್ಕೃತ ಭಾಷೆಯನ್ನು ತಮ್ಮ ಮಾಧ್ಯಮವಾಗಿ ಮಾಡಿಕೊಂಡಿದದ್ದೇಕೆ? ಎಂಬುದು.

ಕ್ರಿ.ಶ. ೩ನೆಯ ಶತಮಾನಕ್ಕಿಂತ ಮುಂಚಿನ ಕನ್ನಡಭಾಷೆ ಮತ್ತು ಲಿಪಿಯ ಬಗ್ಗೆ ನಮಗೆ ಅಸ್ಪಷ್ಟ ಕಲ್ಪನೆ ಮಾತ್ರ ಇದೆ. ಈ ಕಾಲಾವಧಿಯಲ್ಲಿ ನಾಯಕಸ್ಥಾನಕ್ಕೇರಿದ್ದ ಸ್ಥಳೀಯರೆಲ್ಲರೂ ಮೌಖಿಕವಾಗಿಯೇ ತಮ್ಮ ವ್ಯವಹಾರವನ್ನು ನಿರ್ವಹಿಸಿಕೊಳ್ಳುತ್ತಿದ್ದುದರಿಂದ ಕನ್ನಡವನ್ನಾಗಲೀ ಇನ್ನಾವ ಭಾಷೆಯನ್ನಾಗಲೀ ಬಳಸುವ ಆವಶ್ಯಕತೆ ಅವರಿಗೆ ಉಂಟಾಗಲಿಲ್ಲ. ಲಿಖಿತ ವ್ಯವಹಾರದ ಆವಶ್ಯಕತೆಯನ್ನು ಅವರು ಅರಿತುಕೊಂಡದ್ದು ತಮ್ಮ ಅಂತಸ್ತನ್ನೂ ವಂಶಾವಳಿಯನ್ನೂ ಉತ್ತಮಪಡಿಸಿಕೊಂಡು, ತಮ್ಮ ಅರಸೊತ್ತಿಗೆಯನ್ನು ಅಧಿಕೃತಗೊಳಿಸಿಕೊಳ್ಳಬೇಕೆಂಬ ದಾಹ ಉಂಟಾದಾಗ. ಇದನ್ನು ಪೂರೈಸಿಕೊಳ್ಳಲು ಅವರು (ಅಹಿಚ್ಛತ್ರ ಮುಂತಾದ) ದೂರದೇಶದ ವಿದ್ವಾಂಸರನ್ನು ಬರಮಾಡಿಕೊಂಡು, ಪೋಷಣೆ ಒದಗಿಸಿ, ಇಲ್ಲಿ ನೆಲೆಸಲು ಅವರ ಮನವೊಲಿಸಬೇಕಾಯಿತೆಂದು ಕಾಣುವುದು. ಈ ಪ್ರಕ್ರಿಯೆ ಆರಂಭಕಾಲದ ಕದಂಬರ ಶಾಸನಗಳಲ್ಲಿ ಹೆಚ್ಚು ಸ್ಫುಟಗೊಂಡಿರುವುದು. ಇವರು ಹಾಕಿಸಿದ ೪೪ ಶಾಸನಗಳಲ್ಲಿ ಸುಮಾರು ೩೦ ಬ್ರಾಹ್ಮಣರಿಗೆ ಹಾಕಿಕೊಟ್ಟ ಭೂದತ್ತಿಯನ್ನು ೧೨ ಜೈನ ಮತ್ತು ೨ ಬೌದ್ಧ ಧರ್ಮ ಸಂಸ್ಥೆಗಳಿಗೆ ಮಾಡಿದ ದಾನಕಾರ್ಯಗಳನ್ನು ಪ್ರಸ್ತಾಪಿಸುವುವು. ಅಪರೂಪವಾಗಿ ಕದಂಬರ ವಂಶಾವಳಿಯನ್ನು ಪ್ರಸ್ತಾಪಿಸುವ ತಾಳಗುಂದ, ಗುಡ್ನಾಪುರ, ಹಲಸಿ ಮುಂತಾದ ಮೂರು–ನಾಲ್ಕು ಶಾಸನಗಳನ್ನು ಬಿಟ್ಟರೆ, ಉಳಿದವುಗಳೆಲ್ಲವೂ ಪ್ರಧಾನವಾಗಿ ಫಲದಾಯಿಗಳನ್ನು ಕೀರ್ತಿಸುವ, ಅವರ ಮೂಲಕ ಆಳರಸರ ಹೆಗ್ಗಳಿಕೆಯನ್ನು ಪ್ರದರ್ಶಿಸುವ, ಶಾಸನಗಳಾಗಿವೆ. ಕೆಲವು ಶತಮಾನಕಾಲ ಸಮುದ್ರ ಸಂಪತ್ತಿನ ಮೇಲೆಯೇ ಅವಲಂಬನ ಹೊಂದಿದ್ದ ಕದಂಬರನ್ನು,[೪೫] ಇಲ್ಲಿ ಬ್ರಾಹ್ಮಣೋತ್ತಮ ಮತ್ತು ಕ್ಷತ್ರಿಯಶ್ರೇಷ್ಠ ಎಂದು ಹೊಗಳಲು ಕಾರಣ ಫಲದ್ಹಾಯಿಗಳು ಬ್ರಾಹ್ಮಣರಾಗಿದ್ದುದು ಎನಿಸುವುದು. ಅವರಿಗೆ ಭವ್ಯ ವಂಶಾವಳಿಯನ್ನೂ ಕುಲ–ಗೋತ್ರವನ್ನೂ ಒದಗಿಸಿ, ಗುಪ್ತ ಮುಂತಾದ ಸಾಮ್ರಾಟರೊಡನೆ ಮಾಡಿದ ಅವರ ನೆಂಟಸ್ತಿಕೆಯನ್ನು ಕೊಂಡಾಡುವುದು ಅವರ ಮುಖ್ಯ ಉದ್ದೇಶವಾಗಿತ್ತೆಂಬ ಭಾವನೆ ಬರುವುದು. ಆರಂಭಕಾಲದ ಕಡಲ ಮೇಲಿನ ಶ್ರಮಜೀವನವನ್ನು ಎಷ್ಟು ಸಾಧ್ಯವೋ ಅಷ್ಟು ಮಂದಗೊಳಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಅವರು ತೋಡಿಸಿದ ಕೆಲವು ಕೆರೆ–ತಟಾಕಗಳ ಪ್ರಸ್ತಾಪ ಬಿಟ್ಟರೆ, ಬಹುಸಂಖ್ಯಾತ ಸಮಾಜಕ್ಕೆ ಸಂಬಂಧಪಟ್ಟ ಅವರ ಜನಪರ

ಕಾರ್ಯಗಳ ಪ್ರಸ್ತಾಪ ಇಲ್ಲವೇ ಇಲ್ಲವೆನ್ನುವಷ್ಟು ಅಪರೂಪವಾಗಿದೆ. ಅಂದರೆ ಇಲ್ಲಿ ಬಳಸಿದ ಭಾಷೆ ಬಹುಸಂಖ್ಯಾತ ಸಮಾಜಕ್ಕೆ ಸಂಬಂಧಿಸಿದ್ದಾಗಿರದೆ ಆಶ್ರಿತ ಬ್ರಾಹ್ಮಣ ವಿದ್ವಾಂಸರಿಗೆ ಸಂಬಂಧಪಟ್ಟದ್ದಾಗಿದೆಯೆಂದು ಅರ್ಥ. ಈ ಕಾಲದಲ್ಲಿ ಸ್ಥಳೀಯ ಭಾಷೆಯನ್ನೂ ಜನಪದ ಸಂಸ್ಕೃತಿಯನ್ನೂ ರಕ್ಷಿಸಿಕೊಂಡು ಬಂದವರು ಅರಸರಲ್ಲ, ಜನಸಾಮಾನ್ಯರು. ರಾಜ್ಯದ ವ್ಯವಹಾರ ವೃದ್ಧಿಸಿ ಸಮಾಜದ ಎಲ್ಲ ವರ್ಗಗಳೊಡನೆ ಒಂದಿಲ್ಲೊಂದು ಬಗೆಯಲ್ಲಿ ಸ್ಪಂದಿಸಬೇಕಾದ ಅನಿವಾರ್ಯತೆ ಉಂಟಾದಾಗ ಮಾತ್ರ ಈ ಕಾಲದ ಆಳರಸರು ಜನನುಡಿಯಲ್ಲಿ ವ್ಯವಹರಿಸಲು ಆಸಕ್ತರಾದರೆಂದು ಕಾಣುವುದು. ಕನ್ನಡ ನುಡಿಯ ಇತಿಹಾಸವನ್ನು ಸ್ಪಷ್ಟವಾಗಿ ಗುರುತಿಸಿದಾಗ ಮಾತ್ರ ಈ ಬದಲಾವಣೆಯ ಗತಿಯನ್ನೂ ಗುರುತಿಸಲು ಸಾಧ್ಯವಾಗಬಹುದೆನಿಸುವುದು.

**ಆಕರ ಟಿಪ್ಪಣಿ :**

೧. *ಇತಿಹಾಸ ದರ್ಶನ* XVII (೨೦೦೨), ಪು. ೧-೧೧.

೨. ಪುಜನಾ. ೮೦; ೭೪-೭೫. ಎರುಮೈಊರವರ ಬಗ್ಗೆ ಈ ಹಿಂದೆ (ಅಧ್ಯಾಯ ೬) ವಿಸ್ತಾರವಾಗಿ ಪ್ರಸ್ತಾಪಿಸಿದ್ದು ಇಲ್ಲಿ ಅದನ್ನು ಸಂಗ್ರಹಿಸಿ ಕೊಡಲಾಗಿದೆ.

೩. ಅಗನಾ. ೨೫೩:೧೯; ನೋ. ಅಧ್ಯಾಯ ೬.

೪. ಅಗನಾ. ೧೧೫, ೯೧.

೫. ಅದೇ. ೨೩,೭೨; ಪುಜನಾ. ೨೭೩,೩೦೩.

೬. ಮಹದೇವನ್, ಅದೇ., ಸಂ. ೪೯. ಎರುಮೈನಾಯಕರ ವಿಸ್ತೃತ ಚರ್ಚೆಗೆ, ನೋ. ಅಧ್ಯಾಯ ೬, ಪು. ೧೩೩-೧೪೩.

೭. ಎಎಸ್‌ಎಂಎಆರ್ (ಮೈಪ್ರಾವ) ೧೯೨೭, ಪು.೬೮; ಅದೇ ೧೯೧೬, ಪು.೩೧.

೮. ಎಸ್‌ಐಐ XXIV, ೨೬೯, ನೋ. ಮುನ್ನುಡಿ, ಪು. iii.

೯. ಪದಿಟ್ರು. II, ೧:೪-೧೬; ೨,೩; ೨೦, ೧-೫; IVರ ಪದಿಹಂ; ಅಹನಾ. ಮಣಿಮಿಡಪವಳಂ ೧೨೭: ೩-೧೦, ೩೪೭:೩೫; ಶಿಲಪ್ಪ ಅಧಾ.೧೭, ಉಳ್ವರಿವಳ್ಳು ೧-೨; ಅಧ್ಯಾ.೨೩: ೧-೧೮; ೨೫: ೧೮೫-೧೮೯; ೨೮: ೧೩೫; ೨೯ ಉಸುಲ್‌ವಾರಿ ೧೧-೩ ಮತ್ತು ವಳ್ಳೈಪತ್ತು ೩:೩ ಮುಂ.

೧೦. ಪದಿಟ್ರು. ೭:೫; ಅಗನಾ. ೩೪೭: ೩-೭; ಶಿಲಪ್ಪ ವಳ್ಳೈಪಾಟ್ಟು ೩:೩.

೧೧. ಪದಿಟ್ರು. ೨೦: ೨-೫; V: ೧೨.

೧೨. ಅಗನಾ. ೧೨೭, ೩-೧೦.

೧೩. ಶಿಲಪ್ಪ ೨೩: ೧-೮೧.

೧೪. ಅದೇ. ೨೫: ೧೮೫–೧೮೯.

೧೫. ಅದೇ. ೨೫: ೧೫೬–೧೫೯; ೧೦೩, ೧೪೮–೧೪೯.

೧೬. ಶಿಲಪ್ಪ XVII: ಉಳ್ವರಿವಳ್ತು ೧.೨.

೧೭. ರಸನಾಯಗಂ, ಏನ್ಸಿಯಂಟ್ ಜಾಫ್ನಾ, ಪು.೧೧೪.

೧೮. ಪಿಳ್ಳೈ ಕೆ.ಕೆ., ಸೌತ್ ಇಂಡಿಯಾ ಅಂಡ್ ಶ್ರೀಲಂಕಾ: ಸರ್ ವಿಲ್ಲಿಯಮ್ ಮೆಯೆರ್ ಎಂಡೋಮೆಂಟ್ ಲೆಕ್ಚೆರ್ಸ್, ಮವಿವಿ. (ಮದ್ರಾಸ್, ೨೦೦೧ (ಪು.ಮು.) ಪು.೩೪.

೧೯. ಇಆ. XIII, ಪು. ೩೧೩–೪೧೧.

೨೦. ನೋ. ಅಧ್ಯಾಯ ೫.

೨೧. ಅಗಸಾ. ೩೯೬; ನೋ. ಮಾರ್. ಜಿ.ಆರ್., ಅದೇ., ಪು.೨೮೬, ಅ.ಟಿ. ೧೧.

೨೨. ತಮಿಳ್ ಲೆಕ್ಸಿಕನ್ V, (ಮದ್ರಾಸ್. ೧೯೮೨), ಪು. ೨೪೧೬.

೨೩. ಪೆರಿಯಪುರಾಣಂ–ಚಂಡೇಶ್ವರಿ ಚರಿತ್ರೆ, ಭಾ. ೧.

೨೪. ತೊಲ್ಕಾಪ್ಪಿಯಮ್–ಸೊಲ್ಲದಿಗಾರಮ್, ಶೈವಸಿದ್ದಾಂತ ಪಬ್ಲಿಕೇಶನ್ ಲಿ., ತಿರುವೆಲ್ವೇಲಿ–ಚೆನ್ನೈ, ೧೯೫೨ (೨ನೆಯ ಸಂ.). ಪು. ೨೦೭.

೨೫. ಮೆಕ್‌ಕ್ರಿಂಡ್ಲ್, ಜೆ.ಡಬ್ಲ್ಯು., ಏನ್ಸಿಯಂಟ್ ಇಂಡಿಯ IV, (ಬಾಂಬೆ, ೧೮೮೫), ಪು.೧೮೦.

೨೬. ಎಮ್‌ಎಎಆರ್. ೧೯೨೯, ಪು. ೨–೮; ಅದೇ. ೧೯೧೧, ಪು.೩೩.

೨೭. ಗಾಯ್ ಜಿ.ಎಸ್., ಇನ್ಸ್‌ಕ್ರಿಪ್ಷನ್ ಆಫ್ ದಿ ಅರ್ಲಿ ಕದಂಬಾಸ್, ದೆಹಲಿ, ೧೯೯೬, ಶಾ.ಸಂ. ೨೨, ಪು.೧೦೭–೧೧೧.

೨೮. ಎಕ. ೧, ಕೂರ್ಗ ೧ (ಸು.೪೬೬).

೨೯. ಅದೇ. ಮುನ್ನುಡಿ, ಪು.೬ ಅಲ್ಲದೆ ದುರ್ವಿನೀತನ ತಾಯಿ ಕೂಡಾ ಕದಂಬ ಮನೆತನದವಳಾಗಿದ್ದಳು.

೩೦. ಎಮ್‌ಎಎಆರ್. ೧೯೪೧, ಪು. ೧೨೮–೩೧; ಎಇ XLI, ಪು.೧೦೫–೧೧೩, ಎಕ. (ರೈ) IV, ಚನ ೩೪೭. ಎಮ್‌ಎಎಆರ್ ೧೯೨೫, ಪು.೯೦–೯೨, ಎಕ XII, ತುಮು. ೨೩, ಎಕ III, ನಂಜ. ೨೬; ಮುಂ).

೩೧. ಎಮ್‌ಎಎಆರ್. ೧೯೫೬, ಪು. ೧೩೫.

೩೨. ಇಆ XII, ಪು. ೧೩; ಅದೇ. XVIII, ಪು. ೩೬೩.

೩೩. ಎಕ. IV, ಮು. ಪು.೪–೫; ಎಕ. IX, ಮು. ಪು.೩.

೩೪. ಎಕ. IV, ಹೆಗ್ಗಡ. ೫೬, ಮು. ೩–೪.

೩೫. ಎಕ. XI, ದೊಡ್ಡ ಬ. ೩೮.

೩೬. ಎಕ VII, ಶಿಕಾ. ೨೬೪: ಸು. ೩-೪ನೆಯ ಶತಕ.

೩೭. ಜಿ.ಎಸ್.ಗಾಯ್, ಅದೇ. ಪು. ೬೧. ಮತ್ತು ರಾಜಶೇಖರಪ್ಪ ಬಿ., ಕಸಾಪಪ ೧೯೮೪. (ಸಂ. ೬೯). ಪು.೧ರಿಂದ.

೩೮. ಅದೇ.

೩೯. ಜೆಇಎಸ್ಐ X, ಸೊರಬ. ಪು. ೧೧೯; ಇಆ V, ಬೆಂಗ. ಪು. ೧೩೩; ಎಕ XI, ಚಿ.ದು. ೪೩.

೪೦. ಎಕ. (ಮೈ) IX, ಬೇಲೂ. ೫೩೭: ಎಕ. (ಮೈ) XI, ಚಿ.ಮ. ೧೮; ಕವಿವಿ IX, ಬಾದಾ. ೨೨೨ ಮತ್ತು ೩೦೦.

೪೧. ಎಸ್ಐಐ XXVII, ಪಲ್ನಾಡ್ ೨೫೮, ೨೬೦; ನಂದಿಕೊಟ್ಟೂರು ೨೬೧, ೨೬೨, ೨೬೪-೨೬೯. ೨೭೧-೨೭೪; ಎಕ II, ಶ್ರಬೆ. ೧೪, ೧೫, ೨೦-೨೫; ೨೭-೩೬; ಮುಂ.

೪೨. ಇಆ V, ಬೆಂಗ. ೧೩೩; ಎಕ(ಮೈ) IX, ಬೇಲೂ. ೫೩೭.

೪೩. ಎಕ(ಮೈ) XII, ಕಡೂ. ೨೩; ಎಸ್ಐಐ XXVI, ಕಡೂ. ಪು. ೪೮-೫೦; ಎಕ(ಮೈ) XII, ತರೀ. ೧೦೩; ಎಕ XI, ದಾವ. ೬೬.

೪೪. ಉದಾ. 'ಆತ್ರೇಯಗೋತ್ರಾಯ ಪಡುವ ಶರ್ಮ್ಮಗಂ ಇತಿ ಇರ್ವ್ವರ್ವಗಂ ಏಕೋಭಾಗಮ:....' ಎಂದೆಲ್ಲ.

೪೫. ಕದಂಬರ ಮೂಲಸಂಪತ್ತು ಸಮುದ್ರವನ್ನು ಅವಲಂಬಿಸಿದಂತೆ, ಪುನ್ನಾಟರದ್ದು ಕೃಷಿಯನ್ನು ಮತ್ತು ಗಂಗರದ್ದು ಪಶುಪಾಲನೆ (ಕುರಿಸಾಗಣೆ?)ಯನ್ನು ಅವಲಂಬಿಸಿದ ಚಿತ್ರ ದೊರೆಯುವುದು. ಅಲ್ಲದೆ, ಇವರೆಲ್ಲರೂ ಸ್ಥಳೀಯ ಬುಡಕಟ್ಟಿನ ಶೂದ್ರ ಜನಾಂಗವರ್ಗಕ್ಕೆ ಸೇರಿದವರಾಗಿದ್ದರೆಂಬುದರಲ್ಲಿ ಅನುಮಾನವಿಲ್ಲ.

ಒಂದೇ ಮಾತಿನವರು ಎಂದು ಖ್ಯಾತರಾದ 'ಕೋಶರ್'ಗೆ ಸಂಬಂಧಿಸಿದ ಒಂದೆರಡು ವಿಷಯಗಳನ್ನಿಲ್ಲಿ ಪ್ರಸ್ತಾಪಿಸಬಹುದೆಂದೆನಿಸುವುದು. 'ಕೋಶರ್' ಎಂಬ ಪದಬಳಕೆ ಕನ್ನಡದಲ್ಲಿಲ್ಲ, ಆದರೆ 'ಕೊಸರು' ವಿಶೇಷಣ ಹೊಂದಿದ್ದ 'ಕೊಸರುಪಟ್ಕಿ' ಎಂಬ ಗ್ರಾಮದ ಹೆಸರು ಕ್ರಿ.ಶ. ಸು. ೮೦೦ರ ಒಂದು ಗಂಗಶಾಸನದಲ್ಲಿ ಬರುವುದು. 'ಕೋಶರ್' ಪದವು 'ಕೊಸರು' ಎಂದು ರೂಪಾಂತರ ಪಡೆದುಕೊಳ್ಳಬಹುದಾದರೆ ಅದು 'ಕಾಸರು' ಆಗುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. 'ಕಾಸರು' ಎಂದರೆ ಕಾಡು, ಅರಣ್ಯ ಮತ್ತು ಇಲ್ಲಿಯ ಪ್ರಧಾನ ಪಶುಸಂಪತ್ತಾದ ಕಾಡುಕೋಣ. 'ಕಾಸು' ಎಂದರೆ ಕಾಂತಿ, ವಿಕಾಸ; 'ಕೊಸಱು' ಎಂದರೆ ಮೋಹಕ, ಆಕರ್ಷಕ. ಈ ಹಿನ್ನೆಲೆಯಲ್ಲಿ 'ಕಾಸರ' ವಿಶೇಷಣ ಹೊಂದಿದ ಸ್ಥಳ, ಪ್ರದೇಶ, ಗ್ರಾಮವನ್ನು, ನೆನೆದಾಗ ನಮಗೆ ಕೂಡಲೇ ಹೊಳೆಯುವುದು ಕಾಸರಗೋಡು ಅಥವಾ ಕಾಸರಕೋಡು... ಕರ್ನಾಟಕಕ್ಕೆ ವಿಶಿಷ್ಟವಾದ ಕಾಸರಗೋಡು ಹಾಗೂ ಕಾಸರಕೋಡಿಗೂ ಶಂಗಂ ಕಾಲದ ತುಳುವನಾಡಿನ 'ಕೋಶರ'ರಿಗೂ ಏನಾದರೂ ಸಂಬಂಧವಿದೆಯೇ ಎಂಬುದೊಂದು ತೆರೆದ ಪ್ರಶ್ನೆ... ಕೋಶರ್ ಜನಾಂಗದ ಮೂಲನಿವಾಸ, ತುಳುನಾಡು. ಕೊಂಕಣ ಅಥವಾ ಕರಾವಳಿಯ ಈ ಪ್ರದೇಶಕ್ಕೆ 'ತುಳು' ಎಂಬ ಹೆಸರು ಹೇಗೆ ಬಂತು? ಎಂಬ ಪ್ರಶ್ನೆ ಇದೆ... ಶಂಗಂ ಕಾಲದ ಕೋಶರ್ ಮುಂತಾದವರ ಚಾರಿತ್ರಿಕ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು 'ತುಳು' ಪದದ ಮೂಲವನ್ನು ಹುಡುಕತೊಡಗಿದರೆ, ಇದಕ್ಕೆ ಅತ್ಯಂತ ಸಮೀಪವಾದದ್ದು... 'ತೂಳು' ಎಂಬ ಪದ. 'ತೂಳು' ಎಂದರೆ 'ಏರಿಹೋಗು', 'ಹರಿಹಾಯಿ', 'ಹೋರಾಡು', 'ದಾಳಿಮಾಡು' ಎಂದು ಅರ್ಥ. ಶಂಗಂ ಕಾಲದ ನಾಯಕರಲ್ಲಿ ಬಹುತೇಕರು ಸತತವಾಗಿ ಹೋರಾಡುತ್ತಲೇ ಬಾಳಿದವರಾದರೂ ಇದು ತುಳುನಾಡಿನ ಕೋಶರ್ ಜನಾಂಗಕ್ಕೆ ಹೆಚ್ಚು ಹೊಂದಿಕೆಯಾಗುವುದೆನಿಸುವುದು. ಜೀವನದ ಹಂಗುತೊರೆದು, ಕೊಟ್ಟಮಾತಿಗೆ ನಿಷ್ಠರಾಗಿ, ಧರ್ಮಯುದ್ಧ ಮಾಡುವುದು ತುಳುನಾಡಿನ ಯೋಧರ ವಿಶೇಷತೆಯಾಗಿತ್ತೇನೋ. ಕನ್ನಡ ಶಾಸನ ಮತ್ತು ಸಾಹಿತ್ಯದಲ್ಲಿ ಬರುವ 'ತುಟಿಲಾಳ್' ಎಂಬ ಯುದ್ಧವೀರನು ಇದಕ್ಕೆ ಅತ್ಯಂತ ಸನಿಹ ವ್ಯಕ್ತಿಯಾಗಿ ತೋರುವನು. ಈ ಪದ ತಮಿಳಿನಲ್ಲಿ (ತೊಟಿಲ್) ಮತ್ತು ಮಲೆಯಾಳಿ ಭಾಷೆಯಲ್ಲಿ ಇಂದಿಗೂ ಚಾಲ್ತಿಯಲ್ಲಿರುವುದು ಗಮನಾರ್ಹ.

೮

ಅಧ್ಯಾಯ-೮

# ಮುಸುಕು ಮುಂಜಾವಿನ ಕನ್ನಡ ನಾಡು-ನುಡಿ

## ೩. ಕೊಡಗು, ಕೊಂಗಣ ಮತ್ತು ತುಳು ನಾಡವರು

ಶಂಗಮೋತ್ತರ ಕಾಲ (ಕ್ರಿ.ಶ. ೪-೬ನೆಯ ಶತಕಗಳ)ವನ್ನು ಬಹುತೇಕ ತಮಿಳು ವಿದ್ವಾಂಸರು ಅಂಧಕಾರಯುಗವೆಂದು ವರ್ಣಿಸಿರುವರು. ಇದಕ್ಕೆ ಎರಡು ಕಾರಣಗಳುಂಟು: ಶಂಗಂ ಸಾಹಿತ್ಯ ರಚನೆ ಕೊನೆಗೊಂಡದ್ದು ಇದರಲ್ಲಿ ಒಂದು; ಅಶೋಕನ ಕಾಲದಿಂದಲೂ ಸ್ವಾತಂತ್ರ್ಯವನ್ನು ರಕ್ಷಿಸಿಕೊಂಡು ಬಂದಿದ್ದ ತಮಿಳಗಂ 'ಮೂವೇಂದರ್'ರಾದ ಪಾಂಡ್ಯ, ಚೋಳ ಮತ್ತು ಚೇರರ ಆಳ್ವಿಕೆ ಅಂತ್ಯಗೊಂಡದ್ದು ಮತ್ತೊಂದು. ಅಂತ್ಯಕಾಲದ ಶಂಗಂ ಸಾಹಿತ್ಯವನ್ನು ಪೋಷಿಸಿಕೊಂಡು ಬಂದವರಲ್ಲಿ ಪಾಂಡ್ಯ-ಚೋಳರಿಗಿಂತ ಹೆಚ್ಚಿನ ಪಾಲು ಚೇರರಿಗೆ ಸಲ್ಲುವುದು; ಇದರಲ್ಲಿ ಒಂದು ಭಾಗ ವಡುಗ ನಾಯಕರಿಗೆ ಸಲ್ಲುವುದು. ತಮಿಳಗಂನ ಉತ್ತರ ಗಡಿಯನ್ನು (ಕಾವಲ್‌ನಾಡು) ಹಂಚಿಕೊಂಡು ಆಳುತ್ತಿದ್ದ ಈ 'ನೆಡುಮೊಟಿ' (ಅಪೂರ್ಣ ತಮಿಳು ಭಾಷಿಕರು) ಅಥವಾ 'ತಿರವುಮೊಟಿ' (ಅಶುದ್ಧ ತಮಿಳು ಭಾಷಿಕರು)ಗಳಲ್ಲಿ ಅನೇಕರು ಶಂಗಂ ಸಾಹಿತ್ಯಕ್ಕೆ ಪೋಷಣೆಯನ್ನಿತ್ತು ಈ ಕಾಲದ ಕವಿಗಳಿಂದ ಕೀರ್ತಿಸಿಕೊಂಡಿರುವರು. ಕೊಡಗು ಪ್ರದೇಶದಿಂದ ಆಳುತ್ತಿದ್ದ ನಣ್ಣನ್‌ನನ್ನು ಇಪ್ಪತ್ತಕ್ಕೂ ಹೆಚ್ಚು ಶಂಗಂ ಕವಿಗಳು ಕೊಂಡಾಡಿದ್ದು, ಸುಪ್ರಸಿದ್ಧ ಮಾಮೂಲಣಾರ್ ಇವರಲ್ಲಿ ಒಬ್ಬನಾಗಿರುವನು.

ತಮಿಳಗಂ ಉತ್ತರಗಡಿಯ ಈ ವೇಳಿರ್(ನಾಯಕ)ಗಳು ಎಲ್ಲಿಯವರೆಗೂ ತಮಿಳು ರಾಜ್ಯಾಂಗ - ಅದರಲ್ಲೂ ಮೂವರು ಕಿರೀಟಧಾರಿ ಅರಸರೊಡನೆ-ಸ್ಪಂದಿಸಿ-ಸ್ಪರ್ಧಿಸುತ್ತಿದ್ದರೋ ಅಲ್ಲಿಯವರೆಗೆ ತಮಿಳು ಭಾಷೆಯನ್ನೂ ಭಾವನೆಯನ್ನೂ ಅವರೊಡನೆ ಹಂಚಿಕೊಂಡಿದ್ದರು; ಆದರೆ ತಮಿಳು ರಾಜಕೀಯ ಶಕ್ತಿಗಳ ಅವನತಿ ಆರಂಭವಾದ ಕೂಡಲೇ ಇವರೂ ಅವುಗಳೆಡೆ ತಮ್ಮ ತಾತ್ಸಾರ ಮುಖ ತಿರುವತೊಡಗಿದರು. ಈ ಕಾರಣದಿಂದಾಗಿ ಶಂಗಂಕಾಲದ ತಮಿಳು ಸಾಹಿತ್ಯ ಕೃಷಿ ಕ್ರಿ.ಶ. ೩ನೆಯ ಶತಮಾನದ ನಂತರ ಮುಂದುವರಿಯಲು ಸಾಧ್ಯವಾಗದಾಯಿತು.

ಶಂಗಂ ಸಾಹಿತ್ಯದ ಅಂತ್ಯಕ್ಕೆ ಏನೇ ಕಾರಣಗಳಿರಲಿ, ಆ ಕಾಲದ ತಮಿಳಗಂ ರಾಜಕೀಯ ವ್ಯವಸ್ಥೆಯ ಅಂತ್ಯಕ್ಕೆ ತಮಿಳು ರಾಜ್ಯಗಳ ಉತ್ತರಕ್ಕಿದ್ದ ನಾಯಕರುಗಳು

ಕಾರಣರೆಂಬುದರ ಬಗ್ಗೆ ಅನುಮಾನವಿಲ್ಲ. ಇವರಲ್ಲಿ ಇಂದಿನ ಕರ್ನಾಟಕ ಪ್ರದೇಶದವರ ಪಾಲೇನು ಮತ್ತು ಅದರಿಂದಾದ ಅಂತಿಮ ಪರಿಣಾಮವೇನು, ಎಂಬುದನ್ನು ಅರ್ಥಮಾಡಿಕೊಳ್ಳುವುದು ಈ ಲೇಖನದ ಉದ್ದೇಶ.

ಕಾವೇರಿ-ಕಬಿನಿ ಪ್ರದೇಶದೊಡನೆ ಗುರುತಿಸಿಕೊಂಡ ಕೆಲವು ಮನೆತನಗಳ ಬಗ್ಗೆ ಈಗಾಗಲೇ ಚರ್ಚಿಸಿದ್ದು ಅವನ್ನು ಪುನಃ ಪ್ರಸ್ತಾಪಿಸುವ ಅವಶ್ಯಕತೆ ಇಲ್ಲಿಲ್ಲ; ಆದರೆ ಈ ಮಾಲಿಕೆಯಲ್ಲಿ ಸೇರಬಹುದಾದ ಹಾಗೂ ಇಲ್ಲಿಯವರೆಗೂ ನಮ್ಮ ಚರ್ಚೆಗೆ ಒಳಗಾಗದ ಕೊಂಗು, ಕೋಶರ್, ಮೋಹೂರ್‌ಗಳ ಬಗ್ಗೆ ಮತ್ತು ತಮಿಳಗಂ ರಾಜಕೀಯ ವ್ಯವಸ್ಥೆಯನ್ನು ಬುಡಮೇಲುಮಾಡಿದ ಕಳಭ್ರರ ಬಗ್ಗೆ ನಮ್ಮ ಗಮನ ಹರಿಸುವುದವಶ್ಯ.

**ಕೊಂಗರು:**

'ಕೊಡಗು ಕೊಂಗರ್' ಅಥವಾ ಕೊಡಗಿನ ಕೊಂಗರು ಎಂದು *ಶಿಲಪ್ಪದಿಗಾರದಲ್ಲಿ* ಬರುವ ಉಲ್ಲೇಖದಿಂದ ಕೊಂಗರೆನ್ನುವವರು ಮೂಲತಃ ಕೊಡಗಿನವರಾಗಿದ್ದರೆಂದು ಗ್ರಹಿಸಬಹುದು.[೧] ಕೊಂಗು ಮತ್ತು ಕೊಡಗು ಪದಗಳ ಮೂಲ ಒಂದೇ ಎಂದು ಕಿಟ್ಟೆಲ್ ವಾದಿಸಿರುವರು. ಅಲ್ಲಿಂದ ಕೊಂಗರು ಕ್ರಮೇಣ ದಕ್ಷಿಣಕ್ಕೂ (ಅಂದರೆ ನೀಲಗಿರಿಯ ದಕ್ಷಿಣ-ಪೂರ್ವಕ್ಕಿರುವ ಇಂದಿನ ಕೊಯಂಬತ್ತೂರು ಜಿಲ್ಲೆ) ಹಾಗೂ ಪೂರ್ವಕ್ಕೂ (ಅಂದರೆ ಧರ್ಮಾಪುರಿ-ಸೇಲಂ ಜಿಲ್ಲೆಗಳಿಗೆ) ವಿಸ್ತರಿಸಿಕೊಂಡರೆಂದು ಕಾಣುವುದು. ಒಂದು ಕಾಲಘಟಕದಲ್ಲಿ ಕೊಂಗರು (ಚೋಳ ರಾಜಧಾನಿ) ಕರೂರಿನ ಅಧಿಪತಿಗಳಾಗಿದ್ದರೆಂದೂ ತಿಳಿದುಬರುವುದು. ತನ್ನ ಬಲವನ್ನೆಲ್ಲ ರಣರಂಗಕ್ಕಿಳಿಸಿ ಚೋಳನು ಕರೂರಿನ ಮೇಲೆ ಧಾಳಿಮಾಡಿ ಕೊಂಗರನ್ನು ಶರಣಾಗಿಸಿದ ವಿವರ ಪದಿಟ್ರುಪತ್ತುವಿನಲ್ಲಿ ಬರುವುದು.[೨] ಕೊಂಗರು ಎಷ್ಟು ಆಳವಾಗಿ ತಮಿಳಗಂ ಪ್ರವೇಶಿಸಿದ್ದರೆಂದರೆ, ಅಲ್ಲಿಯ ಬಲಿಷ್ಠ ಅರಸುಮನೆತನಗಳಾದ ಚೇರ ಮತ್ತು ಚೋಳರು (ಆಗಾಗ್ಗೆ ಪಾಂಡ್ಯರೂ) ಸತತವಾಗಿ ಹೋರಾಡಿ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಹೆಣಗಬೇಕಾಯಿತು.

ತಮಿಳಿನಲ್ಲಿ 'ಕೊಂಗ್' ಪದಕ್ಕೆ ಎರಡು ಅರ್ಥಗಳಿವೆ: ಒಂದು, ಜೇನುತುಪ್ಪ ಮತ್ತೊಂದು, (ಈ ಹೆಸರಿನ) ಜನಾಂಗ. ಇವೆರಡನ್ನೂ ಸೇರಿಸಿದರೆ, ಜೇನುಸಾಕಿ ಜೀವನ ನಿರ್ವಹಿಸುವ ಗುಡ್ಡಗಾಡಿನ ಜನಾಂಗ ಎಂಬ ಭಾವನೆ ಬರುವುದು. ಕಲ್ಲುಸಕ್ಕರೆಯಲ್ಲಿ ಅವರೆಕಾಳನ್ನು ಮಿಶ್ರಣಮಾಡಿ ಮೆಲ್ಲುತ್ತಿದ್ದ ಇವರ ವಿಶೇಷತೆಯನ್ನು ಶಂಗಂ ಕವಿಯೊಬ್ಬ ಗುರುತಿಸಿರುವನು.[೩]

ಕೊಂಗರ ಮೂಲವೃತ್ತಿ ಪಶುಪಾಲನೆ. ಧೂಳನ್ನೆಬ್ಬಿಸುತ್ತಾ ದಾಹ ಇಂಗಿಸಿಕೊಳ್ಳಲು ಆತುರದಲ್ಲಿ ಧಾವಿಸುತ್ತಿದ್ದ ಇವರ ಪಶುಗಳನ್ನು ಅಗನಾನೂಱಿನ ಕವಿಯೊಬ್ಬ ಕಂಡಿದ್ದ.[೪] ಅಪಾರ ಪಶು ಸಂಪತ್ತನ್ನು ಪಡೆದಿದ್ದ ಕೊಂಗಾಧಿಪತಿಯ ರಾಜ್ಯವನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿದ ಕುಟ್ಟನಾಡ (ಇಮಯವರಂಬನ್ ಚೇರನ ಸೋದರ) ಕುಟ್ಟುವನ್ ಬಗ್ಗೆ ಪದಿಟ್ರುಪತ್ತು ಪ್ರಸ್ತಾಪಿಸುವುದು.[೫] ಈ ಸಂಪತ್ತಿನಲ್ಲಿ ಹಸುಗಳಲ್ಲದೆ ಕುರಿಗಳೂ ಸೇರಿದ್ದವೆಂಬ ವಿವರ ದೊರಕುವುದು.[೬]

ಕೊಂಗರ ರಾಜ್ಯ ಪಶ್ಚಿಮ (ಅರಬ್ಬೀ) ಸಮುದ್ರದಿಂದ ಅನತಿ ದೂರದಲ್ಲಿತ್ತು. ಇದರ ಹೆಚ್ಚಿನ ಭಾಗ ಕಗ್ಗಲ್ಲ ದಿನ್ನೆಗಳಿಂದೊಡಗೂಡಿದ ಬೀಳುಭೂಮಿಯಾಗಿದ್ದುದರಿಂದ ಅದನ್ನು ಅಗೆದು ಹಸನುಗೊಳಿಸಲು ಇವರು ಕಬ್ಬಿಣದ ಸಾಧನಗಳನ್ನು ಬಳಸುತ್ತಿದ್ದರು.[೭] ಆಯ್ ಎಂಬ ಚೋಳ ದಂಡನಾಯಕನು ಇವರನ್ನು ಪಶ್ಚಿಮ ಸಮುದ್ರದವರೆಗೂ ಅಟ್ಟಿಸಿಕೊಂಡು ಹೋದ ಒಂದು ಪ್ರಸಂಗ ಪುಱನಾನೂಱುವಿನಲ್ಲಿ ಬರುವುದು.[೮] ಕಲ್ಲುಭೂಮಿಯಾಗಿದ್ದರೂ ಕೊಂಗನಾಡು 'ಕದಿರ್‌ಮಣಿ'ಗಳ ಅಪಾರ ಆಗರವಾಗಿತ್ತು, ಎಂಬುದಕ್ಕೆ ಕವಿ ಅರಿಸಿಲ್ ಕಿಱಾರ್ ಸಾಕ್ಷಿ ಒದಗಿಸಿರುವನು.[೯] ಹುಲ್ಲುಗಾವಲಿನಲ್ಲಿ ಹಸುಗಳನ್ನು ಮೇಯಿಸುತ್ತಿದ್ದ ದನಗಾಹಿಗರಿಗೂ ನೆಲದ ಮೇಲೆ ಅಲ್ಲಲ್ಲಿ ಚೆಲ್ಲಿದ್ದ ಹಾಗೂ ಕಲ್ಲಿನ ಗೊಟರುಗಳನ್ನು ತುಂಬಿದ್ದ, ಹೊಳೆವ ಈ ಮಣಿಗಳು ದೊರಕುತ್ತಿದ್ದವಂತೆ. ಈ ಮಣಿ–ನಿಕ್ಷೇಪ ದಕ್ಷಿಣ ಮೈಸೂರಿನ ಕಬಿನೀ ಪ್ರದೇಶದ ಪುನ್ನಾಟದವರೆಗೂ ವಿಸ್ತರಿಸಿತ್ತೆಂದು ಟೋಲಮಿ ವರದಿ ಮಾಡಿರುವನು.[೧೦] ಇವುಗಳಿಂದ ಕೊಂಗರು ತಮ್ಮ ಕಟಿಯನ್ನು ಅಲಂಕರಿಸಿಕೊಂಡು ಕ್ರೀಡಿಸುತ್ತಿದ್ದರೆಂದು ತಿಳಿಸಲಾಗಿದೆ.[೧೧] ಪರಿಪೂರ್ಣ ಅರಳಿದ ಪುಷ್ಪಮಾಲೆಗಳಿಂದ ಅಲಂಕರಿಸಿಕೊಳ್ಳಲು ಕೊಂಗರು ಹೆಚ್ಚು ಇಷ್ಟಪಡುತ್ತಿದ್ದರು. ಇವರ ನಾಡಿನ ಒಂದು ಬಗೆಯ ಹಳದಿ ಅಥವಾ ಸುವರ್ಣ ಬಣ್ಣದ ಹೂಗಳನ್ನು 'ಕೊಂಗಂ' ಅಥವ 'ಕೊಂಗಿಲವಂ' ಎಂಬ ಹೆಸರಿನಿಂದ ಕರೆಯಲಾಗುತ್ತಿತ್ತು. ಮೈಸೂರು ದಕ್ಷಿಣಕ್ಕಿರುವ ೩೦೦೦ದಿಂದ ೬೦೦೦ ಅಡಿ ಎತ್ತರದ ಬೆಟ್ಟಸಾಲುಗಳಲ್ಲಿ ಕೊಂಗಂ ಮರಗಳು ಬೆಳೆಯುತ್ತಿದ್ದು ಈ ಪ್ರದೇಶ ಇಂದಿಗೂ ಪಶುಪಾಲನೆಯ ಕೇಂದ್ರವಾಗಿರುವುದನ್ನು ಗಮನಿಸುವುದವಶ್ಯ. ಮಳೆನೆರಳಿನ ಈ ಉನ್ನತ ಒಣ ಭೂಮಿಯಲ್ಲಿ ಕೊಂಗಂ ಗಿಡಗಳು ಈಗಲೂ ಸಮೃದ್ಧವಾಗಿ ಬೆಳೆಯುತ್ತಿವೆ.[೧೨]

ಕೊಂಗರು ದಿಟ್ಟ ಹೋರಾಟಗಾರರಾಗಿದ್ದರು. ಶೂಲ ಅವರ ಪ್ರಧಾನ ಆಯುಧವಾಗಿತ್ತು. ಚೇರ, ಚೋಳ ಮತ್ತು ಪಾಂಡ್ಯರ ವಿರುದ್ಧ ಸತತವಾಗಿ ಅವರು ಹೋರಾಡಿದ ಬಗ್ಗೆ ಮತ್ತು ಚೋಳನಾಡಿನ ಹೃದಯ ಭಾಗವನ್ನು ಅವರು

ವಶಪಡಿಸಿಕೊಂಡ ಬಗ್ಗೆ ಸಾಕಷ್ಟು ಪುರಾವೆಗಳು ದೊರಕುವುವು. ಧ್ವಜ ಮತ್ತು ಆಯುಧ ಸಂಗ್ರಹವನ್ನು ಆನೆಗಳ ಮೇಲೆ ಹೇರಿಕೊಂಡು ಅವರು ರಣಾಂಗಣ ಪ್ರವೇಶಿಸುತ್ತಿದ್ದುದನ್ನೂ ಕೋಟೆಕಾಳಗದಲ್ಲಿ ಅವರು ಬಳಸುತ್ತಿದ್ದ ಚಿಮ್ಮುಗಲ್ಲಿನ ಯಂತ್ರವನ್ನೂ ಪದಿಟ್ರುಪತ್ತುವಿನಲ್ಲಿ ವಿವರಿಸಲಾಗಿದೆ.[೧೩]

ಕೊಂಗರು ತಮ್ಮ ಸೇನಾ ಚಟುವಟಿಕೆಯನ್ನು ತಮಿಳಗಂಗೆ ಕೇಂದ್ರೀಕರಿಸಿರುವುದನ್ನು ನೋಡಿದರೆ, ಅವರು ನಿಶ್ಚಿತವಾಗಿಯೂ ಕೊಡಗು-ಕೊಂಕಣಿಗರಾಗಿದ್ದರೆಂಬ ಭಾವನೆ ಬರುವುದು. ಪಶುಪಾಲನೆ-ಕುರಿಸಾಕಣೆ ಅವರ ಪ್ರಧಾನ ಕಸುಬಾಗಿತ್ತೆಂಬುದನ್ನು ಈಗಾಗಲೇ ಗಮನಿಸಿದ್ದೇವೆ. ಈ ಲಕ್ಷಣಗಳನ್ನು ಬಹುತೇಕ ಹೋಲುವ ಕನ್ನಡನಾಡಿನ ಆರಂಭಕಾಲದ ನಾಯಕ ಮನೆತನವೆಂದರೆ ಗಂಗಡಿಗರದು ಅಥವಾ ಪಶ್ಚಿಮ ಗಂಗರದೆನಿಸುವುದು. ಕ್ರಿ.ಶ. ೪ನೆಯ ಶತಮಾನದಲ್ಲಿ ಕೋಳಲವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಳ್ಳುವ ಮುಂಚೆ ಕಂಕರ್, ಕಂಗರ್, ಕೊಂಗರ್ ಎಂದು ತಮಿಳರಿಗೆ ಅವರು ಪರಿಚಯವಾಗಿದ್ದರೇನೋ. ಗಂಗರಾಜ್ಯದ ಮೂಲಪುರುಷನು 'ಕೊಂಗುಣಿವರ್ಮ' ಎಂದು ಕರೆದುಕೊಂಡದ್ದನ್ನು ಇಲ್ಲಿ ಗಮನಿಸುವುದವಶ್ಯ. ತಮ್ಮ ಸಾಧನೆಯನ್ನು ಹೊಗಳಿಹಾಡುವ ಕವಿಗಳನ್ನು ಇವರು ಪೋಷಿಸದಿದ್ದರೂ ತಮಿಳಗಂ ಬಹುಭಾಗವನ್ನು ತಮ್ಮ ವಶಕ್ಕೆ ತೆಗೆದುಕೊಂಡು ತಮ್ಮ ಶಕ್ತಿಪ್ರದರ್ಶಿಸಿ, ತಮಿಳು ಕವಿಗಳು ಇವರನ್ನು ಗುರುತಿಸುವಂತೆ ಮಾಡಿದ್ದರು. ಇದು ಏನೇ ಇರಲಿ, ಮೊಟ್ಟಮೊದಲಿಗರಾಗಿ ಇವರು ತಮಿಳೇತರ ಭಾಷೆಯನ್ನು ಬಳಸುವ ಕ್ರಿಯೆಯನ್ನು ಕರ್ನಾಟಕದಲ್ಲಿ ಪ್ರಾರಂಭಿಸಿದರೆಂಬುದು ಮುಖ್ಯ.

ನನ್ನನ್:

ಕೊಂಗರ ತಾಯ್ನೆಲ ಕೊಡಗು ಎಂಬುದು ನಿಖರಗೊಂಡಿದ್ದರೂ ಈ ರಾಜವಂಶದವರ ಬಗ್ಗೆ ಸಮಗ್ರ ಮಾಹಿತಿ ದೊರಕದಿರುವುದೊಂದು ಆತಂಕದ ವಿಷಯ. ಆದರೆ ಈ ಪ್ರದೇಶದೊಡನೆ ಗುರುತಿಸಿಕೊಂಡ ನನ್ನನ್ ಎಂಬ ವೀರನನ್ನು ಇಪ್ಪತ್ತಕ್ಕೂ ಹೆಚ್ಚು ಶಂಗಂ ಕಾವ್ಯಗಳಲ್ಲಿ ಪ್ರಸ್ತಾಪಿಸಲಾಗಿದೆ. ದಕ್ಷಿಣ ಕರ್ನಾಟಕ ಮತ್ತು ಉತ್ತರ ಕೇರಳದ ಮೇಲೆ ಅಧಿಕಾರ ಸ್ಥಾಪಿಸಿಕೊಂಡಿದ್ದ ಈತನು ಚೇರರ ವಿರುದ್ಧ ಸತತವಾಗಿ ಹೋರಾಡಬೇಕಾದುದು ಅನಿವಾರ್ಯವಾಗಿತ್ತೆಂದು ತೋರುವುದು. ಪುಱನಾನೂಱುವಿನಲ್ಲಿ ಇವನನ್ನು ಕೊಂಕಾಣನಾಡಿನ ಬೆಟ್ಟಪ್ರದೇಶದ ಒಡೆಯನೆಂದು ಗುರುತಿಸಲಾಗಿದೆ.[೧೪] ಏಟಿಯಿಲ್ ಬೆಟ್ಟ ಹಾಗೂ ಸುವರ್ಣ ನಿಕ್ಷೇಪದ ಕೊಂಕಾಣದ ಅಧಿಪತಿ ಇವನಾಗಿದ್ದನೆಂದು ನಟ್ರಿಣೈ ತಿಳಿಸುವುದು.[೧೫] ಈ ಬೆಟ್ಟದ ಮತ್ತೊಬ್ಬ ನಾಯಕ ಪಿಂಡನ್ ಎಂಬುವನನ್ನು ಈತನು ಬಗ್ಗು

ಬಡಿದ ಪ್ರಸ್ತಾಪ *ಅಗನಾನೂಱಿನಲ್ಲಿ* ಬರುವುದು.[೧೬] ಅಲ್ಲದೆ ತುಳುನಾಡಿನ ಅಧಿಪತಿಗಳಾಗಿದ್ದ ಕೋಶರರನ್ನು ಅವರ ನೆಲದಿಂದ ಹೊರದೂಡಿ ಅಲ್ಲಿ ಈತನು ತನ್ನ ನೆಲೆಯನ್ನು ಸ್ಥಾಪಿಸಿಕೊಂಡ ಸ್ಪಷ್ಟ ವಿವರವೂ ದೊರಕುವುದು. ಅವನ ಉಚ್ಛ್ರಾಯ ಕಾಲದಲ್ಲಿ ಕೊಂಕಣ, ತುಳುನಾಡು, ಪೂಟಿನಾಡು (ಕರಾವಳಿಯ ಭಾಗ)ಗಳನ್ನಲ್ಲದೆ *ತಮಿಳಗಂ* ಪಶ್ಚಿಮೋತ್ತರ ಪ್ರದೇಶದ ಮೇಲೆ ಅಧಿಪತ್ಯ ಹೊಂದಿದ್ದನೆಂದು ತೋರುವುದು.

ನಣ್ಣನ್ ಅಪಾರ ಚದುರಂಗ ದಳದ ಒಡೆಯನಾಗಿದ್ದನು. *ಏೞಿಯಿಲ್ ಬೆಟ್ಟದಲ್ಲಿ* ಅವನಿಗೆ ಐದುಸುತ್ತಿನ ಕೋಟೆಯೊಂದಿತ್ತು. ಉಂಬಲ್ಕಾಡು(ಆನೆಗಳ ಕಾಡು)ವಿನ ಉತ್ತರದಲ್ಲಿ 'ಅಗಪ್ಪ' ಎಂಬ ಒಂದು ಅಭೇದ್ಯ ಗಿರಿಕೋಟೆಯನ್ನು ರಚಿಸಿಕೊಂಡಿದ್ದನು. ಇದು ಎತ್ತರವಾದ ಗೋಡೆಗಳಿಂದಲೂ ಆಳವಾದ ಕಂದಕಗಳಿಂದಲೂ ಸುತ್ತುವರಿದಿತ್ತು. ಈ ಕೋಟೆಗೆ ಲಗ್ಗೆ ಹಾಕಿದ ಕುಟ್ಟುವನ್ ಚೇರನ ಪ್ರಸ್ತಾಪವನ್ನು ಶಂಗಂ ಕವಿಯೊಬ್ಬನು ಮಾಡಿರುವನು.[೧೭] ಅಗಪ್ಪ ಹೆಸರಿನ ಹಳ್ಳಿಯೊಂದು ಈಗಲೂ ಕುರುಂಬರನಾಡು ತಾಲೂಕಿನಲ್ಲಿರುವುದನ್ನೂ, ಅದರ ಬಳಿಯಲ್ಲಿ ಪಾಮಲೈ ಗಿರಿ ಸಾಲಿರುವುದನ್ನೂ ಇಲ್ಲಿ ಗಮನಿಸುವುದವಶ್ಯ.

ಚೇರರಿಗೂ ನಣ್ಣನ್‌ಗೂ ನಡೆಯುತ್ತಿದ್ದ ಎಡೆಬಿಡದ ಕಾದಾಟದಲ್ಲಿ ಸೋಲು-ಗೆಲುವು ಇಬ್ಬರಿಗೂ ಸಮಾನವಾಗಿ ಹಂಚಿಕೆಯಾಗಿರಲು ಸಾಕು. ಒಂದು ಕಾಲಘಟಕದಲ್ಲಿ ನೂರ್ಮಡಿ ಚೇರಲ್ ತನ್ನ ರಾಜ್ಯವನ್ನಲ್ಲದೆ, ತನ್ನ ಮುಕುಟ ಮತ್ತು ಹಾರವನ್ನು ನಣ್ಣನ್‌ಗೆ ಒಪ್ಪಿಸಿದನೆಂದು ಒಬ್ಬ ಕವಿ ತಿಳಿಸುವನು.[೧೮] ಚೇರ ಮತ್ತು ನಣ್ಣನ್ ದಂಡನಾಯಕರ ಮಧ್ಯ 'ಪರಿ'ಯ ಬಳಿ ನಡೆದ ಮತ್ತೊಂದು ಕಾಳಗದ ವಿವರವನ್ನು ಕವಿ ಪರಣರ್ ಒದಗಿಸಿರುವನು.[೧೯] ಕೊಂಗುನಾಡಿನ ಕೇಂದ್ರವಾದ ಹಾಗೂ ಮೈಸೂರಿನ ಗಡಿಯಾಚೆಗಿದ್ದ 'ಪರಂಬು'ವಿನ ಒಡೆತನ ಹೊಂದಿದ್ದ ನಣ್ಣನ್ ಇದರ ಆಡಳಿತೆಯನ್ನು 'ಪಾರಿ' ಎಂಬ ನಾಯಕನಿಗೆ ವಹಿಸಿಕೊಟ್ಟಿದ್ದನು. ಈ ನಾಯಕ ತನ್ನ ಮಗಳನ್ನು ತಮಿಳಗಂ ಮೂವರು ಅರಸರಲ್ಲಿ ಒಬ್ಬನಿಗಾದರೂ ಮದುವೆ ಮಾಡಿಕೊಡಲು ಒಪ್ಪದಿದ್ದಾಗ ಮೂವೇಂದರರ ಸೇನಾ ಒಕ್ಕೂಟವು ಅವನ ಮೇಲೆ ಧಾಳಿ ಮಾಡಿ ಅವನನ್ನು ರಣರಂಗದಲ್ಲಿ ಕೊಂದದ್ದನ್ನು ಶಂಗಂ ಕವಿ ಕಪಿಲರ್ ಸಮಗ್ರವಾಗಿ ವರ್ಣಿಸಿರುವನು.[೨೦]

ಒಂದು ಕಾಲದಲ್ಲಿ ನಣ್ಣನ್ ಎಷ್ಟು ಬಲಶಾಲಿಯಾಗಿದ್ದನೆಂದರೆ, ಅವನ ವಿರುದ್ಧ ಒಂಟಿಯಾಗಿ ಹೋರಾಡಲು ತಮಿಳಗಂ ಯಾವ ಕಿರೀಟಧಾರಿ ಅರಸನಿಗೂ ಸಾಧ್ಯವಾಗುತ್ತಿರಲಿಲ್ಲ. ಒಮ್ಮೆ ಚೇರ ಮತ್ತು ಪಸುಮ್‌ಪಾಂಡ್ಯ (ತನ್ನ ಸಾಮಂತನಾದ

ನೆಡುಮಾನ್ ಅಂಜಿಯೊಡಗೂಡಿ) ನಣ್ಣನ್ ಮೇಲೆ ಏರಿಬಂದನು; ಆ ಗಜಕಾಳಗದಲ್ಲಿ ಅಟಿಯರಸನು ತಲೆಕಳೆದುಕೊಂಡದ್ದನ್ನು ನೋಡಿ ಮಿಂಚುವ ಖಡ್ಗಗಳ ಕೊಂಗರು ಆನಂದದಿಂದ ಜಯಕಾರ ಹಾಕಿದರೆಂಬ ವಿಷಯ ತಿಳಿದು ಬರುವುದು.[೨೧]

ತಮಿಳಗಂ ಪ್ರಧಾನ ರಾಜಕೀಯ ಶಕ್ತಿಗಳು ತಮ್ಮೊಡನೆ ಹಾಗೂ ತಮ್ಮ ಅಧಿರಾಜರೊಡನೆ ಅನುಕೂಲಕ್ಕೆ ತಕ್ಕಂತೆ ಹೊಂದಾಣಿಕೆ ಮಾಡಿಕೊಂಡು, ತಮಿಳುನಾಡಿನ ಉತ್ತರದ ನಾಯಕರ ವಿರುದ್ಧ ಹೋರಾಡುತ್ತಿದ್ದರು. ಇದರಂತೆ ದಕ್ಷಿಣ ಕರ್ನಾಟಕದ ನಾಯಕರೂ ತಮ್ಮ ಗುರಿಸಾಧಿಸಿಕೊಳ್ಳಲು ಆಗಾಗ್ಗೆ ಸೈನಿಕ ಒಕ್ಕೂಟಗಳನ್ನು ರಚಿಸಿಕೊಂಡು ತಮಿಳಗಂ ವಿರುದ್ಧ ಹೋರಾಡುತ್ತಿದ್ದರು. ಚೋಳ ದಂಡನಾಯಕನೊಬ್ಬನು ನಣ್ಣನ್ ಉದಯನ್ ಮೇಲೆ ದಾಳಿ ಮಾಡಿದಾಗ, ಇವನ ನೆರವಿಗೆ ನಂದಿಲಾಂಛನದ ಏಜ್ಞ್ಯ್, ಸುವರ್ಣಪ್ರಿಯ ಅತ್ತಿ, ಛಲಗಾರ ಕಟ್ಟಿ ಮಹಾ ಧನುಸ್ಸಿನ ಪುನಱುಜ್ಞ್ಯೆ ಮತ್ತು ಕಂಗನ್ ನಿಂತ ವಿವರ ದೊರಕುವುದು.[೨೨] ಇವರಲ್ಲಿ ಏಜ್ಞ್ಯೆ (ಬಾಣರಾಜ), ಕಂಗನ್ (ಕೊಂಗನ್=ಗಂಗ), ಪುನ್ನರಾಜ (ಪುನ್ನಾಟಾಧಿಪತಿ)ಗಳನ್ನು ಸುಲಭವಾಗಿ ಗುರುತಿಸಬಹುದು. ಕರೂರಿನ ಬಳಿ ನಡೆದ ಈ ಭೀಕರ ಕದನದಲ್ಲಿ ಚೋಳ ದಂಡನಾಯಕ ತನ್ನ ತಲೆಯನ್ನು ಒಪ್ಪಿಸಿದನೆಂದೂ ಅದರಿಂದ ಆತಂಕಗೊಂಡ ಚೋಳರಸನು ಸ್ವತಃ ರಣರಂಗದೆಡೆ ಧಾವಿಸಬೇಕಾಯಿತೆಂದೂ ತಿಳಿಸಲಾಗಿದೆ.

ಶಂಗಂಕಾಲದ ಕೊನೆಯ ಘಟಕದಲ್ಲಿ ದಕ್ಷಿಣ ಕರ್ನಾಟಕದ ನಾಯಕನಾಗಿ ಹೊರಹೊಮ್ಮಿದ ನಣ್ಣನ್‌ನಿಗೂ ಕೊಂಗುವಿನ ಉಳಿದ ನಾಯಕರಿಗೂ ಇದ್ದ ಸಂಬಂಧದ ಬಗ್ಗೆ ಸ್ಪಷ್ಟತೆ ದೊರೆಯದಿದ್ದರೂ (ಕಣ್ಣಾನೂರಿನ ಉತ್ತರಕ್ಕಿರುವ) ಏಟಿಲ್ ಬೆಟ್ಟದಿಂದ ತುಳುನಾಡು ಪ್ರವೇಶಿಸಿದ ಈತನು ಅಲ್ಲಿಯ ಮೂಲ ನಿವಾಸಿಗಳಾದ ಕೋಶರರನ್ನು ಹೊರದೂಡಿ ಕೊಡಗು-ಕೊಂಕಣದ ಒಡೆತನ ಸಾಧಿಸಿಕೊಂಡು, ಆ ನಂತರ ಚೇರ ಚೋಳ ಪಾಂಡ್ಯರ ವಿರುದ್ಧ ಹೋರಾಡುತ್ತಾ ತನ್ನ ಅಧಿಕಾರವನ್ನು ತಮಿಳಗಂ ಕೇಂದ್ರಭಾಗಕ್ಕೆ ವಿಸ್ತರಿಸಿಕೊಂಡನೆಂಬುದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಈ ರಾಜಕೀಯ ಚದುರಂಗದಾಟದಲ್ಲಿ ತಮಿಳು ಮತ್ತು ತಮಿಳೇತರ ನಾಯಕರ ಒಡನಾಟವು ಆಗಾಗ್ಗೆ ಸ್ಥಿತ್ಯಂತರಗೊಳ್ಳುತ್ತಿತ್ತು. ದಕ್ಷಿಣ ಕರ್ನಾಟಕದ ನಾಯಕ ಬಳಗದಲ್ಲಿ ಅಂತಸ್ತನ್ನು ಹೆಚ್ಚಿಸಿಕೊಂಡ ನಣ್ಣನ್ ಒಂದು ಬಗೆಯಲ್ಲಿ ಇವರ ಮುಂದಾಳಾದನು. ಇದಲ್ಲದೆ, ಅಸಂತೃಪ್ತ ತಮಿಳಗಂ ವೇಳಿರ್‌ಗಳಲ್ಲಿ ಕೆಲವರನ್ನು ಇವನು ತನ್ನೆಡೆ ಸೆಳೆದುಕೊಂಡದ್ದನ್ನು ಶಂಗಂ ಸಾಹಿತ್ಯದಲ್ಲಿ ಸ್ಪಷ್ಟಗೊಳಿಸಲಾಗಿದೆ. ಇವನು ಹೋರಾಡಿದ ರಣರಂಗಗಳಲ್ಲಿ ಪಟ್ರೈಯನ್, ಪಾಟಿ, ವಾಗೈ, ಶಂಗಂಕವಿಗಳ ವಿಶೇಷ ಗಮನ ಸೆಳೆದವು.[೨೩] ಒಂದು ಬಗೆಯಲ್ಲಿ ಮುಂಗೋಪಿಯೂ ಛಲಗಾರನೂ ಆದ

ಇವನು ಕೊನೆಗೆ ತನ್ನ ಪ್ರಾಣವನ್ನೇ ರಣರಂಗದಲ್ಲಿ ಅರ್ಪಿಸಿದನು. ಜೀವನದುದ್ದಕ್ಕೂ ನಣ್ಣನ್ ವಿರುದ್ಧ ಹೋರಾಡಿದ ಚೇರರಸನು ವಾಗೈಯಲ್ಲಿ ಸಾಧಿಸದ ವಿಜಯವು ಈ ವೀರನ ಅಂತ್ಯಕ್ಕೆ ಕಾರಣವಾಯಿತು.

ದಕ್ಷಿಣ ಕನ್ನಡನಾಡಿನ ನಾಯಕತ್ವವನ್ನು ಗಳಿಸಿಕೊಂಡರೂ ತುಳುನಾಡು ಮತ್ತು ಅದರ ಸುತ್ತಮುತ್ತಲಿನ ಒಂದೆರಡು ಸ್ಥಳೀಯ ರಾಜಕೀಯ ಶಕ್ತಿಗಳು ನಣ್ಣನ್‌ನನ್ನು ತಮ್ಮ ನಾಯಕನೆಂದಾಗಲೀ ಮಿತ್ರನೆಂದಾಗಲೀ ಒಪ್ಪಲಿಲ್ಲವೆಂಬ ಅಂಶ ಕುತೂಹಲಕಾರಕ. ಅಂಥವರಲ್ಲಿ ತುಳುಮೂಲದ ಕೋಶರ್ ಮತ್ತು ಅವರ ಗಡಿಗಂಟಿಕೊಂಡಿದ್ದ ಮೋಹೂರ್ ಹೆಸರಾರ್ಹರು. ಇವರಿಬ್ಬರೂ ಕನ್ನಡ ಗಡಿನಾಡಿನ ಕಲಿಗಳಾಗಿದ್ದರು.

**ಕೋಶರ್:**

ಚಕ್ರವರ್ತಿ ಅಶೋಕನ ಗಿರಿನಾರ್, ಕಲ್ಸಿ, ಜೌಗಡ್, ಷಹಬಾಜ್‌ಗರ್ಹೀ ಮತ್ತು ಮನ್ಸೇರಾ ಬಂಡೆಗಲ್ಲ ಶಾಸನಗಳಲ್ಲಿ ಮೌರ್ಯ ಸಾಮ್ರಾಜ್ಯದ ದಕ್ಷಿಣ ಗಡಿಯಾಚೆಗಿದ್ದ ತಮಿಳುನಾಡಿನ ಮೂವೇಂದರ್ ಮತ್ತು ತಾಮ್ರಪರ್ಣಿಗಳನ್ನಲ್ಲದೆ 'ಸತಿಯಪುತೋ' ಅಥವಾ ಸತ್ಯಪುತ್ರ ಎಂಬ ಒಂದು ಅರಸುಮನೆತನವನ್ನು ಪ್ರಸ್ತಾಪಿಸಲಾಗಿದೆ. ಕಳೆದ ಒಂದು ಶತಮಾನದಿಂದ ಈ ಸತ್ಯಪುತ್ರರ ಬಗ್ಗೆ ವಿದ್ವಾಂಸರು ಚರ್ಚಿಸುತ್ತಾ ಬಂದಿರುವರು. ಇವರು ಪಶ್ಚಿಮ ಕರಾವಳಿಯ ಮೈಸೂರು, ಮಲಬಾರು, ಕೊಡಗು ಮತ್ತು ಕೊಯಂಬತ್ತೂರು ಪ್ರದೇಶಗಳನ್ನು ಆಳುತ್ತಿದ್ದವರೆಂದೂ (ವಿ.ಎ.ಸ್ಮಿತ್), *ಕೇರಳೋತ್ಪತ್ತಿ*ಯಲ್ಲಿ ಎರಡು ಬಾರಿ ಉಲ್ಲೇಖಗೊಂಡ ಜನಾಂಗವೆಂದೂ, ಚೇರಮಾನ ರಾಜ್ಯದ ಉತ್ತರ ಭಾಗದಿಂದ ಆಳಿದವರೆಂದೂ (ಪಿ.ಜಿ. ಥೋಮ್), ಮಂಗಳೂರು ಸುತ್ತಮುತ್ತಲ ಪ್ರದೇಶದ ಜನನಾಯಕರೆಂದೂ (ಎಲ್.ಡಿ. ಬಾರ್ನೆಟ್) ವಾದಿಸಿರುವರು. ಕೋಶರ್ ಎಂಬ ಪದ ಕನ್ನಡದ ಅಪಭ್ರಂಶವೆಂಬ (ಎಸ್.ಕೆ.ಐಯ್ಯಂಗಾರ್) ಸೂಚನೆಯೂ ಇದೆ.

'ಸತಿಯಪುತ' ಎಂದ ಕೂಡಲೇ ನಮಗೆ ಮೊದಲು ಹೊಳೆಯುವುದು 'ಸತ್ಯ ಪರಿಪಾಲಕ', ಅಥವಾ 'ಸತ್ಯಪರಿಪಾಲಕನ ಸಂತಾನ' ಎಂಬ ಅರ್ಥಗಳು. ಅಶೋಕ ಇವರ ಬಗ್ಗೆ ಹೆಚ್ಚಿನ ವಿವರಗಳನ್ನು ಕೊಡುವುದಿಲ್ಲ – ಆದರೆ ಅವರು ಆರಂಭಕಾಲದ ದಕ್ಷಿಣ ಭಾರತದ ಇತಿಹಾಸದಲ್ಲಿ ವಿಶಿಷ್ಟ ಸ್ಥಾನ ಗಳಿಸಿಕೊಂಡವರಾಗಿದ್ದರೆಂಬುದನ್ನು ವ್ಯಕ್ತಪಡಿಸಿರುವನು. ಸತ್ಯಸಂಧರೂ ಒಂದೇ ಮಾತಿನವರೂ ಎಂದು ಶಂಗಂ ಕವಿಗಳಿಂದ ಮೇಲಿಂದ ಮೇಲೆ ಹೊಗಳಿಸಿಕೊಂಡಿರುವ ಪ್ರಧಾನ ರಾಜಮನೆತನವೆಂದರೆ, ಕೋಶರ್ ಅವರದ್ದು. ಇವರನ್ನು ಕಪಿ ಮಾಮೂಲನಾರ್ ಒಳಗೊಂಡು ಕೆಲವು ಶಂಗಂ ಕವಿಗಳು

*'ಒನ್ರುಮೊಟಿ ಕೋಶರ್'* ಅಂದರೆ ಒಂದೇಮಾತಿನ ಕೋಶರ್ ಎಂದು, *'ವಾಯ್‌ಮೊಟಿ ನಿಲೆಯಿಯ ಶೇನ್ ಇಳಂಗು ನಲ್ ಇಸೈ ವಳಂ ಕೆಟು ಕೋಶರ್',* ಅಂದರೆ ಸತ್ಯವನ್ನು ತಪ್ಪದೇ ಪರಿಪಾಲಿಸಿ ದೂರದೂರದೇಶದಲ್ಲಿ ಖ್ಯಾತಿ ಪಡೆದಂಥವರು ಎಂದು ವರ್ಣಿಸಿರುವರು.[೨೪] ನುಡಿದಂತೆ ನಡೆವ, ಕೊಟ್ಟಮಾತನ್ನು ಮುರಿಯದ, ಅಸತ್ಯವನ್ನು ಪೋಷಿಸಿದ, ಇಂತಹ ಮತ್ತೊಬ್ಬ ಜನನಾಯಕರು ಶಂಗಂ ಸಾಹಿತ್ಯದಲ್ಲಿ ಬರುವುದಿಲ್ಲ.

ಇವರ ಗುಣಕೀರ್ತಿ ಬಹುದೂರ ಹರಡಿತ್ತೆಂಬ ಮಾತನ್ನು ಗಹನವಾಗಿ ಗಮನಿಸಿದರೆ, ಸತ್ಯವನ್ನು ಪರಿಪಾಲಿಸುವ ಇವರ ಗುಣ ಅಶೋಕನ ಕಿವಿಯನ್ನೂ ತಲುಪಿರಬಹುದೇನೋ ಎನಿಸುವುದು. ಅಲ್ಲದೆ, ಕೋಶರ್ ನಾಯಕರು ಮೌರ್ಯರ ಪರ ನಿಂತು ಹೋರಾಡಿದ ಸ್ಪಷ್ಟ ಉಲ್ಲೇಖ ಶಂಗಂ ಕಾವ್ಯದಲ್ಲಿ ಬರುವುದು. ಮೌರ್ಯರೊಡನೆ ಸಂಧಾನ ಮಾಡಿಕೊಳ್ಳಲು ನಿರಾಕರಿಸಿದ ದಕ್ಷಿಣ ಕರ್ನಾಟಕದ ರಾಜ್ಯಶಕ್ತಿಗಳನ್ನು ನಿಗ್ರಹಿಸಲು ಇವರು ಮುಂದೆ ಬಂದುದು ತುಂಬಾ ಗಮನಾರ್ಹ. ಅಂದರೆ ಮೌರ್ಯರೊಡನೆ ಗಾಢ ಸಂಬಂಧವನ್ನು ಇಟ್ಟುಕೊಂಡಿದ್ದ ಕರ್ನಾಟಕದ ದಕ್ಷಿಣ ಗಡಿಯ ಜನಾಂಗಗಳಲ್ಲಿ ಕೋಶರ್‌ಗಳಿಗಿದ್ದಂತಹ ಸ್ಥಾನ ಮತ್ತಾರಿಗೂ ಇರಲಿಲ್ಲವೆಂದು ಅರ್ಥ. ಆದರೆ ಅಶೋಕನ ಶಾಸನಗಳಲ್ಲಿ ಬರುವ 'ಸತಿಯಪುತ'ರನ್ನು ಗುರುತಿಸಲು ಸಹಕಾರಿಯಾಗುವ ಸ್ಥಳೀಯ ಶಾಸನಗಳು ಇನ್ನೂ ದೊರಕಿಲ್ಲ; ಜಂಬೈಯಲ್ಲಿ ದೊರೆತ ಕ್ರಿ.ಶ. ೧ನೆಯ ಶತಮಾನದ ತಮಿಳುಬ್ರಾಹ್ಮೀ ಶಾಸನದಲ್ಲಿ 'ಅದಿಯಮಾನ್'ರನ್ನು ಸತಿಯಪುತ್ರ ಎಂದು ಗುರುತಿಸಿರುವುದರಿಂದ ಅಶೋಕನು ಉಲ್ಲೇಖಿಸಿದ ನಾಯಕ ಮನೆತನವು ಅದಿಯಮಾನರದ್ದೇ ಎಂದು ಈಗ ತೀರ್ಮಾನಿಸಲಾಗಿದೆ.[೨೫] ಕೋಶರ್-ಮೌರ್ಯರ ನಿಕಟ ಸಂಬಂಧವನ್ನೂ ಕೋಶರ್‌ಗಳಿಗೆ ಶಂಗಂ ಕವಿಗಳು ಕೊಟ್ಟ ಸತ್ಯಸಂಧರ ಸ್ಥಾನವನ್ನೂ ಅದಿಯಮಾನರಿಗೆ ಇಂತಹ ವಿಶೇಷಣಗಳು ಇಲ್ಲದೇ ಇರುವುದನ್ನೂ, ಸತಿಯಪುತ ಅದಿಯಮಾನರನ್ನು ಉಲ್ಲೇಖಿಸುವ ಏಕಮಾತ್ರ ಶಾಸನ ಮತ್ತು ಅದರ ಕಾಲವನ್ನೂ ಗಮನದಲ್ಲಿಟ್ಟುಕೊಂಡು ಈ ಪ್ರಶ್ನೆಯನ್ನು ಇತ್ಯರ್ಥಗೊಳಿಸಲು ಇನ್ನೂ ಅವಕಾಶವಿದೆ ಎಂಬುದು ನನ್ನ ಅನಿಸಿಕೆ.

ಇದು ಏನೇ ಇರಲಿ, ಈ ತಮಿಳೇತರ ನಾಯಕ ಮನೆತನಕ್ಕೆ ಆರಂಭಕಾಲದ ಕರ್ನಾಟಕ-ತಮಿಳು ಇತಿಹಾಸಗಳೆರಡರಲ್ಲೂ ಗೌರವಯುತ ಸ್ಥಾನವಿದ್ದು ಅದನ್ನಿಲ್ಲಿ ಸಂಕ್ಷಿಪ್ತವಾಗಿ ಗಮನಿಸಬಹುದೆನಿಸುವುದು. ಕೋಶರ್ ಬಗ್ಗೆ ಶಂಗಂ ಕವಿಗಳು ಕೊಟ್ಟಿರುವ ವಿವರಗಳಲ್ಲಿ ಕೆಲವು ಇಂತಿವೆ:

ಕಪ್ಪುಕಣ್ಣಿನ ಕೋಶರ್ ಮುಖದಲ್ಲಿ ಕಬ್ಬಿಣದ ಮುಷ್ಟಿ ಏಟಿನ ಮುದ್ರೆ ಎದ್ದು ಕಾಣುತ್ತಿತ್ತು .[೨೬]

ಕೋಶರ್ ಮಕ್ಕಳು ಮುರುಕ್ಕು ಮರವನ್ನು ಗುರಿಮಾಡಿ ಹೊಳೆವ ಶೂಲಗಳನ್ನು ಎಸೆಯುತ್ತಾ ತಮ್ಮನ್ನು ತಾವು ಗುರುತಿಸಿಕೊಳ್ಳುತ್ತಿದ್ದರು.[೨೭]

ಹಲವು ಬಗೆಯ ಶೂಲ-ದಳಗಳ ಕೋಶರರು[೨೮] ವಿಜಯೀ ಪತಾಕೆಗಳಿಂದ ಅಲಂಕರಿಸಿದ ವೇಗದ ರಥಗಳನ್ನು ಓಡಿಸುತ್ತಿದ್ದರು.[೨೯]

ಯಾವಾಗಲೂ ಜಯದ ಬೆನ್ನು ಹತ್ತುತ್ತಿದ್ದ ಕೋಶರ್[೩೦] ಮುಲ್ಲೈ ಹೂಮಾಲೆಯನ್ನು ಮುಡಿದು ಕ್ರೀಡಿಸುತ್ತಿದ್ದರು.[೩೧]

'ಪೆರುಂಪೊನ್' (ದೊಡ್ಡ ಸುವರ್ಣದಾಭರಣ)ಗಳಿಂದ ಅಲಂಕರಿಸಿಕೊಳ್ಳುವ ಕೋಶರ್[೩೨] ಪುಷ್ಪ(ಜೇನು)ರಸದಿಂದ ಮಾಡಿದ ಕಳ್ಳನ್ನು ಕುಡಿದು ಆನಂದಿಸುತ್ತಿದ್ದರು.[೩೩]

ಇವೆಲ್ಲಕ್ಕಿಂತಲೂ ವಿಶೇಷವಾದ ಅವರ ಗುಣವೆಂದರೆ ನಾಲ್ಕು ನುಡಿಗಳನ್ನು *(ನಾನ್‌ಮೋಟಿ)* ಬಲ್ಲವರಾಗಿದ್ದುದು. ಅಂದರೆ ಇವರು ತುಳು ಮತ್ತು ತಮಿಳನ್ನಲ್ಲದೆ ಕನ್ನಡ ಮತ್ತು ಕೊಡಗು ಭಾಷೆಯಲ್ಲಿ ಸಂಭಾಷಿಸಬಲ್ಲವರಾಗಿದ್ದರೆನ್ನಬಹುದು.[೩೪]

ಶಂಗಂಕವಿ ಮಾಮೂಲಣಾರ್ ತನ್ನ ಎರಡು ಕವಿತೆಗಳಲ್ಲಿ ಕೋಶರ್ ಮತ್ತು ವಡುಗ ಪಡೆಗಳ ವೀರತ್ವವನ್ನು ಬಣ್ಣಿಸಿರುವನು.[೩೫] ಇದರಲ್ಲಿ ಒಂದು ಅವರು ಮೌರ್ಯರ ಪರ ವಹಿಸಿ, ತಮ್ಮ ಗಡಿಯಾಚೆ ಆಳುತ್ತಿದ್ದ ಮೋಹೂರ್ ನಾಯಕರು ಮೌರ್ಯ ಪಂಗಡ ಸೇರಬೇಕೆಂದು ಒತ್ತಾಯಿಸಲು ಕೈಕೊಂಡದ್ದಾಗಿತ್ತು. ಅಂದರೆ ಮೌರ್ಯರ ಅಧಿಕಾರವನ್ನು ಮೋಹೂರ್ ಒಪ್ಪದಿದ್ದರೂ ಕೋಶರ್ ಒಪ್ಪಿ ಅವರ ಸ್ನೇಹ ಸಂಪಾದಿಸಿಕೊಂಡಿದ್ದರೆಂದು ಅರ್ಥ. ಈ ಮೈತ್ರಿಯ ಲಾಭ ಪಡೆದು, ತಮ್ಮ ಗಡಿಯಾಚೆಗಿದ್ದವರನ್ನು ನಿರ್ಬಲಗೊಳಿಸಲು ಮತ್ತು ತಮಿಳಗಂ ರಾಜರುಗಳನ್ನು ಕೆಣಕಲು ಇವರಿಗೆ ಸಾಧ್ಯವಾಯಿತೆಂದು ತೋರುವುದು. ಆದರೆ ಕೋಶರ್‌ರೊಡನೆ ಮೈತ್ರಿ ಮಾಡಿಕೊಂಡ ಮೌರ್ಯರು ಯಾರು? ಎಂಬ ಬಗ್ಗೆ ಸ್ಪಷ್ಟತೆ ದೊರಕುತ್ತಿಲ್ಲ. ಒಂದು ಅಭಿಮತದಂತೆ ಇವರು ಅಶೋಕನ ಕಾಲದ ಮೌರ್ಯರಾಗಿದ್ದರು; ಇನ್ನೊಂದು ಅಭಿಮತದಂತೆ, ಮೌರ್ಯರ ಆಳ್ವಿಕೆಯ ನಂತರ ಈ ಭಾಗದಲ್ಲಿ ಬೀಡುಬಿಟ್ಟಿದ್ದ 'ವಂಬಮೌರ್ಯ' (ಹೊಸ ಪೀಳಿಗೆಯ ಮೌರ್ಯರು ಅಥವಾ ಮೌರ್ಯ ವಂಶಜರ)ರೆಂಬವರು ಆಗಿದ್ದರು.

ಜಯಪತಾಕೆಗಳಿಂದ ಅಲಂಕರಿಸಿಕೊಂಡು ರಭಸದಿಂದ ಮುನ್ನುಗ್ಗುತ್ತಿದ್ದ ಕೋಶರ್ ರಥಗಳು ಮೌರ್ಯ ಸೈನ್ಯಕ್ಕೆ ದಾರಿ ಮಾಡಿಕೊಡುತ್ತಾ ಅದರ ಮುಂಚೂಣಿಯಲ್ಲಿ ಸಾಗುತ್ತಿದ್ದ ಚಿತ್ರವೊಂದು ಶಂಗಂ ಸಾಹಿತ್ಯದಲ್ಲಿ ದೊರಕುವುದು. ಅವರು ಬಾರಿಸುತ್ತಿದ್ದ ನಗಾರಿಗಳ ಧ್ವನಿ ತಾರಕಕ್ಕೇರುತ್ತಿತ್ತು ಎಂದು ಇಲ್ಲಿ ಬಣ್ಣಿಸಲಾಗಿದೆ. ಇನ್ನು ಮೌರ್ಯರ ರಥಗಳಾದರೋ ಅವು ಬೆಟ್ಟಗಳನ್ನು ಸೀಳಿ ಚಲಿಸುತ್ತಿದ್ದ ಜಾಡೇ ರಥಪಥವಾಗುತ್ತಿತ್ತಂತೆ!

ಮಾಮೂಲಣಾರ್ ತನ್ನ ಮತ್ತೊಂದು ಕವಿತೆಯಲ್ಲಿ 'ವಡುಗರ'ನ್ನು ಉಲ್ಲೇಖಿಸುವನು. ಇದರಲ್ಲಿ ಕೋಶರ್‌ರಲ್ಲದೆ ಮೋಹೂರರು, ಕೊಂಗರು, ಪುನ್ನಾಟರು, ಎರುಮೈಊರವರು, ಬಹುಶಃ ಕದಂಬರು, ಅಲ್ಲದೆ ಇವರನ್ನು ಆಶ್ರಯಿಸಿದ್ದ ಅನೇಕ ಘಟ್ಟ ಮತ್ತು ಕರಾವಳಿ ಪ್ರದೇಶದ ಬುಡಕಟ್ಟು ನಾಯಕರುಗಳು ಸೇರಿದ್ದರೆಂದು ತೋರುವುದು. ಇವರೆಲ್ಲರನ್ನೂ ತಮ್ಮ ಕಡೆ ಒಲಿಸಿಕೊಳ್ಳಲು ಮೌರ್ಯರು ಆತುರರಾಗಿರಲು ಸಾಕು. ಮೌರ್ಯರೊಡನೆ ಸಹಕರಿಸಲೊಪ್ಪದ ಮೋಹೂರ್‌ಗಳಿಗೆ ಇದ್ದ ಕಾರಣ ಅವರ ಸ್ವಾತಂತ್ರ್ಯ ರಕ್ಷಣೆಯಾಗಲೀ ತಮಿಳಗಂ ರಾಜಕೀಯ ಶಕ್ತಿಗಳ ಸಖ್ಯವಲ್ಲ. ಹಾಗೆ ನೋಡಿದರೆ, ಕೋಶರ್‌ರಂತೆ ಮೋಹೂರ್ ಕೂಡಾ ತಮಿಳು ರಾಜರನ್ನು ತಮ್ಮ ಶತ್ರುಗಳೆಂದು ಪರಿಗಣಿಸಿದ್ದುದನ್ನು ಪರಣರ್ ಸ್ಪಷ್ಟಪಡಿಸುವನು.[೩೬]

ಇದಕ್ಕೊಂದು ಉದಾಹರಣೆಯನ್ನು ಇಲ್ಲಿ ಕೊಡಬಹುದು. ಚೇರ ವೆಲ್ಕೆಜು ಕುಟ್ಟುವನ್ ತನ್ನ ಆಪ್ತ ಸಾಮಂತನನ್ನು ರಕ್ಷಿಸಲು ಮೋಹೂರ್ ರಾಜ್ಯವನ್ನು ಮುತ್ತಿದಾಗ, ದಕ್ಷಿಣ ಕರ್ನಾಟಕದ ಬಹುತೇಕ ನಾಯಕರು ಮೋಹೂರ್ ಪರವಾಗಿ ತಮ್ಮ ಅಪಾರ ಗಜ, ಅಶ್ವ ಮತ್ತು ರಥ-ದಳಗಳನ್ನು ರಣರಂಗಕ್ಕೆ ಕರೆತಂದು ನಿಲ್ಲಿಸಿದರೆಂದು ಪರಣರ್ ತಿಳಿಸುವನು. ಈ ಚೇರರಸನು ಸಾಗರಶಕ್ತಿಯೊಂದರ ವಿರುದ್ಧ ಹೋರಾಡಿದನೆಂದು ತಿಳಿಸಿರುವುದರಿಂದ, ಈತನು ಕನ್ನಡ ನಾಡಿನ ಮತ್ತೊಂದು ರಾಜಶಕ್ತಿಯಾದ ಕದಂಬರ ವಿರುದ್ಧ ಕಾದಾಡಿದನೆಂದು ಊಹಿಸಬಹುದು. ಇಂತಹ ಕದನಗಳಲ್ಲಿ ಚಿಕ್ಕಪುಟ್ಟ ನಾಯಕರೂ ಸೇರಿಕೊಳ್ಳುತ್ತಿದ್ದರೆಂಬುದಕ್ಕೆ ಕಲುವುಲ್ ಎಂಬ ಹುಲ್ಲುಗಾವಲು ಪ್ರದೇಶದ ನಾಯಕನ ನಿದರ್ಶನ ದೊರಕುವುದು.[೩೭]

ಚೇರ-ಮೋಹೂರ್ ಕಾಳಗದಲ್ಲಿ ಮೋಹೂರ್ ಹಿನ್ನಡೆಯನ್ನು ಅನುಭವಿಸಿ, ತನ್ನ ಕುಲ ಸಂಕೇತವಾದ ಬೇವಿನ ಮರವನ್ನು ಕಳೆದುಕೊಂಡನೆಂದು ತಿಳಿಸಲಾಗಿದೆ. ಸತತವಾಗಿ ನಡೆಯುತ್ತಿದ್ದ ಇಂತಹ ಕಾಳಗಗಳಲ್ಲಿ ಸೋಲು-ಗೆಲವು ಯಾರಿಗೂ ಶಾಶ್ವತವಾಗಿರಲಿಲ್ಲ. ಮೋಹೂರ್‌ನಿಂದ ಕಿತ್ತುಕೊಂಡ ಪ್ರದೇಶವನ್ನು ಚೋಳರು ಚೇರರಿಂದ ಕಿತ್ತುಕೊಂಡು

ಅದನ್ನಾಳಲು ಪಟ್ಕೈಯನ್ ಎಂಬ ಸಾಮಂತನನ್ನು ನೇಮಿಸಿದರು.[೩೮] ಇದನ್ನು ಸಹಿಸದ ತಮಿಳಗಂ ಉತ್ತರದಲ್ಲಿದ್ದ ನಾಯಕರುಗಳಾದ ಏಟ್ಕೈ, ಅತ್ತಿ, ಕಂಕನ್, ಕಟ್ಟಿ, ಪುನ್ತುಟ್ಕೈ ಮುಂತಾದವರು ನಣ್ಣನ್ ನಾಯಕತ್ವದಲ್ಲಿ ಪಟ್ಕೈಯನ್ ಮೇಲೆ ಬಿದ್ದು ಅವನ ತಲೆತೆರೆದು, ಪ್ರತೀಕಾರ ಸಾಧಿಸಿಕೊಂಡರು. ಈ ಘಟನೆಯನ್ನು ಮದುರೈಕಾಞ್ಚಿಯಲ್ಲಿ ಸಮಗ್ರವಾಗಿ ವರ್ಣಿಸಲಾಗಿದೆ.[೩೯]

**ಕೋಶರ್‌ನಾಡು – ಕಾಸರಗೋಡು:**

ಒಂದೇ ಮಾತಿನವರು ಎಂದು ಖ್ಯಾತರಾದ 'ಕೋಶರ್'ಗೆ ಸಂಬಂಧಿಸಿದ ಒಂದೆರಡು ವಿಷಯಗಳನ್ನಿಲ್ಲಿ ಪ್ರಸ್ತಾಪಿಸಬಹುದೆಂದೆನಿಸುವುದು. 'ಕೋಶರ್' ಎಂಬ ಪದಬಳಕೆ ಕನ್ನಡದಲ್ಲಿಲ್ಲ, ಆದರೆ 'ಕೊಸರು' ವಿಶೇಷಣ ಹೊಂದಿದ್ದ 'ಕೊಸರುಪಟ್ಕಿ' ಎಂಬ ಗ್ರಾಮದ ಹೆಸರು ಕ್ರಿ.ಶ. ಸು. ೮೦೦ರ ಒಂದು ಗಂಗಶಾಸನದಲ್ಲಿ ಬರುವುದು.[೪೦] 'ಕೋಶರ್' ಪದವು 'ಕೊಸರು' ಎಂದು ರೂಪಾಂತರ ಪಡೆದುಕೊಳ್ಳಬಹುದಾದರೆ ಅದು 'ಕಾಸರು' ಆಗುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. 'ಕಾಸರು' ಎಂದರೆ ಕಾಡು, ಅರಣ್ಯ ಮತ್ತು ಇಲ್ಲಿಯ ಪ್ರಧಾನ ಪಶುಸಂಪತ್ತಾದ ಕಾಡುಕೋಣ. 'ಕಾಸು' ಎಂದರೆ ಕಾಂತಿ, ವಿಕಾಸ; 'ಕೊಸಱು' ಎಂದರೆ ಮೋಹಕ, ಆಕರ್ಷಕ.

ಈ ಹಿನ್ನೆಲೆಯಲ್ಲಿ 'ಕಾಸರ' ವಿಶೇಷಣ ಹೊಂದಿದ ಸ್ಥಳ, ಪ್ರದೇಶ, ಗ್ರಾಮವನ್ನು ನೆನೆದಾಗ ನಮಗೆ ಕೂಡಲೇ ಹೊಳೆಯುವುದು ಕಾಸರಗೋಡು ಅಥವಾ ಕಾಸರಕೋಡು. ಈ ಹೆಸರಿನ ಜನವಸತಿಗಳು ಇಂದು ಕಾಣಿಸಿಕೊಳ್ಳುವುದು ಕರಾವಳಿ ಪ್ರದೇಶದಲ್ಲಿ ಹೆಚ್ಚು; ಈ ಗ್ರಾಮಗಳ ಬಹುಸಂಖ್ಯಾತರು ಕನ್ನಡಿಗರಾಗಿರುವುದು ಗಮನಾರ್ಹ. ಮಂಗಳೂರಿನ ದಕ್ಷಿಣಕ್ಕಿರುವ ಮತ್ತು ಇಂದಿನ ಕೇರಳದ ಉತ್ತರದಂಚಿನ ತಾಲೂಕು ಪಟ್ಟಣವಾದ ಕಾಸರಗೋಡು ಈ ಹೆಸರಿನ ಪ್ರಖ್ಯಾತ ಪಟ್ಟಣ. ಇದಲ್ಲದೆ ಇಂದಿನ ಹೊನ್ನಾವರ ತಾಲೂಕಿನಲ್ಲೂ ಕಾಸರಕೋಡು ಹೆಸರಿನ ಒಂದು ಗ್ರಾಮವಿದ್ದು ಇದರ ಉಲ್ಲೇಖ ೧೫ನೆಯ ಶತಮಾನದ ವಿಜಯನಗರ ಶಾಸನದಲ್ಲಿ ಬರುವುದು.[೪೧] 'ಕೋಡು' ಮತ್ತು 'ಗೋಡು' (ರೇವು ಅಥವಾ ಕೆನೆಮಣ್ಣಿನ ನೆಲ, ಪ್ರದೇಶ) ನಾಮಾಂತ್ಯ ಹೊಂದಿರುವ ಗ್ರಾಮಗಳು ಹೆಚ್ಚಾಗಿ ಮಲೆನಾಡು ಮತ್ತು ಕರಾವಳಿ ಪ್ರದೇಶದಲ್ಲಿ ಕೇಂದ್ರೀಕೃತವಾಗಿದ್ದು ಇವುಗಳಿಂದ ದೂರ ಸರಿದಂತೆ ಈ ಪದ ಬಳಕೆ ಅಪರೂಪವಾಗುವುದು. 'ಗೋಡು' ಪ್ರತ್ಯಯ ಹೊಂದಿರುವ ಗ್ರಾಮಗಳು ಹೆಚ್ಚಾಗಿ ಕಾಣುವುದು ಸಕ್ರಮವಾಗಿ ಶಿವಮೊಗ್ಗ, ಹಾಸನ, ಉತ್ತರ ಕನ್ನಡ, ಚಿಕ್ಕಮಗಳೂರು ಮತ್ತು ಮೈಸೂರು ಜಿಲ್ಲೆಗಳಲ್ಲಿ, ಕೊಡಗು (ಮರಗೋಡು,

ಬೈಗೋಡು, ಬಾಳಗೋಡು, ನಾಕಲಗೋಡು, ಮುಸಗೋಡು ಮುಂ.) ಮತ್ತು ದಕ್ಷಿಣ ಕನ್ನಡ (ಮುಡುನಡುಗೋಡು, ಬಾಳ್ಗೋಡು ಮುಂ.) ಜಿಲ್ಲೆಗಳ ಕೆಲವೆಡೆಗಳಲ್ಲಿಯೂ ಇವನ್ನು ಕಾಣಬಹುದು.

ಕರ್ನಾಟಕಕ್ಕೆ ವಿಶಿಷ್ಟವಾದ ಕಾಸರಗೋಡು ಹಾಗೂ ಕಾಸರಕೋಡಿಗೂ ಶಂಗಂ ಕಾಲದ ತುಳುವನಾಡಿನ 'ಕೋಶರ'ರಿಗೂ ಏನಾದರೂ ಸಂಬಂಧವಿದೆಯೇ ಎಂಬುದೊಂದು ತೆರೆದ ಪ್ರಶ್ನೆ.

**ತುಳುನಾಡು - ತುಟಿಲಾಳು:**

ಕೋಶರ್ ಜನಾಂಗದ ಮೂಲನಿವಾಸ, ತುಳುನಾಡು. ಕೊಂಕಣ ಅಥವಾ ಕರಾವಳಿಯ ಈ ಪ್ರದೇಶಕ್ಕೆ 'ತುಳು' ಎಂಬ ಹೆಸರು ಹೇಗೆ ಬಂತು? ಎಂಬ ಪ್ರಶ್ನೆ ಇದೆ.

ಈ ಬಗ್ಗೆ ಈಗಾಗಲೇ ಚರ್ಚೆಯಾಗಿದ್ದರೂ ಸಮಸ್ಯೆ ಇತ್ಯರ್ಥವಾಗಿಲ್ಲ. ಇಲ್ಲಿಯವರೆಗೂ ನಡೆದ ಚರ್ಚೆಯಲ್ಲಿ 'ತುಳು' ಪದದ ಮೂಲವನ್ನು 'ತುಲಾಪುರುಷ', 'ತೂಳು', 'ತುರು' ಮತ್ತು 'ತುಳುವೆ' ಎಂಬ ಪದಗಳಲ್ಲಿ ಹುಡುಕಲು ಪ್ರಯತ್ನಿಸಲಾಗಿದೆ. ಶಂಗಂ ಕಾಲದ ಕೋಶರ್ ಮುಂತಾದವರ ಚಾರಿತ್ರಿಕ ಹಿನ್ನೆಲೆಯನ್ನು ಗಮನ ದಲ್ಲಿಟ್ಟುಕೊಂಡು 'ತುಳು' ಪದದ ಮೂಲವನ್ನು ಹುಡುಕತೊಡಗಿದರೆ, ಇದಕ್ಕೆ ಅತ್ಯಂತ ಸಮೀಪವಾದದ್ದು (ಬಿ.ಎ. ಸಾಲತ್ತೊರೆಯವರು ಈ ಹಿಂದೆ ಸೂಚಿಸಿರುವ) 'ತೂಳು' ಎಂಬ ಪದ. 'ತೂಳು' ಎಂದರೆ 'ಏರಿಹೋಗು', 'ಹರಿಹಾಯಿ', 'ಹೋರಾಡು', 'ದಾಳಿಮಾಡು' ಎಂದು ಅರ್ಥ. ಶಂಗಂ ಕಾಲದ ನಾಯಕರಲ್ಲಿ ಬಹುತೇಕರು ಸತತವಾಗಿ ಹೋರಾಡುತ್ತಲೇ ಬಾಳಿದವರಾದರೂ ಇದು ತುಳುನಾಡಿನ ಕೋಶರ್ ಜನಾಂಗಕ್ಕೆ ಹೆಚ್ಚು ಹೊಂದಿಕೆಯಾಗುವುದೆನಿಸುವುದು. ಜೀವನದ ಹಂಗುತೊರೆದು, ಕೊಟ್ಟಮಾತಿಗೆ ನಿಷ್ಠರಾಗಿ, ಧರ್ಮಯುದ್ಧ ಮಾಡುವುದು ತುಳುನಾಡಿನ ಯೋಧರ ವಿಶೇಷತೆ ಯಾಗಿತ್ತೇನೋ. ಕನ್ನಡ ಶಾಸನ ಮತ್ತು ಸಾಹಿತ್ಯದಲ್ಲಿ ಬರುವ 'ತುಟಿಲಾಳ್' ಎಂಬ ಯುದ್ಧವೀರನು ಇದಕ್ಕೆ ಅತ್ಯಂತ ಸನಿಹ ವ್ಯಕ್ತಿಯಾಗಿ ತೋರುವನು. ಈ ಪದ ತಮಿಳಿನಲ್ಲಿ (ತೊಟಿಲ್) ಮತ್ತು ಮಲೆಯಾಳಿ ಭಾಷೆಯಲ್ಲಿ ಇಂದಿಗೂ ಚಾಲ್ತಿಯಲ್ಲಿರುವುದು ಗಮನಾರ್ಹ.

ತುಟಿಲಾಳ್ಗಳ ಬಗ್ಗೆ ಸುಮಾರು ಕ್ರಿ.ಶ. ೮ರಿಂದ ಕನ್ನಡ ಶಾಸನಗಳಲ್ಲಿ ಉಲ್ಲೇಖಗಳು ಬರುತ್ತಿದ್ದು, ಇವುಗಳಲ್ಲಿ ಆರಂಭಕಾಲದ ಶಾಸನಗಳಲ್ಲಿ ಹೆಚ್ಚಿನವು ಮಲೆನಾಡ

ಪರಿಸರದಲ್ಲಿವೆ.[೪೨] ಕೋಶರ್ ಮೊದಲಾದ ಸತ್ಯಸಂಧರು ಹಾಕಿಕೊಟ್ಟ ಕದನ ಕ್ರಮವೇ ಅವರ ಹೆಸರಿನಿಂದ ಪ್ರಸಾರ ಪಡೆದುಕೊಂಡಿತೇನೋ ಎಂಬ ಶಂಕೆ ಇಲ್ಲಿ ಬಾರದಿರದು. ಇದರ ಬಗ್ಗೆಯೂ ಹೆಚ್ಚಿನ ಅಭ್ಯಾಸವಾಗಬೇಕಾಗಿದೆ.

**ಶಂಗಂ ತಮಿಳಗಂ ವಿನಾಶಕ್ಕೆ ಕಾರಣವಾದ ಶಕ್ತಿಗಳು:**

ಶಂಗಂ ಕಾಲಾಂತ್ಯದಲ್ಲಿದ್ದ ದಕ್ಷಿಣ ಕನ್ನಡ ಪ್ರದೇಶದ ಪ್ರಬಲ ನಾಯಕ ಶಕ್ತಿಗಳ ವೈಯಕ್ತಿಕ ಹಾಗೂ ಸಾಂಘಿಕ ಹೋರಾಟಗಳಿಂದಾಗಿ ತಮಿಳಗಂ ರಾಜ್ಯವ್ಯವಸ್ಥೆ ತತ್ತರಿಸತೊಡಗಿತೆಂಬುದರಲ್ಲಿ ಸಂಶಯವಿಲ್ಲ. ಈ ಕೊಡವ-ಕೊಂಕಣ ಮತ್ತು ತುಳು ನಾಡಿನ ಶಕ್ತಿಗಳಲ್ಲಿ ಅಗ್ರಪಂಕ್ತಿಯಲ್ಲಿದ್ದು ತುಳುನಾಡಿನೊಡನೆ ವಿಶೇಷವಾಗಿ ಗುರುತಿಸಿಕೊಂಡವರಲ್ಲಿ ಕೋಶರ್ ಮತ್ತು ಇವರ ಪಶ್ಚಿಮ ಗಡಿಗಂಟಿಕೊಂಡು ಆಳುತ್ತಿದ್ದ ಮೋಹೂರ್ ಪ್ರಮುಖರು. ತುಳುನಾಡು ಮತ್ತು ಕೊಂಗನಾಡಿನೊಡನೆ ಸ್ಪಷ್ಟವಾಗಿ ಗುರುತಿಸಿಕೊಂಡವನೆಂದರೆ ನಣ್ಣನ್. ಇವರ ಪರಿಸರದಲ್ಲಿ ಆಳುತ್ತಿದ್ದವರಲ್ಲಿ ಕಂಕರ್(ಕೊಂಗರು =ಗಂಗರು), ಕಬಿನೀ ನದಿ ಪ್ರದೇಶವನ್ನು ಕೇಂದ್ರವನ್ನಾಗಿಸಿಕೊಂಡು ಆಳುತ್ತಿದ್ದ ಪುನ್ನಾಟರು, ಮೈಸೂರು ಪ್ರದೇಶದ ಮೇಲೆ ಸ್ವಾಮ್ಯಪಡೆದಿದ್ದ ಎರುಮೈಊರವರು, ಪಶ್ಚಿಮ ಸಾಗರವನ್ನು ತಮ್ಮದನ್ನಾಗಿ ಮಾಡಿಕೊಂಡಿದ್ದ ಕದಂಬರು. ಶಂಗಂಕಾಲದ ಈ ಎಲ್ಲ ತಮಿಳೇತರ ಶಕ್ತಿಗಳ ಹೋರಾಟದ ಫಲವಾಗಿ ಸುಮಾರು ೬೦೦ ವರ್ಷಕಾಲ ತಮ್ಮ ಸ್ವಾತಂತ್ರ್ಯವನ್ನು ಉಳಿಸಿಕೊಂಡು ಬಂದಿದ್ದ ಮತ್ತು ಮೌರ್ಯರಂತಹ ಮಹಾಸಾಮ್ರಾಟರಿಗೆ ಸವಾಲಾಗಿ ನಿಂತಿದ್ದ ತಮಿಳಗಂ ಶಕ್ತಿಗಳು ಇತಿಹಾಸದಿಂದ ಕಣ್ಮರೆಯಾಗತೊಡಗಿದವು. ಈ ಕಾರ್ಯವನ್ನು ಕ್ರಿ.ಶ. ೪ನೆಯ ಶತಮಾನದಲ್ಲಿ ಪೂರ್ತಿಗೊಳಿಸಿದವರು ಕಳಭ್ರರು - ಇವರೂ ಕನ್ನಡ ನೆಲದವರೆಂಬುದು ತಮಿಳು ವಿದ್ವಾಂಸರ ಅಭಿಮತ.

ಇದು ಏನೇ ಇರಲಿ, ಶಂಗಂ ಕಾಲಾಂತ್ಯದಲ್ಲಿ ಕನ್ನಡ ಪ್ರದೇಶದ ಪ್ರಬಲ ರಾಜಶಕ್ತಿಯ ದಾಳಿಗೆ ಒಳಗಾಗಿ ಸಮಗ್ರ ತಮಿಳಗಂ ತನ್ನ ಅಂತಸ್ತನ್ನಲ್ಲದೆ ಅಸ್ತಿತ್ವವನ್ನೇ ಕಳೆದುಕೊಳ್ಳುವ ಸ್ಥಿತಿಗೊಳಗಾಗಬೇಕಾಯಿತೆನ್ನುವುದರಲ್ಲಿ ಅನುಮಾನವಿಲ್ಲ. ಈ ದಾಳಿಗೆ ಕಾರಣರಾದವರನ್ನು ಗುರುತಿಸಲು ಸಾಧ್ಯವಾಗುವುದು ಕನ್ನಡದ ಆಕರಗಳಿಂದಲ್ಲ, ತಮಿಳು ಆಕರಗಳಿಂದ. ತಮಿಳಿನಲ್ಲಿ ಇದರ ಮೊದಲ ಪ್ರಸ್ತಾಪ ಬರುವುದು ೮ನೆಯ ಶತಮಾನದ ಪಾಂಡ್ಯನ ವೇಳ್ವಿಕ್ಕುಡಿ ತಾಮ್ರಪಟದಲ್ಲಿ. ಆದರೆ ಕನ್ನಡದಲ್ಲಿ ಇದರ ಉಲ್ಲೇಖ ಬರುವುದು ಕ್ರಿ.ಶ. ೫ನೆಯ ಶತಮಾನದ ಹಲ್ಮಿಡಿ ಶಾಸನದಲ್ಲಿ. ಅಲ್ಲಿಯವರೆಗೂ ಕಳಭ್ರರಿಗೆ ತುತ್ತಾಗಿದ್ದ

ತಮಿಳುನಾಡನ್ನು ಅವರಿಂದ ಮುಕ್ತಗೊಳಿಸಿ ಪುನಃ ತಮಿಳು (ಪಾಂಡ್ಯ) ಆಳ್ವಿಕೆಯನ್ನು ಸ್ಥಾಪಿಸಿದನೆಂದು ಪಾಂಡ್ಯ ನೆಡುಂಜಡಿಯಣ್‌ನನ್ನು ವೇಳ್ವಿಕುಡಿ ಶಾಸನದಲ್ಲಿ ಹೊಗಳಲಾಗಿದೆ. ಈ ಅರಸನು ಪಾಂಡ್ಯ ವಂಶದ ೬ನೆಯ ಅರಸನಾಗಿದ್ದುದರಿಂದ ಬಹುಶಃ ಅವನ ಐವರು ಪೂರ್ವಜರು (ಅಂದರೆ ಸುಮಾರು ೩೦೦ ವರ್ಷಕಾಲ ಆಳಿದವರು?) ಕಳಭ್ರರ ಅಡಿ ಬಳಲಿದ್ದರೆಂದು ಭಾವಿಸಬಹುದು.

ಕಳಭ್ರರು ಜೈನರಾಗಿದ್ದರು. ಕನಿಷ್ಠ ಪಕ್ಷ ಒಂದು-ಒಂದೂವರೆ (ಬಹುಶಃ ಮೂರು) ಶತಮಾನ ಇವರು ತಮಿಳುನಾಡನ್ನು ತಮ್ಮ ಅಧಿಕಾರಕ್ಕೆ ಒಳಪಡಿಸಿಕೊಂಡು ತಮ್ಮ ಧರ್ಮ ಮತ್ತು ಸಂಸ್ಕೃತಿಯನ್ನು ತಮಿಳುನಾಡಿನಲ್ಲಿ ಪ್ರಸಾರಕ್ಕೆ ತಂದರು. ಇವರನ್ನು ವೇಳ್ವಿಕುಡಿ ಶಾಸನದಲ್ಲಿ 'ಕಲಿ-ಅರಸ'ರು ಎಂದು ಗುರುತಿಸಲಾಗಿದೆ.[೪೩]

ಈ ಕಳಭ್ರರು ಯಾರು ಎಂಬುದರ ಬಗ್ಗೆ ಸುಮಾರು ಒಂದು ಶತಮಾನದಿಂದಲೂ ಚರ್ಚೆ ನಡೆಯುತ್ತಿದೆಯಾದರೂ ಅಂತಿಮ ತೀರ್ಮಾನ ಇಂದಿಗೂ ಹೊರಬಂದಿಲ್ಲ. ಆದರೆ ಇವರು ಕರ್ನಾಟಕ ಪ್ರದೇಶದವರೆಂಬ ಸ್ಥೂಲ ಸಹಮತವಿದೆ. ಪಶ್ಚಿಮ ಗಂಗರಿಗೂ ಇವರಿಗೂ ಸಂಬಂಧವನ್ನೂ ಕೆಲವರು ಕಲ್ಪಿಸಿದರೆ, ಶಂಗಂ ಸಾಹಿತ್ಯದಲ್ಲಿ ಬರುವ ಕಳವರು (ತಮಿಳು ಕಳವರ್, ಸಂ. ಕಲಭ > ಕಳಭ್ರ) ಇವರಾಗಿರಬಹುದೆಂದು ಕೆಲವರು ವಾದಿಸಿರುವರು. ತಮಿಳು ಕವಿಗಳಾದ ಕಲಿಯದರ್ ಮತ್ತು ಸೇಕ್ಕಿಳಾರ್ ಇವರನ್ನು 'ಕರುನಾಡರ್' ಎಂದು ಗುರುತಿಸಿರುವರು. ಆರುಹತನಾದ ಕರುನಾಡ ಅರಸನು ಮದುರೈ ವಶಪಡಿಸಿಕೊಂಡು, ಪಾಂಡ್ಯರನ್ನು ಅಲ್ಲಿಂದ ಹೊರದೂಡಿ, ಶಿವಾಲಯಗಳನ್ನೆಲ್ಲ ಮುಚ್ಚಿಸಿದನೆಂದು ಇವರು ಹೇಳಿರುವರು.[೪೪] ಇವರನ್ನು ವಡುಗ-ಕರುನಾಡುವಿನವರೆಂದು ಇವರು ಸ್ಪಷ್ಟೀಕರಣ ಕೊಟ್ಟಿರುವರು. ಉತ್ತರದವರನ್ನು 'ನೆಡುಮೊೞಿ' (ಅಂದರೆ, ಅಶುದ್ಧ ತಮಿಳು ಭಾಷಿಕರು)ಗಳೆಂದು ಶಂಗಂ ಕವಿಗಳು ಗುರುತಿಸಿರುವುದನ್ನು ಈಗಾಗಲೇ ಗಮನಿಸಿದ್ದೇವೆ. ತುಳು, ಕೊಡಗು, ಆದಿ ಕನ್ನಡಿಗ ಮುಂತಾದವರು ಈ ನೆಡುಮೊಳಿಗಳಲ್ಲಿ ಸೇರಿದ್ದರು. ಜೈನರು ಪ್ರಾಕೃತ ಮಾಧ್ಯಮವನ್ನು ಪ್ರೋತ್ಸಾಹಿಸಿದ್ದುದರಿಂದ ಈ ನೆಡುಮೊಳಿಗಳ ದ್ರಾವಿಡ ಭಾಷಾ ರೆಂಬೆಗಳು ಕ್ರಮೇಣ ಬಲಗೊಂಡು ಇವು ಸ್ವತಂತ್ರ ಭಾಷೆಗಳಾದವೆಂದು ತೋರುವುದು. ಲಿಪಿಯನ್ನು ಗಳಿಸಿಕೊಂಡ ಕನ್ನಡ ಇವುಗಳಲ್ಲೆಲ್ಲ ಪ್ರಧಾನವಾಯಿತು.

ಒಂದು ಹಂತದಲ್ಲಿ, ತಮಿಳುನಾಡನ್ನೆಲ್ಲ ವಶಪಡಿಸಿಕೊಂಡು ಅಲ್ಲಿನ ರಾಜಕೀಯ ಶಕ್ತಿಯಾಗಿ ಬೆಳೆದ ಕಳಭ್ರರ ವಿರುದ್ಧ ಪಲ್ಲವ-ಪಾಂಡ್ಯರು ಮಾತ್ರವಲ್ಲದೆ, ರಾಜಕೀಯ

ಕಾರಣಕ್ಕಾಗಿ ಕರ್ನಾಟಕದ ಕದಂಬರೂ ಹೋರಾಡಬೇಕಾಯಿತೆಂಬ ವಿಷಯ ಗಮನಾರ್ಹ. ಕನ್ನಡದ ಅತಿಪೂರ್ವಕಾಲದ ಹಲ್ಮಿಡಿ ಶಾಸನದಲ್ಲಿ ಕದಂಬ ಕಾಕುತ್ಸವರ್ಮ (ಕ್ರಿ.ಶ. ೪೨೫-೪೫೦) ಇವರನ್ನು ಎದುರಿಸಿದುದನ್ನು ಈಗಾಗಲೇ ಪ್ರಸ್ತಾಪಿಸಲಾಗಿದೆ. ದಕ್ಷಿಣ ಕರ್ನಾಟಕದ ಈ ಕಳಭ್ರ ರಾಜ್ಯವು ಶ್ರವಣಬೆಳ್ಗೊಳದ ಕಳ್ಬಪ್ಪುವಿನವರೆಗೂ ಹಬ್ಬಿತ್ತೆಂದು ಕೆಲವರು ಊಹಿಸಿ ಕಳಭ್ರರಿಗೂ ಕಳ್ಬಪ್ಪಿಗೂ ಇರುವ ಪದ ಸಾಮ್ಯದ ಬಗ್ಗೆ ಸಿದ್ಧಾಂತಗಳನ್ನು ಸೃಷ್ಟಿಸಿರುವರು.

ಕಳಭ್ರ ವಂಶದ ಒಬ್ಬನೇ ಒಬ್ಬ ಆಳರಸನ ಬಗ್ಗೆ ಸಾಹಿತ್ಯಿಕ ಉಲ್ಲೇಖ ದೊರಕುವುದು. ಅವನ ಹೆಸರು ಅಚ್ಯುತ ವಿಕ್ರಾಂತ. ಬೌದ್ಧ ಮುನಿ ಬುಧದತ್ತನು *ವಿನಯವಿನಿಚ್ಛಯ* ಎಂಬ ಗ್ರಂಥವನ್ನು ಕಾವೇರಿ ದಡದ ಭೂತನಮಂಗಳ ಎಂಬಲ್ಲಿ ಕಳಭ್ರರು ಆಳುತ್ತಿದ್ದಾಗ ರಚಿಸಿದ್ದಾಗಿ ಹೇಳಿಕೊಂಡಿರುವನು. ತಮಿಳು ಟೀಕಾಗ್ರಂಥ *ಯಪ್ಪರುಂಗಲಮ್*‌ನಲ್ಲಿ ಅಚ್ಯುತನನ್ನು ನಂದಿಬೆಟ್ಟ ಪ್ರದೇಶದ ಅರಸನೆಂದು ಗುರುತಿಸಲಾಗಿದ್ದು ಇವನು ಮತ್ಸ್ಯ, ಧನುಸ್ಸು ಮತ್ತು ವ್ಯಾಘ್ರ ಲಾಂಛನದ (ಪಾಂಡ್ಯ, ಚೇರ ಮತ್ತು ಚೋಳ) ಅರಸರನ್ನು ನಾಶಮಾಡಿದನೆನ್ನಲಾಗಿದೆ. ಈ ಅಚ್ಯುತನು ಸುಮಾರು ಕ್ರಿ.ಶ. ೬ನೆಯ ಶತಮಾನದಲ್ಲಿ ಆಳುತ್ತಿದ್ದನು. ಅಚ್ಯುತನ ನಂತರ ಕಳಭ್ರರ ಶಕ್ತಿ ಕುಂದಿತೆಂಬುದನ್ನು ಪಲ್ಲವ ಸಿಂಹವಿಷ್ಣು ಮತ್ತು ನರಸಿಂಹವರ್ಮ, ಪಾಂಡ್ಯ ಕಡುಂಗೋನ್ ಮತ್ತು ಬದಾಮಿ ಚಾಳುಕ್ಯ ಇಮ್ಮಡಿ ವಿಕ್ರಮಾದಿತ್ಯನ ಶಾಸನಗಳಿಂದ ತಿಳಿಯಬಹುದು. ಪಾಂಡ್ಯ ಪರಾಂತಕ ನೆಡುಂಜಡಿಯನ್‌ನ ವೇಳ್ವಿಕುಡಿ ಶಾಸನ (ಕ್ರಿ.ಶ. ೭೭೧)ದಲ್ಲಿ ತನಗಿಂತ ಆರು ತಲೆಮಾರು ಹಿಂದೆ ಆಳಿದ ಕಡುಂಗೋನ್ ಕಳಭ್ರರಿಂದ ರಾಜ್ಯವನ್ನು ಮರುಪಡೆದುಕೊಂಡು, ಪಾಂಡ್ಯರಾಜ್ಯವನ್ನು ಪುನಃ ಸ್ಥಾಪಿಸಿದನೆಂದು ಹೇಳಿಕೊಂಡಿರುವನು.[೪೫]

## ಆಕರ ಟಿಪ್ಪಣಿ:

೧. ರಾಮಮೂರ್ತಿ, ವಿ. *ಹಿಸ್ಟರಿ ಆಫ್ ಕೊಂಗು* (ಮದ್ರಾಸು, ೧೯೮೬), ಪು. ೧೫. ನೋ. *ಶಿಲಪ್ಪದಿಗಾರಂ, ಉರ್ರೈಪೆಱು-ಕಟ್ಟುರೈ*ನಲ್ಲಿ ಕೋಶರ್‌ರನ್ನು 'ಕೊಂಗು-ಇಳನ್-ಕೋಶರ್' ಎಂದು ಹೆಸರಿಸಲಾಗಿದೆ. 'ಇಳಂ' ಎಂದರೆ ಆ ನಂತರದ ಎಂಬ ಅರ್ಥವಿರುವುದರಿಂದ ಈ ಪ್ರದೇಶವನ್ನು ಕೋಶರ್ ಆ ನಂತರ ತಮ್ಮದನ್ನಾಗಿ ಮಾಡಿಕೊಂಡರೆಂದು ವಾದಿಸಲಾಗಿದೆ - ನೋ. ರಮೇಶ್, ಕೆ.ವಿ, *ಎ ಹಿಸ್ಟರಿ ಆಫ್ ಸೌತ್ ಕೆನರ,* (ಧಾರವಾಡ, ೧೯೭೦), ಪು.೯.

೨. *ಪದಿಟ್ರು.* ೩೭೩, ಸಾ. ೭-೮.

೩. *ಅದೇ.* ೯೦, ಸಾ. ೨೫. - *ಕಟ್ಟಿಪ್ರುಱುಕ್ಕಿನ ಕೊಂಗರ್ ಕೋವೇ...* ಜೇನುತುಪ್ಪದ ಅರ್ಥದಲ್ಲಿ 'ಕೊಂಗ' ಪದವನ್ನು ಬಳಸಿರುವುದಕ್ಕೆ ನೋ. *ಅಹನಾ.* ೧೪೨, ೨೪; *ಐಂಗುರು.* ೨೨೬, ೩; *ಕಲಿ.* ೨೯. ೮; *ಕುಱಿಂಜಿ.* ೮೩.; *ಕುಱುಂದೊಗೈ.* ೨-೧. ೪೯. ೧; *ಸಿಱುಪಾ.* ೭೧-೧೮೪).

೪. ಅಗನಾ. ೭೯, ೫.

೫. ಪದಿಟ್ರು. II, ೨೨, ಸಾ. ೧೦–೧೩.

೬. ಅದೇ., VII.

೭. ಅದೇ., ೭೭, ೧೦; ಪುರನಾ. ೧೩೦, ೫.

೮. ಪುಱನಾ. ೧೫೦, ೫.

೯. ಪದಿಟ್ರು. VIII.

೧೦. ಸಾಲೆತೊರೆ, ಬಿ.ಎ. ಪ್ರೊಸಿಡಿಂಗ್ಸ್ ಆಫ್ ದಿ ಡೆಕ್ಕನ್ ಹಿಸ್ಟರಿ ಕಾನ್ಫರೆನ್ಸ್ ಹೈದರಾಬಾದ್ ಅಧಿವೇಶನ, ೧೯೪೫, ರಾಮಮೂರ್ತಿ, ವಿ. (ಅದೇ, ಪು. ೨೦, ಅ.ಟಿ.೨೨)ಯಿಂದ ಪುನಃ ಉಲ್ಲೇಖಿಸಿದ್ದು.

೧೧. ಅಗನಾ. ೩೬೮, ೧೬.

೧೨. ಪದಿಟ್ರು. ೨೫೩, ೪; ನೋ. ರಾಮಮೂರ್ತಿ, ಪು. ೧೯–೨೦.

೧೩. ಅದೇ. ೮೮, ೧೯.

೧೪. ಪುಱನಾ. ೧೫೧, ಸಾ. ೧೦, ೧೨.

೧೫. ನಟ್ರಿಣೈ. ೩೯೧, ಸಾ. ೬–೭.

೧೬. ಅಗನಾ. ೧೫೭, ಸಾ. ೯–೧೪.

೧೭. ಪದಿಟ್ರು. ೩, ಸಾ. ೨.

೧೮. ಅದೇ. ೩, ಸಾ. ೪.

೧೯. ಅದೇ. ಸಾ. ೨೬–೨೭.

೨೦. ಅದೇ. ೬೧, ಸಾ. ೧–೧೦; ಪುರಂ. ೧೧೦, ೧೧೫, ೧೨೨.

೨೧. ಕುಱುಂದೊಗೈ. ೩೯೩, ಸಾ. ೪–೬.

೨೨. ಅಗನಾ. ೪೪, ಸಾ. ೭–೧೦.

೨೩. ಅಗನಾ. ೪೪, ಸಾ. ೭–೧೧; ಅದೇ. ೩೯೯, ಸಾ. ೧–೬; ೨೦೮, ಸಾ. ೫–೬, ೧೪೨, ಸಾ. ೯–೧೪, ೨೫೮, ಸಾ. ೧೩ ಮುಂ.; ಅದೇ. ೧೯೯, ಸಾ. ೧೯–೨೩ ಸಕ್ರಮವಾಗಿ.

೨೪. ಅದೇ. ೧೫, ೭, ೯೦, ೧೨, ೧೧೩, ೫, ೧೩೭, ೧, ೧೯೬, ೧೦, ೨೦೫, ೯, ೨೧೬, ೧೧, ೨೫೧, ೭, ೨೬೨, ೬; ಕುರುಂ. ೧೫, ೩೦, ೨೩, ೪; ಪುಱನಾ. ೧೬೯, ೯, ೨೮೩, ೭, ೩೯೬, ೭; ಮದುರೈಕ್ಕಾಚ್ಚಿ ೫೦೯, ೭೭೩ ಮುಂ.

೨೫. ಐರಾವತಮ್ ಮಹದೇವನ್, ಅರ್ಲಿ ತಮಿಳ್ ಎಪಿಗ್ರಫಿ..., *XVII*, ಪು. ೩೯೯. ಇಲ್ಲಿ ಅತಿಯಣ್ ನೆಟುಮಾಣ್ ಅಜ್ಞಿಯನ್ನು ಸತಿಯಪುತ್ತ ಎಂದು ಉಲ್ಲೇಖಿಸಲಾಗಿದ್ದು ಈ ಶಾಸನವನ್ನು ಕ್ರಿ.ಶ. ೧ನೆಯ ಶತಮಾನದೆಂದು ತೀರ್ಮಾನಿಸಲಾಗಿದೆ. ಅತಿಯಮಾನರನ್ನೂ ಅಂಜ್ಞಿಯನ್ನೂ ಶಂಗಂ

ಕವಿಗಳು ಉಲ್ಲೇಖಿಸಿದ್ದರೂ (ಪುಅನಾ. ೧೮೧, ೫; ಅಹನಾ. ೧೧೫, ೧೪, ೩೨೫, ೮ ಮತ್ತು ೩೭೯, ೯) ಸತಿಯಪುತ್ತನೆಂದು ಅವನನ್ನು ಗುರುತಿಸಿಲ್ಲ. ಅಲ್ಲದೆ ಜಂಬೈ ಶಾಸನವನ್ನು ಅಶೋಕನು ಆಳಿದ ಎರಡು ಶತಮಾನಗಳ ನಂತರ ಒಬ್ಬ ಜೈನಮುನಿಗಾಗಿ ಕೊರೆಸಲಾಗಿದ್ದುದನ್ನು ನೋಡಿದರೆ ಈ ಪ್ರಶ್ನೆ ಅಂತಿಮವಾಗಿ ತೀರ್ಮಾನವಾಗಿದೆ ಎಂದೆನಿಸಲಾರದು. ಅಶೋಕನ ಸತಿಯಪುತ್ರರೇ ಬೇರೆಯಾಗಿದ್ದು ಈ ವಿಶೇಷಣದ ಅದಿಯಮಾನರು ಬೇರೆಯಾಗಿರಲು ಸಾಧ್ಯ - ಅಥವಾ ಹೀಗೆ ಕರೆದುಕೊಂಡವರಲ್ಲಿ ಒಬ್ಬರಿಗಿಂತಲೂ ಹೆಚ್ಚು ನಾಯಕರು ತಮಿಳುನಾಡಿನಲ್ಲಿ ಇದ್ದಿರಲೂ ಸಾಧ್ಯ.

ಇದು ಏನೇ ಆಗಿರಲಿ, ಒಂದು ಶಾಸನವನ್ನು ಮಾತ್ರ ಆಧರಿಸಿ ಶಂಗಂ ಸಾಹಿತ್ಯವನ್ನೆಲ್ಲಾ ತಾತ್ಪಾರ್ಯಕ್ಕೊಳಪಡಿಸುವುದು ಸರಿಯಲ್ಲವೆಂಬುದು ನನ್ನ ಭಾವನೆ.

೨೬. ಅಗನಾ. ೯೦.

೨೭. ಪುಅನಾ. ೧೭೯, ಸಾ.೮-೧೧

೨೮. ಅಗನಾ. ೧೧೩, ೫.

೨೯. ಅದೇ. ೨೫೧, ೭

೩೦. ಪುಅನಾ. ೨೮೩-೭.

೩೧. ಅಗನಾ. ೨೧೬, ೧೧.

೩೨. ಅದೇ. ೧೫, ೨.

೩೩. ಪುರನಾ. ೩೯೬, ೭.

೩೪. ಮದುರೈಕ್ಕಾಚ್ಚಿ-ಪಿ.ಟಿ. ಶ್ರೀನಿವಾಸ ಐಯ್ಯಂಗಾರ್, *ಹಿಸ್ಟರಿ ಆಫ್ ದಿ ತಮಿಳ್ಸ್*, ಮದ್ರಾಸು, ೧೯೨೯, ಪು. ೫೨೬

೩೫. ಅಗನಾ. ೨೫೧, ಸಾ. ೬-೧೪; ೨೮೧, ಸಾ. ೪-೧೨.

೩೬. ಪದಿಟ್ರು. ೫, ಸಾ. ೪೯

೩೭. ಅದೇ. ೮೮, ಸಾ. ೫-೬; ೧೩೫.

೩೮. ಅಗನಾ. ೪೪, ಸಾ. ೭-೧೧.

೩೯. ಸಾ.೫೦೭-೫೦೯.

೪೦. ಎಮ್‌ಎಂಎಆರ್ ೧೯೩೦, ೩೬.

೪೧. *ಕರ್ನಾಟಕ ಇನ್‌ಸ್ಕ್ರಿಪ್ಷನ್ಸ್* I, ೮೨.

೪೨. ನೋ. ಎಕ. VII, ಶಿಕಾ. ೨೪೩, ೧೩೬, ಇಐ XV, ೩೩೭; ಅಲ್ಲದೆ ನೋ. ಎಕ X, ಎಪ್ಪಿ, ೫, II (ಪರಿಷ್ಕೃತ), ಎಸ್‌ಬಿ. ೧೭೧. ಇದರ ಸುದೀರ್ಘ ಚರ್ಚೆಗೆ ನೋ. ಷ. ಶೆಟ್ಟರ್, 'ತುಟಿಲಾಳ್ಗಳ್', *ಸಾಧನೆ* ೯-೩, ಪು.೩೯-೬೮. ಅಲ್ಲದೆ ನೋ. *ಸಾಧನೆ* ೧೦-೧, *ಸಂಕಲನ* ೨೨, ಪು. ೧೮ ಮುಂ.

೪೩. ಸಾ.೧೨

೪೪. ಈ ಐತಿಹ್ಯವನ್ನು ನಂಬುವುದಾದರೆ ಆರಂಭಕಾಲದ ಕಳಭ್ರರು ಉಗ್ರ ಜಿನಾನುಯಾಯಿಗಳಾಗಿದ್ದರೆಂದು ತಮಿಳಗಂನಲ್ಲಿ ಜೈನಮತ ಸ್ಥಾಪಿಸಲು ಅಲ್ಲಿಯ ಮತಧರ್ಮಗಳ - ಅದರಲ್ಲೂ ಶೈವಮತದ - ವಿರುದ್ಧ ಹಿಂಸಾಮಾರ್ಗವನ್ನು ಅನುಸರಿಸಿದರೆಂದು ಭಾವಿಸಬೇಕಾಗುವುದು. ಈ ಕಳಭ್ರರು ಕರ್ನಾಟಕದ ನಂದಿಬೆಟ್ಟದವರೆಂದೂ ಹೆಸರಾಂತ ಜಿನಸಂಘಗಳಲ್ಲಿ ಒಂದಾದ ನಂದಿಗಣಕ್ಕೆ ಸೇರಿದವರೆಂದೂ ವಾದಿಸಲಾಗಿದೆ. ತಮಿಳುನಾಡಿನಲ್ಲಿ ಜೈನಮತ ಪ್ರಸಾರ ಮಾಡಿದ ವಜ್ರನಂದಿ, ಸಿಂಹನಂದಿ ಮೊದಲಾದ ಮುನಿಗಳನ್ನು ಇಲ್ಲಿ ನೆನೆಯಬಹುದು. ಈ ಕಾಲದ ಉಗ್ರ ಜೈನ ನೀತಿಯ ಪರಿಣಾಮವನ್ನು ಆನಂತರ ಕಾಲದ ಇತಿಹಾಸದಲ್ಲಿಯೂ ಗುರುತಿಸಬಹುದು. ಒಂಬತ್ತನೆಯ ಶತಮಾನದವರೆಗಿನ ನಾಯನ್ಮಾರ್‌ರ (ತಮಿಳು ಶೈವಸಂತರು) ಹಾಡುಗಳಲ್ಲಿ ಕಳಭ್ರರ ಮೂಲಸ್ಥಾನವೆನಿಸಿದ್ದ ಕೊಂಗು ದೇಶದ ಧಾರ್ಮಿಕ ಕೇಂದ್ರಗಳ ಪ್ರಸ್ತಾಪ ಬಾರದಿರುವುದನ್ನು ಈ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕೆನಿಸುವುದು. ಇದಕ್ಕಿಂತಲೂ ಗಮನಾರ್ಹವಾದ ಮತ್ತೊಂದು ವಿಷಯವೆಂದರೆ ಜೈನ-ವೀರಶೈವರ ನಡುವಿನ ಧರ್ಮಘರ್ಷಣೆ. ತಮಿಳುನಾಡಿನ ಶೈವಪುರಾತನರನ್ನು ತಮ್ಮ ಪರಂಪರೆಯಲ್ಲಿ ಸೇರಿಸಿಕೊಂಡ ವೀರಶೈವರು, ತಮಿಳುನಾಡಿನಲ್ಲಿ ಹಿಂದೊಮ್ಮೆ ಜೈನರಿಂದ ಶೈವ ಮತಕ್ಕಾದ ಅನ್ಯಾಯವನ್ನು ಮರೆಯಲು ಸಾಧ್ಯವಾಗಲಿಲ್ಲವೆಂದು ತೋರುವುದು.

೪೬. ರಾಮಮೂರ್ತಿ, ಎ. ಅದೇ., ಪು. ೧೨೮-೧೬೧.

'ವಡಗ' ಹೆಸರಿನ ಕವಿಗಳು ರಚಿಸಿರುವ ಎರಡು ಡಜನ್ ಕವನಗಳನ್ನಿಲ್ಲಿ ಪರಿಚಯಿಸಲು ಪ್ರಯತ್ನಿಸಿರುವೆ... 'ವಡಮ' ಎಂಬ ಒಂದು ವರ್ಗ ಅಥವಾ ಕುಲವಿತ್ತೆಂಬ ವಾದವಿದ್ದು ಅದನ್ನು ತಳ್ಳಿಹಾಕುವಂತಿಲ್ಲ, ಆದರೆ ಈ ವರ್ಗದ ಮೂಲ ಉತ್ತರದಲ್ಲಿದ್ದ 'ಸಾಧ್ಯತೆಯನ್ನು ಅಲ್ಲಗಳೆಯುವಂತೆಯೂ ಇಲ್ಲ. ಈ ಕವಿಗಳ ಮೂಲ ನೆಲೆ 'ತಮಿಳಗಂ' ಉತ್ತರಕ್ಕಿತ್ತೆಂದು ಊಹಿಸಬಹುದಾದರೂ ಇಲ್ಲಿ ಸೂಚಿಸಿರುವ ಯಾವ ವಲಯಕ್ಕೆ ಅವರು ಸೇರಿದ್ದರೆಂಬುದನ್ನು ನಿರ್ಧರಿಸಿ ಹೇಳಲು ಸಾಧ್ಯವಾಗುತ್ತಿಲ್ಲ... ಇವರಲ್ಲಿ ಬಹುತೇಕರು ಅಲೆಮಾರಿ ಹಾಡುಕವಿಗಳಾಗಿದ್ದುದರಿಂದ... ಒಬ್ಬ ಪೋಷಕನ ಆಶ್ರಯದಲ್ಲಿಯೇ ಜೀವಿತಾವಧಿಯನ್ನು ಕಳೆದರೆಂಬುದಕ್ಕೆ ಆಧಾರ ದೊರೆಯುವುದಿಲ್ಲ... ವಡುಗ ಕವಿಗಳು ಅಲೆಮಾರಿ ಹಾಡುಗಾರರು - ತಮಿಳಿನಲ್ಲಿ ಪಾಣರ್ - ಆಗಿದ್ದರಲ್ಲದೆ ಆಸ್ಥಾನ ಕವಿಗಳಾಗಿರಲಿಲ್ಲ; ಅವರು ಶಂಗಂ ಕವಿ ಸಮುದಾಯಕ್ಕೆ (ಅಂಥಹ ಒಂದು ನಿಶ್ಚಿತ ಸಮುದಾಯವಿತ್ತೆಂಬ ಬಗ್ಗೆ ಒಂದು ದೊಡ್ಡ ಪ್ರಶ್ನೆ ಇದೆ!) ಸೇರಿದವರು ಅಥವಾ ಮೂವೇಂದರಿಂದ ಪೋಷಣೆ ಪಡೆದವರು ಆಗಿರಲಿಲ್ಲ. ಈ ವಡುಗ ಕವಿಗಳು ಏಕೆ ತಮ್ಮ ತಮ್ಮ ಭಾಷೆಗಳಲ್ಲಿ ಕಾವ್ಯ ರಚಿಸದೇ ತಮಿಳಿನಲ್ಲಿ ಹಾಡುಗಬ್ಬಗಳನ್ನು ರಚಿಸಿದರು ಎಂಬುದಕ್ಕೆ ಅವರು ಅರಸಿ ಹೋಗುತ್ತಿದ್ದ ಪೋಷಕ ವರ್ಗವನ್ನು ಗಮನದಲ್ಲಿರಿಸಿ ನೋಡಿದರೆ, ತಕ್ಕ ಉತ್ತರ ದೊರೆಯುವುದು... ಇದು ಏನೇ ಇರಲಿ. ಈ ಬಗೆಯಲ್ಲಿ ಕಾವ್ಯ ರಚನೆಯಲ್ಲಿ ಪ್ರೌಢಿಮೆ ಹೊಂದಿದ ಕವಿಗಳು ತಮ್ಮ ತಮ್ಮ ನೆಲದ ನುಡಿಗಳಲ್ಲಿ - ಮುಖ್ಯವಾಗಿ ಕನ್ನಡ, ತುಳು, ಕೊಂಕಣ - ಹಾಡುಗಳನ್ನು ರಚಿಸಿರಲು ಸಾಧ್ಯವೇ ಎಂಬ ಪ್ರಶ್ನೆ ಬರುವುದು. ಕ್ರಿ.ಶ. ೫ನೆಯ ಶತಮಾನದ ನಂತರದ ದಾಖಲಿತ ಕನ್ನಡ ಶಾಸನ ಸಾಹಿತ್ಯವನ್ನೂ, ಮಾರ್ಗಕಾರನು ಸೂಚಿಸಿರುವ ಅವನ ಕಾಲಕ್ಕಿಂತ ಮುಂಚಿನ ಕವಿಪರಂಪರೆಯನ್ನೂ, ಹಾಡುಗಬ್ಬ ವರ್ಗಕ್ಕೆ ಸೇರಿದ ಚತ್ತಾಣ ಮತ್ತು ಬೆದಂಡೆ ಪ್ರಭೇದಗಳ ಹಿರಿಮೆಯನ್ನೂ ಗಮನದಲ್ಲಿಟ್ಟುಕೊಂಡು ನೋಡಿದರೆ, 'ಯಾಕಿರಬಾರದು?' ಎಂಬ ಉತ್ತರ ಬರುವುದು.

ಅಧ್ಯಾಯ-೯

# ಶಂಗಂ ಸಾಹಿತ್ಯಕ್ಕೆ ಕನ್ನಡನಾಡಿನ ಕವಿಗಳ ಕೊಡುಗೆ

ಶಂಗಂ ಸಾಹಿತ್ಯ ಮತ್ತು ದ್ರಾವಿಡ ಸಂಬಂಧದ ಈ ಸಮೀಕ್ಷೆಯಿಂದ ಹೊರಹೊಮ್ಮುವ ಕೆಲವು ಪ್ರಮುಖ ಅಂಶಗಳನ್ನು ಸಂಗ್ರಹಿಸಿ ಇಲ್ಲಿ ಕೊಡಬಹುದು. ಇವುಗಳಲ್ಲಿ ಮೊದಲಿನದು ಶಂಗಂ ಕಾಲ ಮತ್ತು ಕೇಂದ್ರಕ್ಕೆ ಸಂಬಂಧಿಸಿದ್ದು.

**ಶಂಗಂ ಕಾಲ:**

ಶಂಗಂ ಸಾಹಿತ್ಯದ ಆರಾಧಕರು ಇದರ ಕಾಲವನ್ನು ಕ್ರಿ.ಪೂ. ೫ರಿಂದ ಪ್ರಾರಂಭಿಸಿ ಕ್ರಿ.ಶ. ೫ರವರೆಗೂ ವಿಸ್ತರಿಸಿರುವರು. ಅಂದರೆ ಇದರ ಪರಮಾವಧಿ ಸುಮಾರು ಒಂದು ಸಹಸ್ರ ವರ್ಷ. ಐತಿಹ್ಯವನ್ನು ಹೊರತುಪಡಿಸಿ, ಶಂಗಂ ಕಾಲದ ಆರಂಭವನ್ನು ಕ್ರಿ.ಪೂ. ೫ನೆಯ ಶತಮಾನಕ್ಕೆ ಕೊಂಡೊಯ್ಯಲು ಈ ಸಾಹಿತ್ಯದಲ್ಲಿ ಪುಷ್ಟಿ ದೊರೆಯುವುದಿಲ್ಲ. ಆಂತರಿಕ ಮಾಹಿತಿಯೊದಗಿಸುವ ಅತ್ಯಂತ ಪೂರ್ವಕಾಲದ ಐತಿಹಾಸಿಕ ಘಟನೆಗಳೆಂದರೆ ನಂದ ಮತ್ತು ಮೌರ್ಯರ ಉಲ್ಲೇಖಗಳು. ನಂದರ ಅಪಾರ ಸಂಪತ್ತಿನ ಆನುಷಂಗಿಕ ಉಲ್ಲೇಖ ಅವರನ್ನು ತಮಿಳಗಂನೊಡನೆ ನೇರವಾಗಿ ಪ್ರಸ್ತುತಗೊಳಿಸಲು ಸಹಕಾರಿಯಾಗುವುದಿಲ್ಲ; ಕಾಲಾನಂತರದ ಕವಿಯೊಬ್ಬ[೧] ಬಹುಕಾಲದ ಹಿಂದೆ ಸಂಭವಿಸಿತ್ತೆನ್ನಲಾದ ಒಂದು ಐತಿಹ್ಯವನ್ನು ಸ್ಮರಿಸಿಕೊಳ್ಳುವನು ಮಾತ್ರ. ಇದೇ ಕವಿ ಕೊಡುವ ಮೌರ್ಯರ ವಿವರಗಳನ್ನು ತಮಿಳಗಂನೊಡನೆ ಪ್ರಸ್ತುತಗೊಳಿಸಲು ಸ್ವಲ್ಪಮಟ್ಟಿಗೆ ಸಾಧ್ಯ, ಆದರೆ ಇಲ್ಲಿ ಕೂಡ ಕೆಲವು ತೊಡಕುಗಳಿವೆ.

ಶಂಗಂ ಸಾಹಿತ್ಯದಲ್ಲಿ ಮೌರ್ಯರನ್ನು 'ಮೊರಿಯ' ಮತ್ತು 'ವಂಬಮೊರಿಯ' ಎಂಬ ಎರಡು ಪದಗಳಿಂದ ಉಲ್ಲೇಖಿಸಲಾಗಿರುವುದನ್ನು ಮತ್ತು 'ವಂಬ' ಪದದ ವಿಶಿಷ್ಟ ಅರ್ಥವನ್ನು ಈಗಾಗಲೇ ಗಮನಿಸಲಾಗಿದೆ. ಮೌರ್ಯರು ದಕ್ಷಿಣದ ದಂಡಯಾತ್ರೆ ಕೈಕೊಂಡಾಗ ಅವರ ಸೇನೆಯ ಮುಂಚೂಣಿಯಲ್ಲಿ ನಿಂತು, ಸಹಾಯ ಮಾಡಿದ ವಡುಗರ ಮತ್ತು ಮೋಹೂರ್‌ರನ್ನು ಶರಣಾಗತಿಗೊಳಿಸಿಕೊಳ್ಳಲು ಕೋಶರರು ಮುನ್ನುಗ್ಗಿದಾಗ, ಕೋಶರರ ಸಹಾಯಕ್ಕೆ ಬಂದ ವಂಬಮೊರಿಯರ ಉಲ್ಲೇಖಗಳು ಇಲ್ಲಿ ಗಮನಾರ್ಹ.[೨] ಆದರೆ ಈ ಘಟನೆಗಳು ಸಂಭವಿಸಿದ ಕಾಲದ ಬಗ್ಗೆ ಅನಿಶ್ಚಿತತೆ ಇದೆ. ಕಳಿಂಗೆಯನ್ನು ಅಶೋಕ ಗೆದ್ದುಕೊಂಡನಂತರ ಅವನು ಯುದ್ಧಯಾತ್ರೆಯನ್ನು ಮುಕ್ತಾಯ ಮಾಡಿದನೆಂಬುದರ ಹಿನ್ನೆಲೆಯಲ್ಲಿ ಇದನ್ನು ನೋಡಿದರೆ, ಇದು ಅಶೋಕನ ಕಾಲಾನಂತರ ನಡೆದಿರಬಹುದಾದ ಘಟನೆಯಾಗಿರಬಹುದೆನಿಸುವುದು. ಅಂದರೆ, ಕ್ರಿ.ಪೂ. ೨ನೆಯ ಶತಮಾನದಿಂದೀಚೆಗೆ ಮೌರ್ಯ ಹೆಸರನ್ನು ಉಳಿಸಿಕೊಂಡು ದಕ್ಷಿಣದಲ್ಲಿ ಆಳ್ವಿಕೆಯನ್ನು ಮುಂದುವರಿಸಿದ, 'ನವ

ಮೌರ್ಯ'ರ ಕಾಲದ್ದೆಂದು ಬಗೆಯಬೇಕಾಗುವುದು. ಒಂದು ವೇಳೆ ಅಶೋಕ 'ಸುವರ್ಣಗಿರಿ'ಯಲ್ಲಿ ದಕ್ಷಿಣದ ರಾಜಧಾನಿಯನ್ನು ನಿರ್ಮಿಸಿ, 'ಆರ್ಯಪುತ್ರ'ನನ್ನು ಅಧಿಕಾರಕ್ಕೆ ತಂದು, ತನ್ನ ಗಡಿಯನ್ನು ಭದ್ರಪಡಿಸಿಕೊಳ್ಳಲು 'ಇಸಿಲ'ದಲ್ಲಿ ಕೋಟೆಯೊಂದನ್ನು ಕಟ್ಟಿ ಅಲ್ಲಿಂದ 'ತಮಿಳಗಂ' ಗಡಿಯ ಮೇಲೆ ಕಣ್ಣಿಟ್ಟು, ತಮಿಳೇತರ ಶಕ್ತಿಗಳನ್ನು ತನ್ನ ಅನುಕೂಲಕ್ಕೆ ಬಳಸಿಕೊಳ್ಳಲು ಪ್ರಯತ್ನಿಸಿದ್ದರೆ, ಇದರ ಕಾಲವನ್ನು ಕ್ರಿ.ಪೂ. ೩ನೆಯ ಶತಮಾನದ ಕೊನೆಗೆ ಕೊಂಡೊಯ್ಯಬಹುದೆನಿಸುವುದು. ಮೌರ್ಯರಿಗೆ ಸಂಬಂಧಿಸಿದ ಈ ಐತಿಹಾಸಿಕ ಘಟನೆಗಳ ಉಲ್ಲೇಖಗಳಷ್ಟೇ ಮಹತ್ವವಾದದ್ದು ಇವನ್ನು ನೆನಪಿಸಿಕೊಡುವ ಕವಿಗಳ ಕಾಲ. ನಂದ ಮತ್ತು ಮೌರ್ಯರಿಗೆ ಸಂಬಂಧಿಸಿದ ಘಟನೆಗಳನ್ನು ಸ್ಮರಿಸಿರುವ ಮಾಮೂಲನಾರ್ ಕಾಲವನ್ನು ನಿರ್ಧರಿಸುವುದು ಕಷ್ಟ ಆದರೆ ಆತನು ಕ್ರಿಸ್ತಶಕೆಯ ಆರಂಭದ ಶತಕಗಳಿದ್ದನೆಂಬ ಅನುಮಾನವಿದೆ.

ಶಂಗಂ ಸಾಹಿತ್ಯ ಕೃಷಿಯು ಕ್ರಿ.ಶ. ೫ನೆಯ ಶತಮಾನದವರೆಗೆ ಮುಂದುವರಿಯಿತೆನ್ನಲೂ ನಿರ್ದಿಷ್ಟ ಆಧಾರಗಳು ದೊರಕುವುದಿಲ್ಲ. ಕ್ರಿ.ಶ. ೩ನೆಯ ಶತಮಾನ ನಂತರ ಮೂವೇಂದರ ಆಳ್ವಿಕೆ ಅಂತ್ಯಗೊಂಡು, ಕಳಭ್ರ ದಾಳಿ ಆರಂಭವಾಗಿ, ತಮಿಳಗಂ ಅಂಧಕಾರದಲ್ಲಿ ಬಿತ್ತೆಂಬ ಸಾರ್ವತ್ರಿಕ ಅಭಿಪ್ರಾಯದ ಹಿನ್ನೆಲೆಯಲ್ಲಿ ಈ ಸಮಸ್ಯೆಯನ್ನು ಪರಾಮರ್ಶಿಸಿದರೆ, ೩ನೆಯ ಶತಮಾನದ ನಂತರ ಶಂಗಂ ಕವಿಗಳಿಗೆ ಪೋಷಣೆ ಒದಗಿಸುವ ಹಿರಿಕಿರಿಯ ರಾಜಮನೆತನಗಳೇ ಅಲ್ಲಿ ಉಳಿದಿರಲಿಲ್ಲವೆಂದು ತೀರ್ಮಾನಿಸಬೇಕಾಗುವುದು. ಆದರೆ ಈ ಬಗೆಯ ಪೋಷಣೆಯನ್ನು ಆಶ್ರಯಿಸದೆ ರಚನೆಯಾದ ತಮಿಳು ಮಹಾಕಾವ್ಯಗಳು ಮತ್ತು ಭಕ್ತಿಕಾವ್ಯಗಳು ಈ ಕಾಲಾನಂತರದಲ್ಲಿ ಬಂದ ಬಗ್ಗೆ ಅನುಮಾನವಿಲ್ಲ.

ಈ ಹಿನ್ನೆಲೆಯಲ್ಲಿ ಶಂಗಂ ಸಾಹಿತ್ಯದ ಉಚ್ಛ್ರಾಯ ಹಂತವನ್ನು ಕ್ರಿಸ್ತಶಕೆಯ ಹೊರಳಿನ ಒಂದೆರಡು ಶತಮಾನಗಳಿಗೆ (ಅಂದರೆ ಕ್ರಿ.ಪೂ. ೨ರಿಂದ ಕ್ರಿ.ಶ. ೨(೩?)ಕ್ಕೆ ಸೀಮಿತಗೊಳಿಸುವುದು ಸಮಂಜಸವೆನಿಸುವುದು. ತಮಿಳುನಾಡಿನ ಇತ್ತೀಚಿನ ಸಂಶೋಧಕರು ಇದನ್ನು ಅಂಗೀಕರಿಸಲು ಒಲವು ತೋರಿರುವರು.

**ಶಂಗಂ ಕೇಂದ್ರ:**

ಇನ್ನು ವೈಗೈ ನದೀ ದಡದ ಪಾಂಡ್ಯ ರಾಜಧಾನಿಯಾದ ಮದುರೈ ಶಂಗಂ ಕೇಂದ್ರವಾಗಿತ್ತು ಮತ್ತು ಪಾಂಡ್ಯರಾಜನು ಈ ಸಾಹಿತ್ಯದ ಪ್ರಧಾನ ಪೋಷಕರಾಗಿದ್ದರು ಎಂಬುದರ ಬಗ್ಗೆ ಶಂಗಂ ಸಾಹಿತ್ಯಕ್ಕೆ ಪಾಂಡ್ಯರ ಪೋಷಣೆ ದೊರಕಿದುದರಲ್ಲಿ ಅನುಮಾನವಿಲ್ಲ. ಆದರೆ ಅದೆಲ್ಲವೂ ಈ ಅರಸುಮನೆತನದ ಕಾಣಿಕೆ ಎನ್ನಲಾಗದು. ಪುಱನಾನೂಱಿನ ಕವನಗಳ ಅಂಕೆ-ಸಂಖ್ಯೆಗಳಿಂದ ಇದನ್ನು ಸಾಧಿಸಿತೋರಿಸಬಹುದು. ಈ ಸಂಕಲನದಲ್ಲಿ ಮೂವೇಂದರರನ್ನು ಶ್ಲಾಘಿಸಿ ರಚಿಸಿದ ಸುಮಾರು ೧೩೮ ಕವನಗಳಲ್ಲಿ ೩೯

ಕವಿಗಳು ೭೪ ಕವನಗಳನ್ನು ಚೋಳರನ್ನು ಕುರಿತು, ೨೩ ಕವಿಗಳು ೩೭ ಕವನಗಳನ್ನು ಪಾಂಡ್ಯರನ್ನು ಕುರಿತು, ೨೭ ಕವಿಗಳು ೨೭ ಕವನಗಳನ್ನು ಚೇರರನ್ನು ಕುರಿತು ರಚಿಸಲಾಗಿದೆ. ಇದಕ್ಕೆ ಭಿನ್ನವಾಗಿ ಚಿಟ್ಟರಸರನ್ನು (ಸಾಮಂತ ನಾಯಕರನ್ನು) ಕುರಿತು ೪೪ ಕವಿಗಳು ರಚಿಸಿದ ಒಟ್ಟು ಕವಿತೆಗಳ ಸಂಖ್ಯೆ ೧೪೧.

ಅಂದರೆ ಶಂಗಂ ಸಾಹಿತ್ಯ ಬೆಳೆಯಲು ಪಾಂಡ್ಯ (ಅದರಂತೆ ಚೋಳ, ಚೇರ)ರಿಗಿಂತ ಹೆಚ್ಚು ಕಾರಣರಾದವರು ಸ್ವತಂತ್ರವಾಗಿ ಆಳುತ್ತಿದ್ದ ಚಿಕ್ಕಪುಟ್ಟ ಅರಸು ಮನೆತನಗಳು ಎಂದಂತಾಯಿತು. ಈ ಸ್ವತಂತ್ರ ಅಥವಾ ಸಾಮಂತ ರಾಜಮನೆತನಗಳು ತಮಿಳಗಂ ಒಳಗೂ ಮತ್ತು ಹೊರಗೂ ಹಂಚಿಕೊಂಡಿದ್ದವು. ಅಂಥ ಹೊರಗಿನ ಶಕ್ತಿಗಳೆಲ್ಲವೂ ತಮಿಳಗಂ ಉತ್ತರದಲ್ಲಿ ಕೇಂದ್ರೀಕೃತವಾಗಿದ್ದು ನೀಲಗಿರಿ ಬೆಟ್ಟಸಾಲಿನಿಂದೀಚೆಗೆ, ಅಂದರೆ ಪಶ್ಚಿಮ ಕರಾವಳಿಯಿಂದ ಆರಂಭಗೊಂಡು ವೇಂಕಟಾದ್ರಿ ಪರಿಸರದ ಪ್ರದೇಶವನ್ನು, ತಲುಪಿದ್ದವು.

## ಮೂರು ವಡುಗ ವಲಯಗಳು:

ತಮಿಳಗಂ ಉತ್ತರಕ್ಕಿದ್ದ ಎಲ್ಲ ಸ್ವತಂತ್ರ ಮತ್ತು ಸಾಮಂತ ರಾಜ್ಯಗಳ ಪಟ್ಟಿಯನ್ನು ಮಾಡುವುದು ಪ್ರಯಾಸದಾಯಕ. ಆದರೆ ಅವನ್ನು ಮೂರು ಸ್ಥೂಲ ಪ್ರಾದೇಶಿಕ ವರ್ಗಗಳಡಿ ತರಬಹುದೆನಿಸುವುದು. ಒಂದು, ವೇಂಕಟಾದ್ರಿಯ ಸುತ್ತಮುತ್ತಲಿನ ಆಂಧ್ರಪ್ರದೇಶ. ಇಲ್ಲಿಯ ಒಂದು ರಾಜ್ಯವನ್ನು ತೊಂಡೈಯಾರ್‌ದೆಂದು ಗುರುತಿಸಲಾಗಿದ್ದು ಈ ಬೆಟ್ಟಸಾಲಿನಾಚೆಗಿದ್ದ ಪ್ರದೇಶವು ವಡುಗರದ್ದಾಗಿತ್ತೆಂದು ಸ್ಪಷ್ಟಪಡಿಸಲಾಗಿದೆ. ಕಳವರ ಅಧಿಪತಿಯಾದ ಪುಲ್ಲಿ ಎಂಬವನು ವೇಂಕಟದ ಅಧಿಪತಿಯಾಗಿದ್ದನು; ಹಾಡುಗಾರರಿಗೆ ಮತ್ತು ಹೊರನಾಡವರಿಗೆ ಇವನು ಕೊಟ್ಟ ಉದಾರ ಕೊಡುಗೆಗಳಿಂದ ಅವರ ಪ್ರೀತಿಗೆ ಪಾತ್ರನಾಗಿದ್ದನು.[೭] ಕವಿ ನಣ್ಣಾಕ್ಕಣಾರ್ ವೇಂಕಟ ಪ್ರದೇಶದ ನಾಯಕರೂ ತನ್ನ ಪೋಷಕರೂ ಆದ ಒಮಾಣ್‌ನಲ್ಲಿಯಕ್ಕೋಟಣ್, ವಿಲ್ಲಿಯಾಣರ್ ಮತ್ತು ಕರುಂಪಣುರ್‌ಕ್ಕಿೞಣರ್ ಎಂಬವರನ್ನು ಹೆಸರಿಸಿ, ಅವರ ಉದಾರ ಗುಣವನ್ನು ಮುಕ್ತಕಂಠದಿಂದ ಪ್ರಶಂಸಿಸಿರುವನು.[೮] ಇವನು ತಮಿಳಗಂನ ಉತ್ತರಕ್ಕಿದ್ದ ಪ್ರದೇಶದಿಂದ ಬಂದವರ ವಂಶಜನಾಗಿದ್ದನೆಂಬುದು ಒಮ್ಮತದ ಅಭಿಪ್ರಾಯ.[೯] ವಣ್ಣಾಕ್ಕಣಾರ್ ರಚಿಸಿದ ಒಂದು ಕವನವನ್ನು (ಪ.ಸಂ.೧). ಅಲ್ಲದೆ ವೇಂಗಡವನ್ನು ಮತ್ತು ಅದರ ಅಧಿಪತಿಯಾದ ಆಟಣುಂಕಣನನ್ನು ಪರಿಚಯಿಸುವ ಕಳ್ಳಿಲ್ ಅತ್ತಿರೈಯಣಾರ್‌ನ ಒಂದು ಕವನವನ್ನು (ಪ.ಸಂ.೨) ಇಲ್ಲಿ ನಿದರ್ಶಿಸಿರುವೆ. ಈ ಪ್ರದೇಶವು ಆಂಧ್ರಕ್ಕೆ ಹೆಚ್ಚು ಪ್ರಸ್ತುತವಾಗಿರುವುದರಿಂದ ಅದರ ಚರ್ಚೆಯನ್ನು ನಾನಿಲ್ಲಿ ವಿಸ್ತರಿಸಿಲ್ಲ.

ವೇಂಗಡ ವಲಯ ಮತ್ತು ಕನ್ನಡನಾಡಿನ ನಡುವೆ ಇದ್ದ ವಡುಗ ಪ್ರದೇಶವನ್ನು ಶಂಗಮೋತ್ತರ ಕಾಲದ ತಮಿಳು ಶಾಸನಗಳಲ್ಲಿ 'ಪೆರುಂಬಾಣಪಾಡಿ' ಎಂದೂ ಕರ್ನಾಟಕದ ತಾಳಗುಂದ ಶಾಸನದಲ್ಲಿ 'ಬೃಹದ್ಬಾಣ' ರಾಜ್ಯವೆಂದೂ ಗುರುತಿಸಲಾಗಿದೆ. ಅನಂತರ ಇದನ್ನು 'ವಟುಕವಟಿ-೧೨೦೦' ಮತ್ತು 'ವಟುಕವಟಿಮೇರ್ರು' ಎಂದು ಕರೆಯಲಾಯಿತು. ಕವಿ

ಮಾಮೂಲಣಾರ್ ಈ ಪ್ರದೇಶವನ್ನು *'ತಮಿೞ್‌ಕೇೞು ಮೂವರ್‌ಕಾಕ್ಕಮ್ ಮೊೞಿಪೇಯರ್ ದೇಯಂ'* ಅಥವಾ 'ಮೂವರು ನಾಯಕರು ಆಳುವ ತಮಿಳು ಅಪಭ್ರಂಶ ಭಾಷಾವಲಯ'ವೆಂದು ಕರೆದಿರುವನು. ಮಹಾಬಲಿ ವಂಶದ ನಾಯಕರು ಕರ್ನಾಟಕದ ನಂದಿದುರ್ಗದವರೆಗೂ ಆಳುತ್ತಿದ್ದರೆಂದು ತಮಿಳು ಕೃತಿ *'ಯಾಪ್ಪರುಂಗಲಮ್'* ತಿಳಿಸುವುದು.[೬] ಬಾಣವಾಡಿಯೆಂದು ಹೆಸರು ಪಡೆದುಕೊಂಡ, ಆಂಧ್ರ-ಕರ್ನಾಟಕವನ್ನು ಬೆಸೆದ, ತಮಿಳಗಂ ಹೊರಗೆ ವಡುಗರ ವಶದಲ್ಲಿದ್ದ ಪ್ರದೇಶ ಇದಾಗಿತ್ತೆಂಬುದು ಇದರಿಂದ ಸ್ಪಷ್ಟಗೊಳ್ಳುವುದು. ವಡುಗ ಪೂರ್ವ ಪ್ರತ್ಯಯ ಹೆಸರಿನ ಕವಿಗಳಲ್ಲಿ ಕೆಲವರು ಈ ವಲಯದವರಾಗಿರಲು ಸಾಧ್ಯ.

ಇನ್ನು ಮೂರನೆಯ ವಲಯವೆಂದರೆ ಇಂದಿನ ದಕ್ಷಿಣ ಕರ್ನಾಟಕ. ಸ್ಥೂಲವಾಗಿ ಇದನ್ನು ನೀಲಗಿರಿಯ ಉತ್ತರಕ್ಕಿದ್ದ ಪಶ್ಚಿಮ ಕಡಲ ತೀರದಿಂದ ಪೂರ್ವ ಮತ್ತು ಪೂರ್ವೋತ್ತರಕ್ಕೆ ಹಬ್ಬಿದ್ದ ಪ್ರದೇಶದೊಂದಿಗೆ ಗುರುತಿಸಬಹುದು. ಇದರ ಕೇಂದ್ರ, ಕಾವೇರೀ-ಕಬಿನೀ ಪ್ರದೇಶ. ಶಂಗಂ ಕಾಲದಲ್ಲಿ ಇದನ್ನು ಹಂಚಿಕೊಂಡು ಆಳಿದ ನಾಯಕರಲ್ಲಿ ಪ್ರಮುಖರು, ಎರುಮೈಊರವರು, ಪುನ್ನಾಟರು, ಕೋಶರರು, ಮೋಹೂರರು, ಕೊಂಕಾಣರು, ತುಳುವರು, ಅಲ್ಲದೆ ಕದಂಬರು. ಇವರೆಲ್ಲರನ್ನೂ ಎರಡು ವರ್ಗಗಳಡಿ ತರಬಹುದು: ಒಂದು, ತಮಿಳಗಂನೊಡನೆ ಒಂದಿಲ್ಲೊಂದು ಬಗೆಯಲ್ಲಿ ಸಂಪರ್ಕವಿರಿಸಿ ಕೊಂಡು, ತಮಿಳು ಭಾಷೆಯಲ್ಲಿ ವ್ಯವಹರಿಸಿದ್ದಲ್ಲದೆ ಶಂಗಂ ಸಾಹಿತ್ಯಕ್ಕೆ ತಮ್ಮ ಪ್ರದೇಶದ ಕವಿಗಳಿಂದ ಕಾಣಿಕೆ ಸಲ್ಲಿಸಿದವರದ್ದು; ಎರಡು, ಅಂದಿನ ತಮಿಳಗಂ ರಾಜ್ಯಗಳೊಡನೆ ಸದಾ ಹೋರಾಡುತ್ತಾ, ತಮಿಳು ಭಾಷೆಯನ್ನು ಬಳಸದೇ ತಮ್ಮ ಸ್ವಂತಿಕೆಯನ್ನು ಉಳಿಸಿ ಕೊಂಡವರದ್ದು. ತಮಿಳರೊಡನೆ ಸ್ಪಂದಿಸಿದ ಮೊದಲ ವರ್ಗದ ಅರಸರು, ತಮಿಳಗಂ ಅಂಗವಾಗಿರಲಿಲ್ಲ, ಆದರೆ ತಮಿಳು 'ಮಿಲ್ಯೂ'ವಿನಲ್ಲಿ ಗುರುತಿಸಿಕೊಂಡವರಾಗಿದ್ದರೆನ್ನ ಬಹುದು. ಇಂಥವರಲ್ಲಿ ಎರುಮೈಊರವರು, ಕೊಂಕಾಣರು, ಕೋಶರರು ಪ್ರಮುಖರು. ತಮಿಳರ ವಿರುದ್ಧ ಸದಾ ಹೋರಾಡಿ ತಮಿಳು ಭಾಷಾ ಪ್ರಭಾವಕ್ಕೆ ಒಳಗಾಗದ ಎರಡನೆಯ ವರ್ಗದವರಲ್ಲಿ ಎದ್ದು ಕಾಣುವಂಥವರು, ಪುನ್ನಾಟರು, ಕದಂಬರು ಮತ್ತು ಮೋಹೂರರು.

## ವಡುಗವಲಯದ ಕವಿಗಳು:

ಶಂಗಂ ಸಾಹಿತ್ಯಕ್ಕೆ ಕಾಣಿಕೆಯನ್ನಿತ್ತ ತಮಿಳಗಂ ಉತ್ತರ ವಲಯದ ಕವಿಗಳನ್ನೂ ನಾಲ್ಕು ವರ್ಗಗಳಡಿಯಲ್ಲಿ ತರಬಹುದೇನೋ. ಇವರಲ್ಲಿ ಮೊದಲನೆಯ ವರ್ಗದವರು, ಕಾಲಕಾಲಕ್ಕೆ ನೆಲೆನಿಂತ ಅಥವಾ ಕಾಲಕಾಲಕ್ಕೆ ಇವರನ್ನು ಪೋಷಿಸಿದ 'ರಾಜರು'ಗಳನ್ನು ಕುರಿತು ಬರೆದ ಕವಿಗಳು. ಎರಡನೆಯವರು, ತಮ್ಮ ಹೆಸರಿನಲ್ಲಿ ತಮ್ಮ (ವಂಶಜರ) ಪ್ರದೇಶವನ್ನು ಪ್ರಕಟಿಸಿದವರು. ಇವರಲ್ಲಿ 'ವಡುಗ' ('ವಟುಕ', 'ವಡವರ', ಮುಂತಾದ) ಪೂರ್ವಪ್ರತ್ಯಯ

ಹೊಂದಿರುವವರು ಗಮನಾರ್ಹರು. ಮೂರನೆಯವರು, ವಡುಗನಾಡಿನ ವ್ಯಕ್ತಿಗಳನ್ನು (ಉದಾ. ನಣ್ಣಣ್), ಅರಸು ಮನೆತನಗಳನ್ನು (ಉದಾ. ಕೋಶರ್, ಮೋಹೂರ್,) ಅಥವಾ ಪ್ರದೇಶವನ್ನು (ಉದಾ. ಕೊಂಕಾಣ, ಎರುಮೈಊರ್) ಉಲ್ಲೇಖಿಸುವ ಕವಿಗಳು. ನಾಲ್ಕನೆಯವರು, ಈ ಮೂರು ವರ್ಗಕ್ಕೆ ಸೇರದ, ಆದರೆ ತಮ್ಮ ಪೋಷಕರನ್ನು ಕೀರ್ತಿಸುವಾಗ ಆನುಷಂಗಿಕವಾಗಿ (ಉದಾ. ಕದಂಬ, ಪುನ್ನಾಟ, ಕಂಗ (ಗಂಗ), ಮೊದಲಾದ) ಉತ್ತರನಾಡಿನ ಶತ್ರುಶಕ್ತಿಗಳನ್ನು ಉಲ್ಲೇಖಿಸುವ ಕವಿಗಳು.

'ವಡಗ' ಹೆಸರಿನ ಕವಿಗಳು ರಚಿಸಿರುವ ಒಂದು ಡಜನ್ ಕವನಗಳನ್ನಿಲ್ಲಿ ಪರಿಚಯಿಸಲು ಪ್ರಯತ್ನಿಸಿರುವೆ. ಇವುಗಳಲ್ಲಿ ವಡನೆಡುತತ್ತಣಾರ್ (ಪ.ಸಂ.೩), ವಡಮವಣ್ಣಕ್ಕಣ್ (ಪ.ಸಂ.೪-೭), ವಡಮವಣ್ಣಕ್ಕಣ್ ಪೇರಿಶಾತ್ತಣಾರ್ (ಪ.ಸಂ.೮-೯), ವಡುಮಂತಾಮೋತರಣ್ (ಪ.ಸಂ.೧೦) ಮತ್ತು ವಡಮೋತಂಕಿಟಾರ್ (ಪ.ಸಂ.೧೧-೧೨) ಎಂಬ ಐವರು ಕವಿಗಳು ಸೇರಿರುವರು. 'ವಡಮ' ಎಂಬ ಒಂದು ವರ್ಗ ಅಥವಾ ಕುಲವಿತ್ತೆಂಬ ವಾದವಿದ್ದು ಅದನ್ನು ತಳ್ಳಿಹಾಕುವಂತಿಲ್ಲ, ಆದರೆ ಈ ವರ್ಗದ ಮೂಲ ಉತ್ತರದಲ್ಲಿದ್ದ ಸಾಧ್ಯತೆಯನ್ನು ಅಲ್ಲಗಳೆಯುವಂತೆಯೂ ಇಲ್ಲ. ಈ ಕವಿಗಳ ಮೂಲ ನೆಲೆ 'ತಮಿಳಗಂ' ಉತ್ತರಕ್ಕಿತ್ತೆಂದು ಊಹಿಸಬಹುದಾದರೂ ಇಲ್ಲಿ ಸೂಚಿಸಿರುವ ಯಾವ ವಲಯಕ್ಕೆ ಅವರು ಸೇರಿದ್ದರೆಂಬುದನ್ನು ನಿರ್ಧರಿಸಿ ಹೇಳಲು ಸಾಧ್ಯವಾಗುತ್ತಿಲ್ಲ.

ಈ ಕವಿಗಳ ಕಾವ್ಯವಸ್ತು ಬಡಗ ದೇಶವನ್ನಾಗಲೀ ಬಡಗ ನಾಯಕನನ್ನಾಗಲೀ ಒಳಗೊಂಡಿತ್ತೆಂದೇನೂ ಇಲ್ಲ. ಇವರಲ್ಲಿ ಬಹುತೇಕರು ಅಲೆಮಾರಿ ಹಾಡುಕವಿಗಳಾಗಿದ್ದುದರಿಂದ, ಪೋಷಕರನ್ನು ಅರಸಿ ಹೋಗುವುದು ಮತ್ತು ತಮಗೆ ಆಶ್ರಯ ಕೊಟ್ಟವರನ್ನು ಹಾಡಿ ಹೊಗಳುವುದು ಅವರಿಗೆ ಸಹಜವೆನಿಸಿತ್ತು. ಅವರು ಒಬ್ಬ ಪೋಷಕನ ಆಶ್ರಯದಲ್ಲಿಯೇ ಜೀವಿತಾವಧಿಯನ್ನು ಕಳೆದರೆಂಬುದಕ್ಕೆ ಆಧಾರ ದೊರೆಯುವುದಿಲ್ಲ. 'ನೆಲಮುಖಿಯಾದ ಬಟ್ಟಲನ್ನು ಬಲಮುಖಿಯಾಗಿಸಬಲ್ಲವರನ್ನು' ಅರಸಿ ಬಂದ ವಡನೆಡುತೆತ್ತಣಾರ್ (ಪ.ಸಂ.೩), ಒಡಲೊಳಗೆ ಯಾಚನೆಯ ದಟ್ಟ ಇರಾದೆಯನ್ನು ಇಟ್ಟುಕೊಂಡು, ಕನಸಿನಲು ಕುಶಲದಿ ಅವನ ಪೋಷಕನನ್ನು ನೆನೆವ, ಪರದೇಶದ ಪಕ್ಷಿಯಂತೆ ಹನಿ ನೀರಿಗಾಗಿ ಹಂಬಲಿಸುವ, ಮತ್ತು ಅವನ ನೆರಳಿನಾಶ್ರಯ ಬೇಡುವ, ವಡಮವಣ್ಣಕ್ಕಣ್ (ಪ.ಸಂ.೪), ಪೋಷಕನ ಕೃಪೆ ಒದಗಿದೊಡನೆ 'ಸದಾ ಸಂಭ್ರಮಿಸಲಿ, ನಿನ್ನ ಕೊರಳಮಾಲೆ' ಎಂದು ವಿದಾಯ ಹೇಳಿ, ಅಲ್ಲಿಂದ ಮುಂದೆ ಸಾಗಿದ ಚಿತ್ರ ಇಲ್ಲಿದೆ. ಅಲ್ಲಿಂದ ಮಲ್ಲೈಯಣನೆಂಬ ನಾಯಕನ ಬಳಿ ಸಾಗಿದ ಈ ಕವಿ ಸ್ಪಷ್ಟವಾಗಿ ತಾನು ಬಂದುದು ತುಪ್ಪದಲ್ಲಿ ಬೇಯಿಸಿದ ರುಚಿಕಟ್ಟಾದ, ಹೆಂಗಳೆಯರು ಹಿಂಜಿದ ಅರಳೆಯ ಉಂಡಿಗಳಷ್ಟು ಮೃದುವಾದ ಮಾಂಸದ ತುಂಡುಗಳನ್ನು ತಿನ್ನುವುದು ಮತ್ತು ತುಂಬಿದ ಹಂಡೆಗಳಲ್ಲಿಯ ಹೆಂಡವನ್ನು ಮನಸಾರೆ ಹೊಟ್ಟೆಗಿಳಿಸುವುದು, ಎಂದು ತಿಳಿಸುವನು (ಪ.ಸಂ.೫). ವಡಮೋತಂಕಿಟಾರ್‌ನ

ಕವನದಲ್ಲಿ 'ಹಸಿದ ಒಡಲಿನ' ಆದರೆ 'ಬಿಗುಮಾನದ ಕಬ್ಬಿಗ'ನ (ಪ.ಸಂ.೧೧) ಚಿತ್ರವಿದೆ. ವಡುಗ ಕವಿಗಳು ಅಲೆಮಾರಿ ಹಾಡುಗಾರರು - ತಮಿಳಿನಲ್ಲಿ ಪಾಣರ್ - ಆಗಿದ್ದರಲ್ಲದೆ ಆಸ್ಥಾನ ಕವಿಗಳಾಗಿರಲಿಲ್ಲ; ಅವರು ಶಂಗಂ ಕವಿ ಸಮುದಾಯಕ್ಕೆ (ಅಂಥಹ ಒಂದು ನಿಶ್ಚಿತ ಸಮುದಾಯವಿತ್ತೆಂಬ ಬಗ್ಗೆ ಒಂದು ದೊಡ್ಡ ಪ್ರಶ್ನೆ ಇದೆ!) ಸೇರಿದವರು ಅಥವಾ ಮೂವೇಂದರಿಂದ ಪೋಷಣೆ ಪಡೆದವರು ಆಗಿರಲಿಲ್ಲ.

ಈ ವಡುಗ ಕವಿಗಳು ಏಕೆ ತಮ್ಮ ತಮ್ಮ ಭಾಷೆಗಳಲ್ಲಿ ಕಾವ್ಯ ರಚಿಸದೇ ತಮಿಳಿನಲ್ಲಿ ಹಾಡುಗಬ್ಬಗಳನ್ನು ರಚಿಸಿದರು ಎಂಬುದಕ್ಕೆ ಅವರು ಅರಸಿ ಹೋಗುತ್ತಿದ್ದ ಪೋಷಕ ವರ್ಗವನ್ನು ಗಮನದಲ್ಲಿರಿಸಿ ನೋಡಿದರೆ, ತಕ್ಕ ಉತ್ತರ ದೊರೆಯುವುದು. ಕರ್ನಾಟಕ ಇತಿಹಾಸ ಯುಗದ ಆರಂಭದ ಶತಕಗಳಲ್ಲಿ ಕರ್ನಾಟಕದಿಂದ ಆಳಿದ ಹಲವಾರು ರಾಜಮನೆತನಗಳ - ಪ್ರಮುಖವಾಗಿ ಕದಂಬ ಮತ್ತು ಗಂಗ, ಗಣನೀಯ ಪ್ರಮಾಣದಲ್ಲಿ ಬದಾಮಿ ಚಾಳುಕ್ಯ ಮತ್ತು ರಾಷ್ಟ್ರಕೂಟ - ಶಾಸನ ಕವಿಗಳು ಪ್ರೌಢಾವಸ್ಥೆಯನ್ನು ತಲುಪುತ್ತಿದ್ದ ಕನ್ನಡಕ್ಕಿಂತ ಸಂಸ್ಕೃತಕ್ಕೆ ಮನ್ನಣೆಕೊಟ್ಟು ಬರೆದ ದಾಖಲೆಗಳಿಗಿಂತಲೂ ಶಂಗಂಕಾಲದ ವಡುಗ ಕವಿಗಳು ತಾವು ಅರಸಿಹೋಗುತ್ತಿದ್ದ ಪೋಷಕರ ಭಾಷೆಯಲ್ಲಿ ಹಾಡುಗಳನ್ನು ರಚಿಸಿದ್ದು ಹೆಚ್ಚು ಸ್ವಾಭಾವಿಕವೆನಿಸುವುದು. ಅಲ್ಲದೆ ಕಾವ್ಯ ಕಲೆ - ಅದರಲ್ಲೂ ಮೌಖಿಕ ಕಾವ್ಯಕಲೆ - ಶಂಗಂ ಕಾಲದಲ್ಲಿ ಒಂದು ಪ್ರೌಢ ಹಂತವನ್ನು ತಲುಪಿ, ಇದು ತಮಿಳಗಂ ಸಂಪರ್ಕದಲ್ಲಿರುವವರೆಲ್ಲರಿಗೂ ಮಾದರಿ ಒದಗಿಸಿಕೊಡುವಂತಹ ಮಟ್ಟಮುಟ್ಟಿತ್ತು. ಈ ಪ್ರಭಾವದಿಂದ ಬಿಡುಗಡೆ ಹೊಂದುವುದು ಉತ್ತರದ ಕವಿಗಳಿಗೂ ಸಾಧ್ಯವಿರಲಿಲ್ಲ; ಅದೊಂದು ವೇಳೆ ಸಾಧ್ಯವಾಗಿದ್ದರೂ ಪೋಷಕರನ್ನರಸುತ್ತಿದ್ದ ಕವಿಗಳ ದೃಷ್ಟಿಯಲ್ಲಿ ಅದು ಸಾರ್ಥಕತೆಯನ್ನು ಪಡೆದುಕೊಳ್ಳುತ್ತಿರಲಿಲ್ಲ.

ಇದು ಏನೇ ಇರಲಿ. ಈ ಬಗೆಯಲ್ಲಿ ಕಾವ್ಯ ರಚನೆಯಲ್ಲಿ ಪ್ರೌಢಿಮೆ ಹೊಂದಿದ ಕವಿಗಳು ತಮ್ಮ ತಮ್ಮ ನೆಲದ ನುಡಿಗಳಲ್ಲಿ - ಮುಖ್ಯವಾಗಿ ಕನ್ನಡ, ತುಳು, ಕೊಂಕಣ - ಹಾಡುಗಳನ್ನು ರಚಿಸಿರಲು ಸಾಧ್ಯವೇ ಎಂಬ ಪ್ರಶ್ನೆ ಬರುವುದು. ಕ್ರಿ.ಶ. ೫ನೆಯ ಶತಮಾನದ ನಂತರದ ದಾಖಲಿತ ಕನ್ನಡ ಶಾಸನ ಸಾಹಿತ್ಯವನ್ನೂ, ಮಾರ್ಗಕಾರನು ಸೂಚಿಸಿರುವ ಅವನ ಕಾಲಕ್ಕಿಂತ ಮುಂಚಿನ ಕವಿಪರಂಪರೆಯನ್ನೂ, ಹಾಡುಗಬ್ಬ ವರ್ಗಕ್ಕೆ ಸೇರಿದ ಚತ್ತಾಣ ಮತ್ತು ಬೆದಂಡೆ ಪ್ರಭೇದಗಳ ಹಿರಿಮೆಯನ್ನೂ ಗಮನದಲ್ಲಿಟ್ಟುಕೊಂಡು ನೋಡಿದರೆ, 'ಯಾಕಿರಬಾರದು?' ಎಂಬ ಉತ್ತರ ಬರುವುದು. ತಮಿಳು ಶಂಗಂ ಕಾಲದ ಬಹುಪಾಲು ಸಾಹಿತ್ಯ ಉಳಿದು ಬಂದಿರುವುದರಿಂದ ಮತ್ತು ಆ ಕಾಲದ ಕನ್ನಡನಾಡಿನ ಹಾಡುಗಬ್ಬಗಳು ಉಳಿದುಕೊಂಡು ಬಾರದಿರುವುದರಿಂದ ಇಂತಹ ಸಮಸ್ಯೆಗಳು ಏಳುವುವು.

## ಎರುಮೈನಾಡಿನ (ಮೈಸೂರು ಪ್ರದೇಶದ) ಕವಿಗಳು:

ವಡುಗರಿಗಿಂತಲೂ ನೇರವಾಗಿ ಕನ್ನಡನಾಡಿಗೆ ಪ್ರಸ್ತುತಗೊಳಿಸಿಕೊಂಡ ಕವಿಗಳು ಎರುಮೈ ಪೂರ್ವ ಪ್ರತ್ಯಯ ಹೆಸರಿನವರು. ಒಂದೇ ಮನೆತನದ ತಂದೆ ಮತ್ತು ಮಗ ರಚಿಸಿದ ಕವನಗಳು ದೊರಕಿವೆ. ತಂದೆಯ ಹೆಸರು, ಎರುಮೈ ವೆಟಿಯಣಾರ್; ಮಗನ ಹೆಸರು ಎರುಮೈ ವೆಳಿಯಣಾರ್ ಮಗನಾರ್ ಕಟಲಣಾರ್. ಇವರ ಮೂಲಸ್ಥಾನ ಇಂದಿನ ಮೈಸೂರು ಪ್ರದೇಶವಾಗಿತ್ತೆನ್ನುವುದರಲ್ಲಿ ಯಾರಿಗೂ ಅನುಮಾನವಿಲ್ಲ. ಹಿರಿಯನು ರಚಿಸಿದ ಮೂರು ಕವನಗಳು,[೨] ಕಿರಿಯನು ರಚಿಸಿದ ಒಂದು ಕವನ[೩] ಲಭ್ಯವಿವೆ. ಇವೆರಡೂ ವೀರ ಮರಣವನ್ನು ಕುರಿತ ಕವನಗಳಾಗಿವೆ. ಇವಲ್ಲದೆ ಇನ್ನೊಂದು ಕವನದಲ್ಲಿ ಪ್ರಸಿದ್ಧ ವಟುಕಪ್ರಧಾನ ಎರುಮೈ ಎಂಬವನು ತುರುಗಳನ್ನು ಸೆರೆಹಿಡಿದು ಅಯಿರೀ ನದಿ ಸಮೀಪದ ತನ್ನ ಗ್ರಾಮದ ದೊಡ್ಡಿಯಲ್ಲಿ ಬಂಧಿಸಿಟ್ಟ ಸುಂದರ ವರ್ಣನೆ ಇದೆ.[೪] ಅವುಗಳಲ್ಲಿ ಪುಱನಾನೂಱುವಿನ ಎರಡು (ಪ.ಸಂ.೧೩-೧೪) ಕವನಗಳನ್ನು ಪರಿಚಯಿಸಿರುವೆ.

ಎರುಮೈಊರ ಅಧಿಪತಿಗಳ ಬಗ್ಗೆ ಈಗಾಗಲೇ ಚರ್ಚಿಸಿದ್ದು ಅದರ ಹಿನ್ನೆಲೆಯಲ್ಲಿ ಈ ಕವನಗಳನ್ನು ಗಮನಿಸುವುದು ಉಚಿತ.

### ಕೊಂಕಾಣ ಕವಿಗಳು:

ಕೊಂಕಾಣ, ಕೊಂಗಾಣ ಮತ್ತು ಕೊಂಗುನಾಡನ್ನು ಕುರಿತು ರಚಿಸಲಾದ ಕವಿಗಳಲ್ಲಿ ಯಾರೂ ಕೊಂಕಾಣ ಪೂರ್ವ ಪ್ರತ್ಯಯವನ್ನು ಇಟ್ಟುಕೊಂಡಂತೆ ಕಾಣುವುದಿಲ್ಲ. ಆದರೆ ಕೆಲವರು ನೇರವಾಗಿ ಕೊಂಕಾಣವನ್ನು ವರ್ಣಿಸಿರುವರು. ಮೋಶಿಕೀರಣಾರು (ಪ.ಸಂ.೧೬) ಕೊಂಕಾಣಗಿರಿಯ (ಹಸಿವನ್ನು ಹಿಂಗಿಸುವ) ಅಪಾರ ಸಂಪತ್ತನ್ನು ಅಲ್ಲದೆ ಅದಮ್ಯ ಕಾಡುಮೇಡುಗಳನ್ನು, ಅಲ್ಲಿ ಅರಳುತ್ತಿದ್ದ ಸುವರ್ಣ ಬಣ್ಣದ ನೆರುಂಜಿ ಪುಷ್ಪಗಳನ್ನು (ಪ.ಸಂ.೧೭), ಶುಭ್ರ ಶ್ವೇತಾಂಬರ ಚೆಲ್ಲಿದಂತೆ ಒಟ್ಟಾಗಿ ದಟ್ಟಾಗಿ ಧುಮುಕುವ ಜಲಪಾತಗಳನ್ನು (ಪ.ಸಂ.೧೮) ವರ್ಣಿಸಿರುವನು. ಕೊಂಕರ 'ಹೊಳಪಿನ ಖಡ್ಗ'ವನ್ನು ಕವಿ ಪರಣರ್ (ಪ.ಸಂ.೧೯) ಪರಿಚಯಿಸಿರುವನು. ಈ ಎಲ್ಲ ಕವನಗಳನ್ನು 'ಕೊಡಗು, ಕೊಂಕಣ ಮತ್ತು ತುಳುನಾಡವ'ರ ಬಗ್ಗೆ ಈಗಾಗಲೇ ಒದಗಿಸಲಾಗಿರುವ ವಿವರಗಳ ಹಿನ್ನೆಲೆಯಲ್ಲಿ ಗಮನಿಸುವುದು ಉಚಿತ.

ಕೊಂಕಣದ ಅಧಿಪತಿಯಾದ ನನ್ನನ್‌ಗೆ ಶಂಗಂ ಸಾಹಿತ್ಯದಲ್ಲಿ ಒಂದು ವಿಶಿಷ್ಟ ಸ್ಥಾನವಿದೆ. ಸುಂಟರಗಾಳಿಯಂತೆ ಬೀಸುತ್ತಾ ಒಂದೆಡೆ ಕನ್ನಡನಾಡಿನ ರಾಜಶಕ್ತಿಗಳಾದ ಪುನ್ನಾಟ ಮತ್ತು ಕೋಶರ ವಿರುದ್ಧವೂ ಇನ್ನೊಂದೆಡೆ ತಮಿಳಗಂ ಶಕ್ತಿಗಳಾದ ಚೋಳ ಮತ್ತು ಚೇರರ ವಿರುದ್ಧವೂ ಸೇನಾಚರಣೆ ನಡೆಸಿ, ತನ್ನ ಹಿರಿಮೆಯನ್ನು ಮೆರೆದ ಕೊಂಕಣಿಗನಿವನು. ಪಟಿಲ್ ಬೆಟ್ಟಸಾಲಿನಲ್ಲಿ ಒಂದಾದ ಪಾಳಿಯ ಮೇಲೆ ಇವನು ಭದ್ರಕೋಟೆಯೊಂದನ್ನು

ಕಟ್ಟಿದ್ದನು; ಅಲ್ಲಿಂದ ಪಾರಮ್, ಪಿರಂಬುವಿಗೆ ತನ್ನ ಅಧಿಕಾರ ವಿಸ್ತರಿಸಿಕೊಂಡಿದ್ದನು. ಹೋರಾಟದಲ್ಲಿ ಕಾಡುಕೋಣ; ಕೊಡುಗೆಯಲ್ಲಿ ಕರ್ಣ. ಕವಿ ಪರಣರ್ ಈ ದಯಾಳು ಕವಿಗಳಿಗೆ ಗಂಡು ಆನೆಗಳನ್ನು ದಾನ ಮಾಡಿದ್ದನ್ನು ಕಂಡರೆ, ಕವಿ ಮಾಮೂಲನಾರ್, ದಲಿತರಿಗೆ ಮತ್ತು ಕವಿಗಳಿಗೆ ಅವನು ಮುಕ್ತ ಹಸ್ತದಿಂದ ಇತ್ತ ಅಪಾರ ದಾನವನ್ನು ಕಂಡಿದ್ದನು.[೧೮] ಆದರೆ ಪುಱನಾನೂಱುವಿನ ಕವಿಗಳು ಇವನ ಶೂರತನವನ್ನು ಇಷ್ಟೊಂದು ಆವೇಶದಿಂದ ಗುರುತಿಸಿಲ್ಲ - ಇದಕ್ಕೆ ಕಾರಣ ತಿಳಿಯದು.

ನಣ್ಣನ್ ಎಷ್ಟು ಶೂರನೋ ಎಷ್ಟು ಧಾರಾಳಿಯೋ ಅಷ್ಟೇ ಕೋಪಿಷ್ಠನೂ ಆಗಿದ್ದನು. ಅವನ ವಂಶವೃಕ್ಷವಾದ ಮಾವಿನ ಮರದಿಂದ ಕಳಚಿಬಿದ್ದ ಒಂದು ಕಾಯನ್ನು ಅಮಾಯಕ ಬಾಲೆಯೊಬ್ಬಳು ತಿಂದಾಗ, ಕೋಪಗೊಂಡ ನಣ್ಣನ್ ಅವಳ ಶಿರಚ್ಛೇದನಕ್ಕೆ ಆಜ್ಞೆ ಮಾಡುವನು. ಇದೊಂದು ಆಕಸ್ಮಿಕವಾದ ತಪ್ಪು ಅದಕ್ಕೆ ಪರಿಹಾರವಾಗಿ ಐವತ್ತೊಂದು ಉತ್ತಮ ಆನೆಗಳನ್ನೂ ಮತ್ತು ಅವಳ ತೂಕದ ಸುವರ್ಣ ಮೂರ್ತಿಯನ್ನು ಕೊಡುವುದಾಗಿ ಅವಳ ತಂದೆ ಕೇಳಿಕೊಂಡರೂ ನಣ್ಣನ್ ಒಪ್ಪದೆ ತನ್ನ ಆಜ್ಞೆಯನ್ನು ಕಾರ್ಯಗತಗೊಳಿಸಿದ್ದು ಶಂಗಂ ಕಾಲದ ಮನೆಮಾತು. ಇದನ್ನು ಕವಿ ಪರಣರ್ (ಪ.ಸಂ.೨೨) ಒಂದು ಕವನದಲ್ಲಿ ವಿವರಿಸುವನು. ನಣ್ಣನ್‌ನ ಏಟಿಲ್ ಬೆಟ್ಟವು ಬಂಗಾರದ ಕಣಜವಾಗಿತ್ತೆಂಬುದನ್ನು ಕವಿ ಪಾಲೈಪಾಡಿಯ ಪೆರುಂಕುಡುಂಗೋ (ಪ.ಸಂ.೨೧) ತಿಳಿಸಿರುವನು.

**ಕೋಶರರನ್ನು ಉಲ್ಲೇಖಿಸುವ ಕವಿಗಳು:**

ಕೊಂಕಣದ ಮೂಲ ಒಡೆಯರು ಕೋಶರರು. ಇವರನ್ನು ಹೊರಗಟ್ಟಿ ನಣ್ಣನ್ ಈ ಪ್ರದೇಶವನ್ನು ತನ್ನದಾಗಿ ಮಾಡಿಕೊಂಡುದರಿಂದ ತುಳು-ಕೊಂಕಣ ದೇಶದವರೇ ಆದ ನಣ್ಣನ್‌ಗೂ ಕೋಶರರಿಗೂ ವೈರತ್ವ ಬೆಳೆಯಿತು.

ಕೋಶರರಿಗೆ ಶಂಗಂ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನವಿದೆ, ಏಕೆಂದರೆ ಅವರು ಕೊಟ್ಟ ಮಾತಿಗೆ ತಪ್ಪದ, ಸತ್ಯವನ್ನು ಸದಾ ಪರಿಪಾಲಿಸುವ ವೀರರಾಗಿದ್ದರು. ಮೌರ್ಯರೊಡನೆ ನಿಕಟ ಸಂಪರ್ಕವಿಟ್ಟುಕೊಂಡಿದ್ದ ಈ ಸತ್ಯಸಂಧರೇ ಸತಿಯಪುತ್ರರಾಗಿರಲು ಸಾಧ್ಯವೆಂಬ ವಾದವೂ ಇದೆ. ತುಳುನಾಡಿನ ಇವರು, ವಂಬ ವಡುಗರ್ ಎಂದೂ ಗುರುತಿಸಲ್ಪಟ್ಟಿದ್ದರು.[೧೯] ನಣ್ಣನ್‌ನಂತೆ ಇವರೂ ಛಲಗಾರರಾಗಿದ್ದರೆಂಬುದಕ್ಕೆ ಅವರು ಅಣ್ಣಿಮಿನ್ನಿಲಿಯ ತಂದೆಯ ಹಸು ಬೆಳೆದ ಫಸಲಿಗೆ ಬಾಯಿ ಹಾಕಿದುದಕ್ಕಾಗಿ ಅವನ ಕಣ್ಣು ಕಿತ್ತದ್ದು ನಣ್ಣನ್ ತಲೆಕೊಂಡ ಬಾಲಕಿಯ ಘಟನೆಯಷ್ಟೇ ಶಂಗಂ ಸಾಹಿತ್ಯದಲ್ಲಿ ಪ್ರಸಿದ್ಧವಾದದ್ದು.[೨೦] ಅವರು ಕೊಟ್ಟ ಮಾತನ್ನು ಉಳಿಸಿಕೊಳ್ಳುತ್ತಿದ್ದರೆಂಬುದಕ್ಕೆ ನಣ್ಣನ್‌ನಿಂದ ಅಹ್‌ದೈ ಎಂಬ ನಾಯಕನನ್ನು ಅವರು ರಕ್ಷಿಸಲು ಕೈಕೊಂಡ ಕ್ರಮ ಸಾಕ್ಷಿ.[೨೧]

ಕೋಶರರ ಎರಡು ಮನೆತನಗಳನ್ನು ಗುರುತಿಸಲಾಗಿದೆ–ಅದರಲ್ಲಿ ಒಂದು ಮುದು ಕೋಶರ್, ಮತ್ತೊಂದು ಇಳಂಕೋಶರ್.[೧೪] ಇಳಂಕೋಶರ್‌ರನ್ನು ಕೊಂಗುದೇಶದ ಒಡೆಯರೆಂದು *ಶಿಲಪ್ಪದಿಗಾರ*ದಲ್ಲಿ ಗುರುತಿಸಲಾಗಿದೆ.[೧೫] ಇದರಿಂದಾಗಿ ಮುದುಕೋಶರ್ ತುಳುದೇಶದ ಒಡೆಯರಾಗಿದ್ದರೆಂದು ವಾದಿಸಲಾಗಿದೆ. ಮುದುಕೋಶರ್‌ರು ಅಣ್ಣಿಯ ತಂದೆಯ ಕಣ್ಣು ಕಿತ್ತವರಾಗಿದ್ದರು.[೧೬] ಕೋಶರರು ಅದ್ಭುತ ರಥಗಳ ಒಡೆಯರಾಗಿದ್ದರು. ಶ್ರೀಮಂತಿಕೆಯಲ್ಲಿ ಮೆರೆಯುತ್ತಿದ್ದರು.

ಕೋಶರರನ್ನು ಉಲ್ಲೇಖಿಸುವ ನಾಲ್ಕು ಕವನಗಳನ್ನು ಇಲ್ಲಿ ನಿದರ್ಶಿಸಿರುವೆನು. ಕಲ್ಲಿಣಾರ್ 'ಜಯಕಾಗಿ ಸಂದಣಿಸಿದ ಕೋಶರರನ್ನು (ಪ.ಸಂ.೨೩), ಪರಣರ್ ನಣ್ಣಣ್‌ನ ಮಾಮರವೃಕ್ಷವನ್ನು ತುಂಡರಿಸಲು ಅವರು ಮಾಡಿದ ಮಸಲತ್ತನ್ನು (ಪ.ಸಂ.೨೪) ಕವಯಿತ್ರಿ ಅವ್ವೈಯಾರಳು ನಾಲ್ಕು ನೆಲೆಗಳ (ಪ್ರದೇಶಗಳ) ಕೋಶರರನ್ನೂ ಮತ್ತು ಅವರ ಸತ್ಯ ಪರಿಪಾಲನೆಯನ್ನೂ (ನಲ್ನುಡಿಗಳನ್ನು) (ಪ.ಸಂ.೨೫) ಕಾವಿರ ಪೂಪಟ್ಟಣತ್ತುಕ್ ಶೂಲ ಯುದ್ಧದಲ್ಲಿ ತರಬೇತಿ ಪಡೆಯುತ್ತಿದ್ದ ಕೋಶರ ಯುವಕರನ್ನ (ಪ.ಸಂ.೨೬) ಪರಿಚಯಿಸಿರುವರು.

ಆಕರ ಟಿಪ್ಪಣಿ :

೧. *ಅಗನಾ.*, ೨೬೫.
೨. *ಅದೇ.*, ೨೮೧ ಮತ್ತು ೨೫೭.
೩. *ಅದೇ.*, ೩೬, ೬೧, ೭೬, ೨೦೯, ೩೧೧, ೩೫೯ ಮತ್ತು ೩೯೩.
೪. *ಪುಅನಾ.*, ೧೭೬, ೩೭೬, ೩೭೯, ೩೫೧ ಮತ್ತು ೩೮೯.
೫. ಶೇಷಾದ್ರಿ. ಕೆ.ಜಿ, *ಎ ಕನ್‌ಸೈಜ್ ಕಂಪೆಂಡಿಯಮ್ ಆಫ್ ಶಂಗಂ ಲಿಟರೇಚರ್*, ಸಂ.೨, ಪು.೨೮೧.
೬. ರಾಮಮೂರ್ತಿ, ವಿ., *ಹಿಸ್ಟರಿ ಆಫ್ ಕೊಂಗಾಸ್*, (ಮದ್ರಾಸು, ೧೯೮೧), ಪು.೧೪೩, ಅ.ಟಿ. ೩೬.
೭. *ಅಗನಾ.*, ೨೩; *ಪುಅನಾ.* ೨೭೩, ೩೦೩.
೮. *ಅಗನಾ.*, ೨೭.
೯. *ಅದೇ.*, ೨೫೩.
೧೦. *ಅದೇ.*, ೧೫೨ ಮತ್ತು ೩೪೯.
೧೧. *ಅದೇ.*, ೧೫; *ಪುಅನಾ.* ೩೭೦, ೩೭೮.
೧೨. *ಅಗನಾ.*, ೨೬೨.
೧೩. *ಅದೇ.*, ೧೧೩
೧೪. *ಅದೇ.*, ೨೬೨ ಮತ್ತು ೨೧೬.
೧೫. *ಶಿಲಪ್ಪದಿಗಾರಂ* – ಉರೈಪೆರುಕಟ್ಟುರೈ. ಅಲ್ಲದೆ ನೋ. ರಾಮಚಂದ್ರನ್, ಸಿ.ಇ., *ಅಗನಾನೂರು ಇನ್ ಇಟ್ಸ್ ಹಿಸ್ಟಾರಿಕಲ್ ಸೆಟ್ಟಿಂಗ್*, (ಮದ್ರಾಸು ೧೯೭೪) ಪು. ೫೨.
೧೬. *ಅಗನಾ.*, ೧೯೬ ಮತ್ತು ೨೬೨.

# ಉತ್ತರ(ವೇಂಗಡ)ದ ಕವಿಗಳು

## ೧

(ಕವಿ: ಪುಱತ್ತಿಣೈನನ್ನಕ್ಕಣಾರ್ - *ಪುಱನಾ.* ೩೭೬ ಹಿನ್ನೆಲೆ: ಒೃಮಾಣ್‌ನಲ್ಲಿಯಕ್ಕೋಟಣ್ ಕುರಿತು ರಚಿಸಿದ್ದು. ಈತನು ಮಾವಿಲಂಗೈ ಅಧಿಪತಿಯಾಗಿದ್ದನೆಂದು (*ಪುಱನಾ.* ೧೭೬ ರಿಂದ) ತಿಳಿದುಬರುವುದು.)

ಆಕಾಶ ಸಾಗರ ದಾಟ
ಮುಸ್ಸಂಜೆ ಮಬ್ಬು ಬೆಳಕಲ್ಲಿ
ಬಂಗಾರದೆಳೆಗಳ ಒಳಪಡೆದ
ರಂಗುರಂಗಿನ ರವಿ ಕೆಳಬಾಗಿದ್ದ.

ಹದಗೊಳಿಸಿ ಬಿಗಿದ
ತೊಗಲ ಚಾಟಿಯ
'ತಟಾರಿ' ನುಡಿಸುತ್ತ
ಸಿರಿಸುಂದನರಮನೆಯ ಬಳಿ ಬಂದು
ಹಾಡುಕವಿಗಳು ಹೊರಕೊಳ್ಳುವ
ಅನ್ನಪರಾತದ ಮುಂದೆ ನಿಂತೆ.

ಕಣ್ಣುಮಿಟಕಿಸುವ ಕ್ಷಣದಲ್ಲಿ
ಪೂರ್ವ ದಿಗಂತದ ಚಂದ್ರ ಮೇಲೇರಿ
ಕರಗಿಸಿದ್ದ ಕತ್ತಲೆಯ ಮೊತ್ತವನ್ನೆಲ್ಲ.

ಆಗ ನೋಡಿದವರಾರೂ
ನನ್ನ ಗುರುತಿಸದಾಗಿದ್ದರು.
ಸೊಂಟಬಳಸಿದ ತುಂಡೊಂದು
ಹಳೆಯ ತೂತನ್ನು
ಕೊಳೆತ ಎಳೆಯನ್ನು
ಬಯಲುಗೊಳಿಸುತಲಿತ್ತು.

ಇದನೆಲ್ಲ ಅವಲೋಕಿಸಿದ
ಆ ಅತಿಶಯನು ಮನದಂದು
'ಅಪೂರ್ವ ಅತಿಥಿಗೆ ಅಗತ್ಯ
ಅನುಕಂಪದ ಆದರಾತಿಥ್ಯ'ವೆಂದ.

ಕರದ ತಾಳಗಳ ಕಳಚಿ
ಹುರಿದ ಮಾಂಸವನಿಟ್ಟು
ಸರ್ಪತೇಜದ ಕಳ್ಳನೂ ಕೊಟ್ಟು
ಆಗ, ಅಲ್ಲಿ, ಆ ರಾತ್ರಿ
ನರಕ ಸದೃಶ ದಾರಿದ್ರ್ಯವನ್ನು
ನನ್ನಿಂದ ದೂರ ಮಾಡಿದನವನು.

ಕಡುಕಷ್ಟ ಸಾಗರದಿಂದಾಚೆ ದಡ
ಮುಟ್ಟಿಸುವ ನಾವೆಯಯ್ಯಾ, ಅವನು!

ಪರರ ಅಂತರಂಗವನರಿವ
ಚತುರ ಸೂಕ್ಷ್ಮತೆ ಇರುವ
ಎನಗಿನ್ನು ಬೇಡುವ
ಗೊಡವೆ ಇರದು;
ತುಂಬು ತಟಾಕದಿಂದಿಳಿದು
ಹರಿವ ಜಲಧಾರೆಯಂತೆ
ಬಾಳುವೆನು ಇನ್ನು ಸುಖಸಂಭ್ರಮದಲಿ.
ಎಡೆಬಿಡದೆ ಕೊಡುವ
ದಾನಶೂರರ ಬಾಗಿಲೆಡೆ
ನಿಲ್ಲಬೇಕಿಲ್ಲ ಇಂದಿನಿಂದ.
ಕೊಂಡಾಡಿ–ಹಾಡಿ
ಕೈ 'ಕಿಣೈ'ಯ ನುಡಿಸಬೇಕಿಲ್ಲ ಇನ್ನುಮುಂದೆ.

೨

(ಕವಿ : ಕಳ್ಳಿಲ್ ಅತ್ತಿರೈಯಣಾರ್ - ಪುಱನಾ. ೩೮೯. ಹಿನ್ನಲೆ: ನಲ್ಲೇರ್ ಮುಣಿಯಣ್ ಕುರಿತು ಬರೆದದ್ದು. ಈತನೊಬ್ಬ ಕಿರುಕುಳ ನಾಯಕನೂ ಯುದ್ಧವೀರನೂ ಆಗಿದ್ದನೆಂದು ತಿಳಿದುಬರುವುದು).

ತಾಳೆಯ ತಂಪು ಬೀಜ ಬಾಡಿ
ಕಾಡುಬೇವಿನ ದೋರೆಗಾಯಿ ಸೀದು
ಕೆರೆಯ ನೀರು ಕೆಸರಾಗಿ
ಬೆಳ್ಳಿಚಿಕ್ಕಿ ತೆಂಕಲಿಗಿಳಿಯುವ
ಅನಿಷ್ಟ ಗಳಿಗೆಯ
ಬಿರುಬೇಸಿಗೆಯ ದಿನದಂದು
ಹೇಳಿದನು ಅವನು ಇಂತೆಂದು:
'ಹರೆಯದ ವಾದ್ಯಗಾರರೇ,
ನಮ್ಮನ್ನೂ ಮರೆಯದಿರಿ'.

ತುಂಬಾ ಉದಾರಿಯಾಗಿದ್ದ
ಆ ಕೀರ್ತಿಪುರುಷ ಇಂದಿಲ್ಲ,
ಕಾಣಲೂ ಕೇಳಲೂ
ಅವನನೀಗ ಸಾಧ್ಯವಿಲ್ಲ.

ಬೆಟ್ಟವೆಲ್ಲವ ಬಳಸಿ ಈ ಪುರದ
ಮಾಟಮನೆಯಂಗಳಗಳಲಿ
ಸೆರೆಹಿಡಿದು ಕಟ್ಟಿರುವರು
ಮರಿಯಾನೆಗಳನು.
ಅಮಾಯಕ ತಾಯಿ
ಹಸುಳೆಗಳ ನೆನೆನೆನೆದು
ಗೋಗರಿಯುತಲೇ ಇರುವಳು

ಭೋರ್ಗರೆವ ಜಲಪಾತಗಳ
ಆ ವೇಂಕಟದ ಅಧಿಪತಿಯೆ
ಆಟಣುಂಕಣನೆಂಬವನು.

ನಿನ್ನನ್ನು ನೀ ನಿಗ್ರಹಿಸಿಕೊಳ್ಳುವ
ಸೆಳೆದೊಯ್ವ ಬಯಕೆಗಳನೆಲ್ಲ ಗೆಲ್ಲುವ
ನಲ್ಲೇರ್‌ಮಣಿಯಣನೆ, ನೀನು
ಇತ್ತು ಸುಪ್ಪಾಣಿ ರತುನಗಳನು
ಪರಿಹರಿಸು ಆಟಣುಂಕಣನಂತೆ
ಹಸಿದ ನನ್ನ ಸಂಸಾರದ ಬರಲನ್ನು.

ಓ ಅತಿಶಯನೇ-
ತುಂಬು ಕೋಮಲಾಂಗಗಳ
ನಿನ್ನ ಪ್ರೇಮಾಂಗನೆಯರು
ಹೊರಬಾಗಿಲ ಬಳಿ ಬಂದೆಂದೂ
ಮಸಣ ಮದ್ದಳೆ ಸದ್ದು ಕೇಳದಿರಲಿ
ಇಂದು, ಇನ್ನೆಂದೂ.

## ವಡಮ ಹೆಸರಿನ ಉತ್ತರದ ಕವಿಗಳು

### ೩

(ಕವಿ: ವಡನೆಡುತತ್ತಣಾರ್-ಪುಱನಾ. ೧೭೯. ಹಿನ್ನೆಲೆ: ನಾಲೈ ಕಿೞವಣ್ ನಕಣ್ ಎಂಬ ನಾಯಕ(ವೇಳಿರ್)ನನ್ನು ಕುರಿತು ಬರೆದದ್ದು. ಕಿೞನ್ ಮತ್ತು ಕಿೞವನ್ ಎಂಬ ಹೆಸರಿನವರು ಸಾಮಾನ್ಯವಾಗಿ ಗ್ರಾಮಾಧಿಪತಿಗಳಾಗಿದ್ದು, ಗ್ರಾಮದ ಸಕಲ ಸ್ವತ್ತಿನ ಒಡೆಯರಾಗಿದ್ದರೆಂಬ ಅಭಿಮತವಿದೆ).

'ಈ ಲೋಕದ ಮಹಾದಾನಿಗಳೆಲ್ಲ
ನಶಿಸಿಹೋಗಿರುವುದರಿಂದ
ನೆಲಮುಖವಾದೆನ್ನ ಕೈಬಟ್ಟಲನು
ಬಲಮುಖವಾಗಿಸಬಲ್ಲವರು ಯಾರು?
ನನ್ನ ಬೇಡಿಕೆಗೆ ಬೆಲೆಯಿಲ್ಲ
ಕೊಡುವಾತ ಒಬ್ಬನೂ ಉಳಿದಿಲ್ಲ'
ಎಂಬೆಲ್ಲ ನನ್ನ ಅಳಲ ಕೇಳಿ –

ಅರಿ ರಾಜರ ಅಪಾರ ನೆಲವ
ಬಿಗಿದು ಬಲಪಡಿಸಿದ ನಗಾರಿಯ
ಜಯಿಸಿ ಶೋಭಿಸುತಲಿರುವ
ಪಾಂಡ್ಯರಾಜನ ಬಂಟ
'ನಾಲೈ' ಪತಿಯ ಹೆಸರು ಬಂತು.

ಆ ಮಹಾ ಪ್ರಭುವಿನ
ಸುಂದರಾಭರಣಗಳ ಕಂಡು
ಮತ್ಸರಿಸಿರಲು ಸಾಕು
ಸಿರಿಯು ಕೂಡಾ.

ಬೇಡಲು ಅರಸ ಪಡೆಗಳನು
ನಿಲ್ಲಿಸುವನವನು ಖಡ್ಗದಾಳುಗಳನು
ಮಂತ್ರಬಯಸಲು, ಹೇಳುವನು
ಯುಕ್ತಿನಿಯಮಗಳೆಲ್ಲವನು.

ಸದಾ ನೊಗಹೊತ್ತ ಎತ್ತಿನಂದದಿ
ಸತತ ಶ್ರಮಿಸುವುದು ಅವನ ಶೂಲ
ಬಡಿಸುವುದು ಎಡೆಬಿಡದೆ
ರಣಹದ್ದುಗಳಿಗೆ ಶವದ ಕೂಳ.

ಆ ನಾಕನ್ ಹೆಸರನ್ನೆ ಹೇಳುವರು
ಇಲ್ಲೆಲ್ಲಿಯ ಬಹುತೇಕರು.

## ೪

(ಕವಿ: ವಡಮವಣ್ಣಕ್ಕನ್ - ಪುಅನಾ. ೧೯೮. ಹಿನ್ನೆಲೆ: ಪಾಂಡ್ಯರಾಜನು ದಾನ ಮಾಡಲು ವಿಳಂಬಮಾಡಿದಾಗ ಈ ಕವಿ ಹಾಡಿದ್ದು)

'ಆ ನಿನ್ನ ಸಕಲಾಭರಣ ಸುಂದರಿ ಹೆತ್ತ
ಕಿಂಕಿಣಿ ಕಾಲ್ಗೆಜ್ಜೆಯ, ಹವಳ ತುಟಿಗಳ,
ಮುದ್ದುಮಕ್ಕಳು ಬಾಳಲಿ ಬಹಳ ಕಾಲ.

ಅವಳ ಮೊಲೆಗಳಿಗಿಳಿದ
ಕೊರಳಮಾಲೆಯು
ಗಿರಿಶಿಖರದಿಂದ ಹರಿವ
ನೀರ ಝರಿ!
ಆ ದಿವ್ಯಚರಿತೆ
ಕಾದಿರುವಳು ನಿನ್ನ ಬರವಿಗಾಗಿ',

ಕೊಂಡಾಡಿ ಕೀರ್ತಿಸಿದೆ ಇಂತೆಂದು
ಆ ಮಹಾರಥಿಯ ಬಳಿ ನಿಂದು.

ಒಡಲೊಳಗಿನ ದಟ್ಟ ಇರಾದೆಯಿಂದ
ನೆನೆವೆನವನನು ಕನಸಿನಲು ಕುಶಲದಿಂದ.
ಹೇಳ ಬಂದಿರುವೆ ವಿದಾಯವನಿಂದವಗೆ
'ಸದಾ ಸಂಭ್ರಮಿಸಲಿ ನಿನ್ನ ಕೊರಳ ಮಾಲೆ'.

ಪ್ರಶಾಂತ ತಮಿಳು ನೆಲದಗಲದ
ಅರಿ ಶಿರಗಳೆಲ್ಲವನು ಬಾಗಿಸಿರುವೆ
ಮತ್ತವರ ಸೊತ್ತೆಲ್ಲವನೆತ್ತಿ ಸಂಭ್ರಮಿಸುವೆ.
ಆ ಕಡುಗಲಿಯ ತಡೆವವರು
ಯಾರು ಈ ಇಳೆಯಮೇಲೆ?

ನಿನ್ನ ಪುತ್ರರಾದರೋ ನಿನ್ನ ಪ್ರತೀಕಗಳೇ.
ಶತ್ರುಗಳ ತಲೆಕಡಿದು
ಸುಂದರಾಭರಣಗಳ ಪಡೆದು
ಹೊನ್ನ ಹೊರೆಯಿಂದ ಬಿರಿವ
ಈ ನಿನ್ನ ಪುರವನು
ಬಹುಭಾರಮಾಡಿದರು
ಆ ನಿನ್ನ ವಂಶಜರು.

ಅವರ ದಾನಗುಣಗಳೆಲ್ಲವನು
ಶ್ರದ್ಧೆಯಿಂದಲಿ ಅನುಕರಿಸಲಿವರು.

ದಟ್ಟ ಅಲೆಗಳ ಸಾಗರಕ್ಕಿಂತ
ಸಾಗರತಳದ ಮರಳಿಗಿಂತ
ಸುರಿವ ಮಳೆ ಹನಿಗಿಂತ
ಘನಮೇಘ ಮಾಲೆಗಿಂತ
ಮಿಗಿಲಾಗಿ ವೃದ್ಧಿಸಲಿ,
ನಿನ್ನ ದಿನ ಋತುಗಳೆರಡೂ.

ಬಹುಕಾಲ ನೀ
ಬಾಳುವಂತಾಗು
ಪರಿಪೂರ್ಣ ಸತ್ಕೀರ್ತಿ
ಸುಖಸಾಗರದಲಿ;
ಕಾಣುವಂತಾಗು ಕಾಲಕಾಲಕೆ
ಮಕ್ಕಳ ಮಕ್ಕಳನು;
ಬಯಸಿದ ಸಿರಿ ದೊರಕಲಿ
ನಿನಗೆ ಅನವರತವೂ

ಅಗ್ಗಳನೇ, ನಿನ್ನ ದಯೆಗಾಗಿ
ತುಡಿಯುತಿದೆ ಈ ದುಗುಡು ಮನ.
ಪರದೇಶಿ ಪಕ್ಷಿ ಹಂಬಲಿಸುತಲಿದೆ
ದಾಹನೀಗಿಸುವ ನೀರಹನಿಗಾಗಿ.
ಬಾಗಿರುವೆ ಬೇಡುತ್ತ ನಿನ್ನಡಿಗಳಿಗೆ
ಇಲ್ಲಿದ್ದರೇನಂತೆ ಇರುವೆ ನಿನ್ನ ನೆಳಲಲ್ಲಿ.

ಮರೆಯದಿರು ನನ್ನ 'ಮಾರನೇ'
ಅದ್ಭುತ ಆರ್ಭಟದ ಅಶ್ವಭಟನೇ.

## ೫

(ಕವಿ: ವಡಮವಣ್ಣಕ್ಕಣ್ - *ಪುಜಿನಾ.* ೧೨೫. ಹಿನ್ನೆಲೆ: ಚೋಳನಿಗೂ ಚೇರನಿಗೂ ನಡೆದ ಯುದ್ಧದಲ್ಲಿ ನಾಯಕ ಮಲ್ಲೆಯಣ್ (ತೇರ್ವಣ್ ಮಲ್ಲೆಯಣ್ ಅಥವಾ ಮಲ್ಲೆಮಾಣ್ ತಿರುಮುಡಿಕ್ ಕಾರಿ) ಚೋಳರನ್ನು ಬೆಂಬಲಿಸಿದ್ದರಿಂದ ಅವರಿಗೆ ಜಯ ದೊರಕಿತು. ಇಲ್ಲಿ ಬರುವ 'ವಿಜಯೀ', ಚೋಳ; 'ಅಪಜಯೀ', ಚೇರ. ಇಬ್ಬರೂ ಮಲ್ಲೆಯಣ್ ಬಗ್ಗೆ ಹೆಮ್ಮೆಪಟ್ಟವರೇ.

ಪದರ ಪದರಾಗಿ ಲೇಪಿಸಿದ
ಬೆಣ್ಣೆ ಹನಿದು
ನಿಗಿನಿಗಿಸುವ ಕೆಂಡ ನಾಲಿಗೆಯ
ಶಮನಗೊಳಿಸಿತು.
ಸುಟ್ಟ ರುಚಿಕಟ್ಟಾದ ಮಾಂಸದ ರಸತುಂಡು-
ಹೆಂಗಳೆಯರು
ಹಿಂಜಿದ ಹತ್ತಿಯ
ಚೆಂಡುಗಳನುಂಡು.
ತುಂಬಿದ ಹಂಡೆ ಹಂಡೆ ಹೆಂಡವನು
ಒಮ್ಮೆ ಮತ್ತೊಮ್ಮೆ ಮಗುದೊಮ್ಮೆ
ಹೊಟ್ಟೆಗಿಳಿಸಲು ಬಂದಿರುವೆ
ನಿನ್ನ ಬಳಿ, ಓ ನನ್ನ ಪ್ರಭುವೆ.

ನೊಗ ಬಿಚ್ಚಿ ಬಿಟ್ಟ ಬಲಶಾಲಿ ಬಸವನು
ಹರಿಹಾಯ್ದು ಕಬಳಿಸುವ ಮೇವೆಲ್ಲವನ್ನು
ಅರಿಗಳ ಸೆರೆಗೊಂಡ, ಓ ಗಂಡುಗಲಿಯೇ
ಆ ನಿನ್ನ ಆನಂದಭವನದಲಿ
ಆರ್ಭಟಿಸಿ ಹೀರುವ ಮದಿರೆಯು
ಅಪರೂಪದ ಅಮೃತ ಆಗಲಿ.

ಆ ವಿಜಯಿಯೋ-
ನೆಲಕುರಿಳಿದಾನೆಗಳನ್ನೆಲ್ಲ ಒಟ್ಟೊಟ್ಟಿ
ಹಲವಾರು ಬೆಟ್ಟಗಳನು ಕಟ್ಟಿ
ಇರಿದು ಮೆರೆಯುತ ಅವನು
ಮರೆಯದೆ ಸ್ಮರಿಸುತಲಿರುವನು:
'ಅವನ ಕೊಡುಗೆಯಲ್ಲವೆ ಕಾರಣ
ಈ ನನ್ನ ಜಯಕೆ?' ಎಂದು.

ಆ ಅಪಜಯಿಯೋ-
ಶಕ್ತಿಯುತ ಶೂಲದ ಮಲ್ಲೆಯಣನು
ಬರದಿದ್ದರೆ ಧಾವಿಸಿ ರಣರಂಗಕೆ
ಅಂದದ ಕಾಲಿಗೆ ಚಂದದ ತೊಡರುಟ್ಟು
ಬದಲಿಸದಿದ್ದರೆ ಹೋರಾಟದ ನಿಟ್ಟು
ಎಷ್ಟು ಸರಳವಾಗಿತ್ತು ಕದನ ಜಯ
ಹೀಗೆಂದು ಚಿಂತಿಸಿಯೂ
ಮೆಚ್ಚುವನವ ನಿನ್ನನು:
'ಅವನಿಂದ ಮಾತ್ರವಲ್ಲವೆ
ಸೋಲಾದದ್ದು' ನಮಗೆ ಎಂದು.

ಪೂಜ್ಯ ಮುರುಗನ
ಮಹಾಗಿರಿಯ ಶಿಖರದಲಿ
ಅಗಾಧ ಮನೆಕಟ್ಟಿರುವ
ಮಳೆಮೋಡಗಳ ಹಾಗೆ
ಅರಸಿ ಬರುವವರೆಲ್ಲರಿಗೂ
ಒಂದೆ ಥರ, ಒಂದೆ ಬಗೆ,
ನೀನಿರುವೆ ಎಂದೆಂದಿಗೂ.

೬

(ಕವಿ: ವಡಮವಣ್ಣಕ್ಕನ್ - *ಕುಱುಂತೊಗೈ*, ೮೧. ಹಿನ್ನೆಲೆ: ಕರಾವಳಿ ಪರಿಸರದಲ್ಲಿ ಸಂಭವಿಸಿದ ಈ ಪ್ರೇಮಸಂಬಂಧದ ಬಗ್ಗೆ ನಾಯಿಕೆಯ ಗೆಳತಿ ನಾಯಕನಿಗೆ ಕೊಟ್ಟ ಸಂದೇಶ. ಗರ್ಭಿಣಿಯಾದ ಅವಳನ್ನು ಕೂಡಲೇ ಕಾಣಲು ಸೂಚನೆ.

ನೀನು ಹೇಳಿದ ಮಾತನು ನಾ ತಿಳಿಸಲು,
ಸ್ವೀಕರಿಸಿದಳು ಒಪ್ಪಿ ಅದನವಳು.

ತಂಪು ಜ್ಞಾಜಲ್ ಗಿಡಗಳು
ಅಡಗಿಸಿದ ಎಳೆರೆಂಬೆಗಳ
ಒಡಲಿನೆಡೆಯೊಂದರಲಿ
ಕಳೆದುಕೊಂಡಿದ್ದಳವಳು
ಕಿಶೋರಿ ಕೌಮಾರ್ಯವನು.

ಈಗವಳು ಆಗಿಹಳು ಏಕಾಂಗಿ
ಅವಳ ಕಳವಳ ನಿನಗೆ ಅರಿವಾಗಲಿ.

ನೋಡಲ್ಲಿ! ನಮ್ಮ ಚಂದುಳ್ಳ
ಚಿಕ್ಕ ಗ್ರಾಮವನ್ನು,
ಬಾಗಿ ನೆಲಮುತ್ತಿಡುವ ತಾಳೆಗರಿಗಳನ್ನು,
ಬೆಳದಿಂಗಳ ಅಂದದಲಿ ಬೆಳಗಿ ಬೀಗುವ
ಮತ್ಸ್ಯಗಂಧಿಯ ಕಡಲ ಅಲೆಗಳನು,
ಅಲ್ಲದೆ, ಕಿಟ್ಟಕಟ್ಟಿದ ಕಾಡತೋಪುಗಳನು.

ಹೋಗಿ ಸೇರು ನೀನವಳನ್ನು
ಆಯ್ದು ಈ ಪನವಿಲೊಂದನ್ನು.

೭

(ಕವಿ: ವಡಮವಣ್ಣಕ್ಕನ್ - *ಕುಱುಂತೊಗೈ*, ೧೫೯. ಹಿನ್ನೆಲೆ: ಗೃಹಬಂಧಿಯಾಗಿದ್ದ ನಾಯಿಕೆಯ ಅಳಲನ್ನು ಅರುಹಲು ಮಾಡಿದ ಯತ್ನ. ಇಲ್ಲಿ ಬರುವ 'ಪತ್ರ' ಲತೆಗಳಿಂದ ಮಾಡಿದ ಅಥವಾ ಪತ್ರಚಿತ್ರಗಳಿಂದ ಬಿಡಿಸಿದ ಲಂಗವನ್ನು ಸೂಚಿಸಬಹುದು. 'ಶೆಪ್ಪು' ಎಂಬುದು ಪೂರ್ಣಕುಂಭ - ಅರ್ಥಪೂರ್ತಿಕೆಗೆ ಎರಡೂ ಪದಗಳನ್ನಿಲ್ಲಿ ಬಳಸಲಾಗಿದೆ).

ಅವಳ ನಡು ಬಳಲುತಿದೆ
ಅದನ್ನು ಬಳಸಿದ ಪತ್ರಪಾವುಡದ
ಭಾರವನ್ನಾಗಲೀ,
ಉಬ್ಬಿದೆದೆಯನ್ನೆಲ್ಲ ತುಂಬಿದ
'ಶೆಪ್ಪು' ಪೂರ್ಣಕುಂಭದ
ರೇಖಿತ ತೋರ್ಮೊಲೆಗಳ
ಹೊರೆಯನ್ನಾಗಲೀ,
ಅದು ಭರಿಸದಾಗಿದೆ.

ಈ ಅಮಾಯಕ ಗ್ರಾಮವನು
ತುಂಬಿರುವರು ಎಡಬಿಡಂಗಿ ಜನರು
ಕಳಕಳಿಯಿಂದ ಕೇಳಿಯಾರೆ ಅವರಾರು
ಈ ಮಾಟದೋಲೆಯ ಪೋರಿಯ
ಪೀಡಿಸುವ ಚಿಂತೆ ಯಾವುದೆಂದು?

## ೮

(ಕವಿ: ವಡಮವಣ್ಣಕ್ಕನ್ ಪೇರಿ ಶಾತ್ತನಾರ್-ನಟ್ರಿಣೈ, ೨೯೯)

ಕಡಲ ತಡಿಯ
ಅಂದದ ಹಟ್ಟಿಯ
ದಟ್ಟ ಪೊದೆಯ
'ತಲೈ' ಹೂವುಗಳು
ಬಿರಿದು ಮೆರಗುತ್ತಿವೆ;
ಉದುರಿದ ಆನೆದಂತದ
ಮುರಿದ ತುಂಡಿನಂತೆ
ತಲ್ಲಣಗೊಳಿಸುತ್ತಿವೆ!

ಪಡುವಣ ಗಾಳಿಯ ಹೊಡೆತಕೆ
ಸಿಲುಕಿದ ತೆಳು ಪುಷ್ಪ ಪರಾಗ
ಥಳಥಳ ಹೊಳೆಯುವ ಬಳೆಗಳ
ಬಾಲೆಯರ ಆಟದ ಮನೆಗಳ
ಮಾಡಗಳನೆಲ್ಲ ಮುಚ್ಚಿವೆ.

ಬೀಸಿಬರುವ ಮಾರುತಕೆ ಸಿಲುಕಿ
ಚದುರಿ ಬೀಳುವ ತೊರೆಯ ಹನಿಗಳು
ಬಿಲ್ಲು ಬಡಿದ ಹಂಜಿಯ ಕಣಗಳು
ಹಾರಿಬರುವ ಹಾಗೆ ಕಾಣುವುವು,
ಕಣ್ಣಕೊರೆಯುವ ತುಂತುರುಗಳು.

ಆ-ಕಡಲತೀರದ ಪ್ರಿಯಕರನ
ಹಿಗ್ಗಿನೊಡನಾಟವನು ತೊರೆದು
ಬಾಳಲಾರೆ ನಾನೊಂದು ದಿನವೂ.

ಕೆಂಗಣ್ಣನ್ನಾಡಿಸಲಿ ಬಿಡು, ಈ ಹಟ್ಟಿ
ಧೃತಿಗೆಡೆ ನಾನಂತು ಎಳ್ಳಷ್ಟೂ,

## ೬

(ಕವಿ: ವಡಮವಣ್ಣಕ್ಕಣ್‌ಪೇರಿ ಶಾತ್ತನಾರ್-ನಟ್ರಿಣೈ, ೩೭೮)

ಓ ಗೆಳತಿ
ರಾತ್ರಿ ನೀಳನೀಳವಾಗಿ
ಯಾತನೆಯ ನೂರ್ಮಡಿಸಿ
ಅಪಹರಿಸಿದೆ ನೆಮ್ಮದಿಯ
ನನ್ನೆಲ್ಲ ನಿದ್ದೆಕದ್ದು.

ಮಾಯದ ಹಳೆಯ ಗಾಯದಂತೆ
ಮರುಕಳಿಸುತಲಿವೆ ಮತ್ತೆ ಮತ್ತೆ
ಲಯಬದ್ಧ ಅಲೆಗಳ ಇಂಪು ಧ್ವನಿಗಳು;
ರವಿಯಾದರೋ,
ಮರೆಯಿಂದ ಹೊರಬರಲು
ಹಿಂಜರಿದು ನಿಂತಿರುವನು.

ಉಸುಗಿನ ಏರುದಿನ್ನೆಯಮೇಲೆ
ನಾವು ಮಾಡಿದ ಮರಳ ಮನೆಯನ್ನು
ಅಂದೊಮ್ಮೆ ಕಂಡು ಕೆಡವಿದ್ದನು
ನಮ್ಮ ಆ ಪ್ರಿಯಕರನು;
ಅನುರಾಗದಲಿ ಅದ್ದಿ ಬೆಲ್ಲದ ಮಾತಾಡಿ
ಕದ್ದಿದ್ದ ನಮ್ಮ ಕಿವಿಗಳನ್ನು,
ಏನೂ ಅರಿಯದ
ನಾವು ಬಾಲೆಯರು –
ನಿಜವೆಂದು ಬಗೆದಿದ್ದೆವವನ
ಸಿಹಿ-ಸವಿ ಮಾತುಗಳೆಲ್ಲವನ್ನು.

ತಂಪು ಅಲೆಗಳ ಇಂಪುರಾಗದ
ಕಡಲತೀರದ ದೊರೆಯೊಡನೆ
ಬಡಪಾಯಿ ಮಂಕರುಗಳು
ಅಂದು ಮಾಡಿದ ರಕ್ತಸಂಬಂಧ
ಇಂದು ನೆರೆಹೊರೆಯವರ
ಹರಕು ನಾಲಿಗೆಯ ಪ್ರಸಂಗ !

## ೧೦

(ಕವಿ: ವಡುಮಂತಾಮೋತರನ್ - ಕುಱುಂತೊಗೈ, ೮೫. ಹಿನ್ನೆಲೆ: ಹೆಣ್ಣುಗುಬ್ಬಿ ಮತ್ತು ನಾಯಿಕೆರಿಬ್ಬರೂ ಗರ್ಭಧರಿಸಿರುವರು. ಬರುವ ತನ್ನ ಮಗುವಿಗಾಗಿ ಕಳಕಳಿಯಿಂದ ಕಬ್ಬಿನ ಹೂ ಕಣಗಳನ್ನು ಆರಿಸಿ ಮನೆಕಟ್ಟಲು ತೊಡಗಿರುವ ಗಂಡುಗುಬ್ಬಿಯನ್ನು ಕವಿಗಳಿಂದ ಹೊಗಳಿಕೆ ಸಂಪಾದಿಸಿಕೊಂಡ ಆದರೆ ಗರ್ಭಿಣಿಯಾದವಳ ಬಗ್ಗೆ ಚಿಂತಿಸದೆ ತನ್ನ ಕಾರ್ಯದಲ್ಲಿಯೇ ಮಗ್ನನಾದ ನಾಯಕನೊಡನೆ ಹೋಲಿಸಿ, ಅವರಿಬ್ಬರ ಮನೋಪ್ರವೃತ್ತಿಯನ್ನು ತೋರಿಸಲಾಗಿದೆ.)

ಆ –
ಪುರದ ಗಂಡುಗುಬ್ಬಿ
ಗತ್ತಿನಲಿ ಕುಪ್ಪಳಿಸುತ–
ಜೇನುಕಬ್ಬಿನ
ಸಿಹಿದಂಟಿನ–
ಬಿಳಿ ಬಂಜೆ ಹೂಗೊಂಚಲಿನ
ಒಂದೊಂದೇ ಕಣವನ್ನು
ಹೆಕ್ಕಿ ತರುತಲಿರುವುದು,
ಗರ್ಭವತಿ ಮಡದಿ ಮುಂದೆ
ಹೆರುವ ತಮ್ಮ ಮಗುವಿಗೆ
ಮನೆಯೊಂದ ಕಟ್ಟಲೆಂದು!
ಈ
ಗ್ರಾಮಿಗನೋ
ಹಾಡುಗಾರರಿಗೆ ಮಾತ್ರ ಅಚ್ಚುಮೆಚ್ಚು
ಸಾಟಿಯಿಲ್ಲದ ಪ್ರೀತಿಯ ಬೆಲ್ಲದಚ್ಚು?

## ೧೧

(ಕವಿ: ವಡಮೋತಂಕಿಟಾರ್ - ಪುಱನಾ. ೨೬೦. ಹಿನ್ನೆಲೆ: ತುರುಗೋಳ್ ಕಾಳಗದಲ್ಲಿ ಮಡಿದ ವೀರನೊಬ್ಬನ ಗೌರವಾರ್ಥ ನೆಟ್ಟ ಕಲ್ಲಿನ (ನಟುಕಲ್ಲು=ವೀರಗಲ್ಲು) ಪ್ರಸಂಗ. ನೆಟ್ಟಕಲ್ಲಿನ ಮೇಲೆ ಹುತಾತ್ಮನ ಹೆಸರು ಕೊರೆಯುವುದು, ಅದನ್ನು ನವಿಲುಗರಿಗಳಿಂದ ಅಲಂಕರಿಸುವುದು, ಪಟ(ಬಟ್ಟೆಯ)ದ ಹೊದಿಕೆಯ ಮಂಟಪ ಕಟ್ಟುವುದು, ಅಲ್ಲದೇ ಆ ನೆಲವನ್ನು ಯಾರೂ ತುಳಿಯಬಾರದೆಂಬ ನಿಯಮ ಹಾಕುವುದು, ಇಲ್ಲಿ ಗಮನಾರ್ಹ. 'ಮರವರು' ಆ ಕಾಲದ ಖ್ಯಾತ ತುರುಗಳ್ಳರಾಗಿದ್ದರು. ಇಲ್ಲಿಯ 'ತುಟಿ' (ಕ. ದುಡಿ) ಸಮರನಗಾರಿಯನ್ನು 'ಪುರವು' ದಾನಮಾಡಿದ ಕ್ಷೇತ್ರವನ್ನು ಸೂಚಿಸುವುವು).

ಧೀಮಂತರಾಗವನೊಂದ ನುಡಿಸಲು
ಮೀಟಿದೆ ನೀ ಯಾಳ ತಂತಿಗಳನು
ಹೊರಹೊಮ್ಮಿಸಿದವವು ದಾರುಣಧಾಟಿಯ
'ವಿಳರಿ' ಸ್ವರಗಳನು.
ಕುಸಿದ ಮನದಿಂದ, ನೀ ತೊರೆದೆ ಆ ನೆಲವನು.

ಗರತಿಯೊಬ್ಬಳು ಬಿಚ್ಚಿ ಹರಡಿದ
ಹೆಡೆಯ ಅಶುಭವ ಮನದಂದು
ಉಪ್ಪುನೆಲದ ನೆರಳಿನಲ್ಲಿರುವ
ನಾಯಿಕೊಡೆಯ ದೇವರ
ಅಡಿಗೆರಗಿ 'ಶರಣು' ಎಂದೆ.

ಬಿಗುಮಾನದ ಕಬ್ಬಿಗನೆ, ನೀ ಬಂದಿರುವೆ
ಹಸಿದ ಒಡಲನು ಹೊತ್ತು ,
ಕೂಡಿಸಿದ ಕರಗಳನು ಮೇಲೆತ್ತಿ,
ಕೇಳುತಿರುವೆ ಒಮ್ಮೆ-ಮತ್ತೊಮ್ಮೆ
ಅಲ್ಲದೇ, ಮುಗುದೊಮ್ಮೆ
'ಅವನ ಕಾಣಲು ಸಾಧ್ಯವೇ' ಎಂದು.

ಕೇಳು - ನಮ್ಮ ಬಾಳಬಗೆಯನ್ನು,

ಪಡೆದುಕೋ, ನೀನವನ ಪುರವುಗಳನು
ಮಾಡು ಮನಸಾರೆ, ಭೂರಿಭೋಜನವನ್ನು;
ಇಲ್ಲವೇ ಪರಿತಪಿಸಿ ಹೊರಳಾಡು

ದೂಡುತ್ತಾ ಜಾಗರಣೆ ರಾತ್ರಿಗಳನ್ನು.
ಎರಡರೊಳಗೊಂದ ಮಾಡುವುದು ಅತಿಸರಳ
ನಿರ್ಧರಿಸು ತಡಮಾಡದೆ ಇದರಲ್ಲೊಂದ.

ತುರುಗಳ ಸೆರೆಗೊಂಡು ಪುರಕೊಯ್ಯುವ
ಅವಸರದಲಿದ್ದ ಆ ಭಟರುಗಳನೆದುರಿಸಿ
ಕಾದಾಡಿ ಕೋಟೆಬಳಿ ಕೆಡವಿದ್ದ ಆ ಕಲಿಯ
ಸಮರ 'ತುಟಿ' ಯನೊಡೆಯಲು
ಸುರಿಸಿದ ಸರಲು ಮಳೆಯನು
ದಾಟಿ ಸಂಹರಿಸಿದನವರನು.

ಹೊಟ್ಟೆಬಾಕ ಸರ್ಪದ ಗರಗಸ ಕೋರೆಗಳ
ವಂಚಿಸಿ ಹೊರಬರುವ ಚಂದ್ರನ ಹಾಗೆ
ಕರೆತಂದನು ಕಪಿಲೆ ಮಂದೆಯನು
ಬಿಡಿಸಿ 'ಮರವರ' ಬಂಧನದಿಂದವನು.

ಪೊರೆಬಿಟ್ಟ ನಾಗನ ಬಗೆಯಲಿ
ನೆಲೆಸಿಹನವನೀಗ ದುರ್ಲಭ ಲೋಕದಲಿ.
ಬಿದ್ದಿದೆ ಹೆಣ ಸರಳು ಸೆರೆಯಲ್ಲಿ
ದುರ್ಗಮ ಕಾಡಿನ ಕಿರುತೊರೆಯ ಬದಿಯಲ್ಲಿ
ಛಲದಿಂದ ನಿಂತ ಗುರಿಗಂಬವೊಂದು
ತೊಯ್ದಾಡಿ-ಹೊಯ್ದಾಡಿ ನೆಲಕಚ್ಚಿದಂತೆ.

ಯಾರೂ ತುಳಿಯದ ತುಸು ನೆಲಪಟ್ಟಿಯಲ್ಲಿ
'ಪಟ'ಸೂರಿನ ಶುಭಮಂಟಪದ ಮಧ್ಯದಲ್ಲಿ
ಕಲ್ಲೊಂದ ನೆಟ್ಟು ನವಿರು ನವಿಲುಗರಿ ಇಟ್ಟು
ಕೊರೆದಿರುವರು ಈ ಕಲಿಯ
ಸುವಿಖ್ಯಾತ ಹೆಸರನು.

## ೧೨

(ಕವಿ: ವಡಮವಣ್ಣಕ್ಕನ್ - ನಟ್ರಿಣೈ ೩೨೩)

ಓ ಪ್ರಭುವೇ
ನಿನಗೆ ಮರುಳಾದವಳು
ತನ್ನೆಲ್ಲಾ ಅಂದವನು
ಕಳೆದುಕೊಂಡಿರುವಳು.

ಮಣಿಕಟ್ಟು ಮುಚ್ಚಿರುವ
ವಳಯಗಳ ಪ್ರಿಯತಮೆಯ
ಹಡೆದವನ ಹಟ್ಟಿ
ಅಡಗಿಕೊಂಡಿದೆ ಆ
ನೀಳತಾಳೆಗಳ ನಡುವೆ.

ಆಟದ ಒಡನಾಡಿಗಳೊಡನೆ
ಅಡಗಿರುವಳವಳು
ಯಾರೂ ಕಾಣದ ಎಡೆಯಲ್ಲಿ.

'ಪುಣ್ಣೈ' ಗಿಡಗುಂಪಿನಲ್ಲಿ
ಪುಷ್ಪ ಪರಾಗವನರಸುವ
ಜೋಡಿ ದುಂಬಿಗಳ
ದಟ್ಟ ಝೇಂಕಾರ ಸಂಗೀತದಲ್ಲಿ
ನಿನ್ನ ಉನ್ನತ ರಥಗಂಟೆಗಳ
ಕಿಂಕಿಣಿ ನಿನಾದವೂ
ಕೇಳಿಸದು ಯಾರಿಗಲ್ಲಿ.

ಹಟ್ಟಿ ಮುಟ್ಟುವ ಕಿರುದಾರಿ
ನೋಡು, ಅಲ್ಲಿಯೇ ಇದೆ
ನೀನಿಂದು ಅವನನ್ನು
ಮರೆಯದೇ ಕಾಣುವುದು.

## ೧೩

(ಕವಿ: ಮಾಮೂಲಣಾರ್ - *ಕುಱುಂತೊಗೈ* ೩೭೨. ಹಿನ್ನೆಲೆ: ಇಲ್ಲಿ ಬರುವ ವಡುಗರ ಪ್ರಸ್ತಾಪ ಮತ್ತು ತಮಿಳರಿಗೆ ಅರ್ಥವಾಗದಿರುವ ಭಾಷೆಯಲ್ಲಿ ಅವರು ಮಾತನಾಡುತ್ತಿದ್ದುದು ಗಮನಾರ್ಹ. ತಮಿಳಗಂನ ಯೋಧರು ಸಂಪತ್ತನ್ನರಿಸಿ ಉತ್ತರಕ್ಕೆ (ವಡುಗ ನಾಡಿಗೆ ಅಥವಾ ಕನ್ನಡ-ಆಂಧ್ರಪ್ರದೇಶದೆಡೆಗೆ ಬರುತ್ತಿದ್ದುದನ್ನು ಅನೇಕ ಶಂಗಂ ಕವನಗಳು ಬಹಿರಂಗಪಡಿಸಿರುವುವು).

ಶಂಖ ಕೊರೆದುಮಾಡಿದ
ಶುಭ್ರಬಿಳಿ ಕಂಕಣಗಳು
ನನ್ನ ಮಣಿಕಟ್ಟಿನಿಂದ
ಕಳಚಿ ಬೀಳುತ್ತಿವೆ.
ಕಣ್ಣೀರು ಹರಿಸಿ ಇರುಳ ಸರಿಸಿ
ದಿನ ನೂಕುತಿರುವೆ, ಏಕಾಂಗಿಯಾಗಿ.

ಓ ನನ್ನ ಹೃದಯವೇ!
ಏಳು. ಅವನಿರುವ ತಾಣ ತೋರಿಸು-
ಹೋಗಿ ಮುಕ್ತಿಪಡೆಯೋಣ.
ಈ ನಲಿವ ನೆಲದಿಂದಾಚೆ
ಹಲವು ಶೂಲ ಗಾವುದದ
'ಕಟ್ಟೀ' ರಾಜ್ಯದ ಗಡಿದಾಟಿ,
ತುಳಸಿಮಾಲೆಯ ತೊಟ್ಟ
ವಡುಗರು ನಮಗೆ ತಿಳಿಯದ
ನುಡಿಯನಾಡುವರೋ,
ಅಲ್ಲಿ ಸೇರಿ,
ಅವನ ಬೆನ್ನಬೀಳೋಣ.

# ಮೈಸೂರು ಪ್ರದೇಶದ (ಎರುಮೈನಾಡಿನ) ಕವಿಗಳು

## ೧೪

(ಕವಿ: ಎರುಮೈವೆಳಿಯಣಾರ್ - ಪುಱನಾ. ೩೦೩. ಹಿನ್ನೆಲೆ: ಒಬ್ಬ ವೀರನ ವರ್ಣನೆ. ಆದರೆ ಅವನಾರೆಂಬುದು ಸ್ಪಷ್ಟಗೊಳ್ಳುತ್ತಿಲ್ಲ. ಕವಿಯ ಹೆಸರಿನಲ್ಲಿರುವ ಎರುಮೈ ಪೂರ್ವಪ್ರತ್ಯಯ ಗಮನಾರ್ಹ.)

ಧರೆಯನ್ನೆ ಒಳಗೆಳೆವ ಗತ್ತಿನ
ಗೊರಸುಗಳಿಂದದನು ಭೇದಿಸುವ
ವಾಯುವೇಗದ ಆ ತುರಗ
ನೋಡುಗರನ್ನೆಲ್ಲಾ ತಬ್ಬಿಬ್ಬುಗೊಳಿಸಿತು.

ಲಘುವಾಗಿ ಕಂಡವರನು
ಅದರ ಯುವ ಸವಾರನು
ಕಡಿದುಹಾಕಿದ ಕಡುಕಾಡಿ
ದುಡುಕುವ ದೃಢ ದೀರ್ಘ
ಶೂಲದಿಂದವರ ಎದೆಯ ಸೀಳಿ

ಅವನು ಬರುವುದನು
ಈಗ ನೀವೆ ನೋಡಿ.

ಇದ್ದಂಡೆಗಳ ತೊಳೆವ ಸಾಗರವನು
ಇಬ್ಭಾಗಿಸಿ ನುಗ್ಗುವ ನಾವೆಯ ಹಾಗೆ
ಬಾಹುಬಲದಲಿ ಬದಿಗೊತ್ತಿ ಭಟರನು
ಮೆರೆದಿದ್ದನವನು ಮಹಾರಾಜರೆದುರು-
ಮೊನ್ನೆ-ನಿನ್ನೆಯವರೆಗೂ.

ಧವಳ ದಂತದ ಮದಕರಿಯನ್ನು
ಕೆಡವುದನು ಕಣ್ಣಾರೆ ಕಂಡು
ಕಣ್ಣೀರು ಕೋಡಿ ಹರಿಸಿದವು
ಮಾಸವಾರದ ಹಸುಳೆಗಳ ಹಿಂಡು.

೧೫

(ಮೇಲೆ ಉಲ್ಲೇಖಿಸಿದ ಕವಿ - ಪುಱನಾ. ೨೭೩)

ಅವನ ತುರಗ ಮರಳಿ
ಬರುವುದಿಲ್ಲ;
ಅವನ ತುರಗ ಮರಳಿ
ಬರುವುದಿಲ್ಲ
ಉಳಿದೆಲ್ಲವರ ತುರಗಗಳು
ಮರಳಿ ಬಂದಾಯಿತು.

ಕಂದು ಕುದುರೆಯ
ಕೇಶರ ಚಂಡಿಕೆಯ
ಈ ಮನೆಮಗನ ಸಿರಿವಂತ ತಂದೆಯ
ತುರಗ ಬರಲಿಲ್ಲ,
ದೊಡ್ಡ ನದಿಗಳ ಸವಡಿನಲಿ
ಕೊಚ್ಚಿ ತೇಲುವ ಹೆಮ್ಮರದಲಿ
ಅವನೇರಿದ್ದ ತುರಗ ನೆಲಕ್ಕೊರಗಿತು.

## ಕೊಂಕಣದ ಕವಿಗಳು

### ೧೬

(ಕವಿ: ಮೋಶಿಕೀರಣಾರ್ - ಪುಱಸಾ. ೧೫೬. ಹಿನ್ನೆಲೆ: ಕೊಂಕಾಣ(ಕೊಂಕಣ)ಗಿರಿಯ ಸಂಪತ್ತು ಮತ್ತು ದುರ್ಗಾಮತೆಯ ಪರಿಚಯವಿಲ್ಲಿದೆ. ಕೊಂಕಣದ ಭೂಮಿತಿಯನ್ನು ನಿರ್ಧರಿಸುವುದು ಕಷ್ಟ, ಆದರೆ ಅದು ಇಂದಿನ ಕರ್ನಾಟಕದ ಕರಾವಳಿ ಪ್ರದೇಶವನ್ನು ಹೊರತಾದುದಾಗಿರಲಿಲ್ಲ. ನಣ್ಣನ್ ಎಂಬ ಪ್ರಸಿದ್ಧ ನಾಯಕನು ಕೊಂಕಾಣದ (ತುಳುನಾಡಿನ/ಪುನ್ನಾಟದ?) ಅಧಿಪತಿಯಾಗಿದ್ದನೆಂಬುದು ಇಲ್ಲಿ ಸೂಚಿತಗೊಂಡಿದೆ. ನೋ. ನಣ್ಣನ್.)

ಎಲ್ಲಾ ಭೂಪತಿಗಳ ಅಧೀನದ
ಗಿರಿಗಳಿಗಿರುವುದು ಒಂದೇ ಗುಣ,
ಭವ್ಯಕೊಂಕಾಣಂಗಿರುವುವು, ಎರಡು:
ಹಸಿವ ಹಿಂಗಿಸಿಲು ಹಂಬಲಿಸಿ
ಧಾವಿಸುವವರ ಸ್ವಾಗತಿಸುವುದು,
ಒಂದು;
ಸೂರೆಗೊಳ್ಳಲು ಏರಿಬರುವ ದುಸ್ಸಾಹೀ
ಅರಸು ಪಡೆಗಳ ಹಿಮ್ಮೆಟ್ಟಿಸುವುದು
ಮತ್ತೊಂದು.

## ೧೭

(ಕವಿ: ಮೋಶಿಕೀರನಾರ್ - ಪುಜಿನಾ. ೧೫೫. ಹಿನ್ನೆಲೆ: ಕೊಂಕಾಣಂಕೀಟಾನ್ ಎಂಬ ಕರಾವಳಿ ನಾಯಕನನ್ನು ಕುರಿತು ರಚಿಸಿದ್ದು. 'ಕೀಟಾನ್'ಗೆ ನೋ. ಮೇಲಿನ ಕವನದ ಟಿಪ್ಪಣಿಯನ್ನು).

ಹಸಿದು ಒಡಮಗ್ಗುಲ
ಕಳಚಿಕೊಂಡಂತಿರುವ
ಕವಿಯೆ, ನಿನ್ನ ಡೊಂಕು
ಯಾಳವನು ಸ್ವಲ್ಪ ಮೀಟು;
ಪದ ಎರಡು ಆಯ್ದು
ಬವಣೆ ನೀಗುವ
ಕರುಣಾಳುಗಳೆಲ್ಲೆಂದು ಕೇಳು.

ಈಗ ನನ್ನ ಮಾತನ್ನೂ ಕೇಳು.

ಒಕ್ಕಲೆದ್ದ ಪುರದಲ್ಲಿ
ಏರು ರವಿಯೆಡೆ ಮೋರೆಮಾಡಿ
ಅರಳುವ ನೆರುಂಜ್ಞಿಗಿಡದ
ಬಣ್ಣದ ಹೂಗಳಂತೆ,
ತಿರುಗಿವೆ ಬಡಕವಿಗಳ ಬಟ್ಟಲುಗಳು
ಕೊಂಕಾಣಗಿರಿಯ ಮಹಾಪ್ರಭುವಿನ
ಸರಮಾಲೆ ಕಂಗೊಳಿಸುವ ಎದೆಯ ಕಡೆಗೆ.

ತುಂಬಿದನ್ನದ ತಾಟು
ನಗುತ ತುಳುಕಾಡುವುದು;
ಅವನ ಕೀರ್ತಿಪತಾಕೆ
ನೆಗೆದು ಹಾರಾಡುವುದು.

## ೧೮

(ಕವಿ: ಮೋಶಿಕೀರಣಾರ್- ಪುಜಿನಾ. ೧೫೪. ಹಿನ್ನೆಲೆ: ಇಲ್ಲಿ ಬರುವ ಕೊಂಕಾಣ ಗಿರಿಯ ಜಲಪಾತಗಳ ಉಲ್ಲೇಖ ಗಮನಾರ್ಹ.)

ಏರುವ ತೆರೆಗಳ ಸಾಗರ ತೀರಕೆ
ಬರುವ ಜನರು ಕೇಳಿಯಾರು ಬಲ್ಲವರ
'ಎಲ್ಲಿ ಪಡೆಯಬಹುದು
ದಾಹತೀರಿಸುವ ನೀರನ್ನು' ಎಂದು?
ಅಂತೆ, ಅರಸನ ಸಂಗದ ಕುಶಲಮತಿಗಳು
ಹುಡುಕಿಯಾರು ಪರಿಶುದ್ಧ
ದಾನಿಗಳನ್ನು ಬೇರೆಡೆಯಲ್ಲಿ.

ನಾನು ಪಡೆವ ಯಾವ ಉಡುಗೊರೆಯ
ನಿಜಮೌಲ್ಯವೇನೆಂದು ಕೇಳಲಾರೆ.
ನಾನಂತೂ ಬಡವ
ನಿನ್ನನ್ನೇ ನೆಚ್ಚಿ ಬಂದಿರುವವ.
'ನನಗೆ ಕೊಡು' ಎಂದು ಕೇಳಲೂ
ಬಹಳ ಮುಜುಗರವು.

ನೀನು ಕೊಡು, ಇಲ್ಲ ಬಿಡು.
ಸುರಿವ ಸರಲುಗಳನೆದುರಿಸದೆ
ಕದನರಂಗವ ತೊರೆದೆಂದೂ ಕದಲದ
ನಿನ್ನ ಪುರುಷತ್ವವನು ಕೊಂಡಾಡದಿರೆನು;
ಶುಭ್ರ ಶ್ವೇತಾಂಬರ ಚೆಲ್ಲಿದ
ದಟ್ಟಾಗಿ ಒಟ್ಟಾಗಿ ಧುಮುಕಿ ಬೀಳುವ
ನಿನ್ನ ಕೊಂಕಾಣಗಿರಿಯ ತಂಪು ಜಲಪಾತದ
ಸೊಬಗನ್ನು ಹಾಡಿಹೊಗಳದಿರೆನು.

## ೧೯

(ಕವಿ: ಭರಣರ್ - *ಕುಱುಂತೊಕೈ*, ೩೯೩. ಹಿನ್ನೆಲೆ: ಕೊಂಕರು (ಕೊಂಗರು, ಕೊಡಗಿನ ಮೂಲದ ಕಲಿಗಳು) ಪಾಂಡ್ಯರ ವಿರುದ್ಧ 'ವಾಕೈಪ್ಪರಂತಲೆ' ರಣರಂಗದಲ್ಲಿ ಹೋರಾಡಿ ಆತಿಕಣನನ್ನು ಸೋಲಿಸಿ ಹಾಕಿದ ಜಯಕಾರದ ಪ್ರಸ್ತಾಪ. ಶಂಗಂ ಕಾಲದ ಇತಿಹಾಸದ ಒಂದು ಪ್ರಮುಖ ಘಟನೆ).

ಆ ಮನುಷ್ಯ ಬಲವಾಗಿ ನಿನ್ನನು ಅಪ್ಪಿ
ನವಪುಷ್ಪಮಾಲೆಯನೆಲ್ಲ ಘಾಸಿಸಿದನು.
ಇಂತಹ ಘಟನೆಯೇನೂ
ಮರುಕಳಿಸಲಿಲ್ಲ ನಿಜ -
ಆದರೆ ಎದ್ದ ಗುಲ್ಲು?

ಹೊಳಪಿನ ಖಡ್ಗದ ಕೊಂಕರ ಹೊಡೆತಕೆ
ಬಿಳಿರತ್ನಮಾಲೆಯ ಪಾಂಡ್ಯ ಸೇನಾನಿ
'ಅತಿಕಣ' ಬಿದ್ದಾಗ ತನ್ನಾನೆ ಸಹಿತ
'ವಾಕೈಪ್ಪರಂತಲೆ' ರಣರಂಗದಲ್ಲಿ
ಕಾಡುಕೋಳಿಯ ಕೂಗಡಗಿಸಿ
ಅಬ್ಬರದ ಜಯಕೇಕೆ ಹಾಕಿದರು.

## ೨೦

(ಕವಿ: ಉಲೋಚ್ಚನಾರ್ - ನಟ್ರಿಣೈ ೧೪೯ ಹಿನ್ನೆಲೆ: ಕಡಲತೀರದ ನಾಯಕ ಅಥವಾ ಕೊಂಕಾಣದವನ ಪ್ರೇಮಪ್ರಸಂಗ).

ಕುಂತು ಅಲ್ಲಲ್ಲಿ ಗುಂಪುಗುಂಪಾಗಿ
ಇಟ್ಟು ಸುಟ್ಟುಂಬೆಯ ಮೂಗಂಚಿನಲ್ಲಿ
ತಿರುವುತ್ತ ಕಣ್ಣಾಲೆಗಳ ತುಂಟು ತವಕದಲ್ಲಿ
ಹಿರಿಕಿರಿಯ ಹಳ್ಳಿಹೆಂಗಳೆಯರೆಲ್ಲ
ಸ್ವಚ್ಛಂದ ಹರಿಯಬಿಟ್ಟಿದ್ದರು
ತಮ್ಮ ಹರುಕು ನಾಲಿಗೆಗಳನು.

ಸಿಡಿಮಿಡಿಗೊಂಡ ನನ್ನ ಹಡೆದವ್ವ
ಕೈಸೆಳವೆ ತಿರುವುತ್ತ ಒದರಿದಳು
'ನಿರ್ಧರಿಸಿರುವೆ ನಿನ್ನನಟ್ಟಲು
ಕಡಲತೀರದ ಕಲಿ, ಆ ನಿನ್ನ
ಪ್ರಿಯಕರನ ಬಳಿಯಲ್ಲಿ'.

ಎತ್ತರದ ರಥವೇರಿ
ತೂಗುತ್ತಾ ಬೀಗುತ್ತಾ
ಅವ ಬರುವ ಇಲ್ಲಿಗೆ,
ಕಡಲತೀರದ ಬನದ
ಮಧು ಪುಷ್ಪಪಥದಲಿ
ತರುವುವವನನು ಎಳೆದು
ರಂಗುಕುಚ್ಚಿನ ಕುದುರೆಗಳು.

ಬಿಡು, ಹಳಿಹಳಿದು ಹಿರಿಹಿಗ್ಗಲಿ
ಹಟ್ಟಿಯ ಗುಲ್ಲುಮಲ್ಲಿಯರೆಲ್ಲ.

# ನಣ್ಣನ್ ನೆನೆವ ಕವಿಗಳು

## ೨೧

(ಕವಿ: ಪಾಲೈಪಾಡಿಯ ಪೆರುಂಕುಡುಂಗೋ - ನಟ್ರಿಣೈ ೩೬೧. ಹಿನ್ನೆಲೆ: ನಾಯಿಕೆಯನ್ನು ಆವಳ ಗೆಳತಿ ಸಂತೈಸುತ್ತಾ ಪ್ರಯಾಣದಲ್ಲಿರುವ ನಾಯಕನು ಬೇಗನೇ ಮರಳಿ ಬರುವನು ಮಾತ್ರವಲ್ಲ . ಕೊಂಕಾಣದ ಒಡೆಯನಾದ ನಣ್ಣನ್‌ನ ಬಂಗಾರದ ಗಣಿಯನ್ನು ಹುದುಗಿಸಿಕೊಂಡಿರುವ ಏಟಿಲ್‌ಬೆಟ್ಟವನ್ನು ಕೊಟ್ಟರೂ ಆ ಆಮಿಷಕ್ಕೆ ಒಳಗಾಗದೆ, ಕೂಡಲೇ ಮರಳಿ ಬಂದು ಅವಳ ಸಂತಾಪವನ್ನು ಪರಿಹರಿಸುವನೆಂಬ ಭರವಸೆಯನ್ನು ಕೊಡುವಳು. ಏಟಿಲ್ ಬೆಟ್ಟ ಬಂಗಾರದ ಗಣಿಯನ್ನು ಹೊಂದಿತ್ತೆಂಬುದು, ಇದು ಕೊಂಕಾಣದಲ್ಲಿತ್ತೆಂಬುದು ಅಲ್ಲದೆ ಇದರ ಅಧಿಪತಿ ನಣ್ಣನ್ ಆಗಿದ್ದನೆಂಬುದು ಇಲ್ಲಿ ಗಮನಾರ್ಹ.)

ಓ ಗೆಳತಿ,
ಅವನಿನ್ನು ಪಯಣ
ಮುಂದುವರಿಸನು.

ಚಿರತೆ ಬಣ್ಣದ ನೆಳಲು
ಬೆಳಕಿನ ಮರ ಪೊದೆಗಳಲಿ
ಹಬ್ಬಿರುವ ಹಸಿರು ಲತೆಗಳ
ನೀಳಕರಿಕೋಡಿನ
ಅಪಾರ ಮಸ್ತಕದ
ಕಾಳಿಂದ ಕೋಣಗಳು
ಬಾಯಾಡಿಸಿ ಬೀಳಿಸಿದ
ತರಗೆಲೆಗಳನರಸಿ ಬರುವ
ಹೊಳೆವ ಬಳೆಗಳ ಬಾಲೆಯರ
ನಣ್ಣನ್ ವೇಳಿರನ ಕೊಂಕಾಣ
ಕನಕ ಖನಿಜದ ಏಟಿಲ್
ಗಿರಿಯನಿತ್ತರೂ
ಆ ನಿನ್ನ ಪ್ರಿಯಕರಗೆ
ಅವನು ನಿನ್ನಿಂದ
ದೂರ ಸರಿಯನು.

ಒದ್ದೆ ಕುವಳೈ ಪುಷ್ಪಗಳ
ನಿನ್ನ ಬಟ್ಟಲು ಕಣ್ಣುಗಳ
ದೂಡಿ ದುಃಖಕೋಡಿಯಲಿ
ಇರಬಲ್ಲನೇ ಅವನು ನೆಮ್ಮದಿಯಲಿ?

## ೨೨

(ಕವಿ: ಭರಣರ್ - *ಕುಱುಂತೊಗೈ* ೨೯೨. ಹಿನ್ನೆಲೆ: ಕೊಂಕಾಣದ ಅಧಿಪತಿಯಾದ ನಣ್ಣನ್ ಶೂರನಾದಷ್ಟೇ ಕಡುಕೋಪಿಯಾಗಿದ್ದನು. ಆಮ್ರವೃಕ್ಷ ಅವನ ವಂಶ ಚಿಹ್ನೆ ಆ ವೃಕ್ಷದಿಂದ ನೀರಿಗೆ ಬಿದ್ದು ತೇಲುತ್ತಿದ್ದ ಮಾವಿನಕಾಯಿಯನ್ನು ಕೆರೆಯಲ್ಲಿದ್ದ ಒಬ್ಬ ಅಮಾಯಕ ಬಾಲೆ ತಿಂದುದನ್ನು ಕಂಡು, ಕೋಪದಿಂದ ಅವಳನ್ನು ಕೊಲ್ಲಲು ನಣ್ಣನ್ ಆಜ್ಞೆಮಾಡುವನು. ಅವಳ ತಂದೆ ಐವತ್ತೊಂದು ಆನೆಗಳನ್ನೂ ಅವಳ ತೂಕದ ಬಂಗಾರದ ಪ್ರತಿಮೆಯನ್ನೂ ದಂಡ ಕೊಡುವುದಾಗಿ ಕೇಳಿಕೊಂಡರೂ ಅದಕ್ಕೊಪ್ಪದೆ ಅವಳನ್ನು ಕೊಂದ ಪ್ರಸಂಗ ಇದರ ಹಿನ್ನೆಲೆ.)

ಅದೊಂದು ದಿನ-
ಅತಿಥಿಯಾಗಿ ಬಂದಿದ್ದ ಆ
ನಗುಮುಖದ ಚಲುವನನ್ನು
ಪತ್ತೆಹಚ್ಚಿದಳು
ನನ್ನ ಹಡೆದವ್ವಳು.

ಅಂದಿನಿಂದ -
ಮುಚ್ಚಿಲ್ಲ ಅವಳೊಂದು ಕ್ಷಣವೂ ಕಣ್ಣೆವೆಗಳನ್ನು
ವೈರಿಪಡೆಗಳು ಸಾಲ್ಗೊಂಡು ನಿಂತಿರುವ
ಕದನರಂಗದ ಗಡಿಗ್ರಾಮ[ಣಿ]ಗಳಂತೆ.

ಜಳಕಕೆ ನೀರಿಗಿಳಿದ
ನವಿರು ನೊಸಲಿನ ಬಾಲೆ
ತೇಲಿ ಬರುವ ಮಾಮರದ ಕಾಯನು
ಅರಿಯದೆ ಭೋಗಿಸಿದ ತುಸುತಪ್ಪಿಗಾಗಿ
ಜಾತಿ ಗಜ ತೊಂಬತ್ತೊಂದನು
ಸಮತೂಕದ ಹೊನ್ನ ಬೊಂಬೆಯನು
ಧಿಕ್ಕರಿಸಿ ಅವಳ ಶಿರಕೊಂಡ
[ಕಡುಕೋಪಿ] ನಣ್ಣನನಂತೆ
ಇವಳೂ ತೊಳಲಾಡಲಿ ಬಿಡು
ಸತತ ನರಕ ಯಾತನೆಯಲ್ಲಿ.

## ಕೋಶ ನೆನೆವ ಕವಿಗಳು

### ೨೩

(ಕವಿ: ಅಂಟರ್‌ನಟುಂ ಕಲ್ಲಿಣಾರ್ ಪುಱನಾ. ೨೮೩. ಹಿನ್ನೆಲೆ: ಅಳುಂಪಿನ ಒಬ್ಬ ವೀರನ ಬಗ್ಗೆ ರಚಿಸಿದ ಕವನ. ಇವನು ಕೋಶರ್ ಪಡೆಯಲ್ಲಿದ್ದನೋ ಅಥವಾ ಅವರನ್ನು ವಿರೋಧಿಸಿದ್ದನೋ ಎಂಬುದು ಸ್ಪಷ್ಟಗೊಂಡಿಲ್ಲ. ತುಂಬೈಮಾಲೆಯನ್ನು ಧರಿಸಿ ಹೋರಾಡುವುದು ಶಂಗಂ ವೀರರ ಲಕ್ಷಣವಾಗಿತ್ತು. ಗೆಳೆಯ ಮಡಿದುಬಿದ್ದಾಗ ಸೇಡು ತೀರಿಸಿಕೊಳ್ಳಲು ಹೊರಟ ವೀರನ ಹಿನ್ನೆಲೆ ಗಮನಾರ್ಹ.)

ಮುಸುಕಮುಂಜಾವಿನಲಿ ನೀರ್ಬೆಕ್ಕು
ಸೊಣಕ ಮೀನನು ಹಿಡಿದು
ಬಲಿಕೊಳ್ಳುವುದು;
ಅದರ ನೆಗೆತಕ್ಕೆ
ತಂಪು ತಟಾಕದ ಕಡುಕೆಂಪು
'ಕುರಲಿ'ಲತೆ ಓಲಾಡುವುದು.

ಸರ್ಪವನ್ನೇ ಸೀಗಡಿಮಾಡಿ ಕಬಳಿಸುವ
ರಾಕ್ಷಸ ಮೊಸಳೆಯೊಡನೆ ಸೆಣಸಾಡಿ
ಅದು ನುಸುಳಿ ಹೊರಬರುವುದು.

ಅಳುಂಪಿನ ಈ ಮನುಷ್ಯನ
ಕಾದಾಟಕ್ಕೆ ಕೊನೆಯೆಂಬುದುಂಟೇ?

ಜಯಕಾಗಿ ಜಗಜಗಿಸಿ ಸಂದಣಿಸಿದ
ಕೋಶರ ಪಂಗಡಗಳ
ರಣರಂಗವನ್ನು ಸೂರೆಗೊಳ್ಳುವನು.
ಚಕ್ರದ ಅರದ ಶೂಲಗಳು
ರಾರಾಜಿಸುತಿರಲು ಅವನ ಗೆಳೆಯರೆದೆಗಳಲ್ಲಿ –
ಮರಳದಿನ್ನೆಯ ಮೇಲೆ
ಗೊಂಬೆಯಾಟವನಾಡುವ
ನಳಿನ ತೋಳಿನ ಅವನ
ನೀರೆಯರು ಮುನ್ನಂಗಳದಲ್ಲಿ
ಕಾಯುತಿರಲು –

ತನ್ನ ಮಿತ್ರ ಕೊನೆಯುಸಿರೆಳೆಯುವ ಮುನ್ನ
ಕೆಂಡಮಂಡಲಗೊಂಡು ಅಗಲೆಲೆಗಳ
'ತುಂಬೈ' ಮಾಲೆಯನು
ಮಡಿದ ಶಿರದಮೇಲವನು.
ಅದರ ಪರಿಮಳವ ಸವಿಯಲು
ಹಾರಿಬಂದವು ಝೇಂಕರಿಸುತ
ದಂಡುದಂಡು ಮಧುಕರಗಳು.

೨೪

(ಕವಿ: ಭರಣರ್-ಕುಱುಂತೊಗೈ, ೭೩. ಹಿನ್ನೆಲೆ: ನಾಯಕನ ಪ್ರೇಮಹಸ್ತಕ್ಕೆ ಸ್ಪಂದಿಸದೇ ಬಳಲುತ್ತಿರುವ ನಾಯಿಕೆಯನ್ನು ಕುರಿತು ಬರೆದ ಕಾವ್ಯ. ಇಲ್ಲಿ ಬರುವ ಕೋಶರರು ಕೊಟ್ಟ ಮಾತಿಗೆ ತಪ್ಪದ ಕಲಿಗಳು; ನಣ್ಣನ್ ಅವರನ್ನು ಕೊಂಕಾಣದಿಂದ ಹೊರದೂಡಿ ಅವರ ರಾಜ್ಯವನ್ನು ವಶಪಡಿಸಿಕೊಂಡಿದ್ದನು. ನೋ. 'ನಣ್ಣನ್').

ಅವನ ಎದೆಯಾಶ್ರಯಕ್ಕೆ
ನೀ ಹಂಬಲಿಸುವೆ
ಆದರೆ ಕೊರಗಬೇಡ -
ಪಣತೊಟ್ಟ ಕೋಶರರು
ನಣ್ಣನ್ ನೆಲಹೊಕ್ಕು
ಮಾಮರವ ತುಂಡರಿಸಲು
ಮಾಡಿದ ಮಸಲತ್ತಿನಂತೆ
ನಾವೂ ಮಾಡಬೇಕಾಗಿದೆ
ಒಂದಿಷ್ಟು ಕಠಿಣತರ ಕಸರತ್ತು.

## ೨೫

(ಕವಯಿತ್ರಿ ಅವ್ವೈಯಾರ್ - *ಕುಱುಂತೊಗೈ* ೧೫. ಹಿನ್ನೆಲೆ: ಇಲ್ಲಿ ಪ್ರಸ್ತಾಪಿಸಲಾಪಗೊಂಡಿರುವ ನಾಲ್ಮಡಿಯ (ನಾಲ್ಕು ಭಾಷೆಯನ್ನಾಡಬಲ್ಲ?) ಮತ್ತು ನಲ್ಮಡಿಯ (ಸತ್ಯಮಾತನಾಡುವವರ ಅಥವಾ ಒಂದೇ ಮಾತಿನವರಾದ?) ಕೋಶರರ ವಿವರ ಗಮನಾರ್ಹ.

ಶಂಖವನೂದುತ ಮದ್ದಳೆ ಬಾರಿಸುತ
ಹಳೆಯ ಆಲದ ಮರದಡಿ ನೆರೆದ
ನಾಲ್ಕು ನೆಲೆಗಳ ಕೋಶರರ
ನಲ್ನುಡಿಗಳಂತೆ, ಓ ಗೆಳತಿ
ಬಗೆಬಗೆಯ ತೋಳ್ಬಳೆಗಳ
ನಿನ್ನ ಮಗಳ ಪ್ರೇಮಸಲ್ಲಾಪ
ಮಾತ್ರ ಕಟು ಸತ್ಯ

ವೀರತೊಡರನು ತೊಟ್ಟ
ಎಲೆಯ ಕಡುಕೆಂಪಂಚಿನ
ಧವಳ ಸಬಳದ ಆ
ಪುರುಷಸಂಗದಲಿ
ಅವಳಿರುವುದಂತೂ,
ಅಲ್ಲ ಮಿಥ್ಯ.

## ೨೬

(ಕವಿ ಕಾವಿರಪ್ಪೂಪಟ್ಟಣತ್ತುಕ್ - ಪುಱನಾ. ೧೬೯. ಹಿನ್ನೆಲೆ: ಕೋಶರ್ ಯುವಕರು ಶೂಲವನ್ನು ಬಳಸಿ ಕಾದಾಡುವುದರಲ್ಲಿ ಪ್ರಸಿದ್ಧರಾಗಿದ್ದರು. ಮುರುಕ್ಕು ಮರ (ಕಂಬ)ವನ್ನು ಗುರಿಯಾಗಿಸಿಕೊಂಡು ಅವರು ಅದನ್ನು ರೂಢಿಸಿಕೊಳ್ಳುತ್ತಿದ್ದರೆಂಬ ಅಂಶ ಗಮನಾರ್ಹ).

ನಿನ್ನ ಪಡೆ ಮುನ್ನುಗ್ಗುವಾಗ
ಅದರ ಮುಂಚೂಣಿಯಲಿ ಇದ್ದು
ಹೊಳೆವ ಅಸ್ತ್ರಗಳ ಸೆಳಕನೆದುರಿಸುವೆ;
ಅವರ ದಳ ಮುನ್ನುಗ್ಗುವಾಗ
ನಿನ್ನ ಪಡೆಯ ಬೆಂಗಾವಲಾಗಿದ್ದು
ದೊಡ್ಡ ತೊರೆಯನಡ್ಡಗಟ್ಟುವ
ಬೆಟ್ಟವಾಗಿ ಅದನು ಬೆಂಬಲಿಸುವೆ.

ಕಾರಣ, ಓ ಮಹಾಕಲಿಯೇ,
ನಿನ್ನ ದರುಶನ ತುಂಬಾ ದುರ್ಲಭ.

ನನ್ನ ಸಂಸಾರ ವೇದನೆಯೋ
ಅತ್ಯಂತ ದಾರುಣಕರ
ಕರುಣಿಸು ನನಗಿಂದು
ಭರವಸೆಯ ಮಾತೊಂದ.

ಶೂಲವೀರ ಯುವ ಕೋಶರು
ಶತ್ರು ಸಂಹರಿಸಲು ತೂರಿಯೆಸೆವರು.
ಆ ಅಸ್ತ್ರಗಳಾಘಾತ ಸೈರಿಸುವ
'ಮುರುಕ್ಕು' ಮರದ ಮಲ್ಲಕಂಬದಂತೆ
ಬಹು ಕಾಲ ಬಾಳಲಿ ನಿನ್ನ ಕೀರ್ತಿ ಪ್ರತಾಪ
ವೈರಿಗಳ ಮುಂದೆಂದೂ ಕುಂದದಂತೆ.

# ತಮಿಳು ಪದ ಪರಿಚಯ

| | |
|---|---|
| **ಅಂಕಂಸಿಯವ್** | : ಕಡಲಪಾಲಾಯಿತೆನ್ನಲಾದ ಶಂಗಂ ಸಾಹಿತ್ಯ. |
| **ಅಗಂ (ಅಕಂ,ಅಹಂ, ಅಗನಾನೂಱು)** | : ಶಂಗಂ ಕಾವ್ಯದ ಒಂದು ಪ್ರಭೇದ. ಆಂತರಿಕ, ಹೃದಯದಾಳದ, ಪ್ರೀತಿ, ಪ್ರೇಮ, ವಿರಹ, ಅಗಲುವಿಕೆಗೆ ಸಂಬಂಧಿಸಿದ. |
| **ಅಗತ್ತಿಯನ್** | : ಅಗಸ್ತ್ಯ. ಮೊದಲ ಶಂಗಂ ಕಾಲದಲ್ಲಿದ್ದನೆಂಬ ವ್ಯಾಕರಣಕಾರ. ತೊಲ್ಕಾಪ್ಪಿಯಣಾರ್ ಗುರು. |
| **ಅಗನಾನೂಱು** | : ನೋ. ಅಗಂ. |
| **ಅಡಿಯರ್ ಕುನಲ್ಲೂರ್** | : ಶಿಲಪ್ಪದಿಕಾರಂ ಟೀಕಾಕಾರ. |
| **ಅದಂಕೊಟ್ಟಾಸಾನ್** | : ಶಂಗಂ ಸಭೆಯಲ್ಲಿ ತೋಲ್ಕಾಪ್ಪಿಯಮ್ ವಿರೋಧಿಸಿದ ಅಗತ್ತಿಯನ್ ಶಿಷ್ಯನೆಂದು ಈ ಗ್ರಂಥಕ್ಕೆ ಟೀಕೆ ಬರೆದ ನಚ್ಚಿ ಹೇಳಿರುವನು. ಇವನ ಸಮ್ಮುಖದಲ್ಲಿ ಶಂಗಂ ಸಭೆಯ ಮನ್ನಣೆಯನ್ನು ತೊಲ್ಕಾಪ್ಪಿಯಮ್ ಪಡೆದುಕೊಂಡಿತೆಂದು ಪಣಂಪಾಣಾರ್ ತನ್ನ ಶಿರಪ್ಪಪಾಯಿರಂನಲ್ಲಿ ತಿಳಿಸಿರುವನು. |
| **ಅಟ್ಟಿಡುಕಾದೈ** | : ಶಿಲಪ್ಪದಿಕಾರಂನ ಒಂದು ಅಧ್ಯಾಯ. ಮದುರೈಕಾಂಡದ ವಿಭಾಗ. ನೋ. ಕಟ್ಟುರೈಕಾದೈ. |
| **ಇಡೈಶಂಗಂ** | : ಇಟ್ಟೈಚ್ಚಂಗಂ. ಮೂರು ಶಂಗಂಗಳಲ್ಲಿ ಎರಡನೆಯದು. ನೋ. 'ಮುದಲ್ ಶಂಗಂ'; 'ಕಡೈಶಂಗಂ'. |
| **ಇಮನ್‌ವರಂಬನ್** | : ಚೇರ ಅರಸ ಆದನ್ ಬಿರುದು; ಹಿಮಾಲಯದವರೆಗೆ ಪ್ರಸಿದ್ಧಿ ಪಡೆದವನು ಎಂದು ಅರ್ಥ. 'ಇಮವರ್ ಅನ್‌ಬನ್' ಎಂದೂ ಇವನನ್ನು ಗುರುತಿಸಲಾಗಿದೆ. |
| **ಇಮವರ್ ಅನ್‌ಬನ್** | : ನೋ. ಇಮನ್‌ವರಂಬನ್. |
| **ಇಯಲ್‌ಸೊಲ್** | : ತೊಲ್ಕಾಪ್ಪಿಯಮ್‌ನಲ್ಲಿ ಗುರುತಿಸಲಾದ ನಾಲ್ಕು ಪ್ರಮುಖ ತಮಿಳು ಪ್ರಭೇದಗಳಲ್ಲಿ ಒಂದು. ಸೆನ್ತಮಿಳ್ ಕಟ್ಟಳೆಗಳನ್ನು ಅನುಸರಿಸಿದ ಪ್ರಯೋಗಗಳು. |
| **ಇಲೆಮೂರಿಯಾ** | : 'ಲೆಮೂರಿಯ' ಪದದ ತಮಿಳ ಅವಾಂತರ. ನೋ. ಇಲೈಮೂರಿಯಾಕ್ಕಂಡಮ್. |
| **ಇಲೈಮೂರಿಯಾಕ್ಕಂಡಮ್** | : ಲೆಮೂರಿಯಾ ಭೂಖಂಡ. ಕಡಲು ಕುಡಿಯಿತೆನ್ನಲಾದ ಪುರಾತನ ತಮಿಳರ ಭೂವಲಯ. ನೋ. 'ಕುಮರಿಕ್ಕಂಡಂ', 'ಇಲೆಮೂರಿಯಾ ನಿಲೈ' 'ಇಲೆಮೂರಿಯಾ ಕುಱ್ಱುಯನಿಲೈ' ಮುಂ. |
| **ಇಳಂಗೋ ಅಡಿಗಳ್** | : ಶಿಲಪ್ಪದಿಕಾರಂ ಕರ್ತೃ. ಚೇರ ಅರಸು ಮನೆತನದವನೆಂಬ ನಂಬಿಕೆ. |
| **ಇಳಂಪು** | : ಇಳಂಪೂರಣರ್. ತೊಲ್ಕಾಪ್ಪಿಯಮ್ ಟೀಕಾಕಾರ. ನೋ. ಉರೈಯಾಶಿರಿಯರ್ |
| **ಇಳಂಪೂರಣರ್** | : ನೋ. ಇಳಂಪು. |
| **ಉರೈಯಾಶಿರಿಯರ್** | : ವ್ಯಾಖ್ಯಾನಕಾರ. ಟೀಕಾಕಾರ. (ಉರೈ=ವ್ಯಾಖ್ಯಾನ; ಆಶಿರಿಯರ್ = ಆಚಾರ್ಯರು). |

**ಎಟ್ಟುತ್ತೊಗೈ** : ಎಟ್ಟುತ್ತೊಗೈ. ಎಂಟು ಸಂಕಲನಗಳು. ಕೊನೆಯ ಶಂಗಂ ಸಾಹಿತ್ಯದ ಒಂದು ಪ್ರಮುಖ ಅಂಗ.

**ಎಣ್ಬ** : ಹೇಳುವವರು. ಪ್ರಸ್ತುತಪಡಿಸುವವರು. ಪುರಾತನ ಕವಿಗಳು. ಆಚಾರ್ಯರು.

**ಎರುಮೈನಾಡು** : ಎಮ್ಮೆಗಳ ರಾಜ್ಯ. ತಮಿಳಗಂನ ಉತ್ತರ (ಪಶ್ಚಿಮೋತ್ತರ) ದಿಕ್ಕಿನಲ್ಲಿದ್ದ ನಾಯಕವಾಡಿ. ಇಂದಿನ ಮೈಸೂರು ಪ್ರದೇಶ.

**ಎಟುತ್ತದಿಗಾರಮ್** : ತೊಲ್ಕಾಪ್ಪಿಯಮ್‌ನಲ್ಲಿ ಚರ್ಚಿಸಿರುವ ಮೊದಲ ಅಧ್ಯಾಯ. ಎಟುತ್ತು (ಕಾಗುಣಿತಕ್ಕೆ ಸಂಬಂಧಿಸಿದ)ವಿನ ವಿವರಣೆ.

**ಎಟುತ್ತು** : ಬರವಣಿಗೆ. ಹಸ್ತಾಕ್ಷರ. ನೋ. 'ಎಟುತ್ತದಿಗಾರಮ್'.

**ಐಂದಿರಮ್** : ಐಂದ್ರ ವ್ಯಾಕರಣ ಶಾಖೆ. ತೊಲ್ಕಾಪ್ಪಿಯನಾರ್ ಪ್ರತಿಪಾದಿಸಿದ ವ್ಯಾಕರಣ ವಿಜ್ಞಾನ.

**ಕಟ್ಟುರೈ ಗಾದೈ** : ಶಿಲಪ್ಪದಿಕಾರಂನ ಒಂದು ಅಧ್ಯಾಯ. ನೋ. 'ಅಟ್ಟಿಡುಗಾದೈ'.

**ಕಡಲಾಡು ಗಾದೈ** : ಶಿಲಪ್ಪದಿಕಾರಂನ ಪುಗಾರ್‌ಕಾಂಡಕ್ಕೆ ಸೇರಿದ ಅಧ್ಯಾಯ. ನೋ. ಕಟ್ಟುರೈಕಾದೈ.

**ಕಡೈ ಶಂಗಂ** : ಕೊನೆಯ ಶಂಗಂ. ಮೂರನೆಯ ಮತ್ತು ಅಂತಿಮ ಶಂಗಂ. ನೋ. 'ಮುದಲ್ ಶಂಗಂ', 'ಇಡೈಶಂಗಂ'.

**ಕಲ್ಲಾಡನಾರ್** : ಕಡೈಶಂಗಂ ಕವಿ.

**ಕಲಿತ್ತೊಗೈ** : (ಕಲಿ. ಕಲಿತ್ತೊಕೈ). ಕಲಿ(ಎಂಬ ಛಂದೋಮಟ್ಟು)+ತೊಗೈ (ಸಂಕಲನ). ಈ ಛಂದಸ್ಸಿನಲ್ಲಿ ರಚಿಸಿದ ನೂರಾಐವತ್ತು ಪದ್ಯಗಳ ಸಂಕಲನವನ್ನು ಸಿದ್ಧಪಡಿಸಿದವನು ನಲ್ಲಂತವಣಾರ್.

**ಕಳಿಱ್ರಿ** : ಅಗನಾನೂಱು (ಅಗಂ. ಅಹಂ.)ವಿನ ನೂರಾಇಪ್ಪತ್ತು ಪದ್ಯಗಳನ್ನೊಳಗೊಂಡ ಪೂರ್ವ ಭಾಗ.

**ಕಾಂಜ್ಞೀಪುರಾಣ** : ಕಾಂಚೀ ಕ್ಷೇತ್ರದ ಶಿವಪುರಾಣ. ಇದರ ಕರ್ತೃಗಳು ೧೮ನೆಯ ಶತಮಾನದ ಶಿವಜ್ಞಾನಮುನಿವರ್ ಮತ್ತು ಕಚ್ಚಿಯಪ್ಪ ಮುನಿವರ್.

**ಕಾರ್ತ್ತಿಕೇಯನ್** : ಕಾರ್ತ್ತಿಕೇಯ. ಶಂಗಂ ಸಂದರ್ಭದಲ್ಲಿ 'ಪುರುಳ್'ಗೆ ವ್ಯಾಖ್ಯಾನ ಬರೆದ ನೀಲಕಂಠನ್ ಎಂಬ ಮೂಕ ಮಗು. ಕುಮಾರ(ಕಾರ್ತ್ತಿಕೇಯ)ನ ಅವತಾರ. ಮುಸಿರಿ ಆಸಿರಿಯಾರ್ ನೀಲಕಂಠನ್ ಬರಹಕ್ಕಿಳಿಸಿದ ಇಟ್ಟೈಯನಾರ್ ಅಗಪ್ಪೊರುಳ್‌ಗೆ ಬರೆದ ನಕ್ಕೀರರ್ ವ್ಯಾಖ್ಯಾನ.

**ಕುಂಡಲಕೇಶಿ** : ತಮಿಳು ಪ್ರಾಚೀನ ಪಂಚಕಾವ್ಯಗಳಲ್ಲಿ ಒಂದು. ಉಳಿದ ನಾಲ್ಕು ಶೀವಕಚಿಂತಾಮಣಿ, ಶಿಲಪ್ಪದಿಕಾರಂ, ಮಣಿಮೇಕಲೈ ಮತ್ತು ವಳೈಯಾಪತಿ.

**ಕುಮರಿಕ್ಕಂಡಂ** : ಕುಮಾರಿ ಅಥವಾ ಕನ್ಯಾಕುಮಾರಿಯ ಆಚೆಗೆ ವಿಸ್ತರಿಸಲಾಗಿತ್ತೆನ್ನಲಾದ ಪುರಾತನ (ತಮಿಳು) ಭೂವಲಯ. 'ಕುಮಾರಿ' ಎಂಬ ನದಿ ಅಲ್ಲಿ ಹರಿಯುತ್ತಿತ್ತೆನ್ನುವ ವಾದವಿದೆ. ಈ ಭೂಭಾಗ ಕಡಲಿನಲ್ಲಿ ಕೊಚ್ಚಿಹೋಯಿತೆನ್ನಲಾಗಿದೆ.

**ಕುಱುಂಜ್ಞೆ** : ಹನ್ನೆರಡು ವರ್ಷಗಳಿಗೊಮ್ಮೆ ಅರಳುವ ಬೆಟ್ಟದ ಹೂ. ಶಂಗಂ ಕವಿಗಳು ಗುರುತಿಸಿದ ಐದು ಭೌಗೋಳಿಕ ವಲಯ(ತಿಣೈ)ಗಳಲ್ಲಿ ಇದು ಎರಡನೆಯದು.

ಉಳಿದವು ಮುಲ್ಲೈ, ಪಾಲೈ, ಮರುತಂ ಮತ್ತು ನೈತಿಲ್. ನೀಲಗಿರಿ ಮತ್ತು ಪಳನಿ ಬೆಟ್ಟಸಾಲಿನಲ್ಲಿ ಇಂದಿಗೂ ಹನ್ನೆರಡು ವರ್ಷಗಳಿಗೊಮ್ಮೆ ಸಮೃದ್ಧವಾಗಿ ಅರಳುವ ಹೂ. ಪ್ರೇಮಿಗಳ ತಾಣ.

ಕುಱುಂದೊಗೈ : (ಕುಱುಂ. ಕುಱುಂತೊಕೈ). ಪೂರಿಕ್ಕೋ ಸಂಕಲಿಸಿದ ನಾಲ್ಕುನೂರಾಎರಡು ಪದ್ಯಗಳನ್ನೊಳಗೊಂಡ ಎಟ್ಟುತ್ತೊಗೈಗಳಲ್ಲಿ ಒಂದು.

ಕೂತ್ತು : ಕಡಲಿನಲ್ಲಿ ಕೊಚ್ಚಿಹೋಯಿತೆನ್ನಲಾದ ಪುರಾತನ ಶಂಗಂ ಸಾಹಿತ್ಯ.

ಕೈಕ್ಕಿಳೈ : ಏಳು ಅಗತ್ತಿಣೈಗಳಲ್ಲೊಂದು. ಏಕಮುಖ ಪ್ರೀತಿ.

ತಮಿಳುಬ್ರಾಹ್ಮೀ : ಕ್ರಿ.ಪೂ. ೨ನೆಯ ಶತಮಾನದಿಂದ ಕ್ರಿ.ಶ. ೪ನೆಯ ಶತಮಾನದವರೆಗೂ ತಮಿಳುನಾಡಿನ (ಕೆಲವು ಗುಹೆಗಳಲ್ಲಿ) ತಮಿಳು ಭಾಷೆಯ ಶಾಸನಗಳಿಗೆ ಬಳಸಲಾದ ಲಿಪಿ.

ತಿಣೈ : ಭೌಗೋಳಿಕ ಅಥವಾ ಪ್ರಾದೇಶಿಕ ವೈಶಿಷ್ಟ್ಯತೆ. ಒಟ್ಟು ಗುರುತಿಸಲಾದ ಏಳು ತಿಣೈಗಳಲ್ಲಿ ಐದು.

ತಿಣೈನಿಲೈವೈಪೆಯರ್ : ತಿಣೈ ಜನಾಂಗ.

ತಿಣೈಮಯಕ್ಕಮ್ : ಒಂದು ತಿಣೈ ವೈಲಕ್ಷಣಗಳು ಮತ್ತೊಂದರಲ್ಲಿ ಸಹಜವಾಗಿ ಸಂಗಮಗೊಳ್ಳುವ ಕ್ರಿಯೆ.

ತಿರಿಸೊಲ್ : ತೊಲ್ಕಾಪ್ಪಿಯಮ್‌ನಲ್ಲಿ ಗುರುತಿಸಲಾದ, ಸಾಹಿತ್ಯದಲ್ಲಿ ಮಾತ್ರ ಬಳಕೆಯಾದ ತಮಿಳು ದೇಸೀ ಪದಗಳು

ತಿಸೈಸೊಲ್ : ತಮಿಳಗಂ ಗಡಿ ಮತ್ತು ಅದರಾಚೆ ಪ್ರಚಾರದಲ್ಲಿದ್ದ ಹನ್ನೆರಡು ಬಗೆಯ ಪದ ಬಳಕೆ.

ತೆನ್‌ಕುಮರಿ : ದಕ್ಷಿಣ ಕುಮರಿ. ತಮಿಳಗಂನ ದಕ್ಷಿಣಗಡಿ.

ತೆನ್‌ಮಧುರೈ : ದಕ್ಷಿಣ ಮಧುರೆ. ಪುರಾತನ ಪಾಂಡ್ಯರ ರಾಜಧಾನಿಪಟ್ಟಣ. ಇದು ಕಡಲಿನಲ್ಲಿ ಕೊಚ್ಚಿಹೋದ ಐತಿಹ್ಯವಿದೆ.

ತೆಯ್ವಚ್ಚಿಲೈಯಾರ್ : ತೊಲ್ಕಾಪ್ಪಿಯಮ್‌ನ ಎರಡನೆಯ ಭಾಗ. ಸೊಲ್ಲದಿಗಾರಂಗೆ ಬರೆದ ಟೀಕಾಕಾರನ ಹೆಸರು.

ತೊಗೈ (ತೊಕೈ) : ಸಂಕಲನ. ಉದಾ. ಎಟ್ಟುತ್ತೊಗೈ.

ತೊಲ್ : ಪ್ರಾಚೀನ. ಪ್ರಸಿದ್ಧ. ಒಂದು ಕಾವ್ಯ ಪ್ರಭೇದ. ನೋ. ತೊಲ್ಕಾಪ್ಪಿಯಮ್.

ತೊಲ್ಕಾಪ್ಪಿಯಮ್ : ತಮಿಳಿನ ಅತ್ಯಂತ ಪ್ರಾಚೀನ ಲಕ್ಷಣ ಗ್ರಂಥ. ಇದರ ಕರ್ತೃ ತೊಲ್ಕಾಪ್ಪಿಯನಾರ್.

ನಟ್ರಿಣೈ (ನಱ್ರಿಣೈ) : ಶಂಗ ಸಂಕಲನ

ನಚ್ಚಿ : ನೋ. ನಚ್ಚಿನಾರ್‌ಕ್ಕಿನಿಯಾರ್.

ನಚ್ಚಿನಾರ್‌ಕ್ಕಿನಿಯಾರ್ : ಸುಮಾರು ೧೩-೧೪ನೆಯ ಶತಮಾನದಲ್ಲಿದ್ದ ವ್ಯಾಖ್ಯಾನಕಾರ. ತೊಲ್ಕಾಪ್ಪಿಯಮ್‌ಗೆ ಈತ ಬರೆದ ಟೀಕೆ ಪ್ರಸಿದ್ಧ.

ನಣ್ಣೂಲ್ (ನನ್ನೂಲ್) : ೧೨ನೆಯ ಶತಮಾನದಲ್ಲಿ ರಚನೆಯಾದ ಒಂದು ವ್ಯಾಕರಣ ಗ್ರಂಥ. ಇದರ ಕರ್ತೃ ಜೈನ ಪವನಂದಿ.

ನಿಲಂತಿರುಂತಿರುವನ್ : ಪಾಂಡ್ಯರಾಜ. ಇವನ ಆಸ್ಥಾನದಲ್ಲಿ 'ಶಂಗಂ ಕವಿಗಳು ತೊಲ್ಕಾಪ್ಪಿಯಮ್ ವಿಮರ್ಶಿಸಿ ಅಧಿಕೃತಗೊಳಿಸಿದರೆಂಬ ಐತಿಹ್ಯವಿದೆ.

ನೀಲಕಂಠನ್ : ಮುಸಿರಿ ಆಸಿರಿಯಾರ್ ನೀಲಕಂಠನ್. ಪಾಂಡ್ಯರಾಜನ ಆಸ್ಥಾನದಲ್ಲಿ ಪೊರುಳ್‌ನ ವ್ಯಾಖ್ಯಾನ ರಚಿಸಿದನೆಂಬ ಐತಿಹ್ಯವಿದೆ. ನೋ. ಕಾರ್ತ್ತಿಕೇಯನ್.

ನೆಯ್ದಲ್ : ನೀರಿನಲ್ಲಿ ಅರಳುವ ಹೂ. ತಿಣೈಗಳಲ್ಲಿ ಒಂದನ್ನು ಪ್ರತಿನಿಧಿಸುವ ಪುಷ್ಪ ಸಮುದ್ರ ತೀರದ ಪ್ರೇಮಿಗಳ ತಾಣ.

ಪಕ್ರುಳಿ : (ಪಹ್ರುಳಿ). ಕಡಲಿನಲ್ಲಿ ಮುಳುಗಿಹೋದ ತಮಿಳರ ಭೂಪ್ರದೇಶದಲ್ಲಿತ್ತೆನ್ನಲಾದ ಒಂದು ನದಿ. ಅಂದಿನ ಕುಮಾರಿ ನದಿಯ ದಕ್ಷಿಣಕ್ಕೆ ಇದು ಹರಿಯುತ್ತಿತ್ತೆಂದು ನಂಬಿಕೆ.

ಪಣಂಪಾರಣಾರ್ : ವೈಯಾಕರಣಿ. ತೊಲ್ಕಾಪ್ಪಿಯಮ್‌ಗೆ 'ಶಿರಪ್ಪುಪಾಯಿರಂ' ಅಂದರೆ ಪದ್ಯ ಮುನ್ನುಡಿ ಬರೆದವನು. ಈತ ಒಬ್ಬ ವ್ಯಾಕರಣಕಾರನಾಗಿದ್ದನೆಂದು ೧೩ನೆಯ ಶತಮಾನದ ಮಯಿಲೈನಾದನ್ ತಿಳಿಸುವನು.

ಪತ್ತು : ನೋ. ಪತ್ತುಪಾಟ್ಟು

ಪತ್ತುಪಾಟ್ಟು : ಹತ್ತು ಹಾಡುಗಳು. ಶಂಗಂ ಸಾಹಿತ್ಯದ ಒಂದು ಭಾಗ

ಪದಿನೇಟ್ಕೀರಿಣಕ್ಕು : ಹದಿನೇಳು ಕಿರು ಕವನಗಳು.

ಪದಿಟ್ರುಪತ್ತು : ಹತ್ತು ಚೇರ ರಾಜರನ್ನು ಹೊಗಳಿ ಬರೆದ ಹಾಡುಗಳು. ಪುರಂ ಪ್ರಭೇದಕ್ಕೆ ಸೇರಿದ ಸಾಹಿತ್ಯ.

ಪರಂ : ಪರಜ್ಞ್ತಿಮಣಿವರಂ ಎಂಬ ಕವಿಯ ಹೆಸರು. ತಿರುವಿಳಯಾಕಲ್ ಎಂಬ ಶಿವಲೀಲೆಯ ಕರ್ತೃ.

ಪರಿಶೈ : ಕಡಲಿನಲ್ಲಿ ಕೊಚ್ಚಿಹೋಯಿತೆನ್ನಲಾದ ಪುರಾತನ ಶಂಗಂ ಸಂಕಲನ.

ಪಾಲೈ : ಮರುಭೂಮಿ. ಬಂಜರು ಭೂಮಿ. ಬೇಸಿಗೆಯಲ್ಲಿ ಅರಳುವ ಹೂ. ತಿಣೈಗಳಲ್ಲಿ ಒಂದು.

ಪುಱಂ. : ನೋ. ಪುಱನಾನೂಱು.

ಪುಱನಾನೂಱು : ಶಂಗಂ ಸಾಹಿತ್ಯದ ಎರಡು ಪ್ರಧಾನ ಪ್ರಭೇದಗಳಲ್ಲಿ ಒಂದು. ಇನ್ನೊಂದು ಅಹನಾನೂಱು. ಬಾಹ್ಯ ಪ್ರಪಂಚ, ವೀರತ್ವ, ಶೌರ್ಯ, ಮುಂತಾದವನ್ನು ಪ್ರತಿಬಿಂಬಿಸುವ ಕಾವ್ಯ. ನಾಲ್ಕುನೂರು ಪದ್ಯಗಳ ಸಂಕಲನ.

ಪೂರಿಕ್ಕೋ : ನೋ. ಕುಱುಂದೊಗೈ.

ಪೇರಾಶಿರಿಯನ್ : ತೊಲ್ಕಾಪ್ಪಿಯಮ್‌ನ 'ಪೊರುಳದಿಗಾರಂ'ನ ಟೀಕಾಕಾರ.

ಪೆರಿಯಪುರಾಣಂ : ಅರವತ್ತುಮೂರು ನಾಯನ್ಮಾರ್ (ಶೈವ ಸಾಧಕ)ರನ್ನು ಕುರಿತು ರಚಿಸಿದ ತಮಿಳಿನ ಮೇರು ಕೃತಿ. ಇದರ ಕರ್ತೃ ಸೇಕ್ಕಿಳಾರ್. ಕರ್ನಾಟಕದಲ್ಲಿ ಇವರನ್ನು 'ಅರವತ್ತುಮೂರು ಪುರಾತನರು' ಎಂದು ಗುರುತಿಸಲಾಗಿದೆ.

**ಪೆರುಂ.** : ಪೆರುಂಪಟ್ರಿಪ್ಪುಲಿಯೂರ್ ಎಂಬ ಕವಿ.

**ಪೆರುಂಗದೈ** : ವಡ್ಡಕಥಾ. ಪಾಕೃತ 'ಬೃಹತ್ಕಥೆ'ಯ ತಮಿಳು ರೂಪ. ಕರ್ತೃ 'ಕೊಂಗುವೇಟಿರ್'.

**ಪೆರುಂದಿಣೈ** : ಏಳು ಅಗತ್ತಿಣೈಗಳಲ್ಲಿ ಒಂದು. ವಿಷಮ ಜೋಡಿಗಳ ಪ್ರೇಮ ಪ್ರಸಂಗ.

**ಪೊರುವರ್‌ಆಟ್ರುಪಡೈ** : ಚೋಳ ಕರಿಕಾಲನನ್ನು ಕುರಿತು ಮಡತ್ತಾಮಕ್ಕಣ್ಣಿಯಾರ್ ರಚಿಸಿದ, ಪುಱಂ. ಪ್ರಭೇದ, ಪತ್ತುಪಾಟ್ಟುವಿನ ಒಂದು ಭಾಗ

**ಪೊರುಟ.** : ನೋ. ಪೊರುಳದಿಗಾರಮ್.

**ಪೊರುಟದಿಗಾರಮ್** : ತೊಲ್ಕಾಪ್ಪಿಯಮ್ ಕೊನೆಯ ಅಧ್ಯಾಯ. ಪೊರುಳಿಗೆ (ಜೀವನ ಮೀಮಾಂಸೆ, ಅಂದರೆ ವಸ್ತು, ವಿಷಯ, ಸಾರ, ಅರ್ಥ, ಅಸ್ತಿತ್ವ, ಮೊದಲಾದವಕ್ಕೆ) ಸಂಬಂಧಿಸಿದ್ದು.

**ಮಣಿಮೇಗಲೈ** : (ಮಣಿಮೇಕಲೈ). ತಮಿಳಿನ ಖ್ಯಾತ ಮಹಾಕಾವ್ಯ ಇದರ ಕರ್ತೃ ಬೌದ್ಧ ಶೂಲವಣಿಗನ್ ಸಾತ್ತನಾರ್.

**ಮದುರೈಕಚ್ಚಿ** : ಪಾಂಡ್ಯ ನಡುಂಜಳಿಯನನ್ನು ಕುರಿತು ಮಾಂಗುಡಿ ಮರುದನಾರ್ ಬರೆದ ಪತ್ತುಪಾಟ್ಟು ಸಂಕಲನದಲ್ಲಿ ಒಂದು.

**ಮಯಿಲೈನಾದರ್** : ೧೩-೧೪ನೆಯ ಶತಮಾನದಲ್ಲಿ ಪವನಂದಿಯ 'ನನ್ನೂಲ್'ಗೆ ಟೀಕೆಯನ್ನು ಬರೆದವನು. ನೋ. ನನ್ನೂಲ್.

**ಮರುದಂ** : ಪಂಚತಿಣೈಗಳಲ್ಲಿ ಒಂದು. ನದೀತೀರದಲ್ಲಿ ಅರಳುವ ಹೂ. ಒಕ್ಕಲು, ಹೊಲ-ಗದ್ದೆ ಪ್ರದೇಶವನ್ನು ಸೂಚಿಸುವ ಪದ. ಪ್ರೇಮಿಗಳ ಕಲಹ ಸಲ್ಲಾಪದ ಸಂಕೇತ.

**ಮಲೈ ಪಡುಕಡಾಮ್** : ಪುಱಂ. ಪ್ರಭೇದದ, ನಣ್ಣನ್ ಕುರಿತು ರಚಿಸಿದ, ಪತ್ತುಪಾಟ್ಟುವಿನ ಕಾವ್ಯ; ಇದರ ಮತ್ತೊಂದು ಹೆಸರು 'ಕೂತ್ತಲಾಟ್ರುಪಡೈ'.

**ಮುಡಮೋಸಿರಿಯಾರ್** : ಆಯ್ ಅಂಡಿರರ್ ಅರಸನ ಆಶ್ರಯದಲ್ಲಿದ್ದ ಕವಿ.

**ಮುದಲ್ ಶಂಗಂ** : ಮೊದಲನೆಯ ಶಂಗಂ. ಪುರಾತನ ಪಾಂಡ್ಯರಾಜ್ಯದ ಮದುರೈ (ತೆನ್‌ಮದುರೈ)ಯಲ್ಲಿತ್ತು, ಕಾಲಕ್ರಮದಲ್ಲಿ ಕಡಲಿನಲ್ಲಿ ಕೊಚ್ಚಿಹೋಯಿತು, ಎನ್ನಲಾದ ಶಂಗಂ ಕವಿ ಸಮೂಹ. ನೋ. 'ಇಡೈಶಂಗಂ', 'ಕಡೈಶಂಗಂ'.

**ಮುಲ್ಲೈ** : ತಿಣೈಗಳಲ್ಲಿ ಒಂದು. ಕಾಡು-ಹುಲ್ಲುಗಾವಲು ಪ್ರದೇಶದಲ್ಲಿ ಅರಳುವ ಹೂ. ಕಾತರ-ಚಿಂತೆ ಹುಟ್ಟಿಸುವ ಪರಿಸರ.

**ಮುಶಿರಿಯಾಶಿರಿಯರ್ ನೀಲಕಂಠನ್** : ಮೌಖಿಕವಾಗಿ ಪ್ರಸಾರದಲ್ಲಿದ್ದ 'ಇಱೈಯನಾರ್ ಅಗಪ್ಪೊರುಳ್' ಎಂಬ ವ್ಯಾಕರಣ ಸೂತ್ರಗಳನ್ನು ಸು.೭ನೆಯ ಶತಮಾನದಲ್ಲಿ ಲಿಖಿತಕ್ಕಿಳಿಸಿದವನೆಂದು ನಂಬಲಾಗಿದೆ. ಈ ಪ್ರಸ್ತಾಪ ನಕ್ಕೀರರ್ (ಬಹುಶಃ ಮೊದಲ ಸಹಸ್ರಮಾನದ ಅಂತ್ಯದಲ್ಲಿ) ರಚಿಸಿದ ವ್ಯಾಖ್ಯಾನದಲ್ಲಿ ಬರುವುದು.

**ಮೋಟಿಬ** : ಪುರಾತನ ಕವಿಗಳು. ನೋ. ಎಣ್ಬ

**ವಟ್ಟೆಳುತ್ತು** : ಕ್ರಿ.ಶ. ೪ನೆಯ ಶತಮಾನದ ನಂತರ ತಮಿಳುನಾಡಿನಲ್ಲಿ ಹೆಚ್ಚು ಪ್ರಸಾರಕ್ಕೆ ಬಂದ ಲಿಪಿ. ವೃತ್ತಾಕಾರ ಅಕ್ಷರಗಳು.

**ವಡವೊೞಿಯಾಳರ್** : ಉತ್ತರದ ಭಾಷಿಕರು. ವಡ(ವಡುಗ)=ಉತ್ತರ; ಆಳರ್ = ಜನರು.

**ವಡಸೊಲ್** : ಉತ್ತರದವರ ಭಾಷೆ; ವಡ=ಉತ್ತರ; ಸೊಲ್=ಮಾತು.

**ವರಿ** : ಕಡಲುಪಾಲಾಯಿತೆನ್ನಲಾದ ಪುರಾತನ ತಮಿಳು ಕೃತಿ.

**ವಳೈಯಾಪತಿ** : ಪುರಾತನ ತಮಿಳು ಪಂಚಕಾವ್ಯಗಳಲ್ಲಿ ಒಂದು; ಇದರ ಕೆಲವು ಭಾಗಗಳು ಮಾತ್ರ ಈಗ ಲಭ್ಯ. ನೋ. 'ಶೀವಕಚಿಂತಾಮಣಿ', 'ಕುಂಡಲಕೇಶಿ'.

**ವೇಣರ್ ಗಾದೈ** : ಮೂರು ವಿಭಾಗಗಳನ್ನು ಮೂವತ್ತು ಅಧ್ಯಾಯಗಳನ್ನು ಒಳಗೊಂಡ ಶಿಲಪ್ಪದಿಗಾರಂ ಪುಗಾರ್‌ಕಾಂಡದ ಭಾಗ.

**ಶಂಗಂ** : ಸಂಘ. ಬೌದ್ಧರಿಂದ (ಜೈನರಿಂದ) ಎರವಲು ಪಡೆದ ಪದ. ಪುರಾತನ ತಮಿಳರು ತಮ್ಮ ಕವಿ ಸಮೂಹವನ್ನು 'ಕೂಡಲ್' ಪದದಿಂದ ಗುರುತಿಸಿದ್ದರು - ಆನಂತರದ ವ್ಯಾಖ್ಯಾನಕಾರರು ಅದನ್ನೇ 'ಶಂಗಂ' 'ಸಂಗಂ' 'ಸಂಘ' ಎಂಬ ಪದಗಳಿಂದ ಕ್ರಿ.ಶ. ೭-೮ನೆಯ ಶತಮಾನದ ತರುವಾಯ ಗುರುತಿಸಿದರು.

**ಶಿಲಪ್ಪದಿಗಾರಮ್** : ಪುರಾತನ ತಮಿಳು ಮಹಾಕಾವ್ಯಗಳಲ್ಲಿ ಒಂದು. ಇಳಂಗೋ ಅಡಿಗಳ್ ಇದರ ಕರ್ತೃ.

**ಶಿವಕಚಿಂತಾಮಣಿ** : ಪುರಾತನ ತಮಿಳು ಪಂಚ ಕಾವ್ಯಗಳಲ್ಲಿ ಒಂದು. ನೋ. ಶಿಲಪ್ಪದಿಗಾರಮ್.

**ಶಿಱಪ್ಪುಪಾಯಿರಂ** : ಮುನ್ನುಡಿ ಸ್ವರೂಪದ ಪದ್ಯ. ತೊಲ್ಕಾಪ್ಪಿಯಮ್‌ಗೆ ಪಣಂಪಾರಣಾರ್ ಬರೆದದ್ದು.

**ಶಿಟ್ರಿಸೈ** : ಕಡಲಲ್ಲಿ ಕೊಚ್ಚಿಹೋಯಿತೆನ್ನಲಾಗುವ ಪುರಾತನ ಶಂಗಂ ಕೃತಿ.

**ಸೆಂಗುಟ್ಟುವನ್** : ಶಿಲಪ್ಪದಿಗಾರಂನಲ್ಲಿ ಬರುವ ಚೇರ ಅರಸ. ಹಿಮಾಲಯದವರೆಗೂ ಖ್ಯಾತಿ ವಿಸ್ತರಿಸಿಕೊಂಡವನು. ಇವನ ಸೋದರ(?) ಇಳಂಗೋ ಅಡಿಗಳ್.

**ಶೆಂಗೋನನ್ನೈ ಚಲುವು** : ಮೊದಲ ಶಂಗಂ ಕಾಲಕ್ಕೆ ಸೇರಿದ್ದ ಕೃತಿಯೆಂದು ೧೯೦೨ರಲ್ಲಿ ಖೊಟ್ಟಿ ಖ್ಯಾತಿ ಪಡೆದ ಕೃತಿ.

**ಶೆಯ್ಯುಳ್ ಇಯಲ್** : ಛಂದಶಾಸ್ತ್ರ

**ಸೆನ್ದಮಿಳ್** : ಶುದ್ಧ ತಮಿಳು. ಇಂತಹ ಮಾಧ್ಯಮದಲ್ಲಿ ವ್ಯವಹರಿಸುತ್ತಿದ್ದ ಜನಾಂಗ, ಪ್ರದೇಶ. ತಮಿಳಗಂನ ಹೃದಯ ಭಾಗ.

**ಸೊಲ್** : ಮಾತು. ಭಾಷೆ ಹೇಳಿಕೆ. ತೊಲ್ಕಾಪ್ಪಿಯಮ್ ಒಂದು ಭಾಗವನ್ನು ಸೊಲ್ಲದಿಗಾರಂ ಎಂದು ಕರೆಯಲಾಗಿದೆ. ಇದು 'ರೂಪವಿಜ್ಞಾನ'ಕ್ಕೆ ಸಂಬಂಧಪಟ್ಟದ್ದು.

# ಆಕರ ಗ್ರಂಥಗಳು


ಕಲಬುರ್ಗಿ, ಎಂ.ಎಂ., *ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ*, ಧಾರವಾಡ, ೧೯೭೩.

ಕಾರ್ಲೋಸ್, *ತಮಿಳು ಕಾವ್ಯಮೀಮಾಂಸೆ* (ಕನ್ನಡ ಅನುವಾದ: ಸುಚಿತ್ರ ಲತ, ಎಸ್. ಮತ್ತು ಮೀರಾ, ಜಿ.), ಹೆಗ್ಗೋಡು, ೧೯೯೩.

ಕೃಷ್ಣಮೂರ್ತಿ, ಕೆ., *ನೃಪತುಂಗ ದೇವಾನುಮತಂ ಶ್ರೀ ವಿಜಯ ಪ್ರಭೂತಂ ಕವಿರಾಜಮಾರ್ಗಂ*, ಬೆಂಗಳೂರು, ೧೯೮೩.

ಪುಣಿಂಚತ್ತಾಯರು, *ಕಾವೇರಿ ಪ್ರಾಚೀನ ತುಳುಕಾವ್ಯ*, ಉಡುಪಿ, ೧೯೧೭.

ಚಿಟಗುಪ್ಪಿ ಭೀಮಸೇನರಾವ್, *ಕವಿರಾಜಮಾರ್ಗ ಪ್ರಶಸ್ತಿ*, ಧಾರವಾಡ, ೧೯೭೨.

ತರಿಕೆರೆ, ರಹಮತ್ (ಸಂ.), *ಕವಿರಾಜಮಾರ್ಗ: ಸಾಂಸ್ಕೃತಿಕ ಮುಖಾಮುಖಿ*, ಹಂಪಿ, ೨೦೦೦., ಧಾರವಾಡ, ೧೯೭೩.

ದೇವರಕೊಂಡಾರೆಡ್ಡಿ, *ಲಿಪಿಯ ಹುಟ್ಟು ಮತ್ತು ಬೆಳವಣಿಗೆ*, ಬೆಂಗಳೂರು, ೨೦೦೨.

ಪಾಠಕ್, ಕೆ.ಬಿ., *ನೃಪತುಂಗದೇವ ವಿರಚಿತ ಕವಿರಾಜಮಾರ್ಗ*, ಬೆಂಗಳೂರು, ೧೮೯೮.

ಪೊನ್ನ *ಅಜಿತತೀರ್ಥಂಕರ ಪುರಾಣಂ*, ಸಂ. ಸಣ್ಣಯ್ಯ, ಬಿ.ಎಸ್ ಮತ್ತು ರಾಮೇಗೌಡ, ಬೆಂಗಳೂರು, ೨೦೦೪.

– *ಶಾಂತಿಪುರಾಣಂ*, ಸಂ. ನಾಗರಾಜಯ್ಯ, ಹಂಪ, ಬೆಂಗಳೂರು, ೧೯೮೨.

ಮರುಳಯ್ಯ, ಸಾ.ಶಿ., *ಕನ್ನಡ ಭಾಷೆಯ ಚರಿತ್ರೆ*, ಬೆಂಗಳೂರು, ೧೯೯೯.

ಮುಳಿಯ ತಿಮ್ಮಪ್ಪಯ್ಯ, *ಕವಿರಾಜಮಾರ್ಗ ವಿವೇಕ*, ಮೈಸೂರು, ೧೯೭೩.

ವೆಂಕಟ ರಾವ್, ಎ. ಮತ್ತು ಶೇಷ ಐಯಂಗಾರ್, *ಕರ್ನಾಟಕ ಕವಿರಾಜಮಾರ್ಗಂ* (ಪುಮು.), ಪ್ರಧಾನ ಸಂ. ಕಿದಿಲಾಯ ಶಂಕರ್, ಮದ್ರಾಸ್, ೧೯೭೩.

ಸೀತಾರಾಮಯ್ಯ, ಎಂ.ವಿ. (ಸಂ.), *ಕವಿರಾಜಮಾರ್ಗ (ಕವಿಕಾವ್ಯ ಪರಂಪರೆ-೧)*, ಬೆಂಗಳೂರು, ೧೯೭೩.

– *ಶ್ರೀ ವಿಜಯ ಕೃತ ಕವಿರಾಜಮಾರ್ಗ*, ಬೆಂಗಳೂರು, ೧೯೯೪.

ಸುಬ್ಬಣ್ಣ ಕೆ.ವಿ., *ಕವಿರಾಜಮಾರ್ಗ ಮತ್ತು ಕನ್ನಡ ಜಗತ್ತು*, ಹೆಗ್ಗೋಡು,?

ಉಪಾಧ್ಯ, ಜಿ.ಎನ್., *ಗೋದಾವರಿವರಂ ಇರ್ದ ಕನ್ನಡನಾಡು*, ಮುಂಬಯಿ, ೨೦೦೨.


**Books in English**


Aiyangar, P.T.S., *History of the Tamils*, Madras, 1929.

Aiyangar, Srinivasa, *Tamil Studies or Essays on the History of the Tamils People, Language, Religion, and Literature*, Madras, 1914.

Albert, D., *Tolkappiyam-Phonology and Morphology*, Chennai, 1985

Appandurai, K., *Kumarik Kaṇṭam Allatu Katal Koṇṭa Teṇṇatu [Kumārikkaṇṭam Or, the southern land seized by the ocean]*, Chennai, 1941.

Appuswami, P.N., *A Bunch of Essays on Tamil Literature*, Chennai, 2002.

Aravamuthan, T.G., "The Oldest Account of the Tamil Academies", *Journal of Oriental Research,* 4, (1930), Pp. 183-201; 289-317.

Ashar, F.M., and Gai, G.S., (ed.), *Indian Epigraphy: Its bearing on the History of Art,* New Delhi, 1985.

Ashe, G., *Atlantis: Lost Lands, Ancient Wisdom,* London, 1992.

Balambal, V., *Studies in the History of the Sangam Age,* Delhi, 1998.

Besant, Annie., *the Padigree of Man: Four Lectures Delivered at the Twenty-eighth Anniversary Meetings of the Theosophical Society, at Adyar, December, 1903,* Benares-London, 1904.

Bharati, Somasundara, S., *Tamil Classics and Tamilakam,* Madras, 1912.

Blanfort, H.F., *The Rudiments of Physical Geography...,* Calcutta, 1873.

Blavatsky, H.P., "A Land of Mystery", *The Theosophist,* I (August, 1880), Pp. 159-61, 170-173, 224-227, 277-279.

Blood, H., "The Peaks of Lemuria", *Geographical Magazine,* 29, No.10 (1957), Pp. 516-522.

Browning, K., *Lemaria and Atlantis: Two Lost Continents,* London, 1924.

Burnell, A.C., *On the Aindra School of Sanskrit Grammarians: Their Place in the Sanskrit and Subordinate Literatures,* Mangalore Based Mission Book, 1875.

Burrow, T., and Emaneau, E.B., *Dravidian Etymological Dictionary,* OUP, (2nd ed.), 1984.

Caldwell, R., *A Comparative Grammar of the Dravidian or South Indian Family of Languages,* (rp. 1956).

Chellam, V.T., *Now Light on the Early History of Tamilnadu,* Trichy, 1981.

Churchward, F., *The Lost Continent of Mu: The Motherland of Man,* (rp. Be. Books, 1994).

Coningham, R.A.E., and Alchin, F.R., et. al. "Passage to India? Anuradhapura and Early use of Brahmi Script", *Cambridge Archaeological Journal,* VI, (1).

Cornell, F., *Lost Lands and Forgotten People,* Newyork, 1978.

Dakshinamurthy A., *The Naṟṟinai four Hundred,* Chennai, 2001.

Davis, C., *An Historical Atlas of the Indian Peninsula,* (rp.), OUP, 1949.

Devadhar, C.R., (ed.), *Works of Kalidasa,* Vol. II, Delhi, 1986.

Devasikhamani, S.K., *The Tamil and Their Language,* Tiruchirapalli, 1919.

Dikshitar, V.R., *Iḷankovatikaḷ Cilappadikāram, Translation into English with an Introduction and Notes,* OUP, 1939,
- *Studies in Tamil Literature and History,* Madras, 1947.

Donnelly, I., *Atlantis: The Antediluvian World,* Harga Br. 1882.

Dundes, A., (ed.), *The Flood Myth-Tamil,* Berkeley, 1988.

Forster, E.M., *A Passage to India,* (rp.), Newyork, 1984.

Gai, G.S., *Inscriptions of the Early Kadambas,* Delhi, 1996.

Gardiner, J.S., "The Indian Ocean", *The Geographical Journal* 28, no. 4, (1906), Pp. 313-332.
"The John Marry Expedition to the Indian Ocean", *Ibid,* 81, (1933), Pp. 570-73.

Gopal, B.R., (ed.), *Corpus of Kadamba Inscriptions,* Vol.I, (Sirsi, 1995).

Hart, G.L., *The Poems of Ancient Tamil,* Berkeley, 1975
- *Poets of the Tamil Anthologies,* Princeton, 1979.

Hart, G.L. and Heifetz, H., *The Four Hundred Songs of War and Wisdom, An Anthology of poems from classical Tamil: THE PUṚNĀṆŪRŪ,* New York, 1999.

Ilukkuvanar, S., *Tolkappiyam in English with Critical Studies,* Chennai, 1994.

Irfan Habib and Jha, V., *Mauryan India: A Peoples History of India,* Vol. 4, New Delhi, 2004.

Iyengar, Srininivasa, P.T., *History of the Tamils from the Earliest Times to 600 A.D.* (rp.) New Delhi, 1982.
- *Pre-Aryan Tamil Culture* (rp.) New Delhi, 1985.

Joseph, P., "Lost Lemuria - Fresh Evidence?" *Tamil Culture* 7, No.2, (1958), Pp. 121-131.

Jvalebil, K., "Tamil Poetry 2000 Years Ago", *Tamil Culture X,* 7, (Madras, 1960).

Kailasapathy, K., *Tamil Heroic Poetry,* OUP. 1968.

Kandaswamy, S.N., *Tamil Literature and Indian Philosophy,* Chennai, 2001.

Karunakaran, K., et. al., *Tolkappiyar's Conceptual Framework: Language, Literature and Society,* Madras, 1992.

Kunjan Pillai, P.N., *Some Problems in Keral History,* Kottayam, 1952.
- *Studies in Keral History,* Kottayam, 1970.

Leadbeater, C.W., *The Beginning of the Sixth Root Race,* (rp.) Madras, 1931.

LeGrand, H.F., *Drifting Continents and Shifting Theories,* C.U.P., 1988.

Lehmann, Thomas & Malten, Thomes, *A Word Index for Cankam Literature,* Madras, 1993.

Logan, W., *Mannual of Malabar District,* Madras, 1951.

Mahadevan, Iravatham, *Early Tamil Epigraphy From the Earliest Times to the Sixth Century AD.,* (Cre-A, Chennai & Harvard Uni. USA, 2003).

Mahalingam, M., *History of Kongu,* Madras, 1986.

Mahalingam, N., "Kumari Kandam - The Lost Continent", *Proceedings of the Fifth International Conference - Seminar of Tamil Studies,* Madurai, 1981.

Mahalingam, N., and Sethu Sekharan, *Concise Form of Concepts of Kumari Kandam,* Madras, 1991.

Mahalingam, T.V., *Early South Indian Palaeography,* (rp.), Madras, 1974.

Maklin, C., *The Manual of the Madras Presidency,* Vol. I, New Delhi, 1987.

Manickam Naicker, P.V., *The Tamil Alphabet and Its Mystic Aspect,* (rp.) New Delhi, 1985.

Mc Crindle, J.W., *Ancient India IV,* Bombay, 1885.

Marr, John Ralston, *The Eight Anthologies,* Madras, 1985.

Mathivanan, R., "The Riddle of Kumarikkandam", *Historical Heritage of the Tamil,* ed. Subramanian, S.V., and Thirunavakkarasu, K.D., Madras, 1983.

Meenakshi, K., *Tolkāppiyam and Astadhyayi,* Chennai, 1997.

Meenakshisundaran, T.P., *A History of Tamil Language,* Poona, 1965.

Monier-William, M., *Sanskrit-English Dictionary,* Oxford, 1888.

Mitra, Rajendralal, (ed.), *Lalithavistara,* 1877.

Mudaliyar, N., *Ilampuranar,* Chennai, 1928.

Murugan, V., *Tolkappiyam in English,* Chennai, 2001.

Nagaswamy, R., *Seminar on Inscriptions 1966: Speeches and Papers,* Madras, 1968.
- "The Origin and Evolution of Tamil, Vaṭṭeluttu and Grantha Scripts", *Proceedings of the Second International Conference - Seminar on Tamil Studies,* Madras, 1968, Vol II, Pp. 410-415.
- *Seminar on Hero-stones,* Madras, 1974.
- *Roman Karur: A Peep into Tamils' Past,* Madras, 1995.

Narasimhia, A.N., *A Grammar of the Old Kanarese Inscriptions,* Mysore, 1941.

Nilakanta Sastri, K.A., *History of South India,* IVth ed. OUP., 1987.
- *The Sangam Age: Its Cults and Cultures,* Madras, 1972.

O'Flahertya, W.D., *Hindu Myths,* Harmondsworth, 1975.

Oldenberg, H., *Dipavamsa,* Berlin, 1879.

Padmanabhan, S., *The Forgotten History of the Lands' End,* Nagercoil, 1971.

Panneerselvam, R., "A Critical Study of the Tamil Brahmi Inscriptions", *Acta Orientalia,* 34 (1972), Pp. 163-197.

Paranavitan, S., *History of Ceylone,* Vol. I. Pt. 1 & II. Uni. of Ceylone, 1959.

Paranavitana, S., *Inscriptions of Ceylon, Vol. I: Early Brahmi Inscriptions, ASC. 1970.*
- *Inscriptions of Ceylon, Vol. II. Pt. I: Late Brahmi Inscriptions,* Colombio, 1983.
- *Inscriptions of Sri Lank,* Srilanka, 1970

Pillai, K.K., *Social History of the Tamils,* IInd ed. 1975.
"The Brahmi Inscriptions of South India and the Sangam Age", *Tamil Culture,* 5 (2), 1956, Pp. 175-185.
"Historical Ideas in Early Tamil Literature", *Tamil Culture* 6, no.2, 1957
"Some Aspects of the Early History of the Tamils" *Proceedings of the Fifth International Conference - Seminar of Tamil Studies,* (ed.), Arunachalam, M., Madurai, 1981.

Pillai, M.S., and Ludden, D.E., *Kuruntokai,* Chennai, 1997.

Pillai, Sivaraja, K.N., *The Chronology of the Early Tamils,* Madras, ?

Pillai, Vaiyapuri, S., *History of the Tamil Language and Literature (Beginning to 1000 A.D.),* Madras, 1956.

Pillai, Velu, A., *Study of the Dialects in Inscriptional Tamil,* Trivandrum, 1976.
- *Epigraphical Evidence for Tamil Studies,* Chennai, 1980.

Pope, G.U. *Tamil Heroic Poems,* Chennai, 1997.

Ptolemaios, Klaudios, *Treatise on Geography Chapter on India & C.* translated with commentary by J.W. McCrindle: *Ancient India, IV,* Bombay, 1885.

Rajan, K., *South Indian Memorial Stones,* Tanjavur, 2000.

Rajan, V.S., *A Reference Grammar of Classical Tamil Poetry: 150 B.C. - Pre-fifth/sixth century A.D.,* Philadelphia, 1992.

Ramasvami, *Tamil Literature* (rp.), Thanjavur, 1985.

Ramaswamy, Sumathi, *Fabulous Geographies Catastrophic Histories - The Lost Land of Lemuria,* New Delhi, 2005.
- "History at Land's End : Lemuria in Tamil Spatial Fables", *Journal of Asian Studies,* 59, no. 3, (2000), Pp. 575-602.

Raman, K.V., "Brahmi Inscriptions of Tamil Nadu: A Historical Assessment", *Journal of the Epigraphical Society of India I,* (1974), Pp. 104-118.

Ramanujam, A.K., *Poems of Love and War,* OUP. 1985.
- *The Interior Landscape,* Bloomington, 1967.

Ramesh, K.V., *A History of South Kanara,* Dharwar, 1970.
- *Inscriptions of Western Gangas,* Delhi, 1985.

Rao, Hanumantha, B.S.L., et. al. (ed.), *Buddhist Inscriptions of Andradesa,* Secanderabad, 1998.

Saletore, B.A., *Ancient Karnataka Vol. I History of Tuluvas,* Poona, 1936.

Sarma, I.K., and Rao, V.J., *Early Brahmi Inscriptions from Sannatti,* New Delhi, 1993.

Scharle, H., "Tokkāppiam Studies", *German Scholars on India,* Varanasi, 1973.

Schoff, W.H., *Periplus of the Erythraen Sea with translation and annotation,* Philadelphia Museum, 1912.

Scott-Elliot, W., *The Lost Lemuria with Two Maps showing Distribution of Land Areas at Different Periods of Times,* London, 1904.

Sesha Iyear, K.G.S., *The Cera Kings of the Sangam Age,* London, 1937.

Selvamony, Nirmal., *Persona in Tolkāppiyam,* Chennai, 1998.

Seshadri, K.G., *A Concise Compendium of Cankam Literature,* Vols. I and II, Thanjavur, 1990-1996.

Settar, S., (ed.), *Archaeological Survey of Mysore, Annual Report, A Study,* Vol. II-IV., (Dharwad, 1976).
- "Collective Wisdom: Some Indian Experiments", *Science And Beyond,* (ed.), by Menon. S., et. al, Bangalore, 2004.
- *Footprints of Artisans in History: Some Reflections on Early Artisans of India:* General President's Address to the 64th Session (Mysore) of the Indian History Congress, Bangalore, 2003.
- *Inviting Death,* Dharwad, 1989.
- "Myths, Legenda and Traditions Associated with Tsunami", *The Great Indian Ocean Tsunami of 2004 An Overview of a National Disaster,* Bangalore, 2006.
- *Sravana Belgola,* Dharwad, 1981.

Settar, S., and Sontheimer, J.D., (ed.), *Memorial Stones: A Study of their Origin, Significance and Variety,* Dharwad - Heidelberg, 1982.

Shulman, David., *Tamil Temple Myths: Sacrifice and Divine Marriage in the South Indian Saiva Tradition,* Princeton, 1980.

Sirisoma, *Brahmi Inscriptions of Sri Lanka* (from 3rd century B.C., to 65 A.D.) : *Inscriptions,* Vol. 2, Srilanka, 1990.

Siromoney, Gift, "The Origin of the Tamil Script", *Tamil Studies,* 2(1), 1982, Pp. 8-23.

Siromoney, Gift and Lockwood Machael, "The Invention of the Brahmi Script", *Indological Essays: Commemoration Vol. II for Gift Siromoney,* (ed.), Lockwood, M., 1992,

Sivaramamurti, C., *Indian Epigraphy and the South Indian Scripts* (Bull. 4 of the Madras Govt. Museum), Madras, 1952.

Sivathamby, Karthigesa, *Studies in Ancient Tamil Society,* Madras, 1998.

Subrahamanian, N., *Original Sources of the History of Tamil Nad (from the beginning to c. A.D. 600),* Udumalpet, 1994.
- *Sangam Polity,* Bombay, 1966.
- *Pre-Pallava Tamil Index,* Madras, 1966.

Subramaniam, V.I., *Index of Puranānūru,* Trivandrum, 1962.

Subramaniyaswami, Satguru Sivaya, *The Lemurian Scrolls: Angelic Prophecies Revealing Human Origins,* Himalayan Academic Pub., 1998.

Subrahmanyasastri, P.S. (ed.), *Tolkāppiyam Collatikāram with translation and English commentary,* Annamalai Nagar, 1945.
- *Tolkāppiayam Eluttatikāram, translated with the short commentary in Einglish,* Madras, 1930.
- *Tolkāppiyam Porulatikāram, Pt. I: Akatinai and Purattinai,* Madras, 1949.
- *Kaṟpiyal and Poruḷiyal with translation and English commentary,* Madras, 1952.
- (ed.), *Tolkappiyam (with various sub-titles,* Chennai, 1950, 1952, 1979, Annamalai, 1987.

Sundraram, P.K., *Some Philosophical Concepts in Purananuru,* Madras, 1979.

Tamil Ḳalaveṭṭiu Collakarāti, *Glossary of Tamil Inscriptions, Vol. I,* Chennai, 2002.

*Tamil Lexicon,* Uni. of Madras, Madras, 1926-1939.

Thapar, R., *Ashoka and the Decline of the Mauryas,* OUP, 1973.

Thirunavakkarasu, K.D., *Chieftains of the Sangam Age,* Madras, 1994.

Vaidyanathan, K.S., *The Ancient Geography of the Kongu Country,* Coimbatore, 1983.

Vaidyanathan, S., *Indo-Aryan Loanwords in Old Tamil,* Madras, 1971.

Varalarru Murai Tamil Ilakkiya Perakarāti, *Glossary of Historical Tamil Literature,* (5 Vols.), Chennai.

Venkata Subrahmanian, T.K., *Environment and Urbanisation in Early Tamilakam,* Tanjavur, 1988.

Wadia, D.N., *Geology of India for Students,* London, 1919.

Warmington, E.B., *The Commerce between the Roman Empire and India,* Cambridge, 1928.

Zvelebil, Kamil, V., "The Brahmi Hybrid Tamil Inscriptions", *Archive Orientalni,* 32, (1966 rp.) or *Tamil Culture* 12, (1), Pp. 13-50.

"Tolkāppiyam: Eluttatikaram" (Eng. Trans.), *Journal of Tamil Studies I,* Pp. 43-60.

*Tamil Literature,* Leiden, 1974.

*Literary Conventions in Akam Poetry,* Madras, 1986.

"The Earliest Account of the Tamil Academies", *Indo Iranian Journal,* 15, no.2, Pp. 109-35.

**Reports And Journals**

ASMAR., Archaeological Survey of Mysore, *Annual Report,* 1925, 1927, 1929, 1936, 1941, 1942.

*EI., Epigraphia Indica,* IV, VI, XII, XIII, XV, XX, XXV, XXVI, XXVII, XXXII, XXXVII, XLI.

*EC., Epigraphia Carnatica,* I, II, III, IV, VII, IX, XI, XII, XIV.

*IA.,* (*EI.,* in Kannada), *Indian Antiquary,* V, VIII, XII, XVIII

*Quarterly Journal of Mythic Society,* 24-2

*SII., South Indian Inscriptions,* XXIV, XXVI, XXVII

*The Encyclopaedia Britannica,* (15th re.) Vol. I. Chicago, 1992.

# ಪದಸೂಚಿ


ಅಂಕಂಸಿಯವ್ ೧೮
ಅಂಜ್ಞ ೧೪೦, ೧೮೨
ಅಂಟರ್ ೨೮
ಅಂಧಕ ೭೫, ೭೬; ಅಂಧಕವನ ೭೫
ಅಂಧಕವಿಂದ ೭೫
ಅಂಪಾರ ೮೨
ಅಂಬರ್ ೧೦೦
ಅಕತ್ತಿಜಾತಕ ೩೮; ಅಗತ್ತಿಯಣ್ ೭; ಅಗತ್ತಿಯರ್ ೫೨; ಅಗತ್ತಿಯರ್ ವ್ಯಾಕರಣ ೫೨
ಅಕಾಷಿಕ್ ರೆಕಾರ್ಡ್ಸ್ ೪೮
ಅಗಂ (ಅಹಂ) ೬
ಅಗಪ್ಪ ೧೭೧
ಅಗಸ್ತ್ಯ ೭, ೮, ೩೬, ೫೧, ೬೪
ಅಗ್ನಿ ೧೦೬
ಅಚ್ಯುತ ವಿಕ್ರಾಂತ ೧೮೧
ಅಜಿತತೀರ್ಥಂಕರ ಪುರಾಣ ೧೦೮, ೧೨೮
ಅಟಣುಂಕಣ ೧೮೭, ೧೯೫
ಅಟಿಯರಸ ೧೭೨
ಅಟ್ಲಾಂಟಿಕ್ ಸಾಗರದ ಛಾಲೆಂಜರ್ ೪೫
ಅಟ್ಲಾಂಟಿಸ್ ಮಹಾದ್ವೀಪ ೪೬, ೬೬
ಅಡಿಯಾರ್ ೪೯, ೫೪ ; ಅಡಿಯಾರ್ ಕುನಲ್ಲಾರ್ ೫೪; ೫೮; ೬೭
ಅಣ್ಣಿಮಿನ್ಡಿಲಿ ೧೯೨
ಅತಿಯಮಾನ್ ಪೊಕುಟ್ಟೆಳಿನಿ ೧೪೦
ಅತ್ತಿ ೧೭೨, ೧೭೭, ೧೮೭, ೧೯೫
ಅತ್ತಿರೈಯಣಾರ್ ೧೮೭, ೧೯೫
ಅಥಿಯಮಾನ್ ೧೨೫
ಅದಂಕೊಟ್ಟಾಸಾನ್ ೮
ಅದಕಲ್-ಅ ೧೪೪
ಅದನ್ ನಾಮುರ್ಡಿ ಚೇರಲ್ ೧೫೦
ಅದಿಗಾರ ೬, ೯, ೧೦
ಅದಿಯಮಾನ್ ೧೭೪
ಅನುರಾಧಪುರ ೮೦, ೮೨, ೮೪, ೮೬, ೯೧, ೯೩
ಅನ್ನಪೂರ್ಣೆ ೫೫, ೬೮
ಅನ್ನಿಬೆಸೆಂಟ್ ೪೬, ೪೯
ಅನ್ಬಿಲ್ ೧೦೨
ಅನ್ವಯ ನಿಯಮ ೯
ಅನ್‌ಪೊರುಣ್ಣೈ ೯೯, ೧೨೪
ಅಪರಿಮಿತಾಖ್ಯಾಕೃತಿ ಪ್ರಯೋಗಾನುಗತಂ ೯
ಅಬೀರ ೩೮
ಅಬ್ರಾಹಿಮ್ ಪಂಡಿತೆರ್ ೬೮
ಅಮರಾವತಿ ೭೪, ೭೫, ೮೪, ೮೯, ೯೨, ೯೬
ಅಮಲಬಿ ೮೫
ಅಮಳ ಕವಿವೃಷಭರ್ಕಳ್ ೧೩
ಅಮೃತಮಯಕಾಂತಿ ೧೬
ಅಮೆರಿಕಾ ೪೬, ೪೭, ೪೮
ಅಯಿರಿ ೪೨, ೧೨೦, ೧೩೧, ೧೪೦, ೧೫೨, ೧೯೧; ಅಯಿರೈ ೧೪೦
ಅರಂಗು ೩೬
ಅರಜನ್ ೧೩
ಅರಬ್ಬೀ ಸಮುದ್ರ ೩೫, ೧೫೩
ಅರಸ ೧೩
ಅರಾಮೈಕ್ ೨೪, ೭೧, ೮೧, ೮೩
ಅರಾವಳೀ ೬೦
ಅರಿಪೋ ೮೪, ೧೫೪
ಅರಿಸಿಲ್ ಕಿಜಾರ್ ೧೬೯
ಅರುಣಾಚಲಕ್ಕವಿರಾಯರ್ ೭೦
ಅರುವಂದ್ಯೆ ೧೦೦, ೧೦೧
ಅರುವವಡತಲ್ಯೆ ೨೯, ೧೫೬; ಅರುವವಡತಲ್ಯೆನಾಡು ೨೯
ಅರುವಾನಾಡು ೨೯
ಅರುವಾಳರ್ ೨೮
ಅರ್ಕಾವತಿ ೯೬
ಅರ್ಥಾಲಂಕಾರ ೩

ಅಲಂಕಾನಮ್ ೧೩೮
ಅಲಂಕಾರ ೩, ೯, ೧೬, ೨೦, ೬೩, ೮೭
ಅಲಿಸ್ ಬೈಲೀಯ – ಆರ್ಕೇನ್ ಸೊಸೈಟಿ ೪೮
ಅಲ್ಚಿನ್ ೯೩
ಅಳುಂಪಿನ ೨೧೬
ಅಳೂಪ ೧೫೬
ಅವನೀತ ೧೫೭
ಅವ್ವೈಯಾರ್ ೩೬, ೧೪೦
ಅಶೋಕ ೩೨, ೩೩, ೩೭, ೩೮, ೪೨, ೭೧, ೭೨, ೭೩, ೭೪, ೭೫, ೭೬, ೭೭, ೭೮, ೭೯, ೮೦, ೮೧, ೮೨, ೮೩, ೮೪, ೮೮, ೮೯, ೯೦, ೯೧, ೯೨, ೯೩, ೧೧೧, ೧೨೧, ೧೨೯, ೧೫೨, ೧೬೦, ೧೬೭, ೧೭೩, ೧೭೪,
ಅಶ್ವತ್ಥವೃಕ್ಷ ೫೫
ಅಶ್ವಮೇಧ ಯಜ್ಞ ೬೨
ಅಶ್ವಮೇಧಪರ್ವ ೩೮
ಅಷರ್, ಎಫ್.ಎಂ. ೯೨
ಅಸ್ಸಕ ೮೩
ಅಗನಾನೂಱು ೬, ೩೧, ೩೪, ೫೭, ೯೯, ೧೦೦, ೧೦೨, ೧೧೯, ೧೫೪
ಅಹ್ದೈ ೧೯೨
ಆಂಗ್ಲೋ ಈಜಿಪ್ಷಿಯನ್ ಜಾನ್‌ಮರ್ರೀ ೪೫, ೬೦
ಆಂಧ್ರ ೨೪, ೩೧, ೩೨, ೩೩, ೩೮, ೪೨, ೭೨, ೭೩, ೭೪, ೭೬, ೮೯, ೯೦, ೯೨, ೧೦೫, ೧೧೭, ೧೨೪, ೧೩೩, ೧೩೬, ೧೬೧, ೧೮೭, ೧೮೮, ೨೦೬; ಆಂಧ್ರಪ್ರದೇಶ ೩೧, ೭೨, ೭೩, ೭೪, ೮೯, ೧೦೫, ೧೩೩, ೧೩೬, ೧೬೧, ೧೮೭, ೨೦೬
ಆಗ್ನೇಯ–ಏಸ್ಸಿಯಾ ೭೧
ಆಚಾರ್ಯ ೯, ೨೦, ೧೪೫
ಆಟ್ಟುನತ್ತಿ ೧೦೧
ಆಡಲ್ ೩೭
ಆಡೂರು ೧೬೧
ಆತ್ರಿರೇಯನಾರ್ ನಲ್ಲೇರ್ ೧೦೪
ಆದಂ ಕೋಟಾಚಾರ್ಯ ೩೦
ಆದಿಕದಂಬ ೧೨೨
ಆಫ್ರಿಕಾ ಖಂಡ ೫೭
ಆಫ್ರಿಕಾನೋ ಇಂಡಿಯಾನ ಕಾಂಟಿನೆಂಟ್ ೪೩
ಆಯಪುತ ೭೭
ಆಯರ್ ೨೮
ಆಯವೇಳ್ ೧೦೩
ಆಯಿಡ್ಡೈ ೨೩, ೩೦
ಆಯ್ಕುಡಿ ೩೫
ಆಯ್ ೩೫, ೧೬೯
ಆಯ್ ಅಂಡಿರರ್ ೩೫
ಆರಾವಮುದನ್, ಟಿ. ಜಿ. ೬೭, ೭೦
ಆರ್ಕ್ಕಿನ್ ೬೬
ಆರ್ಯ ೧, ೨, ೩೨, ೩೪, ೭೫, ೭೭, ೭೮, ೭೯, ೮೦, ೮೧, ೯೨, ೧೦೯, ೧೧೬, ೧೧೭, ೧೧೮, ೧೧೯, ೧೨೦, ೧೫೪
ಆರ್ಯಾವರ್ತ ೭೫
ಆರ್ಯಾವರ್ಮ–ಹರಿವರ್ಮ ೧೦೯
ಆರ್. ನಾಗಸ್ವಾಮಿ ೪೧
ಆರ್.ಎ.ಇ ೯೩
ಆಲವಾಯ್ ೬೨
ಆಲ್ಬರ್ಟ್, ಡಿ. ೧೮
ಆಲ್‌ಫ್ರೆಡ್ ವೆಜೆನರ್ ೫೮
ಆಳ್ವಾರ ೯೪
ಆವಿಯರ್ ೨೮
ಆವೂರ್‌ಮೂಲಂ ಕಿಳಾರ್ ೧೨೫
ಆಸಂದಿ ೧೬೨
ಆಸ್ಟ್ರೇಲಿಯ ೪೩, ೪೪
ಆಸ್ಮಕ ೮೩
ಇ. ಎಮ್. ಫಾರ್ಸ್ಟರ್ ೫೦
ಇಂಡಿಯ ೧೯, ೨೦, ೩೭, ೩೮, ೪೨, ೪೩, ೫೦, ೫೮, ೬೫, ೬೬, ೯೨, ೯೩, ೧೩೧, ೧೪೮. ೧೬೫
ಇಂಡಿಯಾನ ಓಸಿಯಾನಿಯಾ ೪೩
ಇಂಡೋಆರ್ಯನ್ ೮೧

ಇಂಡೋಮಡಗಾಸ್ಕರ್ ೪೩
ಇಂದ್ರ ೬೨; ಇಂದ್ರಪೂಜೆ ೬೨; ಇಂದ್ರಲೋಕ ೬೨
ಇಕ್ಷ್ವಾಕು ೮೯, ೧೧೭
ಇಗ್ನೇಷಿಯಸ್ ಡೊನ್ನೆಲಿ ೪೬
ಇಟ್ಟೈಕುಣ್ಣಾ ಕಿಳಾರ್ ೧೪೮
ಇಟ್ಟೈಚ್ಚಿಂಗಂ ೫೨
ಇಡೈಯನ್ ಶೇಂದನ್ ಕೊಟ್ರನಾರ್ ೮೭, ೧೩೬
ಇಮಯಮ್(ಹಿಮಾಲಯ) ೩೪
ಇಮಯವರಂಬನ್ ೩೪, ೧೬೯
ಇಮವರ್ ಅನ್‌ಬನ್ ೩೪
ಇಮ್ಮಡಿ ವಿಕ್ರಮಾದಿತ್ಯ ೧೮೧
ಇರಣಿಯ ಮುಟ್ಟತ್ತುಪ್ಪೆರುಂ ೧೨೫
ಇರುಂಗೋವೇಣ್ಮಾನ್ ೧೩೯
ಇರ್ಫಾನ್ ಹಬೀಬ್ ೩೮
ಇಲಂಕೈ ೨೧
ಇಲೆಮೂರಿಯಾ ನಿಲ್ಲೈ ೫೯; ಇಲೆಮೂರಿಯಾ
    ಕುಟ್ಟುಯ ನಿಲ್ಲೈ ೫೯;
    ಇಲೆಮೂರಿಯಾಕ್ಕಂಡಮ್ ೫೧
ಇಲ್ಲಸ್ಟ್ರೇಟೆಡ್ ವೀಕ್ಲಿ ೬೦
ಇಳಂಕೋಶರ್ ೧೯೩
ಇಳಂಗೋ ಅಡಿಗಳ್ ೩೧, ೧೦೧, ೧೫೩
ಇಳಂಚೇರಲ್ ೧೦೭, ೧೧೯
ಇಳಂಪು ೨೮, ೪೧
ಇಳಂಪೂರಣರ್ ೪೧
ಇಳನಾಗನಾರ್ ೬೭
ಇಳನಾಗರನ್ ೩೧
ಇಳಯರ್ ೧೪೩, ೧೪೭
ಇಳಾಮಕ್ಕಳ್ ೧೪೭
ಇಟ್ಟೈಯನಾರ್ ಅಗಪ್ಪೊರುಳ್ ೬೭
ಇಟ್ಟೈಯನಾರ್ ಕಳವಿಯಲ್ ೬೭
ಇಶೈನುಣುಕ್ಕಮ್ ೫೨
ಇಸಿಲ ೩೩, ೭೭, ೭೮, ೧೮೬
ಈಜಿಪ್ಟಿನ ೪೬, ೬೬
ಈಡನ್ ತೋಟ ೪೭, ೪೯
ಈಳತ್ತು ಪೆರುಂದೇವನಾರ್ ೭೯
ಈಳನಾಗನಾರ್ ೭೯
ಉಂಬಲ್ಕಾಡು ೧೭೧
ಉಕ್ಕಿರನ್ ೬೩
ಉಗ್ರಪುರ ೧೧೨
ಉಜ್ಜೈನಿ ೭೫, ೭೭
ಉಡುಮಲೈಪೇಟೆ ೧೬೨
ಉತ್ತರ ಕನ್ನಡ ೧೭೭
ಉತ್ತರಾಂಚಲ ೮೨
ಉತ್ತಿಯ ೮೦, ೯೩
ಉದಿತಮಣಿರಾಗ ೧೬
ಉಮೆ ೬೩
ಉರಿ ೨೮
ಉರುತ್ತಿರಶನ್ಮನ್ ೬೭
ಉರೈಯಾಶಿರಿಯರ್ ೩೧, ೪೧
ಉರ್ಕಿಲರ್ ೧೦೦
ಉಱಂದೈ ೩೬
ಉಱೈಯೂರ್ ೩೬, ೯೮, ೯೯, ೧೦೬, ೧೦೭,
    ೧೧೨, ೧೨೬
ಉಲಗಮ್ ೨೮
ಉಲೋಚ್ಚನಾರ್ ೨೧೩
ಎ. ಆರ್. ವ್ಯಾಲ್ಲೇಸ್ ೪೫
ಎ. ಎಲ್. ವೆಜ್‌ನರ್ ೪೫
ಎಂ. ಎಂ. ಕಲಬುರ್ಗಿ ೧೮
ಎಚ್. ಬಿ. ಪಿ. ಸೊಲ್ಲಸ್ ೬೫
ಎಚ್. ವಿ. ಮೆಡ್ಲಿಕಾಟ್ ೪೯
ಎಟ್ಟುತ್ತೊಗೈ ೧೯, ೨೧
ಎಡನಾಡು-೭೦ ೧೫೭
ಎಡುಆರ್ಡ್ ಸುಯಸ್ಸ್ ೪೩; ೬೫
ಎಡೆನಾಡು ೧೧೪, ೧೩೦
ಎಡ್ಗರ್ ಥರ್ಸ್ಟನ್ ೫೦
ಎಣ್ಬ ೭
ಎನ್. ಸುಬ್ರಹ್ಮಣಿಯನ್ ೧೯, ೧೨೪

ಎನ್‌ಸೈಕ್ಲೋಪೇಡಿಯಾ ೫, ೬೫, ೬೬;
ಎನ್‌ಸೈಕ್ಲೋಪೇಡಿಯಾ ಬ್ರಿಟಾನಿಕಾ ೬೫, ೬೬
ಎಫ್. ಆರ್. ೯೩
ಎಮ್ಮಿಗನೂರು ೧೩೮
ಎಮ್ಮೆಯಲೂರು ೧೩೮
ಎರುಮಿನಾಡ ೧೨೧, ೧೪೩, ೧೪೪, ೧೪೬
ಎರುಮೈ ೩೩, ೩೪, ೪೨, ೬೮, ೭೮, ೧೧೯, ೧೨೦, ೧೨೧, ೧೩೧, ೧೩೩, ೧೩೪, ೧೩೭, ೧೩೮, ೧೩೯, ೧೪೦, ೧೪೧, ೧೪೨, ೧೪೩, ೧೪೪, ೧೪೬, ೧೫೧, ೧೫೨, ೧೫೩, ೧೬೪, ೧೭೬, ೧೭೯, ೧೮೮, ೧೮೯,
ಎರುಮೈ ಕುಡನಾಡು ೪೨
ಎರುಮೈ ನಲ್‌ನಾಡು ೩೩, ೪೨, ೧೫೨
ಎರುಮೈ ವೆಳಿಯಣಾರ್ ಮಕಣಾರ್ ಕಟಲಣಾರ್ ೧೯೧
ಎರುಮೈ ವೆಟಿಯಣಾರ್ ೧೯೧
ಎರುಮೈನಾಡು ೩೩, ೧೨೧, ೧೩೮, ೧೪೪
ಎರುಮೈಯೂರನ್ ೪೨
ಎರ್ನೆಟ್‌ಹೈಕಲ್ ೪೪
ಎರ್ಮೆ ೧೪೪
ಎಲ್.ಡಿ. ಬಾರ್ನೆಟ್ ೧೭೩
ಎಸ್. ಮೆನನ್ ೧೯
ಎಸ್. ಸುಬ್ರಮಣಶಾಸ್ತ್ರಿ ೫೮
ಎಸ್.ಕೆ.ಐಯ್ಯಂಗಾರ್ ೧೭೩
ಎಟಿನಿ ೧೩೯, ೧೪೦, ೧೪೧
ಎಟಿನಿ ಅತಿಯಮ್ಞಾಚು ೧೪೧
ಎಟುತ್ತು ೬
ಎಟುತ್ತೊಡು-ಪುಣರ್‌ನ್ದ-ಸೊಲ್-ಆಗುಮ್ಮೇ ೧೧
ಐಟ್ಟೈ ೧೭೭
ಏನ್ಶಿಯಂಟ್ ಅಂಡ್ ಮಿಸ್ಟಿಕಲ್ ಆರ್ಡರ್ ಆಫ್ ದಿ ರೋಜಿ ಕ್ರೂಶಿಯನ್ ೪೮
ಏಳಡಿಪಟ್ಟಂ ೧೨೦
ಏಸ್ಸಿಯಾ ಮೈನರ್ ೪೬, ೪೮, ೬೬
ಐಂತಿರಮ್ ೩೦
ಐಯರ್ ಆರಿತಮ್ ೬೮
ಐಯೂರ್ ೧೨೬
ಐಯ್ಯೆ ೧೦೦
ಐಯ್ ಮುಟುವಣಾರ್ ೧೨೫
ಐರಾವತನ್ ೩೮
ಐವಾರ್‌ಮಲೈ ೧೨೦, ೧೨೧, ೧೪೦
ಐಹೊಳೆ ೧೦೮, ೧೨೮
ಒನ್ರುಮೊಟಿ ಕೋಶರ್ ೧೭೪
ಒಳಿನಾಡು ೫೬
ಓಯ್ಯಾಣ್‌ನಲ್ಲಿಯಕ್ಕೋಟಣ್ ೧೮೭, ೧೯೪
ಓಲಖೌರ ೧೫೫
ಓವಿಯರ್ ೨೮
ಕಂಕನ್ ೧೭೭
ಕಂಕರ್ ೧೭೦, ೧೭೯
ಕಂಗನ್ ೧೭೨
ಕಂಗರ್ ೧೭೦
ಕಂಟಕ ಚತಿಯ ೮೪
ಕಂತರತ್ತಣಾರ್ ೧೨೫
ಕಂದಯ್ಯ ಪಿಲ್ಲೈ, ಎನ್. ಎಸ್. ೬೯
ಕಂದಸ್ವಾಮಿ ೨೦, ೨೧, ೪೧, ೧೫೬
ಕಂಪೈನದಿ ೬೩
ಕಂಬಯ್ಯ ೧೧೩, ೧೧೪
ಕಂಭ(ಸ್ತಂಭ)ದೇವನು ೧೧೩
ಕಟಂಬು ೭೮, ೮೪, ೧೫೩
ಕಟ್ಟಿರೈಕಾದ್ಯ ೩೫
ಕಟ್ಟೀ ೧೩೫, ೨೦೬
ಕಡಂಪಿನ್ ಪೆರುವಾಯಿಲ್ ೧೫೩
ಕಡಬ ೧೧೪
ಕಡಲನಾರ್ ೧೪೨
ಕಡಲವಡಂದ್ವೀಪಂ ೧೫೬
ಕಡಲ್ಕೊಂಡ ಕುಮರಿಕ್ಕಂಡಂ ೫೯
ಕಡಲ್ಕೊಂಡ ಪಾಂಡ್ಯರಾಜ್ಯ ೫೯
ಕಡಲ್ಕೋಳ್ ೫೧, ೫೩, ೫೪, ೬೦, ೬೧
ಕಡಲ್ಗಳ್ಳರು ೧೧೯, ೧೫೪
ಕಡಲ್‌ಕೊಂಡ ಕುಮರಿನಾಡು ೫೯

ಕಡಲ್‌ಮಲ್ಲೈ ೫೬
ಕಡಿಯಲೂರ್ ಉರುತ್ತಿರಂಗಣ್ಣರ್ ೧೦೧, ೧೨೫
ಕಡುಂಗೊನ್ ೧೮೧
ಕಡುಂಗೋನ್ ೧೮೧
ಕಡೂರು ೧೬೨
ಕದ್ದೈಶಂಗಂ ೫೨
ಕಣ್ಣಗಿ ೧೧೯
ಕದಂಬ ೮೪, ೮೫, ೮೯, ೯೧, ೧೧೯, ೧೨೨, ೧೩೦, ೧೩೧, ೧೪೨, ೧೫೧, ೧೫೩, ೧೫೪, ೧೫೫, ೧೫೬, ೧೫೮, ೧೫೯, ೧೬೦, ೧೬೧, ೧೬೩, ೧೬೫, ೧೬೬, ೧೭೬, ೧೭೯, ೧೮೧, ೧೮೮, ೧೮೯, ೧೯೦
ಕದಂಬನದಿ ೮೪, ೮೫, ೧೫೪
ಕದಿರ್‌ಮಣಿ ೧೬೯
ಕನರೀ ದ್ವೀಪ ೪೬
ಕನಶೈಯರ್ ೪೧
ಕನಿಂಗ್ಹ್ಯಾಮ್ ೯೩
ಕನ್ನಡ ಜನಪದ ೩೨, ೯೬, ೯೭, ೧೦೮, ೧೧೦, ೧೧೬, ೧೨೪
ಕನ್ನಡ ಯುಗಧರ್ಮ ೧೧
ಕನ್ನಡ-ಕಾವೇರಿ ೧೧೨
ಕನ್ನಡದ ೫, ೧೨, ೨೧, ೩೦, ೪೩, ೧೦೮, ೧೨೧, ೧೨೩, ೧೪೧, ೧೪೨, ೧೪೩, ೧೪೪, ೧೪೫, ೧೫೨, ೧೬೨, ೧೭೩, ೧೭೭, ೧೭೯, ೧೮೧
ಕನ್ನೈದಿಲೆ ೧೬
ಕನ್ಯಾಕುಮಾರಿ ೩೦, ೩೧, ೩೯, ೫೬, ೫೭, ೫೮, ೬೦, ೬೧, ೬೪, ೭೨, ೭೭
ಕನ್ಯಾಕುಮಾರಿ ಮಾಹಾತ್ಮ್ಯ ೬೪
ಕಪಾಟಮುರಂ ೧೯, ೫೫
ಕಪಾಡಮುರಂ ೫೨, ೫೭, ೮೯
ಕಪಿನೀ ೧೫೭
ಕಬಿನೀ ೭೭, ೯೬, ೧೧೦, ೧೧೬, ೧೧೭, ೧೫೮, ೧೬೮, ೧೬೯, ೧೭೯, ೧೮೮
ಕಬಿಲರ ೫, ೩೬, ೧೧೬, ೧೭೧
ಕಬ್ಬಿಗ ೯, ೧೯೦, ೨೦೪
ಕಮೇರ ೧೧೨
ಕಮ್ ಟು ಲೆಮೂರಿಯಾ ೪೯, ೬೬
ಕಯಲ್ ಮೀನು ೨೨
ಕರವೂರು ೧೩೩
ಕರಾಮಾ ೮, ೨೦, ೨೬, ೧೨೪, ೧೩೨
ಕರುಣಾ ವಿಜಯೇಂದ್ರ ೧೨೯
ಕರುನಾಟ ೯೭, ೧೧೮, ೧೨೧
ಕರೂರು ೯೮, ೧೫೪
ಕರ್ಕನಾಡು ೨೯
ಕರ್ಣಪರ್ವ ೩೮
ಕರ್ನಾಟಕ ೩೨, ೩೩, ೩೮, ೪೨, ೭೦, ೭೧, ೭೨, ೭೩, ೭೪, ೭೫, ೭೬, ೮೨, ೮೫, ೮೬, ೮೮, ೮೯, ೯೦, ೯೫, ೯೬, ೯೭, ೯೮, ೧೦೪, ೧೧೦, ೧೧೧, ೧೧೨, ೧೧೩, ೧೨೦, ೧೨೨, ೧೨೩, ೧೨೪, ೧೨೮, ೧೩೫,
ಕರ್ನಾಟಕಾಂಧ್ರ ಬ್ರಾಹ್ಮೀ ೭೩
ಕರ್ನೂಲು ೭೬, ೧೬೧
ಕಲನಿ ೮೨
ಕಲಭ ೧೮೦
ಕಲಿಂಗತ್ತುಭರಣಿ ೧೦೨
ಕಲಿಗಂಗನ್ ೧೫೭
ಕಲಿತ್ತೊಗೈ ೨೧, ೨೨, ೩೪, ೪೨, ೬೧, ೬೮, ೬೯, ೧೨೫
ಕಲುವುಲ್ ೧೭೬
ಕಲ್ಲಾಡನಾರ್ ೪೧, ೧೦೧, ೧೦೫, ೧೨೫, ೧೪೭, ೧೪೮
ಕಲ್ಲಿಣಾರ್ ೧೯೩, ೨೦೬, ೨೨೧
ಕಲ್ಸೀ ೮೨
ಕಳಭ್ರ ೧೪೯, ೧೬೮, ೧೭೯, ೧೮೦, ೧೮೧, ೧೮೪, ೧೮೬
ಕಳವರ ೨೮, ೧೮೦, ೧೮೭
ಕಳವರ್ ೨೮, ೧೮೦
ಕಳವಟಿ ೧೦೦
ಕಳಿಂಗಾ ೭೬, ೭೭, ೭೯, ೮೦, ೮೨, ೮೮
ಕಳಿರಿಯಾವಿರೈ ೫೧

ಕಳಿಜ್ರಿಯಾನ್ನೈ ೧೨೪
ಕಳ್ಗಪ್ಪು ೧೮೧
ಕಳ್ಳಿಲ್ ೧೮೭, ೧೯೫
ಕಳ್ಳಿಲ್ ಅತಿತಿರೈಯಣಾರ್ ೧೮೭, ೧೯೫, ೨೨೯
ಕವಯಿತ್ರಿ ೫, ೫೨
ಕವಿ ೧, ೨, ೩, ೫, ೬, ೭, ೮, ೯, ೧೦, ೧೧, ೧೩, ೧೪, ೧೫, ೧೬, ೧೭, ೧೮, ೧೯, ೨೧, ೨೨, ೨೬, ೨೮, ೨೯, ೩೦, ೩೧, ೩೨, ೩೩, ೩೪, ೩೫, ೩೬, ೩೭, ೪೩, ೫೧, ೫೨, ೫೩, ೫೪, ೬೩, ೬೫, ೬೭, ೭೫, ೭೯, ೮೫, ೮೬, ೮೭, ೯೪, ೯೫, ೯೮, ೯೯, ೧೦೦, ೧೦೧, ೧೦೨, ೧೦೩, ೧೦೪, ೧೦೫, ೧೦೬, ೧೦೭, ೧೦೮, ೧೦೯, ೧೧೦, ೧೧೪, ೧೧೭, ೧೧೮, ೧೧೯, ೧೨೨, ೧೨೪, ೧೨೫, ೧೨೭, ೧೨೮, ೧೩೪, ೧೩೫, ೧೩೬, ೧೩೭, ೧೩೮, ೧೩೯, ೧೪೧, ೧೪೨, ೧೪೬, ೧೪೮, ೧೪೯, ೧೫೩, ೧೫೪, ೧೬೨, ೧೬೭, ೧೬೮, ೧೬೯, ೧೭೦, ೧೭೧, ೧೭೨, ೧೭೩, ೧೭೪, ೧೭೫, ೧೭೬, ೧೮೦, ೧೮೧, ೧೮೪, ೧೮೫, ೧೮೬, ೧೮೭, ೧೮೮, ೧೮೯, ೧೯೦, ೧೯೧, ೧೯೨, ೧೯೪, ೧೯೫, ೧೯೬, ೧೯೭, ೧೯೮, ೧೯೯, ೨೦೦, ೨೦೧, ೨೦೨, ೨೦೩, ೨೦೪, ೨೦೫, ೨೦೬, ೨೦೭, ೨೦೮, ೨೦೯, ೨೧೦, ೨೧೧, ೨೧೨, ೨೧೩, ೨೧೪, ೨೧೫, ೨೧೬, ೨೧೭, ೨೧೯
ಕವಿತಾನೀತಿಯುತರ್ ೯
ಕವಿಪ್ರಧಾನ ೯
ಕವಿಮುಖ್ಯ ೯
ಕವಿರಾಜಮಾರ್ಗ ೧, ೨, ೩, ೫, ೬, ೮, ೧೦, ೧೧, ೧೬, ೧೭, ೧೮, ೧೯, ೨೬, ೪೩, ೧೦೪, ೧೧೩ (ನೋ. ಕರಾಮಾ)
ಕವಿವೃಷಭ ೯, ೧೩
ಕವೀಶ ೯, ೧೩
ಕವೆರ ೧೧೨
ಕವೇರ ೧೦೮, ೧೦೯, ೧೧೨, ೧೨೮
ಕಳಿಜ್ರಿಯಾನ್ನೈ ನಿರೈ ೮೫
ಕಸ್ಸಪ ೮೫
ಕಾಂಚೀಪುರಂ ೬೧
ಕಾಂಚೀಲಿಂಗ ೬೩
ಕಾಂಜ್ಞೀಪುರಾಣಂ ೬೩
ಕಾಂಟಿನೆಂಟಲ್ ಡ್ರಿಪ್ಟ್ ೬೦
ಕಾಕುತ್ಸವರ್ಮ ೧೫೬, ೧೮೧
ಕಾಡವು ೧೦೩
ಕಾದಂಬರಿ ೧೩, ೫೦
ಕಾದನ ೮೫
ಕಾದಬಿ ೮೫
ಕಾಪ್ಪಿಯಮ್ ೬
ಕಾಪ್ಪಿಯರ್ ೬
ಕಾಬೇರೀ ೧೧೦, ೧೧೧, ೧೨೯, ೧೫೭
ಕಾಮಾಕ್ಷಿವಿಳಾಸ ೬೪
ಕಾರಿಕಣ್ಣಣಾರ್ ೧೦೦, ೧೦೧, ೧೨೫, ೧೩೬
ಕಾರ್ತವೀರ್ಯ ೬೪
ಕಾರ್ತಿಕೇಯ ೫೩, ೬೭
ಕಾರ್ತಿಗೇಸು ಶಿವತಂಬೀ ೪೦, ೪೧
ಕಟೂರ್ ೧೦೧
ಕಾಲಚಕ್ರ ಮೂಲತಂತ್ರ ೭೪
ಕಾಳಿದಾಸ ೧೩, ೧೦೮, ೧೨೮
ಕಾವದಂ ೫೪, ೫೫
ಕಾವಿರಿ ಪೂಪ್ಪಟ್ಟಿಣತ್ತುಕ್ ೧೯೩
ಕಾವಿರಿ ೩೬, ೯೮, ೯೯, ೧೦೦, ೧೦೧, ೧೦೨, ೧೦೩, ೧೦೪, ೧೦೫, ೧೦೬, ೧೦೭, ೧೦೯, ೧೨೪, ೧೨೫, ೧೨೬, ೧೨೭, ೧೩೬
ಕಾವಿರಿಪೂಂಪಟ್ಟನತ್ತುಕ್ಕಾರಿ ಕಣ್ಣನಾರ್ ೩೬, ೧೨೫
ಕಾವಿರಿಪ್ಪೂಪ್ಪಟ್ಟಿಣಂ ೧೦೦
ಕಾವೇರಿ ೧, ೫, ೨೫, ೩೨, ೩೪, ೩೬, ೪೨, ೫೨, ೫೫, ೫೬, ೬೧, ೭೭, ೯೫, ೯೬, ೯೮, ೯೯, ೧೦೦, ೧೦೧, ೧೦೩, ೧೦೪, ೧೦೫, ೧೦೬, ೧೦೭, ೧೦೮, ೧೦೯, ೧೧೦, ೧೧೧, ೧೧೨, ೧೧೩, ೧೧೪, ೧೧೫, ೧೧೬, ೧೧೯, ೧೨೦, ೧೨೧, ೧೨೩, ೧೨೪, ೧೨೫, ೧೨೬, ೧೨೭, ೧೨೮, ೧೨೯, ೧೩೪, ೧೩೬, ೧೪೧, ೧೪೬, ೧೫೨, ೧೫೬, ೧೫೭, ೧೫೮, ೧೬೮, ೧೮೧,

೧೮೮
ಕಾವೇರಿ ಪಟ್ಟಿಣಂ ೫೬, ೬೧, ೯೮
ಕಾವೇರಿಯಿಂದಮಾ ೧, ೫, ೨೫, ೩೨, ೧೧೫, ೧೨೪
ಕಾವ್ಯಗೋತ್ರ ೬
ಕಾವ್ಯಧರ್ಮ ೧೩, ೧೫
ಕಾವ್ಯಪ್ರಯೋಗ ಪರಿಣತಮತಿಗಳ್ ೯
ಕಾವ್ಯಬಂಧಂ ೧೨
ಕಾವ್ಯಮೀಮಾಂಸೆ ೩
ಕಾಶ್ಮೀರದ ಭಾಮಹ ೨
ಕಾಸರಕೋಡು ೧೭೭
ಕಾಸರಗೋಡು ೧೧೭, ೧೭೭, ೧೭೮
ಕಾಸರು ೧೭೭
ಕಾಸು ೧೭೭
ಕಿಲಿನ್ ೧೯೬
ಕಿರುಮೋರೆಕೋಳಿ ೧೫೭
ಕಿಳ್ಳಿ ೧೦೦, ೧೦೨
ಕಿಳ್ಳಿವಳವನ್ ೧೨೬
ಕಿಲಿವಣ್ ನಕಣ್ ೧೯೬
ಕಿಲಿವನ್ ೧೯೬
ಕಿಸುವೊಳಲು-ಕೊಪಣ ೧೨೩
ಕೀರನ್ ಕೊಱ್ರನಾರ್ ೬೭
ಕೀರ್ತಿಪುರ(ಕಿತ್ತೂರು) ೧೫೮
ಕೀರ್ತಿವರ್ಮ ೧೧೨
ಕೀಱವನ್ ೩೧
ಕುಂಬ್ಳೂರು ೧೪೩, ೧೫೩
ಕುಂಭಕೋಣಂ ೬೧
ಕುಟುವುಲವಿಯಾಣಾರ್ ೧೪೮
ಕುಟ್ಟನಾಡ್ ೧೬೯
ಕುಟ್ಟುವನ್ ೧೬೯, ೧೭೧, ೧೭೬
ಕುಡ ೨೯, ೪೨, ೧೧೯, ೧೩೦, ೧೩೪, ೧೩೫, ೧೪೬, ೧೫೨, ೧೫೬, ೧೯೨, ೨೧೪; ಕುಡನಾಡಾಧಿಪತಿ ೧೧೯; ಕುಡನಾಡು ೨೯, ೧೩೧
ಕುಡವಾಯಿಲ್ ಕೀರತ್ತಿಣಾರ್ ೧೩೫
ಕುಣಕ್ಕಡಲ್ ೫೬
ಕುಣ್ಣೋರ್‌ಪ್ಪೆರುಂ ೧೨೫
ಕುತ್ತಿನಾಡು ೨೯
ಕುದುರೆಮಲ್ಲೆ ೧೪೦
ಕುನುಂಗಿಲ್ (ಕುಣಗಲ್ಲು) ೧೧೫
ಕುನ್ರಗಂ ೧೫೬
ಕುಮಟ್ಟೂರ್ ೧೫೩
ಕುಮರಿ ೩೦, ೫೦, ೫೩, ೫೯, ೬೦, ೬೧, ೬೬, ೬೭
ಕುಮರಿಕುಮ್ರ ೬೭
ಕುಮರಿಕ್ಕಂಡಂ ೫೦, ೫೩, ೫೯, ೬೦
ಕುಮರಿಕ್ಕಂಡತ್ತೊಟರ್ ೬೦
ಕುಮಾರ ೬೭, ೭೭, ೧೦೨, ೧೧೪
ಕುಮಾರಿ ೨೩, ೨೫, ೩೦, ೩೧, ೩೩, ೩೪, ೩೫, ೩೭, ೫೧, ೫೩, ೫೪, ೫೫, ೫೬, ೫೭, ೫೮, ೫೯, ೬೦, ೬೧, ೬೪, ೭೨, ೭೭, ೧೨೪, ೧೫೭
ಕುಮಾರಿಕ್ಕಡಲ್ ೫೬
ಕುಮಾರಿಕ್ಕೋಟು ೫೫
ಕುಮುಟೂರ್ ೧೪೩
ಕುರಲಿ ೨೧೬
ಕುರುಂಕಿಟಾರ್ ೩೫
ಕುರುಂಬರನಾಡು ೧೭೧
ಕುರುಬರು ೨೯
ಕುರುವಲ್ಕೆ ವಿಷಯ ೧೧೪
ಕುಱುಂಜ್ಞಿ ೧೪, ೨೭, ೩೯
ಕುಱುಂದೊಗ್ಗೆ ೨೧, ೨೨, ೩೦, ೪೧, ೧೪೮, ೧೮೧, ೧೮೨
ಕುಱುನಿಲಮನ್ನರ್ ೩೬
ಕುಲಗಾಣ ೧೩೨, ೧೫೭, ೧೫೯
ಕುವಡಿ ೧೪೩
ಕುವಳ್ಳೆ ೧೫, ೧೬, ೨೨, ೨೧೪
ಕುಶಿನಗರ ೭೪
ಕುಟುಂಪಣ್ಣೆ ೫೫
ಕೂಡಲೂರುನಾಡು ೧೪೯

ಕೂಡಲ್ ೬೨, ೯೯, ೧೦೬
ಕೂತ್ತು ೧೮
ಕೂಮಗಂ ೧೫೬
ಕೂರ್ಗ್ ೧೩೧, ೧೬೫
ಕೂಟ್ರಿ ೫೪
ಕೃಷ್ಣ ೧೬, ೧೮, ೨೨, ೬೪, ೧೨೭, ೧೨೯
ಕೃಷ್ಣಮೂರ್ತಿ, ಕೆ. ೧೮
ಕೆ. ಜಿ. ನಾಗರಾಜಪ್ಪ ೧೮
ಕೆ.ಕೆ. ಪಿಳ್ಳೈ ೧೫೫
ಕೆ.ಜಿ.ಶೇಷಐಯ್ಯರ್ ೧೩೧
ಕೆಂಟ್ಯೆ ೨೨
ಕೆರ್ಗೋಲಿನ್ ಪ್ರಸ್ತಭೂಮಿ ೪೫
ಕೆಳಗುಂದಿ ೧೬೧
ಕೇಡಳದುರ್ಗ ೧೧೩
ಕೇಪ್‌ಕೊರೈ ೩೧
ಕೇರಳ ೩೩, ೩೮, ೩೯, ೭೮, ೮೨, ೯೫, ೯೭, ೧೨೦, ೧೨೧, ೧೩೫, ೧೪೧, ೧೫೮, ೧೭೦, ೧೭೭
ಕೇರಳ ಕರಾವಳಿ ೩೯
ಕೇರಳನಾಡು ೧೫೮
ಕೇರಳಮುತ್ರ ೩೩, ೩೮
ಕೇರಳೋತ್ಪತ್ತಿ ೧೭೩
ಕೈಕ್ಕಳೈ ೩೯
ಕೊಂಕಣ ೩೮, ೮೩, ೮೫, ೧೧೭, ೧೧೮, ೧೨೧, ೧೩೫, ೧೫೬, ೧೭೦, ೧೭೧, ೧೭೨, ೧೭೮, ೧೭೯, ೧೯೦, ೧೯೧, ೧೯೨, ೨೦೯
ಕೊಂಕಣ ಮೌರ್ಯ ೮೫
ಕೊಂಕಣಾಧಿಪತಿ ೧೫೯
ಕೊಂಕಣಿ ೨೫, ೩೨, ೧೧೭, ೧೧೮, ೧೨೦, ೧೨೩
ಕೊಂಕನಾಡು ೧೧೯
ಕೊಂಕಾಣಂಕೀಟಾನ್ ೨೧೦
ಕೊಂಕು ೫೫, ೧೧೯
ಕೊಂಗ ೭೮, ೧೦೩, ೧೦೪, ೧೦೭, ೧೧೧, ೧೧೮, ೧೧೯, ೧೨೨, ೧೩೪, ೧೪೯, ೧೫೪, ೧೬೭, ೧೬೮, ೧೬೯, ೧೭೦, ೧೭೧, ೧೭೨, ೧೭೬, ೧೭೯, ೧೮೧, ೧೮೪, ೧೯೧, ೧೯೩, ೨೧೨; ಕೊಂಗಾಧಿಪತಿ ೧೬೯
ಕೊಂಗಾಳ್ವ ೧೨೨, ೧೫೬
ಕೊಂಗಿಲವಂ ೧೬೯
ಕೊಂಗುನಾಡ್ ೧೦೭, ೧೭೧
ಕೊಡಗ ೨೫, ೩೨, ೩೪, ೯೬, ೯೭, ೧೦೯, ೧೧೧, ೧೧೭, ೧೨೦, ೧೨೧, ೧೨೩, ೧೪೬, ೧೬೭, ೧೬೮, ೧೭೦, ೧೭೩, ೧೭೫, ೧೭೭, ೧೮೦, ೧೯೧
ಕೊಡಗನ ೯೬, ೯೭
ಕೊಡಗಿನ ಬ್ರಹ್ಮಗಿರಿ ೧೦೫
ಕೊಡವ–ಕೊಂಕಣ ೧೭೯
ಕೊಣ್ಣೂರಿನ ೧೧೩
ಕೊಪ್ಪಳ ೭೬
ಕೊಬ್ಬೆ ೫೬
ಕೊಮರಲಿಂಗಂ ೧೬೨
ಕೊರ್ಕೆ ೩೫, ೫೬, ೫೭
ಕೊಲೆನೂರ್ ೯೮
ಕೊಲ್ಲಂ ೫೬, ೧೫೬
ಕೊಲ್ಲಿಡಮ್ ೯೮
ಕೊಲ್ಲಿನ್ ಡೇವಿಸ್ ೩೭
ಕೊಲ್‌ಬೈ ೩೧
ಕೊವೆಲ್, ಇ.ಬಿ. ೩೮
ಕೊಸರು ೧೭೭
ಕೋ ೫೫
ಕೋತ್ತೂ ೧೫೬
ಕೋಡಿಕ್ಕರೈ ೯೮
ಕೋಯಮುತ್ತೂರು ೩೯
ಕೋಲಾರ ೧೦೯, ೧೨೩, ೧೨೪
ಕೋಳಲ ೧೭೦
ಕೋವೂರ್‌ಕ್ಕಿಟಾರ್ ೧೦೦, ೧೨೫
ಕೋಶರ್ ೨೮, ೭೮, ೮೭, ೧೩೪, ೧೬೮, ೧೭೩, ೧೭೪, ೧೭೫, ೧೭೬, ೧೭೭, ೧೭೮, ೧೭೯,

೧೮೧
ಕೋಸಾಂಬಿ ೭೭
ಕೌಶಿಕನಾರ್ ೧೦೫, ೧೨೫
ಕ್ಯಾಲಿಫೋರ್ನಿಯಾ ೪೬, ೪೮, ೪೯
ಕ್ರಾಂಗನೂರ್ ೩೯
ಕ್ರೀಟ್ ೪೬
ಕ್ರೇಟೇಸಿಯನ್ ೪೪
ಖಡ್ಗಾವಲೋಕ ೧೧೪
ಖದುದ್ದಾರಿಂದ ೮೬
ಖರೋಷ್ಠಿ ೨೫, ೭೧, ೮೧, ೮೩
ಖಾರವೇಳ ೭೯, ೮೮
ಗಂಗ ೯, ೫೧, ೬೩, ೬೭, ೬೯, ೭೩, ೯೧, ೯೮, ೧೦೩, ೧೦೪, ೧೦೯, ೧೧೦, ೧೧೧, ೧೧೩, ೧೧೪, ೧೧೫, ೧೧೬, ೧೧೮, ೧೨೨, ೧೨೯, ೧೫೩, ೧೫೪, ೧೫೬, ೧೫೭, ೧೫೮, ೧೫೯, ೧೬೨, ೧೬೩, ೧೬೬, ೧೭೦, ೧೭೨, ೧೭೭, ೧೭೯, ೧೮೦, ೧೮೯, ೧೯೦
ಗಂಗವಾಡಿ-೯೬೦೦೦ ೧೧೧, ೧೫೮
ಗಂಗೆ ೫೦
ಗಂಗೈ ೧೦೬
ಗದಗು ೧೧೫
ಗದ್ಯಕಥೆಯ ಪೂರ್ವಾಚಾರ್ಯ ೮
ಗದ್ಯಕಾವ್ಯ ೧೩
ಗದ್ಯಾಶ್ರಮ ೧೩
ಗಾಯ್, ಜಿ.ಎಸ್ ೯೨
ಗಿರಿಜನ ೨೯, ೧೦೫
ಗಿರಿನಾರ್ ೭೨, ೮೨, ೧೭೩
ಗಿರಿರಾಜನ ಪುತ್ರಿ (ಪಾರ್ವತಿ) ೧೦೩
ಗುಜರಾತ್ ೮೨
ಗುಡ್ನಾಪುರ ೧೨೨, ೧೩೧, ೧೫೭, ೧೫೮, ೧೬೩
ಗುಣಕಾರ್ಯ ೫೫
ಗುಣಭದ್ರ ೧೦೨
ಗುಣಸೂರಿ ೧೩
ಗುತ್ತಿಕ ೮೪, ೮೫
ಗುರುದೇವ ಶಿವಯ ಸುಬ್ರಮಣಿಸ್ವಾಮಿ ೪೮, ೪೯
ಗುಲಬರ್ಗಾ ೭೬
ಗೈಲಾರ್ಡ್ ೪೮
ಗೊಂಡ್ವಾನ ೪೩, ೪೪, ೫೭
ಗೋದಾವರಿ ೧, ೫, ೧೦೮, ೧೧೦, ೧೧೫, ೧೧೬, ೧೨೪, ೧೨೮; ಗೋದಾವರಿ ಕನ್ಯೆ ೧೦೮
ಗೋಪಾಲ, ಬಿ.ಆರ್. ೧೩೧
ಗೋರೂರು ನರಸಿಂಹಾಚಾರ್ಯ ೧೨೭
ಗೋವಿಂದ-ತೈಲಪ ೧೦೮
ಗೋವಿಂದರಾಜು ೧೨೯
ಗೋವಿಂದವಾಡಿ ೧೧೪
ಗೌಡ ೮೨, ೧೨೧, ೧೨೮, ೧೪೩, ೧೫೩
ಗೌಡೀ ೩
ಗ್ರಂಥಲಿಪಿ ೯೦, ೯೧
ಗ್ರೀಕ್ ೨೪, ೨೫, ೪೩, ೪೬, ೫೬, ೫೭, ೭೧, ೮೧, ೧೫೫
ಗ್ರೀಕ್‌ಲ್ಯಾಟಿನ್ ೪೩
ಚಂದುಗ್ರಾಮ ೧೧೪
ಚಂದ್ರಗಿರಿ ೭೬
ಚಂದ್ರಗುಪ್ತ ಬಸದಿ ೭೬
ಚಂದ್ರಲೋಕಪಾಲ ೧೩
ಚಂದ್ರವಳ್ಳಿ ೧೨೨, ೧೩೧, ೧೫೧, ೧೫೬, ೧೫೮, ೧೬೦
ಚಂದ್ರೋಬಲಬ್ಬೆ ೧೩೦
ಚತುರಕವಿ ೯
ಚತ್ತಿರ ಪುರಾಣಂ ೬೧
ಚಲುವಾಂಬೆ ೧೨೭
ಚಾಮರಾಜನಗರ ೯೭, ೧೦೯, ೧೪೧
ಚಾರ್ಲ್ಸ್ ಡಿ. ಮರ್ಲಿಯನ್ ೫೦
ಚಾವುಂಡರಾಯ ೧೦೮, ೧೨೮
ಚಿಂತಿತ ಪುರಾಣಕವಿ ೯
ಚಿಕ್ಕಮಗಳೂರು ೧೬೧, ೧೭೭
ಚಿಟಗುಪ್ಪಿ ಭೀಮಸೇನರಾವ್ ೧೮
ಚಿತಬಿ ೮೫
ಚಿತ್ತಾಣ ೧೦

ಚಿತ್ತೂರು ೩೧
ಚಿತ್ರದುರ್ಗ ೭೬, ೮೫, ೯೦, ೯೪, ೧೨೧, ೧೩೧, ೧೫೧, ೧೬೦, ೧೬೧
ಚಿದಂಬರನಾರ್, ಟಿ. ೬೯
ಚುಟು ೮೯, ೧೧೭
ಚೆನ್ನೈ ೧೮, ೧೯, ೨೦, ೨೧, ೩೧, ೩೮, ೪೦, ೪೧, ೪೯, ೫೬, ೬೮, ೬೯, ೯೩, ೧೪೯, ೧೫೦, ೧೬೫
ಚೇರಕಟ್ಟೇಯ ೧೩೫
ಚೇರನ್ ಚೆಂಗುಟ್ಟುವನ್ ೮೪
ಚೋಳ ೨೧, ೩೫, ೩೬, ೫೬, ೯೧, ೯೯, ೧೦೦, ೧೨೭, ೧೩೯, ೧೪೧, ೧೬೮, ೧೭೨, ೧೭೬
ಚೋಳ ದೇಶ ೩೮, ೧೨೬
ಛಂದಃಶಾಸ್ತ್ರ ೬
ಜಂಬೈ ೧೪೧, ೧೭೪, ೧೮೩
ಜಮತಗ್ನಿ ೭
ಜಮದಗ್ನಿ ೭
ಜಯಬಂಧು ೧೩
ಜಾಕಿರಾಜ ೧೧೪
ಜಾಣ ೯, ೧೨೩
ಜಾತಕ ೩೮, ೭೪
ಜಾಫ್ನಾ ೮೧, ೮೨, ೯೩, ೧೬೫
ಜಿ.ಡಿ. ಸೊಂಥೈಮರ್ ೧೩೧
ಜಿಬ್ರಾಲ್ಬರ್ ೪೬
ಜೆ. ಎಸ್. ಗಾರ್ಡನರ್ ೬೦
ಜೆ. ಜಡ್. ನೈಟ್ ೪೮, ೪೯
ಜೆ.ಎಫ್.ಫ್ಲೀಟ್ ೧೫೮
ಜೇನುಕನ್ನಡ ೧೨೧
ಜೇಮ್ಸ್‌ಎಮರ್‌ಸನ್ ಬೆನ್ನೆಂಟ್ ೫೭
ಜೇಮ್ಸ್‌ಪ್ರಿನ್ಸೆಪ್ ೭೩
ಜೈನ ಐತಿಹ್ಯ ೭೫, ೭೬, ೮೮
ಜೈನ ಸಂಘ ೧೯, ೮೮
ಜೈನಗುಹಾಲಯ ೮೮
ಜೋಡ ೧೫, ೩೩
ಜೌಗಡ್ ೧೭೩
ಜ್ಞಾಜಲ್ ೧೯೯
ಜ್ವಲೆಬಿಲ್, ಕೆ. ೪೦, ೬೭
ಟಿಬೆಟ್ ೪೮
ಟೋಲಮಿ ೧೦೭, ೧೧೯, ೧೨೨, ೧೬೯
ಡಬ್ಲ್ಯು. ಟಿ. ಬ್ಲಾನ್‌ಫೋರ್ಡ್ ೪೯
ಡಬ್ಲ್ಯು. ಎಚ್. ಸ್ಕೋಪ್ ೧೩೧
ಡಾರ್ವಿನ್ ೪೭
ಡಿ. ಎ. ವಾಡಿಯಾ ೪೯
ಡೇಲಿಮೇಲ್ ೬೦
ಡೇವಿಡ್ ಯುಂಗ್ಲಾಸ್ ೪೮
ಡೇವಿಡ್ ಲುಡ್ ೨೧
ಡೊನೆಲ್ಲಿ ಇಗ್ನೇಷಿಯಸ್ ೬೬
ತಂಜಾವೂರ್ ೬೭
ತಕ್ಷಶಿಲೆ ೭೨, ೭೭
ತಗಡೂರ ೧೪೦, ೧೪೧
ತಗರ ೯೧, ೧೬೧, ೧೬೨
ತಡಗಣಿ ೯೧
ತಣಿನಾಯಗಮ್ ಝೇವಿಯರ್, ಎಸ್. ೪೦
ತಪೋಬನೆ (ತಾಮ್ರಪರ್ಣಿ=ಶ್ರೀಲಂಕೆ) ೫೭
ತಮಟಕಲ್ಲು ೮೫, ೯೧, ೧೬೧
ತಮಿಳಗಂ ೧೪, ೨೩, ೨೬, ೨೭, ೨೯, ೩೧, ೩೨, ೩೩, ೩೪, ೩೫, ೩೬, ೩೭, ೪೨, ೫೩, ೫೪, ೫೬, ೫೭, ೫೮, ೬೦, ೭೩, ೭೫, ೭೮, ೭೯, ೮೪, ೮೬, ೮೭, ೮೮, ೮೯, ೯೯, ೧೦೪, ೧೧೭, ೧೧೮, ೧೨೦, ೧೩೩, ೧೩೪, ೧೩೫, ೧೩೭, ೧೩೮, ೧೩೯, ೧೪೧, ೧೪೩, ೧೪೫, ೧೪೬, ೧೪೭, ೧೪೯, ೧೫೨, ೧೫೬, ೧೬೭, ೧೬೮, ೧೭೦, ೧೭೧, ೧೭೨, ೧೭೫, ೧೭೭, ೧೭೯, ೧೮೩, ೧೮೫, ೧೮೬, ೧೮೭, ೧೮೮, ೧೮೯, ೧೯೦, ೧೯೧, ೧೯೨, ೨೦೬
ತಮಿಳು ೧, ೩, ೪, ೫, ೬, ೧೦, ೧೧, ೧೪, ೧೯, ೨೧, ೨೩, ೨೫, ೨೬, ೨೭, ೨೯, ೩೦, ೩೨, ೩೩, ೩೪, ೩೫, ೩೭, ೩೯, ೪೦, ೪೧, ೪೨, ೫೧, ೫೨, ೫೩, ೫೭, ೫೮, ೫೯, ೬೦, ೬೧, ೬೭, ೬೮, ೬೯, ೭೩, ೭೮, ೭೯, ೮೨, ೮೬, ೮೮, ೮೯, ೯೦, ೯೧, ೯೪, ೯೫, ೯೬, ೯೭,

೯೮, ೧೦೦, ೧೦೨, ೧೦೪, ೧೦೫, ೧೦೬, ೧೦೮, ೧೦೯, ೧೧೨, ೧೧೩, ೧೧೬, ೧೧೭, ೧೧೮, ೧೧೯, ೧೨೦, ೧೨೧, ೧೨೨, ೧೨೩, ೧೨೪, ೧೨೮, ೧೩೩, ೧೩೫, ೧೩೮, ೧೪೧, ೧೪೨, ೧೪೩, ೧೪೪, ೧೪೫, ೧೪೬, ೧೪೭, ೧೪೯, ೧೫೧, ೧೫೨, ೧೫೩, ೧೫೪, ೧೫೫, ೧೫೬, ೧೬೦, ೧೬೭, ೧೭೦, ೧೭೨, ೧೭೩, ೧೭೪, ೧೭೬, ೧೭೯, ೧೮೦, ೧೮೧, ೧೮೨, ೧೮೩, ೧೮೪
ತಮಿಳು ಸಾಹಿತ್ಯ ೪, ೬, ೨೧, ೨೬, ೫೨, ೮೮, ೯೦, ೧೦೮, ೧೧೮, ೧೪೨, ೧೬೭
ತಮಿಳುಬ್ರಾಹ್ಮೀ ೧೧, ೨೧, ೨೫, ೪೨, ೭೩, ೮೧, ೮೮, ೯೦, ೯೧, ೧೦೨, ೧೨೦, ೧೨೧, ೧೪೧, ೧೪೩, ೧೪೪, ೧೪೫, ೧೪೬, ೧೪೭, ೧೭೪
ತಮಿಳುಲಿಪಿ ೧೦
ತಮಿಳ್‌ಚೊಕ್ಕನ್ ೬೩
ತಮಿಟ್‌ಕೂಱುಂ ೩೦
ತರೀಕೆರೆ ೧೮, ೧೬೨; ತರೀಕೆರೆ, ರಹಮತ್ ೧೮
ತಲಕಾಡ ೧೦೩, ೧೦೯, ೧೧೧, ೧೧೪
ತಲಕಾಡು ೧೦೩, ೧೦೯, ೧೧೪
ತಲಕಾವೇರಿ ೯೯, ೧೧೧, ೧೨೭
ತಲಗ್ವರ ೧೨೪
ತಲೆಗಾವ್ ೧೨೯
ತಲೈಯಾಲಂಕಾನತ್ತು ೧೩೮
ತಲೈಯಾಲಂಗಾನಲ್ ನೆಡುಂಚೆಟಿಯನ್ ೩೫
ತಲೈವಿ ೧೪, ೧೫, ೨೧, ೨೨
ತಳವನ ನಗರಜಿನಾಲಯ ೧೫೭
ತಳವನಪುರ ೧೦೯, ೧೧೪; ತಳವನಪುರಾಧೀಶ್ವರ ೧೧೩
ತಾಮಪ್ಪಲ್ ಕಣ್ಣನಾರ್ ೧೦೧, ೧೦೨, ೧೨೪
ತಾಮ್ರಪರ್ಣಿ ೩೩, ೩೮, ೫೭, ೭೭, ೮೨, ೧೭೩
ತಾಯಂಕಣ್ಣನಾರ್ ೧೨೪, ೧೩೬
ತಾಳಗುಂದ ೧೨೨, ೧೫೬, ೧೫೮, ೧೬೩, ೧೮೭
ತಾಸ್ಮಾನಿಯಾ ೪೭
ತಿಣೈನಿಲೈಪೆಯರ್ ೨೮
ತಿಣೈಮಯಕ್ಕಮ್ ೨೮
ತಿತ್ತನ್ ೧೦೦
ತಿದಿಯನ್ ೧೩೯
ತಿಯಾಸಾಫಿಸ್ಟರು ೪೬
ತಿಯೋಸಾಫಿಸ್ಟ ೪೪
ತಿರವುಮೊಳಿ ೧೬೭
ತಿರುಕ್ಕೋವಲೂರ್ ೧೪೧
ತಿರುಚಿನಾಪಳ್ಳಿ ೩೯, ೧೦೨
ತಿರುಚಿರಾಪಳ್ಳಿ ೯೮
ತಿರುತಾತಿಂಡಗಮ್ ತಿರುಪತೂತಿರು ೧೯
ತಿರುನಾವಕ್ಕರಸು ೩೮, ೪೦, ೧೪೮
ತಿರುನಾವುಕ್ಕರಸರ್ ತೇವಾರಂ ೧೯
ತಿರುನೆಲ್ವೇಲಿ ಜಿಲ್ಲೆಶ್ರೀವೈಕುಂಠಮ್ ೫೭
ತಿರುಪತಿ ೩೧, ೧೦೫
ತಿರುಪ್ಪರಂಕುಣ್ರಂ ೧೦೬
ತಿರುಮಕೂಡಲು–ನರಸೀಪುರ ೧೧೧, ೧೧೪
ತಿರುಮರೈ ೧೯
ತಿರುಮಾಣುತಾಗ್ನಿ ೭
ತಿರುಮೋರೆಕೋಳಿ ೧೫೯
ತಿರುಳ್ಗನ್ನಡ ೨೬, ೧೫೨
ತಿರುವಿಳೈಯಾಡಲ್ ಪುರಾಣಂ ೧೯
ತಿರುವೆಟ್ರಿಯೂರ್ ೬೧
ತಿರುನೆಲ್ವೇಲಿ ೧೬೫
ತಿಶೈಸೊಲ್ ೨೬
ತೀರದೇವಾಲಯ ೫೬
ತುಂಗಭದ್ರಾ ೧೧೭, ೧೨೧; ತುಂಗಭದ್ರೆ ೩೩
ತುಂಬೈ ಪುಷ್ಪ ೨೧೬
ತುಮಕೂರು ೧೨೩, ೧೩೨
ತುಳು ೨೨, ೨೫, ೩೨, ೫೫, ೬೮, ೭೮, ೧೦೩, ೧೦೬, ೧೦೭, ೧೧೭, ೧೧೮, ೧೨೦, ೧೨೩, ೧೨೭, ೧೩೫, ೧೩೬, ೧೪೪, ೧೫೬, ೧೬೭, ೧೭೧, ೧೭೨, ೧೭೩, ೧೭೫, ೧೭೮, ೧೭೯, ೧೮೦, ೧೮೮, ೧೯೦, ೧೯೧, ೧೯೨, ೧೯೩, ೧೯೪, ೨೦೯, ೨೧೦

ತುಳುನಾಡ ೫೫, ೧೭೧, ೧೭೨, ೧೭೩, ೧೭೮, ೧೭೯, ೧೯೧
ತುಳುವ ೨೫, ೧೫೬, ೧೭೩, ೧೭೮
ತುಲಿಲಾಳ್ ೧೭೮
ತೂಳು ೧೭೮
ತೃಣಧೂಮಾಗ್ನಿ ೭
ತೆಂಕು (ತೆಂಗು)ನಾಡು ೫೫
ತೆನ್ನವನ್ ಪಾಂಡ್ಯ ೫೪
ತೆನ್‌ಕಡಲ್ ೫೬, ೬೦
ತೆನ್‌ಕುಮರಿ ೩೧
ತೆನ್‌ಮದುರೈ ೫೧, ೫೨
ತೆಯ್ವಶ್ಶಿಲೈಯಾರ್ ೪೧
ತೆಲಗು ೨೪
ತೇನೂರ್ ಕೀಟೂರ್ ೬೭
ತೇರುಮಾಱನ್ ೧೦೩
ತೇರ್ವ್ವಣ್ ಮಲೈಯಣ್ ೧೯೮
ತೊಂಡುಮುದಲ್‌ಕಡಲ್ ೬೦
ತೊಂಡೈ ೫೬, ೧೦೪, ೧೦೫, ೧೩೬, ೧೮೭
ತೊಂಡೈಮಾನರ್ ೫೬
ತೊಂಡೈಯಾರ್ ೧೦೪, ೧೮೭
ತೊಗೈ ೧೯, ೧೯೯, ೨೦೦, ೨೦೩, ೨೦೬, ೨೧೨, ೨೧೫, ೨೧೭, ೨೧೮
ತೊಡಿಯೊಳ್ ೩೧, ೩೬
ತೊಲ್ಕಾಪ್ಪಿಯಂ ೧
ತೊಲ್ಕಾಪ್ಪಿಯನಾರ್ ೧, ೫, ೬, ೭, ೮, ೯, ೧೦, ೧೧, ೧೨, ೧೪, ೧೫, ೧೭, ೨೦, ೨೬, ೩೭, ೫೨
ತೊಲ್ಕಾಪ್ಪಿಯಮ್ ೧, ೪, ೫, ೬, ೭, ೯, ೧೦, ೧೪, ೧೮, ೧೯, ೨೧, ೨೬, ೩೦, ೩೧, ೩೭, ೩೮, ೪೦, ೪೧, ೧೦೬, ೧೫೬, ೧೬೫
ತೊಲ್ ೬, ೨೩, ೨೬, ೨೭, ೨೮, ೨೯, ೩೦, ೩೧, ೩೯
ತೊಟಿಲ್ ೧೭೮
ತೋಡುಕಡಲ್ ೬೦
ತೋಣಿಮರ ೬೩
ತ್ರಮಿಕದೇಶ ಸಂಘತಮ್ ೮೮
ತ್ರಿಷಷ್ಟಿಶಲಾಕಪುರುಷಚರಿತೆ ೧೦೮
ಥಾಪರ್, ರೋಮಿಲ ೩೭
ಥೇರ ರಖಿತ ೮೩
ಥೇರಾದ್ವೀಪ ೪೬
ದಂಡಿ ೨, ೩, ೮, ೧೮
ದಂತಿದುರ್ಗ ೧೧೪
ದಕ್ಷಿಣ ಅಮೆರಿಕೆ ೪೪
ದಕ್ಷಿಣ ಕುಮಾರಿ ೫೪
ದಕ್ಷಿಣಕಾವೇರಿ ೫೫
ದಕ್ಷಿಣಬ್ರಾಹ್ಮಿ ೭೩, ೯೦, ೧೫೧
ದಕ್ಷಿಣಮಾರುತ ೩೬
ದಖ್ಖಿಣ ೭೧, ೭೩, ೭೪, ೭೬, ೭೭, ೮೪, ೮೮, ೯೧, ೧೧೭, ೧೫೩
ದಖ್ಖಿಣಭಾರತ ೮೮
ದಗ್ಧಚರಣ ೧೫೭
ದಮರಿಕೆ ೩೮
ದಮಿಲ ೨೪, ೩೮
ದಮಿಲರಠ್ಠ ೨೪, ೩೮
ದಮ್ಮೆರಿಕೆ ೩೮
ದಮ್ಮಾಕ್ಕಡ ವಂದನಾಮಗೋತಿ ೭೪
ದಿ ಲುಮೂರಿಯಾ ಕಾಂಟಿನೆಂಟ್ ವಿಚ್ ವಾಜ್ ಡೆಸ್ಟ್ರಾಯ್ಡ್ ಬೈ ದಿ ಸೀ ೫೯
ದಿಂಡಿಗಲ್ ೧೨೦, ೧೨೧, ೧೪೦, ೧೫೨
ದೀಕ್ಷಿತರ್, ರಾಮಚಂದ್ರ, ೨೦
ದೀಪವಂಸ ೩೮
ದುಂಡೆಸ್, ಎ. ೬೭
ದುಂಬಿ ೮, ೧೬
ದುತತಿಗಾಮಿನಿ ೮೩
ದುರ್ಗ ೬೪
ದುರ್ವಿನೀತ ೧೩, ೧೫೭, ೧೬೫
ದೃಷ್ಟಾಂತಾಲಂಕಾರ ೧೨
ದೇಬೂರು ೧೫೭, ೧೫೯
ದೇವಾನಾಂಪಿಯ ೮೦, ೯೩

ದೇವಾನಾಂಪಿಯ ತಿಸ್ಸ ೮೦
ದೇವಾನಾಂಪ್ರಿಯ ೩೪
ದೇವಿನೇಯನ್ ೬೮
ದೈಮಿರಿಸ್ ೨೪
ದೊಡ್ಡಬಳ್ಳಾಪುರ ೧೩೨, ೧೫೮
ದ್ರವಿಡಾಧಿಪತಿ ೩೮
ದ್ರಾವಿಡ ೧, ೨, ೩, ೪, ೧೦, ೧೧, ೨೧, ೨೩, ೨೪, ೨೫, ೨೭, ೩೮, ೪೪, ೪೭, ೫೦, ೬೧, ೭೯, ೯೬, ೧೬೨, ೧೮೦, ೧೮೫
ದ್ರಾವಿಡಆರ್ಯ ೨
ದ್ರಾವಿಡದೇಶದ ದಂಡಿ ೨
ದ್ರಾವಿಡಾಧಿಪತಿ ೬೧
ದ್ವಾರಕೆ ೬೪
ಧರ್ಮಪುರಿ ೧೪೦, ೧೪೧
ಧವಳೋಪನೀತಿಮಾರ್ಗೋಚಿತಗತಿ ೯
ಧಾನ್ಯಕಟಕ ೭೪, ೭೫, ೭೬, ೮೦, ೯೨
ಧಾರಾವರ್ಷ ೧೩೦
ಧಾಸುಸೆನ ೮೫
ನಂಗಜಿ ೯೬
ನಂಜುಂಡಕವಿ ೧೨೪
ನಂದ ೩೮, ೮೬, ೯೧, ೯೨, ೧೩೦, ೧೭೨, ೧೮೫, ೧೮೬, ೧೯೬, ೧೯೮
ನಂದದೇವ ೯೨
ನಂದಿಕೊಟ್ಟೂರು ೧೬೬
ನಂದಿದುರ್ಗ ೧೨೩, ೧೨೪, ೧೮೮
ನಕ್ಕೀರರ್ ೩೧, ೫೧, ೫೪, ೬೭, ೧೦೧, ೧೨೫, ೧೩೭, ೧೩೮, ೧೩೯
ನಕ್ಷೆ ೫, ೧೪, ೫೭, ೫೮
ನಚ್ಚಿ ೭, ೨೦, ೨೮, ೩೧, ೪೦, ೪೧, ೧೦೬
ನಚ್ಚಿನಾರ್ಕ್ಕಿನಿಯಾರ್ ೭, ೨೦, ೪೧
ನಟ್ರಿಣೈ ೫೭, ೧೨೫, ೧೩೫, ೧೪೮, ೧೭೦, ೧೮೨, ೨೦೧, ೨೦೨, ೨೦೫, ೨೧೩, ೨೧೪
ನಡುಕಲ್ಲು ೧೨೦, ೧೨೧
ನಣ್ಣನ್ ೧೫೯, ೧೬೭, ೧೭೦, ೧೭೧, ೧೭೨, ೧೭೩, ೧೭೭, ೧೭೯, ೧೮೯, ೧೯೨, ೧೯೩, ೨೦೯, ೨೧೪, ೨೧೫, ೨೧೭
ನಣ್ಣನ್ ಉದಯನ್ ೧೭೨
ನಣ್ಣಾಕಣಾರ್ ೧೮೭
ನನ್ನೂಲ್ ೭, ೨೯, ೩೦, ೪೦
ನಪ್ಪಶಲೈಯಾರ್ ೧೦೧
ನಪ್ಪೂದಣಾರ್ ೧೧೭, ೧೨೫
ನಮಶ್ಶಿವಾಯ ಮುದಲಿಯಾರ್ ೩೮
ನರಸಿಂಹವರ್ಮ ೧೮೧
ನರಿದಾವಿ[ಳೆ]ನಾಡ್ ೧೪೭
ನರ್ಮದಾ-ಕೃಷ್ಣಾವಲಯ ೭೨
ನಱವು ೧೦೭, ೧೧೯
ನಲ್ಲಿಚ್ಚೈಯಣಾರ್ ೧೨೫
ನಲ್ಲೇರ್ಮಣಿಯಣ್ ೧೯೫
ನಳಂಕಿಳ್ಳಿ ೧೦೨
ನವಕಾಮನ ಹೆಬ್ಬೂರು ೧೫೭
ನಾಕನ್ ೧೯೬
ನಾಕಲಗೋಡು ೧೭೮
ನಾಗಣಾರ್ ೧೨೪
ನಾಗಾರ್ಜುನ ೧೩, ೮೪
ನಾಚಲ ಟ್ಯಾಬ್ಲೆಟ್ಸ್ ೪೮
ನಾಟ್ಟು ೫೫, ೬೮, ೯೯, ೧೪೬
ನಾಡ ೧, ೫, ೨೯, ೩೩, ೪೧, ೪೨, ೫೩, ೫೪, ೫೫, ೫೬, ೫೮, ೫೯, ೬೬, ೬೭, ೬೮, ೭೯, ೮೨, ೮೭, ೮೯, ೯೬, ೯೮, ೧೦೦, ೧೦೩, ೧೦೪, ೧೧೧, ೧೧೪, ೧೧೫, ೧೧೬, ೧೧೮, ೧೧೯, ೧೨೦, ೧೨೧, ೧೨೨, ೧೨೩, ೧೨೪, ೧೩೦, ೧೩೧, ೧೩೩, ೧೩೪, ೧೩೫, ೧೩೬, ೧೩೭, ೧೩೮, ೧೪೩, ೧೪೪, ೧೪೫, ೧೪೬, ೧೪೭, ೧೪೯, ೧೫೧, ೧೫೨, ೧೫೪, ೧೫೬, ೧೫೭, ೧೫೮, ೧೬೧, ೧೬೨, ೧೬೭, ೧೬೯, ೧೭೨, ೧೭೩, ೧೭೭, ೧೭೮, ೧೭೯, ೧೮೦, ೧೮೭, ೧೯೧, ೨೦೬, ೨೧೬, ೨೧೮
ನಾಡು ೧, ೫, ೨೯, ೩೩, ೪೧, ೪೨, ೫೩, ೫೪, ೫೫, ೫೬, ೫೮, ೫೯, ೬೬, ೬೮, ೭೯, ೮೨, ೧೧೪, ೧೧೮, ೧೧೯, ೧೨೦, ೧೨೧, ೧೨೩, ೧೨೪, ೧೩೦, ೧೩೧, ೧೩೩, ೧೩೫, ೧೩೮,

೧೪೪, ೧೪೫, ೧೪೬, ೧೪೭, ೧೪೯, ೧೫೦, ೧೫೨, ೧೫೬, ೧೫೭, ೧೫೮, ೧೬೭, ೧೬೯, ೧೭೨, ೧೭೩, ೧೭೭, ೧೭೮, ೧೭೯, ೧೮೦, ೨೦೬, ೨೧೬, ೨೧೮
ನಾಣ್ನುಡಿ ೧೨
ನಾಣ್ ಮಾಡಕೂಡಲ್ ೬೨
ನಾನ್‌ಮೋಟಿ ೧೭೫
ನಾಯನ್ಮಾರ್ ೯೪, ೧೮೪
ನಾರಾಯಣ ೧೩, ೬೭, ೬೮
ನಾಱಾವಿ ೧೦೭
ನಾಲೈಪತಿ ೧೯೬
ನೀಡಾಮಂಗಲಂ ೧೪೦
ನಿತ್ಯವಲ್ಲಭಮತದಿಂ ೯
ನಿತ್ಯೆಯ್ ೧೦೭, ೧೫೫
ನಿಲಂತರು ಪಾಂಡಿ ೩೦
ನೀಲಕಂಠನ್ ೫೩
ನೀತಿನಿರಂತರಕ್ರಮಮ್ ೯
ನೀತಿನಿರಂತರಾನುಗತಂ ೯
ನೀರ್ಪೆಯಟ್ರ್ ೫೬
ನೀರ್ದಂಟು ೫೫
ನೀಲಕಂಠಶಾಸ್ತ್ರಿ ಕೆ. ೭೦
ನೀಲಗಿರಿ ೩೯, ೭೭, ೧೦೭, ೧೧೬, ೧೧೭, ೧೧೮, ೧೧೯, ೧೨೩, ೧೩೪, ೧೩೫, ೧೩೬, ೧೬೮, ೧೮೭, ೧೮೮
ನೂರ್ಮಡಿ ಚೇರಲ್ ೧೭೧
ನೂಱ್ರುವರ್ ಕಣ್ಣರ್ ೧೧೭
ನೃಪತುಂಗ ೯, ೧೮, ೧೧೩, ೧೧೫, ೧೩೦
ನೃಪತುಂಗ ದೇವಾನುಮತಂ ಶ್ರೀವಿಜಯ ಪ್ರಭೂತಂ ೧೮
ನೃಪತುಂಗದೇವನ್ ಆದರದೊಳ್ ಪೇೞ್ದಮಾರ್ಗಗತಿ ೯
ನೃಪತುಂಗದೇವಮಾರ್ಗ ೯
ನೃಪತುಂಗದೇವವಿದಿತಕ್ರಮ ೯
ನೃಪತುಂಗದೇವಾನುಮತದೊಳ್ ೯
ನೆಡನೂರ್‌ಪತ್ತಿ ೧೪೪
ನೆಡಿಯೊಳ್ ೩೬
ನೆಡಿಯೋನ್ ೩೧, ೫೪
ನೆಡುಂಕೀಱಣಾರ್ ೧೦೦, ೧೨೪
ನೆಡುಂಚೆಟಿಯನ್ ೩೫, ೧೦೩
ನೆಡುಚೇರನ್ ಆದನ್ ೩೪
ನೆಡುಮುಡಿಕ್ಕಿಳಿ ೬೨
ನೆಡುಮೋಟಿ ೧೬೭, ೧೮೦
ನೆಯ್ದಲ್ ೧೪
ನೆರುಂಜಿ ೧೯೧, ೨೧೦
ನೆಲಮಂಗಲ ೧೧೩
ನೋಯಿಲ್ ೯೬
ನೌರ ೧೦೭, ೧೫೫
ನ್ಯಾಷನಲ್ ಜಿಯೋಗ್ರಫಿ ೬೦
ಪಂಚತಿಣೈ ೩೬
ಪಂಡಿತ ೧, ೨, ೪, ೭, ೮, ೯, ೧೩, ೧೯, ೨೦, ೩೦, ೪೧, ೪೯, ೫೦, ೫೨, ೬೭, ೧೦೨
ಪಂಡಿತವೃಷಭ ೮
ಪಂಪ ೧೦೮, ೧೨೪, ೧೨೮, ೧೫೨
ಪಱ್ರುಳಿ ೩೧, ೩೪, ೫೨, ೫೪, ೫೫, ೫೬, ೬೦, ೧೨೪
ಪಟ್ಟಿನಪಾಲೈ ೧೨೪, ೧೩೧
ಪಡಿಯನ್ ಕೊಱ್ರನಾರ್ ೬೭
ಪಣೈನಾಡು ೫೫
ಪಣ್ಣನ್ ೧೦೦
ಪಣ್ ೩೬, ೬೮
ಪತ್ತುಪಾಟ್ಟು ೧೯, ೨೧, ೩೧, ೩೫, ೯೯, ೧೦೦, ೧೦೧, ೧೦೫, ೧೧೬, ೧೧೭
ಪದಿನಾಡು ೧೫೮
ಪದಿನೇಟ್ಕೀಳ್‌ಕಣಕ್ಕು ೧೯
ಪದಿಱ್ರುಪತ್ತು ೩೪, ೮೪, ೧೫೩, ೧೫೪, ೧೬೮, ೧೬೯, ೧೭೦
ಪನಂ ೭, ೮, ೩೦, ೩೧, ೩೫, ೩೭, ೪೧
ಪನಂಪಾರನಾರ್ ೭, ೮, ೩೦, ೩೧, ೩೭, ೪೧

ಪನ್ನೈನಾಡು ೫೬
ಪನ್ನಲೈನಾಡು ೫೬
ಪನ್ರಿನಾಡು ೨೯
ಪಬ್ಬಜ್ಜಾ ೮೩
ಪರಂಕುಣ್ರಮ್ ೧೦೬
ಪರಂಗಿವೇಟ್ಟೈ ೯೮
ಪರಂಜ್ಯೋತಿಮಣಿವರಂ ೬೩
ಪರಂಬು ೧೭೧
ಪರಣರ್ ೧೦೧, ೧೨೨, ೧೨೪, ೧೪೧, ೧೭೧, ೧೭೬, ೧೯೧, ೧೯೨, ೧೯೩, ೨೧೨, ೨೧೫, ೨೧೭
ಪರದವರ್ ೨೮, ೧೦೦, ೧೦೧, ೧೨೫, ೧೩೪, ೫೯, ೬೧, ೬೨, ೬೭, ೭೯, ೧೦೮, ೧೧೭, ೧೨೦, ೧೨೯, ೧೩೮, ೧೪೭, ೧೫೨, ೧೬೭, ೧೮೧, ೧೮೪, ೧೮೬, ೧೯೬, ೧೯೭
ಪರದವರ್‌ಮತ್ತಿ ೧೦೦
ಪರನವಿತನ ೯೨
ಪರಮಾಗಮ ಕೋವಿದ ೮
ಪರಮಾಚಾರ್ಯ ೮
ಪರಯನ್‌ಪತ್ತು ೧೪೬
ಪರಶುರಾಮ ೬೪
ಪರಾಂತಕ ನೆಡುಂಜಡಿಯನ ೧೮೧
ಪರಿಪ್ಲಸ್ ೩೧
ಪರಿಸೈ ೧೮
ಪಲ್ನಾಡ್ ೧೬೬
ಪಲ್ಲವ ೨೧, ೫೬, ೬೯, ೮೬, ೮೯, ೯೧, ೧೦೨, ೧೦೩, ೧೦೫, ೧೧೨, ೧೮೦, ೧೮೧
ಪಲ್ಲವಗ್ರಂಥ ೮೬
ಪಳನಿ ೩೯, ೧೨೦, ೧೪೦
ಪಳವನ್ ೧೨೭
ಪವತ್ತಿರಿಪಟ್ಟಣ ೧೦೪
ಪಸುಮ್‌ಪಾಂಡ್ಯ ೧೭೧
ಪಾಟಿ ೮೭, ೧೭೨
ಪಾಂಡಿಕ್ಕೊಡುಮುಡಿಯರ್ ೧೦೩
ಪಾಂಡಿನಾಡು ೨೯, ೧೪೯
ಪಾಂಡಿಯ ೩೦, ೩೩, ೩೫, ೩೮, ೫೨, ೭೭, ೧೦೩
ಪಾಂಡ್ಯರಾಜ ೮, ೧೯, ೩೫, ೫೧, ೫೨, ೫೩, ೫೪,
ಪಾಡಲ್ ೩೬, ೧೦೭
ಪಾದಾಣರ್ ೧೫೬
ಪಾನಾಟ ೧೪೬
ಪಾಮಯಾ ೪೭
ಪಾಮಲೈ ಗಿರಿ ೧೭೧
ಪಾಯಿರಂ ೩೦
ಪಾರಮ್ ೧೯೨
ಪಾರಸಿಕ ೧೧೨
ಪಾರ್‌ಪ್ಪಾರ್ ೧೦೨
ಪಾಲಾರ್ ೧೧೬, ೧೨೩, ೧೨೪
ಪಾಲಿ ೨೧, ೨೪, ೨೬, ೩೮, ೪೦, ೬೮, ೭೪, ೭೫, ೮೬, ೧೭೪
ಪಾಲೈ ೧೪, ೨೭, ೩೯, ೧೨೪
ಪಾಲೈಪಾಡಿಯ ಪೆರುಂಕುಡುಂಗೋ ೧೯೨, ೨೧೪
ಪಾಳಿ ೧೩೬, ೧೯೧
ಪಿ.ಜಿ. ಥೋಮ್ ೧೭೩
ಪಿ.ಟಿ. ಶ್ರೀನಿವಾಸ ಐಯ್ಯಂಗಾರ್ ೧೮೩
ಪಿಚ್ಚಂದಿಯವ ೯೩
ಪಿತಿನಿಕ ೩೩, ೩೮
ಪಿನಾಕಿನಿ ೧೨೩
ಪಿರಂಬು ೧೯೨
ಪಿಟ್ಬೊಲೈ ೫೫
ಪಿಳ್ಳೈ, ಕೆ.ಕೆ. ೯೩
ಪುಂಗರಿ ೭೨
ಪುಂಡ್ರ ೩೮
ಪುಂರಾಜ ೧೫೮
ಪುಗಾರ್ ೩೬, ೫೬, ೬೧, ೬೨
ಪುಗಾರ್‌ಕಾಂಡ ೩೬
ಪುಗಾರ್‌ಕ್ಕಾಂಡಮ್ ೧೨೪
ಪುಣ್ಣಾಟು ೧೫೬
ಪುಣ್ಣಾಡು ೧೫೫

ಪುಣ್ಣೈ ೨೦೫
ಪುತ್ತಳಂ ೮೨
ಪುದುಕ್ಕೋಟೆ ೫೫, ೧೨೦, ೧೨೧
ಪುನಱುಱ್ಱೈ ೧೭೨
ಪುನಲ್‌ನಾಡು ೨೯
ಪುನಾಟ-೬೦೦೦ ೧೫೮
ಪುನಾಡು ೧೫೭, ೧೫೮
ಪುನಾಡು-೧೦೦೦, ೧೫೮
ಪುನಾಡು-೬೦೦೦ ೧೫೭
ಪುನ್ನಾಟ ೭೮, ೧೧೦, ೧೧೧, ೧೧೪, ೧೨೨, ೧೪೬, ೧೫೧, ೧೫೫, ೧೫೬, ೧೫೭, ೧೫೮, ೧೫೯, ೧೬೦, ೧೬೧, ೧೬೨, ೧೬೩, ೧೬೬, ೧೬೯, ೧೭೬, ೧೭೯, ೧೮೮, ೧೮೯, ೧೯೧, ೨೦೯
ಪುನ್ನಾಟ-೭೦ ೧೫೮
ಪುನ್ನಾಟವಿಷಯ ೧೧೪
ಪುನ್ನಾಡು ೧೧೪, ೧೫೬, ೧೫೭
ಪುನ್ರರಾಜ ೧೭೨
ಪುನ್ರಟ್ಟೈ ೧೭೭
ಪುರತ್ತಿಣೈನಣ್ಣಾಕ್ಕಣಾರ್ ೧೦೫, ೧೯೪
ಪುರಾಣ ೮, ೯, ೧೯, ೨೪, ೩೮, ೫೨, ೫೩, ೬೧, ೬೩, ೬೪, ೬೮, ೬೯, ೭೦
ಪುರಾಣ-ಕಾವ್ಯಪ್ರಯೋಗ ೯
ಪುರಾಣ-ಶಾಸ್ತ್ರೋಕ್ತಂಗಳ್‌ತದನುಮತಂ ೯
ಪುರಾಣಕವಿ ೮, ೯
ಪುರಾಣಲಿಂಗಂ ಪಿಳ್ಳೈ ೬೮
ಪುರಾಣಿಕ್ ಇಂಡಿಯ ಆಫ್ಟರ್ ದಿ ಡೆಲೂಜ್ ೫೮
ಪುರಾತನಕವಿ ೮
ಪುರುಳ್ ೨೦
ಪುಱಂ ೬, ೯, ೧೦, ೩೬, ೫೩
ಪುಱತ್ತಿಣೈ ನಣ್ಣಕಣಾರ್ ೧೯೪
ಪುಱನಾನೂಱು ೩೧, ೩೪, ೪೧, ೬೮, ೬೯
ಪುಲಿಕೇಶಿ ೧೧೨
ಪುಲಿಗೆರೆ ೧೫೨
ಪುಲಿಗೆಱೆ-ಒಂಕುದ ೧೨೩
ಪುಲಿನಾಡು ೨೯
ಪುಲ್ಲಿ ೧೦೫, ೧೩೬, ೧೮೭
ಪುಳ್ಳಿ ೩೧
ಪುಳ್ಳುನಾಟು ೧೫೫
ಪುಸಬಿ ೮೫
ಪುಸ್ಸ ೮೫
ಪೂಂಪುಗಾರ್ ೩೬, ೫೬
ಪೂಣೆಗ ೯
ಪೂತಪುರಾಣಂ ೫೨
ಪೂಟಿನಾಡು ೧೭೧
ಪೂರಿಕ್ಕೋ ೨೧
ಪೂರ್ವಕವಿ ೮
ಪೂರ್ವಶಾಸ್ತ್ರಪದವಿಯಂ ೯
ಪೂರ್ವಾಚಾರ್ಯರು ೭
ಪೂಲಂಗುರುಚಿ ೧೪೯
ಪೂಲಿಯರ್ ೨೮
ಪೆಣ್ಣಾಗಡಮ್ ೧೦೩
ಪೆಣ್ಣಾರ್ ೧೨೩, ೧೨೪
ಪೆಣ್ಣೈ ೫೫
ಪೆನಿನ್ಸುಲರ್ ಇಂಡಿಯ ೫೦
ಪೆರಾಶಿರಿಯರ್ ೪೧
ಪೆರಿಪ್ಲಸ್ ೩೮, ೧೦೭, ೧೧೯, ೧೩೧, ೧೫೫
ಪೆರಿಯಪುರಾಣ ೬೩, ೭೦, ೧೫೬, ೧೫೭, ೧೬೫
ಪೆರುಂಗದೈ ೩೪
ಪೆರುಂಚೇರಲ್ ಶೆಂಗುಟ್ಟುವನ್ ೧೫೩
ಪೆರುಂಪಟ್ರಿಪ್ಪುಲಿಯೂರ್ ೬೩
ಪೆರುಂಬಾಣಪಾಡಿ ೧೮೭
ಪೆರುವಳನಾಟ ೫೨
ಪೆರುವಳನಾಡ ೫೬
ಪೆರುವೇಳಿರ್ ೧೩೯, ೧೪೧
ಪೆರ್ವ್ವಡಿ ೧೧೩
ಪೆಲರಿಯನ್ ೪೭
ಪೇರಾಳಿ ೬೦
ಪೇರುಂತಿಣೈ ೩೯

ಪೇಶಾವರ ೭೧
ಪಟ್ಟೈಯ ತಮಿಬಿಗಂ ೫೮
ಪಟ್ಟೈಯಣ್ ೧೭೨
ಪಟ್ಟೈಯನ್ ೧೭೭
ಪೈಲೋಸ್ ೪೮
ಪೊದಿಯ ೮೭
ಪೊದಿಯಿಲ್ ೩೫, ೩೬
ಪೊನ್ನ ೧೦೮, ೧೦೯, ೧೨೪, ೧೨೮
ಪೊನ್ನಿಯಾರ್ ೯೬
ಪೊಯ್‌ಗೈಯಾರ್ ೧೦೦, ೧೨೫
ಪೊರುಣ್ಣೈ ೯೯, ೧೨೪
ಪೊರುನನ್ ೧೩೯
ಪೊರುನರ್‌ಆಟ್ರುಪಡ್ಡೈ ೨೯
ಪೊರುಳ್ ೬, ೨೧, ೩೯, ೫೩, ೬೭
ಪೊಟ್ರೊಮರ‍್ಯ ಕಲ್ಯಾಣ ೬೩
ಪೋರ್ತುನೋವೋ ೯೮
ಪೋವ್ವೆಕ್ಕೋಪ್ಪೆರುವರ್‌ಕಿಳ್ಳಿ ೧೩೭
ಪ್ಯಾಸಿಫಿಕ್‌ಸಾಗರ ೪೩
ಪ್ರಣಯಗೀತೆ ೬, ೧೦, ೧೫, ೨೧
ಪ್ರಣವತೋಣಿ ೬೩
ಪ್ರದೀಪ್‌ಕುಮಾರ್ ೧೨೯
ಪ್ರಭಾವತಿ ೧೫೬, ೧೫೮
ಪ್ರಳಯಬಂಧಿನಿ ೬೪
ಪ್ರಾಕೃತ ೨೧, ೨೪, ೭೧, ೭೨, ೭೩, ೭೪, ೭೫, ೮೦, ೮೧, ೮೨, ೮೩, ೮೬, ೮೯, ೯೧, ೧೧೭, ೧೧೮, ೧೨೧, ೧೪೫, ೧೫೧, ೧೬೦, ೧೬೩, ೧೮೦
ಪ್ರೋಟೋ-ದ್ರಾವಿಡ ೨೭
ಪ್ಲಿನಿ ೩೧, ೩೮, ೫೭, ೧೫೫, ೧೫೬
ಪ್ಲೇಟೋ ೪೬, ೬೬
ಪ್ಲೇಟ್ ಮೂವ್‌ಮೆಂಟ್ ೬೦
ಫಾಯಿಯಾನ ೮೩
ಫಿಲಿಪ್ ಲುಟ್ಲಸ್ಕ್ಯಾಲ್ಲರ್ ೪೩
ಬಂಕೇಶ ೧೧೩, ೧೧೫
ಬಂಗಾಳ ಸಮುದ್ರ ೯೮, ೧೧೨
ಬಂಗಾಳಕೊಲ್ಲಿ ೩೧, ೩೫
ಬಂಗಾಳಸಾಗರ ೯೯
ಬದಣಗುಪ್ಪೆ ಗ್ರಾಮ ೧೫೭
ಬನವಾಸಿ ೩೩, ೭೯, ೮೨, ೮೩, ೮೪, ೮೫, ೧೦೮, ೧೧೭, ೧೫೧, ೧೫೨, ೧೫೩, ೧೫೫, ೧೫೮, ೧೬೦
ಬನೌಸೆ ೧೨೨
ಬರ್ಮಾ ೪೮
ಬಲಗಲ್ ಕೊರಲೆ ೮೨
ಬಸವನಪುರ ೧೬೨
ಬಹುರಾಷ್ಟ್ರೀಯ ಸಾಗರತಳಶೋಧ ೪೫
ಬಾಣರಾಜ ೧೭೨
ಬಾಣವಾಡಿ ೧೮೮
ಬಾಣಾಸುರ ೬೪
ಬಾದಾಮಿ ಚಾಳುಕ್ಯ ೮೬
ಬಾಳಗೋಡು ೧೭೮
ಬಾಳ್ಗೋಡು ೧೭೮
ಬಿ.ಸಿ. ೩೦,೦೦೦ ಇಂಡಿಯಾ: ತಮಿಳ್‌ನಾಡು ೫೮
ಬುನೇರ್ ೭೧
ಬೂತುಗ ೧೩೦
ಬೃಹತ್‌ಸಂಹಿತಾ ೨೪
ಬೃಹದ್ಬಾಣ ೧೮೭
ಬೆಂಗಳೂರು ೧೮, ೧೯, ೬೯, ೭೦, ೯೬, ೧೦೯, ೧೧೩, ೧೨೩, ೧೨೮, ೧೩೦, ೧೫೧, ೧೬೧, ೧೬೨
ಬೆದಂಡೆ ೧೦
ಬೆಳ್ವೊಲ ೧೫೨
ಬೇಲೂರು ೧೫೦, ೧೬೧, ೧೬೨
ಬೈಗೋಡು ೧೭೮
ಬೊಬ್ಬೂರು ರಂಗಕವಿ ೧೨೭
ಬೋಧಿಸತ್ವ ಸಿದ್ಧಾರ್ಥ ಗೌತಮ ೭೧
ಬೌದ್ಧ ೧೯, ೨೧, ೭೧, ೭೩, ೭೪, ೭೫, ೭೬, ೭೭, ೭೯, ೮೦, ೮೨, ೮೩, ೮೪, ೧೫೧, ೧೬೩, ೧೮೧

ಬ್ರಹ್ಮಗಿರಿ ೭೧, ೭೨, ೭೬, ೭೭, ೭೮, ೮೩, ೯೬, ೧೦೭
ಬ್ರಹ್ಮಾಂಡ ೨೪, ೩೮
ಬ್ರಾಹ್ಮೀ ೧೧, ೨೧, ೨೫, ೪೨, ೭೧, ೭೨, ೭೩, ೭೪, ೭೫, ೭೯, ೮೦, ೮೧, ೮೨, ೮೩, ೮೪, ೮೫, ೮೬, ೮೮, ೯೦, ೯೧, ೯೨, ೯೩, ೧೦೨, ೧೧೭, ೧೨೦, ೧೨೧, ೧೪೧, ೧೪೩, ೧೪೪, ೧೪೫, ೧೪೬, ೧೪೭, ೧೫೧, ೧೬೦, ೧೭೪
ಬ್ರಾಹ್ಮೀ ಲಿಪಿ ೨೫, ೭೧, ೭೨, ೭೩, ೭೪, ೭೫, ೭೯, ೮೦, ೮೨, ೮೮, ೯೦, ೯೧, ೧೧೭, ೧೨೧
ಬ್ರಿಟಿಷ್ ಅಡ್ಮಿರಾಲ್ಟಿಸೀಲಾರ್ಕ್ ೪೫
ಬ್ಲವಟಸ್ಕಿ, ಎಚ್. ಪಿ. ೬೬
ಬ್ಲಾನ್ ಫೋರ್ಡ್, ಎಚ್. ಎಸ್. ೬೬
ಭದ್ರಬಾಹು ಪಾದುಕೆ ೭೬
ಭದ್ರಬಾಹು-ಚಂದ್ರಗುಪ್ತರು ೭೫, ೭೬, ೮೮
ಭರತಖಂಡ ೨೩, ೭೧, ೭೩
ಭವಾನಿ ೯೬
ಭಾಗವತ ೨೪, ೩೮, ೬೧
ಭಾಗವತಪುರಾಣ ೬೧
ಭಾಮಹ ೨, ೩, ೮, ೧೮
ಭಾರವಿ ೧೩
ಭಾಷಾನಕ್ಷೆ ೧೪
ಭೀಮಾನದಿ ೭೭
ಭೀಷ್ಮ ೨೪, ೩೮, ೬೪
ಭೂತನಮಂಗಳ ೧೮೧
ಮಂಗಳಂ ೮೯
ಮಂಗಳಪುರ (ಮಂಗಳೂರು) ೧೦೩
ಮಂಗಳೂರ್ ೧೫೫, ೧೭೭
ಮಂಗೋಡಿ ೧೧೮
ಮಂಡ್ಯ ೯೭, ೧೧೯, ೧೪೧
ಮಟಿಕೊಂಗಮನ್ ೧೦೩
ಮಗಧ ೭೫
ಮಡಕೇರಿ ೧೨೨, ೧೩೧, ೧೪೧
ಮಡಗಾಸ್ಕರ್ ೪೩, ೪೪, ೪೬, ೬೫
ಮಣಲೂರ್ ೫೨
ಮಣಿಮಲೈ ೫೫
ಮಣಿಮಿಡೈ ಪವಳಂ ೪೧, ೧೨೪
ಮಣಿಮೇಗಲೈ ೪, ೧೯, ೩೨, ೪೧, ೫೭, ೬೧, ೬೨, ೭೦, ೭೯, ೯೨, ೧೦೦, ೧೦೫, ೧೦೬, ೧೧೮, ೧೨೪, ೧೨೫
ಮಣಿಮೇಗಲೈದೇವಿ ೬೨
ಮಣ್ಣೆ ೧೧೩, ೧೧೫
ಮತಿಯನ್ ೧೦೪
ಮತಿರೈ ೩೯
ಮತ್ತೂರು ೩೯, ೫೫, ೧೧೯, ೧೨೩
ಮತ್ಸ್ಯ ೨೪, ೩೮, ೫೭, ೬೧, ೬೯, ೧೮೧, ೧೯೯
ಮತ್ಸ್ಯಪುರಾಣ ೬೧, ೬೯
ಮದುತಿರುಮಾರನ್ ೫೨
ಮಧರೈ ೧೯, ೩೬, ೩೯, ೪೧, ೪೨, ೫೧, ೫೨, ೫೪, ೫೫, ೬೧, ೬೨, ೬೩, ೬೭, ೮೮, ೯೯, ೧೦೬, ೧೦೭, ೧೩೭, ೧೩೮, ೧೩೯, ೧೭೭, ೧೮೦, ೧೮೨, ೧೮೩, ೧೮೬
ಮಧರೈ ಇಳಂ ಗೌಸಿಕನಾರ್ ೧೩೭
ಮಧರೈಕ್ಕಣಕ್ಕಾಯನಾರ್ ಮಗನಾರ್ ೬೭
ಮದ್ರಾಸ್ ಸರಕಾರ ೫೦
ಮಧುರ ಕರುನಾಡಕನ್ ೧೦೩, ೧೦೪
ಮಧುರೆ ೩೬
ಮಧ್ಯಭಾರತ ೭೭
ಮನಸಿಜಳ್ ೧೧೪
ಮನು ೬೧
ಮನ್ನರ್ ೩೬, ೧೦೦
ಮನ್ನೇರಾ ೧೭೩
ಮಯಿಲೈನಾಥರ್ ೭
ಮಯೂರವರ್ಮ ೧೫೬
ಮರಗೋಡು ೧೭೭
ಮರವರ ೨೮, ೨೦೪
ಮರವೂರ್ ೧೩೩
ಮರುಡೂರು ೧೦೩
ಮರುತರು ೧೩೩

ಮರುದಮ್ ೧೪, ೨೯, ೩೯, ೧೦೦
ಮರೋಕತ್ತು ನಪ್ಪಶಲ್ಲೆಯಾರ್ ೧೦೦, ೧೨೫
ಮಲಬಾರು ೧೭೩
ಮಲಯ ೪೭, ೬೧, ೬೫
ಮಲವರ್ ೧೩೪
ಮಲುಹಳ್ಳಿ ೧೨೨, ೧೩೨
ಮಲೈ ೧೮, ೨೯, ೩೦, ೩೧, ೪೦, ೫೫, ೫೬, ೧೦೫, ೧೨೦, ೧೨೧, ೧೨೫, ೧೨೬, ೧೨೭, ೧೩೬, ೧೪೦, ೧೭೧, ೧೮೯, ೧೯೮
ಮಲೈನಾಡು ೨೯
ಮಲೈಪಡುಕಡಾಮ್ ೨೯, ೪೦, ೧೦೫
ಮಲೈಮಾಣ್ ತಿರುಮುಡಿಕ್ ೧೯೮
ಮಲೈಯಣ್ ೧೯೮
ಮಲ್ಪೆ ೧೫೫
ಮಲ್ಲೇನಹಳ್ಳಿ ೧೬೨
ಮಲ್ಲೋಹಳ್ಳಿ ೧೬೧, ೧೬೨
ಮಳವರ ೧೪೦
ಮಳವಳ್ಳಿ ೧೬೦
ಮಹದೇವ ೬೮, ೮೩, ೧೩೧, ೧೪೪, ೧೪೯, ೧೫೦, ೧೬೪, ೧೮೨
ಮಹಬಲಿ ೧೮೮
ಮಹಾಕಾಳಿ ೬೪
ಮಹಾಕಾವ್ಯ ೪, ೮, ೬೧, ೧೮೬
ಮಹಾದೇವನ್ ೩೮, ೬೮, ೯೪, ೧೨೭, ೧೩೦, ೧೩೧, ೧೪೬, ೧೪೭, ೧೪೯
ಮಹಾಬಲಿಪುರಂ ೫೬, ೬೧
ಮಹಾಭಾರತ ೨೪, ೩೮
ಮಹಾಮಾತ್ರ ೭೭
ಮಹಾರಥ ೧೦೩, ೧೦೪
ಮಹಾರಾಷ್ಟ್ರ ೮೨, ೮೩, ೧೨೯
ಮಹಾವಂಸ ೮೨, ೮೪
ಮಹಾವ್ಯೋ ೮೨
ಮಹಾಶಾಸನ ೩೮
ಮಹಾಸಾಂಘಿಕ ೭೪
ಮಹಾಸ್ತೂಪ ೭೫, ೭೭, ೯೨
ಮಹಿಂದ ೮೧, ೮೩, ೮೪, ೯೩
ಮಹಿಂದಥೇರ ೯೩
ಮಹಿಶಾಸಕ ೮೩
ಮಹಿಷ ೩೩, ೩೪, ೩೮, ೭೮, ೮೩, ೧೩೮, ೧೫೨, ೧೫೩
ಮಹಿಷಕ ೩೮
ಮಹಿಷಮಂಡಲ ೩೩, ೭೮, ೮೩, ೧೫೨
ಮಹೇಂದ್ರ ೮೦
ಮಾಂಗುಡಿ ಕಿಲಾರ್ ೧೪೮
ಮಾಂಗುಡಿ ಮರದನ್ ೧೩೮
ಮಾಂಬಳ್ಳಿ ೧೧೦, ೧೨೨, ೧೨೮, ೧೫೭, ೧೬೦, ೧೬೧
ಮಾಗಧಿ ೭೫, ೮೩
ಮಾಘ ೧೩
ಮಾಚೇನಹಳ್ಳಿ ೧೬೨
ಮಾಡಮ್ ೬೨
ಮಾಡುಗಲ ೧೬೧
ಮಾಮಲ್ಲಪುರಂ ೫೬, ೬೯
ಮಾಮೂಲನಾರ್ ೮೬, ೮೭, ೧೦೧, ೧೦೫, ೧೧೬, ೧೨೪, ೧೩೫, ೧೩೬, ೧೪೬, ೧೫೨, ೧೫೩, ೧೫೪, ೧೬೭, ೧೭೩, ೧೭೫, ೧೭೬, ೧೯೨
ಮಾಯಾಪುರಾಣಂ ೫೨
ಮಾರನೇ ೧೯೭; ಮಾರನ್ ೩೬, ೫೨
ಮಾರ್ಗಕಾರ ೧, ೨, ೩, ೫, ೭, ೮, ೧೦, ೧೧, ೧೨, ೧೩, ೧೪, ೧೬, ೧೭, ೨೪, ೨೫, ೨೬, ೩೨, ೯೫, ೯೬, ೯೭, ೯೮, ೧೦೪, ೧೦೮, ೧೦೯, ೧೧೦, ೧೧೩, ೧೧೫, ೧೧೬, ೧೨೩, ೧೨೪, ೧೨೯, ೧೩೨, ೧೫೨
ಮಾರ್ಗಕ್ರಮ ೯
ಮಾರ್ಗದರ್ಶಿ ೮
ಮಾರ್ಗಭೇದ ೩
ಮಾರ್ಗಾನುರೂಪ ಪದಪ್ರಯೋಗ ೯
ಮಾರ್ಗೀ ೩, ೧೩, ೧೪, ೩೦, ೩೬, ೧೪೨
ಮಾರ್ಗೋದಿತಕ್ರಮ ೯

ಮಾಲ್ಡೀವ್ಸ್, ಲಕ್ಷದ್ವೀಪ ೫೭
ಮಾಳಖೇಡ ೧೧೫
ಮಾವಳತ್ತಾನ್ ೧೦೨
ಮಾಹೆ ೧೧೭
ಮಿತಬಿ ೮೫
ಮಿಲಚ್ಚ ೧೧೭
ಮಿಶ್ರ ರಾಜೇಂದ್ರಲಾಲ್ ೯೨
ಮಿಹಿಂತಲೆ ೯೩
ಮೀನಾಕ್ಷಿಸುಂದರಮ್ ೧೪೮
ಮೀನಾಕ್ಷಿ, ಕೆ. ೧೯
ಮುಡವನಾರ್ ೩೬, ೧೨೬
ಮುಡವ್ರೋಶಿಯಾರ್ ೩೫
ಮುದಲ್ ೨೮
ಮುದಲ್ ಶಂಗಂ ೫೧
ಮುದಿಯನ್ಸ್, ಎನ್. ೯೩
ಮುದುಕುರುಕು ೫೧
ಮುದುಕೋಶರ್ ೧೯೩
ಮುದುನಾರೈ ೫೧
ಮುಮ್ಮಡಿ ಕೃಷ್ಣರಾಜ ೧೨೭
ಮುಮ್ಮಡಿ ಗೋವಿಂದ ೧೧೩, ೧೧೪, ೧೨೯
ಮುರನ್ ಮಿಗುವಡುಗ ೧೩೫
ಮುರುಕ್ಕುಟಿ ಮರ ೨೧೯
ಮುರುಗ ೧೮, ೧೯, ೨೦, ೩೮, ೪೦, ೪೧, ೧೯೮
ಮುಲ್ಲೈ ೧೪, ೨೭, ೩೯
ಮುಳಿಯ ತಿಮ್ಮಪ್ಪಯ್ಯ ೧೮
ಮುಳ್ಳೈ ಹೂಮಾಲೆ ೧೭೫
ಮುಶಿರಿ ಆಶಿರಿಯಾರ್ ನೀಲಕಂಠನಾರ್ ೬೭
ಮುಶಿರಿ ನೀಲಕಂಠನ್ ೫೩; ಮುಸುರಿ
ನೀಲಕಂಠನಾರ್ ೭೯
ಮೂರು 'ಶಂಗಂ' ೧೯
ಮೂಲಂಕಿಟಾರ್ ೧೦೧
ಮೂಲಗಂಗಾ ೬೪
ಮೂವಳತ್ತಾನ್ ೧೦೦
ಮೂವೇಂದರ್ ೭೮, ೯೯, ೧೬೭, ೧೭೩
ಮೃದಂಗ ೧೨
ಮೆಸೊಜೋಯಿಕ್ ೪೪, ೪೭
ಮೇಗೂತಿ ೧೦೮
ಮೇಜರ್ ಎಡಿಕ್ಟ್ ೩೮
ಮೆಟ್ಟೂರ್ ೯೮
ಮೇಱ್ಪಾಲೈ ೫೫
ಮೇಲ್ಕಾವೇರಿ ೯೮, ೧೦೪, ೧೧೧,
೧೫೭
ಮೈಟಿ ಐ ಯಾಮ್ ೬೬
ಮೈತ್ರೇಯ ೮೩
ಮೈನರ್ ಈಡಿಕ್ಟ್ ೩೩
ಮೈಪಾರ್ಟು ವೆಂಕಟ್ರಮಣಯ್ಯ ೧೨೭
ಮೈಸೂರು ೧೮, ೩೪, ೪೨, ೯೩, ೯೭, ೧೦೯,
೧೧೧, ೧೨೦, ೧೨೧, ೧೨೩, ೧೩೧, ೧೩೮,
೧೩೯, ೧೪೧, ೧೪೩, ೧೪೬, ೧೪೭, ೧೫೦,
೧೫೨, ೧೫೮, ೧೬೯, ೧೭೩, ೧೭೭, ೧೭೯,
೧೯೧, ೨೦೭
ಮೈಸೆ ೧೧೧, ೧೨೨; ಮೈಸೆನಾಡ ೧೧೧
ಮೊದಲಕೃಷ್ಣ೧೨೯
ಮೊರಿಯ ೮೫, ೧೮೫
ಮೊಟಿಬ ೭
ಮೋಶಿಕೀರಣಾರ್ ೧೯೧
ಮೋಶಿಕೀರಣಾರ್ ೨೦೯, ೨೧೦, ೨೧೧
ಮೋಹೂರ್ ೭೮, ೮೭, ೧೬೮, ೧೭೩, ೧೭೫,
೧೭೬, ೧೭೯, ೧೮೫, ೧೮೯
ಮೌರ್ಯ ೩೮, ೭೧, ೭೨, ೭೩, ೭೫, ೭೭, ೭೮,
೭೯, ೮೫, ೮೬, ೮೭, ೮೮, ೯೧, ೧೧೭, ೧೩೮,
೧೫೧, ೧೫೨, ೧೬೩, ೧೭೩, ೧೭೪, ೧೭೫,
೧೭೬, ೧೭೯, ೧೮೫, ೧೮೬, ೧೯೨
ಮೌರ್ಯ ಸಾಮ್ರಾಜ್ಯ ೩೮, ೭೩, ೧೭೩
ಮೌರ್ಯೋತ್ತರ ೭೯
ಮ್ಯಾಕ್ಲಿನ್, ಸಿ. ಡಿ. ೬೬
ಮ್ಯಾಕ್‌ಕ್ರಿಂಡ್ಲ್, ಜೆ.ಡಬ್ಲ್ಯೂ. ೧೩೧
ಮ್ಯಾಕ್ಸ್‌ಹೈಂಡೆಲ್ಸ್ ೪೮
ಯಪ್ಪರುಂಗಲಮ್ ೧೮೧

ಯರ್ರಗುಡಿ ೭೬, ೮೩
ಯಳಂದೂರು ೧೧೦
ಯವನ ೨೪, ೩೩, ೩೪, ೩೫, ೫೧, ೫೩, ೫೪, ೬೯, ೭೪, ೮೧, ೮೫, ೯೨, ೧೧೬, ೧೧೭, ೧೧೮, ೧೪೭, ೧೪೮, ೧೪೯, ೧೫೩, ೧೫೪, ೧೮೪, ೧೯೧
ಯಾಲ್ ೬೧, ೬೩
ಯಾಟ್ ೩೬
ಯು. ವಿ. ಸ್ವಾಮಿನಾಥ ಐಯರ್ ೫೧
ಯೋಸೆನ್ ೪೪, ೪೭
ರಖಿತರ ೮೩
ರಘುವಂಶ ೧೦೮, ೧೨೮
ರಣಾವಲೋಕ ೧೧೩, ೧೧೪, ೧೧೫, ೧೨೯, ೧೩೦
ರಮೇಶ್, ಕೆ.ವಿ ೧೮೧
ರಮ್ರಾ ೪೮, ೪೯, ೬೬
ರವಿಕೀರ್ತಿ ೧೦೮, ೧೧೨, ೧೨೮
ರವಿವರ್ಮ ೧೫೬
ರಸನಾಯಗಂ ೮೫, ೯೩, ೧೬೫
ರಸಪ್ರಜ್ಞೆ ಕಾವ್ಯಧರ್ಮ ೧೩
ರಾಘವ ಐಯ್ಯಂಗಾರ್ ೬೮
ರಾಜಕೇಸರಿ ೧೦೨
ರಾಜಗಳಾ ೮೦
ರಾಜಗೃಹ ೭೪, ೭೫
ರಾಜಘಟ್ಟ ೧೫೧
ರಾಜನ್ ೧೩
ರಾಜಶೇಖರಪ್ಪ ಬಿ. ೧೬೬
ರಾಮಟ ಇರಾಮಣ್ ೨೧
ರಾಮಚಂದ್ರ ದೀಕ್ಷಿತರ್, ವಿ. ಆರ್. ೪೦
ರಾಮನಾಡು ೧೪೯
ರಾಮಮೂರ್ತಿ ೧೮೧, ೧೮೨, ೧೮೪, ೧೯೩
ರಾಮಸ್ವಾಮಿ, ಸು. ೬೫
ರಾಷ್ಟ್ರಕೂಟ ೯೭, ೯೮, ೧೦೪, ೧೦೯, ೧೧೩, ೧೧೪, ೧೧೫, ೧೧೬, ೧೨೯, ೧೪೨, ೧೯೦
ರಿಚರ್ಡ್ ಡಿ. ಓಲ್ಹಾಮ್ ೫೭
ರಿನಯಜ್ಞಾ ೪೩, ೪೬
ರೇಖಾಚಿತ್ರ ೧೬, ೨೨
ರೋಜಿ ಕ್ರೂಶಿಯನ್ ೪೮, ೬೬; ಕ್ರೂಶಿಯನ್ ಪೆಲೋಷಿಪ್ ೪೮
ರೋಮ್ ದೇಶ ೩೧
ಲಕ್ಷ್ಮಣತೀರ್ಥ ೯೬
ಲಿಬಿಯ ೪೬, ೬೬
ಲಿಮಿರಿಸ್ ೨೪
ಲೂಮೂರಿಯಾ ಆರ್ ದಿ ಲಾಸ್ಟ್ ಕುಮಾರಿ ಕಾಂಟಿನೆಂಟ್ ಆರ್ ನವಲಂ ೫೯
ಲೂಯಿಸ್ ರೈಸ್ ೧೫೮
ಲೂಟಿ ೬೧
ಲೆಡ್ ಬೀಟರ್, ಡಿ. ಎಮ್. ೪೬, ೬೬
ಲೆಮೂರಿಯಾ ೪೩, ೪೫, ೪೮, ೪೯, ೫೧, ೫೩, ೫೯, ೬೫, ೬೬, ೬೯
ಲೆಮೂರಿಯಾ ಸ್ಕಾಲ್ಸ್ ೪೮
ಲೆಮೂರ್ ೪೩, ೪೪
ಲೈಡನ್ ೧೦೨
ಲ್ಯಾಂಡ್‌ಸ್ಕೇಪ್ಸ್ ೨೭
ವಂಜಿ ೯೯, ೧೦೭
ವಂಜಿಪೊರುಣ್ಣೈ ೯೯
ವಂಬಮೊರಿಯ ೮೫, ೧೮೫
ವಕ್ಕಲೇರು ತಾಮ್ರಪಟ ೧೧೨
ವಜ್ಜಿ ೩೬, ೧೫೪
ವಜ್ರನಂದಿ ೧೮೪
ವಟುಕವಟಿ-೧೨೦೦ ೧೮೭
ವಟ್ಟೆಟುತ್ತು ೨೫, ೮೫, ೯೦, ೯೧, ೧೦೨, ೧೧೭, ೧೨೧, ೧೪೬, ೧೪೯; ವಟ್ಟೆಟುತ್ತು ಲಿಪಿ ೯೦, ೧೧೭
ವಡನೆಡುತತ್ತಣಾರ್ ೧೮೯, ೧೯೬
ವಡಮ ೩೧, ೧೪೯, ೧೮೯, ೧೯೬, ೧೯೭, ೧೯೮
ವಡಮಲೈ ೩೧
ವಡಮವಣ್ಣಕ್ಕಣ್ ೧೮೯, ೧೯೭, ೧೯೮, ೧೯೯, ೨೦೦, ೨೦೧, ೨೦೨, ೨೦೫
ವಡಮೋಟಿಯಾಳರ್ ೩೨, ೧೧೮, ೧೩೫

ವಡಮೋತಂಕಿಲಾರ್ ೧೮೯, ೧೯೦
ವಡವೇಂಕಡಂ ೩೧
ವಡಸೊಲ್ ೧೧, ೨೬
ವಡುಗ ೨೫, ೩೨, ೩೩, ೩೪, ೭೨, ೭೭, ೭೮, ೮೪, ೮೭, ೧೦೫, ೧೧೬, ೧೨೦, ೧೨೨, ೧೨೩, ೧೩೩, ೧೩೪, ೧೩೫, ೧೩೬, ೧೩೭, ೧೩೯, ೧೪೧, ೧೪೨, ೧೪೩, ೧೪೯, ೧೫೧, ೧೫೬, ೧೬೭, ೧೭೫, ೧೭೬, ೧೮೦, ೧೮೫, ೧೮೭, ೧೮೮, ೧೮೯, ೧೯೦, ೧೯೧, ೧೯೨, ೨೦೬
ವಡುಗರು ೨೫, ೩೨, ೭೨, ೭೭, ೮೭, ೧೩೫, ೧೩೭, ೧೪೨, ೨೦೬
ವಡುಮಂತಾಮೋತರಣ್ ೧೮೯, ೨೦೩
ವಡ್ಡಾರಾಧನೆ ೯೨, ೧೦೮
ವನವಾಸ ೮೩
ವನ್‌ಪಾಂಡಿನಾಡು ೧೪೯
ವರಪ್ರಸಾದರಾವ್ ೯೨, ೯೪
ವರವೂರ್ ೨೯
ವರಾಹಮಿಹಿರ ೩೮
ವರುಣ ೬೨
ವಳವನ್ ೧೦೦
ವಳ್ಳೈಯಾಪತಿ ೧೯
ವಸುಮತಿ ೧೫೭
ವಾಕ್ಕೈಪ್ಪರಂತಲೆ ೨೧೨
ವಾಗ್ಯೆ ೧೭೨, ೧೭೩
ವಾಡಿಯ, ಡಿ. ಎನ್. ೬೬
ವಾಣಿ ೭೯, ೮೫, ೮೬, ೧೧೯
ವಾನವರಂಬನ್ ೩೧
ವಾಯು ೨೪, ೩೮, ೭೧, ೭೭, ೮೩, ೧೦೪, ೧೩೩, ೧೩೪, ೧೩೫, ೧೪೦, ೧೫೨
ವಾಷಿಂಗ್ಟನ್ ೪೮
ವಿ. ಸೀತಾರಾಮಯ್ಯ ೧೮
ವಿ.ಎ.ಸ್ಮಿತ್ ೧೭೩
ವಿಕ್ಕಿರಮ ಚೋಳನ್ ಉಲಾ ೧೦೨
ವಿಜಯ ೧೧, ೧೩, ೧೮, ೭೯, ೮೦, ೮೨, ೧೧೮, ೧೨೮, ೧೨೯, ೧೩೦, ೧೭೩, ೧೭೭
ವಿಜಯಾದಿತ್ಯ ೧೧೨
ವಿಜಯಾಲಯ ೧೦೨
ವಿಜಸೇಖರೆ ೯೨, ೯೩
ವಿನಯ ೮೧, ೧೮೧
ವಿನಯಾದಿತ್ಯ ೧೧೪
ವಿಮಲೋದಯ ೧೩
ವಿಲಕ್ಕ ೩೬
ವಿಲುಪ್ಪುರಂ ೧೪೧
ವಿಲ್ಲಿಯಾಣರ್ ೧೮೭
ವಿವೇಕಬೃಹಸ್ಪತಿ ೯
ವಿವೇಕಾನಂದ ಝಾ ೩೮
ವಿವೇಕಿ ೯
ವಿಶಾಖಮುನಿ ೮೮
ವಿಷ್ಣು ೩೬, ೮೯, ೧೮೧
ವಿಷ್ಣುಕುಂಡಿ ೮೯
ವೀರಗಾಥೆ ೧೦
ವೆಂಕಟ ೪೦, ೪೧, ೬೯, ೧೦೪, ೧೨೭
ವೆಂಕಟ ಸುಬ್ರಮಣಿಯನ್, ಟಿ.ಕೆ. ೪೦, ೪೧
ವೆಂಡಿ ಡೊನಿಗರ್ ಓ ಪ್ಲಹೆರ್ಟಿ ೭೦
ವೆಜೆನರ್, ಎ. ಎಲ್. ೬೫
ವೆಣ್ಣಾಡು ೧೪೯
ವೆಲ್ಕೇಲು ೧೭೬
ವೆಳ್ಳೈಕುಡಿ ೧೨೪
ವೆಸ್ಸಮುನಿ ೮೪
ವೆಟುರ್ ೨೮
ವೇಂಕಟಗಿರಿ ೧೦೪
ವೇಂಕಡ ೨೩, ೨೫, ೩೦, ೩೧, ೫೫
ವೇಂಕಡಂ ೨೫, ೩೧
ವೇಂಕೈ ೨೨
ವೇಟ್ಟುವರ್ ೨೮
ವೇನಾಡು ೨೯
ವೇಲ್‌ಪೋರ್ ನಂದರ್ ೮೬
ವೇಳಿರ್ ೧೦೦, ೧೩೪, ೧೩೯, ೧೪೦, ೧೪೧, ೧೬೭,

೧೭೨, ೧೯೬
ವೇಳ್ವಿಕುಡಿ ೧೦೪, ೧೮೦, ೧೮೧
ವೈ. ಸುಬ್ಬರಾಯಲು ೧೫೦
ವೈಗೈ ೧೯, ೨೯, ೫೨, ೮೮, ೯೯, ೧೦೬, ೧೦೭, ೧೧೮, ೧೨೪, ೧೩೩, ೧೩೪, ೧೪೧, ೧೮೬
ವೈಗೈನದಿ ೧೯
ವೈದರ್ಭೀ ೩
ವೈನಾಡು ೧೧೮
ವೈಯಾಕರಣಿ ೫, ೭, ೮, ೧೧, ೧೭, ೨೬, ೩೦
ವ್ಯಾನಿಷ್ಡ್ ಲುಮೂರಿಯಾ ಕಾಂಟಿನೆಂಟ್ ೫೯
ವ್ಯಾಲ್ಲೇಸ್, ಎ. ಆರ್. ೬೫
ಶಂಗಂ ಸಂಕಲನ ೪, ೫, ೬, ೯೮
ಶಬರ ೩೮
ಶಬ್ದಾಲಂಕಾರ ೩
ಶಬ್ದಾರ್ಥಶಾಸ್ತ್ರ ೯
ಶರ್ಮ, ಐ.ಕೆ. ೯೨
ಶಲ್ಲೂರ್ ಆಶಿರಿಯಾರ್ ಆಂದೈಪ್ಪೆರುಮ್ ಕುಮಾರನಾರ್ ೬೭
ಶಶಿಕಿರಣಕಾಂತಿ ೧೬
ಶಾಂತಿಪುರಾಣಂ ೧೦೮, ೧೨೮
ಶಾತಕರ್ಣಿ ೧೧೭
ಶಾತವಾಹನ ೮೩, ೮೯, ೧೧೭, ೧೫೧, ೧೫೨, ೧೬೦, ೧೬೩
ಶಾಮೈ ೩೯
ಶಾಲ್ಮಲೀ ೪೭
ಶಾಸನಕ್ಷೇತ್ರ ೭೬
ಶಿಂಷಾ ೯೬
ಶಿಕಾರಿಪುರ ೧೬೦
ಶಿಱಪ್ಪುಪಾಯಿರಂ ೩೦
ಶಿಟ್ರರಸರ್ ೩೬, ೧೦೦
ಶಿಱುಸೈ ೧೮
ಶಿಲಪ್ಪದಿಗಾರಂ ೪, ೬, ೧೯, ೨೦, ೩೧, ೩೪, ೩೫, ೩೬, ೩೭, ೪೧, ೪೨, ೫೪, ೬೧, ೬೮, ೬೯, ೭೯, ೮೪, ೯೨, ೧೦೦, ೧೧೯, ೧೨೪, ೧೨೫, ೧೫೩, ೧೫೪, ೧೬೮, ೧೮೧, ೧೯೩
ಶಿವ ೧೮, ೧೯, ೪೦, ೪೧, ೪೮, ೪೯, ೫೭, ೬೨, ೬೩, ೬೭, ೬೯, ೯೨, ೧೦೩, ೧೦೮, ೧೪೯, ೧೫೭, ೧೫೮, ೧೬೦, ೧೭೭
ಶಿವಕೋಟ್ಯಾಚಾರ್ಯ ೯೨, ೧೦೮
ಶಿವರುದ್ರಪ್ಪ ಜಿ. ಎಸ್. ೧೮
ಶೀರ್ಕಾಳಿ ೬೧, ೬೩; ಶೀಕಾಳಿಪುರಾಣ ೬೩
ಶೀಕಾಟ್ಟಿತ್ತಳಪುರಾಣಂ ೬೩
ಶೀತನಾಡು ೨೯
ಶುಂತರಪಾಂಡ್ಯ ೬೩
ಶೂದ್ರ ೩೮, ೧೬೦, ೧೬೬
ಶೆಂಕೋಣಕ್ಕೈಚಲುವು ೫೧
ಶೆಂಗುಟ್ಟುವನ್ ೩೫, ೧೧೮, ೧೫೩, ೧೫೪
ಶೆಂಗೋಣ್ ಪಾಂಡ್ಯ ೫೫
ಶೆಂಗೋಣ್‌ಪಾಂಡಿಯನ್ ೫೨
ಶೆಟ್ಟರ್, ಎಸ್. ೧೯
ಶೆಯಲೂರ್ ಇಳಂಪೂಣ್ ೧೨೪
ಶೆಯ್ಯುಳ್ ಇಯಲ್ ೬
ಶೆಲ್ವತ್ತಾ ಶಿರಿಯರ್‌ಪುರಂ ಶಿವನಾರ್ ೬೭
ಶೇಂತಕ್ಕಣ್ಣಣಾರ್ ೧೨೫
ಶೇಂದಣ್ ಕೂಟ್ರಣ್ ೧೪೯
ಶೇಕ್ಕಿಟಾರ್ ೬೩
ಶ್ರವಣ ಬೆಳ್ಗೊಳ ೭೫, ೭೬, ೯೨, ೧೨೯
ಶ್ರಾವಸ್ತಿ ೭೪, ೭೫
ಶ್ರೀನಿವಾಸ ಐಯಂಗಾರ್, ಪಿ. ಟಿ. ೪೦
ಶ್ರೀರಂಗಂ ೯೮, ೧೧೨
ಶ್ರೀಲಂಕೆ ೩೧, ೩೩, ೩೪, ೩೯, ೫೧, ೫೭, ೮೬, ೮೮, ೧೫೪
ಶ್ರೀವಿಜಯ ೧೧, ೧೩, ೧೮
ಶ್ರೀವಿಜಯ ಕೃತ ಕವಿರಾಜಮಾರ್ಗ ೧೮
ಷಣ್ಮುಗ ಪಿಳ್ಳೆ ೨೧
ಷಸ್ತಾ ೪೮, ೪೯
ಷಹಬಾಜ್‌ಗರ್ಹೀ ೧೭೩
ಷೂಲ್‌ಮನ್, ಡಿ. ೬೭
ಷೋರ್ ಟೆಂಪಲ್ ೫೬, ೭೯
ಸಂಬಾಪತಿಪಟ್ಟಣ ೧೦೧, ೧೦೫
ಸಂಸ್ಕೃತ ೧, ೨, ೩, ೫, ೧೧, ೧೨, ೧೩, ೧೪, ೧೫,

೧೭, ೨೧, ೨೪, ೨೬, ೩೨, ೩೮, ೫೩, ೬೧, ೭೩, ೮೬, ೯೦, ೧೦೮, ೧೧೮, ೧೨೩, ೧೨೮, ೧೪೨, ೧೪೫, ೧೬೦, ೧೬೧, ೧೬೨, ೧೬೩
ಸಂಸ್ಕೃತ ಲಕ್ಷಣಕಾರ ೨
ಸಂಸ್ಕೃತ ವಾಙ್ಮಯ ೧, ೫
ಸಂಸ್ಕೃತೋಕ್ತಿ-ಕ್ರಮಮಂ ೧೨
ಸಣ್ಣತಿ ೭೨, ೭೬, ೭೭, ೭೮, ೮೯, ೯೨, ೧೬೦
ಸತಿಯಪುತ ೭೮, ೧೪೧, ೧೭೩, ೧೭೪, ೧೮೨, ೧೮೩, ೧೯೨; ಸತಿಯಪುತೋ ೧೭೩
ಸತ್ತಸಯೀ ೧೫೧
ಸತ್ಯಪುತ್ರ ೧೭೩
ಸತ್ಯವ್ರತ ೬೧
ಸಮಂತಪಾಸಾದಿಕಾ ೮೧
ಸಮಾಪಾ ೭೭
ಸವಣೂರ್ ೧೧೨
ಸಹ್ಯಜಾ ೧೧೧
ಸಾತನಿಕೇಟ ೧೬೧
ಸಾತ್ಯಪುತ್ರ ೩೩, ೩೮
ಸಾಲಂಕಾಯನ ೮೯
ಸಾಲಿಗ್ರಾಮ ೧೨೨, ೧೩೨, ೧೫೭, ೧೫೯
ಸಾಲೆತೊರೆ, ಬಿ. ಎ. ೭೦, ೧೮೨
ಸಿ. ಡಬ್ಲು ದಾಮೋದರ ಪಿಳ್ಳೈ ೫೧
ಸಿಂಗಳಂ ೧೫೬
ಸಿಂಧು ೨೫
ಸಿಂಧೂಕೊಳ್ಳ ೬೦, ೭೨
ಸಿಂಹನಂದಿ ೧೮೪
ಸಿಂಹಪುರ ೭೯, ೮೦, ೮೨
ಸಿಂಹಳ ೭೨, ೭೩, ೭೯, ೮೦, ೮೧, ೮೨, ೮೩, ೮೪, ೮೫, ೮೬, ೮೯, ೯೦, ೯೩, ೧೧೨
ಸಿಂಹಳ-ಬ್ರಾಹ್ಮೀ ೭೩, ೮೧
ಸಿಂಹವರ್ಮ ೧೧೯
ಸಿಂಹವಿಷ್ಣು ೧೮೧
ಸಿತ್ತನ್ನವಾಸಲ್ ೪೨, ೧೪೩, ೧೪೭
ಸಿದ್ದಾಪುರ-ಬ್ರಹ್ಮಗಿರಿ ೭೬
ಸಿಬಿ ೧೦೨
ಸಿರಿಗುಂದ ೯೧, ೧೬೧
ಸಿರಿಸೋಮ ೯೨, ೯೩
ಸಿಲೋನ್ ೫೭
ಸೀಗಿರಿ ೮೫
ಸೀತ್ತಲೈಸಾತ್ತನ್ನಾರ್ ೧೦೧
ಸುನಾಮಿ ೧೯, ೩೧, ೪೪, ೪೫, ೪೭, ೫೬, ೫೭
ಸುಬ್ಬಣ್ಣ ಕೆ. ೧೮
ಸುಬ್ರಹ್ಮಣ್ಯಶಾಸ್ತ್ರಿ ಪಿ. ಎಸ್. ೧೮
ಸುಮತಿ ರಾಮಸ್ವಾಮಿ ೬೫
ಸುರತ ಕ್ರೀಡೆ ೧೬
ಸುವರ್ಣಗಿರಿ ೩೩, ೭೭, ೭೮, ೮೮, ೧೫೨, ೧೮೬
ಸುವರ್ಣಾವತಿ ೯೬
ಸೂರತಿಸ್ಸ ೮೪
ಸೂರ್ಯಗುಂಡಮ್ ೧೦೧
ಸೂರ್ಯನಾರಾಯಣಶಾಸ್ತ್ರಿ ೬೭, ೬೮
ಸೃಜನಕಾವ್ಯ ೬
ಸೆಕ್ಕಿಲರ್ ೧೮೦
ಸೆನ ೨೬, ೨೯, ೩೬, ೩೭, ೮೪, ೮೫, ೧೫೬
ಸೆನ್‌ತಮಿಳ್ ೨೬
ಸೆನ್ದಮಿಲ್ ೨೬, ೨೯, ೩೬
ಸೆನ್ದಮಿಲ್ ಪನ್ನಿರು ನಿಲಂ ೨೯
ಸೇಲಂ ೩೯, ೧೧೯, ೧೬೮
ಸೊಪಾರ ೮೨
ಸೊರಬ ೧೬೧
ಸೊಲ್ ೬, ೧೧, ೨೬
ಸೋಮಗುಂಡಮ್ ೧೦೧
ಸೋಲೋಮನ್ ೬೬
ಸ್ಕಂದ ೧೦೬
ಸ್ಕಂಧವರ್ಮ ೧೫೭
ಸ್ಕಾಟ್ ಇಲಿಯಟ್ ೪೬, ೫೮
ಸ್ಕ್ಯಾಂಡಿನೇವಿಯಾ ೪೬
ಸ್ಕ್ಲಾಟರ್, ಪಿ. ಎಲ್. ೬೫
ಸ್ಟ್ಯಾಂಜಾಸ್ ಆವ್ ದ್ಯಾನ್ ೪೮

ಸ್ಟಾನ್ಲಿ ಗಾರ್ಡಿನರ್ ೬೫
ಸ್ಟ್ರಾಬೋ ೯೧
ಸ್ತಂಭ ೧೧೪
ಸ್ತೂಪ ೭೪, ೭೫, ೭೭, ೮೩, ೯೨, ೯೩
ಸ್ಥಳಮಹಾತ್ಮೆ ೬೧, ೬೨, ೬೪
ಸ್ಮಿತ್, ವಿ.ಎ. ೧೪೮
ಹಂಪ ನಾಗರಾಜಯ್ಯ ೧೨೮
ಹತ್ತಿರಬೈ ಎ.ಎಸ್. ೯೩
ಹತ್ತುನಾಡು ೧೫೮
ಹದಿನಾಱು ೧೫೮
ಹನುಮಂತರಾವ್ ೯೪
ಹರವನಸೆಟ್ಟಹಳ್ಳಿ ೧೨೩
ಹರಿಹರ ೧೬೨
ಹರ್ಷಚರಿತ ೧೩
ಹಲ್ಮಿಡಿ ೯೧, ೧೪೭, ೧೬೧, ೧೭೯, ೧೮೧
ಹಳೆಗನ್ನಡ ೧೧೮, ೧೪೪, ೧೪೫
ಹವಾಯಿ ೪೮
ಹಾತಿಗುಂಫ ೭೯, ೮೮
ಹಾನಗಲ್ಲು ೧೬೧
ಹಾರಂಗಿ ೯೬
ಹಾಲ ೭೬, ೮೦, ೮೮, ೯೦, ೧೦೨, ೧೨೦, ೧೨೬, ೧೩೮, ೧೪೫, ೧೪೬, ೧೫೧, ೧೫೩
ಹಾಸನ ೧೬೧, ೧೭೭
ಹಿಂದೂಮಹಾಸಾಗರ ೩೧, ೪೩, ೪೪, ೪೫, ೪೬, ೪೯, ೫೮, ೬೦
ಹಿಮಾಲಯ ೩೪, ೩೫, ೫೦, ೬೧
ಹಿರೇಹಡಗಲಿ ೧೫೧, ೧೬೦
ಹಿಲರಿ ಬ್ಲಡ್ ೬೫
ಹೆಗ್ಗಡದೇವನಕೋಟೆ ೧೫೮
ಹೆನ್ರಿ ಎಫ್. ಬ್ಲಾನ್‌ಫೋರ್ಡ್ ೪೯
ಹೆಬ್ಬೂರು ೧೩೨, ೧೫೭, ೧೫೯
ಹೆರ್ಬರ್ಟ್ ರಿಸ್ಲಿ ೫೦
ಹೆರ್ಮನ್ ಓಲ್ಡೆನ್‌ಬರ್ಗ್ ೩೮
ಹೆಲೆನ್ ಬ್ಲವಟ್ಸ್ಕಿ ೪೬
ಹೆಲ್ಮುಟ್ ಹೊಫ್‌ಮನ್ ೭೪, ೯೨
ಹೇಮಚಂದ್ರ ೯೨
ಹೇಮಾವತಿ ೯೬
ಹೈಕಲ್ ೪೪, ೬೫
ಹೊಗೆನಕಲ್ಲು ೯೮
ಹೊಟೆಂಟೋ ೪೭

ಅಭಿನವ

೧೭/೧೮-೨, ಮೊದಲನೆಯ ಮುಖ್ಯರಸ್ತೆ, ಮಾರೇನಹಳ್ಳಿ, ವಿಜಯನಗರ. ಬೆಂಗಳೂರು-೪೦ ದೂ. ೦೮೦ ೨೩೫೦೫೮೭೫

# ನಮ್ಮ ಪ್ರಕಟಣೆಗಳು

| | | |
|---|---|---|
| ನಾ ಬಂದ ಹಾದಿಯಲ್ಲಿ (ಅನುಭವ ಕಥನ) | ಕೆ.ವಿ. ಘನಶ್ಯಾಮ | 200/- |
| ದೂರ ತೀರದಿಂದ ಹರಿದು ಬಂದ ಕತೆಗಳು | ನಾಗ ಐತಾಳ (ಆಹಿತಾನಲ) | 150/- |
| ಅಕ್ಷಯ ಕಾವ್ಯ | ಕೆ.ವಿ. ತಿರುಮಲೇಶ್ | 250/- |
| ಗಂಗಾವತರಣ (ಗಂಗೂಬಾಯಿ ಹಾನಗಲ್ ರವರ ಜೀವನ ಚಿತ್ರ) | ದಮಯಂತಿ ನರೇಗಲ್ಲ | 75/- |
| ಎಳೆಯ ಪಾಪದ ಹೆಸರು ನಿಮ್ಮಿಚ್ಛೆಯಂತೆ ಇಟ್ಟುಕೊಳ್ಳಿ(ಕವನ) | ರಮೇಶ್ ಅರೋಲಿ | 50/- |
| ದೇವರು ಎಂಬ ಸಂಕೇತನಾಮ, ಮೂಲ: ಮಣಿಭೌಮಿಕ್ | ಅನು : ಕೆ. ಪುಟ್ಟಸ್ವಾಮಿ | 100/- |
| ಕಣ್ಣಂಚಿನ ಕಡಲು (ಕವನ ಸಂಕಲನ) | ನಾಗರಾಜ್ ಹೆಗಡೆ ಅಪಗಾಲ | 50/- |
| ಮರೆಯಲಾದೀತೆ? (ನೆನಪುಗಳು) | ಬೆಳಗೆರೆ ಕೃಷ್ಣಶಾಸ್ತ್ರಿ | 250/- |
| ವಿಸ್ತರಣೆ (ಲೇಖನಗಳು) | ಶ್ರೀಧರ ಹೆಗಡೆ ಭದ್ರನ್ | ೧೦೦/- |
| ಎಲ್ಲಿದೆ ಶಿವಾಪುರ? (ಕವನ ಸಂಕಲನ) | ಚಂದ್ರಶೇಖರ ಕಂಬಾರ | ೧೦೦/- |
| ಅಭಿವೃದ್ಧಿ. ಆಳಿಕೆ ಮತ್ತು ಮಾನವೀಯ ಮೌಲ್ಯಗಳು | ಡಾ.ಪಿ. ಎಸ್. ಗೀತಾ (ಅನು. ಶಾಂತಾನಾಗರಾಜ್) | ೩೦/- |
| ಅನಂತಮುಖದ ಮೂರ್ತಿ (ಅನಂತಮೂರ್ತಿ ಕುರಿತು) | ಸಂ: ನಾಗ ಐತಾಳ | ೧೦೦/- |
| ಆಳ-ನಿರಾಳ : ೧ (ಅಂಕಣ ಬರಹ) | ಕೆ.ವಿ. ತಿರುಮಲೇಶ್ | ೧೭೫/- |
| ಆಳ-ನಿರಾಳ : ೨ (ಅಂಕಣ ಬರಹ) | ಕೆ.ವಿ. ತಿರುಮಲೇಶ್ | ೧೭೫/- |
| ಕಾಲಮಾನ (ಲೇಖನಗಳ ಸಂಕಲನ) | ಯು.ಆರ್.ಅನಂತಮೂರ್ತಿ | ೭೫/- |
| ನೆನಪಿನ ಚಿತ್ರಗಳು (ಆತ್ಮಕಥೆ) | ಎಂ.ವೈ. ಘೋರ್ಪಡೆ | 100/- |
| ಸಾಸುವೆ ಹೂವ ಚರಿತ (ಕವನ ಸಂಕಲನ) | ಹೆಚ್. ಆರ್ ರಮೇಶ್ | 40/- |
| ಸೈಟಾದರೂ ಬೇಡವೇ ಸ್ವಾಮಿ ನಮಗೆ (ಕವನ ಸಂಕಲನ) | ಕೆ.ಎಸ್. ಶ್ರೀನಿವಾಸ್ ಮೂರ್ತಿ | 25/- |
| ಲೆಕ್ಕಕ್ಕೆ ಸಿಗದವರು (ಕವನ ಸಂಕಲನ) | ರಶ್ಮಿ ಹೆಗಡೆ | 40/- |
| ಸಮಕ್ಷಮ (ಲೇಖನಗಳು) | ಯು. ಆರ್.ಅನಂತಮೂರ್ತಿ | 100/- |
| ಸನ್ನಿವೇಶ (ವಿಮರ್ಶೆ) | ಯು. ಆರ್.ಅನಂತಮೂರ್ತಿ | 50/- |
| ಅಂಕೆ ತಪ್ಪಿದ ಆರ್ಥರೋ ಊಯಿ | ಅನು: ಕೆ.ವಿ. ನಾರಾಯಣ | 50/- |
| ನಮಗೆ ಬೇಕಾದ ಕನ್ನಡ (ಭಾಷಣಗಳು) | ಸಂ: ನ. ರವಿಕುಮಾರ | 75/- |
| ಚಲ್ ಮೇರಿ ಲೂನಾ (ಪ್ರಬಂಧಗಳು ) | ಆರ್. ನಿರ್ಮಲಾ | 75/- |
| ಬೇಂದ್ರೆ ಕಾವ್ಯ (ವಿಮರ್ಶೆ) | ರಂ. ಶ್ರೀ. ಮುಗಳಿ | 75/- |
| ಹತ್ತು ಹತ್ತು ಇಪ್ಪತ್ತು | ಆನಂದ ವಿ. ಪಾಟೀಲ | 100/- |
| ಧ್ವನ್ಯಾಲೋಕದ ಓದು | ಕೆ.ವಿ. ನಾರಾಯಣ | 150/- |
| ಪಾಶುಪತಾಸ್ತ್ರ (ನಾಟಕ) | ಬೆಳೆಗೆರೆ ಕೃಷ್ಣಶಾಸ್ತ್ರೀ | 25/- |
| ಅಮೆರಿಕಾ ಗಾಂಧಿ | ದೇ.ಜ.ಗೌ | 75/- |
| ಯುಗಪಲ್ಲಟ (ಸಂಸ್ಕೃತಿ ಚಿಂತನೆ) | ಯು.ಆರ್.ಅನಂತಮೂರ್ತಿ | 75/- |
| ಬೆಂಕಿಯ ನೆನಪು (ಪರ್ಯಾಯಚರಿತ್ರೆ) | ಎಡುವರ್ಡೊ ಗೆಲಿಯಾನೊ/ಕೆ.ಪಿ. ಸುರೇಶ | 75/- |
| ಬಣ್ಣದ ತೆರೆ (ಕಾದಂಬರಿ) | ಅನು: ತಮಿಳ್ ಸೆಲ್ವಿ | 100/- |
| ಶತಮಾನದ ಕವಿ ರಿಲ್ಕೆ | ಯು.ಆರ್. ಅನಂತಮೂರ್ತಿ | 50/- |
| ಅಭಾವ (ಕವನ) | ಯು.ಆರ್. ಅನಂತಮೂರ್ತಿ | 50/- |
| ಇಂದಿನ ಕನ್ನಡ: ರಚನೆ ಮತ್ತು ಬಳಕೆ | ಎಸ್.ಎನ್. ಶ್ರೀಧರ್ | 75/- |
| ಪರಿಶ್ರಮ (ಹೋರಾಟದ ಬದುಕು ಬರಹ) | ಎಸ್. ವೆಂಕಟರಾಮ್ | 250/- |
| ಜಾಲತರಂಗಿಣಿ (ಅಂಕಣ ಬರಹ) | ಮೈ.ಶ್ರೀ. ನಟರಾಜ | 175/- |
| ಕನ್ನಡ ಕಾದಂಬರಿ ಲೋಕದಲ್ಲಿ... ಹೀಗೆ ಹಲವು | ಮೈ.ಶ್ರೀ. ನಟರಾಜ | 250/- |
| ಆಗಾಗ (ಪರಿಚಾರಿಕೆಯ ನಡುವಿನ ಮಾತು-ಬರಹ) | ಚಿ.ಶ್ರೀನಿವಾಸರಾಜು | 300/- |
| ನಾನು ಒಲಿದಂತೆ ಹಾಡುವೆ (ಪ್ರಬಂಧಗಳು) | ಚಂದ್ರಶೇಖರ ಆಲೂರು | 75/- |

| | | |
|---|---|---|
| ಬಕುಲದ ಹೂವುಗಳು (ಕವನ) | ಸು. ರಂ.ಎಕ್ಕುಂಡಿ | 75/- |
| ದೇಸಿ ನಗು (ಲೇಖನಗಳು) | ಎಂ.ಎಸ್. ಮೂರ್ತಿ | 75/- |
| ಬಾಗಿಲು-ಈತನಕದ ತಮಿಳು ಕತೆಗಳು | ಜಯಲಲಿತ | 75/- |
| ಹೀಗೆ ಹಾಳೆಯ ಮೇಲೆ ಹಾಡು(ಕವನ) | ಮಮತಾ ಜಿ. ಸಾಗರ | 25/- |
| ನಿಮ್ಮ2ಸಿಮ್ಮ (ಅಂಕಣ ಬರಹ) | ಸಿ. ಆರ್. ಸಿಂಹ | 100/- |
| ಮೌನ (ಗಜಲ್‌ಗಳು) | ಚಿದಾನಂದ ಸಾಲಿ | 35/- |
| ಪ್ರಶ್ನೆ ಮತ್ತು ದೇವರು (ಕವನ) | ಚೀಮನಹಳ್ಳಿ ರಮೇಶಬಾಬು | 50/- |
| ನಗೆಗನ್ನಡಂ ಗೆಲ್ಗೆ!-ಸಂ.ಎಚ್. ಕೆ. ನಂಜುಂಡಸ್ವಾಮಿ, | ಎಚ್.ವೈ.ರಾಜಗೋಪಾಲ್ | 250/- |
| ಅರ್ಥಶಾಸ್ತ್ರ ಪರಿಭಾಷೆ | ಸಿ. ಕೆ. ರೇಣುಕಾರ್ಯ | 75/- |
| ಜೀವ ಸಂಪಿಗೆ (ಕವನ) | ದು.ಸರಸ್ವತಿ | 45/- |
| ಬಾಪು ಕುಟೀ (ಗಾಂಧಿ ನಂತರದ ಗಾಂಧೀ ಚಿಂತನೆಗಳು) | ರಜನಿಭಕ್ಷೀ ಅನು:ವೆಂಕಟರಾಜು | 150/- |
| ಕನ್ನಡದ ಮರ ಚೇತನ (ಮಾಸ್ತಿ ವೆಂಕಟೇಶ ಅಯ್ಯಂಗಾರ್ ಸಾಹಿತ್ಯ ಸಮೀಕ್ಷೆ) | ಸಂ.ಆಹಿತಾನಲ | 175/- |
| ವಾಲ್ಮೀಕಿಯನೆವದಲ್ಲಿ (ಸಂಸ್ಕೃತಿ ಚಿಂತನೆ) | ಯು.ಆರ್.ಅನಂತಮೂರ್ತಿ | 160/- |
| ಕತ್ತಿಯಂಚಿನದಾರಿ (ಸಾಹಿತ್ಯ-ಸಂಸ್ಕೃತಿ ಚಿಂತನೆ) | ರಹಮತ್ ತರೀಕೆರೆ | 150/- |
| ನಾಗಾರ್ಜುನನ ಮೂಲಮಾಧ್ಯಮಕಕಾರಿಕಾ | ನಟರಾಜ ಬೂದಾಳು | 150/- |
| ಆರದ ದೀಪ (ಜಿ.ಪಿ. ರಾಜರತ್ನಂ ಜೀವನ ಚಿತ್ರ) | ನೀಲತ್ತಹಳ್ಳಿ ಕಸ್ತೂರಿ | 60/- |
| ಕಸೂತಿ (ಕಾದಂಬರಿ) | ಸ. ಉಷಾ | 100/- |
| ಅಂಗದಧರೆ (ಕಾದಂಬರಿ) | ಕೇಶವ ಮಳಗಿ | 50/- |
| ಚಾರುಚರಿತ (ಕಾದಂಬರಿ) | ಕೇಶವಶರ್ಮ.ಕೆ | 110/- |
| ಚೂರುಪಾರುರೇಷಿಮೆ (ಕವನ) | ಕಮಲಾಕರ ಕಡವೆ | 75/- |
| ನಿಲ್ಲಿಸಬೇಡ ಕಾಯುವುದನ್ನು (ಕವನ) | ಭಾರತೀದೇವಿ | 40/- |
| ಕನಸು ಕನ್ನಡಿ (ಕವನ) | ಸರಸ್ವತಿ ಗಂಗೊಳ್ಳಿ | 40/- |
| ಇದರ ಹೆಸರು (ಕವನ) | ಅಂಕುರ್ ಬೆಟಗೇರಿ | 75/- |
| ಗುಬ್ಬಿಯ ಸ್ವರ್ಗ (ಮಕ್ಕಳ ಪದ್ಯಗಳು) | ಭಾಗೀರಥಿ ಹೆಗಡೆ | 30/- |
| ಪಚ್ಚೆತೇರು (ಮಕ್ಕಳಗಾಗಿ) | ಆರ್. ನಿರ್ಮಲಾ | 40/- |
| ಹೂ ಅಂದ್ರ ಹೂ (ಪುಟಾಣಿಗಳಗಾಗಿ ಪುಟಾಣಿ ಪದ್ಯಗಳು) | ಆನಂದ ಪಾಟೀಲ | 40/- |
| ಕನ್ನಡ-ಇಂಗ್ಲಿಷ್ ನಿಘಂಟು | ಪ್ರಭುಶಂಕರ ಮತ್ತು ಬಾ.ವೇ. ಶ್ರೀಧರ | 250/- |
| ಜೀವಜಾಲ (ಪರಿಸರ ವಿಜ್ಞಾನ) | ಕೆ. ಪುಟ್ಟಸ್ವಾಮಿ, ಕೃಪಾಕರ-ಸೇನಾನಿ | 100/- |
| ನಮಸ್ಕಾರ (ಸಾಹಿತ್ಯ ವಿಮರ್ಶೆ) | ಎಚ್.ಎಸ್. ರಾಘವೇಂದ್ರರಾವ್ | 150/- |
| ಎಲ್ಲಬಲ್ಲವರಿಲ್ಲ (ಆಯ್ದ ಲೇಖನಗಳು) | ಎಚ್.ವೈ. ಶಾರದಾಪ್ರಸಾದ್ | 75/- |
| ಆಕಾಶದಗಲ ನಗುವಿನ ಅವಧೂತ | (ಬೆಳಗೆರೆ ಕೃಷ್ಣಶಾಸ್ತ್ರೀ ಅವರನ್ನು ಕುರಿತು) | 50/- |
| ನೆಲಕ್ಕೆ ಬಿದ್ದ ನಕ್ಷತ್ರಗಳು (ಹೂ ಕುರಿತು) | ಸಂ. ರವಿಕುಮಾರ | 75/- |
| ಟಿಬೆಟ್ (ಜಗತ್ತು ಕೇಳಸಿಕೊಳ್ಳಬೇಕಾದ ಆರ್ತಮೊರೆ) | ಮಂಗ್ಳೂರ ವಿಜಯ | 375/- |
| ಡಂಡಂ ಊರಿಗೆ ಡಿಂಡಿಂ ಗಾಡಿ (ಮಕ್ಕಳಗಾಗಿ) | ಆನಂದ ಪಾಟೀಲ | 20/- |
| ವೈದ್ಯರ ಶಿಕಾರಿ (ಶಿಕಾರಿಯಲ್ಲದ ಶಿಕಾರಿ ಅನುಭವಗಳು) | ಟಿ.ಎಸ್.ರಮಾನಂದ್) | 70/- |
| ಈ ತನಕದ ಕಥೆಗಳು | ಅಬ್ದುಲ್ ರಷೀದ್ | 150/- |
| ನಮ್ಮ ಕನ್ನಡ (ಕನ್ನಡ ಚಿಂತನೆ) | ಕೆ.ವಿ.ತಿರುಮಲೇಶ್ | 60/- |
| ಆಚೀಚೆಯ ಕಥೆಗಳು (ಕಥಾ ಸಂಕಲನ) | ಸಂ.ಗುರುಪ್ರಸಾದ್ ಕಾಗಿನೆಲೆ | 150/- |
| ನೀರತೇರು (ಕವನ) | ಕವಿತಾ ರೈ | 60/-• |
| ಅಬ್ಬುಲ್ಲನ ಕೈಲಾಸ (ಕವಿತೆ) | ಸುದೇಶ್ ಮಹಾನ್ | 50/-• |
| ನಿಮ್ಮ ಸಿಮ್ಮ (ಅಂಕಣ ಬರಹ) | ಸಿ.ಆರ್.ಸಿಂಹ | 125/-• |
| ನಿನ್ನ ನೆನಪಿಗೊಂದು ನವಿಲುಗರಿ(ಕವನ ಸಂಕಲನ) | ಆನಂದ ಋಗ್ವೇದಿ | 50/-• |
| ಪಂಜರಿಯರವ (ಜಾನಪದ ಅಧ್ಯಯನ) | ಎನ್.ಪಿ. ಶಂಕರ ನಾರಾಯಣರಾವ್ | 150/-• |
| ಹವಳ ಹಾರಿದ ಹೊತ್ತು (ಕವನ ಸಂಕಲನ) | ಸ.ಉಷಾ | 50/-• |
| ಪುಗಳೇಂದಿ ಪ್ರಹಸನ (ನಾಟಕ) | ರಾಮನಾಥ | 60/-• |
| ಹಿಡಿದ ಉಸಿರು (ಕವನ ಸಂಕಲನ) | ಅಂಕುರ್ ಬೆಟಗೇರಿ | 40/-• |
| ಯದುಗಿರಿಯ ಬೆಳಕು (ಪು.ತಿ.ನ ಸಾಹಿತ್ಯ ಕುರಿತು) | ಸಂ. ಆಹಿತಾನಲ | 150/-• |
| ಎಲೆಮರೆಯ ಅಲರು (ಉಳಿದ ನೆನಪುಗಳು) | ಬೆಳಗೆರೆ ಕೃಷ್ಣಶಾಸ್ತ್ರೀ | 45/- |

| | | |
|---|---|---|
| ಹೇ ರಾಮ್ (ಭಾರತದ ಆತ್ಮಚ್ಛೇದ ಕಥನ) | ಸಂ. ನ. ರವಿಕುಮಾರ | 275/- |
| ಭಾರತೀಯತತ್ವಶಾಸ್ತ್ರದ ರೂಪುರೇಖೆಗಳು | ಮೂಲ:ಎಂ.ಹಿರಿಯಣ್ಣ/ಪ್ರಭುಶಂಕರ | 275/- |
| ಅಮೆರಿಕಾಯಣ | ವೈ.ಆರ್. ಮೋಹನ್ | 650/- |
| ಅಮೂರ್ತತೆ ಮತ್ತು ಪರಿಸರ (ವಿಮರ್ಶೆ) | ರಾಜೇಂದ್ರ ಚೆನ್ನಿ | 180/- |
| ಫಾದರ್ 55 (ಕವನ ಸಂಕಲನ) | ವಿ.ಎಂ.ಮಂಜುನಾಥ್ | 50/-* |
| ಮಂದಹಾಸ ಮೀಮಾಂಸೆ (ಸಮಗ್ರ ಲಲಿತ ಪ್ರಬಂಧ) | ಪ್ರಭುಶಂಕರ | 150/- |
| ಖಲೀಲ್ ಗಿಬ್ರಾನ್ (ಜೀವನ ದರ್ಶನ) | ಪ್ರಭುಶಂಕರ | 60/- |
| ಆಂಟೋನಿಯೊ ಗ್ರಾಮ್ಷಿ (ಶತಮಾನ ಚಿಂತನೆ) | ಕೆ. ಫಣಿರಾಜ್ | 50/-* |
| ಹಳೆಯಕಾಲದ ಹೊಸಕತೆ(ಕಥಾ ಸಂಕಲನ) | ಕೆ.ಸತ್ಯನಾರಾಯಣ | 125/- |
| ಮನುಕುಲದ ಮಾತುಗಾರ (ಚಾಮ್‌ಸ್ಕಿ ಚಿಂತನೆ/ದರ್ಶನ) | ವಿವಿಧ ಲೇಖಕರು | 150/- |
| ಮಾಯಾಪಾತಾಳ (ಕವಿತೆ) | ರಾಮಲಿಂಗಪ್ಪ ಟಿ.ಬೇಗೂರು | 50/- |
| ಗೌರವ (ಜಿ.ಎಸ್.ಎಸ್. 75) | ಸಂ.ಚಿ. ಶ್ರೀನಿವಾಸರಾಜು | 250/- |
| ಹಕ್ಕಿ ಪುಟಾಣಿ (ಮಕ್ಕಳ ಕವಿತೆ) | ಆನಂದ ವಿ. ಪಾಟೀಲ | 50/-* |
| ಅರಹಂತ (ನಾಟಕ) | ರಾಮನಾಥ | 75/-* |
| ಪ್ರೀತಿಸುವುದೆಂದರೆ (ಆರ್ಟ್ ಆಫ್ ಲವಿಂಗ್) | ಮೂಲ : ಎರಿಕ್ ಫ್ರಾಂ<br>ಅನು : ಕೆ.ವಿ.ನಾರಾಯಣ, ಎಚ್.ಎಸ್. ರಾಘವೇಂದ್ರರಾವ್ | 75/- |
| ಯೇಗ್ದಾಗೆಲ್ಲಾ ಐತೆ | ಬೆಳಗೆರೆ ಕೃಷ್ಣಶಾಸ್ತ್ರಿ | 50/- |
| ಗೊಂದಲಪುರ (ಹಿಂಸೆ ಕುರಿತು*) | ಸಂ.ನ.ರವಿಕುಮಾರ, ಡಿ.ಆರ್.ಚಂದ್ರಮಾಗಡಿ | 175/- |
| ಫಾದರ್ (ಸ್ಟ್ರಿಂಡ್‌ಬರ್ಗ್ ನಾಟಕ) | ಅನು : ಸಿ. ನಾಗಣ್ಣ | 40/- |
| ಬೆಳದಿಂಗಳು (ಮಕ್ಕಳ ಕಾದಂಬರಿ*) | ಆನಂದ ವಿ. ಪಾಟೀಲ | 15/- |
| ರಚನೆ-ನಿರಚನೆ (ವಿಮರ್ಶೆ*) | ಕೇಶವಶರ್ಮ. ಕೆ | 80/- |
| ಯಾರಜಪ್ತಿಗೂ ಸಿಗದ ನವಿಲುಗಳು (ದೇವನೂರ ಮಹಾದೇವ ಸಾಹಿತ್ಯ ಕುರಿತು) | ಪಿ.ಚಂದ್ರಿಕಾ | 120/- |
| ನೀಲಿತತ್ತಿ (ಕವನ ಸಂಕಲನ*) | ಲಕ್ಷ್ಮೀಪತಿ ಕೋಲಾರ | 50/- |
| ಜನ್ನ ಮತ್ತು ಅನೂಹ್ಯ ಸಾಧ್ಯತೆ(ಕಥಾ ಸಂಕಲನ*) | ಆನಂದ ಋಗ್ವೇದಿ | 50/- |
| ವಿರೋಧ ವಿಲಾಸ (ವಕ್ರೋಕ್ತಿ ಪರಸೆಗಳು) | ಎಮ್.ಎಸ್.ಕೆ. ಪ್ರಭು | 30/- |
| ದೇಶೀ ದರ್ಶನಗಳು* | ವಿವಿಧ ಲೇಖಕರು | 60/- |
| ನಮ್ಮ ತವಕ ತಲ್ಲಣಗಳು (ಲೇಖನಗಳು*) | ಕೆ.ವಿ. ಸುಬ್ಬಣ್ಣ | 60/- |
| ಮಾಗಿ ಮೂವತ್ತೈದು (ಕಥೆಗಳು) | ಕೇಶವ ಮಳಗಿ | 65/- |
| ಪಾತಿದೋಣಿ (ಕಥೆಗಳು*) | ಉಮಾ ಹೆಗಡೆ | 45/- |
| ಶಬ್ದರೇಖೆ (ವಿಮರ್ಶೆ) | ಕೇಶವಶರ್ಮ ಕೆ. | 50/- |
| ಅನಾಹತನಾದ (ಸಂಗೀತ ಕುರಿತು*) | ವಿವಿಧ ಲೇಖಕರು | 35/- |
| ಕದಳೀವನ ಕರ್ಪೂರ (ಪರಿಸರ ಚಿಂತನೆ*) | ವಿವಿಧ ಲೇಖಕರು | 50/- |
| ಯದುಗಿರಿಯ ಅಂಗಳದಿಂದ (ಪು.ತಿ.ನ. ಸಾಹಿತ್ಯ ಕುರಿತು*) | ವಿವಿಧ ಲೇಖಕರು | 45/- |
| ಕ್ಯಾಪ್ಸೂಲಗಿತ್ತಿ (ಅಂಕಣ ಬರಹ) | ನಾಗೇಶ ಹೆಗಡೆ | 30/- |
| ಪಾ.ವೆಂ. ಹೇಳಿದ ಕಥೆ (ಕಥೆಗಳು) | ರವಿ ಬೆಳಗೆರೆ | 100/- |
| ದಾಂಪತ್ಯಕ್ಕೊಂದು ಶೀಲ (ಪ್ರಬಂಧಗಳು) | ಕೆ. ಸತ್ಯ ನಾರಾಯಣ | 30/- |
| ಒಂದು ಅನುರಾಗಕ್ಕಾಗಿ ಎಷ್ಟೆಲ್ಲಾ(ಕವನ*) | ಕೆ.ಪಿ. ಮೃತ್ಯುಂಜಯ | 20/- |
| ಆಶಯ ಆಕೃತಿ (ವಿಮರ್ಶೆ*) | ಸಿ. ಎನ್. ರಾಮಚಂದ್ರನ್ | 120/- |
| ಖಾಸ್‌ಬಾತ್ 97 (ಅಂಕಣ ಬರಹ*) | ರವಿ ಬೆಳಗೆರೆ | 100/- |
| ಕಂಪ್ಯೂಟರ್‌ಗೊಂದು ಕನ್ನಡಿ* | ಸಿ.ಪಿ.ರವಿಕುಮಾರ್ | 27/- |
| ನೋಟಪಲ್ಲಟ (ದೃಶ್ಯ ಸಂಸ್ಕೃತಿ ಕುರಿತು) | ಎಚ್.ಎ. ಅನಿಲ್‌ಕುಮಾರ್ | 35/- |
| ಇಚ್ಛಾಶಕ್ತಿಯ ನಿರೂಪ (ಪೋಲೆ ಷೋಯಿಂಕಾ ಸಾಹಿತ್ಯ ಕುರಿತು*) | ವಿವಿಧ ಲೇಖಕರು | 35/- |
| ಅಂಧ ಮಕ್ಕಳ ಅರಿವಿನಂಗಣ (ಮಹಾ ಪ್ರಬಂಧ) | ಎಮ್.ಆರ್. ಮಂದಾರವಲ್ಲಿ | 25/- |
| ಮೊದಲ ಕಟ್ಟಿನ ಗದ್ಯ (ಲೇಖನಗಳು) | ಎಚ್.ಎಸ್. ಶಿವಪ್ರಕಾಶ್ | 70/- |
| ಆಟ-ಮಾಟ (ಸೃಜನಶೀಲತೆ ಕುರಿತು) | ಕೆ.ಜಿ.ಸುಬ್ರಹ್ಮಣ್ಯನ್/ಶ್ರೀನಿವಾಸಮೂರ್ತಿ | 100/- |
| ನಮನ (ಅನುಭಾವಿ ಕಥನ) | ಆನಂದ ಪಾಟೀಲ | 50/-* |
| ಕಲ್ಲರಳಿ ಹೂವ್ವಂತೆ (ಕೆ.ಟಿ.ಶಿವಪ್ರಸಾದ್ ಕುರಿತು) | ಸಂ.ಕೆ. ಪುಟ್ಟಸ್ವಾಮಿ | 150/-* |
| ಮಕ್ಕಳ ಸಾಹಿತ್ಯ ಶತಮಾನ (ಮಕ್ಕಳ ಸಾಹಿತ್ಯ ಸಮೀಕ್ಷೆ) | ಸಂ: ಆನಂದ ಪಾಟೀಲ, ನ. ರವಿಕುಮಾರ | 75/- |

* ಪ್ರತಿಗಳು ಮುಗಿದಿವೆ

| | | |
|---|---|---|
| ಬರುವ ನಾಳೆಗಳಗೆ ರಾತ್ರಿಗಳೇ ಇರುವುದಿಲ್ಲ | ಸಿದ್ದು ದೇವರಮನಿ | 50/- |
| ಒಂದು ಮುಷ್ಠಿ ನಕ್ಷತ್ರ (ಕಥೆಗಳು) | ಕೋಡಿಬೆಟ್ಟು ರಾಜಲಕ್ಷ್ಮಿ | 50/- |
| ಸಾಹಿತಿಗಳ ಸ್ಮೃತಿ (ನೆನಪುಗಳು) | ಬೆಳಗೆರೆ ಕೃಷ್ಣಶಾಸ್ತ್ರಿ | 100/- |
| ಪ್ರತಿ ಸಂಸ್ಕೃತಿ (ವಿಮರ್ಶೆ) | ರಹಮತ್ ತರೀಕೆರೆ | 100/- |
| ಆ ಕ್ಷಣದ ಸತ್ಯ (ಪ್ರಬಂಧಗಳು) | ಚಂದ್ರಶೇಖರ ಆಲೂರು | 75/- |
| ನನ್ನ ರಸಯಾತ್ರೆ(ಆತ್ಮಕಥೆ) | ಮಲ್ಲಿಕಾರ್ಜುನ ಮನ್ಸೂರ್ | 50/- |
| ಮಬ್ಬಿನಹಾಗೆ ಕಣಿವೆಯಾಸಿ | ಎಚ್.ಎಸ್.ಶಿವಪ್ರಕಾಶ | 50/- |
| ಶತಮಾನದ ಕವಿ ಯೇಟ್ಸ್ | ಯು. ಆರ್. ಅನಂತಮೂರ್ತಿ | 75/- |
| ಯುವ ಕವಿಗೆ ಬರೆದ ಪತ್ರಗಳು (ರಿಲ್ಕೆ) | ಅನು: ಓ.ಎಲ್. ನಾಗಭೂಷಣಸ್ವಾಮಿ | 35/- |
| ಕರೆಯಿತೋ ಕಡಲತೀರ (ಕೇರಳ ಕಥನ) | ಜಿ. ಪಿ. ಬಸವರಾಜು | 75/- |
| ಗೆಲುವಿನ ಚಿಲುಮೆ ರಾಜರತ್ನಂ | ಸಂ: ಆಹಿತಾನಲ | 150/- |
| ಬಟವಾಡೆಯಾಗದ ರಸೀತಿ | ಲಕ್ಕೂರು ಆನಂದ | 40/- |
| ಅಗ್ನಿದಿವ್ಯ (ಕಾವ್ಯ) | ಸಂಧ್ಯಾದೇವಿ | 30/- |
| ಕೊಸಿಮೊ (ಕಾದಂಬರಿ) ಇಟಾಲೊ ಕಾಲ್ವಿನೊ. | ಅನು: ಕೆ. ಪಿ. ಸುರೇಶ | 100/- |
| ಹೈದರಾಲಿ (ನಾಟಕ) | ಡಿ. ಎ. ಶಂಕರ್ | 40/- |
| ಬೆಳ್ಳೇಕೆರೆ ಹಳ್ಳಿಥೇಟರ್ (ಗ್ರಾಮೀಣ ರಂಗಭೂಮಿಯ ಆತ್ಮಕಥೆ) ಪ್ರಸಾದ್ ರಕ್ಷಿದಿ | | 100/- |
| ಸೋಮನಾಥಪುರ-ಷ ಶೆಟ್ಟರ್ (ಇಂಗ್ಲಿಷ್/ಕನ್ನಡ ಭಾಷೆಗಳಲ್ಲಿ) | 450/- ಸಾದಾ | 100/- |
| ಗಿರಿಜಾಕಲ್ಯಾಣ- (ನಾಟಕ) | ಬಿ ಸುರೇಶ | 50/- |
| ನನಗೆ ದೇವರ ಗೊಡವೆ ಕೂಡ ಬೇಡ (ಮಿರ್ಜಾ ಗಾಲಿಬ್ ಜೀವನ- ಕೃತಿಗಳು) | | 50/- |
| ನಿಮ್ಮ ಸಿಮ್ಮತಿ (ಅಂಕಣ ಬರಹ) | ಸಿ.ಆರ್. ಸಿಂಹ | 100/- |
| ಕನ್ನಡದ ಗರಡಿಯಾಳು (ಜಿ.ಪಿ.ರಾಜರತ್ನಂ ಕುರಿತ ನೆನಪುಗಳು) ವಿವಿಧ ಲೇಖಕರು | | 100/- |
| ನಲ್ನುಡಿ ನಿಘಂಟು (ಕನ್ನಡ-ಕನ್ನಡ) | ಎಚ್. ಅಲ್ಲಿಸಾಬ್ | 175/- |
| ಮಾಲ್ಟಲೌರಿಡ್ಸ್‌ಬ್ರಿಗ್ಗನ ಟಿಪ್ಪಣಿ ಪುಸ್ತಕ-ರಿಲ್ಕೆ | (ಅನು:ಕಾದಂಬರಿ -ಕೆ. ವಿ.ತಿರುಮಲೇಶ್) | 100/- |
| ಮದುವೆಯ ಆಟಗಳು (ನಾಟಕ) | ಎಚ್.ಎಸ್.ಶಿವಪ್ರಕಾಶ್ | 75/- |
| ಕರುಳಬಳ್ಳಿಯ ಸೊಲ್ಲು (ಬೇಂದ್ರೆ ಕಾವ್ಯ ವಿಮರ್ಶೆ) ರಾಜೇಂದ್ರ ಚೆನ್ನಿ | | 50/- |
| ಆಧುನಿಕ ಕನ್ನಡ ಮಹಾಕಾವ್ಯಗಳು (ರಾಮಾಯಣದ ವಿಷಯಕ್ಕೆ ಸಂಬಂಧಿಸಿದಂತೆ) | ಶ್ರೀಧರ ಹೆಗಡೆ ಭದ್ರನ್ | 200/- |
| ಒಂದಾನೊಂದು ಕಾಲದಲ್ಲಿ (ಕಟ್ಟು ಕಥೆಗಳು) | ಸಂ. ಆಹಿತಾನಲ (ನಾಗಐತಾಳ) | 150/- |
| ಕಾದೇ ಇರುವಳು ರಾಧೆ (ಕಾದಂಬರಿ) | ಆಹಿತಾನಲ (ನಾಗಐತಾಳ) | 50/- |
| ಶೂನ್ಯಸಂಪಾದನೆಯ ಪರಾಮರ್ಶೆ | ಸಂ.ಶಿ. ಭೂಸನೂರಮಠ | 610/- |
| ಬಲ್ಲವರು ಬಹಳಲ್ಲ (ಆಯ್ದ ಲೇಖನಗಳು) | ಎಚ್.ವೈ. ಶಾರದಾಪ್ರಸಾದ್ | 75/- |
| ಶಂಗಂ ತಮಿಳಗಂ ಮತ್ತು ಕನ್ನಡ ನಾಡು-ನುಡಿ (ಆರಂಭ ಕಾಲದ ದ್ರಾವಿಡ ಸಂಬಂಧದ ಚಿಂತನೆ) | ಪ್ರೊ ಷ. ಶೆಟ್ಟರ್ | 150/- |
| ಕುಸುಮಬಾಲೆ - ದೇವನೂರ ಮಹಾದೇವ (ಲಯಾಕಾರ ವಿನ್ಯಾಸ: ಎಲ್. ಬಸವರಾಜು) | | 75/- |
| ಹಿಂಸೆಯ ಎಡ-ಬಲ | ಯು.ಆರ್. ಅನಂತಮೂರ್ತಿ | 10/- |
| ಮಳೆ ತೊಳೆದ ಕಲ್ಲುಗಳು (ಕವಿತೆ) | ಡಿ.ಆರ್. ಚಂದ್ರ ಮಾಗಡಿ | 35/- |
| ಜೀವಾಳ (ಕಥೆಗಳು) | ಬಸವರಾಜು ಕುಕ್ಕರಹಳ್ಳಿ | 50/- |
| ಈಡಿಪಸ್ ಕಾಂಪ್ಲೆಕ್ಸ್ (ಮನೋವೈಜ್ಞಾನಿಕ ಲೇಖನಗಳು) ಎಂ ಬಸವಣ್ಣ | | 100/- |
| ಪೊರೆ ಕಳಚಿದ ಮೇಲೆ (ಕವನ) | ಸಿಬಂತಿ ಪದ್ಮನಾಭ | 40/- |
| ಎಲ್ಲಿಹಳು ನನ್ನ ಛಾಯಾ? (ಕವನ) | ಆರತಿ ಪಟ್ರಮೆ | 35/- |
| ಮಾತು ಸೋತ ಭಾರತ (ವಿಮರ್ಶೆ) | ಯು. ಆರ್. ಅನಂತಮೂರ್ತಿ | 150/- |
| ಪ್ರಶ್ನೆಗಳಿರುವುದು ಶೇಕ್ಸ್‌ಪಿಯರನಿಗೆ | ಜಿ ಎನ್. ಮೋಹನ್ | 50/- |
| ಉಲ್ಲೇಖ (ವಿಮರ್ಶೆ) | ಕೆ.ವಿ. ತಿರುಮಲೇಶ್ | 100/- |
| ಕನ್ನಡ ಕಾವ್ಯಾಲಂಕಾರ | ಕೆ. ಕೃಷ್ಣಮೂರ್ತಿ | 100/- |
| ಕನ್ನಡ ಧ್ವನ್ಯಾಲೋಕ | ಕೆ. ಕೃಷ್ಣಮೂರ್ತಿ | 150/- |
| ಕಾಲಿದಾಸ (ವಿಮರ್ಶೆ) | ಶ್ರೀರಂಗ | 100/- |
| ಸಪ್ತಪದಿ (ಕವನ) | ಬಿ.ಸಿ.ರಾಮಚಂದ್ರಶರ್ಮ | 40/- |

• ಬಿ.ಎಂ.ಶ್ರೀ. ಪ್ರತಿಷ್ಠಾನದ ಅನಂತರಂಗ ಪ್ರಶಸ್ತಿ
• ತುಮಕೂರಿನ ವೀಚಿ ಸಾಹಿತ್ಯ ಪ್ರಶಸ್ತಿ
• ಶಿವಮೊಗ್ಗ ಕರ್ನಾಟಕ ಸಂಘದ ಶಂ.ಬಾ. ಜೋಶಿ ಪ್ರಶಸ್ತಿ
• ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುಸ್ತಕ ಬಹುಮಾನ

ಡಾ. ಶೆಟ್ಟರ್ ದಕ್ಷಿಣ ಭಾರತದ ಧೀಮಂತ ಚಿಂತಕರಾದ ಇತಿಹಾಸಜ್ಞರು. ಈ ಪುಸ್ತಕದಲ್ಲಿ ಕನ್ನಡವನ್ನು ದ್ರಾವಿಡಲೋಕದಲ್ಲೂ, ಸಂಸ್ಕೃತ ಲೋಕದಲ್ಲೂ ಇಟ್ಟು ಅವರು ನೋಡುವ ಕ್ರಮ ಘನವಾದ ಹೊಸ ಪರಿಕಲ್ಪನೆಗೆ ಎಡೆಮಾಡಿಕೊಟ್ಟಿದೆ. ದೇಸಿಗೆ ಹೆಚ್ಚು ಒಲಿದು, ಮಾರ್ಗವನ್ನು ರೂಢಿಸಿಕೊಂಡು ಮಾರ್ಗಕ್ಕೆ ಹೆಚ್ಚು ಒಲಿದು ದೇಸಿಯನ್ನು ಒಳಗೊಂಡು ಹುಟ್ಟುತ್ತಿರುವ ವಿಪುಲವಾದ ಕನ್ನಡ ಸಾಹಿತ್ಯದಲ್ಲಿ ಪಂಪ, ವಚನಕಾರರು, ಕುವೆಂಪು, ಬೇಂದ್ರೆ, ಅಡಿಗ, ಪುತಿನ, ಕಂಬಾರ ಇತ್ಯಾದಿ ಹಲವರನ್ನು ನಾವು ವಿಮರ್ಶಿಸುವ ದಾರಿಗಳನ್ನು ಶೆಟ್ಟರ್ ವಿಚಾರದಿಂದ ಇನ್ನಷ್ಟು ದಟ್ಟವಾಗಲಿವೆ.

ಕೆ. ವಿ. ಸುಬ್ಬಣ್ಣ ಮತ್ತು ಶೆಲ್ಡನ್ ಪೋಲಕರು ಮಾಡಿರುವ ಚಿಂತನೆಗೆ ಇನ್ನಷ್ಟು ಹೊಳಹುಗಳನ್ನೂ, ಹೊಸ ಓದುಗಳನ್ನೂ ಕೊಡುವ ಈ ಪುಸ್ತಕ ನಮ್ಮ ಕಾಲದ ಆಚಾರ್ಯ ಕೃತಿಯಾಗಿದೆ.

ಯು. ಆರ್. ಅನಂತಮೂರ್ತಿ

ಹನ್ನೆರಡು ವರ್ಷಗಳಿಗೊಮ್ಮೆ
ಅರಳುವ ಬೆಟ್ಟದ ಹೂ ಕುರಿಯಿಂಜ್ಞಿ

ಅಭಿನವ

ISBN 978-81-910100-5-3
9 788191 010053